ವಿದ್ಯಾದಾಯಿನಿ

ಎರಡನೆಯ ಭಾಗ.

೧೯೦೮.

ಮೈಸೂರು :

ಗ್ರಾಜ್ಯುಯೇಟ್ಸ್ ಟ್ರೇಡಿಂಗ್ ಅಸೋಸಿಯೇಷನ್ ಪ್ರೆಸ್.

ವಿಷಯೆಗಳನ್ನು ಬರೆದವರ ಹೆಸರು.

890

1. ಮಿಸ್. ಸಿ. ಇ. ಪಾರ್ಸ್ಟರವರು

   ಮು॥ ರಾ॥ ರಾ॥ ಶ್ರೀ॥

2. ಎಡಿಟರ್

3. ಎಂ. ಹಿರಿಯಣ್ಣ, ಎಂ.ಎ. ಎಲ್. ಟಿ. ಯವರು

4. ಎಂ. ಬಿ. ರಾಮರಾವ್, ಬಿ.ಎ. ಯವರು

5. ಎಂ. ವೆಂಕಟಸುಬ್ಬಯ್ಯ, ಬಿ. ಎ. ಎಲ್. ಟಿ.

6. ಎಸ್. ವೆಂಕೋಬರಾವ್, ಬಿ.ಎ. ಯವರು

7. ಎಂ. ವೆಂಕಟಕೃಷ್ಣಯ್ಯನವರು

8. ಎಂ. ಎ. ರಾಮಾನುಜ್ಜಯಂಗಾರ್‌ರವರು

9. ಪಂ. ಶ್ರೀನಿವಾಸರಾಘವಾಚಾರ್‌ರವರು

10. ಬಿ. ಒ. ಶೇಷಾಚಾರ್ಯರವರು

11. ಎಚ್. ಸೂರ್ಯನಾರಣಪ್ಪನವರು

12. ಕೆ. ರಾಮಸ್ವಾಮೈಯಂಗಾರ್‌ರವರು

13. ಬಿ. ಅನಂತಾಚಾರ್ಯರವರು

14. ಎಸ್. ಶ್ರೀಕಂಠಯ್ಯನವರು

15. ಹೆಚ್. ವೆಂಕಟರಾಯರವರು

... ...

ವಿದ್ಯಾದಾಯಿನಿಯ 16 ನೆಯ ಭಾಗ.

I. ಶಾಸ್ತ್ರೀಯವಿಷಯ ವಿಚಾರ.—

1 ಪ್ರಕೃತಿ ವಿಮರ್ಶೆ 21
2 ಜಪಾರ್ಡೆಶೀಯರು—ಚರಿತ್ರೆ ... 57.
3 ಕ್ಷೇತ್ರಗಣಿತದ ಸೂತ್ರಗಳು ... 65.
4 ವ್ಯಾಕರಣಶಾಸ್ತ್ರ 81, 113, 155, 169
5 ಮನೋಗಣಿತದ ಸೂತ್ರಗಳು ... 85.
6 ಮಾನಸಗಣಿತ ... ... 115.
7 ಗಣಿತ ... ... 164, 250, 274.
8 ಋತುಗಳು ... ... 189.

II. ಉಪನ್ಯಾಸ.—

1 ಮ್ಯಾನ್ಯೂಅಲ್‌ಟ್ರೇನಿಂಗ್ ವಿಷಯಕವಾದ ಪ್ರದರ್ಶನ 6.
2 ಡಾಕ್ಟರ್ ಲಾರ್ಸರವರಿಗೆ ಕೊಟ್ಟ ಎಂಟರ್ಟೈನ್ಮೆಂಟ್ 9.
3 ವಿದ್ಯಾಭ್ಯಾಸ ... ... 15—33.
4 ಉಪಾಧ್ಯಾಯರು ... ... 19.
5 ವಿದ್ಯೆ ... ... 60.
6 ಪ್ರೈಮರಿ ಪಾಠಶಾಲೆಗಳು... ... 69.
7 ಬಾಲಶಿಕ್ಷೆ ... ... 71.
8 ನೀತಿಶಿಕ್ಷಣ ... ... 93.
9 ಹಿಂದೂ ಬಾಲಕರು ... ... 124.
10 ಮೈಸೂರಲ್ಲಿ ನಡೆದ ಕಿಂಡರ್‌ಗಾರ್ಟ್ನ್ ಟ್ರೇನಿಂಗ್ 149.
11 ಪರಸ್ಪರಸಂಬಂಧವುಳ್ಳ ಬೋಧನ ಪದ್ಧತಿಗಳು 184.
12 ದನದಮೇವು ಚರಾಯಿ ... ... 193.

III. ಶಿಕ್ಷಾಕ್ರಮ.—

1 ಮಕ್ಕಳ ಅಕ್ಷರಾಭ್ಯಾಸ ಮಾಡಿಸುವ ರೀತಿ 45.
2 ಆಟಪಾಟಗಳಿಂದ ಕೂಡಿದ ಡ್ರಿಲ್ ... 61.
3 ಭೂವಿವರಣೆ ... ... 87—252.
4 ಅಕ್ಷರಾಭ್ಯಾಸ ... ... 106—227.
5 ಚಿತ್ರಬರೆಯುವುದು ... ... 117.
6 ಫ್ರೊಬೆಲ್ಲನ ಕ್ರಮಕ್ಕನುಸಾರವಾಗಿ ಮಕ್ಕಳವಿದ್ಯಾಭ್ಯಾಸ. 237, 261.

IV. ಕಿಂಡರ್‌ಗಾರ್ಟ್ನ ವಿಷಯಗಳು.—

1 ಪಾಠಶಾಲೋಪವನಗಳು ... ... 74.
2 ದೀಪಸ್ತಂಭ ... ... 141.
3 ಪರಸ್ಪರಸಂಬಂಧವುಳ್ಳ ಭೂಗೋಳದ ಪಾಠ ಮತ್ತು ಹಾಡು 157.

4 ಪ್ರಕೃತಿವಿಮರ್ಶೆ ... ... 177.
5 ವಸಂತಕಾಲದ ಪಾಠ ... ... 202.
6 ಕೈದೋಟ ಮಾಡಿಸುವುದು... ... 276.
7 ಬಾಲಕರಿಗೆ ಅಭಿನಯಪೂರ್ವಕವಾಗಿ ಬೋಧಿಸತಕ್ಕ ಕಥೆ 132.
8 ಕಥೆ. ... ... 205.

V. ಹಿತೋಪದೇಶ.

1 ಜರ್ಮಾದೇಶೀಯರ ವಿದ್ಯಾಭ್ಯಾಸಕ್ರಮ... 37.
2 ಕೈಬರಹ ... ... 49.
3 ಬರಹದ ಒಕ್ಕನೆಗಳು ... ... 161.
4 ಚರಿತ್ರೆ ... ... 162.
5 ಶೈಶವದಲ್ಲಿ ನಡೆಯಬೇಕಾದ ವಿದ್ಯಾಭ್ಯಾಸ 165.
6 ಮಾತಾಪಿತೃಭಕ್ತಿ ... ... 188.

VI. ಸರ್ಕಾರಿ ವಿಷಯ.—

1 ಬಾಲಪಾಠಕ್ರಮ ... ... 55.
2 ಪುರವ್ಯವಹಾರಧರ್ಮ ... ... 126.
3 ಮೈಸೂರು ದೇಶೀಯ ಪರೀಕ್ಷೆ ... 155.
4 ಪ್ರಜಾಪ್ರತಿನಿಧಿ ಸಭೆಯಲ್ಲಿ ಮೈಸೂರು ದಿವಾನರವರು ಮಾಡಿದ ಉಪನ್ಯಾಸ 213.
5 ವಿದ್ಯಾಭ್ಯಾಸ ವಿಷಯಕವಾದ ವಸ್ತುಪ್ರದರ್ಶನ 218.
6 ಘನವನ್ನು ಹೊಂದಿದ ಶ್ರೀಮದಿಂಡಿಯಾ ಚಕ್ರವರ್ತಿಯವರು ಇಂಡಿಯಾದೇಶದ ರಾಜರುಗಳಿಗೂ ಪ್ರಜೆಗಳಿಗೂ ಕಳುಹಿಸಿಕೊಟ್ಟ ಇಸ್ತಿಹಾರುನಾಮೆ 255.

VII. ಗ್ರಂಥಶೋಧನೆ.—

1 ಲೋವರ್‌ಸೆಕೆಂಡರೀ ಪರೀಕ್ಷೆ ... 43.
2 ಶ್ರೀ ವಾಸಿಷ್ಠರಾಮಾಯಣ ... 211.

VIII. ಉಪಯುಕ್ತಾಂಶ.—

1 ವ್ಯವಹಾರನಿರ್ಣಯ ... ... 45.
2 ಲೋವರ್‌ಸೆಕೆಂಡರಿ ಕನ್ನಡ ಗ್ರಂಥದ ಪ್ರಶ್ನೆಗಳು 68.
3 ಶ್ರೀಮನ್ಮಧ್ವಾಚಾರ್ಯರ ಚರಿತ್ರೆ ... 284.

IX. ವಿವಿಧ ವಿಷಯ.—

1 ಕರ್ನಾಟಕ ಗ್ರಂಥಕರ್ತರ ಎರಡನೆಯ ಸಮ್ಮೇಳನ 90.
2 ಧಾರವಾಡ ಟ್ರೇನಿಂಗ್ ಕಾಲೇಜಿನ ನೋಟೀಸು 236.
3 ವಿದ್ಯಾಭ್ಯಾಸದ ಸಮಾಚಾರಗಳು ... 282.
4 ಎಸ್. ಬಿ. ನರಸಿಂಹಾಚಾರ್ಯರ ಆಕಾಲಮರಣ 1.

ವಿದ್ಯಾದಾಯಿನಿ

(A MONTHLY JOURNAL.)

ಭಾಗ ೧೬.] ಜನವರಿ—೧೯೦೮. [ಸಂಚಿಕೆ ೧.

ಎಸ್. ಜಿ. ನರಸಿಂಹಾಚಾರ್ಯರ ಅಕಾಲಮರಣ. 22-12-07.

ಅಯ್ಯೋ! ಕರ್ಣಾಟಸರಸ್ವತಿಯೇ! ಕನ್ನಡದೇಶಜೀವಾತುವೇ! ನಿನ್ನ ಅಭಿಮಾನಪುತ್ರನ ಅಳಿವಿನಲ್ಲಿ ನೀನಿಷ್ಟು ಶೋಕಿಸುವುದುಚಿತವೆ? ನಿನ್ನ ಅನುಗ್ರಹವೊಂದಿದ್ದರೆ ಈದೇಶಮಾತೆಗೆ ಮಕ್ಕಳಿಗೆ ಕೊರತೆಯೇನು? ಆ ಮಕ್ಕಳಿಂದ ಅವಳು ಒಳ್ಳೆಯ ಸ್ಥಿತಿಗೆ ಬರುವುದರಲ್ಲಿ ಅಡ್ಡಿಯೇನು? ನಿನ್ನ ತಂಗಿಯ ಮಕ್ಕಳನ್ನು ನಿನ್ನ ಮಕ್ಕಳೆಂದೇ ಭಾವಿಸಿ ಆ ದುಃಖದಿಂದ ಇಷ್ಟು ಕೊರಗುವಂತಿರುವುದು ಸರಿಯಿಲ್ಲ; ಆ ದುಃಖವೇ ನಿನ್ನನ್ನು ಮುಂಕುಮಾಡಿತೆಂದು ಹೇಳಬೇಕಾಗಿದೆ. ಪೂರ್ವದಲ್ಲಿ ನೀನು ನಿನ್ನ ತಂಗಿಯ ಪುತ್ರರಾದ ನೃಪತುಂಗ ಮೊದಲಾದವರನ್ನು ನಿನ್ನ ಮಕ್ಕಳೆಂದನುಗ್ರಹಿಸಿ ಪೋಷಿಸಿ ಅವರ ತೇಜಃಪ್ರಭಾವದಿಂದ ನಿನ್ನ ಬೆಳಕನ್ನು ಸರ್ವತ್ರ ಚದುರಿಸಿ, ಕಾವೇರಿಯಿಂದ ಗೋದಾವರೀಪರ್ಯಂತವಿರುವ ನಿನ್ನ ತಂಗಿಯ ತೌರುಮನೆಯನ್ನು ಉಚ್ಚಾಯ ಸ್ಥಿತಿಗೆ ತಂದು, ಅವಳನ್ನು ಸರ್ವೋತ್ಕೃಷ್ಟಳನ್ನಾಗಿ ಮೆರೆಯಿಸಲಿಲ್ಲವೇ! ಈಗ ಈರೀತಿಯಲ್ಲಿ ಮಾಡದೆ ಕ್ಲೇಶಪಡುವುದಕ್ಕೆ ಕಾರಣವೇನು? ಬಹುಶಃ ಅಕಾಲದ ರಾಜರುಗಳು ನಿನ್ನ ಬೆಳಕಿಗೆ ತಾವೂ ಸೇರಿ, ನಿನ್ನ ಪೋಷಣೆಯಲ್ಲಿ ಬಳೆದು, ಪ್ರಬಲರಾಗಬೇಕೆಂದು ನಿಶ್ಚಯಿಸಿ, ನಿನ್ನನ್ನು ಆಶ್ರಯಿಸಿದ್ದುದೇ ಕಾರಣವಾಗಿರಬಹುದು. ಆಲ್ಲಿಂದೀಚೆಗೆ ಚಾಲೂಕ್ಯನೃಪರೂಕೂಡ ನಿನ್ನ ಸೇವೆಯೇ ತಮ್ಮ ಉಜ್ಜೀವನಹೇತುವೆಂದು ತಿಳಿದು, ನಿನ್ನ ತಂಗಿಯ ಮಕ್ಕಳಾದ ಹಂಪ, ಹೊನ್ನ, ರನ್ನರೆಂಬ ರತ್ನಗಳನ್ನು

ತಮ್ಮ ಅಸ್ಥಾನರತ್ನಗಳನ್ನಾಗಿ ಮಾಡಿಕೊಂಡರಲ್ಲವೆ? ಅಮಕ್ಕಳ ಜತೆಯಲ್ಲಿ ಇದ್ದಾಗ ನಿನ್ನ ಮಹಿಮೆಯು ಸರ್ವತ್ರ ಹಂಗೊಳಿಸುತಿದ್ದಿತು. ಆಕಾಲದಲ್ಲಿ ಅವರ ವಾಙ್ಮಯವಾದ ತೇಜಸ್ಸಿನಿಂದ ಅವರ ಸಹೋದರರಿಗೆ ನಿನ್ನ ತಂಗಿಯಾದ ದೇಶ ಮಾತೆಯು ಮೆಯ್ಸಿರಿಯನ್ನು ತಿಳಿಯಲು ಶಕ್ತಿಯುಂಟಾಯಿತು. ಆಮೂಲಕ ಅವರಲ್ಲಿ ಅಡಗಿದ್ದ ಪೌರುಷಾದಿಗಳು ನೆಲದಲ್ಲಿ ಅಡಗಿದ್ದ ಕಾಳು ಮಳೆ ಬೀಳಲು ಚಿಗುರಿ ಫಲೋನ್ಮುಖವಾಗುವಂತೆ ಉದ್ಭಿನ್ನವಾಗಿ ಹೊರಗೆ ಕಾಣಿಸಿಕೊಂಡು ಫಲೋನ್ಮುಖವಾಯಿತು. ಆಗಲ್ಲವೆ ದೇಶಮಾತೆಯು ಪುತ್ರವತಿಯಾಗಿ "ವೀರಪ್ರಸೂಃ" ಎಂಬ ಬಿರುದನ್ನು ಹೊಂದಿದಳು. ಅದೆಲ್ಲಕ್ಕೂ ನೀನೇ ಕಾರಣವಲ್ಲವೆ? ಎಂಥ ಮಹನೀಯರಿಗೂ ಕೂಡ ಆಪತ್ತೆಂಬುವುದುಂಟು. ಅದನ್ನು ಎಲ್ಲರೂ ಅನುಭವಿಸಿಯೇ ತೀರಬೇಕು. ಮಾಡತಕ್ಕುದ್ದೇನು? ಧೈರ್ಯವೇ ಸಾಧನಸಂಪತ್ತು. ಆಕಾಲದಲ್ಲಿ ಮಲ್ಲಿ ಕಾಫರೆಂಬ ಮ್ಲೇಚ್ಛಮೇಘವು ದಿಕ್ಕುಗಳನ್ನು ವ್ಯಾಪಿಸಿ ಆರ್ಭಟಿಸಿ ಅತಿವೃಷ್ಟಿಯಿಂದ ನಿನ್ನ ಸರ್ವತ್ರವ್ಯಾಪ್ತವಾಗಿದ್ದ ತೇಜಸ್ಸನ್ನು ಮಾಸಿದುದಲ್ಲದೆ, ನಿನ್ನ ಆಶ್ರಯದಲ್ಲಿ ಬದುಕಿ ಬಾಳಿದ ರಾಜರೂ ಕೂಡ ನಿರಾಶರಾಗಿ ಈ ದೇಶವನ್ನೇ ಬಿಟ್ಟು ಮನುಷ್ಯಗಂಧವಿಲ್ಲದ ದೇಶವನ್ನು ಸೇರಿ ಅಲ್ಲಿಯಾದರೂ ನಿನ್ನ ಕೀರ್ತಿಯನ್ನು ಕೇಳುತ್ತಿರುಬೇಕೆಂಬ ಆಶೆಯಿಂದ ಸೇರಿಕೊಳ್ಳುವಹಾಗೆಮಾಡಿತು. ನೀನೂಕೂಡ ಆ ವರ್ಷಧಾರೆಯಲ್ಲಿ ಇದ್ದರೆ ನಿರ್ಣಾಮವಾಗಿ ಹೋಗುವೆನೆಂದು ತಿಳಿದೋ, ನಿನ್ನ ಮಕ್ಕಳ ಪಾರ್ಥಿವಶರೀರವು ನಾಶ ಹೊಂದುತ್ತಿದ್ದರೂ ಅಂಜದೆ ಅವರಿಗೆ ವಾಙ್ಮಯಶರೀರವನ್ನು ಕೊಟ್ಟು ಆವರೊಡನೆ ಕೋಣೆಯಲ್ಲಿಯೂ, ಬಡಬಗ್ಗರ ಮನೆಗಳಲ್ಲಿಯೂ ಅಡಗಿಕೊಂಡೆ? ಆಲ್ಲಿ ಅಡಗಿಕೊಂಡುದುದು ಸಮಯನಿರೀಕ್ಷಣಕ್ಕಾಗಿಯೇ ಅಲ್ಲವೆ? ಲೋಕದಲ್ಲಿ ಯಾವುದೂ ಸ್ಥಿರವಿಲ್ಲ, ಪರಿವರ್ತಿಸುತ್ತಲೇ ಇರುವುದು. ಅಲ್ಲಲ್ಲಿ ಬಡವರ ಮನೆಗಳಲ್ಲಿ ಅಡಗಿಕೊಂಡಿದ್ದರೂ ಅವರು ತಾಯಿಯ ಸ್ತನ್ಯಬಲವಿಲ್ಲದುದರಿಂದ ನಿನ್ನ ಅನುಗ್ರಹವೆಷ್ಟಿದ್ದರೂ ಚವಲೆಮಕ್ಕಳಾಗಿಯೇ ಆದರು. ಅವರಿಂದ ದೇಶಮಾತೆಗೆ ಯಾವ ಗೌರವವೂ ಉಂಟಾಗಲಿಲ್ಲ. ನಿನ್ನ ಸ್ವೈರಸಂಚಾರದ ಫಲವನ್ನನುಭವಿಸಲು ಅವರಿಗೆ ಅವಕಾಶವಿಲ್ಲದಿರುವುದೇ ಆ ಹೀನಸ್ಥಿತಿಗೆ ಕಾರಣವೆಂದು ಊಹಿಸಬಹುದು. ಇದಕ್ಕಾಗಿ ನೀನು ಚಿಂತೆಪಟ್ಟಂತೆ ಕಾಣಿಸಲಿಲ್ಲ. ಹೀಗೆ ಕೆಲವುಕಾಲ ಕಳೆದ ಮೇಲೆ ಮೈಸೂರು ರಾಜಸೂರ್ಯೋದಯವು ಅಂತರಿಕ್ಷದಲ್ಲಿ ಆಗಲು, ದಿಕ್ಕುಗಳೆಲ್ಲವೂ ಬೆಳಗಿದುವು; ಸಸ್ಯಗಳು ಮೊಳೆತುವು. ದ್ವಿಜರು ಎಲ್ಲೆಲ್ಲಿಯೂ ಚರಿತಲಾರಂಭಮಾಡಿ

ದರು; ಕೋಗಿಲೆಗಳು ಕೂಗದೊಡಗಿದುವು; ಆ ರಾಜರು ನಿನ್ನ ಪಾದಪದ್ಮದ ಮಕರಂದಪಾನದಲ್ಲಿ ಅತ್ಯುತ್ಸುಕರಾಗಿ ಪಾನಮಾಡಿ, ತಾವೂ ಪ್ರವೃದ್ಧರಾಗಿ, ತೇಜಸ್ವಿಗಳಾದ ಪುತ್ರರು ನಿನಗೆ ಯಾವಾಗ ಜನಿಸುವರೊ ಎಂದು ಕಾಲನಿರೀಕ್ಷಣೆಮಾಡುತ್ತಿದ್ದರು. ಮಹಾತ್ಮರ ಮನೋರಥವು ಎಂದೂ ವ್ಯರ್ಥವಾಗದು. ಅವರ ಕೈಹಿಡಿದುದರಿಂದ ನಿನ್ನ ತಂಗಿಯು ಕಾಂತಿಗೊಂಡಳು; ತನ್ನ ಪ್ರಾಬಲ್ಯವನ್ನು ಅನ್ಯದೇಶಗಳಲ್ಲಿ ತೋರಲು ಹೊರಟಳು. ಆ ಕಾಲದಲ್ಲಿ ನಿನ್ನ ತಂಗಿಯು ನಿನ್ನನ್ನು ಕರೆದಳು. ಆಗ ನೀನು ಹೊರಟು ವಾಙ್ಮಯರೂಪದಲ್ಲಿದ್ದ ನಿನ್ನ ಮಕ್ಕಳನ್ನು ಒಳ್ಳೊಳ್ಳೆಯ ಸರಸ್ವತೀ ಭಂಡಾರವೆಂಬ ದೊಡ್ಡದೊಡ್ಡ ವಿಲಾಸಭವನಗಳಿಗೆ ಕರೆತಂದು, ಅಲ್ಲಿ ಸುಖವಾಗಿರುವಂತೆ ನೇಮಿಸಿ, ಬಳಿಕ ಪಾರ್ಥಿವಶರೀರದಲ್ಲಿ ತೇಜಸ್ವಿಗಳಾದ ನಿನ್ನ ತಂಗಿಯ ಪುತ್ರರುಗಳನ್ನು ಹುಡಕುತ್ತ ಹೊರಟೆ. ಅವರಲ್ಲಿ ಕೆಲವರನ್ನು ನಿನ್ನ ಸ್ವಂತಮಕ್ಕಳಂತೆ ಪ್ರೀತಿಸಿ ಮಹಾತ್ಮರನ್ನು ಮಾಡಿದೆ. ಅವರಲ್ಲಿ ಅನೇಕರು ಪರಾಕ್ರಮಿಗಳೂ ಆದರು. ನೀನು ನಿನ್ನ ನಾಟ್ಯವನ್ನು ನಿನ್ನ ಮಕ್ಕಳೊಡನೆ ಆರಂಭಿಸಿ ಎಲ್ಲರನ್ನೂ ಮೋಹಗೊಳಿಸುತ್ತ ಬಂದೆಯಲ್ಲವೆ? ಇದೆಲ್ಲವೂ ನಿನ್ನ ಅಭಿಮಾನದಿಂದಲೇ ಅಲ್ಲವೆ ಸಂಭವಿಸಿತು? ಇಂಥ ಶಕ್ತಿಯನ್ನೂ ಪ್ರಭಾವವನ್ನೂ ಈಗ ಏಕೆ ಮರೆತು ಚಿಂತಿಸುವಿಯೋ ಕಾಣೆ? ಈಮಧ್ಯೆ ಇನ್ನೂ ಪ್ರಬಲವಾದ ಮತ್ತೊಂದು ತುರುಷ್ಕಮೇಘವು ಬಂದು, ನಿನ್ನ ನಾಡಿನಲ್ಲಿ ಕತ್ತಲೆಯನ್ನು ಕವಿಸಿ, ಆ ವಾಙ್ಮಯವಾದ ಮಕ್ಕಳನ್ನು ಜ್ವಾಲೆಗೆ ಆಹಾರ ಮಾಡಿತು. ಆ ದುಃಖದಿಂದ ಅತ್ಯಂತ ಕೃಶಳಾಗಿ ದೂಳು ಕವಿದು ಉಡಲು ಬಟ್ಟೆಯಿಲ್ಲದೆ ತಿರಿಕೆಯವಳಂತೆ ಆದೆಯಲ್ಲವೆ? ಈ ಮರವೆಗೆ ಪ್ರತಿಕೂಲಕಾಲವೇ ಕಾರಣವೆಂದು ಯೋಚಿಸುವೆಯೊ? ಅಂಥ ಕಾಲವಿನ್ನೆಂದೂ ಬರಲಾರದು. ನಿನ್ನ ಸಾಕಿದ ಮಕ್ಕಳು ಅಗ್ನಿಭಯದಿಂದಲೂ ಜಲಭಯದಿಂದಲೂ ಕ್ರಿಮಿಭಯದಿಂದಲೂ ನಡುಗುವ ಕಾಲವು ಆಗಲೇ ಅಸ್ತಮಿಸಿತು. ಆವರಿರುವ ಸ್ಥಲವೊಂದು ತಿಳಿದರೇನೇ ಸಾಕು. ಹೀಗಿರಲು ಅವರ ಮಾಹಾತ್ಮ್ಯ ತಿಳಿದಂತೂ ಸರ್ವಪ್ರಯತ್ನದಿಂದಲೂ ಅವರನ್ನು ಹುಡುಕಿಕೊಂಡುಹೋಗಿ ಅವರ ಪಾದಸೇವೆ ಮಾಡಲು ಯತ್ನಪಡುವರನೇಕರಿರುವರು. ಹೀಗೆ ನಿನ್ನ ಮಕ್ಕಳ ಇರವೇ ಇಷ್ಟು ಸ್ಪೃಹಣೀಯವಾಗಿರುವಾಗ ನೀನು ಭಯಪಡುವುದೇಕೆ? ಆ ಮೈಸೂರು ನೃಪರೆಂಬ ಸಾಗರದಲ್ಲಿ ಚಾಮನೃಪನೆಂಬ ಚಂದ್ರನು ಹುಟ್ಟಿದುದನ್ನು ಮರತೆಯಾ? ಆತನು ತನ್ನ ಕಿರಣದೊಂದಿಗೆ ನಿನ್ನ ಬೆಳಕನ್ನು ಸರ್ವತ್ರ ಆಪಾಮರಪಂಡಿತಮಂ

ಡಲಿಗೂ ಎರಡಲು ಯುಕ್ತಿಸಲಿಲ್ಲವೆ? ಅವನಿಂದ ಎಷ್ಟೋ ಜನಗಳು ಸೌಖ್ಯವನ್ನು ಹೊಂದಲಿಲ್ಲವೆ? ಆಕಾಲದಲ್ಲಿ ನಿನ್ನ ತಂಗಿಗೂ ನಿನಗೂ ಆಶ್ರಯಬಲವಿಲ್ಲವೆಂದು ಹೆದರಿದೆಯಾ? ಆಗ ನಿನಗೆ ಸಂಗೀತಲಕ್ಷ್ಮಿಯು ಸಹಾಯುಕಳಾಗಿ ಬರಲಿಲ್ಲವೆ? ನಿನ್ನ ತಂಗಿಗೆ ಅತ್ಯಂತಸುಂದರಳಾಗಿಯೂ, ಸುಮುಖಳಾಗಿಯೂ ವೀರಮಾತೆಯಾಗಿಯೂ, ಕಲಾಕುಶಲೆಯಾಗಿಯೂ ಇದ್ದ ಆಂಗ್ಲೇಯು ಮಾತೆಯ ಹಸ್ತಾವಲಂಬನವೂ ಸಿಕ್ಕಿದ್ದಿತಲ್ಲವೆ? ಅವಳ ಆಶ್ರಯದಿಂದ ಶ್ಯಾಮಚಂದ್ರನು ಪೂರ್ಣಚಂದ್ರನಾಗಲಿಲ್ಲವೆ? ಅವಳ ಅನುಗ್ರಹವೂ ಸೌಜನ್ಯವೂ ನಿನ್ನ ತಂಗಿಯ ಮಕ್ಕಳಲ್ಲಿ ಎಲ್ಲೆಲ್ಲಿಯೂ ಕಾಣಿಸಿಕೊಳ್ಳಲಿಲ್ಲವೆ? ಆಕಾಲದಲ್ಲಿ ಎಲ್ಲಕ್ಕೂ ಮೊದಲಿನ ಗೂಳಿಯಂತೆ ಬಸಪ್ಪನೆಂಬುವನು ನಿನ್ನ ಪೋಷ್ಯವರ್ಗದಲ್ಲಿ ನುಗ್ಗಿ ಬಂದುದನ್ನು ಆಗಲೇ ಮರೆತುಬಿಟ್ಟೆಯಾ? ಅವನೊಬ್ಬನಿಂದೇನಾದೀತು? ಉಪಸ ಪೂರ್ವಜರಾದ ಸಹೋದರರೆಲ್ಲರೂ ಅಂಧಕಾರದಲ್ಲಿ ಕೋಣೆಗಳೆಂಬ ಸೆರೆಮನೆಗಳಲ್ಲಿ ನರಳುತ್ತ ಶತ್ರುಗಳ ಮಧ್ಯದಲ್ಲಿ ಕ್ಷಯಿಸುತ್ತಾ ಇದ್ದುದನ್ನು ನೆನೆನೆನೆಸಿ ಧೈರ್ಯಗುಂದಿದೆಯೊ? ಹಿಂದಿನ ಮಕ್ಕಳಷ್ಟು ಈಗಿನ ಮಕ್ಕಳು ಸಮರ್ಥರಲ್ಲ ಎಂದು ತಿಳಿದೋ ಹೀಗೆ ದುಃಖಿಸುತ್ತಿರುವುದು? ಅವರಿಗೆ ಸಿಕ್ಕದೆಹೋದ ಆಂಗ್ಲೇಯಮಾತೆಯ ಸ್ತನ್ಯವನ್ನು ಇವರು ಕುಡಿಯುತ್ತಿದ್ದರೂ ಅವರಷ್ಟು ಶಕ್ತರಲ್ಲವೆಂಬುದಾಗಿಯೋ ಈಕೊರತೆ? ಶ್ಯಾಮಚಂದ್ರನೂ ಅಸ್ತಮಿಸಿದನಲ್ಲಾ ಎಂಬ ಕೊರತೆಯೊ? ಬಹುಶಃ ಆ ಕೊರತೆಯು ನಿನ್ನಲ್ಲಿರಲಾದೆಂಬುದಾಗಿಯೇ ತೋರುತ್ತದೆ. ಸಮುದ್ರಶಾಯಿಯಾಗಿ ಮನಸ್ಸಿನಲ್ಲಿಯೇ ಚಂದ್ರನನ್ನು ಸೃಷ್ಟಿಸಿದ ಕೃಷ್ಣನೇ ಈಗ ಹುಟ್ಟಿಯಿಲ್ಲವೆ? ಚಂದ್ರನ ಪ್ರಭೆಯೇ ಇಷ್ಟು ಆಹ್ಲಾದಕವಾಗಿರುವಾಗ ಆ ಚಂದ್ರನಿಗೂ ಜನ್ಮಭೂಮಿಯಾದ ಕೃಷ್ಣನ ಪ್ರತಾಪವು ಇನ್ನೆಷ್ಟು ಇರಬಹುದು. ಹೀಗಿರಲು ಕೊರತೆಯೇಕೆ? ಆ ಪೂರ್ವಜಪುತ್ರರ ಸ್ಥಿತಿಯೇ ನಿನ್ನ ಶೋಕಕ್ಕೆ ಕಾರಣವಾಗಿರಬಹುದು? ಆ ಕೊರತೆಯನ್ನು ನರರಲ್ಲಿ ಸಿಂಹನಾದ ನೃಸಿಂಹನೆಂಬ ಈವುತ್ರನು ನೀಗಾಡಲೆತ್ನಿಸಲಿಲ್ಲವೆ? ಆ ಯತ್ನಕ್ಕೆಯೋಗ್ಯರಾದ ದೇಶಮಕ್ಕಳನ್ನು ಪ್ರೇಮಾನುರಾಗದೊಡನೆ "ಬಾ, ಬಾ!" ಎಂದು ಕರೆಯುತ್ತಿರುವ ಭಾಷನ ಹಸ್ತಾವಲಂಬನವು ಅವನಿಗೆ ದೊರೆತಿಲ್ಲವೆ? ಆಗ ಅವನು ತನ್ನ ಮಿತ್ರನ ಬಲದಿಂದ ಯತ್ನಿಸಿ "ಕರ್ಣಾಟಕ ಕಾವ್ಯಪುಷ್ಪವ ಂಜರಿ" ಯನ್ನು ಎಲ್ಲೆಲ್ಲಿಯೂ ಬೆಳಸಲಿಲ್ಲವೆ? ಆ ಮಂಜರಿಯು "ಕಲಾನಿಧಿ" ಯಾಗಿಪರಿಣಮಿಸಲಿಲ್ಲವೆ? ಆ ಕಲಾನಿಧಿಯು ಬೆಳಕು ಈದೇಶದಲ್ಲಿ ಹರಡಿತಲ್ಲದೆ ಅನ್ಯದೇಶಗಳಲ್ಲಾಯೂ ಈಗ ಹರಡಿಕೊಳುತ್ತಿದೆ

ಯಲ್ಲವೆ? ಅದರಿಂದ ನಿನ್ನ ಪೂರ್ವವಾತ್ಸಲ್ಯಕ್ಕೆ ಪಾತ್ರರಾದವರ ವಾಙ್ಮಯಶರೀರವು ಸ್ಥಿರವಾಗಿ ಎಲೆಲ್ಲಿಯೂ ನಿಂತಿತಲ್ಲವೆ? ಆ ಪೂರ್ವಜರು ಧೈರ್ಯದಿಂದ ಉದ್ಧೃತಕಂಠರಾಗಿ ವಾಙ್ಮಯಶರೀರದಲ್ಲಿ ನಿಂತು ಹೆದರದೆ ತಮ್ಮ ಆಗಿನ ಸ್ಥಿತಿಯನ್ನೂ, ಆಗಿನ ಮಹಿಮೆಯನ್ನೂ, ಆಗಿನ ದೇಶಮಾತೆಯ ಉಜ್ಜ್ವಲತೆಯನ್ನೂ ಬೋಧಿಸುತಲೂ, ಈಗಿನವರಲ್ಲಿ ಅಡಗಿರುವ ಉತ್ಸಾಹದ ಮೊಳಕೆಯನ್ನು ತಮ್ಮ ವಾಗ್ಹರ್ಷದಿಂದ ಸಸ್ಯೋನ್ಮುಖವಾಗಿ ಮಾಡಬೇಕೆಂದೂ ಇರುತ್ತಾರಲ್ಲವೆ? ಅವರ ನಾಟಕವು ಎಲ್ಲರಿಗೂ ಹೃದಯಂಗಮವಾಗಿಲ್ಲವೆ? ಅದನ್ನು ನೋಡುತಿದ್ದರೂ ಈ ಕೊರತೆಯೇ ಕೋ ಕಾಣೆ? ಆ ನೃಸಿಂಹನ ಹೃದಯದಲ್ಲಿ ನಿನ್ನ ಅನುಗ್ರಹದಿಂದ ಮೂಡಿದ್ದ ತೇಜಸ್ಸು ಪಕ್ವವಾಗಿ ಈಜೆಗೆ ಹೊರಡಲಿಲ್ಲವಲ್ಲಾ ಎಂಬ ಕೊರತೆಯೋ? ಆಕೊರತೆಗಾಗಿ ನೀನು ಇಷ್ಟು ಚಿಂತೆಪಡಬೇಕಾಗಿಲ್ಲ. ಅಜನೃಪಚರಿತೆಯೂ, ದಿಲೀಪಚರಿತೆಯೂ, ಮುಕುಂದಮಾಲೆಯೂ, ಉತ್ತರರಾಮ ಚರಿತೆಯೂ, ಭಾರವಿಯೂ ಇರುವಾಗ ಆಚಿಂತೆಗೆ ಕಾರಣವೇನೂ ತೋರುವುದಿಲ್ಲ. ಒಂದೊಂದೇ ಅತನ ಬುದ್ಧಿಕೌಶಲವನ್ನೂ ವಾಙ್ಮಧುರ್ಯವನ್ನೂ ಇತರ ಸಪತ್ನಿಯರಲ್ಲಿಲ್ಲದ ನಿನ್ನ ಮೇಲ್ಮೆಯನ್ನೂ ತಿಳಿಸುತ್ತಿದೆಯಲ್ಲವೆ? ನಿನ್ನ ಪೂರ್ವಜಪುತ್ರರಿಗಿಂತಲೂ ಅತಿಶಯವಾದ ಮೇಲ್ಮೆಯೊಂದನ್ನು ಅತನಲ್ಲಿ ನೀನು ನೋಡಲಿಲ್ಲವೆ? ಅತನು ಆಂಗ್ಲೇಯಸರಸ್ವತಿಯ ನವೀನಹಾವಭಾವಗಳನ್ನೂ, ಹರಮಿಟ್ (Hermit)ಎಂಬ ನಿನ್ನ ಮೆಯ್ಸಿರಿಯಲ್ಲಿ ಮೆರೆಯಿಸಲಿಲ್ಲವೇ? ಇದೂಅಲ್ಲದೆ ಅತನು ನಿನ್ನ ಪ್ರಾಚೀನ ಪುತ್ರರ ಶಕ್ತಿಯನ್ನೂ, ನಿನ್ನ ತಾಯಿಯಾದ ಸಂಸ್ಕೃತ ಮಾತೆಯ ಅತಿಶಯಪನ್ನೂ, ಆಂಗ್ಲೇಯ ಸರಸ್ವತಿಯ ಸೌಲಭ್ಯವನ್ನೂ ಸೇರಿಸಿ ನಿನಗೆ ಒಂದು ಹೊಸ ಶೋಭೆಯನ್ನೂ ಕೊಡಲು ಯತ್ನಿಸಿದವನಲ್ಲವೇ? ಅದನ್ನು ಯೋಚಿಸಿಕೊಂಡೋ ನೀನು ದುಃಖಪಡುವುದು? ಅಂಥ ದುಃಖಕ್ಕೂಅವಕಾಶವಿಲ್ಲ. ಅತನ ಛಾಯಾನುವರ್ತಿಗಳು ನಿನ್ನನುಗ್ರಹವೊಂದಿದ್ದರೆ ಏಕೆ ಹುಟ್ಟಬಾರದು? ಹುಟ್ಟದಿರುವುದಕ್ಕೆ ಪ್ರತಿಕೂಲಕಾಲದ ಸಂಭವವು ಇಲ್ಲದೆ, ಎಲ್ಲರೂ ನಿನ್ನ ತಂಗಿಯ ಸೇವೆಯಲ್ಲಿ ಯತ್ನಿಸುತ್ತಿರಲು ಅಂಥ ಕೊರತೆಯನ್ನು ಬಿಡು. ನಿನ್ನ ಅನುಗ್ರಹವನ್ನು ಬಯಸಿ ಬರುವರನೇಕರುಂಟಾಗುವರು. ಅದಕ್ಕಾಗಿ ನೀನು ಯೋಚಿಸುವುದು ಪರಿಯಲ್ಲ. ನಾವೀಗ ಕೊರತೆಪಡಬೇಕು. " ನಿನ್ನ ಮಕ್ಕಳಲ್ಲಿ ಬಲಿಷ್ಟನಾದವನ ಸಹಾಯವೂ ಹೋಯಿತಲ್ಲ! ನಮಗೆ ಬೆನ್ನು ತಟ್ಟಿ ಉತ್ಸಾಹಗೊಳಿಸುವನು ಹೋದನಲ್ಲಾ! ತನ್ನ ದೇಹವನ್ನೂ ತನ್ನ ಶಕ್ತಿಯನ್ನೂ ತನ್ನ ಕಾಲವನ್ನೂ ನಮ್ಮ

ಅಭಿವೃದ್ಧಿಗೋಸ್ಕರವೇ ಕಳೆಯಬೇಕೆಂದಿದ್ದವನು ಮಾಯವಾದನಲ್ಲಾ! ನಮ್ಮ ಶರೀರಸ್ಥಿತಿಗೂ ನಮ್ಮ ಬುದ್ಧಿಗೂ ನಮ್ಮ ದೇಶಕ್ಕೂ ಸಹಜವಾದ ನಿನ್ನ ಸ್ತನ್ಯದಿಂದಲೇ ನಮ್ಮನ್ನು ವೃದ್ಧಿಗೊಳಿಸಬೇಕೆಂದಿದ್ದನಲ್ಲಾ! ಆ ಯತ್ನವು ಇಷ್ಟಕ್ಕೆ ಪರಿಣಮಿಸಿತೇ!" ಎಂದು ನಾವೀಗ ದುಃಖಪಡಬೇಕು. ಈಗೀಗ ಸರ್ವತ್ರ ನಿನ್ನ ವಾಕ್ಕೆಂಬುವ ಬೆಳಕೇ ನಮ್ಮವರ ಕಣ್ಣಿಗೆ ಸರಿಯಾದ ಬೆಳಕೆಂದು ತಿಳಿಯುತ್ತ ಬರುವರು. ಆ ಬೆಳಕಿನ ಮೂಲಕವಾಗಿಯೇ ನಮ್ಮ ಅಜ್ಞರಾದ ಸಹೋದರರ ನೇತ್ರಗಳನ್ನು ಉನ್ಮೀಲನ ಮಾಡುವುದು ಸುಕರವೆಂದು ತಿಳಿಯುತ್ತ ಬರುವರು. "ಇಂಥ ಕಾಲದಲ್ಲಿ ಈತನು ಗತಿಸಿದನಲ್ಲಾ! ಇವನಷ್ಟು ಸಮರ್ಥನಾದವನು ಹುಟ್ಟಲು ಇನ್ನೂ ಎಷ್ಟುಕಾಲ ಬೇಕೋ?—ಎಂಬ ಚಿಂತೆಯಿಂದ ನೀನು ಕೊರಗುತ್ತಿದ್ದರೆ ಆ ಚಿಂತೆಯೇನೋ ಸರಿ; ಅಂಥ ಚಿಂತೆಯು ಸಹಜ. ಅದರಿಂದ ಕೊರಗುವೆಯಾದರೆ ಯುಕ್ತ. ಅದೇ ನಿನ್ನ ಶೋಕಕ್ಕೆ ಕಾರಣವಿರಬಹುದು. ಆತನು ನಿನ್ನ ಸೇವೆಯಲ್ಲಿ ಹೊಂದಿದ ತೇಜಸ್ಸನ್ನು ಧಾರ್ವಾಡದಲ್ಲಿ ತೋರಿಸಿದಾಗ ನಿನಗೆಷ್ಟು ಸಂತೋಷವಾಯಿತು ಹೇಳು. ಆತನು ಆಗ ತನ್ನಂತನೇಕರಿರುವರೆಂದು ಹೇಳಿದನಲ್ಲವೆ? ಅಂಥವರು ನಿನ್ನನುಗ್ರಹದಿಂದ ಆತನಂತೇಕೆ ಬೇಗನೆ ಆಗಬಾರದು? ನಿನ್ನ ಕರುಣಾಕಟಾಕ್ಷಕ್ಕೆ ನಮ್ಮ ದೇಶದವರನ್ನು ಪಾತ್ರರನ್ನಾಗಮಾಡು. ನಮಗೆ ಈಗ ನರಸಿಂಹನ ವಿಯೋಗದಿಂದುಂಟಾದ ದುಃಖವನ್ನು ಹೋಗಲಾಡಿಸು! ನಿನ್ನ ತೇಜಸ್ಸನ್ನು ಪೂರ್ವದಂತೆಯೇ ನಿನ್ನ ಪುತ್ರರ ಮೂಲಕ ಪ್ರಜ್ವಾರಗೊಳಿಸು! ಇದಕ್ಕೆ ಶ್ರೀಕೃಷ್ಣನ ಸಹಾಯವು ನಮಗೆ ಒದಗಲಿ!

M. A. R.

ಮ್ಯಾನ್ಯುಯಲ್ ಟ್ರೇನಿಂಗ್ ವಿಷಯಕವಾದ ಪ್ರದರ್ಶನ.

ಜನವರಿ ತಿಂಗಳು 15 ನೇ ತಾರೀಕಿನಿಂದ 28 ರವರೆಗೂ ಬೆಂಗಳೂರಲ್ಲಿರುವ ಸರ್. ಶೇಷಾದ್ರಿಅಯ್ಯರ್ ಮೆಮೋರಿಯಲ್ ಹಾಲಿನಲ್ಲಿ ಮ್ಯಾನ್ಯುಯಲ್ ಟ್ರೇನಿಂಗ್ ಅಥವಾ ಸ್ಲಾಯ್ಡ್ ವಿಷಯಕವಾದ ಪ್ರದರ್ಶನವು ನಡೆಯಿತು. ಈ ಪ್ರದರ್ಶನವನ್ನು ನೋಡುವುದಕ್ಕೆ ಬೆಂಗಳೂರಲ್ಲಿರುವ ಅನೇಕ ಸಹಸ್ರ ಜನರು ಹೋಗಿದ್ದರು.

ವಿದ್ಯಾಭ್ಯಾಸದ ಇಲಾಖೆಯವರು ಎಲ್ಲಾ ಇನ್‌ಸ್ಪೆಕ್ಟರುಗಳನ್ನೂ, ಹೈಸ್ಕೂಲ್ ಹೆಡ್ ಮಾಸ್ಟರುಗಳನ್ನೂ ಕಳುಹಿಸಿದ್ದರು. ಈ ಪ್ರದರ್ಶನದಿಂದ ಸ್ಲಾಯ್ಡ್ ಪದ್ಧತಿಯ ವಿಷಯವು ಜನರಿಗೆ ಸ್ಪಷ್ಟವಾಗಿ ತಿಳಿಯಿತು. ಈ ಪದ್ಧತಿಯಪ್ರಕಾರ ಬೆಂಗಳೂರಲ್ಲಿ ಉಪಾಧ್ಯಾಯರು ಮರಗೆಲಸವನ್ನು ಮಾಡಲು ಪ್ರಾರಂಭಿಸಿದಾಗ ಸಾಧಾರಣ ಜನರು ಇದೂ ಒಂದುವಿಧವಾದ ಮರಗೆಲಸ, ಈ ಕೆಲಸವನ್ನು ಮಾಡಿಸುವುದಕ್ಕೆ ಸರ್ಕಾರದವರು ಇಷ್ಟು ದ್ರವ್ಯವನ್ನೇಕೆ ವ್ಯಯಮಾಡಬೇಕಾಗಿತ್ತು, ಎಂಬುದಾಗಿ ಎಂದುಕೊಳ್ಳುತಿದ್ದರು. ಈ ಪ್ರದರ್ಶನದಿಂದ ಅವಿಧವಾದ ಅಭಿಪ್ರಾಯಗಳೆಲ್ಲವೂ ಜನರ ಮನಸ್ಸಿನಿಂದ ತೊಲಗಿದುವು. ಸ್ಲಾಯ್ಡ್ ಪದ್ಧತಿಗೂ ಸಾಧಾರಣ ಮರಗೆಲಸಕ್ಕೂ ಇರತಕ್ಕ ಅಂತರವೂ, ಮತ್ತು ಈ ಪದ್ಧತಿಯಿಂದ ಮಕ್ಕಳ ವಿದ್ಯಾಭ್ಯಾಸಕ್ಕಾಗುವ ಪ್ರಯೋಜನವೂ, ಅಲ್ಲಿದ್ದ ವಸ್ತುಗಳಿಂದ ಸ್ಪಷ್ಟವಾಗಿ ಕಾಣುತಿದ್ದುವು.

ಮಕ್ಕಳು ಕಿಂಡರ್‌ಗಾರ್ಟ್ನ್ ತರಗತಿಗಳನ್ನು ಬಿಟ್ಟಮೇಲೆ ಅವರ ಹಸ್ತಕೌಶಲವನ್ನೂ, ನೇತ್ರಪಾಟವವನ್ನೂ, ಹೆಚ್ಚಿಸುವುದಕ್ಕೂ ಅವರ ಮನೋವ್ಯಾಪಾರಗಳನ್ನು ವೃದ್ಧಿಗೊಳಿಸುವುದಕ್ಕೂ ಅವರಿಂದ ಮಾಡಿಸಬೇಕಾದ ಕೈಗೆಲಸಗಳೆಲ್ಲವೂ ಅಲ್ಲಿ ಕಾಣುತಿದ್ದುವು. ಎರಡು, ಮೂರು, ನಾಲ್ಕನೇ ತರಗತಿಗಳಲ್ಲಿ ಮಕ್ಕಳು ಮಾಡಬೇಕಾದ ರಟ್ಟಿನಕೆಲಸದ ವಸ್ತುಗಳು ಒಂದುಕಡೆಯಲ್ಲಿ ಕ್ರಮವಾಗಿ ಹಲಿಗೆಗೆ ಅಂಟಿಸಲ್ಪಟ್ಟಿದ್ದುವು. ನಾವು ಹಿಂದಿನ ಸಂಚಿಕೆಯೊಂದರಲ್ಲಿ ಸೂಚಿಸಿದ್ದ ಮಿಸ್. ಬ್ರೌನ್ ಎಂಬಾಕೆಯು ಈ ವಸ್ತುಗಳನ್ನು ಸ್ಲಾಯ್ಡ್ ತರಗತಿಯಲ್ಲಿರುವ ಉಪಾಧ್ಯಾಯರಿಂದ ಮಾಡಿಸಿದ್ದಳು. ಮೈಸೂರಲ್ಲಿ ಕಿಂಡರ್‌ಗಾರ್ಟ್ನ್ ಉಪನ್ಯಾಸಗಳನ್ನು ಕೇಳುವುದಕ್ಕೆ ಬಂದಿರುವ ಉಪಾಧ್ಯಾಯರು ಈ ವಸ್ತುಗಳನ್ನು ಈಗ ಮಾಡುತಲಿರುವರು. ಎರಡು, ಮೂರು, ನಾಲ್ಕನೇ ತರಗತಿಗಳಲ್ಲಿರುವ ಮಕ್ಕಳಿಂದ ಈ ವಸ್ತುಗಳನ್ನು ಮಾಡಿಸಿದರೆ ಅವರಿಗೆ ವಿಶೇಷಪ್ರಯೋಜನವಾಗುವುದೆಂದು ನಿಸ್ಸಂಶಯವಾಗಿ ಹೇಳಬಹುದು. ಆ ಹಾಲಿನಲ್ಲಿ ಸುತ್ತಲೂ ಹಾಕಿದ್ದ ಮೇಜುಗಳಮೇಲೆ ಸ್ಲಾಯ್ಡ್ ತರಗತಿಯಲ್ಲಿ ಉಪಾಧ್ಯಾಯರು ಮಾಡಿದ ವಸ್ತುಗಳೆಲ್ಲವೂ ಕ್ರಮವಾಗಿ ಇಡಲ್ಪಟ್ಟಿದ್ದುವು. ಈ ವಸ್ತುಗಳಿಂದ ಮಕ್ಕಳ ಹಸ್ತಕೌಶಲವನ್ನು ಕ್ರಮಕ್ರಮವಾಗಿ ಹೆಚ್ಚಿಸುವುದಕ್ಕೆ ಅನುಸರಿಸಬೇಕಾದ ಮಾರ್ಗವು ಯಾವುದು, ಮಕ್ಕಳು ಉಪಯೋಗಿಸಬೇಕಾದ ಆಯುಧಗಳು ಯಾವುವು, ಪ್ರತಿಯೊಂದು ಆಯುಧದಿಂದಲೂ ಆಗಬೇಕಾದ ಪ್ರಯೋಜನವೇನು, ಈ ಪ್ರಯೋಜನಗಳುಂಟಾಗಬೇಕಾದರೆ ಮು

ಕ್ಕಳು ಯಾವರೀತಿಯಲ್ಲಿ ಕೆಲಸಮಾಡಬೇಕು, ಎಂಬೀಯಂಶಗಳು ಸುಲಭವಾಗಿ ಕಾಣುತಿದ್ದುವು. ಈ ನಾಲ್ಕುತಿಂಗಳಲ್ಲಿ ಉಪಾಧ್ಯಾಯರು ಮಾಡಿದ 11 ಮಾದರಿಗಳೂ ಅಲ್ಲಿ ಕ್ರಮವಾಗಿ ಇಡಲ್ಪಟ್ಟಿದ್ದುವು. ಈ ಮಾದರಿಗಳನ್ನು ಮಾಡುವುದರಲ್ಲಿ ಮುಖ್ಯವಾದ ಎಲ್ಲಾ ಆಯುಧಗಳೂ ಉಪಯೋಗಕ್ಕೆ ಬರುವಂತಿದ್ದುವು. ಇವುಗಳಲ್ಲಿ ಕೊನೇ ಮಾದರಿಯಾದ ಕಾಲುಮಣೆಯು ಬಹಳ ಶ್ಲಾಘ್ಯವಾಗಿತ್ತು. ಇದರ ಮೇಲುಭಾಗದಲ್ಲಿ ಉಪಾಧ್ಯಾಯರು ಕೆತ್ತನೆಯ ಕೆಲಸಗಳನ್ನು ಮಾಡಿದ್ದರು. ಇಷ್ಟು ಅಲ್ಪಕಾಲದಲ್ಲಿ ಇಷ್ಟರಮಟ್ಟಿನ ಕೆಲಸವನ್ನು ಮಾಡುವ ಶಕ್ತಿಯನ್ನು ಉಪಾಧ್ಯಾಯರು ಹೊಂದಿರುವುದನ್ನು ನೋಡಿ ಜನರು ವಿಶೇಷ ಆಶ್ಚರ್ಯಪಡುತಿದ್ದರು. ಕೆಲವರು ಈ ಕೆಲಸವನ್ನು ಉಪಾಧ್ಯಾಯರೇ ಮಾಡಿದುದೆಂದು ನಂಬಲಾರದೆ ಹೋದರು. ಆದರೆ ಈ ಕಾಲುಮಣೆಯನ್ನು ಇನ್ನೂ ಕೆಲವರು ಮಾಡಬೇಕಾಗಿತ್ತು. ಅವರು ಮಾಡುತಿದ್ದ ಕೆಲಸವನ್ನು ನೋಡಿ ಉಳಿದ ಮಣೆಗಳನ್ನೂ ಉಪಾಧ್ಯಾಯರೇ ಮಾಡಿರಬೇಕೆಂದು ತಿಳಿದುಕೊಂಡರು.

ಇನ್ನೊಂದುಕಡೆಯಲ್ಲಿ ಅಲ್ಲಿ ಶಿಕ್ಷಿತರಾಗುತಿರುವ ಉಪಾಧ್ಯಾಯರ ಮೇಲ್ವಿಚಾರಣೆಯಲ್ಲಿ ಹೈಸ್ಕೂಲುಗಳ ಬಾಲಕರು ಮಾಡಿದ ಮಾದರಿಗಳು ಇಡಲ್ಪಟ್ಟಿದ್ದುವು. ಈ ಮಾದರಿಗಳು ಬಹಳ ಶ್ಲಾಘ್ಯವಾಗಿದ್ದುವು. ಇವುಗಳನ್ನು ನೋಡುವುದರಿಂದ ಸ್ಲಾಯ್ಡ್ ಪದ್ಧತಿಯು ನಮ್ಮ ದೇಶದಲ್ಲಿ ಅಭಿವೃದ್ಧಿಹೊಂದುವುದರಲ್ಲಿ ಸಂಶಯವಿಲ್ಲವೆಂದು ತೋರುತಿತ್ತು. ಈ ಬಾಲಕರು ತಮ್ಮ ಕೆಲಸದ ವಿಷಯದಲ್ಲಿ ತಾವೇ ಅಭಿಪ್ರಾಯವನ್ನು ಬರೆದಿಟ್ಟಿದ್ದರು. ಇಂತಹ ಅಭಿಪ್ರಾಯಗಳು ತಪ್ಪಿಲ್ಲದವುಗಳಾಗಿಯೂ, ಚನ್ನಾಗಿ ಯೋಚಿಸಿ ಬರೆಯಲ್ಪಟ್ಟವುಗಳಾಗಿಯೂ ಇದ್ದುವು.

ಮತ್ತೊಂದುಕಡೆಯಲ್ಲಿ ಸ್ಲಾಯ್ಡ್ ಪದ್ಧತಿಯ ಸ್ವರೂಪವನ್ನು ತಿಳಿಸುವ ಪುಸ್ತಕಗಳು ಇಡಲ್ಪಟ್ಟಿದ್ದುವು. ಇವುಗಳಿಂದ ಸ್ಲಾಯ್ಡ ಪದ್ಧತಿಯು ಉದ್ದೇಶವೇನು? ಇದನ್ನು ಆಚರಣೆಗೆ ತರುವ ಮಾರ್ಗವಾವುದು? ಆಚರಣೆಗೆ ತರಲು ಯಾವ ಸೌಕರ್ಯಗಳಿರಬೇಕು? ಮುಂತಾದ ಅಂಶಗಳು ವ್ಯಕ್ತವಾಗುತಿದ್ದುವು.

ಬೇರೊಂದುಕಡೆಯಲ್ಲಿ ಡಾಕ್ಟರ್ ಲಾರ್ಸರ್ ರವರು ಕೊಟ್ಟ ಉಪನ್ಯಾಸಗಳ ಸಾರಾಂಶವನ್ನೊಳಗೊಂಡಿರುವ ಉಪಾಧ್ಯಾಯರು ಬರೆದ ಪುಸ್ತಕಗಳಿದ್ದುವು. ಈ ಪುಸ್ತಕಗಳ ಜೊತೆಯಲ್ಲಿ ಸ್ಲಾಯ್ಡ ಪದ್ಧತಿಯ ವಿಷಯದಲ್ಲಿ ಉಪಾಧ್ಯಾಯರು

ಸ್ವತಂತ್ರವಾಗಿ ಬರೆದ ಉಪನ್ಯಾಸಗಳೂ ಇಡಲ್ಪಟ್ಟಿದ್ದುವು. ಈ ಪುಸ್ತಕಗಳಿಂದಲೂ ಮ್ಯಾನ್ಯೂಲ್‌ಟ್ರೇನಿಂಗ್ ತರಗತಿಯಲ್ಲಿ ಶಿಕ್ಷಿತರಾಗುತಿರುವ ಉಪಾಧ್ಯಾಯರು ಸ್ಲಾಯ್ಡ್ ಪದ್ಧತಿಯ ತತ್ವಗಳನ್ನು ಚನ್ನಾಗಿ ತಿಳಿದುಕೊಂಡರೆಂಬುದು ಸ್ಪಷ್ಟಪಡುತಿತ್ತು. ಈ ಸ್ಥಳದಲ್ಲೇ ಮಾದರಿಗಳನ್ನು ಮಾಡಲು ಉಪಾಧ್ಯಾಯರು ಬರೆದಿದ್ದ ಡ್ರಾಯಿಂಗ್‌ಗಳೂ ಇಡಲ್ಪಟ್ಟಿದ್ದವು. ಇವುಗಳಿಂದ ಈ ಭಾಗದಲ್ಲಿ ಉಪಾಧ್ಯಾಯರಿಗೆ ಉಂಟಾಗಿರುವ ಅಭಿವೃದ್ಧಿಯು ತೋರ್ಪಡುತಿತ್ತು.

ಇದುವರೆಗೂ ತಿಳಿಸಿದ ಅಂಶಗಳಿಗಿಂತಲೂ ಬಹಳ ಮುಖ್ಯವಾದ ಎಲ್ಲರೂ ಅತ್ಯಾವಶ್ಯಕವಾಗಿ ನೋಡಬೇಕಾದ ಅಂಶವು ಅಲ್ಲಿ ಮತ್ತೊಂದಿತ್ತು. ಮ್ಯಾನ್ಯೂಲ್ ಟ್ರೇನಿಂಗ್ ತರಗತಿಯಲ್ಲಿ ಶಿಕ್ಷಿತರಾಗುತಿರುವ ಉಪಾಧ್ಯಾಯರು ಕೆಲಸಮಾಡುವಕಾಲದಲ್ಲಿ ಅವರು ಕೆಲಸಮಾಡುವ ರೀತಿಯನ್ನೂ, ಆಯುಧಗಳನ್ನು ಉಪಯೋಗಿಸುವ ರೀತಿಯನ್ನೂ ನೋಡುವುದೇ ಈಯಂಶವಾಗಿತ್ತು. ಸಾಧಾರಣವಾದ ಬಡಗಿಯು ಎರಡು ಮೂರು ವರ್ಷಗಳು ಕಷ್ಟಪಟ್ಟರೂ ಮಾಡುವುದಕ್ಕಾಗದ ಕೆಲಸಗಳನ್ನು ಇವರು ಸುಲಭವಾಗಿ ಮಾಡುತಿದ್ದರು. ಕೆಲಸ ಮಾಡುವಾಗ ದೇಹಕ್ಕೆ ವಿಶೇಷ ಆಯಾಸವಾಗದಂತೆ, ಪುಟ್ಟು ಮಾಂಸಖಂಡಗಳಿಗೆ ಬಲಬರುವಂತೆ ನಿಲ್ಲುತಿದ್ದರು ಆಯುಧಗಳನ್ನು ಅತ್ಯುತ್ತಮವಾದ ರೀತಿಯಲ್ಲೇ ಉಪಯೋಗಿಸುತಿದ್ದರು. ಇವರು ಮಾಡುತಿದ್ದ ಮಾದರಿಗಳಲ್ಲಿ ಅಳತೆಗಳು ನಿಷ್ಕೃಷ್ಟವಾಗಿದ್ದುವು. ಸ್ಲಾಯ್ಡ್ ಪದ್ಧತಿಯಿಂದ ಆಗಬೇಕಾದ ಪ್ರಯೋಜನಗಳು ಈ ಉಪಾಧ್ಯಾಯರಲ್ಲಿ ಪ್ರತ್ಯಕ್ಷವಾಗಿಯೇ ಕಾಣುತಿದ್ದುವು.

ಈ ಪ್ರದರ್ಶನವನ್ನೇರ್ಪಡಿಸಿ ಸಾಧಾರಣ ಜನರಿಗೆ ಸ್ಲಾಯ್ಡ್ ಪದ್ಧತಿಯು ವಿಷಯವು ತಿಳಿಯುವಂತೆ ಮಾಡಿದುದಕ್ಕಾಗಿ ನಾವು ಸರ್ಕಾರದವರನ್ನು ವಂದಿಸುವೆವು.

ಡಾಕ್ಟರ್ ಲಾರ್ಸ್ಸರವರಿಗೆ ಕೊಟ್ಟ ಎಂಟರ್‌ಟೇನ್‌ಮೆಂಟ್.

ಅಮೇರಿಕದಿಂದ ನಮ್ಮ ದೇಶಕ್ಕೆ ಬಂದು ಡಾಕ್ಟರ್ ಲಾರ್ಸ್ಸರವರು ನಮ್ಮಲ್ಲಿ ಸ್ವಲ್ಪಕಾಲವಿದ್ದರೂ ಅವರಲ್ಲಿ ಓದುತಿದ್ದ ಉಪಾಧ್ಯಾಯರ ಗೌರವವನ್ನೂ, ಪ್ರೀತಿ

ಯನ್ನೂ ಸಂಪಾದಿಸಿಕೊಂಡರು. ಹೀಗೆ ಪ್ರೀತಿಸಲ್ಪಡುವುದಕ್ಕೆ ಇವರಲ್ಲಿ ಕಾಣುತಿದ್ದ ದೊಡ್ಡ ನಡತೆಯೇ ಕಾರಣವಾಗಿತ್ತು. ಇವರು ಎಲ್ಲರಲ್ಲಿಯೂ ಒಂದೇಸ ಮನಾಗಿ ನಡೆದುಕೊಳ್ಳುತಿದ್ದರು, ದಯಾಳುಗಳಾಗಿದ್ದರು, ಉಪಾಧ್ಯಾಯರು ಕೇ ಳುತಿದ್ದ ಪ್ರಶ್ನೆಗಳಿಗೆ ಆದರದಿಂದ ಉತ್ತರ ಹೇಳುತಿದ್ದರು, ಸರ್ವಸುಲಭರಾಗಿದ್ದ ರು. ಗಾಂಭೀರ್ಯವು ಇವರ ನಡತೆಯುಲ್ಲಿ ಕಾಣುತಿದ್ದ ಒಂದು ಮುಖ್ಯ ಗುಣವಾಗಿ ತ್ತು. ತಮ್ಮನ್ನು ಕಾಣುವುದಕ್ಕೆ ಬಂದ ದೊಡ್ಡಮನುಷ್ಯರಲ್ಲೂ, ತಮ್ಮ ವಿದ್ಯಾರ್ಥಿ ಗಳಲ್ಲೂ ಒಂದೇವಿಧವಾಗಿ ನಡೆದುಕೊಳ್ಳುತಿದ್ದರು. ಇವರನ್ನು ನೋಡಲು ಬಂದ ಪ್ರತಿಯೊಬ್ಬನೂ ಅವರಲ್ಲಿ ಕಾಣುತಿದ್ದ ಸುಗುಣಗಳನ್ನು ನೋಡಿ ಆಶ್ಚರ್ಯಪಡುತಿ ದ್ದನು. ಇಂತಹ ಮಹನೀಯರು ತಾವು ಗೊತ್ತುಮಾಡಿಕೊಂಡಿದ್ದ ಅವಧಿಯು ಮುಗಿದುಹೋದುದರಿಂದ ತಮ್ಮ ದೇಶಕ್ಕೆ ಹೊರಡಬೇಕಾಗಿ ಬಂತು. ಇವರ ಪ್ರಯಾಣವು ಇವರಲ್ಲಿ ಕೆಲಸಮಾಡುತಿದ್ದ ಉಪಾಧ್ಯಾಯರಿಗಲ್ಲದೆ ಇವರನ್ನು ಕದಾ ಚಿತ್ ನೋಡಿದ್ದವರಿಗೂ ವಿಷಾದಜನಕವಾಗಿತ್ತು.

ಇವರ ವಿಷಯದಲ್ಲಿ ತಮಗಿದ್ದ ಗೌರವವನ್ನೂ ಪ್ರೀತಿಯನ್ನೂ ತೋರ್ಪಡಿ ಸುವುದಕ್ಕಾಗಿ ಮ್ಯಾನ್ಯುಲ್ ಟ್ರೇನಿಂಗ್ ತರಗತಿಯಲ್ಲಿದ್ದ ಉಪಾಧ್ಯಾಯರು ಒಂದು ಎಂಟರ್‌ಟೈನ್‌ಮೆಂಟನ್ನು ಏರ್ಪಡಿಸಿದರು. ಇದು ಜನವರಿ ತಿಂಗಳು 25 ನೇ ತಾ ರೀಖಿನ ದಿವಸ ಲಂಡನ್‌ಮಿಷನ್‌ಸ್ಕೂಲ್ ಹಾಲಿನಲ್ಲಿ ನಡೆಯಿತು. ಆಕಾಲದಲ್ಲಿ ಬೆಂ ಗಳೂರಿನಲ್ಲಿದ್ದ ದೊಡ್ಡಮನುಷ್ಯರೆಲ್ಲರೂ ನೆರೆದಿದ್ದರು. 2 ನೇ ಕೌನ್ಸಿಲರಾದ ಮೆ॥ ಪುಟ್ಟಣ್ಣಶೆಟ್ಟರವರು ಅಗ್ರಾಸನವನ್ನು ವಹಿಸಿದ್ದರು. ಅವರ ಒಂದು ಪಕ್ಕ ದಲ್ಲಿ ಡಾಕ್ಟರ್ ಲಾರ್ಸನ್‌ಸಾಹೇಬರೂ, ಮತ್ತೊಂದು ಪಕ್ಕದಲ್ಲಿ ಇನ್‌ಸ್ಪೆಕ್ಟರ್ ಜನ ರಲ್ ಮೆ॥ ಭಾಭಾಸಾಹೇಬರೂ, ಕುಳಿತಿದ್ದರು. ಬೆಂಗಳೂರು ಗರ್ಲ್‌ಸ್ಕೂಲು ಗಳ ಬಾಲಕಿಯರು ಡಾಕ್ಟರ್ ಲಾರ್ಸನ್ ಸಾಹೇಬರವರಿಗೆ ಸುಸ್ವಾಗತವನ್ನು ಬಯಸಿ ಒಂದು ಗಾನವನ್ನು ಹಾಡಿದರು. ಆಮೇಲೆ ಸ್ವಲ್ಪಹೊತ್ತು ಸಂಗೀತವು ನಡೆಯಿತು. ಡಾಕ್ಟರ್ ಲಾರ್ಸನ್‌ರವರಮೇಲೆ ಮಾಡಿದ್ದ ಕೆಲವು ಸಂಸ್ಕೃತಪದ್ಯ ಗಳನ್ನೊಬ್ಬರು ಓದಿದರು. ಆಮೇಲೆ ಮೈಸೂರಲ್ಲಿರುವ ಗೌರ್ನಮೆಂಟ್ ಕನ್ನಡ ಸ್ಕೂಲ್ ಹೆಡ್‌ಮಾಸ್ಟರು ಮ॥ ರಾ॥ ಎ. ಶೇಷಯ್ಯಂಗಾರ್ಯರು ಮಾಡಿ ಕಳುಹಿಸಿದ್ದ ಕೆಲವು ಕನ್ನಡ ಪದ್ಯಗಳನ್ನೊಬ್ಬರು ಓದಿದರು. ಈ ಪದ್ಯಗಳು ಯಾವುವೆಂದರೆ—

ಕಂ ॥ ಶ್ರೀಮದ್ಗುಸ್ತಾಪ್‌ಲಾರ್ಸನ್ ।

ಪ್ರೇಮದೆ ನೀಸ್ಪೈದೆ ಕೃಷ್ಣನರಪತಿಪೊರೆವ ॥

ಈಮೈಸೂರ ಜನಂಗಳ।
ತಾಮಸಪೋಡಿದುದು ನಿನ್ನದರುಶನದಿಂದಂ ॥

ವೃ ॥ ಸ್ತುತ್ಯಸ್ಸ್ಕಾಯಿಡಮಾರ್ಗಮಾಂತೆಸೆಯುತಂ ನೀನನ್ಯರಾಜ್ಯಂಗಳೊಳ್ ।
ನಿತ್ಯಂವಾಸಿಸುತಿರ್ದುಮೆಮ್ಮೊಳಲವಂ ವಾತ್ಸಲ್ಯಮಂತಾಳುತಂ॥
ನಿತ್ಯಾನಂದಮನೀಯುತಿಂತುಕಲೆಯುಂ ಸಮ್ಮೋದದಿಂ ನಾಂಟುತಂ ।
ಅತ್ಯಾಯಾಸಮನಾಂತೆಯ್ದೆಸೆ ಜಗದೊಳ್ ನೀನೇಂದಯಾಶಾಲಿಯೋ ॥ ೩ ॥

ವೃ ॥ ಆರಿಂಜೀವಿಪೆವಿನ್ನಮುನ್ನಮವನಂ ಶ್ರೀಕೃಷ್ಣರಾಜೇಂದ್ರನಂ ।
ಆರಿಂದಾಯ್ತು ಹಿತೋಪದೇಶಮೆಮಗಾ ಭಾಭಾಮಹಾಪ್ರಾಜ್ಞನಂ ।
ಆರಿಂಸ್ಕಾಯಿಡಮಾರ್ಗಮಾಂತೆಸೆವೆವಾಗುಸ್ತಾಫಲಾರ್ಸರ್ ಮಹಾ ।
ಧೀರಾಗ್ರೇಸರನಂ ಜಗತ್ಪತಿಕುಡತ್ತಂ ಸೌಖ್ಯಮಂ ರಕ್ಷಿಕೆ ॥ ೩ ॥

ಅನಂತರ ಮ್ಯಾನ್ಯೂಲ್ ಟ್ರೇನಿಂಗ್ ತರಗತಿಯಲ್ಲಿ ಶಿಕ್ಷಿತರಾಗುತಿರುವ ಉಪಾಧ್ಯಾಯರೊಬ್ಬರು ಮುಂದಿನ ಅಡ್ರೆಸ್ಸನ್ನು ಓದಿದರು.

ಡಾಕ್ಟರ್ ಲಾರ್ಸರವರೇ!

" ಮೈಸೂರು ದೇಶದ ನಾನಾಕಡೆಗಳಿಂದ ಬಂದು ಇಲ್ಲಿ ಶಿಕ್ಷಿತರಾಗುತಿರುವ ನಾವುಗಳೆಲ್ಲರೂ ತಮ್ಮಲ್ಲಿ ವಿನಯದಿಂದ ವಿಜ್ಞಾಪಿಸಿಕೊಳ್ಳುವುದೇನೆಂದರೆ—ತಾವು ನಮ್ಮಲ್ಲಿ ೫ ತಿಂಗಳು ಮಾತ್ರವಿದ್ದರೂ ಬಂದೇಸಮನಾಗಿ ನಮ್ಮಲ್ಲಿ ತೋರಿಸುತಿದ್ದ ದಯೆ, ತಾಳ್ಮೆ ಮೊದಲಾದ ಸುಗುಣಗಳಿಂದ ನಮ್ಮ ಪ್ರೀತಿಗೆ ಪಾತ್ರರಾಗಿರುವಿರಿ. ಇದುವರೆಗೂ ನಾವುಗಳು ಉಪಾಧ್ಯಾಯರಾಗಿದ್ದರೂ ತಮ್ಮಲ್ಲಿ ಕಂಡ ಶಿಕ್ಷಣ ಕೌಶಲದಿಂದ ನಮ್ಮ ಕೆಲಸವನ್ನು ಇದುವರೆಗೂ ಮಾಡುತಿದ್ದ ರೀತಿಗಿಂತಲೂ ಉತ್ತಮವಾದ ರೀತಿಯಲ್ಲಿ ಮಾಡುವ ಶಕ್ತಿಯನ್ನು ಹೊಂದಿರುವೆವೆಂದು ಧಾರಾಳವಾಗಿ ಹೇಳುವೆವು. ಸ್ಕಾಯ್ಡ್ ಪದ್ಧತಿಯ ವಿಷಯದಲ್ಲಿ ವಿಶೇಷ ಪ್ರೀತಿಯನ್ನೂ, ಉತ್ಸಾಹವನ್ನೂ ತಾವು ನಮ್ಮಲ್ಲಿ ಹುಟ್ಟಿಸಿರುವಿರಿ. ನಮ್ಮ ದೇಶದ ಮಕ್ಕಳ ವಿದ್ಯಾಭ್ಯಾಸದಲ್ಲಿ ಈ ಪದ್ಧತಿಯನ್ನು ಉಪಯೋಗಿಸಲು ನಮ್ಮ ಕೈಲಾದಷ್ಟು ಪ್ರಯತ್ನ ಪಡುವೆವು.

ಸ್ಕಾಯ್ಡ ಪದ್ಧತಿಯನ್ನು ಅಮೆರಿಕಾಖಂಡಕ್ಕೆ ತಾವೇ ಮೊದಲು ತೆಗೆದು ಕೊಂಡು ಹೋದಿರಿ. ಈಗ ಈ ಪದ್ಧತಿಗನುಸಾರವಾದ ಅನೇಕ ಸ್ಕೂಲುಗಳು ಆ ಖಂಡದಲ್ಲಿ ಇರುವುದರಿಂದ ಈ ಪದ್ಧತಿಯು ಮಕ್ಕಳ ಶಿಕ್ಷಣಕ್ಕೆ ಅತ್ಯುತ್ತಮವಾದು

ದೆಂದು ಹೇಳಲು ಆಧಾರವು ದೊರೆತಿರುವುದು.

ನಮ್ಮ ಇಲಾಖೆಯ ಇನಸ್ಪೆಕ್ಟರ್ ಜನರಲ್‌ರಾದ ಮೆ॥ ಥಾಥಾಸಾಹೇಬರು ಸ್ಲಾಯ್ಡಿನ ಬೆಲೆಯನ್ನು ತಿಳಿದು ತಮ್ಮ ಹೆಸರನ್ನು ದಿವಾರ್ಜರವರಿಗೆ ತಿಳಿಸಿ ತಾವು ಇಲ್ಲಿಗೆ ಬರುವಂತೆ ಮಾಡಿದರು. ತಾವು ಕೊಟ್ಟ ಉಪನ್ಯಾಸಗಳನ್ನು ಗ್ರಹಿಸಿದ ನಾವುಗಳು ತಾವು ನೆಟ್ಟಗಿಡವನ್ನು ಸರಿಯಾಗಿ ವೃದ್ಧಿಗೊಳಿಸಲು ಯತ್ನಿಸುವೆವು. ತಮ್ಮ ಉಪನ್ಯಾಸಗಳಿಗನುಸಾರವಾಗಿ ಬಾಲಕರಲ್ಲಿರುವ ಎಲ್ಲಾವಿಧವಾದ ಶಕ್ತಿಗಳನ್ನೂ ಸರಿಯಾಗಿ ವೃದ್ಧಿಗೊಳಿಸಲು ಯತ್ನಿಸುವೆವು. ಈಗ ತಾವು ತಮ್ಮ ಸ್ಥಳಕ್ಕೆ ಹೊರಟಿರುವಿರಿ. ತಮ್ಮನ್ನಗಲುವುದರಿಂದ ನಮ್ಮ ಮನಸ್ಸಿಗೆ ವಿಶೇಷ ಖೇದವುಂಟಾಗಿರುವುದು. ತಾವು ಆಗಾಗ್ಗೆ ನಮಗೆ ಬುದ್ಧಿವಾದಗಳನ್ನು ಬರೆಯುತ ನಮ್ಮ ಕರ್ತವ್ಯವನ್ನು ನೆರವೇರಿಸುವುದರಲ್ಲಿ ಸೌಕರ್ಯವನ್ನುಂಟುಮಾಡಿಕೊಡಬೇಕೆಂದು ಪ್ರಾರ್ಥಿಸುವೆವು.

ತಮ್ಮ ಸಮುದ್ರಯಾನವು ಸುರಕ್ಷಿತವಾಗಿ ನಡೆದು ತಾವು ತಮ್ಮ ದೇಶವನ್ನು ಸೇರಿದಮೇಲೆ ತಮ್ಮ ಒಳ್ಳೇ ಕೆಲಸವು ಎಲ್ಲಾಕಡೆಗೂ ಹರಡುವಂತೆ ದೇವರು ತಮಗೆ ದೀರ್ಘಾಯುಷ್ಯವನ್ನಿತ್ತು ರಕ್ಷಿಸಬೇಕೆಂದು ನಾವು ದೇವರನ್ನು ಪ್ರಾರ್ಥಿಸುವೆವು. ನಾವು ಕೊಡುವ ಈ ಅಲ್ಪವಸ್ತುವನ್ನು ನಮ್ಮ ಪ್ರೀತಿಯ ಚಿಹ್ನೆಯೆಂದು ತಾವು ಸ್ವೀಕರಿಸಬೇಕಾಗಿ ಪ್ರಾರ್ಥಿಸುವೆವು''

ಹೀಗೆ ಅಡ್ರೆಸ್ಸನ್ನು ಓದಿದಮೇಲೆ ಗಂಧದಮರದಲ್ಲಿ ಉತ್ಕೃಷ್ಟವಾಗಿ ಕೆಲಸ ಮಾಡಿದ್ದ ಮೇಜಿನ ಮೇಲಿಡುವ ಒಂದುವಿಧವಾದ ಸ್ಟ್ಯಾಂಡನ್ನು ಉಪಾಧ್ಯಾಯರೊಬ್ಬರು ಒಪ್ಪಿಸಿದರು. ಆಮೇಲೆ ಲಂಡರ್ಮಿಷ್ಟ ಸ್ಕೂಲ್ ಹೆಡ್ಮಾಸ್ಟರಾದ ಮಿ॥ ರಾ॥ ರಾಮಚಂದ್ರರಾಯರು ಮುಂದಿನರೀತಿಯಲ್ಲಿ ಮಾತನಾಡಿದರು.

" ಶೇಷಾದ್ರಿ ಮೆಮೋರಿಯಲ್ ಹಾಲಿಗೆ ಬಂದು ತಮ್ಮ ಕೆಲಸವನ್ನು ನೋಡುವುದಕ್ಕೆ ಮೊದಲು ನಾನು ಸ್ಲಾಯ್ಡ್ ಎಂಬುದೂ ಒಂದು ವಿಧನಾದ ಮರಗೆಲಸವೆಂದು ತಿಳಿದಿದ್ದೆನು. ಆದರೆ ನಾನು ಆ ಮಂದಿರವನ್ನು ಪ್ರವೇಶಮಾಡಿದೊಡನೆಯೇ ಈ ಯಭಿಪ್ರಾಯವು ನನ್ನ ಮನಸ್ಸಿನಿಂದ ತೊಲಗಿತು. ನಮ್ಮ ಉಪಾಧ್ಯಾಯರಿಗೆ ಬುದ್ಧಿಶಕ್ತಿಗಳು ವಿಶೇಷವಾಗಿ ಇರುವುವೇ ಹೊರತು ಕೈಯನ್ನು ಸರಿಯಾಗಿ ಉಪಯೋಗಿಸುವ ಶಕ್ತಿಯು ಇಲ್ಲ, ಮತ್ತು ಈ ಶಕ್ತಿಯನ್ನು ಇವರಿಗುಂಟುಮಾಡುವುದೂ ಅಸಾಧ್ಯವೆಂದು ನಾನುತಿಳಿದಿದ್ದೆನು. ಆದರೆ ಈಗ ತಮ್ಮಲ್ಲಿ ಕೆಲಸಮಾಡ

ತಿರುವ ಉಪಾಧ್ಯಾಯರನ್ನು ನೋಡಿ ಇಂತಹ ಶಕ್ತಿಗಳೂ ಅವರಲ್ಲಿ ಸಹಜವಾಗಿಯೇ ಇರುವುವು. ಅವುಗಳ ಬೆಳವಣಿಗೆಗೆ ತಕ್ಕ ಕೆಲಸವನ್ನು ಕೊಟ್ಟರೆ ಅವು ಉತ್ತಮವಾದ ರೀತಿಯಲ್ಲಿ ವೃದ್ಧಿಹೊಂದುವುವೆಂದು ನಾನು ತಿಳಿದೆನು. ನಮ್ಮ ಉಪಾಧ್ಯಾಯರಲ್ಲಿ ತಮಗಿರುವ ಮಮತೆಯನ್ನು ನೋಡಿ ತಾವು ಸ್ವೀಡಿಷ್ ದೇಶದವರಾದರೂ ಆ ಶಬ್ದದ ಅಕ್ಷರವಿನಿಮಯದಿಂದ ತಮ್ಮನ್ನು ಸ್ವದೇಶಿಗಳೆಂದು ನಾನು ಭಾವಿಸಿರುವೆನು. ತಾವು ನಮ್ಮಲ್ಲಿ ನಟ್ಟಿರುವ ಸ್ಲಾಯ್ಡ್ ಪದ್ಧತಿಯನ್ನು ನಮ್ಮ ದೇಶಕ್ಕನುಗುಣವಾಗಿ ಸರಿಪಡಿಸಿಕೊಳ್ಳುವೆವು. ತಾವು ಇಲ್ಲಿಗೆ ಮತ್ತೊಂದಾವೃತ್ತಿ ಬಂದು ಇಲ್ಲಿ ನಡೆಯುತ್ತಿರುವ ಕೆಲಸವನ್ನು ನೋಡಬೇಕೆಂದು ನಾನು ಕೋರುವೆನು.''

ಅನೇಲೆ ರೆವರೆಂಡ್. ಹೆಚ್. ಜನ್‌ಸ್ಸ್ ಎಂಬುವರು ಮುಂದೆ ಹೇಳುವ ರೀತಿಯಲ್ಲಿ ಮಾತನಾಡಿದರು.

'' ಮಿ॥ ರಾ॥ ರಾಮಚಂದ್ರರಾಯರು ಡಾಕ್ಟರ್ ಲಾರ್ಸರವರನ್ನು ಸ್ವದೇಶಿಗಳೆಂದು ಕರೆದು ಅವರಿಗೆ ಇಲ್ಲಿನ ಜನರಲ್ಲಿದ್ದ ಪ್ರೀತಿಗೆ ಕಾರಣವನ್ನು ತೋರ್ಪಡಿಸಿದರು. ಆದರೆ ಡಾಕ್ಟರ್ ಲಾರ್ಸರವರಿಗೆ ಇಲ್ಲಿನ ಜನರಲ್ಲಿರುವ ಪ್ರೀತಿಗೆ ನನಗೆ ಮತ್ತೊಂದು ಕಾರಣವು ತೋರುವುದು. ತಿಲಕ್ ಎಂಬುವರು ಬರೆದಿರುವ ಪುಸ್ತಕದಿಂದ ಆರ್ಯ್ ಜನರು ಉತ್ತರಸಾಗರದ ಸಮೀಪದಲ್ಲಿ ಸ್ವೀಡ್ಸ್ ರಾಜ್ಯದಲ್ಲಿ ಮೊದಲಿದ್ದರೆಂತಲೂ ಅಲ್ಲಿಂದ ಎಲ್ಲಾ ದೇಶಗಳಿಗೂ ಹೋದರೆಂತಲೂ ತಿಳಿಯುವುದು. ಈಯುಭಿಪ್ರಾಯುಕ್ಕನುಸಾರವಾಗಿ ಡಾಕ್ಟರ್ ಲಾರ್ಸರವರು ನಮ್ಮವರೇ ಆದುದರಿಂದ ನಮ್ಮಲ್ಲಿ ಅವರಿಗಿರುವ ಮಮತೆಯು ನಮಗೆ ಆಶ್ಚರ್ಯವನ್ನುಂಟುಮಾಡುವುದಿಲ್ಲ. ಆರ್ಯ್ ಜನರು ಈ ದೇಶಕ್ಕೆ ಬಂದಾಗ ಬಂದಂಶವನ್ನು ತರಲು ಮರೆತಿದ್ದರು. ಸ್ಲಾಯ್ಡ್ ಪದ್ಧತಿಯೇ ಈಯಂಶವು. ಅದನ್ನು ಈಗ ಡಾಕ್ಟರ್ ಲಾರ್ಸರವರು ನಮ್ಮಲ್ಲಿಗೆ ತಂದಿರುವರು. ಇವರು ನಟ್ಟಿರುವ ಗಿಡವನ್ನು ಇವತ್ತು ಅಗ್ರಾಸನವನ್ನು ಅಲಂಕರಿಸಿರುವ ಕೌನ್ಸಿಲ್ಲರೂ, ಇನ್‌ಸ್ಪೆಕ್ಟರ್ ಜನರಲ್ ಮೆ॥ ಭಾಭಾಸಾಹೇಬರೂ, ಅತ್ಯಾದರದಿಂದ ವೃದ್ಧಿಗೊಳಿಸುವುರೆಂದು ನಾನು ನಂಬಿರುವೆನು. ಡಾಕ್ಟರ್ ಲಾರ್ಸರವರೂ, ನಾನೂ ಅನೇಕ ದಿವಸಗಳು ಹೊರಗೆ ಸಂಚಾರಕ್ಕೆ ಜೊತೆಯಲ್ಲಿ ಹೋಗುತಿದ್ದೆವು. ಯಾವಾಗಲೂ ಇವರು ತಮ್ಮ ವಿದ್ಯಾರ್ಥಿಗಳ ವಿಷಯವನ್ನೇ ನನ್ನೊಡನೆ ಮಾತನಾಡುತಿದ್ದರು. ವಿದ್ಯಾರ್ಥಿಗಳಲ್ಲಿ ಇವರಿಗಿದ್ದ ಮಮತೆಯು ಅಸಾಧಾರಣವಾಗಿತ್ತು. ಇವರಲ್ಲಿ ಬ್ರಾಹ್ಮಣರೂ ವಿಶೇಷ ಉತ್ಸಾ-

ಹದಿಂದ ಮರಗೆಲಸವನ್ನು ಮಾಡುತಿದ್ದುದು ಬಹಳ ಸಂತೋಷಕರವಾಗಿತ್ತು. ಇವರು ನಮ್ಮಲ್ಲಿ ನಟ್ಟಿರುವ ಪದ್ಧತಿಯು ಸರಿಯಾಗಿ ಬೇರೂರಿ ಪೂರ್ಣಫಲವನ್ನು ಕೊಡಬೇಕೆಂದು ನಾನು ಅಪೇಕ್ಷಿಸುವೆನು. ''

ಅನಂತರ ಡಾಕ್ಟರ್ ಲಾರ್ಸರ್‌ರವರು ಹೀಗೆ ಮಾತನಾಡಿದರು.

'' ಈ ರಾಜ್ಯದ ಸರ್ಕಾರದವರು ಸ್ಲಾಯ್ಡ್ ಪದ್ಧತಿಯನ್ನು ಈ ದೇಶದಲ್ಲಿ ಆಚರಣೆಗೆ ತರುವುದಕ್ಕೂ ಇಲ್ಲಿನ ಜನರ ಸ್ವಭಾವವನ್ನು ತಿಳಿಯುವುದಕ್ಕೂ ನನಗೆ ಅವಕಾಶವನ್ನು ಕೊಟ್ಟುದುದಕ್ಕಾಗಿ ನಾನು ಅವರನ್ನು ಬಹಳವಾಗಿ ವಂದಿಸುವೆನು. ಸ್ಲಾಯ್ಡ್ ಪದ್ಧತಿಯನ್ನು ಪ್ರಚಾರಪಡಿಸುವ ಉಪಾಧ್ಯಾಯರು ತಮ್ಮ ಶಿಷ್ಯರ ಸ್ವಭಾವಗಳನ್ನರಿತು ಅವುಗಳಿಗನುಸಾರವಾಗಿ ಬೋಧಿಸಬೇಕೆಂದು ನಾನು ಕೋರುವೆನು. ಒಳ್ಳೆಯ ಉಪಾಧ್ಯಾಯರು ಸದಾ ಒಳ್ಳೆಯ ವಿದ್ಯಾರ್ಥಿಗಳಾಗಿರಬೇಕೆಂಬುದು ನನ್ನ ಅಭಿಪ್ರಾಯವು. ನೀವು ಈದಿವಸ ನನಗೆ ಕೊಟ್ಟ ವಸ್ತುವಿಗಾಗಿ ನಿಮ್ಮನ್ನು ವಂದಿಸುವೆನು. ಮತ್ತು ನಿಮ್ಮ ಕೆಲಸದಲ್ಲಿ ಪೂರ್ಣವಾದ ಫಲವುಂಟಾಗಬೇಕೆಂದು ಕೋರುವೆನು. ''

ಅನಂತರ ಅಗ್ರಾಸನವನ್ನಲಂಕರಿದ್ದ ಮೈ॥ ಪುಟ್ಟಣ್ಣಶೆಟ್ಟರವರು ಈರೀತಿಯಲ್ಲಿ ಮಾತನಾಡಿದರು.

ಡಾಕ್ಟರ್ ಲಾರ್ಸರ್‌ರವರೇ!

ನೀವು ನಮ್ಮಲ್ಲಿ ಮಾಡಿದ ಉತ್ತಮವಾದ ಕೆಲಸಕ್ಕಾಗಿ ನಾನು ನಿಮ್ಮನ್ನು ಮೈಸೂರು ದೇಶದ ಜನಗಳ ಪರವಾಗಿ ವಂದಿಸುವೆನು. ಈ ದಿವಸ ಇಲ್ಲಿ ಅಗ್ರಾಸನವನ್ನು ನಮ್ಮ ದಿವಾನವರಾದ ಮೈ॥ ಮಾಧವರಾಯರವರು ಅಲಂಕರಿಸಬೇಕೆಂದು ಉದ್ದೇಶಿಸಲ್ಪಟ್ಟಿತ್ತು. ಆದರೆ ಕಾರ್ಯಗೌರವದಿಂದ ಅವರು ಇಲ್ಲಿಗೆ ಬರುವುದು ಅಸಾಧ್ಯವಾದುದರಿಂದ ಆ ಸ್ಥಾನವನ್ನು ನಾನು ತೆಗೆದುಕೊಳ್ಳಬೇಕಾಗಿಬಂತು. ಮೈಸೂರು ಸರ್ಕಾರದವರು ಅನ್ಯದೇಶದ ವಿದ್ಯಾಭ್ಯಾಸಕ್ರಮಗಳಲ್ಲಿ ಉಂಟಾಗಿದ್ದ ಉತ್ತಮವಾದ ವ್ಯತ್ಯಾಸಗಳನ್ನು ತಿಳಿಯಲು ಮೈ॥ ಭಾಭಾಸಾಹೇಬರನ್ನು ನಿಯಮಿಸಿದರು. ಇವರು ನಮ್ಮ ದೇಶದ ವಿದ್ಯಾಭ್ಯಾಸವನ್ನು ಕ್ರಮಪಡಿಸಲು ಅವರವರ ಕೆಲಸಗಳಲ್ಲಿ ವಿಶೇಷ ಪ್ರಾಜ್ಞರಾದ ಡಾಕ್ಟರ್ ಲಾರ್ಸರ್, ಮಿಸ್. ಲ್ಯಾಟರ್ ಎಂಬುವರನ್ನು ಚುನಾಯಿಸಿದರು. ಮಿಸ್. ಲ್ಯಾಟರವರು ತಮ್ಮ ಕರ್ತವ್ಯವನ್ನು ನೆರವೇರಿಸುವುದರೊಳಗೆ ದೈವಗತಿಯೆನ್ನೈದಿದುದು ಬಹಳ ಶೋಚನೀಯವಾದ ಅಂಶವು.

ಡಾಕ್ಟರ್ ಲಾರ್ಸರ್ಸರವರು ಅನ್ಯರಾಜ್ಯಗಳಲ್ಲಿ ವಿಶೇಷ ಕೀರ್ತಿಯನ್ನು ಹೊಂದಿರುವರು. ಇವರು ಈ ರಾಜ್ಯದಲ್ಲಿ ಸ್ಥಾಪಿಸಿರುವ ಪದ್ಧತಿಯನ್ನು ಅಭಿವೃದ್ಧಿಗೆ ತರುವುದು ವಿದ್ಯಾಭ್ಯಾಸದ ಇಲಾಖೆಯವರ ಮತ್ತು ಇವರಲ್ಲಿ ಶಿಕ್ಷಿತರಾಗಿರುವ ಉಪಾಧ್ಯಾಯರ ಕರ್ತವ್ಯವಾಗಿರುವುದು. ಈ ಪದ್ಧತಿಯನ್ನು ಹಿಂದುಸ್ಥಾನದಲ್ಲಿ ಪ್ರಚಾರಕ್ಕೆ ತರಲು ಮೈಸೂರು ದೇಶವು ಮಾರ್ಗದರ್ಶಿಯಾದುದು ಬಹಳ ಸಂತೋಷಕರವಾಗಿರುವುದು. ಡಾಕ್ಟರ್ ಲಾರ್ಸರ್ಸರವರು ಇಲ್ಲಿ 5 ತಿಂಗಳಿಗೆ ಬದಲಾಗಿ 50 ತಿಂಗಳಿದ್ದು ಈ ಪದ್ಧತಿಯನ್ನು ಸ್ಥಿರಪಡಿಸಬೇಕಾಗಿತ್ತೆಂಬುದು ನನ್ನ ಮತವು. ಸ್ಲಾಯ್ಡ್ ಪದ್ಧತಿಯು ಒಂದುವಿಧವಾದ ಮರಗೆಲಸವೆಂಬ ತಪ್ಪು ಅಭಿಪ್ರಾಯವು ಡಾಕ್ಟರ್ ಲಾರ್ಸರ್ಸರವರು ಮೈಸೂರಲ್ಲಿ ಕೊಟ್ಟ ಉಪನ್ಯಾಸವನ್ನೊದುವುದರಿಂದ ತೊಲಗುವುದು. ಡಾಕ್ಟರ್ ಲಾರ್ಸರ್ಸರವರು ಬಾಸ್ಟ್ನಗರದಲ್ಲಿ ಅಧ್ಯಕ್ಷರಾಗಿರುವ ಪಾಠಶಾಲೆಯು ಜನೋಪಕಾರದಲ್ಲಿ ನಿರತರಾದ ಮಿಸಸ್. ಷಾ ಎಂಬುವರಿಂದ ಸ್ಥಾಪಿಸಲ್ಪಟ್ಟಿರುವುದು. ನಮ್ಮ ದೇಶದಲ್ಲೂ ಶಕ್ತರಾದ ಜನರು ಈ ಮಾರ್ಗದಲ್ಲಿ ಪ್ರವರ್ತಿಸಬೇಕೆಂಬುದು ನನ್ನ ಕೋರಿಕೆ. ಡಾಕ್ಟರ್ ಲಾರ್ಸರ್ಸರವರು ತಮ್ಮ ದೇಶವನ್ನು ಸುಖವಾಗಿ ಸೇರಿ ಕೆಲವು ಕಾಲವಾದಮೇಲೆ ಪುನಃ ಇಲ್ಲಿಗೆ ಬಂದು ಇವರು ಸ್ಥಾಪಿಸಿರುವ ಪದ್ಧತಿಯನ್ನು ಸ್ಥಿರಪಡಿಸಬೇಕೆಂದು ನಾನು ಕೋರುವೆನು."

ತದನಂತರದಲ್ಲಿ ಸ್ಲಾಯ್ಡ್ ತರಗತಿಯ ಉಪಾಧ್ಯಾಯರು ಅಲ್ಲಿ ನೆರದಿದ್ದವರೆಲ್ಲರಿಗೂ ಪುಷ್ಪ ತಾಂಬೂಲಾದಿ ಮರ್ಯಾದೆಗಳನ್ನು ನಡೆಸಿದರು. ಕೊನೆಯಲ್ಲಿ ಅಲ್ಲಿಗೆ ಬಂದಿದ್ದ ಬಾಲಕಿಯರು ಶ್ರೀಮನ್ಮಹಾರಾಜರವರಮೇಲೂ, ಚಕ್ರವರ್ತಿಗಳಮೇಲೂ ಗಾನಗಳನ್ನು ಹಾಡಿದರು. ಅಲ್ಲಿಗೆ ಆ ದಿವಸದ ಕೆಲಸವು ಮುಗಿಯಿತು.

ವಿದ್ಯಾಭ್ಯಾಸ.

ಈಗಿನ ವಿದ್ಯಾಭ್ಯಾಸ ಪದ್ಧತಿಯ ಪ್ರಕಾರ ಪ್ರಾಯಕವಾಗಿ ಹುಡುಗರಿಗೆ ಭಾಷೆಯನ್ನೇ ಹೆಚ್ಚಾಗಿ ಕಲಿಸುವರು. ಹೀಗೆ ಮಾಡುವುದು ಸ್ಮರಣಶಕ್ತಿಯ ವ್ಯ

ವಸಾಯಕ್ಕೆ ತುಂಬಾ ಸಹಾಯವೆಂದು ಭಾವಿಸುವರು. ಶಬ್ದಗಳನ್ನು ಕಲಿಯು ವುದರಿಂದ ಇಂಥಾ ವಿಶೇಷವಾದ ಲಾಭವುಂಟೆಂದು ಹೇಳುವರು. ಇದು ತಪಾ ದ ಅಭಿಪ್ರಾಯವಾಗಿರುವುದು. ಬರೀ ಶಬ್ದಗಳನ್ನು ಕಲಿಯುವುದಕ್ಕಿಂತಲೂ ಶಾ ಸ್ತ್ರಾಭ್ಯಾಸಮಾಡುವುದು ಸ್ಮರಣಶಕ್ತಿಯು ವ್ಯವಸಾಯಕ್ಕೆ ಅಧಿಕತರವಾಗಿ ಸಹಾ ಯವಾಗುವುದು. ಜ್ಞಾಪಕಶಕ್ತಿಯು ವ್ಯವಸಾಯಕ್ಕೆ ಶಾಸ್ತ್ರ ವಿಷಯಗಳು ಬಹ ಳವಾಗಿ ಅವಕಾಶವನ್ನು ಕೊಡುವುವು. ಸೂರ್ಯಮಂಡಲ, ನಕ್ಷತ್ರಮಂಡಲ, ಮೂಲಪದಾರ್ಥಗಳು, ಮಿಶ್ರಪದಾರ್ಥಗಳು, ಪರಮಾಣುಗಳು, ಭೂರಚನೆ, ಧಾ ತುಗಳು, ಧ್ವನಿ ಉಷ್ಣ ತೇಜಸ್ಸು ವೈದ್ಯುತಗಳು, ದೇಹರಚನೆ, ದೇಹಕಾರ್ಯಗಳು, ವೃಕ್ಷಗಳು, ಜೀವಜಂತುಗಳು ಇವೇ ಮೊದಲಾದುವನ್ನು ಕುರಿತ ಶಾಸ್ತ್ರವಿಷಯು ಗಳು ಜ್ಞಾಪಕಶಕ್ತಿಯು ವ್ಯವಸಾಯಕ್ಕೆ ಅಪಾರವಾಗಿ ಅವಕಾಶವನ್ನು ಕೊಡುವು ದರಲ್ಲಿ ಸಂದೇಹವಿಲ್ಲ. ಒಂದೊಂದು ಶಾಸ್ತ್ರದಲ್ಲಿ ಪೂರ್ಣಪಾಂಡಿತ್ಯವನ್ನು ಹೊಂ ದಬೇಕಾದರೆ ಒಬ್ಬನ ಜೀವಮಾನಕಾಲವೆಲ್ಲಾ ಸಾಲದ್ದಾಗಿರುವುದು. ಹೀಗಿರು ತ್ತಾ ಅನೇಕಗಳಾದ ಶಾಸ್ತ್ರವಿಷಯಗಳನ್ನು ಕಲಿಯಲಾರಂಭಿಸಿದರೆ ಜ್ಞಾಪಕಶಕ್ತಿ ಯು ವ್ಯವಸಾಯಕ್ಕೆ ಎಷ್ಟರಮಟ್ಟಿಗೆ ಅವಕಾಶವಿರುವುದೆಂಬುದನ್ನು ಪರ್ಯಾಲೋಚಿ ಸತಕ್ಕುದು.

ಹೀಗೆ ಸ್ಮರಣಶಕ್ತಿಯು ವ್ಯವಸಾಯಕ್ಕೆ ಭಾಷೆಗಿಂತಲೂ ಶಾಸ್ತ್ರಾಭ್ಯಾಸವು ಹೆಚಾ ಗಿ ಉಪಯುಕ್ತವಾಗಿರುವುದು. ಇದಲ್ಲದೆ ಶಾಸ್ತ್ರಾಭ್ಯಾಸದಿಂದಾಗುವ ಸ್ಮ ರಣಶಕ್ತಿ ವ್ಯವಸಾಯವು ಭಾಷಾಭ್ಯಾಸದಿಂದಾಗುವ ವ್ಯವಸಾಯಕ್ಕಿಂತಲೂ ಶ್ರೇ ಷ್ಠವಾಗಿರುವುದು. ಹೇಗೆಂದರೆ—ಪದಗಳಿಗೂ ಅರ್ಥಗಳಿಗೂ ಇರುವ ಸಂಬಂಧವು ಅಕಸ್ಮಾತ್ತಾದ ಸಂಬಂಧವಾಗಿರುವುದು. ಆದರೆ ಶಾಸ್ತ್ರವಿಷಯಗಳಿಗಿರುವ ಪರ ಸ್ಪರ ಸಂಬಂಧವು ಅವಶ್ಯಕವಾದುದಾಗಿರುವುದು. ಶಾಸ್ತ್ರವಿಷಯಕವಾದ ಸಂಬಂ ಧಗಳು ಕಾರ್ಯಕಾರಣಭಾವಗಳನ್ನು ಸೂಚಿಸುವುವು. ಪದಗಳ ಮತ್ತು ಅವು ಗಳ ಅರ್ಥಗಳ ಸಂಬಂಧಗಳು ಇವನ್ನು ಸೂಚಿಸುವುದಿಲ್ಲ. ಶಾಸ್ತ್ರವು ಯುಕ್ತಿಯು ಕ್ತವಾದ ಸಂಬಂಧಗಳನ್ನು ತೋರಿಸುವುದು, ಭಾಷೆಯು ಅಂಥಾ ಸಂಬಂಧವ ನ್ನು ತೋರಿಸುವುದಿಲ್ಲ. ಹೀಗೆ ಶಾಸ್ತ್ರಾಭ್ಯಾಸವು ಸ್ಮರಣಶಕ್ತಿಯ ವ್ಯವಸಾಯ ಕ್ಕೆ ಮಾತ್ರವಲ್ಲದೆ ಬುದ್ಧಿಯ ವ್ಯವಸಾಯಕ್ಕೂ ಅನುಕೂಲಿಸುವುದು. ಭಾಷೆ ಯಾದರೋ ಬರೀ ಜ್ಞಾಪಕಶಕ್ತಿಯ ವ್ಯವಸಾಯಕ್ಕೆ ಸಹಾಯವಾಗುವುದೇ ಹೊರತು ಬುದ್ಧಿಯ ವ್ಯವಸಾಯಕ್ಕೆ ಅನುಕೂಲಿಸುವುದಿಲ್ಲ.

ಇನೊಂದು ವಿಧದಿಂದಲೂ ಶಾಸ್ತ್ರಾಭ್ಯಾಸವು ಭಾಷೆಯ ಅಭ್ಯಾಸಕ್ಕಿಂತ ಶ್ರೇಷ್ಠವಾಗಿರುವುದು. ಶಾಸ್ತ್ರವು ಆಲೋಚನೆಯ ಶಕ್ತಿಯನ್ನು ವೃದ್ಧಿಪಡಿಸುವುದು. ಶಬ್ದಗಳು ಹಾಗೆ ಮಾಡಲಾರವು. ನಾಕಾದಷ್ಟು ಶಾಸ್ತ್ರಜ್ಞಾನವನ್ನು ಹೊಂದದೆ ಬರೀ ಭಾಷೆಯಲ್ಲಿ ಮಾತ್ರ ಪರಿಚಿತಿಯುಳ್ಳವರು ಸಮಂಜಸವಾಗಿ ಪರ್ಯಾಲೋಚಿಸಿ ನಿರ್ಣಯಿಸಲು ಸಮರ್ಥರಾಗಿರುವುದಿಲ್ಲ. ಸಮಂಜಸವಾಗಿ ಸಿದ್ಧಾಂತವನ್ನು ಮಾಡಬೇಕಾದರೆ ಸುತ್ತಮುತ್ತಲಿರುವ ಪಸ್ತುಗಳಲ್ಲಿ ಉಂಟಾಗುತ್ತಿರುವ ಬದಲಾವಣೆಗಳ ಯಥಾರ್ಥವಾದ ಜ್ಞಾನವಿರಬೇಕು. ಎಂದರೆ ಕಾರ್ಯಕಾರಣ ಭಾವಗಳು ಗೊತ್ತಿರಬೇಕು. ಇಂಥಾ ಜ್ಞಾನವು ಶಾಸ್ತ್ರಾಭ್ಯಾಸದಿಂದುಂಟಾಗುವುದೇ ಹೊರತು, ಬರೀ ಪದಗಳನ್ನೂ ಅವುಗಳ ಅರ್ಥಗಳನ್ನು ಎಷ್ಟು ಚೆನ್ನಾಗಿ ಕಲಿತಾಗ್ಗೂ ಅದು ಉಂಟಾಗುವುದಿಲ್ಲ.

ಶಾಸ್ತ್ರಾಭ್ಯಾಸವು ಬುದ್ಧಿ ವ್ಯವಸಾಯಕ್ಕೆ ಮಾತ್ರವಲ್ಲದೆ ಧರ್ಮಾಚರಣ ಶಿಕ್ಷೆಗೂ ಬಹಳವಾಗಿ ಸಹಾಯ ಮಾಡುವುದು. ಬರೀ ಭಾಷಾಜ್ಞಾನದಿಂದ ವಿವೇಕವಾದ ಆಚರಣಜ್ಞಾನವು ಲಭಿಸಲಾರದು. ಭಾಷಾಭ್ಯಾಸಿಯು ಶಬ್ದಗಳ ಅರ್ಥಗಳನೂ, ಪ್ರಯೋಗಗಳನ್ನೂ ಉಪಾಧ್ಯಾಯರಿಂದ ಹೇಳಿಸಿಕೊಂಡಾಗಲೀ ನಿಘಂಟು ಮತ್ತು ವ್ಯಾಕರಣ ಸೂತ್ರಗಳನ್ನು ಅವಲೋಕಿಸುವುದರಿಂದಾಗಲೀ ಕಲಿತುಕೊಳ್ಳಬಹುದು. ಇವನು ಮಾಡತಕ್ಕ ಕೆಲಸವು ಅಷ್ಟಕ್ಕೇ ಪೂರೈಸುವುದು. ಕಾರ್ಯಕಾರಣಗಳನ್ನು ಕುರಿತು ವಿಚಾರ ಮಾಡುವ ಅವಕಾಶವೇ ಇವನಿಗೆ ಇಲ್ಲ. ಅನ್ಯರು ಹೇಳುವುದನ್ನೇ ಇವನು ಪ್ರಮಾಣವಾಗಿ ಒಪ್ಪಿಕೊಳ್ಳುವಂಥವನಾಗಿರುವನು. ವಸ್ತುಗಳ ವಿಷಯದಲ್ಲಿ ಸ್ವತಃ ವಿಚಾರ ಮಾಡಿ ನಿರ್ಣಯಿಸಲಿಕ್ಕೂ ಅಥವಾ ಅನ್ಯರ ಅಭಿಪ್ರಾಯ ನಿರ್ಣಯಗಳು ಸರಿಯೋ ತಪ್ಪೋ ಎಂದು ಗೊತ್ತು ಮಾಡಿಕೊಳ್ಳಲಿಕ್ಕೂ ಈತನಿಗೆ ಸಾಮರ್ಥ್ಯವಿಲ್ಲ. ಸರಿಯಾಗಲೀ ತಪ್ಪಾಗಲೀ ಅನ್ಯರು ಹೇಳಿದ್ದನ್ನೇ ಕೇಳಿಕೊಂಡು ಸುಮ್ಮನಿರುವನು.

ಶಾಸ್ತ್ರಾಭ್ಯಾಸಿಯಾದರೋ ಇವನಂತೆ ಮುಗ್ಧನಾಗಿರನು. ಯುಕ್ತಿಯುಕ್ತವಾಗಿಯೂ ಅನುಭವಸಿದ್ಧವಾಗಿಯೂ ಇರುವುದನ್ನೇ ಶಾಸ್ತ್ರಾಭ್ಯಾಸಿಯು ಪ್ರಮಾಣವಾಗಿ ಒಪ್ಪಿಕೊಳ್ಳುವನೇ ಹೊರತು ಅನ್ಯರು ಸಿಕ್ಕಹಾಗೆಲ್ಲಾ ಹೇಳಿದ ವಚನಗಳನ್ನು ಎಂದಿಗೂ ಪ್ರಮಾಣವಾಗಿ ಒಪ್ಪನು. ಆತನು ತಾನೇ ಇತರರ ಸಿದ್ಧಾಂತಗಳನ್ನು ಪರೀಕ್ಷಿಸಿ ನೋಡಿ ಅವು ಸರಿಯೋ ಅಥವಾ ತಪ್ಪೋ ಎಂಬುದನ್ನು ಗೊತ್ತು ಮಾಡಿಕೊಳ್ಳಬಲ್ಲನು. ಮತ್ತು ತಾನೇ ಸ್ವತಃ ಸಿದ್ಧಾಂತ ಮಾಡಲು ಸಮರ್ಥನಾಗಿರುವನು. ಆತನು ಶಾಸ್ತ್ರಾನ್ವೇಷಣ ಮಾಡುವಾಗ ಪ್ರತಿವಿಷಯವನ್ನೂ ಸ್ವಬುದ್ಧಿಪೂರ್ವಕವಾಗಿ ಪರೀಕ್ಷಿಸುವನು. ಹೀಗೆ ಮಾಡುವದರಿಂದ ತಾನೇ ತತ್ವಗಳನ್ನು ತಿಳಿದುಕೊಳ್ಳಲು ಸಮರ್ಥನಾಗಿ ಅನ್ಯರ ಅಭಿಪ್ರಾಯದಲ್ಲಿ ಗುಣದೋಷಗಳನ್ನು ಕಂಡುಹಿಡಿಯಲು ಅರ್ಹನಾಗುವನು. ಅನ್ಯರು ಹೇಳಿದ್ದನ್ನು ಮಾತ್ರ ಒಪ್ಪಿಕೊಂಡು ಸುಮ್ಮನಿರನು.

ಇದರಿಂದ ಶಾಸ್ತ್ರಾಭ್ಯಾಸಿಗೆ ತನ್ನಲ್ಲಿರುವ ಶಕ್ತಿಯಲ್ಲಿ ನಂಬಿಕೆಯುಂಟಾಗುವುದಲ್ಲದೆ, ಶಾಸ್ತ್ರವಿಚಾರವನ್ನು ಪುನಃ ಪುನಃ ಮಾಡುವುದರಿಂದ ಆ ಶಕ್ತಿಯು ಮತ್ತೂ ಮತ್ತೂ ವರ್ಧಿಸುತ್ತಾ ಬರುವುದು. ಆತನ ಸಿದ್ಧಾಂತಗಳು ಯಥಾರ್ಥಗಳಾಗಿರುವವು. ಆತನಿಗೆ ಶಾಸ್ತ್ರಾನ್ವೇಷಣದಲ್ಲಿ ಅಧಿಕಾರವೂ ಸ್ವಾತಂತ್ರ್ಯವೂ ಉಂಟಾಗುವುವು. ಆತನು ಹೀಗೆ ಪರಾಧೀನವಲ್ಲದ ನಡತೆಯುಳ್ಳವನಾಗುವನು. ಅಷ್ಟೇ ಅಲ್ಲ. ಆತನು ಮತ್ತು ಮತ್ತು ಶಾಸ್ತ್ರ ವಿಚಾರವನ್ನು ಮಾಡುತ್ತಾ ಇರುವುದರಿಂದ, ಆತನಿಗೆ ಕಾರ್ಯನಾಧಿಸುವುದರಲ್ಲಿ ಸ್ಥಿರಮನಸ್ಸೂ ಶುದ್ಧಭಾವವೂ ಕಾರ್ಯನಿರ್ವಾಹಕ ಶಕ್ತಿಯೂ ಉಂಟಾಗುವುವು. ಆತನಿಗೆ ಪದಾರ್ಥಗಳ ಯಥಾರ್ಥಜ್ಞಾನವೂ ಉಂಟಾಗುವುದು. ಆತನು ನಿಷ್ಪಕ್ಷಪಾತವುಳ್ಳವನಾಗಿ ತತ್ವಗಳನ್ನು ಯಥಾಸ್ಥಿತಿಯಲ್ಲಿ ಗೊತ್ತು ಮಾಡಿಕೊಳ್ಳುವುದರಲ್ಲಿ ಪ್ರವರ್ತಿಸುವನು. ಹೀಗೆ ತತ್ವಜ್ಞಾನಿಯಾದುದರಿಂದ, ಆತನು ಜಿತೇಂದ್ರಿಯನೂ ಪ್ರಮಾಣಿಕನೂ ಆಗುವುದರಲ್ಲಿ ಸಂದೇಹವಿಲ್ಲ. ಬರೀ ಭಾಷಾಭ್ಯಾಸಿಯು ಇಂಥಾ ಉತ್ತಮ ಫಲವನ್ನು ಹೊಂದಲಾರನು.

ಇನ್ನೊಂದು ರೀತಿಯಲ್ಲಿ ಶಾಸ್ತ್ರಾಭ್ಯಾಸವು ಬರೀ ಭಾಷಾಭ್ಯಾಸಕ್ಕಿಂತ ಶ್ರೇಷ್ಠವಾಗಿರುವುದು. ಶಾಸ್ತ್ರಜ್ಞಾನದಿಂದ ಬ್ರಹ್ಮಜ್ಞಾನವುಂಟಾಗುವುದು. ಭಾಷಾಭ್ಯಾಸದಿಂದ ಬ್ರಹ್ಮತತ್ವವು ಗೊತ್ತಾಗುವುದಿಲ್ಲ. ಶಾಸ್ತ್ರಾಭ್ಯಾಸಿಗೆ ಮೂಢಭಕ್ತಿಯಿರುವುದಿಲ್ಲ. ಆತನು ಈಶ್ವರನಲ್ಲಿ ದೃಢವಾದ ಭಕ್ತಿಯುಳ್ಳವನಾಗಿರುವನು. ಆದರೆ ಶಾಸ್ತ್ರಗಳಲ್ಲಿ ಅಲ್ಪಜ್ಞಾನವುಳ್ಳ ಅನೇಕರು ನಾಸ್ತಿಕರಾಗಿರುವುದು ಸತ್ಯ. ಇವರು ತಾವೇ ಪೂರ್ಣಪಾಂಡಿತ್ಯವುಳ್ಳವರೆಂದೂ ಶಾಸ್ತ್ರಜ್ಞರೆಂದೂ ಗರ್ವಪಡುತ್ತಿರುವರು. ನಿಜವಾಗಿಯೂ ಇಂಥವರು ಪಂಡಿತರಲ್ಲ. ಇವರು ಶಾಸ್ತ್ರ ರಹಸ್ಯಗಳನ್ನು ಚೆನ್ನಾಗಿ ತಿಳಿದಿಲ್ಲ. ಆದುದರಿಂದಲೇ ನಾಸ್ತಿಕರಾಗಿರುವರು. ಆದರೆ ಯಾರು ಶಾಸ್ತ್ರ ರಹಸ್ಯಗಳನ್ನು ಚೆನ್ನಾಗಿ ಬಲ್ಲರೋ ಯಾರು ಪೂರ್ಣಪಾಂಡಿತ್ಯವುಳ್ಳವರಾಗಿರುವರೋ ಅಂಥವರು ಆಸ್ತಿಕರಾಗಿಯೂ ಈಶ್ವರನಲ್ಲಿ ಪರಮ ಭಕ್ತಿಯುಳ್ಳವರಾಗಿಯೂ ಇರುವರೇ ಹೊರತು ಅನ್ಯಥಾ ಇಲ್ಲ.

ಆಸ್ತಿಕ್ಯವೂ ಶಾಸ್ತ್ರಜ್ಞಾನವೂ ಒಂದೇ ದೇಹಕ್ಕೆ ಸೇರಿಸಲ್ಪಟ್ಟ ಅವಳ ಮಕ್ಕಳಂತಿರುವುವು. ಅವು ಒಂದಕ್ಕೊಂದು ಸಹಾಯ ಮಾಡುವುವು. ಅವನ್ನು ಪ್ರತ್ಯೇಸಿದರೆ ಅವಳ ಮಕ್ಕಳಂತೆ ಅವು ನಾಶವನ್ನು ಹೊಂದುವುವು. ಅವು ಒಂದಕ್ಕೊಂದು ಹೊಂದಿಕೆಯಾಗಿದ್ದಷ್ಟೂ ವರ್ಧಿಸುತ್ತಾ ಬರುವುವು. ಈಶ್ವರನಲ್ಲಿ ದೃಢಭಕ್ತಿಯುಳ್ಳ ಪಂಡಿತರೇ ತತ್ವವನ್ನು ಗೊತ್ತು ಮಾಡಿಕೊಳ್ಳಲ್ಲರೇ ಹೊರತು ಹಾಗಿಲ್ಲದವರು ತಮ್ಮ ಬರೀ ಬುದ್ಧಿ ಸಾಮರ್ಥ್ಯದಿಂದ ತತ್ವಗಳ ನೆಂದಿಗೂ ಕಂಡು ಹಿಡಿಯಲಾರರೆಂದು ಪಂಡಿತರಾದ ಹಕ್ಸಲೀಯವರ ಮತವಾರುವುದು. ಇದು ವಿವೇಕಿಗಳೆಲ್ಲರನ್ನೂ ಒಪ್ಪಿಸುವಂಥಾ ಮಾತಾಗಿದೆ.

ಅನೇಕರು ಶಾಸ್ತ್ರಾನ್ವೇಷಣದಿಂದ ಈಶ್ವರಭಕ್ತಿಯು ಹೋಗಿ ನಾಸ್ತಿಕಭಾವ

ವುಂಟಾಗುವುದೆಂದು ಹೇಳುವರು. ಇದು ತಪ್ಪಾದ ಅಭಿಪ್ರಾಯ. ಶಾಸ್ತ್ರಾಭ್ಯಾಸದಿಂದ ನಾಸ್ತಿಕತ್ವವುಂಟಾಗುವುದಕ್ಕೆ ಬದಲಾಗಿ, ಆದರಿಂದ ಆಸ್ತಿಕತ್ವವೂ ಈಶ್ವರ ಭಕ್ತಿಯೂ ಉಂಟಾಗುವುವೆಂದು ಹೇಳುವುದರಲ್ಲಿ ಸಂದೇಹವಿಲ್ಲ. ಶಾಸ್ತ್ರಾಭ್ಯಾಸದಲ್ಲಿ ಉಪೇಕ್ಷೆಯೇ ನಾಸ್ತಿಕತ್ವವನ್ನು ತರುವುದು. ಈಶ್ವರನು ಸೃಷ್ಟಿಸಿದ ವಸ್ತುಗಳ ವಿಚಾರವನ್ನು ಮಾಡಿ ಅವುಗಳ ಸ್ವರೂಪವನ್ನು ತಿಳಿದುಕೊಳ್ಳದೆ ಇರುವುದೇ ನಾಸ್ತಿಕ ಭಾವವಲ್ಲವೆ? ಈಶ್ವರಸೃಷ್ಟಿಯ ಭಾವನೆಯಿಂದಲೇ ನಮಗೆ ಈಶ್ವರ ಭಾವನೆಯೂ ಜ್ಞಾನವೂ ಉಂಟಾಗಬೇಕು. ನಾವು ಈಶ್ವರ ನಿರ್ಮಿತವಾದ ಸ್ಥೂಲ ವಸ್ತುಗಳನ್ನು ನೋಡುವೆವು. ಇವುಗಳ ವ್ಯಾಸಂಗದಿಂದಲೂ ವಿಚಾರದಿಂದಲೂ ನಮಗೆ ಕ್ರಮೇಣ ಸೂಕ್ಷ್ಮಪದಾರ್ಥಗಳ ಜ್ಞಾನವೂ ಕಾರ್ಯಕಾರಣಭಾವವೂ ಉಂಟಾಗುವುವು.

ಇದಾದ ಬಳಿಕ ಕ್ರಮೇಣ ಈಶ್ವರಜ್ಞಾನವುಂಟಾಗುವುದು. ಹೀಗಲ್ಲದೆ ಬೇರೆ ಮಾರ್ಗದಿಂದ ಏಕಾ ಏಕೀ ಈಶ್ವರಜ್ಞಾನವು ಯಾರಿಗೂ ಲಭಿಸಲಾರದು. ಹೀಗಿರುವುದರಿಂದ ಶಾಸ್ತ್ರವಿಚಾರವೇ ಈಶ್ವರಜ್ಞಾನಕ್ಕೆ ಮುಖ್ಯ ಸಾಧನೆಯಾಗಿರುವುದೆಂದು ಒಪ್ಪಿಕೊಳ್ಳಬೇಕು. ಆದುದರಿಂದ ಶಾಸ್ತ್ರವಿಚಾರವನ್ನೇ ಬಿಟ್ಟವರು ನಾಸ್ತಿಕರಾಗಿಯಾಗಲೀ ಮೂಢಭಕ್ತಿಯುಳ್ಳವರಾಗಿಯಾಗಲೀ ಆಗುವರೆಂದು ಹೇಳಬೇಕಾದುದಿಲ್ಲ. ಶಾಸ್ತ್ರಾಭ್ಯಾಸವು ಈಶ್ವರನ ಆರಾಧನರೂಪವಾಗಿರುವುದು. ಆದರಿಂದ ಈಶ್ವರ ಪ್ರೀತಿಯೂ ಈಶ್ವರನಲ್ಲಿ ದೃಢಭಕ್ತಿಯೂ ಈಶ್ವರಸ್ವರೂಪಜ್ಞಾನವೂ ಉಂಟಾಗಿ ಆರಾಧಕನಿಗೆ ಉತ್ತಮ ಗತಿಯು ದೊರಕುವುದು. ಆದುದರಿಂದ ಶಾಸ್ತ್ರವಿಚಾರದಲ್ಲಿ ಕಾಲವನ್ನು ವಿನಿಯೋಗಿಸುವುದು ಮನುಷ್ಯ ಜನ್ಮ ಸಾರ್ಥಕ್ಯಕ್ಕೆ ಕಾರಣವಾಗಿರುವುದು. (ಸಶೇಷ). S. V.

ಉಪಾಧ್ಯಾಯರು.

ಪ್ರಪಂಚದಲ್ಲಿ ಎಲ್ಲಾ ಜನಗಳಿಗೂ ತಿಳಿವಳಿಕೆಯು ಅತ್ಯಾವಶ್ಯಕವಷ್ಟೆ. ತಿಳಿವಳಿಕೆಯಿಲ್ಲದೆ ಯಾವ ಕೆಲಸವನ್ನೂ ಸರಿಯಾಗಿ ಮಾಡಲಾಗುವುದಿಲ್ಲ. ಈ ಜ್ಞಾನವೆಂಬುದು ನಮಗೆ ಬಾಲ್ಯದಿಂದಲೂ ಒಂದೇಸಮನಾಗಿರುವದಿಲ್ಲ. ಬಾಲ್ಯದಲ್ಲಿ ಜ್ಞಾನವು ಸೂಕ್ಷ್ಮಾವಸ್ಥೆಯಲ್ಲಿದ್ದು ಕ್ರಮಕ್ರಮವಾಗಿ ವಿಕಾಸವನ್ನು ಹೊಂದುವದು. ಈ ಜ್ಞಾನವಿಕಾಸಕ್ಕೆ ಮುಖ್ಯಕಾರಣಗಳು ಮೂರು. ನಮ್ಮ ತಂದೆ ತಾಯಿಗಳು, ನಮ್ಮ ಸುತ್ತಮುತ್ತಲೂ ಇರುವವರು, ಇವರಿಗಿಂತಲೂ ಅತಿ ಮುಖ್ಯವಾದವರು ಉಪಾಧ್ಯಾಯರು. ಯಾರ ಸಮೀಪದಲ್ಲಿ ವಿದ್ಯೆಯು ಓದಲ್ಪಡುತ್ತದೋ (ಉಪ+ಅಧ್ಯಾಯ) ಅವರು ಉಪಾಧ್ಯಾಯರೆನಿಸಿಕೊಳ್ಳುವರು. ಉಪಾಧ್ಯಾಯಪದವಿಯು ಸಾಮಾನ್ಯವಾದುದಲ್ಲವು. ಉಪಾಧ್ಯಾಯನಿಗೆ—ತಾನು ಹೇಳಿಕೊಡುವ ವಿದ್ಯೆಯ

ವಿಷಯವನ್ನು ವಿಸ್ತರವಾಗಿ ತಿಳಿಸಿಕೊಟ್ಟನು. ಅವನಿಗೆ ತಕ್ಕಂತೆ ಉಪದೇಶವನ್ನೂ, ಪ್ರಶ್ನೆಯ ಸಮಾಧಾನವನ್ನೂ ಇವು ಮುಂತಾದ ಲಕ್ಷಣಗಳು ಉಪಾಧ್ಯಾಯನಲ್ಲಿರಬೇಕು. ವಿಷಯವನ್ನು ತಾನು ಸ್ವತಃ ಅಭ್ಯಾಸಮಾಡಿ ತಿಳಿದಿದ್ದರೂ ಅವನ್ನು ಬಾಲಕರಿಗೆ ಸರಿಯಾಗಿ ತಿಳಿಯಪಡಿಸುವ ಶಕ್ತಿಯಲ್ಲಿ ಅವರಲ್ಲಿ ಬಹಳವಾಗಿ ವ್ಯತ್ಯಾಸವಿರುತ್ತದೆ. ಬಾಲಕರ ಉಜ್ಜೀವನವನ್ನು ಹೊಗಳಾಡಿಸಿ, ಅವರ ಮನಸ್ಸನ್ನು ಪ್ರಸನ್ನಮಾಡುವಂತೆ ಮಾಡುವ ಉಪಾಧ್ಯಾಯರು ಉತ್ತಮರಲ್ಲ.

"ನುಡಿಸೆ ಪಡೆದನ್ನಿ ವಿದ್ಯವಿತ್ತಾವಡಾರಡಿಕಂ।
ಮಿಡಿಸಿದ ನಾಡಿಯೊಳ್ಗೆ ವಿದ್ಯಮೃತವನ್ನಾವಡಾರಡಿಕಂ॥

ಶಿಷ್ಯನಲ್ಲಿ ವಿದ್ಯೆಯ ಕಲಿಯುವ ಸಮಯದಲ್ಲಿ ಅಕಸ್ಮಾತ್ತಾಗಿ ಅನೇಕರಿಂದ ಉಪದ್ರವಗಳು ಬರುತ್ತವೆ. ಆಗ ಗುರುವು ಶಿಷ್ಯನಲ್ಲಿ ಪ್ರೀತಿಯಿಟ್ಟು ಅವನ್ನು ಪರಿಹರಿಸಿ ವಿದ್ಯೆಯನ್ನು ಉಪದೇಶಿಸಬೇಕು.

ಪದ್ಮಾವತಿಯ ತಂದೆಯಾದ ಪೊಲನಾಡ ಅರಸನು ಕೆಲವು ಕಾಲದಲ್ಲಿ ಅತಿಶ್ರೇಷ್ಠನಾಗಿದ್ದನು. ಮುಕ್ತಿಯನ್ನು ಸಹ ಪಡೆದಿದ್ದನು. ಪೊಲನಾಡ ಅರಸರು ಪೂರ್ವಕಾಲದಲ್ಲಿ ಈ ಕಾಲದಲ್ಲಿ ಪ್ರಸಿದ್ಧರಾಗಿದ್ದರು. ಅವರಲ್ಲಿ ಮಾರಸಿಂಗಯ್ಯನನ್ನು ಅನುಸರಿಸಿ ವಿಷಯವನ್ನು ಸಂಗ್ರಹಿಸಿಕೊಂಡರೆ ಅವನಿಗೆ ಮೊಕ್ಕಿಸುವಲ್ಲಿ ಯಾವ ಕಾಲದಲ್ಲಿಯಾಗಿ ಪದ್ಮಾವತಿ ಹುಟ್ಟಿದಳು. ಮಾರಯ್ಯನು "ಮಲೆಸಿ, ಪೆಣ್ಣಾದ ಫಾಗನವರನ್ನು ಬಹು ನಲಿ ಪಿದೆ" ಎಂದಿದ್ದಾನೆ. ಪದ್ಮಾವತಿಯಲ್ಲಿ ಮೊಕ್ಕಿಸುವಲ್ಲು ಗ್ರಹಸ್ಥಿತಿಯನ್ನು ಸಲ್ಲಿಸಿರುವ ಸಂಗತಿಯನ್ನು ಸಹ ಹೇಳಿದ್ದಾನೆ. "ಎಂದು ಹೇಳಿಕೊಂಡಲ್ಲಿ ಪದರ ಮೊಕ್ಕಿ ಗ್ರಹಸ್ಥಿತಿ ಪಡಲೆಂದೆ ಸಂಗಿಕ ಕಲಿಕಾಲಮಾಗಿರಲಾರದು.

"ಪಾಣ್ಯಾಣಂ ನಡಮೆಯೊಳ್ಕೊಂಡಾ ಸಮಸ್ತಮುರ್ವೀಪತಿಸ್ತೋಮಂ।
ಪೂಣಿಸಿದಂತಾಗಳ್ ಸಲೆ ಸಿಲ್ಕಂ ಪುಟ್ಟಿದಳಿರಲ್ಕೆ" ॥

"ಎಲೆ ಪೆಣ್ಣೆ ಪೊಲ್ಲನಿಮ್ಮ ಮಾಡಿದೆ ವಿದ್ಯೆಯೆ ಪ್ರಸಿದ್ಧವಾಗುವುದು" ಎಂದು ಹೇಳಿದ್ದರಿಂದ ಪ್ರಸಿದ್ಧವಾದ ವಿದ್ಯೆಯನ್ನು ಕಲಿಸಿದಂತಾಗುವುದು. ಅವಳು ಬಹಳ ಉಪಯುಕ್ತವಾದ ವಿದ್ಯೆಯನ್ನು ಕಲಿತಳು. ಆಗ ಬಹಳ ಉಪಯುಕ್ತವಾದ ವಿದ್ಯೆಗಳು ಯಾವುವು ಇದ್ದವು. ಅವುಗಳಲ್ಲಿ ಪದ್ಮಾವತಿಯು ಯಾವುದನ್ನು ಕಲಿತಳು. ಅವಳಿಗೆ ಉಪಾಧ್ಯಾಯನಿಗೆ ಹೇಗೆ ಜಯವಾಯಿತು. ಅವಳಿಗೆ ಉಪಾಧ್ಯಾಯನಿಗೆ ಮದುವೆಯು ಹೇಗೆ ಆಯಿತು. ಅವರಿಗೆ ಮಕ್ಕಳು ಎಷ್ಟಾದರು ಮತ್ತು ಅವರ ಹೆಸರುಗಳೇನು ಮುಂತಾದ ವಿಷಯಗಳನ್ನು ಕಾವ್ಯದಲ್ಲಿ ನೋಡಿ ತಿಳಿಯಬೇಕು.

ವಿದ್ಯಾದಾಯಿನಿ

(A MONTHLY JOURNAL.)

ಭಾಗ ೧೬.] ಫೆಬ್ರವರಿ.---೧೯೦೮. [ಸಂಚಿಕೆ ೨.

ಪ್ರಕೃತಿ ವಿಮರ್ಶೆ,

ಹಿಂದಿನ ಸಂಚಿಕೆಯೊಂದರಲ್ಲಿ ಮಿಸ್. ಲ್ಯಾಟರವರು ಕಳೆದ ದಸರಾ ಮಹೋತ್ಸವದಲ್ಲಿ ನಡೆದ ವಿದ್ಯಾಭ್ಯಾಸ ವಿಷಯಕವಾದ ವಸ್ತು ಪ್ರದರ್ಶನ ಕಾಲದಲ್ಲಿ ಕೊಟ್ಟ ಉಪನ್ಯಾಸವನ್ನು ಮುದ್ರಿಸಿರುವೆವಷ್ಟೆ. ಅದೇ ಸಂಚಿಕೆಯಲ್ಲಿ ಮಿಸ್. ಲ್ಯಾಟರರವರ ಉದ್ದೇಶಕ್ಕನುಗುಣವಾಗಿ ಮೈಸೂರಿನಲ್ಲಿ ಕಿಂಡರ್‌ಗಾರ್ಟ್ನ್ ಕೆಲಸಗಳು ನಡೆಯುತಿರುವುವೆಂದು ಸೂಚಿಸಿರುವೆವಷ್ಟೆ. ಮೈಸೂರಲ್ಲಿ ಗೌರ್ನಮೆಂಟ್ ನಾರ್ಮಲ್ ಸ್ಕೂಲಿಗೆ ಸಂಬಂಧಪಟ್ಟ ಪ್ರಾಕ್ಟಿಸಿಂಗ್ ಸ್ಕೂಲಿನಲ್ಲಿ ಈಗ ನಾಲ್ಕು ತಿಂಗಳುಗಳಿಂದಲೂ ಈ ಹೊಸ ಕ್ರಮಕ್ಕನುಸಾರವಾಗಿಯೇ ಕೆಲಸಗಳು ನಡೆಯುತಿರುವುವು. ಈ ತರ ಗತಿಗಳಲ್ಲಿ ನಡೆಯುತಿರುವ ಕೆಲಸಗಳಿಗೆಲ್ಲ ಪ್ರಕೃತಿ ವಿಮರ್ಶೆಯಲ್ಲಿ ನಡೆಯುವ ಕಾರ್ಯವೇ ಆಧಾರವಾಗಿರುವುದು. ಉಳಿದ ಕಿಂಡರ್‌ಗಾರ್ಟ್ನ್ ಕೆಲಸಗಳೆಲ್ಲಾ ಇದನ್ನೇ ಆಶ್ರಯಿಸುವುವು. ಈ ಪ್ರಕೃತಿ ವಿಮರ್ಶೆಯ ಪಾಠವನ್ನು ನಡೆಸುವ ಕ್ರಮವನ್ನೂ ಇದರ ಜೊತೆಯಲ್ಲೇ ಕಿಂಡರ್‌ಗಾರ್ಟ್ನ್ ಆಟಗಳನ್ನು ಸಂಬಂಧಿಸುವ ರೀತಿಯನ್ನೂ ಸ್ಪಷ್ಟಪಡಿಸುವುದಕ್ಕಾಗಿ ಮೇಲೆ ಹೇಳಿದ ಸ್ಕೂಲಿನಲ್ಲಿ ಜನವರಿ, ಫೆಬ್ರವರಿ ತಿಂಗಳುಗಳಲ್ಲಿ ನಡೆದ ರೇಷ್ಮೆ ಹುಳುವಿನ ಪ್ರಕೃತಿ ವಿಮರ್ಶೆಯನ್ನು ಇಲ್ಲಿ ಸ್ವಲ್ಪ ಮಟ್ಟಿಗೆ ವಿವರಿಸುವೆವು.

ಈ ವಿಮರ್ಶೆಯನ್ನು ನಡೆಸುವುದಕ್ಕಾಗಿ ಬೆಂಗಳೂರಿನಲ್ಲಿರುವ ಸಿಲ್ಕ್ ಫಾರಂನಿಂದ ಮೊಟ್ಟೆಗಳನ್ನು ತರಿಸಿದ್ದರು. ಇವು ಡಿಸೆಂಬರ್ ೩೦ನೇ ತಾರೀಖಿನಲ್ಲಿ ಒಡೆ

ಮಾಡಿಕೊಳ್ಳಬೇಕು. ಈ ಮೂರು ಅಂಶಗಳು ಸಮಾಜದಲ್ಲಿ ಸಮಾನವಾಗಿ ಇರಬೇಕು. ಈ ಸಮತೋಲನ ಸಾಧಿಸಲು ಸಾಧ್ಯವಾಗದಿದ್ದಾಗ ಸಮಾಜದಲ್ಲಿ ಸಂಘರ್ಷಗಳು ಉಂಟಾಗುತ್ತವೆ. ಸಮಾಜದಲ್ಲಿ ಸಂಘರ್ಷಗಳು ಉಂಟಾಗಲು ಹಲವಾರು ಕಾರಣಗಳಿವೆ. ಅವುಗಳಲ್ಲಿ ಕೆಲವು ಪ್ರಮುಖ ಕಾರಣಗಳನ್ನು ಈ ಕೆಳಗಿನಂತೆ ಗುರುತಿಸಬಹುದು. ಅವುಗಳಲ್ಲಿ ಮೊದಲನೆಯದು ಸಾಮಾಜಿಕ ಅಸಮಾನತೆ. ಸಮಾಜದಲ್ಲಿ ಕೆಲವರು ಅಧಿಕ ಸವಲತ್ತುಗಳನ್ನು ಪಡೆದಿರುವುದು ಮತ್ತು ಕೆಲವರು ಅವಕಾಶಗಳಿಂದ ವಂಚಿತರಾಗಿರುವುದು ಸಂಘರ್ಷಗಳಿಗೆ ಕಾರಣವಾಗುತ್ತದೆ. ಈ ಅಸಮಾನತೆಯನ್ನು ಹೋಗಲಾಡಿಸಲು ಸಮಾಜದಲ್ಲಿ ಸಮಾನ ಅವಕಾಶಗಳನ್ನು ಕಲ್ಪಿಸಬೇಕಾಗಿದೆ.

I. ಸಾಮಾಜಿಕ ಅಸಮಾನತೆ.—

ಸಮಾಜದಲ್ಲಿ ಸಂಪತ್ತಿನ ಹಂಚಿಕೆಯಲ್ಲಿ ಅಸಮಾನತೆಯು ಸಂಘರ್ಷಗಳಿಗೆ ಕಾರಣವಾಗುತ್ತದೆ. ಸಮಾಜದಲ್ಲಿ ಸಂಪತ್ತಿನ ಹಂಚಿಕೆಯಲ್ಲಿ ಅಸಮಾನತೆಯು ಸಂಘರ್ಷಗಳಿಗೆ ಕಾರಣವಾಗುತ್ತದೆ.

II. ಸಂಪತ್ತಿನ ಹಂಚಿಕೆಯಲ್ಲಿ —

ಸಮಾಜದಲ್ಲಿ ಸಂಪತ್ತಿನ ಹಂಚಿಕೆಯಲ್ಲಿ ಅಸಮಾನತೆಯು ಸಂಘರ್ಷಗಳಿಗೆ ಕಾರಣವಾಗುತ್ತದೆ. ಸಮಾಜದಲ್ಲಿ ಸಂಪತ್ತಿನ ಹಂಚಿಕೆಯಲ್ಲಿ ಅಸಮಾನತೆಯು ಸಂಘರ್ಷಗಳಿಗೆ ಕಾರಣವಾಗುತ್ತದೆ.

III. ಸಮಾಜದಲ್ಲಿ ಸಂಪತ್ತಿನ ಹಂಚಿಕೆಯಲ್ಲಿ ಅಸಮಾನತೆಯು ಸಂಘರ್ಷಗಳಿಗೆ ಕಾರಣವಾಗುತ್ತದೆ —

ಸಮಾಜದಲ್ಲಿ ಸಂಪತ್ತಿನ ಹಂಚಿಕೆಯಲ್ಲಿ ಅಸಮಾನತೆಯು ಸಂಘರ್ಷಗಳಿಗೆ ಕಾರಣವಾಗುತ್ತದೆ.

ಗುವುದು. ಮಕ್ಕಳಿಗೆ ರೇಷ್ಮೆ ಹುಳುವಿನ ಜಾತಿಯ ಕ್ರಿಮಿಗಳು ಹೊಂದುವ ರೂಪ ಭೇದಗಳು ತಿಳಿಯುವುವು. ಈ ಹುಳುಗಳು ತಮಗೆ ಮಾಡುವ ಉಪಕಾರವನ್ನು ಮಕ್ಕಳು ಪ್ರತ್ಯಕ್ಷವಾಗಿ ನೋಡುವರು. ಈ ಹುಳುವಿನ ಸೊಗಸಾದ ಬಣ್ಣವೂ, ಮನೋಹರವಾದ ಆಕೃತಿಯೂ ಅದರ ವಿಮರ್ಶೆಯಲ್ಲಿ ಮಕ್ಕಳಿಗೆ ಕುತೂಹಲವನ್ನು ಹುಟ್ಟಿಸುವುವು. ಈ ಹುಳುವು ಹೊಂದುವ ಆಶ್ಚರ್ಯಕರವಾದ ರೂಪಭೇದವನ್ನು ನೋಡಿ ಇಂತಹ ಆಶ್ಚರ್ಯಕರವಾದ ಸೃಷ್ಟಿಗೆ ಕಾರಣನಾದ ದೇವರಲ್ಲಿ ಭಕ್ತಿಯು ಹೆಚ್ಚುವುದು.

IV. ಪರೀಕ್ಷೆಯನ್ನು ನಡೆಸುವ ಕ್ರಮ.—

(1) ವಾಸಸ್ಥಳ.—ಮಕ್ಕಳು ಮರಗಳ ಮೇಲೆ ಕಂಬಳಿಹುಳು ಮೊದಲಾದ ಕ್ರಿಮಿಗಳು ಕಟ್ಟುವ ಕೋಶಗಳನ್ನು ನೋಡಿರುವರು. ರೇಷ್ಮೆ ಹುಳುವು ಹೀಗೆಯೇ ಒಂದು ಮರದಮೇಲೆ ವಾಸಮಾಡುತಿದ್ದು ಅದರ ಎಲೆಗಳನ್ನು ತಿಂದು ಜೀವಿಸುತಿತ್ತೆಂತಲೂ ಈಚಿಗೆ ಜನರು ಅದು ಬಹಳ ಉಪಯೋಗಕರವಾದ ಪ್ರಾಣಿಯೆಂಬುದನ್ನರಿತು ಅದನ್ನು ಪ್ರಯತ್ನದಿಂದ ಮನೆಗಳಲ್ಲಿ ಸಾಕುತಲಿರುವರೆಂತಲೂ ತಿಳಿಸಬೇಕು. ಆಮೇಲೆ ರೇಷ್ಮೆ ಹುಳುಗಳನ್ನಿಟ್ಟಿರುವ ಕೊಠಡಿಗೆ ಮಕ್ಕಳನ್ನು ಕರೆದುಕೊಂಡುಹೋಗಿ ಅಲ್ಲಿ ಇಟ್ಟಿರುವ ಮೊಟ್ಟೆ, ಹುಳು, ಗೂಡು, ಚಿಟ್ಟೆ, ಇವುಗಳನ್ನು ತೋರಿಸಬೇಕು.

(2) ಚಿಟ್ಟೆಯು ಮೊಟ್ಟೆಗಳನ್ನಿಟ್ಟಿರುವ ರೀತಿ. ಮೊಟ್ಟೆಗಳ ಬಣ್ಣ, ಈ ಬಣ್ಣದಲ್ಲುಂಟಾಗುವ ವ್ಯತ್ಯಾಸ (ಮೊದಲು ಬಿಳುಪು, ಆಮೇಲೆ ಕಪ್ಪು,) ಮೊಟ್ಟೆಗಳ ಗಾತ್ರ, ಸಂಖ್ಯೆ ಮುಂತಾದ ಅಂಶಗಳನ್ನು ಮಕ್ಕಳು ಎಚ್ಚರಿಕೆಯಿಂದ ಪರೀಕ್ಷಿಸಬೇಕು. ಈ ಪರೀಕ್ಷೆಯಲ್ಲಿ ಪದಾರ್ಥಗಳನ್ನು ದೊಡ್ಡದಾಗಿ ಕಾಣಿಸುವ ಭೂತಕನ್ನಡಿಯನ್ನುಪಯೋಗಿಸಬೇಕು.

(3) ಸಣ್ಣಹುಳು.—ಮೊಟ್ಟೆಗಳನ್ನು ಮಕ್ಕಳು ಪ್ರತಿದಿವಸವೂ ನೋಡುತಿದ್ದರೆ ಕೆಲವುದಿವಸಗಳಾದಮೇಲೆ ಈ ಮೊಟ್ಟೆಗಳಿಂದ ಮರಿಗಳು ಬರುವುದು ಅವರ ದೃಷ್ಟಿಗೆ ಬೀಳುವುದು. ಈ ಮರಿಗಳು ಮೊಟ್ಟೆಗಳಿಂದೀಚಿಗೆ ಬರುವ ರೀತಿಯನ್ನು ಚೆನ್ನಾಗಿ ತೋರಿಸಬೇಕು. ಆಮೇಲೆ ಈ ಸಣ್ಣ ಮರಿಗಳಿಗೂ, ದೊಡ್ಡ ಹುಳುಗಳಿಗೂ ಗಾತ್ರದಲ್ಲೂ ಬಣ್ಣದಲ್ಲೂ ಇರುವ ವ್ಯತ್ಯಾಸನನ್ನು ಮಕ್ಕಳು ತಿಳಿಯುವಂತೆ ಮಾಡಬೇಕು.

ದು ಮರಿಗಳಾದವು. ಆ ದಿನ ಮೊದಲ್ಗೊಂಡು ಈ ವಿಮರ್ಶೆಯು ಕ್ರಮವಾಗಿ ೨ ತಿಂಗಳುಕಾಲ ನಡೆಯಿತು. ಆ ಸ್ಕೂಲಿನ ಮಕ್ಕಳ ತರಗತಿಗಳ ಉಪಾಧ್ಯಾಯರಿಗೆ ಮಿಸ್. ಲ್ಯಾಟರವರ ಉದ್ದೇಶಕ್ಕನುಗುಣವಾಗಿ ಪಾಠಗಳನ್ನು ನಡೆಸುವ ರೀತಿಯು ಹೊಸದಾಗಿದ್ದುದರಿಂದ ಈ ಹೊಸಕ್ರಮಕ್ಕನುಗುಣವಾಗಿ ಅಲ್ಲಿ ಕೆಲಸ ಮಾಡಿಸುತಿರುವ ಮಿ! ವೆಂಕಟಸುಬ್ಬಯ್ಯನವರು ರೇಷ್ಮೆ ಹುಳುವಿನ ಪ್ರಕೃತಿ ವಿಮರ್ಶೆಯನ್ನು ನಡೆಸುವ ಮಾರ್ಗವನ್ನು ತೋರಿಸುವ ಪಟ್ಟಿಗಳನ್ನು ಬರೆಸಿ ಗೋಡೆಗೆ ನೇತು ಹಾಕಿಸಿದ್ದರು. ಈ ಪಟ್ಟಿಗಳಲ್ಲಿ ಬರೆದಿದ್ದ ವಿಷಯಗಳ ಸಾರಾಂಶವನ್ನು ಮುಂದೆ ತಿಳಿಸುವೆವು.

ಜನವರಿ, ಫೆಬ್ರವರಿ ತಿಂಗಳುಗಳಲ್ಲಿ ನಡೆಯುವ ರೇಷ್ಮೆ ಹುಳು ವಿಷಯಕವಾದ ವಿಮರ್ಶೆಯನ್ನು ನಡೆಸುವ ಕ್ರಮ.

I. ವಸ್ತುವಿಷಯಕವಾದ ಅನುಭವ.—

ಪಾಠವು ನಡೆವುದಕ್ಕೆ ಕೆಲವು ದಿವಸ ಮುಂಚಿತವಾಗಿ ಉಪಾಧ್ಯಾಯರು ರೇಷ್ಮೆ ಹುಳು, ಗೂಡು, ಪೊಟ್ಟೆ. ಇವುಗಳನ್ನು ಪರೀಕ್ಷಿಸುತಿರಬೇಕು.

II. ಸಿದ್ಧಪಡಿಸುವುದು.—

ಉಪಾಧ್ಯಾಯರು ತಮ್ಮ ಅನುಭವದಿಂದ ತಿಳಿದ ಅಂಶಗಳನ್ನು ವಾಕ್ಯರೂಪದಲ್ಲೂ ಚಿತ್ರರೂಪದಲ್ಲೂ ಬರೆದಿಡಬೇಕು. ಈ ವಿಷಯದಲ್ಲಿ ಪುಸ್ತಕಗಳನ್ನೋದಿ ಅವುಗಳಿಂದ ತಿಳಿಯುವ ವಿಶೇಷಾಂಶಗಳನ್ನೂ ಬರೆದಿಡಬೇಕು

III. ಮಕ್ಕಳಿಗೆ ತಿಳಿಸಬಹುದಾದ ಅಂಶಗಳನ್ನು ಗೊತ್ತುಮಾಡುವುದು.—

ಮಕ್ಕಳಿಗೆ ಪ್ರಾಣಿಗಳಲ್ಲಿ ಪ್ರೀತಿಯನ್ನು ಹುಟ್ಟಿಸಿ ಆಮೇಲೆ ಇವುಗಳನ್ನು ಸೃಷ್ಟಿಸಿದ ದೇವರಲ್ಲಿ ಪ್ರೀತಿಯನ್ನು ಹುಟ್ಟಿಸುವುದು, ಮತ್ತು ಒಂದೇ ಸಮನಾದ, ಸ್ವಲ್ಪವೂ ಕಿತ್ತುಹೋಗದಿರುವ ದಾರವನ್ನುಂಟುಮಾಡುವ ಶಕ್ತಿಯನ್ನು ಈ ಹುಳುವಿಗೆ ಕೊಟ್ಟಿರುವ ದೇವರ ಮಹಿಮೆಯನ್ನು ತಿಳಿಸುವುದು, ಇವೇ ಈ ಪಾಠದ ಮುಖ್ಯೋದ್ದೇಶಗಳು. ನಮ್ಮ ದೇಶದ ಅನೇಕ ಭಾಗಗಳಲ್ಲಿ ರೇಷ್ಮೆಯ ಕೈಗಾರಿಕೆಯು ವಿಶೇಷವಾಗಿರುವುದರಿಂದ ಇದು ನಮಗೆ ಅನುಕೂಲವಾದ ಪಾಠವು. ಮಕ್ಕಳು ಈ ಪರೀಕ್ಷೆಯನ್ನು ನಡೆಸುವುದರಿಂದ ಮುಂದೆ ಅವರು ಪುಸ್ತಕಗಳಲ್ಲೋದುವ ರೇಷ್ಮೆ ಕೈಗಾರಿಕೆಯ ವಿಷಯವನ್ನು ತಿಳಿಯಲು ಸಹಾಯವಾಗುವುದು. ಮಕ್ಕಳ ತಾಯಿ ತಂದೆಗಳಿಗೆ ಪ್ರಕೃತಿ ವಿಮರ್ಶೆಯ ಪಾಠವು ಉಪಯುಕ್ತವಾದುದೆಂಬುದು ಗೊತ್ತಾ-

ಗುವುದು. ಮಕ್ಕಳಿಗೆ ರೇಷ್ಮೆ ಹುಳುವಿನ ಜಾತಿಯ ಕ್ರಿಮಿಗಳು ಹೊಂದುವ ರೂಪ ಭೇದಗಳು ತಿಳಿಯುವುವು. ಈ ಹುಳುಗಳು ತಮಗೆ ಮಾಡುವ ಉಪಕಾರವನ್ನು ಮಕ್ಕಳು ಪ್ರತ್ಯಕ್ಷವಾಗಿ ನೋಡುವರು. ಈ ಹುಳುವಿನ ಸೊಗಸಾದ ಬಣ್ಣವೂ, ಮನೋಹರವಾದ ಆಕೃತಿಯೂ ಅದರ ವಿಮರ್ಶೆಯಲ್ಲಿ ಮಕ್ಕಳಿಗೆ ಕುತೂಹಲವನ್ನು ಹುಟ್ಟಿಸುವುವು. ಈ ಹುಳುವು ಹೊಂದುವ ಆಶ್ಚರ್ಯಕರವಾದ ರೂಪಭೇದವನ್ನು ನೋಡಿ ಇಂತಹ ಆಶ್ಚರ್ಯಕರವಾದ ಸೃಷ್ಟಿಗೆ ಕಾರಣನಾದ ದೇವರಲ್ಲಿ ಭಕ್ತಿಯು ಹೆಚ್ಚುವುದು.

IV. ಪರೀಕ್ಷೆಯನ್ನು ನಡೆಸುವ ಕ್ರಮ.—

(1) ವಾಸಸ್ಥಳ.—ಮಕ್ಕಳು ಮರಗಳ ಮೇಲೆ ಕಂಬಳಿಹುಳು ಮೊದಲಾದ ಕ್ರಿಮಿಗಳು ಕಟ್ಟುವ ಕೋಶಗಳನ್ನು ನೋಡಿರುವರು. ರೇಷ್ಮೆ ಹುಳುವು ಹೀಗೆಯೇ ಒಂದು ಮರದಮೇಲೆ ವಾಸಮಾಡುತಿದ್ದು ಅದರ ಎಲೆಗಳನ್ನು ತಿಂದು ಜೀವಿಸುತಿತ್ತೆಂತಲೂ ಈಚಿಗೆ ಜನರು ಅದು ಬಹಳ ಉಪಯೋಗಕರವಾದ ಪ್ರಾಣಿಯೆಂಬುದನ್ನರಿತು ಅದನ್ನು ಪ್ರಯತ್ನದಿಂದ ಮನೆಗಳಲ್ಲಿ ಸಾಕುತಲಿರುವರೆಂತಲೂ ತಿಳಿಸಬೇಕು. ಆಮೇಲೆ ರೇಷ್ಮೆ ಹುಳುಗಳನ್ನಿಟ್ಟಿರುವ ಕೊಠಡಿಗೆ ಮಕ್ಕಳನ್ನು ಕರೆದುಕೊಂಡುಹೋಗಿ ಅಲ್ಲಿ ಇಟ್ಟಿರುವ ಮೊಟ್ಟೆ, ಹುಳು, ಗೂಡು, ಚಿಟ್ಟೆ, ಇವುಗಳನ್ನು ತೋರಿಸಬೇಕು.

(2) ಚಿಟ್ಟೆಯು ಮೊಟ್ಟೆಗಳನ್ನಿಟ್ಟಿರುವ ರೀತಿ. ಮೊಟ್ಟೆಗಳ ಬಣ್ಣ, ಈ ಬಣ್ಣದಲ್ಲುಂಟಾಗುವ ವ್ಯತ್ಯಾಸ (ಮೊದಲು ಬಿಳುಪು, ಆಮೇಲೆ ಕಪ್ಪು,) ಮೊಟ್ಟೆಗಳ ಗಾತ್ರ, ಸಂಖ್ಯೆ ಮುಂತಾದ ಅಂಶಗಳನ್ನು ಮಕ್ಕಳು ಎಚ್ಚರಿಕೆಯಿಂದ ಪರೀಕ್ಷಿಸಬೇಕು. ಈ ಪರೀಕ್ಷೆಯಲ್ಲಿ ಪದಾರ್ಥಗಳನ್ನು ದೊಡ್ಡದಾಗಿ ಕಾಣಿಸುವ ಭೂತಕನ್ನಡಿಯನ್ನುಪಯೋಗಿಸಬೇಕು.

(3) ಸಣ್ಣಹುಳು.—ಮೊಟ್ಟೆಗಳನ್ನು ಮಕ್ಕಳು ಪ್ರತಿದಿವಸವೂ ನೋಡುತಿದ್ದರೆ ಕೆಲವುದಿವಸಗಳಾದಮೇಲೆ ಈ ಮೊಟ್ಟೆಗಳಿಂದ ಮರಿಗಳು ಬರುವುದು ಅವರ ದೃಷ್ಟಿಗೆ ಬೀಳುವುದು. ಈ ಮರಿಗಳು ಮೊಟ್ಟೆಗಳಿಂದೀಚಿಗೆ ಬರುವ ರೀತಿಯನ್ನು ಚೆನ್ನಾಗಿ ತೋರಿಸಬೇಕು. ಆಮೇಲೆ ಈ ಸಣ್ಣ ಮರಿಗಳಿಗೂ, ದೊಡ್ಡ ಹುಳುಗಳಿಗೂ ಗಾತ್ರದಲ್ಲೂ ಬಣ್ಣದಲ್ಲೂ ಇರುವ ವ್ಯತ್ಯಾಸನನ್ನು ಮಕ್ಕಳು ತಿಳಿಯುವಂತೆ ಮಾಡಬೇಕು.

(4)ದೊಡ್ಡ ಹುಳು.—ಹುಳುವು ದೊಡ್ಡದಾದಮೇಲೆ ಅದು ಚಲಿಸುವ ರೀತಿಯನ್ನು ತೋರಿಸಿ ಚಲನೆಗೆ ಮುಂದಿನ ಕಾಲುಮಾತ್ರ ಸಾಧಕ, ಹಿಂದಿನಕಾಲು ಹಿಡಿದುಕೊಳ್ಳುವುದಕ್ಕನುಕೂಲವೆಂಬುದನ್ನು ತಿಳಿಸಬೇಕು. ಒಂದೊಂದು ಪಕ್ಕದಲ್ಲಿ 8 ಕಾಲುಗಳಿರುವುದನ್ನು ಮಕ್ಕಳು ಎಣಿಸಬೇಕು. ಪ್ರತಿಯೊಂದು ಪಕ್ಕದಲ್ಲೂ ಉಸಿರಾಡುವುದಕ್ಕಿರುವ 9 ರಂಧ್ರಗಳನ್ನು ಮಕ್ಕಳು ಎಣಿಸಬೇಕು. ಹುಳುವಿಗೆ ಹಿಪ್ಪಲಿ ಸೊಪ್ಪನ್ನು ಹಾಕಿ ಅದು ಆ ಸೊಪ್ಪನ್ನು ತಿನ್ನುವಾಗ ಅದರ ಬಲವಾದ ದವಡೆಯು ಚಲಿಸುವ ರೀತಿಯನ್ನು ತೋರಿಸಬೇಕು. ಆಮೇಲೆ ಎಲೆಯ ಸ್ಥಿತಿಯನ್ನು ಪರೀಕ್ಷಿಸಬೇಕು. ಹುಳುವು ಆಗಾಗ್ಗೆ ತಲೆಯನ್ನು ಮೇಲಕ್ಕೆತ್ತಿ ಮೈಯ್ಯನ್ನು ಉದ್ದ ಮಾಡಿಕೊಳ್ಳುವುದನ್ನು ಮಕ್ಕಳು ನೋಡಬೇಕು. ಅದರ ಮೇಲುಹೊದ್ದಿಕೆಯು ಆಗಾಗ್ಗೆ ಉದುರಿಹೋಗಿ ಹೊಸದಾಗಿ ಹುಟ್ಟುವುದನ್ನೂ, ಅದರ ಬಣ್ಣವು ಕ್ರಮವಾಗಿ ವ್ಯತ್ಯಾಸವಾಗುತ ಬಂದು ಕೊನೆಗೆ ಹೊಂಬಣ್ಣವಾಗುವುದನ್ನೂ, ಇದರ ಸಿಲಿಂದರದಂತಿರುವ ಶರೀರದಲ್ಲಿ ತಲೆಯಲ್ಲದೆ 9 ಭಾಗಗಳಿರುವುದನ್ನು ಮಕ್ಕಳು ನೋಡಬೇಕು. ಹುಳುವು ಆಗಾಗ ಆಹಾರವನ್ನು ಬಿಟ್ಟು ಸುಮ್ಮನೆ ಮಲಗುವುದನ್ನು ತೋರಿಸಬೇಕು. ತಲೆಯ ಆಕಾರ, ಬಣ್ಣ, ಅದರಲ್ಲಿರುವ ಸಣ್ಣ ಕಣ್ಣುಗಳು, ಇವುಗಳಕಡೆಗೆ ಮಕ್ಕಳ ಅವಧಾನವನ್ನೆಳೆಯಬೇಕು. ಹುಳುವಿಗೆ ಕಣ್ಣು ಕಾಣಿಸುವುದು, ಸ್ಪರ್ಶಜ್ಞಾನವಿರುವುದು, ರುಚಿ ತಿಳಿವುದು, ಶಬ್ದಜ್ಞಾನವಿಲ್ಲವೆಂಬ ಅಂಶಗಳನ್ನು ಮಕ್ಕಳು ಪರೀಕ್ಷೆಗಳಿಂದ ತಿಳಿಯಬೇಕು. ಹುಳುವಿನ ಬಾಯಿಯನ್ನು ಮಕ್ಕಳು ವಿಶೇಷ ಪರೀಕ್ಷಿಸಿ ಅದರಲ್ಲಿ ರೇಷ್ಮೆಯನ್ನು ನೂಲುವುದಕ್ಕಿರುವ ಆಶ್ಚರ್ಯಕರವಾದ ಏರ್ಪಾಡನ್ನು ತಿಳಿಯಬೇಕು. ಹುಳುವನ್ನು ಚೆಂದ್ರಿಕೆಯಲ್ಲಿ ಬಿಟ್ಟಾಗ ಅದು ತಲೆಯನ್ನು ಅಳ್ಳಾಡಿಸುತ ನಯವಾದ ದಾರವನ್ನು ಬಿಟ್ಟು ಗೂಡನ್ನು ಕಟ್ಟುವ ರೀತಿಯನ್ನು ಮಕ್ಕಳು ಕ್ರಮವಾಗಿ ನೋಡಬೇಕು. ಈ ಪರೀಕ್ಷೆಗಳಲ್ಲೆಲ್ಲಾ ಭೂತಕನ್ನಡಿಯನ್ನು ವಿಶೇಷವಾಗಿ ಉಪಯೋಗಿಸಬೇಕು.

(5) ಕೋಶಕ್ರಿಮಿ:—ಹುಳುವು ಗೂಡು ಕಟ್ಟಿದಮೇಲೆ ಒಂದು ಕೋಶಕ್ರಿಮಿಯಾಗಿರುವುದೆಂದು ಹೇಳಿ ಈ ಸುಷುಪ್ತ್ಯವಸ್ಥೆಯು ಮುಂದೆ ಬರುವ ಒಂದು ಉತ್ತಮವಾದ ಅವಸ್ಥೆಗೆ ಸೋಪಾನವೆಂಬುದನ್ನು ತಿಳಿಸಬೇಕು. ಆಮೇಲೆ ಸುಮಾರು 5—6 ದಿವಸವಾದಮೇಲೆ ಗೂಡನ್ನು ಬೆಚ್ಚಗಿರುವ ನೀರಲ್ಲಿ ಹಾಕಿ ರೇಷ್ಮೆಯನ್ನು ರಾಟಗೆ ಸುತ್ತಿಕೊಂಡು ಅದರೊಳಗಿರುವ ಕ್ರಿಮಿಯನ್ನು ಒಂದು ಬೆಚ್ಚಗಿ

ರುವ ಪೆಟ್ಟಿಗೆಯಲ್ಲಿಟ್ಟು ಮಕ್ಕಳು ನೋಡಿಕೊಳ್ಳುವಂತೆ ಮಾಡಬೇಕು. ಈ ಅವ ಸ್ಥೆಯಲ್ಲಿ ಹುಳುವು ಮಲಗಿರುವ ರೀತಿಯನ್ನೂ ಅದರಲ್ಲುಂಟಾಗುವ ವ್ಯತ್ಯಾಸವನ್ನೂ ಮಕ್ಕಳು ಪರೀಕ್ಷಿಸಬೇಕು. ಗೂಡನ್ನು ವಿಶೇಷ ಬಿಸಿಯಾದ ನೀರಿನಲ್ಲಿ ಹಾಕಿ ಬೆಳಗಿ ರುವ ಕ್ರಿಮಿಯನ್ನು ಎಂದಿಗೂ ಕೊಲ್ಲಕೂಡದು.

(6) ಚಿಟ್ಟೆ:—ಕೆಲವು ದಿವಸವಾದಮೇಲೆ ಗೂಡಿನಲ್ಲಿ ಚಲನೆಯು ಕಾಣು ವುದನ್ನೂ, ಆಮೇಲೆ ಗೂಡನ್ನು ಕೊರೆದುಕೊಂಡು ಈಚೆಗೆ ಬೂದುಬಣ್ಣದ ಚಿಟ್ಟೆ ಯು ಬರುವುದನ್ನು ಮಕ್ಕಳು ನೋಡಬೇಕು. ಆಮೇಲೆ ಗೂಡು ಅಂದವಾಗಿಲ್ಲ ದಿರುವುದನ್ನು ಅದರಲ್ಲಿ ರೇಷ್ಮೆಯು ಒರಟಾಗಿಯೂ ಜೂರು ಜೂರಾಗಿಯೂ ಇರು ವುದನ್ನೂ ಮಕ್ಕಳು ಪರೀಕ್ಷಿಸಬೇಕು. ಚಿಟ್ಟೆಯ ರೆಕ್ಕೆ, ಆಕಾರ ಶರೀರ ದರಚನೆ, ಆರು ಕಾಲುಗಳು, ತಲೆಯಲ್ಲಿರುವ ಉದ್ದವಾದ ಸ್ಪರ್ಶೇಂದ್ರಿಯಗಳು, ಅಗಲವಾದ ಕಣ್ಣುಗಳು, ಬಾಯಿ ಇವುಗಳನ್ನು ತೋರಿಸಿ ಈ ಅವಸ್ಥೆಗೂ ಹಿಂದಿನ ಅವಸ್ಥೆಯ ಹುಳುವಿಗೂ ಇರುವ ವ್ಯತ್ಯಾಸವನ್ನು ತಿಳಿಸಬೇಕು. ಚಿಟ್ಟೆಯು ಮುಂದೆ ಸ್ವಲ್ಪ ನೀರು ವಿಶ್ರವಾದ ಜೇನುತುಪ್ಪವನ್ನಿಟ್ಟು ಅದು ನಾಲಿಗೆಯನ್ನು ನೀಡುವ ರೀತಿಯನ್ನು ತೋರಿಸಬೇಕು.

(7) ಈ ಜಾತಿಯ ಇತರ ಹುಳುಗಳ ಪರೀಕ್ಷೆ:—ಈ ಕಾಲದಲ್ಲಿ ಇದೇವರ್ಗ ಕ್ಕೆ ಸೇರಿದ ಕೆಲವು ಹುಳುಗಳನ್ನು ಗಾಜಿನ ಸೀಸೆಗಳಲ್ಲಿಟ್ಟು ಅವುಗಳು ಹೊಂದುವ ಅವಸ್ಥಾಭೇದಗಳನ್ನು, ರೇಷ್ಮೇ ಹುಳುವಿನ ಅವಸ್ಥಾಭೇದಗಳೊಡನೆ ಹೋಲಿ ಸಬೇಕು.

(8) ಉಪ್ಪುನೀರಳೆಗಿಡ:— ರೇಷ್ಮೆ ಹುಳುವನ್ನು ಮಕ್ಕಳು ಪರೀಕ್ಷಿಸುವ ಕಾಲದಲ್ಲಿ ಉಪ್ಪುನೀರಳೆ ಗಿಡದ ಎಲೆ, ಹೂ, ಕಾಯಿ, ಹಣ್ಣು, ಇವುಗಳನ್ನೂ ಮಕ್ಕಳು ಪರೀಕ್ಷಿಸಬೇಕು. ಆ ಗಿಡದ ಮೇಲೆ ಒಂದೆರಡು ಹುಳುಗಳನ್ನು ಬಿಟ್ಟು ಅವನ್ನು ಮಕ್ಕಳು ನೋಡಿಕೊಳ್ಳುವಂತೆ ಮಾಡಬೇಕು.

(9) ರೇಷ್ಮೆಯನ್ನು ಗೂಡಿನಿಂದ ಸುತ್ತಿಕೊಳ್ಳುವುದು:—ಈ ಕೆಲಸಕ್ಕೆ ಬೇ ಕಾದ ಉಪಾಯಗಳನ್ನು ಪ್ರತ್ಯಕ್ಷವಾಗಿ ತೋರಿಸಿ ಮಕ್ಕಳೇ ನೂಲು ಸುತ್ತುವಂತೆ ಮಾಡಬೇಕು.

V. ಈ ಪರೀಕ್ಷೆಗೆ ಸಂಬಂಧಪಟ್ಟ ಕಿಂಡರ್‌ಗಾರ್ಟನ್ ಕೆಲಸಗಳು.

(1) ಚಿತ್ರ:—ಹಿಪ್ಪಲಿಎಲೆ, ಹಿಪ್ಪಲಿಗಿಡದ ತೋಟ, ರೇಷ್ಮೆಹುಳು, ಗೂಡು

ಕೋಶಕ್ರಿಮಿ, ಚಿಟ್ಟೆ, ಗೂಡುಗಳನ್ನಿಡುವ ಗೂಡೆ, ಗಾಜಿನ ಸೀಸೆ, ಪೆಟ್ಟಿಗೆ, ಗೆರಸಿ, ರಾಟೆ, ನೀರು ಕಾಯುವಪಾತ್ರೆ, ದೀಪ ಸ್ಟ್ಯಾಂಡು, ಚಂದ್ರಿಕೆ, ತೋಟಕ್ಕೆ ನೀರು ಹಾಕುವಪಾತ್ರೆ ಇವುಗಳನ್ನು ನಾನಾ ಬಣ್ಣಕ್ಕಿರುವ ಶೀಮೆ ಸುಣ್ಣಗಳಿಂದ ಕಾಗದದ ಮೇಲೂ ಬೋರ್ಡಿನಮೇಲೂ ಬರೆಸಬೇಕು.

(2) ಬ್ರಷ್‌ಕೆಲಸ:—ಹಿಪ್ಪಲಿ ಎಲೆ, ರೇಷ್ಮೆಹುಳು, ಗೂಡು, ಕೋಶಕ್ರಿಮಿ, ಚಿಟ್ಟೆ, ಇವುಗಳನ್ನು ಸರಿಯಾದ ಬಣ್ಣಗಳಿಂದ ಬರೆಸಬೇಕು.

(3) ಕಾಗದ ಮಡಿಸುವುದು.—ಎಲೆ, ಪೆಟ್ಟಿಗೆ, ಮೇಜು, ಕುರ್ಚಿ, ಮೇಜಿನ ಮೇಲೆ ಹಾಸುವ ಬಟ್ಟೆ, ಛತ್ರಿ, ಅಂಗಿ, ಷರಾಯಿ, ಕತ್ತಿನಪಟ್ಟಿ, ಲ್ಯಾಂಪ್‌ಷೇಡ್, ಟೋಪಿ, ಡೇರೆ, ಇವುಗಳಲ್ಲಿ ಸಾಧ್ಯವಾದುವನ್ನು ಆಯಾ ತರಗತಿಗೆ ತಕ್ಕಂತೆ ಮಾಡಿಸಬೇಕು.

(4) ಮಣ್ಣಿನಕೆಲಸ:—ಗೆರಸಿ, ಹಿಪ್ಪಲಿಎಲೆ, ರೇಷ್ಮೆಹುಳು, ಗೂಡು, ಕೋಶಕ್ರಿಮಿ, ಚಿಟ್ಟೆ, ಇವುಗಳನ್ನು ಜೇಡೀ ಮಣ್ಣಿನಿಂದ ಮಾಡಿಸಬೇಕು.

(5) ಒಂದನೆಯುಕರಣ:—ನೀರು ಸೇದುಪದು ಮೊದಲಾದ ಆಟಗಳನ್ನಾಡಿಸಬೇಕು (A ತರಗತಿಗೆ ಮಾತ್ರ).

(6) ಮೂರು, ನಾಲ್ಕು, ಐದು, ಆರನೆಯು ಕರಣಗಳು. ತೋಟ, ತೋಟದ ಮನೆ, ಮನೆಯುಮುಂಭಾಗ, ಬೆಂಚು, ಮೇಜು, ಕುರ್ಚಿ, ಇವುಗಳನ್ನು ಆಯಾ ತರಗತಿಗೆ ತಕ್ಕ ಕರಣದಿಂದ ಕಟ್ಟಿಸಬೇಕು.

(7) ರಟ್ಟುಗಳು.—ಈ ರಟ್ಟುಗಳಿಂದ ಮೇಲಿನ ಕರಣಗಳಲ್ಲಿ ಕಟ್ಟಿದ ಆಕೃತಿಗಳ ಮೇಲ್ಮೈಯ್ಯನ್ನಿಡಿಸಬೇಕು.

(8) ಬಳೆಗಳು, ಕಡ್ಡಿಗಳು.—ಇವುಗಳಿಂದ ಗೂಡೆ, ನೀರು ಕಾಯಿಸುವಪಾತ್ರೆ, ಎಲೆ, ಹುಳು, ಚಿಟ್ಟೆ, ಇವುಗಳನ್ನೂ ಘನಗಳಿಂದ ಕಟ್ಟಿದ ಆಕೃತಿಗಳ ಮೇಲ್ಮೈಯ್ಯನ್ನೂ ಇಡಿಸಬೇಕು.

(9) ನೂಲು ತೆಗೆವುದು.—ಮಕ್ಕಳಿಗೆ ಬಟ್ಟೆಯನ್ನು ಕೊಟ್ಟು ಆ ಬಟ್ಟೆಯಿಂದ ನೂಲನ್ನು ತೆಗೆಸಿ ಅವರು ತೆಗೆದ ನೂಲಿನಿಂದ ಜಾಪೆ, ತೋಟದಲ್ಲಿ ನೇತುಹಾಕುವ ಬೊಂಬೆ, ಪಕ್ಷಿಯಗೂಡು, ಬ್ರಷ್, ಬೀಸಣಿಕೆ, ಇವುಗಳನ್ನು ಮಾಡಿಸಬೇಕು.

(10) ನೂಲಿಡುವುದು.—ಹುಳು, ಗೂಡು, ಹಿಪ್ಪಲಿ ಎಲೆ, ತಟ್ಟೆ, ಇವುಗಳ ಆಕೃತಿಯನ್ನು ಉದ್ದವಾದ ನೂಲಿನಿಂದ ಮಕ್ಕಳ ಕೈಯಲ್ಲಿ ಇಡಿಸಬೇಕು.

(11) ಮರಳಿನ ಕೆಲಸ —ತೋಟದ ಆಕಾರವನ್ನು ಮರಳಿನಲ್ಲಿ ಮಾಡಿಸಿ ಅದರಲ್ಲಿ ಹಿಪ್ಪಲಿ ಕಡ್ಡಿಗಳನ್ನು ನೆಟ್ಟಿರುವ ಪಾತಿಯನ್ನು ಗುರ್ತುಮಾಡುವುದು. ರೇಷ್ಮೆಯ ಗೂಡನ್ನು ಮರಳಲ್ಲಿ ಮಾಡುವುದು, ತೋಟಕ್ಕೆ ನೀರು ಸೇದುವ ಭಾವಿಯನ್ನು ಮಾಡುವುದು, ಇವೇ ಮಕ್ಕಳು ಮರಳಿನಲ್ಲಿ ಮಾಡಬೇಕಾದ ಕೆಲಸಗಳು.

(12) ಮಣಿ ಪೋಣಿಸುವುದು.—ಮಕ್ಕಳು ಮಣಿಗಳನ್ನು ದಾರಕ್ಕೆ ಪೋಣಿಸಿ ರೇಷ್ಮೆಯಹುಳು ಮೊಟ್ಟೆ ಇವುಗಳ ಆಕಾರದಲ್ಲಿಡಬೇಕು. ಕಡ್ಡಿಗೆ ಪೋಣಿಸಿ ಮರಳಿನ ತೋಟದ ಬೇಲಿಯಾಗಿ ಇಡಬೇಕು. ಸಣ್ಣ ಮಣಿಗಳನ್ನು ತಂತಿಗೆ ಪೋಣಿ ಚಿಟ್ಟೆಯನ್ನು ಮಾಡಬೇಕು.

(13) ಕಥೆ.—'ರೇಷ್ಮೆಹುಳುವಿನ ಚರಿತ್ರೆ''ನಂಬಿಕೆ ವಿಷಯಕವಾದಪಾಠ' 'ರೇಷ್ಮೆಹುಳುವಿನ ದೇವತೆ' ಈ ಕಥೆಗಳನ್ನು ಎಲ್ಲಾ ತರಗತಿಗಳಿಗೂ ಹೇಳಬೇಕು.

(14) ಪದ್ಯ.—ರೇಷ್ಮೇಹುಳುವಿನ ಪದ್ಯವನ್ನು ಎಲ್ಲ ತರಗತಿಗಳಿಗೂ ಬಾಯಿಪಾಠ ಮಾಡಿಸಬೇಕು.

ಮೇಲಿನ ಪಟ್ಟಿಯಲ್ಲಿ ಕಾಣುವಂತೆ ಜನವರಿ,ಫೆಬ್ರವರಿ ತಿಂಗಳುಗಳಲ್ಲಿ ಪ್ರಾಕ್ಟಿಸಿಂಗ್ ಸ್ಕೂಲಿನ ಮಕ್ಕಳ ತರಗತಿಗಳಲ್ಲಿ ಪಾಠಗಳು ನಡೆದವು.

ಈಗ ನಾವು ವಾಡಿಕೆಯಾಗಿ ಉಪಯೋಗಿಸುತ್ತಿರುವ ಕಥೆಗಳಲ್ಲಿ ಧರ್ಮಸೂಕ್ಷ್ಮಗಳನ್ನು ತಿಳಿಸುವ ಕಥೆಗಳೇ ವಿಶೇಷವಾಗಿರುವವು. ಇಂತಹ ಕಥೆಗಳು ಮಕ್ಕಳಿಗೆ ಬೇಸರವನ್ನುಂಟುಮಾಡುವವು. ಪ್ರಕೃತಿಯ ವಸ್ತುಗಳ ಸ್ವಭಾವವನ್ನು ವರ್ಣಿಸುವ ಕಥೆಗಳನ್ನು ನಾವು ಮಕ್ಕಳಿಗೆ ವಿಶೇಷವಾಗಿ ಹೇಳಬೇಕು. ಇಂತಹ ಕಥೆಗೆ ನಿದರ್ಶನವಾಗಿ ರೇಷ್ಮೇಹುಳುವಿನ ಪರೀಕ್ಷೆಯಕಾಲದಲ್ಲಿ ಮಕ್ಕಳಿಗೆ ಹೇಳಿದ ಒಂದು ಕಥೆಯನ್ನು ಸಂಕ್ಷೇಪವಾಗಿ ಬರೆವೆವು.

ಕಥೆ:—ಒಂದು ಹಸುರಾದ ಎಲೆಗಳುಳ್ಳ ಹಿಪ್ಪಲಿಗಿಡದ ಒಂದು ಎಲೆಯಮೇಲೆ ಒಂದು ಸಣ್ಣ ಹುಳುವಿತ್ತು. ಆ ಹುಳುವು ತಲೆಯನ್ನೆತ್ತಿ ಸುತ್ತಲೂನೋಡಿ ಅಹಾ! ಇದೆಂತಹ ಒಳ್ಳೇಸ್ಥಳವೆಂದು ಅಂದುಕೊಂಡಿತು. ಅಮೇಲೆ ಆ ಎಲೆಯ ಕೆಳಕ್ಕೆಹೋಗಿ ಸ್ವಲ್ಪಹೊತ್ತು ಮುಂಗಾಲಿನಿಂದ ಎಲೆಯನ್ನು ಹಿಡಿದುಕೊಂಡು ಹಿಂಗಾಲನ್ನು ಹಿಂದಕ್ಕೂ ಮುಂದಕ್ಕೂ ಆಡಿಸುತ ಜೋಲಾಡುತ್ತಿತ್ತು. ಅಮೇಲೆ ಅಯಾಸವಾಗಿ ಸ್ವಲ್ಪಹೊತ್ತು ಮಲಗಿಕೊಂಡಿತು. ಎದ್ದಮೇಲೆ ಹಸಿವಾಗಲು ಸುತ್ತಲೂ ತಿನ್ನುವ ಪದಾರ್ಥವನ್ನು ಹುಡುಕುತ ತಾನಿದ್ದ ಎಲೆಯನ್ನು ರುಚಿನೋಡಿತು. ಆ

ಎಲೆಯು ಬಹಳ ರುಚಿಯಾಗಿದ್ದುದರಿಂದ ಅದನ್ನು ಪೂರ್ಣವಾಗಿ ತಿಂದುಬಿಟ್ಟಿತು. ಆಮೇಲೆ ಹಾಗೆಯೇ ಅದು ಆ ಗಿಡದ ಎಲೆಗಳನ್ನು ಒಂದೊಂದನ್ನಾಗಿ ತಿನ್ನುತ ದೊಡ್ಡದಾಗಿ ಬೆಳೆಯುತಬಂತು. ಆದರ ಅಂಗಿಯು ಅದಕ್ಕೆ ಬಿಗಿಯೂದುದರಿಂದ ಅದರ ತಾಯಿಯಾದ ಪ್ರಕೃತಿಯು ಹೊಸ ಅಂಗಿಯನ್ನು ಹೊಲಿಸಿಕೊಟ್ಟಳು. ಹೀಗೆಯೇ ಹೊಸಅಂಗಿಯನ್ನು ಎರಡುಮೂರಾವರ್ತಿ ಹೊಲಿಸಿ ಕೊಡಬೇಕಾಗಿಬಂತು. ಆಮೇಲೆ ಈ ಹುಳುವಿಗೆ ಹರಿಯುವುದು ಬೇಸರವಾಯಿತು. ತಾಯಿಯು ಇದನ್ನು ನೋಡಿ, "ಮಗು ನಿನಗೇನು ತೊಂದರೆ" ಏನುಬೇಕು? ಏಂದು ಕೇಳಿದಳು.

ಹುಳು:—ನನಗೆ ಹಾರಿಹೋಗಬೇಕೆಂಬ ಅಪೇಕ್ಷೆ ಇರುವುದು.

ತಾಯಿ:—ಸ್ವಲ್ಪ ನಿಧಾನಿಸು, ನಿನ್ನ ಕೋರಿಕೆಯನ್ನು ಸಲ್ಲಿಸುವೆನು.

ಹುಳು:—ನನ್ನ ಕೋರಿಕೆಯನ್ನು ಹೇಗೆ ಸಲ್ಲಿಸುವಿ, ನನಗೆ ರಕ್ಕೆಗಳಿಲ್ಲವಲ್ಲ.

ತಾಯಿ:—ಆ ಯೋಚನೆ ನಿನಗೇಕೆ. ಅದನ್ನು ನಾನು ನೋಡಿಕೊಳ್ಳುವೆನು.

ಆಮೇಲೆ ಹುಳುವಿಗೆ ನಯವಾದ ದಾರವನ್ನು ಬಿಟ್ಟು ಗೂಡು ಕಟ್ಟುವುದನ್ನು ತಾಯಿಯು ಹೇಳಿಕೊಟ್ಟಳು. ಹುಳುವು ಗೂಡುಕಟ್ಟಿ ಅದರೊಳಗೆ ಸೇರಿಕೊಂಡಿತು.

ಹುಳು:—ಅಮ್ಮಾ ನಾನು ಒಳಗೆ ಸಿಕ್ಕಿಬಿದ್ದೆನಲ್ಲಾ. ಹೇಗೆ ಈಚೆಗೆ ಬರಲಿ.

ತಾಯಿ:—ನೀನು ಒಳಗೆ ಮಲಗಿರು. ನೀನು ಈಚೆಗೆಬರಬೇಕಾದ ಸಮಯಕ್ಕೆ ನಾನು ಬರುವ ಉಪಾಯವನ್ನು ಹೇಳಿಕೊಡುವೆನು.

ಹುಳುವು ತನ್ನ ಅಂಗಿಯನ್ನು ಬಿಚ್ಚಿಟ್ಟು ಮಲಗಿಕೊಂಡಿತು. ಕೆಲವು ದಿವಸಗಳಾದಮೇಲೆ ತಾಯಿಯು ಗೂಡನ್ನಳ್ಳಾಡಿಸಿ ಏಳು! ಏಳು! ಎಂದು ಕೂಗಿದಳು.

ಹುಳು:—ನಾನು ಹೇಗೆ ಹೊರಗೆಬರಲಿ. ಇಲ್ಲಿ ಕತ್ತಲೆಯಾಗಿರುವದಲ್ಲಾ. ಬಹಳ ಹೊತ್ತು ಮಲಗಿ ಮೈಯ್ಯೆಲ್ಲಾ ಪಿಡಿದುಕೊಂಡಿರುವುದಲ್ಲಾ.

ತಾಯಿ:—ತಲೆಯ ಹತ್ತರ ದಾರಿಯನ್ನು ಮಾಡಿಕೊಂಡು ಹೊರಗೆ ಬಾ.

ಹುಳುವು ಈಚೆಗೆಬಂದು, ತಾಯಿಯನ್ನು ಕುರಿತು ಅಮ್ಮಾ ನಾನು ಈಗ ಜಲಿಸುವುದು ಹೇಗೆ, ಎಂದು ಕೇಳಿತು.

ತಾಯಿ:—ಚಿಟ್ಟೆಯೇ, ನಿನ್ನ ರೆಕ್ಕೆಗಳನ್ನು ಉಪಯೋಗಿಸಿ ಹಾರು.

ಚಿಟ್ಟೆಯು ಹೀಗೆಯೇ ಹಾರಲು ಪ್ರಯತ್ನಪಟ್ಟು ಹೆದರಿ ಗೂಡನ್ನು ಭದ್ರವಾಗಿಹಿಡಿದುಕೊಂಡು ಆಮೇಲೆ ರಕ್ಕೆಗಳೊಣಗಿ ಗಟ್ಟಿಯಾದಮೇಲೆ ಅವುಗಳನ್ನು ಹರಡಿ ಸಂತೋಷದಿಂದ ಹಾರುತ್ತಿತು. ಚಿಟ್ಟೆಯು ಈಗ ಏನು ತಿನ್ನುತ್ತಿತ್ತು

ಬಲ್ಲಿರ, ರೇಷ್ಮೇ ಹುಳುವು ತಿನ್ನುತಿದ್ದ ಹಿಪ್ಪಲಿಸೊಪ್ಪನ್ನು ತಿನ್ನು ತಿರಲಿಲ್ಲ. ಸುಂದರವಾದ ಹೂಗಳ ಮೇಲೆ ಕುಳಿತು ಮಧುರವಾದ ಜೇನುತುಪ್ಪವನ್ನು ಹೀರುತಿತು, ಇದೇ ವಿಧವಾದ ಇನ್ನೂ ಕೆಲವು ಕಥೆಗಳು ಪರೀಕ್ಷೆಯ ಕಾಲದಲ್ಲಿ ಹೇಳಲ್ಪಟ್ಟವು.

ಮೇರಿ ಹೊವಿಟ್ ಎಂಬ ಪ್ರಸಿದ್ಧಳಾದ ಗ್ರಂಥಕರ್ತ್ರಿಯಿಂದ ವಿರಚಿತವಾದ ರೇಷ್ಮೆ ಹುಳುವಿನ ಪದ್ಯಗಳನ್ನು ಮಹಾರಾಣೀ ಕಾಲೇಜ್ ಅಸಿಸ್ಟೆಂಟ್ ಮಾಸ್ಟರ್ ಮು॥ ರಾ॥ ಕೆ. ಲಕ್ಷ್ಮೀನಾರಣಪ್ಪನವರು ಕನ್ನಡಕ್ಕೆ ತರ್ಜುಮೆಮಾಡಿದರು. ಈ ಪ್ರಕೃತಿ ವಿಮರ್ಶೆಯ ಕಾಲದಲ್ಲಿ ಮಕ್ಕಳು ಈ ಪದ್ಯಗಳನ್ನು ಬಾಯಿಪಾಠಮಾಡಿದರು. ಅವರು ಬಾಯಿಪಾಠಮಾಡಿದ ಪದ್ಯಗಳನ್ನು ಮುಂದೆಬರೆಯುವೆವು.

ರೇಷ್ಮೇ ಹುಳುವಿನ ಪದ್ಯಗಳು.

ಭಾ॥ ಉಪ್ಪುನೀರಳೆ ಮರದಮೇಲಿರು ।
ತಿಪ್ಪ ರೇಷ್ಮೆಯಹುಳುವೆ! ರೇಷ್ಮೆಯೊ ।
ಳೊಪ್ಪುವಂತೆನಗೊಂದು ಕವಚವ ನೆಯ್ದುಕೊಡು; ನಿನ್ನಿಂ ॥
ಒಪ್ಪತಂತುಸಮೂಹಮಂಚೆಲು ।
ವಪ್ಪವೊಲ್ ದೃಢವಾಗಿಯುಂ ಸೊಗ ।
ಸಿಪ್ಪತೆರದಲ್ಲುದ್ದವಾಗೆಳೆಯುತ್ತಿರೈ, ನೀನು ॥ ॥೧॥

ಎಳೆಗಳಿನ್ನುಂ ಸಾಲವಿವುನೀ ।
ನಲಸದಿರೆಯೆ ನೂಲುತ್ತಿರೈಯವು ।
ಪಲವುಸಾಸಿರಮಪ್ಪ ವರೆಗಾ ಯುಪ್ಪುನೀರಳೆಯಾ ॥
ಎಲೆಗಳನ್ನಗಿದುಗುಳುತಿರ್ದಾ ।
ಬಲುಮರವೆ ಸಲೆರೇಷ್ಮೆಯಪ್ಪವೊ ।
ಲೊಲಿದುವಿರಚಿಸು ತಂತುಸಂಘಾತವನು ಯೆನಗಾಗಿ ॥ ॥೨॥

ಹಲವುದಿನ ಹಗಲಿರುಳು ರೇಷ್ಮೆಯ ।
ಹುಳುಗಳವು ನೂಲುತ್ತಲಿರ್ಪುವು ।
ಕೆಲವು ಕೆಲಸವ ಮೊದಲಿಡಲ್ ಕೆಲಕೆಲವು ಮುಗಿಸಿಹವು ॥
ಎಳೆಯನೂಲ್ವುದನುಳಿದು ಬೇರೆಡೆ ।
ಜಲಿಸದಂತಿರೆ ಮನಮನೊಂದಿಡೆ ।
ನಿಲಿಸಿಹವು ಮಧುಭಾವಜಾಣ್ಮೆಯದೆನಿತೊ ಹುಳುಗಳಿಗೆ ॥ ॥೩॥

ಅರರೆ ರೇಷ್ಮೆಯುಯೆಳೆಗಳಿಲ್ಲವು ।
ಮಿರುಗುತಿರುವುವು ಜೊಕ್ಕಪಲ್ಲಿಯು ।
ಸರಿಗೆವೊಲ್ಮಣಿಪಾಗಿಯುಂ ಮೇಣ್ಬೆಳಿಯು ಬಣ್ಣದೊಳಂ॥
ಮೆರೆಯುದೇಂ ಪೇಳುವು ನೇರಳೆ ।
ಮರದೆರಚಿಸಿದ ರೇಷ್ಮೆತರಣಿಯು ।
ಕಿರಣಜಾಲದ ತೆರದೆ ಬೆರೆಯುತೆ ಗೌರಕಾಂತಿಯೊಳ್ಕೇ ॥ ॥೪॥

ಐಸಲೇ ಹುಳುಗಳಿರ! ನೀವ್ಬಹು ।
ಭಾಸುರತೆಯಿಂ ತೀಕ್ಷ್ಣಗತಿಯಿಂ ।
ಸಾಸದಿಂ ನೂಲುವಿರಲ್ಕೆ ಕಡೆಗೆಲ್ಲ ಮುಗಿಯುವುದು ॥
ಏಸುಸೂಕ್ಷ್ಮವೊ ತಂತುವಿಪ್ಪತು ।
ಸಾಸಿರಂ ಮೇಣವಕೆ ಸರಿಯೇ ।
ವೀಸಪಾಲನಿತೆಂದೊಡಂ ಬಿಳಿನಾರಸೀರೆಯುದು ॥ ॥೫॥

ಎನಿತುದೂರಮದಯ್ಯನಗತಿಯೋ ।
ಛಿನಕರನ ಪಥಮಿಹುದೊಯ್ಯನಿತೇ ।
ತನುತರಂ ತಾನಪ್ಪ ರೇಷ್ಮೆಯ ತಂತುವಿರುತಿಹುದು ॥
ಎನತುಪುಣ್ಯಮನೇನಪೇಳ್ವೆನೊ ।
ವನದೊಳಿಹ ಮರವೆಣಿಸೆ ರೇಷ್ಮೆಯ ।
ಘನತರದ ಪಟಮೆನಿಸಿಯೆನ್ನಂ ಸೇವಿಸುವುದಲ್ತೇ ॥ ॥೬॥

ಈ ಪ್ರಕೃತಿಪರೀಕ್ಷೆಯ ಕಾಲದಲ್ಲಿ ಮಕ್ಕಳು ತಾವು ನೋಡಿದ ಅಂಶಗಳನ್ನು ವಾಕ್ಯರೂಪದಲ್ಲೂ ಚಿತ್ರರೂಪದಲ್ಲೂ ತಮ್ಮ ಪುಸ್ತಕಗಳಲ್ಲಿ ಬರೆಯುತ್ತಿದ್ದರು. ಈ ಪುಸ್ತಕಗಳಲ್ಲಿದ್ದ ವಿಷಯಗಳನ್ನು ಇಲ್ಲಿ ಸಂಕ್ಷೇಪವಾಗಿ ತಿಳಿಸುವೆವು.

—ರೇಷ್ಮೆ ಹುಳುವಿನ ಪ್ರಕೃತಿವಿಮರ್ಶೆ—

ತಾರೀಖು—29—12—07.

ಗೆರಸಿಯಲ್ಲಿದ್ದ ಕಾಗದದಲ್ಲಿ ಬಿಳುಪಾದ ಮೊಟ್ಟೆಗಳಿದ್ದವು ಸಾಯಂಕಾಲದ ಹೊತ್ತಿಗೆ ಇವುಗಳಲ್ಲನೇಕ ಕಪ್ಪಾಗಿದ್ದುವು.

30—12—07.

ಮೊಟ್ಟೆಗಳಿಂದ ಕಪ್ಪುಬಣ್ಣದ ಸಣ್ಣಹುಳುಗಳು ಈಚೆಗೆ ಬರುತ್ತಿವೆ. ಇವಕ್ಕೆ

ಎಳೇ ಹಿಪ್ಪಲಿ ಸೊಪ್ಪನ್ನು ಕತ್ತರಿಸಿಹಾಕಿದೆವು (ಗೆರಸಿ ಮತ್ತು ಸೊಪ್ಪಿನ ಚಿತ್ರ).

3—1—08.

ಈದಿವಸ ಹುಳುಗಳು ಸ್ವಲ್ಪ ಬಿಳುಪು ಬಣ್ಣಕ್ಕೆ ತಿರುಗಿವೆ. ಗಾತ್ರವು ಸ್ವಲ್ಪ ಹೆಚ್ಚಿದೆ. ಹುಳುಗಳು ಕೊಂಚ ಉದ್ದವಾಗಿವೆ.

7—1—08.

ಈದಿವಸ ಹುಳುಗಳು ಮಂಕಾಗಿ ಮಲಗಿವೆ. ಸೊಪ್ಪನ್ನು ತಿನ್ನುವುದಿಲ್ಲ.

8—1—08.

ಹುಳುಗಳು ಚಟವಟಿಕೆಯಾಗಿವೆ. ಚರ್ಮವು ಸುಲಿಯುತಿದೆ.

16—1—08.

ಹುಳುಗಳು ಹಂಚಿಕಡ್ಡಿಯ ಗಾತ್ರಕ್ಕೆ $\frac{1}{2}$ ಅಂಗುಲ ಉದ್ದಕ್ಕಿವೆ. ಆಹಾರವನ್ನು ಬಿಟ್ಟು ಮಂಕಾಗಿ ಮಲಗಿವೆ.

17—1—08.

ಬಣ್ಣವು ಮಾಸಲು ಕಪ್ಪು. ಹುಳುಗಳು ಚಟವಟಿಕೆಯಿಂದಿವೆ. ಚರ್ಮವು ಉದರುತ್ತಿದೆ.

30—1—08.

ಹುಳುಗಳು ದೊಡ್ಡವಾಗುತಿವೆ. ಹಿಪ್ಪಲಿ ಎಲೆಯನ್ನು ತಿಂದು ಅದರಲ್ಲಿ ಅನೇಕ ರಂಧ್ರಗಳನ್ನು ಮಾಡಿವೆ. ತಲೆಯನ್ನು ಆಗಾಗ್ಗೆ ಮೇಲಕ್ಕೆ ಎತ್ತುತ್ತಿವೆ.

5—2—08.

ಹುಳುಗಳು ದೊಡ್ಡವಾಗಿವೆ. ಒಂದೊಂದು ಕಡೆಯಲ್ಲಿ ಎಂಟೆಂಟುಕಾಲುಗಳಿವೆ. ಹರಿಯುವಾಗ ಮೈಯ್ಯನ್ನು ಉದ್ದಮಾಡಿಕೊಳ್ಳುತ್ತವೆ. ಪ್ರತಿಯೊಂದು ಪಕ್ಕದಲ್ಲೂ 9 ಕಪ್ಪು ಚುಕ್ಕೆಗಳಿವೆ. ಈ ಚುಕ್ಕೆಗಳನ್ನು ಭೂತಕನ್ನಡಿಯಿಂದ ನೋಡಲು ಮಧ್ಯದಲ್ಲಿ ಸಣ್ಣ ಬಿಳಿ ಅಂಗುರಗಳು ಕಾಣಿಸಿದವು.

14—2—08.

ಹುಳುವಿನ ಶರೀರದಲ್ಲಿ 10 ಭಾಗಗಳಿವೆ ಹಿಂದುಗಡೆ ಕೊನೆಯಭಾಗದಲ್ಲಿ ಮೇಲಕ್ಕೆದ್ದಿರುವ ಒಂದು ಮುಳ್ಳಿದೆ. ಸೊಪ್ಪನ್ನು ತಿನ್ನುವ ಶಬ್ದವು ಚೆನ್ನಾಗಿ ಕೇಳಿಸುತ್ತದೆ.

15—2—08.

ತಲೆಯಮೇಲೆ 2 ಸಣ್ಣ ಕಣ್ಣುಗಳಿವೆ. ಕಡ್ಡಿಯನ್ನು ತಲೆಯ ಹತ್ತಿರಕ್ಕೆ ತಂದರೆ ತಲೆಯನ್ನು ಹಿಂದಕ್ಕೆಳೆದುಕೊಳ್ಳುತ್ತವೆ. ಹಿಪ್ಪಲಿ ಸೊಪ್ಪಿಗೆ ಬದಲಾಗಿ ದಾಸವಾಳದ ಸೊಪ್ಪನ್ನು ಹಾಕಿದೆವು ತಿನ್ನಲಿಲ್ಲ.

16—2—08.

ಈದಿವಸ ತೋಟಕ್ಕೆ ಹೋಗಿದ್ದಾಗ ಮರದಮೇಲೆ ಒಂದು ಹುಳು ಕಟ್ಟಿದ್ದ ಗೂಡನ್ನು ತಂದಿಟ್ಟೆವು.

19—2—08.

ಒಂದು ಹುಳುವು ಹೊಂಬಣ್ಣಕ್ಕಿತ್ತು ಅದನ್ನು ಜಂಬ್ರಿಕೆಯಲ್ಲಿ ಬಿಟ್ಟೆವು ಸಾಯಂಕಾಲದ ಹೊತ್ತಿಗೆ ಹಳದಿಬಣ್ಣದ ಗೂಡನ್ನು ಕಟ್ಟಿತು.

3—3—08.

ಹುಳುಗಳೆಲ್ಲಾ ಗೂಡುಕಟ್ಟಿವೆ.

5—3—08.

ಈದಿವಸ ಕೆಲವು ಗೂಡುಗಳನ್ನು ಸ್ವಲ್ಪ ಕಾದನೀರಿನಲ್ಲಿ ಹಾಕಿ ರೇಷ್ಮೆಯನ್ನು ರಾಟೆಗೆ ಸುತ್ತಿಕೊಂಡೆವು ಕೋಶಕ್ರಿಮಿಯನ್ನು ತೆಗೆದಿಟ್ಟೆವು.

6—3—08.

ಕೆಲವು ಗೂಡುಗಳಿಂದ ಚಿಟ್ಟೆಗಳು ಈಚೆಗೆ ಬಂದವು. ಬೂದುಬಣ್ಣ. ತಲೆ ಎದೆ, ಹೊಟ್ಟೆ ಎಂಬ ಮೂರುಭಾಗಗಳು. (ಎದೆಯ ಪ್ರತಿಯೊಂದು ಪಕ್ಕದಲ್ಲೂ ಮೂರುಕಾಲುಗಳು) ಪ್ರತಿಯೊಂದು ಪಕ್ಕದಲ್ಲೂ ಎರಡೆರಡು ರೆಕ್ಕೆಗಳು. ಅಗಲವಾದ ಎರಡು ಕಣ್ಣುಗಳು, ಉದ್ದವಾದ ಎರಡು ವಿಶಾಣಿಗಳಿವೆ. ಚಿಟ್ಟೆಯಮುಂದೆ ನೀರು ಮಿಶ್ರವಾದ ಜೇನುತುಪ್ಪವನ್ನಿಟ್ಟು ಉದ್ದವಾದ ನಾಲಿಗೆಯನ್ನು ನೋಡಿದೆವು. ಹೆಣ್ಣುಚಿಟ್ಟೆಯು ಗಂಡುಚಿಟ್ಟೆಗಿಂತಲೂ ದಪ್ಪ.

7—3—08

ಈದಿವಸ ಚಿಟ್ಟೆಗಳು ಬಿಳುಪಾದ ಮೊಟ್ಟೆಗಳನ್ನಿಟ್ಟವು.

16—2—08

ತಂದಿಟ್ಟ ಗೂಡಿನಿಂದ ದೊಡ್ಡ ಚಿಟ್ಟೆಯು ಈಚೆಗೆ ಬಂದಿತು. ಅದು ನಾಲ್ಕು

ಅಂಗುಲ ಅಗಲಕ್ಕಿತ್ತು. ಹಳದಿ ಮಿಶ್ರವಾದ ಬಿಳುಪುಬಣ್ಣ, ನಾಲ್ಕು ರೆಕ್ಕೆಗಳಲ್ಲೂ ಕಾಗೆಬಂಗಾರದಂತಿರುವ ದುಂಡಾದ ನಾಲ್ಕು ದೊಡ್ಡ ಬಟ್ಟೆಗಳಿದ್ದುವು. ರೆಕ್ಕೆಗಳ ಮೇಲೆ ಅಲ್ಲಲ್ಲಿ ಕೆಂಪುಬಣ್ಣದ ಗೆರೆಗಳಿದ್ದುವು.

21—3—08.

ಮೇಲಿನ ಅಂಶಗಳಿಂದ ಪ್ರಕೃತಿವಿಮರ್ಶೆಯ ಪಾಠವನ್ನು ನಡೆಸುವ ಕ್ರಮವು, ಈ ಪಾಠದಲ್ಲಿ ಮಕ್ಕಳು ಮಾಡಬೇಕಾದ ಕೆಲಸಗಳು ಸ್ಪಷ್ಟಪಡುವವು.

M. V.

ವಿದ್ಯಾಭ್ಯಾಸ.

ಹೀಗೆ ಯಥಾರ್ಥವಾದ ಶಾಸ್ತ್ರಜ್ಞಾನವು ಈಶ್ವರನಲ್ಲಿ ಪರಮಭಕ್ತಿಯನ್ನುಂಟುಮಾಡುವುದು. ಏಕರೀತಿಯಾದ ಸಂದರ್ಭಗಳಲ್ಲಿ ವಸ್ತುಗಳು ಏಕರೀತಿಯೂದ ಪರಿಣಾಮಗಳನ್ನು ತೋರಿಸುವುವೆಂಬುದೂ ಶಾಸ್ತ್ರದಿಂದ ಗೊತ್ತಾಗುವುದು. ಅಂಥಾ ಪರಿಣಾಮಗಳಲ್ಲಿ ಶಾಸ್ತ್ರಜ್ಞನಿಗೆ ದೃಢವಾದನಂಬಿಕೆಯೂ ಹುಟ್ಟುವುದು. ಪರಿಣಾಮಗಳ ಸಂಬಂಧಗಳು ಏಕರೀತಿಯಾಗಿರುವುವೆಂದೂ ಬೇರೆಬೇರೆ ಕಾರಣಗಳು ಬೇರೆಬೇರೆ ಫಲಗಳನ್ನು ಏಕರೀತಿಯಲ್ಲಿಯೇ ಉಂಟುಮಾಡುವುವೆಂದೂ ಕಾರ್ಯಗಳಿಗೆ ತಕ್ಕಂತೆ ಒಳ್ಳೆಯಫಲಗಳಾಗಲೀ ಕೆಟ್ಟಫಲಗಳಾಗಲೀ ಅವಶ್ಯಕವಾಗಿ ಪ್ರಾಪ್ತವಾಗುವುವೆಂದೂ ಅತನು ಸ್ವಾನುಭವದಿಂದ ಚೆನ್ನಾಗಿ ಗೊತ್ತುಮಾಡಿಕೊಂಡಿರುವನು. ಶಿಕ್ಷಣರಕ್ಷಣಗಳ ಕಾರಣಗಳಸ್ವರೂಪಗಳನ್ನು ಸಾಮಾನ್ಯಜನರು ಅರಿಯಲಾರರು. ಶಾಸ್ತ್ರಜ್ಞನಾದರೋ ಅವನ್ನು ಚೆನ್ನಾಗಿಬಲ್ಲನು.

ಈಶ್ವರನನಿಯಮಗಳು ನಿತ್ಯವಾದುವೆಂದೂ ಅವು ಬದಲಾಯಿಸಲ್ಪಡತಕ್ಕುವಲ್ಲವೆಂದೂ ಪ್ರಾಣಿಗಳಿಗೆ ಕ್ಷೇಮಕರವಾದುವೆಂದೂ ಅವುಗಳಿಗನುಸಾರವಾಗಿ ನಡೆದರೆ ಸುಖವೂ ಸದ್ಗತಿಯೂ ದೊರಕುವುವೆಂದೂ ಅವುಗಳನ್ನುಲ್ಲಂಘಿಸಿದರೆ ದುಃಖವೂ ದುರ್ಗತಿಯೂ ಪ್ರಾಪ್ತವಾಗದೆ ಇರಲಾರವೆಂದೂ ಶಾಸ್ತ್ರಜ್ಞನು ದೃಢವಾಗಿ ನಂಬಿರುವನು. ಆದಪ್ರಯುಕ್ತ ಅತನು ಅವುಗಳಿಗೆ ವಿಧೇಯನಾಗಿರುವುದಲ್ಲದೆ ಅನ್ಯರಿಗೆ

15—2—08.

ತಲೆಯಮೇಲೆ 2 ಸಣ್ಣ ಕಣ್ಣುಗಳಿವೆ. ಕಡ್ಡಿಯನ್ನು ತಲೆಯ ಹತ್ತಿರಕ್ಕೆ ತಂದರೆ ತಲೆಯನ್ನು ಹಿಂದಕ್ಕೆಳೆದುಕೊಳ್ಳುತ್ತವೆ. ಹಿಪ್ಪಲಿ ಸೊಪ್ಪಿಗೆ ಬದಲಾಗಿ ದಾಸವಾಳದ ಸೊಪ್ಪನ್ನು ಹಾಕಿದೆವು ತಿನ್ನಲಿಲ್ಲ.

16—2—08.

ಈದಿವಸ ತೋಟಕ್ಕೆ ಹೋಗಿದ್ದಾಗ ಮರದಮೇಲೆ ಒಂದು ಹುಳು ಕಟ್ಟಿದ್ದ ಗೂಡನ್ನು ತಂದಿಟ್ಟೆವು.

19—2—08.

ಒಂದು ಹುಳುವು ಹೊಂಬಣ್ಣಕ್ಕಿತ್ತು. ಅದನ್ನು ಚಂದ್ರಿಕೆಯಲ್ಲಿ ಬಿಟ್ಟೆವು ಸಾಯಂಕಾಲದ ಹೊತ್ತಿಗೆ ಹಳದಿಬಣ್ಣದ ಗೂಡನ್ನು ಕಟ್ಟಿತು.

3—3—08.

ಹುಳುಗಳೆಲ್ಲಾ ಗೂಡುಕಟ್ಟಿವೆ.

5—3—08.

ಈದಿವಸ ಕೆಲವು ಗೂಡುಗಳನ್ನು ಸ್ವಲ್ಪ ಕಾದನೀರಿನಲ್ಲಿ ಹಾಕಿ ರೇಷ್ಮೆಯನ್ನು ರಾಟಿಗೆ ಸುತ್ತಿಕೊಂಡೆವು ಕೋಶಕ್ರಿಮಿಯನ್ನು ತೆಗೆದಿಟ್ಟೆವು.

6—3—08.

ಕೆಲವು ಗೂಡುಗಳಿಂದ ಚಿಟ್ಟೆಗಳು ಈಚೆಗೆ ಬಂದವು. ಬೂದುಬಣ್ಣ. ತಲೆ ಎದೆ, ಹೊಟ್ಟೆ ಎಂಬ ಮೂರುಭಾಗಗಳು. (ಎದೆಯ ಪ್ರತಿಯೊಂದು ಪಕ್ಕದಲ್ಲೂ ಮೂರುಕಾಲುಗಳು) ಪ್ರತಿಯೊಂದು ಪಕ್ಕದಲ್ಲೂ ಎರಡೆರಡು ರೆಕ್ಕೆಗಳು. ಆಗಲವಾದ ಎರಡು ಕಣ್ಣುಗಳು, ಉದ್ದವಾದ ಎರಡು ವಿಾಶೆಗಳಿವೆ. ಚಿಟ್ಟೆಯಮುಂದೆ ನೀರು ವಿಶ್ರವಾದ ಜೇನುತುಪ್ಪವನ್ನಿಟ್ಟು ಉದ್ದವಾದ ನಾಲಿಗೆಯನ್ನು ನೋಡಿದೆವು. ಹೆಣ್ಣುಚಿಟ್ಟೆಯು ಗಂಡುಚಿಟ್ಟೆಗಿಂತಲೂ ದಪ್ಪ.

7—3—08

ಈದಿವಸ ಚಿಟ್ಟೆಗಳು ಬಿಳುವಾದ ಮೊಟ್ಟೆಗಳನ್ನಿಟ್ಟವೆ.

16—2—08

ತಂದಿಟ್ಟ ಗೂಡಿನಿಂದ ದೊಡ್ಡ ಚಿಟ್ಟೆಯು ಇಂದಿಗೆ ಬಂದಿತು. ಅದು ನಾಲ್ಕು

ಅಂಗುಲ ಅಗಲಕ್ಕಿತ್ತು. ಹಳದಿ ಮಿಶ್ರವಾದ ಬಿಳುಪುಬಣ್ಣ, ನಾಲ್ಕು ರೆಕ್ಕೆಗಳಲ್ಲೂ ಕಾಗೆಬಂಗಾರದಂತಿರುವ ದುಂಡಾದ ನಾಲ್ಕು ದೊಡ್ಡ ಬಟ್ಟುಗಳಿದ್ದುವು. ರೆಕ್ಕೆಗಳ ಮೇಲೆ ಅಲ್ಲಲ್ಲಿ ಕೆಂಪುಬಣ್ಣದ ಗೆರೆಗಳಿದ್ದುವು.

21—3—08.

ಮೇಲಿನ ಅಂಶಗಳಿಂದ ಪ್ರಕೃತಿವಿಮರ್ಶೆಯು ಪಾಠವನ್ನು ನಡೆಸುವ ಕ್ರಮವು, ಈ ಪಾಠದಲ್ಲಿ ಮಕ್ಕಳು ಮಾಡಬೇಕಾದ ಕೆಲಸಗಳು ಸ್ಪಷ್ಟಪಡುವವು.

M. V.

ವಿ ದ್ಯಾ ಭ್ಯಾ ಸ.

ಹೀಗೆ ಯಥಾರ್ಥವಾದ ಶಾಸ್ತ್ರಜ್ಞಾನವು ಈಶ್ವರನಲ್ಲಿ ಪರಮಭಕ್ತಿಯನ್ನುಂಟು ಮಾಡುವುದು. ಏಕರೀತಿಯಾದ ಸಂದರ್ಭಗಳಲ್ಲಿ ವಸ್ತುಗಳು ಏಕರೀತಿಯೂದ ಪರಿಣಾಮಗಳನ್ನು ತೋರಿಸುವುವೆಂಬುದೂ ಶಾಸ್ತ್ರದಿಂದ ಗೊತ್ತಾಗುವುದು. ಅಂಥಾ ಪರಿಣಾಮಗಳಲ್ಲಿ ಶಾಸ್ತ್ರಜ್ಞನಿಗೆ ದೃಢವಾದನಂಬಿಕೆಯೂ ಹುಟ್ಟುವುದು. ಪರಿಣಾಮುಗಳ ಸಂಬಂಧಗಳು ಏಕರೀತಿಯಾಗಿರುವುವೆಂದೂ ಬೇರೆಬೇರೆ ಕಾರಣಗಳು ಬೇರೆ ಬೇರೆ ಫಲಗಳನ್ನು ಏಕರೀತಿಯಲ್ಲಿಯೇ ಉಂಟುಮಾಡುವುವೆಂದೂ ಕಾರ್ಯಗಳಿಗೆ ತಕ್ಕಂತೆ ಒಳ್ಳೆಯಫಲಗಳಾಗಲೀ ಕೆಟ್ಟಫಲಗಳಾಗಲೀ ಅವಶ್ಯಕವಾಗಿ ಪ್ರಾಪ್ತವಾಗುವುವೆಂದೂ ಅತನು ಸ್ವಾನುಭವದಿಂದ ಚೆನ್ನಾಗಿ ಗೊತ್ತುಮಾಡಿಕೊಂಡಿರುವನು. ಶಿಕ್ಷಣರಕ್ಷಣಗಳ ಕಾರಣಗಳಸ್ವರೂಪಗಳನ್ನು ಸಾಮಾನ್ಯಜನರು ಅರಿಯಲಾರರು. ಶಾಸ್ತ್ರಜ್ಞನಾದರೋ ಅವನ್ನು ಚೆನ್ನಾಗಿಬಲ್ಲನು.

ಈಶ್ವರನನಿಯಮಗಳು ನಿತ್ಯವಾದುವೆಂದೂ ಅವು ಬದಲಾಯಿಸಲ್ಪಡತಕ್ಕುವಲ್ಲವೆಂದೂ ಪ್ರಾಣಿಗಳಿಗೆ ಕ್ಷೇಮಕರವಾದುವೆಂದೂ ಅವುಗಳಿಗನುಸಾರವಾಗಿ ನಡೆದರೆ ಸುಖವೂ ಸದ್ಗತಿಯೂ ದೊರಕುವುವೆಂದೂ ಅವುಗಳನ್ನುಲ್ಲಂಘಿಸಿದರೆ ದುಃಖವೂ ದುರ್ಗತಿಯೂ ಪ್ರಾಪ್ತವಾಗದೆ ಇರಲಾರವೆಂದೂ ಶಾಸ್ತ್ರಜ್ಞನು ದೃಢವಾಗಿನಂಬಿರುವನು. ಆದಪ್ರಯುಕ್ತ ಅತನು ಅವುಗಳಿಗೆ ವಿಧೇಯನಾಗಿರುವುದಲ್ಲದೆ ಅವುಗಳಿಗೆ

ವಿಧೇಯರಾಗಿರಬೇಕೆಂದು ಇತರರಿಗೂ ಬೊಧಿಸುವನು. ಅವುಗಳನ್ನು ಉಲ್ಲಂಘಿಸಿದರೆ ಸಹಿಸನು. ಹೀಗೆ ತಾನುಮಾಡುವಕಾರ್ಯಗಳಿಂದಲೂ ಉಪದೇಶಗಳಿಂದಲೂ ಆಚರಣೆಗಳಿಂದಲೂ ಶಾಸ್ತ್ರಜ್ಞನು ಈಶ್ವರನಲ್ಲಿ ತನಗಿರುವ ದೃಢಭಕ್ತಿಯನ್ನು ಪ್ರಕಾಶಪಡಿಸುತ್ತಿರುವನು.

ನಾವುಯಾರು ಎಂಬುದನ್ನೂ ನಮಗೂ ಈಶ್ವರನಿಗೂ ಇರುವ ಸಬಂಧವನ್ನೂ ಶಾಸ್ತ್ರದವಿನಾ ಇನ್ನಾವುದೂ ನಮಗೆ ಯಥಾರ್ಥವಾಗಿ ಬೋಧಿಸಲಾರದು. ನಾವು ತತ್ವಗಳನ್ನು ಎಷ್ಟರಮಟ್ಟಿಗೆತಿಳಿಯಲು ಅರ್ಹರೋ ಅಷ್ಟರಮಟ್ಟಿಗೆ ಅದನ್ನು ನಮಗೆ ತಿಳಿಸುವುದಲ್ಲದೆ ನಮ್ಮವಿಜ್ಞಾನಕ್ಕೆ ಹದ್ದುಗಳು ಇಷ್ಟೆಂಬುದನ್ನೂ ಗೊತ್ತುಮಾಡಿಕೊಡುವುದು. ಶಾಸ್ತ್ರವು ವಿಚಾರವಿಲ್ಲದೆ ಯಾವಸಿದ್ಧಾಂತವನ್ನೂ ಮಾಡುವುದಿಲ್ಲ. ಎಲ್ಲಾವಿಷಯಗಳಲ್ಲಿಯೂ ಚೆನ್ನಾಗಿ ವಿಚಾರಮಾಡಿ ಮನುಷ್ಯರತಿಳವಳಿಕೆಯು ಇಷ್ಟರಮಟ್ಟಿಗೆವ್ಯಾಪಿಸಬಹುದು, ಅದರಹದ್ದುಗಳು ಇಷ್ಟು, ಅವುಗಳನ್ನುಮೀರಿ ಅದುವ್ಯಾಪಿಸಲಾರದು ಎಂಬುದನ್ನು ವಿಶದವಾಗಿ ತೋರಿಸಿಕೊಡುವುದು. ಮನುಷ್ಯರಬುದ್ಧಿಯು ಅತ್ಯಲ್ಪವಾದದ್ದು, ಅದಕ್ಕೆ ಗೋಚರವಾಗದ ಅತೀಂದ್ರಿಯವಿಷಯಗಳು ಎಷ್ಟೋ ಇರುವುವೆಂಬುದನ್ನೂ ಪ್ರಕಟಮಾಡುವುದು.

ಶಾಸ್ತ್ರಜ್ಞನು ಮಾನುಷಕೃತವಾದ ಪುರಾತನ ಪುರಾಣ ಸ್ಮೃತ್ಯಾದಿ ಗ್ರಂಥಗಳನ್ನು ವಿಚಾರವಿಲ್ಲದೆ ಪ್ರಮಾಣವಾಗಿ ಒಪ್ಪುವುದಿಲ್ಲ. ಅವುಗಳಲ್ಲಿ ಹೇಳಲ್ಪಟ್ಟ ವಿಷಯಗಳು ಅನುಭವಕ್ಕಾಗಲೀ ಯುಕ್ತಿಗಾಗಲೀ ಸಮರ್ಪಕವಾಗಿ ತೋರಿಬಂದರೆ ಆಗ ಅವುಗಳನ್ನು ಒಪ್ಪಿಕೊಳ್ಳುವನು. ಪ್ರಕೃತಿಯಾಗಿಯೂ ಜೀವರೂಪವಾಗಿಯೂ ಮನೋರೂಪವಾಗಿಯೂ ಯಾವ ಸಾರ್ವತ್ರಿಕವಾದ ಶಕ್ತಿಯು ಕಾಣಿಸಿಕೊಳ್ಳುವುದೋ ಅಂಥಾ ಶಕ್ತಿಯ ಸ್ವರೂಪವನ್ನು ತಿಳಿಯುವುದು ಮನುಷ್ಯರಿಂದ ಸಾಧ್ಯವಿಲ್ಲವೆಂಬುದನ್ನು ಶಾಸ್ತ್ರಾಭ್ಯಾಸಿಯು ಚೆನ್ನಾಗಿ ಬಲ್ಲನು. ಹೀಗಿರುವುದರಿಂದ ಶಾಸ್ತ್ರವು ಬುದ್ಧಿಮಾರ್ಗದರ್ಶನಕ್ಕೂ ಶಿಕ್ಷಣಕ್ಕೂ ಅತ್ಯಂತ ಪ್ರಯೋಜನಕರವಾಗಿರುವುದೆಂಬುದು ಸ್ಪಷ್ಟವಾಗುವುದು. ಒರೀ ಶಬ್ದಗಳ ಅರ್ಥಗಳನ್ನು ಕಲಿಯುವುದಕ್ಕಿಂತಲೂ ವಸ್ತುಗಳ ಸ್ವರೂಪುಗಳನ್ನು ಯಥಾರ್ಥವಾಗಿ ತಿಳಿದುಕೊಳ್ಳುವುದು ಹೆಚ್ಚು ಪ್ರಯೋಜನವಾಗಿರುವುದು. ಬುದ್ಧಿ ಸದಾಚಾರ ಈಶ್ವರಭಕ್ತಿ ಇವುಗಳ ವ್ಯವಸಾ

ಯಕ್ಕೆ ಶಾಸ್ತ್ರಾಭ್ಯಾಸವು ತುಂಬಾ ಸಹಾಯಮಾಡುವುದು. ಬರೀ ವ್ಯಾಕರಣ ನಿಘಂಟುಗಳ ವ್ಯಾಸಂಗದಿಂದ ಬುಧ್ಯಾದಿಗಳ ವ್ಯವಸಾಯಕ್ಕೆ ಪ್ರಯೋಜನವು ಕಡಿಮೆ ಎಂಬುದು ಮೇಲಿನವಿಚಾರದಿಂದ ವ್ಯಕ್ತಪಡುವುದು.

ಇದುವರೆಗೂ ಮಾಡಿದ ವಿಚಾರದಿಂದ, ನಾವು ಆದಿಯಲ್ಲಿ ಕೇಳಿದ, ಯಾವ ವಿಜ್ಞಾನವು ಅತ್ಯಂತ ಪ್ರಯೋಜನವಾದುದು? ಎಂಬ ಪ್ರಶ್ನೆಗೆ ಈಗ ಉತ್ತರವು ಸಿಕ್ಕಿರುವುದು. ಶಾಸ್ತ್ರಜ್ಞಾನವೇ ಅತ್ಯಂತಪ್ರಯೋಜನವಾದುದು ಎಂದು ಆ ಪ್ರಶ್ನೆಗೆ ಉತ್ತರಹೇಳಬೇಕು. ಸರ್ವಪ್ರಕಾರಗಳಿಂದಲೂ ಶಾಸ್ತ್ರಜ್ಞಾನವು ಉಪಯುಕ್ತವಾಗಿರುವುದು. ಅವ್ಯವಹಿತವಾದ ಆತ್ಮರಕ್ಷಣೆಗೆ ಎಂದರೆ ಜೀವವನ್ನೂ ಆರೋಗ್ಯವನ್ನೂ ಕಾಪಾಡಿಕೊಳ್ಳಲಿಕ್ಕೆ ಅದು ಬಹಳ ಆವಶ್ಯಕವಾಗಿರುವುದು. ವ್ಯವಹಿತವಾದ ಆತ್ಮರಕ್ಷಣೆಗೆ ಎಂದರೆ ಜೀವಿಕೆಯನ್ನು ಸಂಪಾದಿಸಲಿಕ್ಕೂ ಅದು ಅತ್ಯಂತ ಪ್ರಯೋಜನವಾಗಿರುವು. ಹಾಗೆಯೇ ತಾಯಿತಂದೆಗಳು ಮಾಡಬೇಕಾದ ಮಕ್ಕಳ ಪೋಷಣೆಗೂ ಪೌರರು ಮಾಡಬೇಕಾದ ಕಾರ್ಯಗಳಿಗೂ ಶಾಸ್ತ್ರಜ್ಞಾನವು ಆವಶ್ಯಕವಾಗಿರುವುದು.

ಸಂಗೀತ ಸಾಹಿತ್ಯಾದಿ ಕುಶಲಕಲೆಗಳಿಗೂ ನಾಜೂಕು ಕೆಲಸಗಳಿಗೂ, ಶಾಸ್ತ್ರದ ಸಹಾಯವು ಬೇಕು. ಹಾಗೆಯೇ ಬುದ್ಧಿ ನೀತಿ ದೇವಭಕ್ತಿಗಳ ವ್ಯವಸಾಯಕ್ಕೂ ಶಾಸ್ತ್ರದ ಸಹಾಯವು ಆವಶ್ಯಕವಾಗಿರುವುದು. ಈರೀತಿಯಾಗಿ ಮೇಲಿನ ವಿಚಾರದಿಂದ, ಮನುಷ್ಯರು ಮಾಡಬೇಕಾದ ಎಲ್ಲಾ ಕಾರ್ಯಗಳಿಗೂ ಶಾಸ್ತ್ರಜ್ಞಾನವು ಬಹಳಪ್ರಯೋಜನವಾದುದೆಂದು ವ್ಯಕ್ತವಾಗುವುದು. ಶಾಸ್ತ್ರವು ನಿತ್ಯತತ್ವಗಳನ್ನು ಕುರಿತು ತಿಳಿಸುವುದಾದ ಪ್ರಯುಕ್ತ ಅದಕ್ಕೆ ಸಹಜವಾದ ಶಾಶ್ವತವಾದ ಬೆಲೆಯಿರುವುದೇ ಹೊರತು ತಾತ್ಕಾಲಿಕವಾದ ಸಾಂಕೇತಿಕವಾದ ಬೆಲೆಯಿಲ್ಲ. ಜನರಿಗೆ ಶಾಸ್ತ್ರಜ್ಞಾನವು ಯಾವಾಗಲೂ ಬೇಕಾಗಿರುವುದು. ಪೂರ್ವದಲ್ಲಿ ಅದು ಬೇಕಾಗಿದ್ದಿತು, ಈಗಲೂ ಅದು ಬೇಕಾಗಿರುವುದು. ಇನ್ನುಮೇಲೆಯೂ ಬೇಕಾಗುವುದು. ಮುಖ್ಯವಾಗಿ ಮನುಷ್ಯರು ಜೀವಶಾಸ್ತ್ರವನ್ನು ತಿಳಿಯಬೇಕು. ಎಂದರೆ ದೇಹ ಮನಸ್ಸು ಸಂಘ ಇವುಗಳ ವಿಷಯವನ್ನು ತಿಳಿಯತಕ್ಕುದು. ಮಿಕ್ಕ ಶಾಸ್ತ್ರಗಳೆಲ್ಲಾ ಜೀವಶಾಸ್ತ್ರಕ್ಕೆ ನಿರ್ವಚನರೂಪವಾಗಿರುವುವು.

ವಿಧೇಯರಾಗಿರಬೇಕೆಂದು ಇತರರಿಗೂ ಬೊಧಿಸುವನು. ಅವುಗಳನ್ನು ಉಲ್ಲಂಘಿಸಿದರೆ ಸಹಿಸನು. ಹೀಗೆ ತಾನುಮಾಡುವಕಾರ್ಯಗಳಿಂದಲೂ ಉಪದೇಶಗಳಿಂದಲೂ ಆಚರಣೆಗಳಿಂದಲೂ ಶಾಸ್ತ್ರಜ್ಞನು ಈಶ್ವರನಲ್ಲಿ ತನಗಿರುವ ದೃಢಭಕ್ತಿಯನ್ನು ಪ್ರಕಾಶಪಡಿಸುತ್ತಿರುವನು.

ನಾವ್ಯಾರು ಎಂಬುದನ್ನೂ ನಮಗೂ ಈಶ್ವರನಿಗೂ ಇರುವ ಸಬಂಧವನ್ನೂ ಶಾಸ್ತ್ರದವಿನಾ ಇನ್ನಾವುದೂ ನಮಗೆ ಯಥಾರ್ಥವಾಗಿ ಬೋಧಿಸಲಾರದು. ನಾವು ತತ್ವಗಳನ್ನು ಎಷ್ಟರಮಟ್ಟಿಗೆತಿಳಿಯಲು ಅರ್ಹರೋ ಅಷ್ಟರಮಟ್ಟಿಗೆ ಅದನ್ನು ನಮಗೆ ತಿಳಿಸುವುದಲ್ಲದೆ ನಮ್ಮವಿಜ್ಞಾನಕ್ಕೆ ಹದ್ದುಗಳು ಇಷ್ಟೆಂಬುದನ್ನೂ ಗೊತ್ತುಮಾಡಿಕೊಡುವುದು. ಶಾಸ್ತ್ರವು ವಿಚಾರವಿಲ್ಲದೆ ಯಾವಸಿದ್ಧಾಂತವನ್ನೂ ಮಾಡುವುದಿಲ್ಲ. ಎಲ್ಲಾವಿಷಯಗಳಲ್ಲಿಯೂ ಚೆನ್ನಾಗಿ ವಿಚಾರಮಾಡಿ ಮನುಷ್ಯರತಿಳವಳಿಕೆಯು ಇಷ್ಟರಮಟ್ಟಿಗೆವ್ಯಾಪಿಸಬಹುದು, ಅದರಹದ್ದುಗಳು ಇಷ್ಟು, ಅವುಗಳನ್ನುಮೀರಿ ಅದುವ್ಯಾಪಿಸಲಾರದು ಎಂಬುದನ್ನು ವಿಶದವಾಗಿ ತೋರಿಸಿಕೊಡುವುದು. ಮನುಷ್ಯರಬುದ್ಧಿಯು ಅತ್ಯಲ್ಪವಾದದ್ದು, ಅದಕ್ಕೆ ಗೋಚರವಾಗದ ಅತೀಂದ್ರಿಯವಿಷಯಗಳು ಎಷ್ಟೋ ಇರುವುವೆಂಬುದನ್ನೂ ಪ್ರಕಟಮಾಡುವುದು.

ಶಾಸ್ತ್ರಜ್ಞನು ಮಾನುಷಕೃತವಾದ ಪುರಾತನ ಪುರಾಣ ಸ್ಮೃತ್ಯಾದಿ ಗ್ರಂಥಗಳನ್ನು ವಿಚಾರವಿಲ್ಲದೆ ಪ್ರಮಾಣವಾಗಿ ಒಪ್ಪುವುದಿಲ್ಲ. ಅವುಗಳಲ್ಲಿ ಹೇಳಲ್ಪಟ್ಟ ವಿಷಯಗಳು ಅನುಭವಕ್ಕಾಗಲೀ ಯುಕ್ತಿಗಾಗಲೀ ಸಮರ್ಪಕವಾಗಿ ತೋರಿಬಂದರೆ ಆಗ ಅವುಗಳನ್ನು ಒಪ್ಪಿಕೊಳ್ಳುವನು. ಪ್ರಕೃತಿಯಾಗಿಯೂ ಜೀವರೂಪವಾಗಿಯೂ ಮನೋರೂಪವಾಗಿಯೂ ಯಾವ ಸಾರ್ವತ್ರಿಕವಾದ ಶಕ್ತಿಯು ಕಾಣಿಸಿಕೊಳ್ಳುವುದೋ ಅಂಥಾ ಶಕ್ತಿಯ ಸ್ವರೂಪವನ್ನು ತಿಳಿಯುವುದು ಮನುಷ್ಯರಿಂದ ಸಾಧ್ಯವಿಲ್ಲವೆಂಬುದನ್ನು ಶಾಸ್ತ್ರಾಭ್ಯಾಸಿಯು ಚೆನ್ನಾಗಿ ಬಲ್ಲನು. ಹೀಗಿರುವುದರಿಂದ ಶಾಸ್ತ್ರವು ಬುದ್ಧಿಮಾರ್ಗದರ್ಶನಕ್ಕೂ ಶಿಕ್ಷಣಕ್ಕೂ ಅತ್ಯಂತ ಪ್ರಯೋಜನಕರವಾಗಿರುವುದೆಂಬುದು ಸ್ಪಷ್ಟವಾಗುವುದು. ಒರೀ ಶಬ್ದಗಳ ಅರ್ಥಗಳನ್ನು ತಿಳಿಯುವುದಕ್ಕಿಂತಲೂ ವಸ್ತುಗಳ ಸ್ವರೂಪುಗಳನ್ನು ಯಥಾರ್ಥವಾಗಿ ತಿಳಿದುಕೊಳ್ಳುವುದು ಹೆಚ್ಚು ಪ್ರಯೋಜನವಾಗಿರುವುದು. ಬುದ್ಧಿ ಸದಾಚಾರ ಈಶ್ವರಭಕ್ತಿ ಇವುಗಳ ವ್ಯವಸಾ

ಯಕ್ಕೆ ಶಾಸ್ತ್ರಾಭ್ಯಾಸವು ತುಂಬಾ ಸಹಾಯಮಾಡುವುದು. ಬರೀ ವ್ಯಾಕರಣ ನಿಘಂಟುಗಳ ವ್ಯಾಸಂಗದಿಂದ ಬುದ್ಧ್ಯಾದಿಗಳ ವ್ಯವಸಾಯಕ್ಕೆ ಪ್ರಯೋಜನವು ಕಡಿಮೆ ಎಂಬುದು ಮೇಲಿನವಿಚಾರದಿಂದ ವ್ಯಕ್ತಪಡುವುದು.

ಇದುವರೆಗೂ ಮಾಡಿದ ವಿಚಾರದಿಂದ, ನಾವು ಆದಿಯಲ್ಲಿ ಕೇಳಿದ, ಯಾವ ವಿಜ್ಞಾನವು ಅತ್ಯಂತ ಪ್ರಯೋಜನವಾದುದು? ಎಂಬ ಪ್ರಶ್ನೆಗೆ ಈಗ ಉತ್ತರವು ಸಿಕ್ಕಿರುವುದು. ಶಾಸ್ತ್ರಜ್ಞಾನವೇ ಅತ್ಯಂತಪ್ರಯೋಜನವಾದುದು ಎಂದು ಆ ಪ್ರಶ್ನೆಗೆ ಉತ್ತರಹೇಳಬೇಕು. ಸರ್ವಪ್ರಕಾರಗಳಿಂದಲೂ ಶಾಸ್ತ್ರಜ್ಞಾನವು ಉಪಯುಕ್ತವಾಗಿರುವುದು. ಅವ್ಯವಹಿತವಾದ ಆತ್ಮರಕ್ಷಣೆಗೆ ಎಂದರೆ ಜೀವವನ್ನೂ ಆರೋಗ್ಯವನ್ನೂ ಕಾಪಾಡಿಕೊಳ್ಳಲಿಕ್ಕೆ ಅದು ಬಹಳ ಆವಶ್ಯಕವಾಗಿರುವುದು. ವ್ಯವಹಿತವಾದ ಆತ್ಮರಕ್ಷಣೆಗೆ ಎಂದರೆ ಜೀವಿಕೆಯನ್ನು ಸಂಪಾದಿಸಲಿಕ್ಕೂ ಅದು ಅತ್ಯಂತ ಪ್ರಯೋಜನವಾಗಿರುವು. ಹಾಗೆಯೇ ತಾಯಿತಂದೆಗಳು ಮಾಡಬೇಕಾದ ಮಕ್ಕಳ ಪೋಷಣೆಗೂ ಪೌರರು ಮಾಡಬೇಕಾದ ಕಾರ್ಯಗಳಿಗೂ ಶಾಸ್ತ್ರಜ್ಞಾನವು ಆವಶ್ಯಕವಾಗಿರುವುದು.

ಸಂಗೀತ ಸಾಹಿತ್ಯಾದಿ ಕುಶಲಕಲೆಗಳಿಗೂ ನಾಜೂಕು ಕೆಲಸಗಳಿಗೂ, ಶಾಸ್ತ್ರದ ಸಹಾಯವು ಬೇಕು. ಹಾಗೆಯೇ ಬುದ್ಧಿ ನೀತಿ ದೇವಭಕ್ತಿಗಳ ವ್ಯವಸಾಯಕ್ಕೂ ಶಾಸ್ತ್ರದ ಸಹಾಯವು ಆವಶ್ಯಕವಾಗಿರುವುದು. ಈರೀತಿಯಾಗಿ ಮೇಲಿನ ವಿಚಾರದಿಂದ, ಮನುಷ್ಯರು ಮಾಡಬೇಕಾದ ಎಲ್ಲಾ ಕಾರ್ಯಗಳಿಗೂ ಶಾಸ್ತ್ರಜ್ಞಾನವು ಬಹಳಪ್ರಯೋಜನವಾದುದೆಂದು ವ್ಯಕ್ತವಾಗುವುದು. ಶಾಸ್ತ್ರವು ನಿತ್ಯತತ್ವಗಳನ್ನು ಕುರಿತು ತಿಳಿಸುವುದಾದ ಪ್ರಯುಕ್ತ ಅದಕ್ಕೆ ಸಹಜವಾದ ಶಾಶ್ವತವಾದ ಬೆಲೆಯಿರುವುದೇ ಹೊರತು ತಾತ್ಕಾಲಿಕವಾದ ಸಾಂಕೇತಿಕವಾದ ಬೆಲೆಯಿಲ್ಲ. ಜನರಿಗೆ ಶಾಸ್ತ್ರಜ್ಞಾನವು ಯಾವಾಗಲೂ ಬೇಕಾಗಿರುವುದು. ಪೂರ್ವದಲ್ಲಿ ಅದು ಬೇಕಾಗಿದ್ದಿತು, ಈಗಲೂ ಅದು ಬೇಕಾಗಿರುವುದು. ಇನ್ನುಮೇಲೆಯೂ ಬೇಕಾಗುವುದು. ಮುಖ್ಯವಾಗಿ ಮನುಷ್ಯರು ಜೀವಶಾಸ್ತ್ರವನ್ನು ತಿಳಿಯಬೇಕು. ಎಂದರೆ ದೇಹ ಮನಸ್ಸು ಸಂಘ ಇವುಗಳ ವಿಷಯವನ್ನು ತಿಳಿಯತಕ್ಕುದು. ಮಿಕ್ಕ ಶಾಸ್ತ್ರಗಳೆಲ್ಲಾ ಜೀವಶಾಸ್ತ್ರಕ್ಕೆ ನಿರ್ವಚನರೂಪವಾಗಿರುವುವು.

ಹೀಗಿದ್ದಾಗ್ಗೂ ಕೂಡ, ಬಹುನಾಗರಿಕ ಕಾಲವೆಂದು ಹೇಳಿಕೊಳ್ಳುವ ಈಗಿನ ಕಾಲದಲ್ಲಿಯೂ ಶಾಸ ವ್ಯಾಸಂಗಕ್ಕೆ ಕೊಡಬೇಕಾದಷ್ಟು ಅವಧಾನವನ್ನು ಕೊಡದೆ ಇರುವುದು ಆಶ್ಚರ್ಯವಾಗಿದೆ. ನಾವು ಯಾವುದನ್ನು ನಾಗರಿಕತೆಯೆಂದು ಹೇಳುವುವೋ ಅದು ಶಾಸ್ತ್ರಸಹಾಯವಿಲ್ಲದೆ ಎಂದಿಗೂ ಉಂಟಾಗುತ್ತಿರಲಿಲ್ಲ. ಇಂಥಾ ಸಂದರ್ಭದಲ್ಲಿಯೂ ಕೂಡ ನಾಗರಿಕ ಶಿಕ್ಷಣವೆಂದು ಹೇಳಿಕೊಳ್ಳುವ ನಮ್ಮ ಈಗಿನ ಕಾಲದ ವಿದ್ಯಾವ್ಯಾಸಂಗದಲ್ಲಿ ಶಾಸ್ತ್ರವು ಉಪೇಕ್ಷಿಸಲ್ಪಟ್ಟಿರುವುದು. ಶಾಸ್ತ್ರದಿಂದ ಹೆಚ್ಚಾದ ಅಭಿವೃದ್ಧಿಯುಂಟಾಗಿರುವುದು ವ್ಯಕ್ತವಾಗಿದೆ. ಮೊದಲು ಒಂದು ಸಹಸ್ರ ಜನರಿಗೆ ಮಾತ್ರ ಜೀವನವು ಜರುಗುತ್ತಿದ್ದ ಕಡೆಯಲ್ಲಿ ಈಗ ನೂರುಸಹಸ್ರ ಜನರಿಗೆ ಶಾಸ್ತ್ರದ ಸಹಾಯದಿಂದ ಧಾರಾಳವಾಗಿ ಜೀವನವು ನಡೆಯುತ್ತದೆ. ಆದರೆ ಯಾವ ಶಾಸ್ತ್ರಜ್ಞಾನವು ಹೀಗೆ ಜೀವಿಕೆಗೆ ಮಾರ್ಗಕೊಟ್ಟಿರುವುದೋ ಅದನ್ನು ಆ ನೂರುಸಾವಿರ ಜನರಲ್ಲಿ ಸಾವಿರಜನರೂಕೂಡ ಗಣನೆಗೆ ತರುವುದಿಲ್ಲ.

ವಸ್ತುಗಳ ಸ್ವರೂಪವಿಷಯದಲ್ಲಿಯೂ ಸಂಬಂಧದ ವಿಷಯದಲ್ಲಿಯೂ ಜನರಿಗೆ ಕ್ರಮೇಣ ಹೆಚ್ಚುಹೆಚ್ಚಾಗಿ ಉಂಟಾಗುತ್ತಿರುವ ಜ್ಞಾನವು ಮೊದಲೂ ಗುಡ್ಡಬೆಟ್ಟಗಳನ್ನು ಸುತ್ತುತ್ತಾ ಇದ್ದ ಕಾಡುಜಾತಿ ಜನರಿಗೆ ದೊಡ್ಡದೊಡ್ಡ ಜನಾಂಗಗಳಾಗಿ ಬೆಳೆಯಲು ಅವಕಾಶವನ್ನು ಕೊಟ್ಟಿರುವುದಲ್ಲದೆ, ಪೂರ್ವದ ಕಾಡುಜನರಿಂದ ಯೋಚಿಸಿ ತಿಳಿಯುವುದಕ್ಕೆ ಕೂಡ ಅಸಾಧ್ಯವಾದ ಸುಖಸಾಮಗ್ರಿಗಳನ್ನು ಈಗಿನವರಿಗೆ ವದಗಿಸಿರುವುದು. ಹೀಗಿದ್ದಾಗ್ಗೂ ನಮ್ಮ ಈಗಿನ ಪಾಠಶಾಲೆಗಳಲ್ಲಿ ಇಂಥಾ ಶಾಸ್ತ್ರಜ್ಞಾನಕ್ಕೆ ಉಚಿತವಾದ ಅತ್ಯಂತ ಶ್ರೇಷ್ಠಸ್ಥಾನವನ್ನು ಕೊಡದೆ ಅದನ್ನು ಮೂಲೆಗೆ ಹಾಕಿರುವರು. ಮೂಢಭಕ್ತಿಯು ಬಂಧದಿಂದ ಜನರನ್ನು ವಿಮೋಚನಮಾಡಲು ಶಾಸ್ತ್ರಜಾನದ ಹೊರತು ಮತ್ತಾವುದಕ್ಕೂ ಸಾಮರ್ಥ್ಯವಿಲ್ಲ. ಹೀಗೆ ಸಕಲ ವಿಧಗಳಿಂದಲೂ ಜನರಿಗೆ ಮಹಾಪ್ರಯೋಜನವನ್ನುಂಟುಮಾಡುವ ಶಾಸ್ತ್ರವನ್ನು ಸರ್ವರೂ ಸನ್ಮಾನಿಸುತ್ತಾ ಬಂದರೆ ಕ್ರಮೇಣ ಸರ್ವರಿಗೂ ವಿಶೇಷ ಲಾಭಗಳು ದೊರಕುವುದರಲ್ಲಿ ಸಂದೇಹವಿಲ್ಲ.

(ಸಶೇಷ). S. V.

ಜಪಾನ್ ದೇಶೀಯರ ವಿದ್ಯಾಭ್ಯಾಸ ಕ್ರಮ.

ಜಪಾನ್ ದೇಶದ ವಿದ್ಯಾಭ್ಯಾಸ ಕ್ರಮವು ಆಶ್ಚರ್ಯಕರವಾಗಿರುವುದು. ಎಲ್ಲಾ ದೇಶೀಯರಿಗೂ ಇದು ಅನುಸರಣೆಗೆ ಹೋಗಿರುವುದು. ಎಲ್ಲಾ ಪಾಠಶಾಲೆಗಳಲ್ಲಿಯೂ ವಿದ್ಯಾರ್ಥಿಗಳ ತಿಳುವಳಿಕೆಗೋಸ್ಕರ ಚಕ್ರವರ್ತಿಗಳಿಂದ ಕೊಡಲ್ಪಟ್ಟ ಹಿತೋಪದೇಶ ಪೂರ್ವಕವಾದ ಒಂದು ಹುಕ್ಕುಂ ಮುದ್ರಿಸಲ್ಪಟ್ಟು ಚೌಕಟ್ಟಿನಲ್ಲಿ ಹಾಕಲ್ಪಟ್ಟು ಪ್ರತಿಯೊಂದು ಸ್ಕೂಲಿನಲ್ಲಿಯೂ ತಗಲುಹಾಕಲ್ಪಟ್ಟಿರುವುದು. ಅದರ ಮುಖ್ಯ ತಾತ್ಪರ್ಯವೇನೆಂದರೆ? ನಮ್ಮ ಹಿರಿಯರು ಈ ನಮ್ಮ ಚಕ್ರಾಧಿಪತ್ಯವನ್ನು ಸ್ಥಾಪಿಸುವಾಗ್ಯೆ ಧರ್ಮವು ಇದಕ್ಕೆ ಹಸ್ತಿಭಾರವಾಗಿರುವಹಾಗೆ ಮಾಡಿದರು. ಈ ಚಕ್ರಾಧಿಪತ್ಯವು ಶಾಶ್ವತವಾಗಿ ಸಕಲ ಜನಗಳಿಗೂ ಅವರವರ ಇಷ್ಟಾರ್ಥವನ್ನು ಕೊಡುವುದಕ್ಕೋಸ್ಕರ ಕೆಲವು ಏರ್ಪಾಡುಗಳು ಮಾಡಲ್ಪಟ್ಟಿವೆ. ಈ ಏರ್ಪಾಡುಗಳಂತೆ ಪ್ರಜೆಗಳು ನಡೆಯುವವರೆಗೂ ದೇಶಕ್ಕೆ ಯಾವಚ್ಯುತಿಯೂ ಒರುವುದಿಲ್ಲ ವೆಂಬುದು ನಿಷ್ಕರ್ಷಿಸಲ್ಪಟ್ಟಿದೆ. ಈ ಹಿತೋಪದೇಶಗಳು ಯಾವುವೆಂದರೆ: ಪ್ರಭುಗಳು ಪ್ರಜೆಗಳನ್ನು ಧರ್ಮದಿಂದ ಕಾಪಾಡಬೇಕು. ಧರ್ಮಕ್ಕೆ ಹಾನಿಬಾರದಂತೆ ಸೋಡ್ಡಿ ಕೊಳ್ಳುವುದರಲ್ಲಿ ಬಹಳ ಜಾಗರೂಕರಾಗಿರಬೇಕು. ಪ್ರಭುಗಳ ವಿಷಯದಲ್ಲಿ ಪ್ರಜೆಗಳಿಗೆ ಅಕೃತ್ರಿಮವಾದ ಪ್ರೀತಿಯೂ ಇರಬೇಕು. ಸಮಸ್ತ ಜನಗಳೂ ಮಾತಾ ಪಿತೃಗಳಲ್ಲಿ ಭಕ್ತಿಯುಳ್ಳವರಾಗಿರಬೇಕು. ಸಹೋದರರಲ್ಲಿಯೂ ಸಹೋದರಿಯರಲ್ಲಿಯೂ ಸ್ನೇಹವೂ ಇರಬೇಕು. ಎಲ್ಲಾ ಜನಗಳೂ ಪರಸ್ಪರ ಮೈತ್ರಿಯುಳ್ಳವರಾಗಿರಬೇಕು. ವಿದ್ಯಕ್ಕೆ ವಿನಯವೇ ಭೂಷಣವಾದುದರಿಂದ ಎಲ್ಲರೂ ನಿಗರ್ವಶಿರೋಮಣಿಗಳಾಗಿರಬೇಕು. ಯಾವಕೆಲಸದಲ್ಲಿಯೂ ಮಿತಿಮೀರಿ ನಡೆಯಬಾರದು. ಸರ್ವರಿಗೂ ಕೈಲಾದ ಮಟ್ಟಿಗೂ ಉಪಕಾರವನ್ನು ಮಾಡುತ್ತಾ ಬರಬೇಕು. ವಿದ್ಯೆಯಲ್ಲಿ ಹೇಗೋ ಹಾಗೆ ಕಲೆಗಳಲ್ಲಿಯೂ ಪರಿಶ್ರಮವುಳ್ಳವರಾಗಿರಬೇಕು. ಪಾಂಡಿತ್ಯದ ಜೊತೆಗೆ ಧರ್ಮದಲ್ಲಿ ಆಸಕ್ತಿಯನ್ನು ಸಂಪಾದಿಸಿಕೊಳ್ಳಬೇಕು. ರಾಷ್ಟ್ರದ ಮಹಾಜನಗಳಿಗೆ ಪ್ರಯೋಜನವಾದ ಕೆಲಸಗಳನ್ನು ಮಾಡುತ್ತಾ ಒರಬೇಕು. ರಾಜ್ಯಭಾರದ ಕಾನೂನುಗಳಿಗೆ ವಿಧೇಯರಾಗಿರಬೇಕು. ಪರದೇಶೀಯರಿಂದ ದೇಶಕ್ಕೆ ಹಾನಿಯುಂಟಾಗುವ ಸಂದರ್ಭದಲ್ಲಿ ಶತ್ರುಗಳ ಮೇಲೆ ಯುದ್ಧಮಾಡುವುದಕ್ಕೂ ಸಿದ್ಧರಾಗಿರಬೇಕು. ಈ ಬಾಬುಗಳೆಲ್ಲಾ ನಿಮ್ಮ ಹಿರಿಯರು ಹೊಕಿರತಕ್ಕ ಮೇಲ್ಪ

ಜ್ಞೆಯನ್ನು ಸ್ವಲ್ಪವೂ ವಿಚಾರದೆ ನಡೆದುಕೊಳ್ಳುತ್ತಾ ಬಂದಹೊರತು ನಮ್ಮ ದೇಶಕ್ಕೆ ಕ್ಷೇಮವುಂಟಾಗುವುದಿಲ್ಲ. ವಿದ್ಯಾರ್ಥಿಗಳಾದವರು ಚಕ್ಕತನದಿಂದ ಇದನ್ನು ಅನುಷ್ಠಾನಕ್ಕೆ ತರುತ್ತಾ ಬರಬೇಕು. ಹೀಗೆಮಾಡಿದರೆ ದೊಡ್ಡವರಾದಮೇಲೆ ವಿದ್ಯಾರ್ಥಿಗಳು ತಮ್ಮ ಕೆಲಸಗಳನ್ನು ಸಮಗ್ರವಾಗಿ ಮಾಡಿ ದೇಶಹಿತವನ್ನು ಆಚರಿಸುವುದಕ್ಕೆ ಶಕ್ತರಾಗುವರು. ಇಂಥಾ ಶಕ್ತಿಯು ನಿಮಗೆ ಉಂಟಾಗಲೆಂದು ಕೋರುತ್ತೇನೆ. ಇದೇ ಎಲ್ಲಾ ಪಾಠಶಾಲೆಗಳ ವಿದ್ಯಾರ್ಥಿಗಳಿಗೂ ಜಪಾನ್ ದೇಶದ ಚಕ್ರವರ್ತಿಗಳಿಂದ ಕೊಡಲ್ಪಟ್ಟಿರುವ ಆಜ್ಞೆಯು. ಇದು ವೇದವಾಕ್ಯೆಂದು ಆ ದೇಶೀಯರೆಲ್ಲರೂ ಆಚರಿಸುತ್ತಾರೆ. ಈಗ ಹೀಗೆ ಆಚರಿಸುವುದರಿಂದಲೇ ಆ ದೇಶವು ಅತ್ಯುನ್ನತ ಸ್ಥಿತಿಗೆ ಬಂದಿರುವುದು. ನಮ್ಮ ಭರತಖಂಡದ ವಿದ್ಯಾರ್ಥಿಗಳೂ ಕೂಡ ಈ ಹಿತೋಪದೇಶದ ತತ್ವವನ್ನು ಆಚರಣೆಗೆ ತಂದುಕೊಳ್ಳುವುದು ಅವಶ್ಯಕ.

ಪಾಠಕರೂ ಮತ್ತು ವಿದ್ಯಾರ್ಥಿಗಳು.

ತಂದೆತಾಯಿಗಳು ವಿದ್ಯಾರ್ಥಿಗಳ ಜನ್ಮಕ್ಕೆ ಮಾತ್ರ ಹೇತುಭೂತರಾಗುವರು. ಪಾಠಕರು ಜ್ಞಾನಕ್ಕೆ ಕಾರಣಭೂತರು. ಆದುದರಿಂದ ತಂದೆತಾಯಿಗಳಿಗಿಂತಲೂ ವಿದ್ಯಾರ್ಥಿಗಳಿಗೆ ವಿದ್ಯಾ ಗುರುಗಳಾದವರು ಹೆಚ್ಚುಗೌರವಕ್ಕೆ ಪಾತ್ರರೆಂದು ಎಣಿಸಲ್ಪಟ್ಟಿರುವರು. ನಮ್ಮ ಶಾಸ್ತ್ರಜ್ಞರು ಜನಗಳಿಗೆ ೨ ಜನ ತಂದೆಗಳೆಂದು ಹೇಳುವರ್ಮ್ಮ ಇವರಲ್ಲಿ ವಿದ್ಯಾಗುರು ಒಬ್ಬನಾಗಿರುವನು. ಅದು ಹ್ಯಾಗಾದರೂ ಇರಲಿ. ನಮ್ಮ ದೇಹದ ಅಭಿವೃದ್ಧಿಗೆ ತಂದೆತಾಯಿಗಳು ಹೇಗೆ ಕಾರಣಭೂತರೊ ಹಾಗೆ ವಿದ್ಯಾಗುರುಗಳು ನಮ್ಮ ಜ್ಞಾನಕ್ಕೆ ಕಾರಣಭೂತರಾಗಿರುವ್ದರಿಂದ ಇವರು ನಮ್ಮ ಗೌರವಕ್ಕೆ ವಿಶೇಷ ಪಾತ್ರರೆಂಬುದಕ್ಕೆ ಸಂದೇಹವೇನೂ ಇಲ್ಲ. ಪಾಠಕರಾದವರೆಲ್ಲರೂ ಇಂಥಾ ಗೌರವಕ್ಕೆ ಪಾತ್ರರೆಂದು ಹೇಳುವುದಕ್ಕಾಗುವ್ದಿಲ್ಲ. ಆದರೆ ಪಾಠಕರ ಕರ್ತವ್ಯವನ್ನು ಚನ್ನಾಗಿ ತಿಳಿದುಕೊಂಡು ಯಾರು ವಿದ್ಯಾರ್ಥಿಗಳಲ್ಲಿ ಪುತ್ರನಿರ್ವಿಶೇಷವಾದ ಪ್ರೀತಿಯಿಂದ ಅವರಿಗೆ ವಿದ್ಯಾವಿನಯ ಸಂಪತ್ತುಗಳನ್ನು ಉಂಟುಮಾಡುವುದರಲ್ಲಿ ಬದ್ಧಾದರರಾಗಿರುತ್ತಾರೊ ಅಂಥಾ ಪಾಠಕರೆಲ್ಲರೂ ಕೃತಾರ್ಥರು. ಅಪರ ವಿಷಯದಲ್ಲಿ ವಿದ್ಯಾರ್ಥಿಗಳು ಭಕ್ತಿ ವಿಶ್ವಾಸಗಳನ್ನು ತೊಂದಿ ನಡೆದುಕೊಳ್ಳುವುದು ಕರ್ತವ್ಯ. ಈ ಕರ್ತವ್ಯವನ್ನು ವಿದ್ಯಾರ್ಥಿಗಳೂ ಕೂಡ ನಡಿಸುವರು. ಪಾಠಕರಿಗೆ ವಿದ್ಯಾರ್ಥಿಗಳಲ್ಲಿ ಪ್ರೀತಿಯೂ ವಿದ್ಯಾರ್ಥಿಗಳಿಗೆ ಪಾಠಕರಲ್ಲಿ ಭಕ್ತಿಯೂ ಇದ್ದ ಹೊರತು ವಿದ್ಯಾರ್ಥಿಗಳಿಗೆ ಪ್ರಯೋಜನವೂ ಪಾಠಕರಿಗೆ

ಕೀರ್ತಿಯೂ ಬರುವುದಿಲ್ಲ. ಅನೇಕ ಜನ ಪಾಠಕರು ವಿದ್ಯಾರ್ಥಿಗಳ ಕೈಲಿ ಪಾಠಗಳನ್ನು ಘಟ್ಟಿಮಾಡಿಸಿದ ಮಾತ್ರದಿಂದಲೇ ತಮ್ಮ ಕರ್ತವ್ಯವು ಪೂರೈಸಿತೆಂದು ತಿಳಿದುಕೊಂಡಿರುವರು. ಇದು ತಪ್ಪು. ವಿದ್ಯೆ ಅಂದರೆ ಪರೀಕ್ಷೆಗಳನ್ನು ಕೊಡುವುದಕ್ಕೆ ನಿಯಮಿಸಲ್ಪಟ್ಟ ಗ್ರಂಥಪರಿಜಯವೆಂದು ಅನೇಕರು ತಿಳಿದುಕೊಂಡಿರುವರು. ಪರೀಕ್ಷೆಯನ್ನು ಕೊಟ್ಟಮಾತ್ರದಿಂದಲೆ ವಿದ್ಯಾರ್ಥಿಯು ವಿದ್ಯಾವಂತನೆನಿಸಿಕೊಳ್ಳುವುದಿಲ್ಲ. ವಿನಯಾದಿ ಸದ್ಗುಣಗಳೂ ಕೂಡ ವಿದ್ಯಾಭ್ಯಾಸಕ್ಕೆ ಸೇರಿರುವುದರಿಂದ ದುರ್ಗುಣಗಳನ್ನು ಬಿಟ್ಟು ಸದ್ಗುಣಗಳನ್ನು ಅನುಸರಿಸುವಂತೆ ಮಾಡುವುದೂ ಕೂಡ ಪಾಠಕರ ಕೆಲಸವಾಗಿರುವುದು. ಅನೇಕ ವಿದ್ಯಾರ್ಥಿಗಳು ಪಾಠಶಾಲೆಗೆ ಬರುವಾಗಲೆ ಅನೇಕ ದುರ್ವಿದ್ಯೆಗಳನ್ನು ಕಲಿತುಕೊಂಡು ಬರುವರು. ಪಾಠಕರಾದವರು ಆ ದುರ್ವಿದ್ಯೆಗಳನ್ನು ಮರಸಿ ಒಳ್ಳೆ ವಿದ್ಯೆಗಳನ್ನು ಕಲಿಸಬೇಕಾಗುವುದು. ವಿದ್ಯಾರ್ಥಿಗಳ ತಂದೆತಾಯಿಗಳೂ ಸಹವಾಸದಲ್ಲಿ ಇರತಕ್ಕ ಇತರ ಜನಗಳೂ ದುಷ್ಟರಾಗಿದ್ದರೆ ಅವರ ದುರ್ಗುಣಗಳು ಅಂಥಾ ವಿದ್ಯಾರ್ಥಿಗಳಿಗೆ ಅಪ್ರಯತ್ನಪೂರ್ವಕವಾಗಿ ಲಭ್ಯವಾಗುವುದು. ಇಂಥಾ ವಿದ್ಯಾರ್ಥಿಗಳಿಗೆ ಪಾಠವನ್ನು ಹೇಳುವುದು ಬಹಳ ಕಷ್ಟ. ಅವರು ಕಲಿತಿರುವ ದುರ್ವಿದ್ಯೆಗಳನ್ನು ಹೋಗಲಾಡಿಸಿ ಒಳ್ಳೆ ವಿದ್ಯೆಗಳನ್ನು ಕಲಿಸಿ ಗಂಥಾವಲೋಕನವನ್ನು ಮಾಡಿಸಿದ ಹೊರತು ವಿದ್ಯಾಭ್ಯಾಸದ ಪ್ರಯೋಜನವು ಅಂಥಾ ವಿದ್ಯಾರ್ಥಿಗಳಿಗೆ ಉಂಟಾಗುವುದಿಲ್ಲ. ಅನೇಕ ವಿದ್ಯಾರ್ಥಿಗಳು ಜನ್ಮತಃ ದುಷ್ಟರಾಗಿರುವರು. ಇಂಥವರನ್ನು ತಿದ್ದುವುದು ಸುಲಭವಲ್ಲ. ಆದರೆ ಪಾಠಕರಿಗೆ ಸಿಕ್ಕತಕ್ಕ ವಿದ್ಯಾರ್ಥಿಗಳೆಲ್ಲಾ ಹೀಗಿರುವುದಿಲ್ಲ. ಸತ್ಕುಲ ಪ್ರಸೂತರಾಗಿಯೂ ಒಳ್ಳೇ ಚರಿತ್ರೆಯುಳ್ಳ ವಂಶೋತ್ಪನ್ನರಾಗಿಯೂ ಇರತಕ್ಕವರು ಅನೇಕರು ಇರುವರು. ಇಂಥವರನ್ನು ವಿದ್ಯಾವಿನಯಸಂಪನ್ನರನ್ನಾಗಿ ಮಾಡುವುದು ಒಹಳ ಸುಲಭ. ವಿದ್ಯಾರ್ಥಿಗಳನ್ನು ಉದ್ಧರಿಸಬೇಕೆಂಬ ಅಭಿಲಾಷೆಯುಳ್ಳ ಪಾಠಕರು ಯಾವರೀತಿಯಲ್ಲಿ ಅವರಿಗೆ ಶಿಕ್ಷೆಯನ್ನು ಮಾಡಬೇಕೊ ಅದು ಪರ್ಯಾಲೋಚನೀಯವಾದುದು. ಬುದ್ಧಿಯ ವ್ಯಾಪಾರಗಳು ಸರಿಯಾಗಿ ನಡೆಯಬೇಕಾದರೆ ದೇಹದ ವ್ಯಾಪಾರಗಳು ಸರಿಯಾಗಿ ನಡೆಯಬೇಕು. ವಿದ್ಯಾರ್ಥಿಗಳು ಅರೋಗ ದೃಢಕಾಯರಾಗಿ ಇದ್ದ ಹೊರತು ವಿದ್ಯಾಭ್ಯಾಸವಾಗುವುದಿಲ್ಲ. ಆದುದರಿಂದ ವಿದ್ಯಾರ್ಥಿಗಳ ದೇಹಸ್ಥಿತಿಯು ಚನ್ನಾಗಿರುವಂತೆ ಮಾಡಬೇಕಾದುದು ಪಾಠಕರ ಪ್ರಥಮಕರ್ತವ್ಯವು. ಇದಕ್ಕೋಸ್ಕರ ವಿದ್ಯಾರ್ಥಿಗಳ ವ್ಯಾಯಾ

ಮಗಳನ್ನು ಕ್ರಮಪಡಿಸಿ ಬುದ್ಧಿ ವ್ಯಾಪಾರಗಳಿಗೆ ಸಹಕಾರಿಯಾಗಿರುವಂತೆ ದೇಹಸ್ಥಿತಿಯನ್ನು ಇಟ್ಟುಕೊಳ್ಳಬೇಕು. ವ್ಯಾಯಾಮಗಳಿಗೂ ವ್ಯಾಯಾಮ ರೂಪವಾದ ಆಟಗಳಿಗೂ ಅವಕಾಶವನ್ನು ಉಂಟುಮಾಡದೆ ಹೋದರೆ ಮೆದಳಿಗೆ ಶುದ್ಧವಾದ ರಕ್ತವು ದೊರೆಯದೆ ಹೋಗುವುದು. ಆದರಿಂದ ವ್ಯಾಸಂಗಮಾಡತಕ್ಕ ವಿಷಯಗಳು ಮನಸ್ಸಿಗೆ ಹತ್ತುವುದಿಲ್ಲ. ಇವು ಮನಸ್ಸಿಗೆ ಹತ್ತದೇ ಹೋದರೆ ಪಾಠಕರು ಮಾಡತಕ್ಕ ಕೃಷಿಯು ವ್ಯರ್ಥವಾಗುವುದು. ಹೀಗಾಗುವುದರಿಂದಲೇ ವ್ಯಾಸಂಗ ಮಾಡುವುದಕ್ಕೋಸ್ಕರ ಪ್ರಯತ್ನಮಾಡುವ ವಿದ್ಯಾರ್ಥಿಗಳಲ್ಲಿ ಕೆಲವರು ಪರೀಕ್ಷೆಗಳಲ್ಲಿ ತೇರ್ಗಡೆಯಾಗಿ ವೃದ್ಧಿಗೆ ಬರುವರು. ಉಳಿದವರು ಹಾಗೆ ವೃದ್ಧಿಗೆ ಬರುವ್ರದಕ್ಕಾಗುವುದಿಲ್ಲ.

ಪಾಠಕರ ಜೊತೆಗೆ ತಂದೆತಾಯಿಗಳೂ ಕೂಡ ಸಹಾಯಭೂತರಾದರೆ ವಿದ್ಯಾರ್ಥಿಗಳು ತೀಘ್ರದಲ್ಲಿ ತಿಳುವಳಿಕೆಯುಳ್ಳವರಾಗಿರುವರು. ಪಾಠಕರಾದವರು ವಿದ್ಯಾರ್ಥಿಗಳ ಸಹಪಾಠಿಗಳನ್ನು ಪರೀಕ್ಷಿಸಿ ಅವರಿಗೆ ಕೆಟ್ಟ ಸಹವಾಸವಿಲ್ಲದಂತೆ ಮಾಡುವುದು ಬಹಳ ಅವಶ್ಯಕ. ಹತ್ತು ಜನ ಒಳ್ಳೇ ಹುಡುಗರ ಗುಂಪಿಗೆ ಕೆಟ್ಟವನು ಒಬ್ಬನು ಸೇರಿದಾಗ್ಯೂ ಆ ಕೆಟ್ಟವನು ಬಹಳ ಸಮರ್ಥನಾಗಿದ್ದರೆ ಆ ಹತ್ತು ಜನಗಳೂ ಕೆಡುವಂತೆ ಮಾಡುವನು. ಆದುದರಿಂದ ಪಾಠಕರಾದವರು ಅತ್ಯಂತ ದುಷ್ಟರಾದವರ ಸಹವಾಸವನ್ನು ಚಿಕ್ಕ ಮಕ್ಕಳಿಗೆ ದೊರೆಯದಂತೆ ಮಾಡುವುದು ಅವಶ್ಯಕ. ವಿದ್ಯಾರ್ಥಿಗಳು ವಿನಯಾದಿ ಸದ್ಗುಣಗಳಿಂದ ವೃದ್ಧಿಗೆ ಬರುವಹಾಗೆ ವಿದ್ಯಾಬಲದಿಂದ ಮಾತ್ರವೇ ಬರುವುದು ಅಪೂರ್ವವಾದುದರಿಂದ ವಿದ್ಯಾರ್ಥಿಗಳು ಗುಣಾಢ್ಯರೆಂಬ ಹೆಸರು ವಾಸಿಯನ್ನು ಸಂಪಾದಿಸುವ್ರದಕ್ಕೆ ಯಾವಯಾವ ಪ್ರತಿಬಂಧಕಗಳು ಬರುವುವೋ ಅವುಗಳನ್ನೆಲ್ಲಾ ನಿವಾರಣೆ ಮಾಡುವುದು ಪಾಠಕರ ಮುಖ್ಯ ಕರ್ತವ್ಯವಾದುದರಿಂದ ಈ ವಿಷಯದಲ್ಲಿ ಅವರು ಜಾಗರೂಕರಾಗಿರಬೇಕು.

ವಿದ್ಯಾರ್ಥಿಗಳಿಗೆ ಸಾಮಾನ್ಯ ಧರ್ಮೋಪದೇಶಗಳನ್ನು ಮಾಡಿ ಅವರನ್ನು ಗುಣಾಢ್ಯರನ್ನಾಗಿ ಮಾಡುವುದು ಪಾಠಕರ ಕರ್ತವ್ಯವೆಂದು ಇಂಗ್ಲೀಷ್ ಉಪಾಧ್ಯಾಯರಲ್ಲಿ ಅಗ್ರಗಣ್ಯರಾದ ಡಾಕ್ಟರ್ ಆರ್‌ನಲ್ಡ್ ರವರು ಹೇಳಿದಾರೆ. ಪಾಠಶಾಲೆಗೆ ಬರತಕ್ಕ ವಿದ್ಯಾರ್ಥಿಗಳು ಪರಸ್ಪರ ಭೇದವುಳ್ಳ ಅನೇಕ ಮತಗಳಿಗೆ ಸೇರಿದವರು. ಇವರಿಗೆ ಮತಧರ್ಮಗಳನ್ನು ಹೇಳುವುದು ಹೇಗೆಂದು ಆಕ್ಷೇಪ ಒರುವುದರಿಂದ ನಾವು ಸಾಮಾನ್ಯ ಧರ್ಮಗಳೆಂದು ಹೇಳಿರುವೆವು. ಎಲ್ಲಾ ಮತಗಳಿಗೂ ಸಾಮಾನ್ಯ

ನ್ಯವಾದ ಧರ್ಮಗಳು ಅನೇಕವಾಗಿರುವುವು. ಇವುಗಳು ನಿರ್ದುಷ್ಟವಾದುವುಗಳೆಂ ಬುವದಕ್ಕೆ ಸಂದೇಹವೇ ಇಲ್ಲ. ಈಧರ್ಮಗಳೇ ನಿಜವಾದವುಗಳೆಂಬದಾ ಗಿಯೂ ಪರಸ್ಪರ ವಿರುದ್ಧವಾದ ಧರ್ಮಗಳು ದುಷ್ಟವಾಗಿದ್ದರೂ ಇರಬಹುದೆಂಬು ದಾಗಿಯೂ ಅನೇಕರು ತಾತ್ಪರ್ಯಪಡುವರು. ಆದುದರಿಂದ ಸಾಮಾನ್ಯ ಧರ್ಮಗ ಳನ್ನು ವಿದ್ಯಾರ್ಥಿಗಳಿಗೆ ಹೇಳಬಹುದೆಂದು ಈ ಪಾಠಕರ ತಾತ್ಪರ್ಯವೆಂದು ತೋರು ತ್ತದೆ. ವಿದ್ಯಾಭ್ಯಾಸದ ಮುಖ್ಯೋದ್ದೇಶವು ಇಹಪರಸಾಧನಗಳಾಗಿರುವುವು. ಅಂಥಾ ವಿದ್ಯಾಭ್ಯಾಸವು ಯಾವುದು? ಪರೀಕ್ಷೆಗಳನ್ನು ಕೊಡುವುದಕ್ಕೆ ಸಾಧಕ ವಾದ ಗ್ರಂಥಾವಲೋಕನವು ಮೊದಲನೆಯದು. ಪರೀಕ್ಷೆಗಳನ್ನು ಕೊಟ್ಟ ಮಾತ್ರದಿಂದಲೇ ಇಷ್ಟಾರ್ಥಪ್ರಾಪ್ತಿಯು ಆಗುವುದಿಲ್ಲ. ಮನುಷ್ಯನು ಒಳ್ಳೇ ನಡ ತೆಯುಳ್ಳವನೆಂಬದಾಗಿಯೂ ಪ್ರಾಮಾಣಿಕನೆಂಬುದಾಗಿಯೂ, ಧರ್ಮಿಷ್ಠ ನೆಂಬುದಾ ಗಿಯೂ, ವ್ಯವಹಾರಜ್ಞ ನೆಂಬುದಾಗಿಯೂ, ಪರೋಪಕಾರಿ ಎಂಬುದಾಗಿಯೂ ಹೆಸ ರುವಾಸಿಯು ಬಂದಹೊರತು ಅವನು ವೃದ್ಧಿಗೆ ಬರುವುದಕ್ಕೆ ಅವಕಾಶವಾಗುವು ದಿಲ್ಲ. ಈ ವಿಷಯದಲ್ಲೆಲ್ಲಾ ಮಾರ್ಗದರ್ಶನವನ್ನು ಮಾಡತಕ್ಕುದು ಪಾಠಕರ ಕರ್ತವ್ಯವಾಗಿರುವುದು. ಈ ಕರ್ತವ್ಯವನ್ನು ನೆರವೇರಿಸುವುದರಲ್ಲಿ ಪಾಠಕರು ಅತ್ಯಂತ ಶ್ರದ್ಧೆಯುಳ್ಳವರಾಗಿರಬೇಕು. ಹಾಗಲ್ಲದಿದ್ದರೆ ವಿದ್ಯಾರ್ಥಿಗಳಿಗೆ ಆಗತಕ್ಕ ಅನರ್ಥಗಳಿಗೆಲ್ಲಾ ಈ ಪಾಠಕರೇ ಕಾರಣಭೂತರೆಂದು ಎಣಿಸಲ್ಪಡುವುದು. ಇದಕ್ಕಿಂತಲೂ ದೊಡ್ಡ ಅಪಯಶಸ್ಸು ಯಾವುದೂ ಇಲ್ಲ. ಇದು ಅಪಯಶಸ್ಸು ಮಾತ್ರವೇ ಅಲ್ಲ. ಮಹಾಪಾಪದಲ್ಲಿಯೂ, ಇದು ಒಂದು ಪಾತಕವಾಗಿ ವರ್ಣಿ ಸಲ್ಪಡುವುದು. ಪಾಠಕರಿಗೆ ಮತ್ತೊಂದು ಕರ್ತವ್ಯವು ಉಂಟು. ಇವರು ತಾವು ಹೇಳತಕ್ಕ ಪಾಠಗಳನ್ನು ಪ್ರಥಮತಃ ವ್ಯಾಸಂಗಮಾಡಿ ನಿಷ್ಕೃಷ್ಟವಾಗಿ ತಿಳಿದು ಕೊಂಡು ಕೇಳಿದ ಪ್ರಶ್ನೆಗಳಿಗೆ ಉತ್ತರವನ್ನು ಕೊಡುವ ಸಾಮರ್ಥ್ಯವನ್ನು ಸಂಪಾ ದಿಸಿಕೊಳ್ಳದೆ ಪಾಠಹೇಳುವುದಕ್ಕೆ ಹೋಗಕೂಡದು. ಹೇಳತಕ್ಕ ವಿಷಯವನ್ನು ಚೆನ್ನಾಗಿ ತಿಳಿದುಕೊಳ್ಳದೆ ಹೋಗಿ ವಿದ್ಯಾರ್ಥಿಗಳು ಕೇಳಿದ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಕೊಡದೇ ಇದ್ದರೆ ಅವರ ಭಕ್ತಿಗೆ ಪಾತ್ರರಾಗುವುದು ಅಸಾಧ್ಯ. ಇದು ಅಸಾಧ್ಯವಾದ ಕೂಡಲೆ ಪಾಠಕರಾಗಿರುವುದೂ ಕೂಡ ಅಸಾಧ್ಯನಾಗಿರು ವುದು. ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರವನ್ನು ಕೊಟ್ಟುಕೊಂ ಡು ಪ್ರೀತಿಯಿಂದ ಅವರನ್ನು ಕಾಣುತ್ತಾ ಉತ್ಸಾಹವನ್ನು ಅವರಿಗೆ ಹುಟ್ಟಿಸುತಾ,

ತಿಳಿಯದ ವಿಷಯಗಳನ್ನು ಆಚ್ಛಾದಿಸುವದಕ್ಕೋಸ್ಕರ ಕೋಪವನ್ನು ಮಾಡಿಕೊಳ್ಳದೆ ಇರತಕ್ಕ ಪಾಠಕರ ವಿಷಯದಲ್ಲಿ ವಿದ್ಯಾರ್ಥಿಗಳಿಗೆ ನಿಸರ್ಗವಾದ ಪ್ರೀತಿಯೂ ಭಕ್ತಿಯೂ ಹುಟ್ಟುವುದು. ಪಾಠಕರಾದವರು ಮತ್ತೊಂದು ವಿಷಯವನ್ನು ಮನಸ್ಸಿನಲ್ಲಿ ಇಟ್ಟುಕೊಂಡಿರಬೇಕು. ಪಾಠಶಾಲೆಗೆ ಬರತಕ್ಕ ಹುಡುಗರೆಲ್ಲರೂ ಸ್ನಾನವನ್ನು ಮಾಡಿ ಪರಿಶುದ್ಧರಾಗಿರುತ್ತಾರೆಯೆ ? ನಿರ್ಮಲವಾದ ವಸ್ತ್ರಗಳನ್ನು ಧರಿಸಿರುತ್ತಾರೆಯೇ? ಪುಸ್ತಕವೊದಲಾದುವುಗಳನ್ನು ಒಳ್ಳೇ ಸ್ಥಿತಿಯಲ್ಲಿ ಇಟ್ಟುಕೊಂಡಿರತ್ತಾರೆಯೆ? ಗಲಭೆಯನ್ನು ಮಾಡದವರಾಗಿರುತ್ತಾರೆಯೆ? ವಿಧೇಯರಾಗಿರುತ್ತಾರೆಯೆ? ಕಾಲಕ್ಕೆ ಸರಿಯಾಗಿ ಬರುತ್ತಾರೆಯೆ? ಸತ್ಯವನ್ನು ಯಾವಾಗಲೂ ಹೇಳುವರೆ? ಪ್ರಾಮಾಣಿಕರಾಗಿರುವರೆ? ಗರ್ವವಿಲ್ಲದವರಾಗಿಯೂ ಸಹನವುಳ್ಳವರಾಗಿಯೂ ಧೈರ್ಯವುಳ್ಳವರಾಗಿಯೂ ಇರುವಂತೆ ಪಾಠವನ್ನು ಒಪ್ಪಿಸುವುದರಲ್ಲಿ ಶ್ರದ್ಧೆಯುಳ್ಳವರಾಗಿಯೂ ಹೊಸವಿಷಯಗಳನ್ನು ತಿಳಿದುಕ್ಕೊಳ್ಳಬೇಕೆಂಬ ಆಸಕ್ತಿಯುಳ್ಳವರಾಗಿಯೂ ಇರುವರೆ? ಪಾಠಗಳು ನಡೆದಮೇಲೆ ಆಟಿಗಳಲ್ಲಿಯೂ ವ್ಯಾಯಾಮಗಳಲ್ಲಿಯೂ ಸೇರುವರೆ? ವಾಚಕಶಾಲೆಯ ಪ್ರಯೋಜನವನ್ನು ಹೊಂದುವರೆ? ವಾಕ್ಯಾರ್ಥವನ್ನು ಮಾಡುವ ಸಂಘಗಳಲ್ಲಿ ಭಾಗಿಗಳಾಗಿರುವರೆ ? ತಂದೆತಾಯಿಗಳ, ಅಂಣತಮ್ಮಂದಿರ, ಗುರುಹಿರಿಯರ, ಪ್ರೀತಿಗೆ ಪಾತ್ರರಾಗಿರುವರೆ ? ಬಹ್ಮಚರ್ಯಕ್ಕೆ ಸಾಧಕವಾದ ಕೆಲಸಗಳನ್ನು ಮಾಡುವುದರಲ್ಲಿ ನಿರತರಾಗಿರುವರೆ ? ಆಹಾರಪಾನಗಳಲ್ಲಿ ಆರೋಗ್ಯ ಸೂತ್ರಗಳಿಗೆ ಅನುಸಾರವಾಗಿ ನಡೆಯುವರೆ ? ನಿಷಿದ್ಧವಾದ ವಸ್ತುಗಳ ಸೇವನೆಯನ್ನು ಮಾಡುವುದರಲ್ಲಿ ಪರಾಙ್ಮುಖರಾಗಿರುವರೆ ? ಎಂಬುದನ್ನು ಅನೇಕ ಮುಖವಾಗಿ ವಿಚಾರಿಸಿ ತಿಳಿದುಕ್ಕೊಂಡು ಇದಕ್ಕೆ ವಿರೋಧವಾಗಿ ವಿದ್ಯಾರ್ಥಿಗಳು ನಡೆದರೆ ಅವರನ್ನು ಆಗಾಗ್ಗೆ ಕರೆದು ಏಕಾಂತವಾಗಿ ಹಿತೋಪದೇಶವನ್ನು ಮಾಡಿ ಅವರನ್ನು ತಿದ್ದುವುದು ಪಾಠಕರಾದವರಿಗೆ ಮುಖ್ಯ ಕರ್ತವ್ಯ. ಈ ಕರ್ತವ್ಯವನ್ನು ನೆರವೇರಿಸಬೇಕಾದರೆ ಪಾಠಕರು ನಿಶ್ಚಿಂತರಾಗಿರುವುದಕ್ಕೆ ತಕ್ಕವಷ್ಟಿಗೆ ಅನುಕೂಲವಾಗುವಂತೆ ಸಂಬಳವನ್ನು ಹೊಂದುವುದು ಅವಶ್ಯಕ. ಹಾಗೆ ಹೊಂದತಕ್ಕವರು ಶ್ರದ್ಧೆಯಿಂದ ಮೇಲೆಹೇಳಿದ ಕೆಲಸವನ್ನು ಮಾಡುವುದು ಕರ್ತವ್ಯ.

ಈ ಕರ್ತವ್ಯವನ್ನು ಯಾವದೇಶದಲ್ಲಿ ಪಾಠಕರು ಸರಿಯಾಗಿ ಮಾಡುತ್ತಾರೆಯೊ ಆ ದೇಶಗಳೆಲ್ಲಾ ಅತ್ಯಂತ ಉನ್ನತವಾದ ಸ್ಥಿತಿಯಲ್ಲಿರುವವು. ಇಂಥಾ ದೇಶಗಳಮೇಲುಪಜ್ಞೆಯು ಸರ್ವರಿಗೂ ಅನುಸರಣೀಯವಾದುದು.

ಲೋವರ್ ಸೆಕಂಡರಿ ಪರೀಕ್ಷೆ.

ಕಳೆದವರ್ಷ ಅಂದರೆ 1917 ನೇ ನವಂಬರ್ ತಿಂಗಳಲ್ಲಿ ನಡೆದ ಮೈಸೂರು ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ಕೊಟ್ಟಿರುವ ಕನ್ನಡವ್ಯಾಕರಣ ಭಾಗದ ಪ್ರಶ್ನೆಗಳಲ್ಲಿ ಕೆಲವೊಂಶಗಳನ್ನು ಇಲ್ಲಿ ವಿದ್ಯಾರ್ಥಿಗಳ ಮತ್ತು ಉಪಾಧ್ಯಾಯರ ತಿಳುವಳಿಕೆಗಾಗಿ ವಿಚಾರಮಾಡಬೇಕಾಗಿದೆ. ವಿದ್ಯಾರ್ಥಿಗಳು ಈ ಪರೀಕ್ಷೆಗೆ ಕನ್ನಡವ್ಯಾಕರಣವನ್ನು ಓದುವುದಕ್ಕಾಗಿ ಶಬ್ದಾದರ್ಶವೆಂಬ ಗ್ರಂಥವು ಸರಕಾರದಿಂದ ನಿಯಮಿಸಲ್ಪಟ್ಟು ದೇಶದ ಎಲ್ಲಾಶಾಲೆಗಳಲ್ಲಿಯೂ ಪ್ರಚಾರದಲ್ಲಿದೆಯಷ್ಟೆ. ಪರೀಕ್ಷಕರು ಆ ಶಬ್ದಾದರ್ಶದಲ್ಲಿ ಹೇಳಿರುವಷ್ಟು ವಿಷಯಗಳನ್ನು ಪ್ರಶ್ನೆಮಾಡುವದು ಸಹಜವಾಗಿದೆ. ಅದನೆ ಕಳೆದ ವರ್ಷದಲ್ಲಿ ಶಬ್ದಾದರ್ಶದಲ್ಲಿ ಹೇಳದಿರುವ ಕೆಲವು ವಿಶೇಷವಿಷಯಗಳನ್ನು ಕೇಳಿರುವರು. ಏನೆಂದರೆ —

" ರಂಗನಿಲಯು ಗೋವಿಂದ ನಿನ್ನಪಾದಾಂಬುಜವ ಕಂಡು ವಾಂಛಿತವ
ಪಡೆಯುದವರಾರೊ ? "

ಇಲ್ಲಿ ಅನುಸ್ವಾರಗಳು ಯಾವಯಾವ ಅನುನಾಸಿಕಗಳಿಗೆ ಬದಲಾಗಿ ಬಂದಿವೆ? ಅವನ್ನು ತಿಳಿಸಲು ಈ ವಾಕ್ಯವನ್ನು ಅನುನ್ವಾರಗಳಿಲ್ಲದಂತೆ ಬರೆಯಿರಿ. ಎಂದು ಒಂದು ಪ್ರಶ್ನೆ ಕೇಳಲ್ಪಟ್ಟಿದೆ. ಈ ಅನುನಾಸಿಕವು ಹಳಗನ್ನಡದ ವ್ಯಾಕರಣ ಗ್ರಂಥಗಳಾದ ಶಬ್ದಮಣಿದರ್ಪಣ, ಶಬ್ದಾನುಶಾಸನಗಳಲ್ಲಿ ಕೂಡ ಸ್ಪಷ್ಟವಾಗಿಲ್ಲದೆ ವಿಚಾರಾಸ್ಪದವಾಗಿ ಹೇಳಲ್ಪಟ್ಟಿದೆ. ಪದಾಸ್ತದಲ್ಲಿ ಇರುವ ಅನುಸ್ವಾರಕ್ಕೆ ಅನುನಾಸಿಕವು ವಿಕಲ್ಪದಿಂದ ಆದೇಶವಾಗಿ ಬರುವುದು. ಉದಾಹರಣೆ—ನೀಂಕಲಿ—ನೀಙ್ಕಲಿ; ಅವಂಘಟಂ—ಅವಮ್ಘಟಂ, ಎಂದು ಮಾತ್ರಹೇಳಲ್ಪಟ್ಟಿದೆ. ರಂಗ, ಅಂಬುಜ ಮುಂತಾದ ಪದಮಧ್ಯದಲ್ಲಿ ಅನುನಾಸಿಕ ಬರುವ ವಿಚಾರವನ್ನು ನಿರ್ಧರಿಸಿ ಹೇಳಿಲ್ಲವು. ಹಳಗನ್ನಡದ ವ್ಯಾಕರಣ ಗ್ರಂಥಗಳಲ್ಲಿಯೇ ಹೀಗಿರುವಲ್ಲಿ ಹೊಸಕನ್ನಡದ ವ್ಯಾಕರಣ ಗ್ರಂಥವಾದ ಶಬ್ದಾದರ್ಶವನ್ನು ಓದುವ ವಿದ್ಯಾರ್ಥಿಗಳು ಈ ವಿಷಯವನ್ನು ಹೇಗೆ ತಿಳಿಯಬೇಕು? ಸಂಸ್ಕೃತ ವ್ಯಾಕರಣಕಾರರು ಈ ಅನುನಾಸಿಕಾದೇಶವು ರಂಗ, ಅಂಬುಜ ಮುಂತಾದ ಪದಮಧ್ಯದಲ್ಲಿ ನಿತ್ಯವಾಗಿಯೂ ತ್ವಂಕುರು ಮೊದಲಾದ ಪದಾಸ್ತದಲ್ಲಿ ವಿಕಲ್ಪವಾಗಿಯೂ ಬರುವದಾಗಿ ಹೇಳಿರುವರು. ಸಂ

ಸ್ಕೃತ ಭಾಷಾ ವ್ಯಾಕರಣವನ್ನು ಬಲ್ಲವರು ಕರ್ಣಾಟ ಭಾಷಾ ವ್ಯಾಕರಣವನ್ನೂ ವಿಚಾರಮಾಡಿ ನೋಡಿದಲ್ಲಿ ಮೇಲಣ ವಿಧಿಯನ್ನು ಕನ್ನಡದಲ್ಲಿಯೂ ಅಂಗೀಕರಿಸ ಬೇಕಾಗಿ ಬರುವುದು. ಆದುದರಿಂದ ಹೀಗೆ ಇನ್ನೂ ನಿರ್ಧರಿಸದೆ ವಿಚಾರಾಸ್ಪದವಾದ ವಿಷಯವನ್ನು ಲೋವರ್ ಸಕಂಡರಿಯಂತಹ ತರಗತಿಯ ಬಾಲಕರ ಪರೀಕ್ಷೆಯಲ್ಲಿ ಕೇಳುವುದು ಅಷ್ಟು ಉಚಿತವಾದುದೆಂದು ನಾವು ಹೇಳಲಾರೆವು.

ಮತ್ತು "ವಿಭಕ್ತಿಯೆಂದರೇನು" ಎಂದು ಕೇಳಿರುವರು. ಶಬ್ದಾದರ್ಶಮಾತ್ರಶರಣರಾದ ಬಾಲಕರಿಂದ ಇದಕ್ಕೂ ತಕ್ಕ ಉತ್ತರವು ದೊರೆಯಲಾರದು. ಈ ಪ್ರಶ್ನೆಗೆ ಧಾತು ಮತ್ತು ಪ್ರಾತಿಪದಿಕಗಳಮೇಲೆ ಬರುವ ಕೆಲವು ಪ್ರತ್ಯಯಗಳಿಗೆ ವಿಭಕ್ತಿಯೆಂಬ ಸಂಜ್ಞೆಯೆಂದು ಹೇಳುವ ಉತ್ತರವು ಸಾಲದು. ವಿಭಕ್ತಿ ಎಂಬ ಶಬ್ದದ ಅವಯವಾರ್ಥವನ್ನು ವಿವರಿಸುವುದು ಅವಶ್ಯಕವೆಂದು ಪರೀಕ್ಷಕರ ತಾತ್ಪರ್ಯವಾಗಿ ತೋರುತ್ತೆ. ಆದರೆ ಈ ವಿಚಾರಕ್ಕೆ ಶಬ್ದಾದರ್ಶದಲ್ಲಿ ಅವಕಾಶವಿಲ್ಲದೆ ವಿದ್ಯಾರ್ಥಿಗಳು ಇಂಥಾ ಪ್ರಶ್ನೆಗಳಿಗೆ ಉತ್ತರಗಳನ್ನು ಬರೆಯಲಾರರೆಂಬ ವಿಷಯವನ್ನೂ ವಾಚಕರು ವಿಚಾರಮಾಡಬೇಕಾಗಿದೆ.

ಮತ್ತು ಬಗ್ಗಿಪ ಮೊದಲಾದ ಕೆಲವು ರೂಪಗಳನ್ನು ಕೊಟ್ಟು ಈರೂಪಗಳು ಯಾವಧಾತುಗಳಿಂದ ಹುಟ್ಟಿದಂಥವು ಎಂದು ಕೇಳಿರುವರು, ಈ ಬಗ್ಗಿಪ ಎಂಬುದು ಕೇವಲ ಹಳಗನ್ನಡದ ರೂಪವು. ಹೊಸಗನ್ನಡದ ವ್ಯಾಕರಣದಲ್ಲಿ ಹಳಗನ್ನಡದ ವ್ಯಾಕರಣ ವಿಷಯವನ್ನು ಹೇಗೆ ಕೇಳಿರುವರು ? ಈ ಪತ್ರಿಕೆಯುಲ್ಲಿ ಹೊಸಕನ್ನಡದ ವ್ಯಾಕರಣ ವಿಷಯವನ್ನು ಮಾತ್ರ ಕೇಳಬೇಕೆಂದು ಸರಕಾರದ ನಿಯಮವಿಲ್ಲವೆ ? ಹಾಗಿಲ್ಲದಿದ್ದರೆ ಶಬ್ದಾದರ್ಶವನ್ನು ಏಕೆ ಎಲ್ಲಾ ಶಾಲೆಗಳಲ್ಲಿಯೂ ಓದಿಸಬೇಕಾಗಿ ಸರಕಾರದವರು ನಿಯಮಿಸಿರುವರು ?

ಹೀಗೆ ಹಳಗನ್ನಡ ಮತ್ತು ಹೊಸಕನ್ನಡಗಳನ್ನು ಮಿಶ್ರಮಾಡಿ ಕೇಳುವ ವಿಷಯದಲ್ಲಿ ಇನ್ನುಮೇಲೆ ಉಪಾಧ್ಯಾಯರು ಗಮನಕೊಟ್ಟು ಎರಡು ವಿಷಯಗಳನ್ನೂ ಬಾಲಕರಿಗೆ ಬೋಧಿಸಬೇಕಾಗಿರುವುದು.

ವಿದ್ಯಾದಾಯಿನಿ

(AMONTHLY JOURNAL.)

ಭಾಗ ೧೬.] ಮಾರ್ಚಿ.—೧೯೦೮. [ಸಂಚಿಕೆ ೩.

ಹೋಬಳಿ ಸ್ಕೂಲುಗಳ ಮಕ್ಕಳ ಎ. ತರಗತಿಯಲ್ಲಿ ಅಕ್ಷರಾಭ್ಯಾಸ ಮಾಡಿಸುವ ರೀತಿಯನ್ನು ಕುರಿತು:—

ಅಕ್ಷರ.

ನಮ್ಮ ಸಮೀಪದಲ್ಲಿರುವ ಮನುಷ್ಯರಿಗೆ ಮಾತನಾಡಿ ಧ್ವನಿಯು ಮೂಲಕ ನಮ್ಮ ಅಭಿಪ್ರಾಯವನ್ನು ತಿಳಿಸುತ್ತೇವೆ. ದೂರದಲ್ಲಿರುವವರಿಗೆ ನಮ್ಮ ಮಾತಿನ ಧ್ವನಿಯು ಕೇಳಿಬರುವುದಿಲ್ಲವಾಗಿ ಬರವಣಿಗೆಯ ಮೂಲಕ ನಮ್ಮ ಅಭಿಪ್ರಾಯವನ್ನು ತಿಳಿಸುತ್ತೇವೆ. ಬರವಣಿಗೆಯು ನಮ್ಮ ಮಾತಿನ ಧ್ವನಿಗೆ ಗುರುತಾಗಿದೆ. ಇದಕ್ಕೆ ಅಕ್ಷರಗಳು ಆಧಾರವಾಗಿದೆ. ಆದಕಾರಣ ಅಕ್ಷರಗಳು ನಾವು ಮಾತನಾಡುವ ಧ್ವನಿಯನ್ನು ತಿಳಿಸುವುದಕ್ಕೆ ಉಪಯೋಗಿಸುವ ಸಂಜ್ಞೆ ಅಥವಾ ಗುರುತುಗಳಾಗಿವೆ. ಈ ಈ ಅಕ್ಷರಕ್ಕೆ ಈ ಈ ಧ್ವನಿ ಮತ್ತು ಈ ಈ ಧ್ವನಿಗೆ ಈ ಈ ಅಕ್ಷರವೆಂದು ಸಂಕೇತಮಾಡಿಕೊಂಡಿದೇವೆ.

ಅಕ್ಷರಜ್ಞಾನ.

ಆದಕಾರಣ ಮಕ್ಕಳಿಗೆ ಅಕ್ಷರಜ್ಞಾನವುಂಟಾಗಿದೆಯೆಂದರೆ ಒಂದು ಗುರುತು ಅಥವಾ ಅಕ್ಷರವನ್ನು ಬರೆದರೆ ಇದಕ್ಕೆ ಈ ಧ್ವನಿಯೆಂದು ತಟಕ್ಕನೆ ಹೇಳುವುದಕ್ಕೂ ಮತ್ತು ಒಂದು ಧ್ವನಿಯನ್ನು ಉಚ್ಚರಿಸಿದರೆ ಇದಕ್ಕೆ ಈ ಗುರುತು ಅಥವಾ ಅಕ್ಷರವೆಂದು ತಟಕ್ಕನೆ ಬರೆದು ತೋರಿಸುವುದಕ್ಕೂ ಸಾಧಾರಾಳವಾಗಿರಬೇಕು.

ಅಕ್ಷರಜ್ಞಾನವನ್ನುಂಟುಮಾಡುವ ರೀತಿ.

ಈ ರೀತಿಯನ್ನು ಮಾ॥ ರಾ॥ ಎ. ಹಿರಿಯಣ್ಣನವರ ಪಾಠಕ್ರಮ ಪುಸ್ತಕದಲ್ಲಿಯೂ ಮಾ॥ ರಾ॥ ಸಿ. ವಾಸುದೇವಯ್ಯನವರ ಬಾಲಬೋಧೆ 1 ನೆಯ ಭಾಗದ ಮೊದಲಿನಲ್ಲಿಯೂ ವಿವರವಾಗಿ ಬರೆದಿದೆ. ಉಪಾಧ್ಯಾಯರಲ್ಲಿ ಕೆಲವರು ಪಾಠಕ್ರಮ ಪುಸ್ತಕವನ್ನು ಓದಿಲ್ಲವೆಂದು ತೋರುತ್ತದೆ. ಅನೇಕರು ಬಾಲಬೋಧೆಯ 1 ನೆಯ ಭಾಗದ ಪೀಠಿಕೆಯನ್ನು ಓದಿರಬೇಕು. ಆದರೆ ಆರೀತಿಯನ್ನು ಅನುಸರಿಸುವ ಉಪಾಧ್ಯಾಯರು ಬಹಳ ವಿಪರೂಪ.

ಉಪಾಧ್ಯಾಯರು ಈಗ ಅಭ್ಯಾಸಮಾಡಿಸುವ ರೀತಿ.

1. ಅಕಾರಾದಿಯಾಗಿ ಳಕಾರದ ವರೆಗೆ ಹಿಂದಣ ರೀತಿಯಲ್ಲಿಯೇ ಕಲಿಸುತ್ತಾರೆ.

2. ಇದರಲ್ಲಿಯೂ ಎರಡೆರಡಕ್ಷರಗಳನ್ನು ತಿದ್ದುಹಾಕಿ ಕಲಿಸುತ್ತಾರೆ. ಸಾಧಾರಣವಾಗಿ 'ಇ, ಈ,' ಎಂಬೆರಡು ಸ್ವರಗಳನ್ನೂ ಹುಡುಗನ ಮುಂದೆ ಬರೆದು 'ಇ, ಈ,' ಎಂದು ಹೇಳಿಕೊಂಡು ತಿದ್ದು ಎಂದು ಹೇಳುತ್ತಾರೆ. ಹುಡುಗನು ಮೊದಲು ಮೊದಲು 'ಇ, ಈ,' ಎಂದು ಹೇಳಬಹುದು. ಸ್ವಲ್ಪಹೊತ್ತು ಹೋದ ಮೇಲೆ 'ಇ, ಇ, ಇ, ಇ' ಎಂದು ಹೇಳಿಕೊಂಡು ತಿದ್ದುತ್ತಾನೆ. ಇದರಿಂದ 3 ವಿಧವಾದ ಕೆಡಕುಂಟಾಗುತ್ತದೆ. (1) ಸ್ವರಾಕ್ಷರಗಳಲ್ಲಿ ಹ್ರಸ್ವಕ್ಕೂ, ದೀರ್ಘಕ್ಕೂ ಭೇದ ತಿಳಿವುದಿಲ್ಲ. (2) ಹಾಗೆ ಒಂದುವೇಳೆ ತಿಳಿದರೂ ಯಾವುದು ಹ್ರಸ್ವ, ಯಾವುದು ದೀರ್ಘಸ್ವರವೆಂಬುದು ಗೊತ್ತಾಗುವುದಿಲ್ಲ. ಹ್ರಸ್ವಾಕ್ಷರವನ್ನು ಬರೆಯಹೇಳಿದರೆ ದೀರ್ಘಾಕ್ಷರವನ್ನೂ ದೀರ್ಘಾಕ್ಷರವನ್ನು ಬರೆಯ ಹೇಳಿದರೆ ಹ್ರಸ್ವಾಕ್ಷರವನ್ನೂ ಬರೆಯುತ್ತಾನೆ. ಆಗ ಉಪಾಧ್ಯಾಯರು ಪಕ್ಕದಲ್ಲಿ ನಿಂತುಕೊಂಡು ಹುಡುಗನು 'ಈ' ಗೆ ಬದಲಾಗಿ 'ಇ' ಬರೆದರೆ 'ಇ, ಈ' ಕಾಣೋ ಎಂದು ಹೇಳುತ್ತಾರೆ. ಕೂಡಲೆ ಹುಡುಗನು ಈ ಅಕ್ಷರವೆಂದು ತಿಳಿದುಕೊಂಡು ಇರುವ ಎರಡಕ್ಷರಗಳಲ್ಲಿ ಒಂದಲ್ಲದಿದ್ದರೆ ಮತ್ತೊಂದಾಗಿರಬೇಕೆಂದು ನಿಶ್ಚೈಸಿ ಇನ್ನೊಂದಕ್ಷರವನ್ನು ಬರೆಯುತ್ತಾನೆಯೇ ಹೊರತು ನಾವು ಹೇಳಿದಕ್ಷರವು ಹ್ರಸ್ವಾಕ್ಷರ ಅಥವಾ ದೀರ್ಘಾಕ್ಷರವೆಂದು ತಿಳಿದುಕ್ಕೊಂಡು ಬರೆವುದಿಲ್ಲ. (3) ಈ ಯೆರಡಕ್ಷರಗಳಲ್ಲಿ ಯಾವುದಾದರೂ ಒಂದಕ್ಷರವನ್ನು ಬರೆಯ ಹೇಳಿದರೆ ಎರಡಕ್ಷರವನ್ನೂ ಬರೆಯುತ್ತಾನೆ. ಸಾಲದುದಕ್ಕೆ 'ಎಏಐ' ,ಒಓಔ' ಎಂದು ಮೂರು ಮೂರು ಅಕ್ಷರಗಳನ್ನು ಒಟ್ಟಿಗೆ ತಿದ್ದುಹಾಕುತ್ತಾರೆ.

ಹುಡುಗನು 'ಐ' ಬರೆಯುಹೇಳಿದರೆ 'ಎ' ನ್ನು, 'ಏ' ಬರೆಯುಹೇಳಿದರೆ 'ಎ' ನ್ನು ಬರೆಯುತ್ತಾನೆ. ಆಗ ಉಪಾಧ್ಯಾಯರು 'ಎಏಐ, ಕೊಣೊ' ಎಂದು 3 ಅಕ್ಷರಗಳನ್ನು ಉಚ್ಚರಿಸಿದರೆ ಒಂದುವೇಳೆ ಹುಡುಗನು 'ಐ' ಬರೆದಪೊ ಬರೆಯಬಹುದು. ಆದ ಕಾರಣ ಉಪಾಧ್ಯಾಯರ ಮೂರಕ್ಷರದ ಪಲ್ಲವಿ ಹೊರಟಿಲ್ಲಿದೆ ಹುಡುಗನು ಅಕ್ಷರವನ್ನು ಬರೆಯುಲಾರನು.

ವ್ಯಂಜನಾಕ್ಷರಗಳಲ್ಲಿಯೂ ಹೀಗೆಯೇ 'ತ, ಥ,' ಎಂಬೆರಡಕ್ಷರವನ್ನು ಹುಡುಗನ ಮುಂದೆ ಬರೆದು 'ತ, ಥ,' ಎಂದು ಹೇಳಿಕೊಂಡು ತಿದ್ದು ಎಂದು ಹೇಳುತ್ತಾರೆ ಹುಡುಗನು ಮೊದಲು ಮೊದಲು 'ತ, ಥ,' ಎಂದು ಹೇಳಬಹುದು. ಸ್ವಲ್ಪಹೊತ್ತಿನ ಮೇಲೆ 'ತ,ತ,' 'ತ,ತ,' ಎಂದುಕೊಂಡು ತಿದ್ದುತ್ತಾನೆ. ಹೀಗೆ ಬರೆಸುವುದರಿಂದ ಸ್ವರಾಕ್ಷರಗಳನ್ನು ಬರೆಸುವಾಗ ಉಂಟಾಗುವ 3 ವಿಧವಾದ ಕೆಡಕು ಸಂಭವಿಸುತ್ತದೆ' (1) ವ್ಯಂಜನಾಕ್ಷರಗಳಲ್ಲಿ ಅಲ್ಪಪ್ರಾಣ, ಮಹಾಪ್ರಾಣಗಳಿಗೆ ಭೇದ ತಿಳಿವುದಿಲ್ಲ. (2) ಹಾಗೆ ಒಂದುವೇಳೆ ತಿಳಿದರೂ ಯಾವುದು ಅಲ್ಪಪ್ರಾಣ, ಯಾವುದು ಮಹಾಪ್ರಾಣವೆಂಬುದು ಗೊತ್ತಾಗುವುದಿಲ್ಲ. (3) ಈ ಯೆರಡಕ್ಷರಗಳಲ್ಲಿ ಒಂದನ್ನು ಬರೆಯುಹೇಳಿದರೆ ಎರಡನ್ನೂ ಬರೆಯುತ್ತಾನೆ.

3. ಈ ತರಗತಿಯಲ್ಲಿ 20 ಹುಡುಗರಿದ್ದರೆ ಉಪಾಧ್ಯಾಯರು ಒಬ್ಬನಿಗೆ 'ಉ,ಊ' ಇನ್ನೊಬ್ಬನಿಗೆ 'ಎಏಐ' ಮತ್ತೊಬ್ಬನಿಗೆ 'ಟ,ಠ' ಮಗದೊಬ್ಬನಿಗೆ 'ತ,ಥ' ಈ ಮೇರೆ ಸಾಧಾರಣವಾಗಿ 20 ಹುಡುಗರಿಗೂ 20 ಜತೆ ಬೇರೆಬೇರೆ ಅಕ್ಷರಗಳನ್ನು ತಿದ್ದುಹಾಕಿ ಬಾಯಲ್ಲಿ ಹೇಳಿಕೊಂಡು ಬರೆಯು ಬೇಕೆಂದು ಹೇಳುತ್ತಾರೆ. ಇದರಿಂದ ಹುಡುಗರು 20 ಜತೆ ಬೇರೆಬೇರೆ ಅಕ್ಷರಗಳ ಧ್ವನಿಯನ್ನು ಮಾಡಿಕೊಂಡು ತರಗತಿಯಲ್ಲಿ ಗಾನಗಳನ್ನುಂಟುಮಾಡುತ್ತಾರೆ. ಹೀಗೆ ಬರೆಸುವುದರಿಂದ ಹುಡುಗರಿಗೆ ನಿಷ್ಕೃಷ್ಟವಾದ ಅಕ್ಷರಜ್ಞಾನವುಂಟಾಗದೆ ಅನುಮಾನಕ್ಕೆ ಬಹಳ ಅವಕಾಶವುಂಟಾಗುತ್ತದೆ. ಹೇಗೆಂದರೆ:—ಹುಡುಗರಿಗೆ ಬಾಲ್ಯದಲ್ಲಿ ನೇತ್ರೇಂದ್ರಿಯ, ಶ್ರವಣೇಂದ್ರಿಯಗಳು ಬಹಳ ಚುರುಕಾಗಿವೆ. (1) ಇನ್ನೊಬ್ಬನು ಏನುಮಾಡುತ್ತಾನೊ ಅದನ್ನು ನೊಡುವುದು. (2) ಅವನು ಮಾಡಿದಹಾಗೆ ತಾನೂ ಮಾಡುವುದು. ಈ ಯೆರಡು ಗುಣಗಳು ಸ್ವಭಾವಸಿದ್ಧವು. ಇದಲ್ಲದೆ ಬುದ್ಧಿಚಾಂಚಲ್ಯವು ಹೆಚ್ಚು. ಈಗ ಒಬ್ಬ ಹುಡುಗನ ಮುಂದೆ 'ಬ,ಭ' ಎಂಬಕ್ಷರಗಳನ್ನು ಬರೆದಿದ್ದರೆ ಅವನಿಗೆ ತನ್ನ ಮುಂದೆ ಬರೆದಿರುವ ಅಕ್ಷರಗಳನ್ನು ನೋಡುವುದಕ್ಕಿಂತಲೂ ಇತರ

ಹುಡುಗರ ಮುಂದೆ ಬರೆದಿರುವ ಅಕ್ಷರಗಳನ್ನು ನೋಡುವುದರಲ್ಲಿ ಅಸಕ್ತಿ ಹೆಚ್ಚು. ಆದಕಾರಣ ಸ್ವಲ್ಪಕಾಲದ ವರೆಗೂ ಬಾಯಲ್ಲಿ 'ಬ,ಭ' ಎಂಬಕ್ಷರಗಳನ್ನು ಉಚ್ಚರಿಸುತಿದ್ದರೂ ಕಣ್ಣಲ್ಲಿವಾತ್ರ ಇತರ ಹುಡುಗರಮುಂದೆ ಬರೆದಿರುವ ಬೇರೆಬೇರೆ ಅಕ್ಷರಗಳನ್ನು ನೋಡುತ್ತಿರುತ್ತಾನೆ. ಹೀಗೆ ನೋಡುವುದರಿಂದಲೂ ಹುಡುಗರ ಬುದ್ಧಿಯು ಚಂಚಲವಾದುದರಿಂದಲೂ ಸ್ವಲ್ಪ ಕಾಲಾನಂತರ ತನ್ನ ಮುಂದೆ ಇರುವ ಅಕ್ಷರಗಳ ಧ್ವನಿಯು 'ಬ,ಭ' ಎನ್ನುವುದೋ ಅಥವಾ ಇತರತ ಹುಡುಗರ ಮುಂದೆ ಬರೆದಿರುವ ಅಕ್ಷರಗಳ ಧ್ವನಿಯು 'ಬ,ಭ' ಎನ್ನುವುದೊ ಎಂಬನುಮಾನವುಂಟಾಗುತ್ತದೆ. ಪುನಃ ತನ್ನ ಮುಂದೆ ಇರುವ ಅಕ್ಷರಗಳನ್ನು ತಿದ್ದುತ್ತಿರುವಾಗ ಉಳಿದ ಹುಡುಗರು ಇತರವಿಧವಾದ ಧ್ವನಿಗಳನ್ನು ಉಚ್ಚರಿಸುತ್ತಾರೆ. ಈ ಧ್ವನಿಗಳನ್ನು ಕೇಳುತ್ತಾ ಕೇಳುತ್ತಾ ಸ್ವಲ್ಪಕಾಲದ ಮೇಲೆ ತನ್ನ ಮುಂದಿರುವಕ್ಷರಗಳ ಧ್ವನಿಯಾವುದೊ ಎಂಬನುಮಾನವುಂಟಾಗುತ್ತದೆ. ಇದಲ್ಲದೆ ಯಾವ ಹುಡುಗನಿಗೆ ಯಾವ ಅಕ್ಷರವನ್ನು ತಿದ್ದುಹಾಕ ಬೇಕೊ ಆದು ಉಪಾಧ್ಯಾಯರಿಗೆ ಜ್ಞಾಪಕವಿಲ್ಲದೆ ಹುಡುಗನನ್ನು ಕೇಳಿ ತಿಳಿದುಕೊಂಡು ತಿದ್ದಿಹಾಕಬೇಕಾಗುತ್ತದೆ. ಇದರಿಂದ ಉಪಾಧ್ಯಾಯರಿಗೆ ಕಷ್ಟ ಹೆಚ್ಚು ಮತ್ತು ಕಾಲನಷ್ಟ.

ಆದಕಾರಣ ಈಗ ಅಭ್ಯಾಸಮಾಡಿಸುವ ರೀತಿಯ ಫಲಿತಾಂಶ ಏನೆಂದರೆ—

1. ಹುಡುಗನಿಗೆ ಸ್ವರಾಕ್ಷರಗಳಲ್ಲಿ ಹ್ರಸ್ವ, ದೀರ್ಘ, ವ್ಯಂಜನಾಕ್ಷರಗಳಲ್ಲಿ ಅಲ್ಪಪ್ರಾಣ, ಮಹಾಪ್ರಾಣ ಇವುಗಳಿಗಿರುವ ಭೇದಗಳು ಜಾಗ್ರತೆಯಾಗಿ ಗೊತ್ತಾಗುವುದಿಲ್ಲ.

2. ಈ ಅಕ್ಷರಕ್ಕೆ ಈ ಧ್ವನಿ. ಈ ಧ್ವನಿಗೆ ಈ ಅಕ್ಷರ ವೆಂಬುದು ಬೇಗ ತಿಳಿವುದಿಲ್ಲ.

'ಅ' ಇಂದ 'ಳ' ವರೆಗೂ ಅಕ್ಷರಗಳನ್ನು ಬರೆವುದಕ್ಕೂ, ಕ್ರಮವಾಗಿ ಬಾಯಿಯಲ್ಲಿ ಹೇಳುವುದಕ್ಕೂ ಬಂದರೂ ಮಧ್ಯದಲ್ಲಿ ಒಂದಕ್ಷರವನ್ನು ತೋರಿಸಿ ಇದನ್ನು ಹೇಳೆಂದರೆ ಹೇಳುವುದಕ್ಕೆ ಬರುವುದಿಲ್ಲ. ಯಾವುದಾದರೂ ಒಂದಕ್ಷರವನ್ನು ಹೇಳಿ ಅದನ್ನು ತೋರಿಸೆಂದರೆ ತೋರಿಸುವುದಕ್ಕೆ ಬರುವುದಿಲ್ಲ. ಇದಲ್ಲದೆ ಒಂದಕ್ಷರವನ್ನು ಬರೆಯಬೇಕಾದರೆ ಹಿಂದೆ ಮುಂದೆ ಇರುವ ಅಕ್ಷರಗಳನ್ನು ಹೇಳಿದಲ್ಲದೆ ಬರೆಪುದು ಕಷ್ಟ.

4. ಉಪಾಧ್ಯಾಯರಿಗೆ ಕಷ್ಟ ಹೆಚ್ಚು. ಮತ್ತು ಕಾಲ ನಷ್ಟ.

೬. ಹುಡುಗರು ಇದೇತರಗತಿಯಲ್ಲಿ ಒಂದುವರ್ಷಕ್ಕೆ ಮೇಲ್ಪಟ್ಟಿದ್ದರೂ ಹೇಳಿದಕ್ಷರಗಳನ್ನು ಬರೆಯುಲಾರರು. ಮತ್ತು ತೋರಿಸಿದಕ್ಷರವನ್ನು ಹೇಳಲಾರರು. ಅಂತೂ ಅಕ್ಷರಜ್ಞಾನವುಂಟುಮಾಡುವುದರ ಮುಖ್ಯೋದ್ದೇಶವು ಸುಲಭವಾಗಿಯೂ ಜಾಗ್ರತೆಯಾಗಿಯೂ ನೆರವೇರುವುದಿಲ್ಲ.

ಎ. ಸಶೇಷ.

ಕೈ ಬ ರ ಹ.

ಒಂದಾನೊಂದು ಕಾಲದಲ್ಲಿ ಕೈಬರಹಕ್ಕೆ ಗಿರಾಕಿಯು ಬಹಳವಾಗಿತ್ತು ಆಚ್ಚು ಹಾಕುವುದು ಆಚರಣೆಗೆ ಬಂದಮೇಲೆ ಕೈಬರಹಕ್ಕೆ ಅವಕಾಶವು ಕಡಮೆಯಾಯಿತು. ಈಚಿಗೆ ಟೈಪ್ ರೈಟರುಗಳು ಬಂದು ಇಂಗ್ಲೀಷು ಬರವಣಿಗೆಗೂ ಇನ್ನೂ ಅವಕಾಶವು ಕಡಮೆಯಾಗುತ್ತಲಿದೆ. ಕನ್ನಡ ಭಾಷೆಯಲ್ಲಿ ಟೈಪುರೈಟರುಗಳು ಇನ್ನೂ ನಿರ್ಮಾಣವಾಗಿಲ್ಲ. ಇದು ನಿರ್ಮಾಣವಾದ ಕೂಡಲೇ ಕನ್ನಡಭಾಷೆಯಲ್ಲಿಯೂ ಬರವಣಿಗೆಗೆ ಅವಕಾಶವು ಕಡಮೆಯಾಗುವುದು. ಈ ಅವಕಾಶವು ಎಷ್ಟು ಕಡಮೆಯಾದಾಗ್ಯೂ ಒಳ್ಳೇ ಬರವಣಿಗೆಯನ್ನು ಬರೆಯುತಕ್ಕವರಿಗೆ ಒಳ್ಳೆ ಗಿರಾಕಿಯು ಸಿಕ್ಕೇ ಸಿಕ್ಕುವುದು. ಲೇಖಕರಿಗೆ ಸರಿಯಾದ ಗಿರಾಕಿಯು ಸಿಕ್ಕಬೇಕಾಗಾದರೆ ಅವರು ಕೆಲವು ಬಾಬುಗಳಿಗೆ ಗಮನವನ್ನು ಕೊಡಬೇಕು. ಬರವಣಿಗೆಯನ್ನು ಬರೆಯುತಕ್ಕವನ ಉದ್ದೇಶವು ಓದತಕ್ಕವನಿಗೆ ತಿಳಿಯಬೇಕೆಂಬುದೇ ಮುಖ್ಯವಾಗಿರುವುದು. ಆದುದರಿಂದ ಅಕ್ಷರಗಳ ಸ್ವರೂಪವನ್ನು ಕೆಡಿಸಿ ವಿರೂಪವಾದ ಅಕ್ಷರಗಳನ್ನು ಬರೆದು ಪೋಡೀ ಬರೆಯುತ್ತೇನೆಂಬದಾಗಿ ವಿಜೃಂಭಿಸುವುದು ಪ್ರಯೋಜನಕಾರಿಯಾದುದಲ್ಲ. ಹೀಗೆ ಮಾಡುವುದರಿಂದ ಲೇಖನದ ಮುಖ್ಯಉದ್ದೇಶವನ್ನೇ ನಾಶಮಾಡಿದಂತಾಗುವುದು. ಹುಟ್ಟಿದ ಅಕ್ಷರಗಳನ್ನು ಕೂಡಿದಮಟ್ಟಿಗೂ ಹುಟ್ಟಿದ ಹಾಗೆಯೇ ಬರೆಯತಕ್ಕುದು ಈ ಉದ್ದೇಶವನ್ನು ನೆರವೇರಿಸುತ್ತದೆಯಾದುದರಿಂದ ವಿದ್ಯಾರ್ಥಿಗಳು ಈ ವಿಷಯಕ್ಕೆ ಗಮನವನ್ನು ಕೊಡಬೇಕು. ಎರಡನೇ ವಿಷಯವು ಅಕ್ಷರಗಳು ಸುಂದರವಾಗಿರುವುದು. ಹುಟ್ಟಿದ ಅಕ್ಷರಗಳನ್ನು ಹುಟ್ಟಿದಹಾಗೆಯೇ ಬರೆಯುತ್ತಾ ಬಂದರೆ ಬರವಣಿಗೆಯು ಅಭ್ಯಾಸವಾಗಿ ಬೆರಳುಗಳಿಗೆ ಲಾಘವ ಉಂ

ಹುಡುಗರ ಮುಂದೆ ಬರೆದಿರುವ ಅಕ್ಷರಗಳನ್ನು ನೋಡುವುದರಲ್ಲಿ ಆಸಕ್ತಿ ಹೆಚ್ಚು. ಆದಕಾರಣ ಸ್ವಲ್ಪಕಾಲದ ವರೆಗೂ ಬಾಯಲ್ಲಿ 'ಬ,ಭ' ಎಂಬಕ್ಷರಗಳನ್ನು ಉಚ್ಚರಿಸುತಿದ್ದರೂ ಕಣ್ಣಲ್ಲಿವಾತ್ರ ಇತರ ಹುಡುಗರಮುಂದೆ ಬರೆದಿರುವ ಬೇರೆಬೇರೆ ಅಕ್ಷರಗಳನ್ನು ನೋಡುತ್ತಿರುತ್ತಾನೆ. ಹೀಗೆ ನೋಡುವುದರಿಂದಲೂ ಹುಡುಗರ ಬುದ್ಧಿಯು ಚಂಚಲವಾದುದರಿಂದಲೂ ಸ್ವಲ್ಪ ಕಾಲಾನಂತರ ತನ್ನ ಮುಂದೆ ಇರುವ ಅಕ್ಷರಗಳ ಧ್ವನಿಯು 'ಬ,ಭ' ಎನ್ನುವುದೋ ಅಥವಾ ಇತರತ ಹುಡುಗರ ಮುಂದೆ ಬರೆದಿರುವ ಅಕ್ಷರಗಳ ಧ್ವನಿಯು 'ಬ,ಭ' ಎನ್ನುವುದೊ ಎಂಬನುಮಾನವುಂಟಾಗುತ್ತದೆ. ಪುನಃ ತನ್ನ ಮುಂದೆ ಇರುವ ಅಕ್ಷರಗಳನ್ನು ತಿದ್ದುತ್ತಿರುವಾಗ ಉಳಿದ ಹುಡುಗರು ಇತರವಿಧವಾದ ಧ್ವನಿಗಳನ್ನು ಉಚ್ಚರಿಸುತ್ತಾರೆ. ಈ ಧ್ವನಿಗಳನ್ನು ಕೇಳುತ್ತಾ ಕೇಳುತ್ತಾ ಸ್ವಲ್ಪಕಾಲದ ಮೇಲೆ ತನ್ನ ಮುಂದಿರುವಕ್ಷರಗಳ ಧ್ವನಿಯಾವುದೊ ಎಂಬನುಮಾನವುಂಟಾಗುತ್ತದೆ. ಇದಲ್ಲದೆ ಯಾವ ಹುಡುಗನಿಗೆ ಯಾವ ಅಕ್ಷರವನ್ನು ತಿದ್ದುಹಾಕ ಬೇಕೊ ಅದು ಉಪಾಧ್ಯಾಯರಿಗೆ ಜ್ಞಾಪಕವಿಲ್ಲದೆ ಹುಡುಗನನ್ನು ಕೇಳಿ ತಿಳಿದುಕೊಂಡು ತಿದ್ದಿಹಾಕಬೇಕಾಗುತ್ತದೆ. ಇದರಿಂದ ಉಪಾಧ್ಯಾಯರಿಗೆ ಕಷ್ಟ ಹೆಚ್ಚು ಮತ್ತು ಕಾಲನಷ್ಟ.

ಆದಕಾರಣ ಈಗ ಅಭ್ಯಾಸಮಾಡಿಸುವ ರೀತಿಯ ಫಲಿತಾಂಶ ಏನೆಂದರೆ—

1. ಹುಡುಗನಿಗೆ ಸ್ವರಾಕ್ಷರಗಳಲ್ಲಿ ಹ್ರಸ್ವ, ದೀರ್ಘ, ವ್ಯಂಜನಾಕ್ಷರಗಳಲ್ಲಿ ಅಲ್ಪಪ್ರಾಣ, ಮಹಾಪ್ರಾಣ ಇವುಗಳಿಗಿರುವ ಭೇದಗಳು ಜಾಗ್ರತೆಯಾಗಿ ಗೊತ್ತಾಗುವುದಿಲ್ಲ.

2. ಈ ಅಕ್ಷರಕ್ಕೆ ಈ ಧ್ವನಿ. ಈ ಧ್ವನಿಗೆ ಈ ಅಕ್ಷರ ವೆಂಬುದು ಬೇಗ ತಿಳಿವುದಿಲ್ಲ.

'ಅ' ಇಂದ 'ಳ' ವರೆಗೂ ಅಕ್ಷರಗಳನ್ನು ಬರೆವುದಕ್ಕೂ, ಕ್ರಮವಾಗಿ ಬಾಯಿಯಲ್ಲಿ ಹೇಳುವುದಕ್ಕೂ ಬಂದರೂ ಮಧ್ಯದಲ್ಲಿ ಒಂದಕ್ಷರವನ್ನು ತೋರಿಸಿ ಇದನ್ನು ಹೇಳೆಂದರೆ ಹೇಳುವುದಕ್ಕೆ ಬರುವುದಿಲ್ಲ. ಯಾವುದಾದರೂ ಒಂದಕ್ಷರವನ್ನು ಹೇಳಿ ಅದನ್ನು ತೋರಿಸೆಂದರೆ ತೋರಿಸುವುದಕ್ಕೆ ಬರುವುದಿಲ್ಲ. ಇದಲ್ಲದೆ ಒಂದಕ್ಷರವನ್ನು ಬರೆಯಬೇಕಾದರೆ ಹಿಂದೆ ಮುಂದೆ ಇರುವ ಅಕ್ಷರಗಳನ್ನು ಹೇಳಿದಲ್ಲದೆ ಬರೆಪುದು ಕಷ್ಟ.

4. ಉಪಾಧ್ಯಾಯರಿಗೆ ಕಷ್ಟ ಹೆಚ್ಚು. ಮತ್ತು ಕಾಲ ನಷ್ಟ.

೫. ಹುಡುಗರು ಇದೇತರಗತಿಯಲ್ಲಿ ಒಂದುವರ್ಷಕ್ಕೆ ಮೇಲ್ಪಟ್ಟಿದ್ದರೂ ಹೇಳಿದಕ್ಷರಗಳನ್ನು ಬರೆಯುವಾರರು. ಮತ್ತು ತೋರಿಸಿದಕ್ಷರವನ್ನು ಹೇಳಲಾರರು. ಅಂತೂ ಅಕ್ಷರಜ್ಞಾನವುಂಟುಮಾಡುವುದರ ಮುಖ್ಯೋದ್ದೇಶವು ಸುಲಭವಾಗಿಯೂ ಜಾಗ್ರತೆಯಾಗಿಯೂ ನೆರವೇರುವುದಿಲ್ಲ.

A. ಸಶೇಷ.

ಕೈ ಬ ರ ಹ.

ಒಂದಾನೊಂದು ಕಾಲದಲ್ಲಿ ಕೈಬರಹಕ್ಕೆ ಗಿರಾಕಿಯು ಬಹಳವಾಗಿತ್ತು. ಆಚ್ಚು ಹಾಕುವುದು ಆಚರಣೆಗೆ ಬಂದಮೇಲೆ ಕೈಬರಹಕ್ಕೆ ಅವಕಾಶವು ಕಡಮೆಯಾಯಿತು. ಈಚಿಗೆ ಟೈಪ್ ರೈಟರುಗಳು ಬಂದು ಇಂಗ್ಲೀಷು ಬರವಣಿಗೆಗೆ ಇನ್ನೂ ಅವಕಾಶವು ಕಡಮೆಯಾಗುತ್ತಲಿದೆ. ಕನ್ನಡ ಭಾಷೆಯಲ್ಲಿ ಟೈಪುರೈಟರುಗಳು ಇನ್ನೂ ನಿರ್ಮಾಣವಾಗಿಲ್ಲ. ಇದು ನಿರ್ಮಾಣವಾದ ಕೂಡಲೇ ಕನ್ನಡಭಾಷೆಯಲ್ಲಿಯೂ ಬರವಣಿಗೆಗೆ ಅವಕಾಶವು ಕಡಮೆಯಾಗುವುದು. ಈ ಅವಕಾಶವು ಎಷ್ಟು ಕಡಮೆಯಾದಾಗ್ಯೂ ಒಳ್ಳೇ ಬರವಣಿಗೆಯನ್ನು ಬರೆಯುತಕ್ಕವರಿಗೆ ಒಳ್ಳೇ ಗಿರಾಕಿಯು ಸಿಕ್ಕೇ ಸಿಕ್ಕುವುದು. ಲೇಖಕರಿಗೆ ಸರಿಯಾದ ಗಿರಾಕಿಯು ಸಿಕ್ಕಬೇಕಾಕಾದರೆ ಅವರು ಕೆಲವು ಬಾಬುಗಳಿಗೆ ಗಮನವನ್ನು ಕೊಡಬೇಕು. ಬರವಣಿಗೆಯನ್ನು ಬರೆಯುತಕ್ಕವನ ಉದ್ದೇಶವು ಓದತಕ್ಕವನಿಗೆ ತಿಳಿಯಬೇಕೆಂಬುದೇ ಮುಖ್ಯವಾಗಿರುವುದು. ಆದುದರಿಂದ ಅಕ್ಷರಗಳ ಸ್ವರೂಪವನ್ನು ಕೆಡಿಸಿ ವಿರೂಪವಾದ ಅಕ್ಷರಗಳನ್ನು ಬರೆದು ಮೋಡೀ ಬರೆಯುತ್ತೇನೆಂಬದಾಗಿ ವಿಜೃಂಭಿಸುವುದು ಪ್ರಯೋಜನಕಾರಿಯಾದುದಲ್ಲ. ಹೀಗೆ ಮಾಡುವುದರಿಂದ ಲೇಖನದ ಮುಖ್ಯಉದ್ದೇಶವನ್ನೇ ನಾಶಮಾಡಿದಂತಾಗುವುದು. ಹುಟ್ಟಿದ ಅಕ್ಷರಗಳನ್ನು ಕೂಡಿದಮಟ್ಟಿಗೂ ಹುಟ್ಟಿದ ಹಾಗೆಯೇ ಬರೆಯತಕ್ಕುದು ಈ ಉದ್ದೇಶವನ್ನು ನೆರವೇರಿಸುತ್ತದೆಯಾದುದರಿಂದ ವಿದ್ಯಾರ್ಥಿಗಳು ಈ ವಿಷಯಕ್ಕೆ ಗಮನವನ್ನು ಕೊಡಬೇಕು. ಎರಡನೇ ವಿಷಯವು ಅಕ್ಷರಗಳು ಸುಂದರವಾಗಿರುವುದು. ಹುಟ್ಟಿದ ಅಕ್ಷರಗಳನ್ನು ಹುಟ್ಟಿದಹಾಗೆಯೇ ಬರೆಯುತ್ತಾ ಬಂದರೆ ಬರವಣಿಗೆಯು ಅಭ್ಯಾಸವಾಗಿ ಬೆರಳುಗಳಿಗೆ ಲಾಘವ ಉಂ

ಬಾದ ಜಾಗೆಲ್ಲಾ ಅಕ್ಷರವು ಮುದ್ದಾಗುತ್ತದೆ. ಹೀಗಾಗಬೇಕಾದರೆ ವಿದ್ಯಾರ್ಥಿಗಳು ಪ್ರತಿನಿತ್ಯದಲ್ಲಿಯೂ ಬೆರಳುಗಳಿಗೆ ಬರೆಯುವುದರಲ್ಲಿ ಅಭ್ಯಾಸವನ್ನು ಕೊಡಬೇಕು. ಈ ಅಭ್ಯಾಸವನ್ನು ಕೊಡುವುದರಲ್ಲಿ ವಿದ್ಯಾರ್ಥಿಗಳು ಸಾವಧಾನವುಳ್ಳವರಾಗಿರಬೇಕು. ಕೈತಿದ್ದುವ್ಯದಕ್ಕೆ ಮುಂಚೆಯೇ ಅತುರದಿಂದ ಬೇಗಬೇಗ ಬರೆಯುವುದಕ್ಕೆ ಉಪಕ್ರಮ ಮಾಡಬಾರದು. ನಿಧಾನವಾಗಿ ಪ್ರತಿದಿವಸದಲ್ಲಿಯೂ ಒಂದೆರಡು ಘಂಟೆಗಳಿಗೆ ಕಡಮೆಯಿಲ್ಲದೆ 5—6 ತಿಂಗಳು ಮೆಹನತ್ತು ಮಾಡಿದರೆ ಅನಂತರ ಕ್ರಮಕ್ರಮವಾಗಿ ಜಾಗ್ರತೆಯಾಗಿ ಬರೆಯುವುದನ್ನು ಅಭ್ಯಾಸಮಾಡಿಕೊಳ್ಳಬಹುದು. ಬೆರಳುಗಳು ಹತೋಟಿಗೆ ಬರುವುದಕ್ಕೆ ಮುಂಚೆಯೇ ಜಾಗ್ರತೆಯಾಗಿ ಬರೆಯುವುದಕ್ಕೆ ಉಪಕ್ರಮಿಸಿದರೆ ನಾವು ಒಂದುಕಡೆಗೆ ಎಳೆದರೆ ಬೆರಳುಗಳು ಮತ್ತೊಂದು ಕಡೆಗೆ ನಡೆದು ಅಕ್ಷರಗಳು ಅಪ್ಯಾವಕ್ರವಾಗುವುದಕ್ಕೆ ಅವಕಾಶವಾಗುವುದು. ಆದುದರಿಂದ ಬೆರಳುಗಳು ಹತೋಟಿಗೆ ಬರುವವರೆಗೂ ಜಾಗ್ರತೆಯಾಗಿ ಬರೆಯುವುದಕ್ಕೆ ಉಪಕ್ರಮ ಮಾಡಬಾರದು. ಈ ವಿಷಯದಲ್ಲಿ ಜಾಗರೂಕರಾಗಿದ್ದರೆ ಅಕ್ಷರಗಳು ಕೊಬ್ಬಿದ ಮಕ್ಕಳಂತೆ ಮುದ್ದಾಗುವದರಲ್ಲಿ ಸಂದೇಹವಿಲ್ಲ. ಇದಲ್ಲದೆ ಅಕ್ಷರಗಳು ಸುಂದರವಾಗಬೇಕಾದರೆ ಮತ್ತೊಂದು ವಿಷಯಕ್ಕೆ ವಿದ್ಯಾರ್ಥಿಗಳು ಗಮನವನ್ನು ಕೊಡಬೇಕು. ಕುದುರೆಗಳೂ ಕೂಡ ಎಂತಹ ಕುದುರೆಯನ್ನು ನೋಡುತ್ತವೆಯೋ ಅಂಥಾ ಮರಿಯನ್ನು ಹಾಕುತ್ತವೆ. ಈ ವಿಷಯವು ಕೈಬರಹಕ್ಕೂ ಅನ್ವಯಿಸುವುದು. ಯಾವ ಕೈಬರಹದ ಮೇಲುಪಜ್ಞೆಯನ್ನು ನಾವು ನೋಡುತ್ತೇವೆಯೋ ಅದನ್ನು ಅನುಸರಿಸುವ ಬುದ್ಧಿಯು ನಮಗೆ ಹುಟ್ಟುವುದು. ಆದುದರಿಂದ ಒಳ್ಳೇ ಮೇಲುಪಜ್ಞೆಯನ್ನು ಪಡೆದು ಅದರಂತೆಯೇ ಬರೆಯಬೇಕೆಂದು ಅಭ್ಯಾಸಮಾಡುತ್ತಾ ಅಕ್ಷರಗಳು ಆರೀತಿಯಲ್ಲಿ ಪರಿಣಮಿಸುವವರಿಗೂ ಬೇಜಾರನ್ನು ಹೊಂದದೆ ಸ್ಥಿರವಾದ ಸಂಕಲ್ಪದಿಂದ ನಿಧಾನವಾಗಿ ಬರೆಯುತ್ತಾ ಬಂದರೆ ಅಕ್ಷರಗಳು ಸುಂದರವಾಗುವುದರಲ್ಲಿ ಸಂದೇಹವಿಲ್ಲ. ಅಕ್ಷರಗಳ ಸೌಂದರ್ಯಪ್ರಾಪ್ತಿಗೆ ಇನ್ನೂ ಒಂದು ವಿಷಯಕ್ಕೆ ಗಮನವನ್ನು ಕೊಡಬೇಕು. ಪ್ರತಿಯೊಂದು ಅಕ್ಷರದ ಗಾತ್ರವೂ ಒಂದೇ ವಿಧವಾಗಿರಬೇಕು. ಅಂದರೆ ಒಂದಕ್ಷರವು ದಪ್ಪವಾಗಿಯೂ ಮತ್ತೊಂದಕ್ಷರವು ಚಿಕ್ಕವಾಗಿಯೂ ಇರಕೂಡದು. ಒಂದು ಅಕ್ಷರಕ್ಕೂ ಮತ್ತೊಂದು ಅಕ್ಷರಕ್ಕೂ ಇರತಕ್ಕ ಅವಕಾಶವು ಎಲ್ಲಾ ಅಕ್ಷರಗಳ ಮಧ್ಯದಲ್ಲಿಯೂ ಒಂದೇವಿಧವಾಗಿರಬೇಕು. ಅನೇಕರು ಅಕ್ಷರಗಳಿಗೆ ವಿಾಶೆಗಳನ್ನೂ ಬಾಲಗಳನ್ನೂ ಉಂಟುಮಾಡುವದುಂಟು. ಇದು

ಅಲಂಕಾರವೆಂದು ತಿಳಿದುಕೊಳ್ಳುತ್ತಾರೆ. ಇದೆಂದಿಗೂ ಅಲಂಕಾರವಾಗಿ ಪರಿಣಮಿಸುವುದಿಲ್ಲ. ಕುರೂಪಿಗಳಾದವರು ಆಭರಣಗಳನ್ನು ಹಾಕಿಕೊಂಡರೆ ಆಭರಣದ ಕಾಂತಿಗೂ ಹೇಗೆ ನ್ಯೂನತೆಯುಂಟಾಗುವುದೋ ಹಾಗೆ ಅಕ್ಷರಗಳಿಗೆ ನಾನಾವಿಧವಾದ ಗೀಟುಗಳನ್ನೆಳೆಯುವುದರಿಂದ ವಿಕಾರವುಂಟಾಗುವುದು. ಕೈಬರಹವು ಕಷ್ಟವೆಂದು ಬಹುಜನಗಳು ತಿಳಿದುಕೊಂಡಿರುವರು. ಇದು ನಿಜವಲ್ಲ. ಅವಿಚ್ಛಿನ್ನವಾಗಿ ದಿನಕ್ಕೆ 3 ಘಂಟೆ ಹೊತ್ತು ನಿಧಾನವಾಗಿಯೂ ಜಾಗರೂಕತೆಯಿಂದಲೂ ಬರೆಯುತ್ತಾ ಬಂದರೆ ಕೈತಿದ್ದುವುದು. ಅನಂತರ 6 ತಿಂಗಳುಕಾಲ ಇದೇರೀತಿಯಲ್ಲಿ ಮೆಹನತ್ತು ಮಾಡಿದರೆ ಬೇಗ ಬರೆಯುವ ಶಕ್ತಿಯು ಬರುವುದು. ಚನ್ನಾಗಿ ಕೈಬರಹವನ್ನು ತಿಳಿದವರಿಗೆ ಸುಲಭವಾದ ಜೀವಿಕೆಯು ದೊರೆಯುವುದು. ತಪ್ಪಿಲ್ಲದೆ ಬರೆಯುವ ಮಟ್ಟಿಗೆ ಭಾಷಾ ಪರಿಚಯವನ್ನು ಮಾಡಿಕೊಂಡು ದೇಶಭಾಷೆಯಲ್ಲಿಯೂ, ಇಂಗ್ಲೀಷಿನಲ್ಲಿಯೂ ಹುಟ್ಟಿದಕ್ಷರವು ಹುಟ್ಟಿದಹಾಗೆ ಬರೆಯುವುದನ್ನು ಕಲಿಯಬೇಕಾದರೆ ಎರಡು ಮೂರು ವರ್ಷಗಳ ವ್ಯಾಸಂಗವು ಸಂಪೂರ್ಣವಾಗಿ ಸಾಕಾಗುವುದು. ಆದರೆ ಇಷ್ಟುಕಾಲದಲ್ಲಿ ಈ ಬಾಬುಗಳಲ್ಲಿ ಪರಿಪೂರ್ಣವಾದ ಶಕ್ತಿಯುಂಟಾಗಬೇಕಾದರೆ ವಿದ್ಯಾರ್ಥಿಗಳು ಭಾಷಾ ಪರಿಚಯಕ್ಕೂ ಲೇಖನಕ್ಕೂ ತಮ್ಮ ಕಾಲವನ್ನು ಸಂಪೂರ್ಣವಾಗಿ ಕೊಡಬೇಕು. ಅನೇಕ ವಿದ್ಯಾರ್ಥಿಗಳಿಗೆ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿ ಒಳ್ಳೇ ಪದವಿಗೆ ಬರುವುದಕ್ಕೆ ಅನುಕೂಲ್ಯಗಳು ಸರಿಯಾಗಿರುವದಿಲ್ಲ. ಅಂತಹ ವಿದ್ಯಾರ್ಥಿಗಳು ಭಾಷಾಪರಿಚಯಕ್ಕೂ ಕೈಬರಹದಲ್ಲಿ ಸಮರ್ಥರಾಗುವುದಕ್ಕೂ ಪ್ರಯತ್ನಮಾಡಿ ಅದರಿಂದ ವೃದ್ಧಿಗೆ ಬರುವ ಕೆಲಸವನ್ನು ಶ್ರದ್ಧೆಯಿಂದ ಮಾಡುವುದು ಅತ್ಯಂತ ಆವಶ್ಯಕ.

ಉಪಾಧ್ಯಾಯರುಗಳ ಸಂಘಗಳು.

ಈಗ ವಿದ್ಯಾರ್ಥಿಗಳಾಗಿರತಕ್ಕವರು ಕೆಲವು ವರ್ಷಗಳಲ್ಲಿಯೇ ತಮ್ಮ ವ್ಯಾಸಂಗವನ್ನು ಪೂರೈಸಿಕೊಂಡು ಕೆಲವರು ಅಧಿಕಾರಿಗಳಾಗಿಯೂ ಕೆಲವರು ಯಂಜನೀಯರುಗಳಾಗಿಯೂ, ಕೆಲವರು ವರ್ತಕರಾಗಿಯೂ, ಕೆಲವರು ಕರ್ಷಕರಾಗಿಯೂ, ಕೆಲವರು ಕೈಗಾರಿಕೆಗಳ ಅನೇಕವಿಧವಾದ ಶಾಖೆಗಳಲ್ಲಿ ಉದ್ಯೋಗಮಾಡತಕ್ಕವರಾಗಿಯೂ ಪರಿಣಮಿಸುವರು. ಈ ಜನಗಳಿಗೆ ಬಾಲ್ಯದಲ್ಲಿ ಯಾವವಿಧವಾದ ಶಿಕ್ಷೆಯು ದೊರೆತಿರುವದೋ ಅದಕ್ಕೆ ಅನುರೂಪವಾದ ಫಲವನ್ನು ಹೊಂದುವರು. ಈ ಶಿಕ್ಷೆಗೆ ಕಾರಣಭೂತರಾದವರು ಪಾಠಕರು. ಈ ಪಾಠಕರು ಸಕಲವಿದ್ಯಾ ವಿಶಾರ

ದರಾಗಿಯೂ, ಶ್ರದ್ಧೆಯುಳ್ಳವರಾಗಿಯೂ ವಿದ್ಯಾರ್ಥಿಗಳ ಪುರೋವೃದ್ಧಿಯಲ್ಲಿ ಆಸಕ್ತರಾಗಿಯೂ, ಕೆಲಸಮಾಡಿದರೆ ಉತ್ತರೋತ್ತರ ಪ್ರಪಂಚದ ಸ್ಥಿತಿಯು ಮೇಲಾಗುವುದೆಂಬದಾಗಿಯೂ, ತಾವು ಉದಾಸೀನ ಮಾಡಿದರೆ ತಮ್ಮದೇಶವೇ ಹೀನಸ್ಥಿತಿಗೆ ಬರುವುದೆಂಬುದಾಗಿಯೂ, ತಿಳಿದುಕೊಂಡು ವಿದ್ಯಾರ್ಥಿಗಳ ವಿಷಯದಲ್ಲಿ ಪುತ್ರನಿರ್ವಿಶೇಷವಾದ ಪ್ರೀತಿಯಿಂದ ಪಾಠಗಳನ್ನು ಹೇಳತಕ್ಕವರಾಗುತ್ತಾ ಬಂದರೆ ದೇಶವು ಅತ್ಯುತ್ತಮನು ಸ್ಥಿತಿಗೆ ಬರುವುದು. ಈವಿಧದ ಆಸಕ್ತ್ಯಯುಳ್ಳ ಪಾಠಕರು ಅಪೂರ್ವವಾಗಿದಾರೆ. ಈ ಕಾಲದೇಶ ವರ್ತಮಾನಗಳಿಗೆ ಅನುಸಾರವಾಗಿ ತಿಳಿದುಕೊಳ್ಳಬೇಕಾದ ವಿಷಯಗಳನ್ನೆಲ್ಲಾ ತಿಳಿದುಕೊಳ್ಳುತ್ತಾ ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ಕೊಡುವುದಕ್ಕೆ ತಕ್ಕ ಯೋಗ್ಯತೆಯನ್ನು ಸಂಪಾದಿಸಿಕೊಳ್ಳುತ್ತಾ ಇರತಕ್ಕ ಪಾಠಕರು ಬಹಳ ವಿರಳವಾಗಿರುವರು. ಇದು ಸಂಪೂರ್ಣವಾಗಿ ಅವರ ತಪ್ಪೆಂದು ನಾವು ಹೇಳುವುದಿಲ್ಲ. ಅವರಿಗೆ ಈ ವಿಷಯದಲ್ಲಿ ಇರಬೇಕಾದ ಪ್ರೋತ್ಸಾಹದ ಅಭಾವವೂ ಒಂದು ಕಾರಣವೆಂದು ಸ್ಪಷ್ಟವಾಗಿ ಹೇಳಬಹುದು. ಸರಕಾರದ ಆನೇಕ ಇಲಾಖೆಗಳಲ್ಲಿ ವಿದ್ಯಾಭ್ಯಾಸದ ಇಲಾಖೆಯು ಒಂದಾಗಿರುವುದು. ಇತರ ಇಲಾಖೆಗಳ ಉದ್ದೇಶದಲ್ಲಿ ವೃದ್ಧಿಗೆ ಬರುವುದಕ್ಕೆ ಎಷ್ಟು ಅವಕಾಶವಿರುವದೋ ಅಷ್ಟು ಅವಕಾಶವು ಈ ಇಲಾಖೆಯಲ್ಲಿಯೂ ಇದ್ದರೆ ಇವರಿಗೆ ವಿಶೇಷ ಶ್ರದ್ಧೆಯಿಂದ ಕೆಲಸಮಾಡುವುದಕ್ಕೂ ಸರ್ವತೋಮುಖವಾದ ಪ್ರಜ್ಞೆಯನ್ನು ಸಂಪಾದಿಸಿ ಅದೇವಿಧವಾದ ಪ್ರಜ್ಞೆಯನ್ನು ವಿದ್ಯಾರ್ಥಿಗಳಿಗೆ ಉಂಟುಮಾಡುವುದಕ್ಕೂ ಶಕ್ತರಾಗುವರು. ಆ ವಿಧವಾದ ಪ್ರೋತ್ಸಾಹಗಳು ತಕ್ಕಮಟ್ಟಿಗೆ ಇರುವುದಿಲ್ಲ. ಅನೇಕ ಪಾಠಕರು ತಮಗೆ ಬರತಕ್ಕ ಸಂಬಳಗಳಲ್ಲಿ ಜೀವನಮಾಡುವುದಕ್ಕೆ ಸಾಧ್ಯವಿಲ್ಲದೆ ಈ ಪಾಠಕ ವೃತ್ತಿಯನ್ನೇ ಬಿಟ್ಟು ಹೊಟ್ಟೆತುಂಬಾ ಅನ್ನವನ್ನೂ ಮೈತುಂಬ ಬಟ್ಟೆಯನ್ನೂ ಕೊಡುವ ಯಾವುದಾದರೂ ಇತರ ವೃತ್ತಿಯನ್ನು ಅವಲಂಬಿಸಬೇಕೆಂದು ಸಂಕಲ್ಪಮಾಡಿ ಅದಕ್ಕೆ ಅವಕಾಶವಿಲ್ಲದೆ ತಾಪತ್ರಯಪಡುವುದನ್ನು ನಾವು ನೋಡುತ್ತಲೇ ಇದೇವೆ. ಹೀಗೆ ಹೊಟ್ಟೆಗೆಸಾಲದೆ ಇರತಕ್ಕ ಪಾಠಕರು ತಮ್ಮ ಕೆಲಸಗಳನ್ನು ಮನಃಪೂರ್ವಕವಾಗಿ ಹೇಗೆತಾನೇ ಮಾಡುವರು. ಜ್ಞಾನವೃದ್ಧಿಯಾಗತಕ್ಕ ವ್ಯಾಸಂಗಗಳನ್ನು ಮಾಡುವುದಕ್ಕೆ ಅವರಿಗೆ ಅವಕಾಶವೆಲ್ಲಿಯದು. ಈ ಅವಕಾಶವಿಲ್ಲದೇ ಇರತಕ್ಕವರು ಮಾಡತಕ್ಕ ಶಿಕ್ಷೆಯು ವಿದ್ಯಾರ್ಥಿಗಳ ಅಭಿವೃದ್ಧಿಗೆ ಹೇಗೆತಾನೇ ಸಾಧಕವಾಗುವುದು. ಇವು ಎಂದಿಗೂ ಆಗಲಾರವು. ಪಾಠಕರ ಸ್ಥಿತಿಯು ಮೇಲಾಗಬೇಕಾದರೆ ಅವರಿಗೆ ಕೊಡತಕ್ಕ ಸಂಬಳಗಳು ಅವರ ಜೀವನಕ್ಕೆ ತಕ್ಕಮಟ್ಟಿ

ಗಾದರು ಆಗಬೇಕು. ಈಗ ಪ್ರಪಂಚದಲ್ಲಿ ನಾನಾವಿಧವಾದ ಶಾಸ್ತ್ರಗಳು ಅತ್ಯಂತ ವೃದ್ಧಿಗೆ ಬರುತ್ತಲಿವೆ. ಅನೇಕ ವಿಧವಾದ ನಿರ್ಮಾಣಗಳು ಆಚರಣೆಗೆ ಬರುತ್ತಲಿವೆ. ಅವುಗಳ ಪ್ರಯೋಜನವನ್ನು ಹೊಂದಬೇಕಾದರೆ ಈ ಬಾಬಿನಲ್ಲಿ ಶಿಕ್ಷೆಯನ್ನು ಕೊಡತಕ್ಕವರು ಅವುಗಳಲ್ಲಿ ಸಂಪೂರ್ಣವಾದ ಜ್ಞಾನವನ್ನು ಹೊಂದಿರಬೇಕು. ಹಾಗೆ ಹೊಂದಬೇಕಾದರೆ ಅದಕ್ಕೆ ತಕ್ಕ ಅನುಕೂಲ್ಯಗಳನ್ನು ಒದಗಿಸಿಕೊಳ್ಳಬೇಕು. ಇವೆಲ್ಲಾ ಒಬ್ಬರಿಂದ ಆಗತಕ್ಕ ಕೆಲಸವಲ್ಲ. ಈ ಸಂಸ್ಥಾನದ ಪಾಠಕರೆಲ್ಲರೂ ಸೇರಿ ಪಾಠಕರ ಸಂಘವೊಂದನ್ನು ಏರ್ಪಡಿಸಿಕೊಂಡು ಈ ಸಂಘದವರು ಎಲ್ಲಾ ಪಾಠಕರ ಯೋಗಕ್ಷೇಮವನ್ನೂ ಜ್ಞಾನಾಭಿವೃದ್ಧಿಯನ್ನೂ ನೋಡಿಕೊಳ್ಳಬೇಕು. ಈಚೆಗೆ ಮದರಾಸ್ ಪಟ್ಟಣದಲ್ಲಿ ಸವಿಾಚೀನವಾದ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ವಸ್ತುಪ್ರದರ್ಶನವು ನಡೆಯಿತು. ಇದೇ ವಿಷಯದಲ್ಲಿ ಉಪನ್ಯಾಸಗಳೂ ಕೂಡಾ ನಡೆದುವು. ಅದನ್ನು ಅನುಸರಿಸಿ ಕಳೆದ ನವರಾತ್ರಿ ಮಹೋತ್ಸವದಲ್ಲಿ ನಡೆದ ವ್ಯವಸಾಯ ಮತ್ತು ಕೈಗಾರಿಕೆ ಪ್ರದರ್ಶನದ ಸಂಗಡ ಈ ರಾಜಧಾನಿಯಲ್ಲಿಯೂ ಕೂಡಾ ವಿದ್ಯಾಭ್ಯಾಸದ ವಸ್ತುಪ್ರದರ್ಶನವೂ ಉಪನ್ಯಾಸಗಳೂ ನಡೆದುವು. ಇವುಗಳಿಂದ ನಮ್ಮ ಸಂಸ್ಥಾನದ ವಿದ್ಯಾಭ್ಯಾಸ ಕ್ರಮವು ಹೇಗೆ ತಿದ್ದುವಾಟು ಮಾಡಲ್ಪಡಬೇಕೋ ಆ ಸಂದರ್ಭಗಳೂ ಕೂಡ ಗೊತ್ತುಮಾಡಲ್ಪಟ್ಟವು. ಇಂಥಾ ಪ್ರದರ್ಶನಗಳೂ ಮತ್ತು ಕಾರ್ಖರೆಸ್‌ಗಳೂ ಜನಗಳ ತಿಳುವಳಿಕೆಗೆ ಬರುವಂತೆ ಮಾಡಲ್ಪಡುವುದು ಅವಶ್ಯಕ. ಬ್ರಿಟಿಷ್ ಇಂಡಿಯಾದಲ್ಲಿ ಇವುಗಳನ್ನು ಡಿಪ್ಟ್ರಿಕ್ಟ್‌ವಾರಾಗಿ ಒಂದೊಂದು ಕಡೆ ಮಾಡಿ ಜನಗಳ ಅನುಭವಕ್ಕೆ ಮಾಡಬೇಕೆಂಬ ವಿಷಯವನ್ನು ಪರ್ಯಾಲೋಚಿಸುತ್ತಲಿದ್ದಾರೆ. ಮದರಾಸ್ ಸಂಸ್ಥಾನದ ಪಾಠಕರೆಲ್ಲರೂ ಸೇರಿ ಉಪಾಧ್ಯಾಯರ ಸಂಘವೆಂಬುದೊಂದನ್ನು ಮಾಡಿಕೊಂಡಿದಾರೆ. ವಿದ್ಯಾಭ್ಯಾಸದ ವಿಷಯವನ್ನು ಪರ್ಯಾಲೋಚಿಸುವದಕ್ಕೆ ನ್ಯಾಷನಲ್ ಕೌನ್ಸಿಲ್ ಎಂಬ ಒಂದು ಸಭೆಯನ್ನು ಮಾಡಿಕೊಂಡಿದಾರೆ. ಉತ್ತರೋತ್ತರ ದೇಶದ ವಿದ್ಯಾರ್ಥಿಗಳೆಲ್ಲರೂ ಪ್ರಜ್ಞಾಶಾಲಿಗಳಾಗುವುದಕ್ಕೆ ಏರ್ಪಾಡುಗಳನ್ನು ಮಾಡುತ್ತಲಿದ್ದಾರೆ. ಈ ಸಂಘದವರ ಮುಖ್ಯೋದ್ದೇಶವು ವಿದ್ಯಾವಂತರಲ್ಲೆಲ್ಲಾ ಸೌಹಾರ್ದವನ್ನುಂಟು ಮಾಡತಕ್ಕದ್ದಾಗಿರುವದು. ಭಯದಿಂದಲೂ ದರ್ಪದಿಂದಲೂ ವಿದ್ಯಾಭ್ಯಾಸ ಮಾಡಿಸತಕ್ಕ ಕ್ರಮವು ಸವಿಾಚೀನವಾದುದಲ್ಲವೆಂಬುದಾಗಿಯೂ ಪಾಠಕರೂ ಮತ್ತು ಶಿಷ್ಯರೂ ಪರಸ್ಪರ ಪ್ರೀತಿಯುಳ್ಳವರಾಗಿ ಇದ್ದರೆ ಹೇಳತಕ್ಕವರಿಗೂ ತಿಳಿದುಕೊಳ್ಳತಕ್ಕವರಿಗೂ ತುಂಬಾ ಸೌಲಭ್ಯ ಉಂಟಾಗುವದೆಂಬುದಾಗಿಯೂ ಪಾಠ

ಕರ ಕೈಯಲ್ಲಿ ಬೆತ್ತವೇ ಇರಕೂಡದೆಂಬುದಾಗಿಯೂ ಅಭಿಪ್ರಾಯವು ಉಂಟಾಗುತ್ತ ಲಿದೆ. ಇದು ವಾಸ್ತವವಾದ ಮಾತು. ಪಾಠಕರು ತಿಳುವಳಿಕೆಯುಳ್ಳವರಾಗಿಯೂ ವಿದ್ಯಾರ್ಥಿಗಳು ತಿಳಿದುಕೊಳ್ಳಬೇಕೆಂಬ ಆಸಕ್ತಿಯುಳ್ಳವರಾಗಿಯೂ ಇದ್ದರೆ ಬೆತ್ತದಿಂ ದ ಯಾವ ಪ್ರಯೋಜನವೂ ಇರುವುದಿಲ್ಲ. ಈಗಿನ ಪಾಠಕ್ರಮಗಳಲ್ಲಿ ಇರತಕ್ಕ ನ್ಯೂ ನಾತಿರಿಕ್ತಗಳನ್ನು ಸಮಂಜಸ ಮಾಡಬೇಕೆಂಬ ಪ್ರಯತ್ನಗಳು ನಡೆಯುತ್ತಲಿವೆ. ಇದ ಕ್ಕೋಸ್ಕರ ಪ್ರತಿತಿಂಗಳಲ್ಲಿಯೂ ವ್ಯವಸಾಯ ನಡೆಯಬೇಕೆಂಬ ಉದ್ದೇಶದಿಂದ ವಿದ್ಯಾ ಭ್ಯಾಸಕ್ಕೆ ಸಂಬಂಧಪಟ್ಟ ಒಂದು ಮಾಸಪತ್ರಿಕೆಯನ್ನು ಹೊರಡಿಸಬೇಕೆಂದು ಪ್ರಯ ತ್ನವು ನಡೆಯುತ್ತಲಿದೆ. ಈ ಪತ್ರಿಕೆಗೆ ಕೊಡತಕ್ಕ ಚಂದಾ ಮೊಬಲಗನ್ನು ವಿದ್ಯಾ ಭ್ಯಾಸದ ಎಗ್ಜಿಬಿಷ್ಟ್ ಮತ್ತು ಕಾರ್ಫರೆನ್ಸ್‌ಗಳಿಗೋಸ್ಕರ ಉಪಯೋಗಿಸಬೇಕೆಂಬ ಆಲೋಚನೆಯು ನಡೆಯುತ್ತಲಿರುವುದು. ಪಾಠಶಾಲೆಗಳಲ್ಲಿ ವ್ಯಾಸಂಗಕ್ಕಾಗಿ ನಿಯ ಮಿಸಲ್ಪಡುವ ಪುಸ್ತಕಗಳನ್ನು ಶೋಧಿಸಿ ನಿರಾಕ್ಷೇಪವಾದ ಪುಸ್ತಕಗಳನ್ನು ಏರ್ಪಾ ಡುಮಾಡಬೇಕೆಂಬ ಆಲೋಚನೆಯನ್ನೂ ಕೂಡಾ ನಡೆಸುತ್ತಲಿದಾರೆ. ವಿದ್ಯಾರ್ಥಿ ಗಳ ಜ್ಞಾನಾಭಿವೃದ್ಧಿಗೆ ಬೇಕಾದ ಕೆಲಸಗಳು ಮಾತ್ರವೇ ಪರಿಶೀಲನೀಯವಲ್ಲ. ದೇ ಹಶಕ್ತಿಯೂ ಆರೋಗ್ಯವೂ ಸಮರ್ಪಕವಾಗಿದ್ದಹೊರತು ಬುದ್ಧಿಶಕ್ತಿಯು ಸರಿಯಾ ಗಿರುವದಕ್ಕಾಗುವುದಿಲ್ಲ. ಆದುದರಿಂದ ಪ್ರತಿಯೊಂದು ಸ್ಥಳದಲ್ಲಿಯೂ ಎಲ್ಲಾ ಸ್ಕೂ ಲಿನ ವಿದ್ಯಾರ್ಥಿಗಳೂ ಸೇರಿ ಸ್ಪೋರ್ಟ್ಸ್ (ಆಟ) ಗಳನ್ನು ಏರ್ಪಾಡುಮಾಡಿ ಅದರಲ್ಲಿ ಗೆಲ್ಲತಕ್ಕವರಿಗೆ ಇನಾಮುಗಳನ್ನು ಕೊಡತಕ್ಕ ಏರ್ಪಾಡುಗಳು ಪರ್ಯಾಲೋಚಿಸಲ್ಪಡು ತ್ತಲಿದೆ. ಇದಲ್ಲದೆ ಪ್ರತಿಯೊಂದು ಸ್ಕೂಲಿನಲ್ಲಿಯೂ ಕ್ರಿಕೆಟ್, ಫುಟ್‌ಬಾಲ್ ಮೊದ ಲಾದ ಆಟಗಳಲ್ಲಿಯೂ ಬೈಲುಸಾಧನೆಗಳಲ್ಲಿಯೂ ವಿದ್ಯಾರ್ಥಿಗಳು ಅಭ್ಯಾಸವನ್ನು ಹೊಂದುವುದಕ್ಕೆ ಮಾಡಬೇಕಾದ ಯೋಚನೆಗಳನ್ನು ಮಾಡುತ್ತಲಿದಾರೆ. ಈ ಏರ್ಪಾಡುಗಳೆಲ್ಲಾ ಬ್ರಿಟಿಷ್ ರಾಜ್ಯದಲ್ಲಿ ಹೇಗೆ ವೃದ್ಧಿಗೆ ಬರುತ್ತಲಿವೆಯೋ ಅದನ್ನು ಪರಿಶೀಲಿಸಿ ನಮ್ಮ ದೇಶದ ಪ್ರತಿಯೊಂದು ಪಟ್ಟಣದ ವಿದ್ಯಾರ್ಥಿಗಳೂ ಕೂಡಾ ಅವುಗಳನ್ನು ಅನುಸರಿಸುವಂತೆ ಮಾಡಬೇಕು. ಆ ವಿದ್ಯಾರ್ಥಿಗಳಿಗೆ ಇರ ತಕ್ಕ ವ್ಯಾಯಾಮದ ಏರ್ಪಾಡುಗಳೆಲ್ಲ ವಿದ್ಯಾರ್ಥಿನಿಯರಿಗೂ ಅನ್ವಯಿಸುವಂತೆ ಮಾಡುವುದು ಅಸಾಧ್ಯ. ಇವರಿಗೆ ಅನುಕೂಲವಾದ ವ್ಯಾಯಾಮಗಳನ್ನು ಕೆಲಸಗ ಳನ್ನೂ ಪರ್ಯಾಲೋಚಿಸಿ ನಿಷ್ಕರ್ಷೆಯನ್ನು ಮಾಡುವುದು ಅವಶ್ಯಕ. ಈ ವಿಷಯ ದಲ್ಲಿಯೂ ಈ ಪಾಠಕರ ಸಭೆಯುವರು ತಕ್ಕ ಏರ್ಪಾಡನ್ನು ಮಾಡುವರು.

ಬಾಲಪಾಠಕ್ರಮ.

ಬಾಲಪಾಠಕ್ರಮದಲ್ಲಿ ಏನು ತಿದ್ದುಪಾಟುಗಳಾಗಬೇಕು ಎಂಬುದನ್ನು ಸರ ಕಾರದವರೂ ಮತ್ತು ಪಾಠಕರೂ ಪರ್ಯಾಲೋಚಿಸುತ್ತಲಿದಾರೆ. ಕಳಿದ ಏಳು ವರ್ಷಗಳಿಂದಲೂ ಇಂಡಿಯಾದೇಶದ ವಿದ್ಯಾಭ್ಯಾಸಕ್ರಮದಲ್ಲಿ ಎಷ್ಟೋ ಬದಲಾ ವಣೆಗಳಾಗಿರುವುವು. ಯೂನಿವರ್ಸಿಟೀಸ್ ಆಕ್ಟ ಎಂಬುದಾಗಿ ಒಂದು ಕಾನೂನು ಜಾರಿಗೆ ತರಲ್ಪಟ್ಟಿತು. ಇದಲ್ಲದೆ ಹೊಸದಾಗಿ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಕೆಲವು ರೂಲುಗಳು ಮಾಡಲ್ಪಟ್ಟುವು. ರಿಜಲ್ಟ್‌ಗ್ರಾಂಟ್ಸ್ ಎಂಬದಾಗಿ ಪರೀಕ್ಷೆ ಯನ್ನು ಕೊಟ್ಟ ಹುಡುಗರ ಸಂಖ್ಯೆಗೆ ಅನುಸಾರವಾಗಿ ಗ್ರಾಂಟುಗಳು ಕೊಡಲ್ಪ ಡುತ್ತಾ ಇದ್ದವು. ಅದನ್ನು ತೆಗೆದುಹಾಕಿ ಸ್ಕೂಲುಗಳ ಸ್ಥಿತಿಯನ್ನು ನೋಡಿ ಗ್ರಾಂಟುಗಳನ್ನು ಕೊಡುವ ಏರ್ಪಾಡಾದವು. ಬಾಲವಿದ್ಯಾಭ್ಯಾಸಕ್ಕೆ ಫೀಜನ್ನು ತೆಗೆದುಹಾಕಬೇಕೆಂಬ ಏರ್ಪಾಡನ್ನು ಇಂಡಿಯಾಗೌರ್ನಮೆಂಟನವರು ಅಚರಣೆಗೆ ತರುವುದರಲ್ಲಿದಾರೆ. ನಮ್ಮ ದೇಶದ ವಿದ್ಯಾಭ್ಯಾಸವು ನಮ್ಮ ಸನಾತನ ಧರ್ಮಗಳಿ ಗೆ ಅನುಸಾರವಾಗಿರಬೇಕೆಂಬ ವಿಷಯವು ಪರ್ಯಾಲೋಚಿಸಲ್ಪಡುತ್ತಲಿದೆ.

ಇಂಡಿಯಾಗೌರ್ನಮೆಂಟನವರ ಉದ್ದೇಶವು ಸಮಸ್ತ ಜನಗಳಿಗೂ ವಿದ್ಯಾ ಭ್ಯಾಸವಾಗಲಿ. ಎಂಬುದಾಗಿ ಇದ್ದಾಗ್ಯೂ ಲೋಕಲ್‌ಗೌರ್ನಮೆಂಟನವರಲ್ಲಿ ಕೆಲ ವರು ಉಚಿತವಾಗಿ ವಿದ್ಯಾಭ್ಯಾಸ ಮಾಡಿಸುವುದೇ ತಪ್ಪೆಂದು ಹೇಳುತ್ತಲಿದಾರೆ. ಹೀಗಿದ್ದಾಗ್ಯೂ ಇಂಡಿಯಾಗೌರ್ನಮೆಂಟನವರ ಉದ್ದೇಶವೇ ಜಾರಿಗೆ ಬರಬಹು ದೆಂಬದಾಗಿಯೂ ತೋರುತ್ತದೆ. ಪಾಠಶಾಲೆಗಳ ಮ್ಯಾನೇಜರುಗಳಿಗೆ ಪಾಠಗಳ ಕ್ರಮದ ವಿಷಯದಲ್ಲಿ ಕಾಲದೇಶ ವರ್ತಮಾನಗಳಿಗೆ ಅನುಸಾರವಾಗಿ ಪಾಠ ಕ್ರಮವನ್ನು ಏರ್ಪಡಿಸಿಕೊಳ್ಳುವುದಕ್ಕೆ ಸ್ವಾತಂತ್ರ್ಯವು ಕೊಡಲ್ಪಡಬೇಕೆಂಬು ದಾಗಿಯೂ ಇನ್‌ಸ್ಪೆಕ್ಟರುಗಳು ಪಾಠಕರ ಉತ್ಸಾಹಭಂಗಕ್ಕೆ ಕಾರಣಭೂತರಾಗಿ ರದೇ ಇರುವಂತೆಯೂ ಮಾಡಲ್ಪಡಬೇಕೆಂಬ ಆಲೋಚನೆಯು ನಡೆಯುತ್ತಲಿದೆ. ಬಾಲಪಾಠವನ್ನು ಹೇಳತಕ್ಕ ಪಾಠಶಾಲೆಗಳಲ್ಲಿ ಏಳು ಸ್ಟ್ಯಾಂಡರ್ಡುಗಳವರಿಗೂ ಪಾಠ ಹೇಳತಕ್ಕ ಪಾಠಶಾಲೆಗಳಿಗೆ ಫಸ್ಟ್‌ಗ್ರೇಡ್ ಎಲಿಮೆಂಟರಿ ಸ್ಕೂಲ್ ಎಂಬುದಾಗಿ ಯೂ ಈ ಸ್ಕೂಲುಗಳಲ್ಲಿ ಫೀಜಿಲ್ಲದೇ ಪಾಠಹೇಳಬೇಕೆಂಬುದಾಗಿಯೂ ಪಾಠಕ ರಿಗೂ ಜೀವನವಾಗುವಂತೆ ಸಂಬಳಗಳನ್ನು ಕೊಡಬೇಕೆಂಬುದಾಗಿಯೂ ಈಗಿರ

ಕರ ಕೈಯಲ್ಲಿ ಬೆತ್ತವೇ ಇರಕೂಡದೆಂಬುದಾಗಿಯೂ ಅಭಿಪ್ರಾಯವು ಉಂಟಾಗುತ್ತಲಿದೆ. ಇದು ವಾಸ್ತವವಾದ ಮಾತು. ಪಾಠಕರು ತಿಳುವಳಿಕೆಯುಳ್ಳವರಾಗಿಯೂ ವಿದ್ಯಾರ್ಥಿಗಳು ತಿಳಿದುಕೊಳ್ಳಬೇಕೆಂಬ ಆಸಕ್ತಿಯುಳ್ಳವರಾಗಿಯೂ ಇದ್ದರೆ ಬೆತ್ತದಿಂದ ಯಾವ ಪ್ರಯೋಜನವೂ ಇರುವುದಿಲ್ಲ. ಈಗಿನ ಪಾಠಕ್ರಮಗಳಲ್ಲಿ ಇರತಕ್ಕ ನ್ಯೂನಾತಿರಿಕ್ತಗಳನ್ನು ಸಮಂಜಸ ಮಾಡಬೇಕೆಂಬ ಪ್ರಯತ್ನಗಳು ನಡೆಯುತ್ತಲಿವೆ. ಇದಕ್ಕೋಸ್ಕರ ಪ್ರತಿತಿಂಗಳಲ್ಲಿಯೂ ವ್ಯವಸಾಯ ನಡೆಯಬೇಕೆಂಬ ಉದ್ದೇಶದಿಂದ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಒಂದು ಮಾಸಪತ್ರಿಕೆಯನ್ನು ಹೊರಡಿಸಬೇಕೆಂದು ಪ್ರಯತ್ನವು ನಡೆಯುತ್ತಲಿದೆ. ಈ ಪತ್ರಿಕೆಗೆ ಕೊಡತಕ್ಕ ಚಂದಾ ಮೊಬಲಗನ್ನು ವಿದ್ಯಾಭ್ಯಾಸದ ಎಗ್ಜಿಬಿಷ್ನ ಮತ್ತು ಕಾನ್ಫರೆನ್ಸುಗಳಿಗೋಸ್ಕರ ಉಪಯೋಗಿಸಬೇಕೆಂಬ ವಿಚಾರಣೆಯು ನಡೆಯುತ್ತಲಿರುವುದು. ಪಾಠಶಾಲೆಗಳಲ್ಲಿ ವ್ಯಾಸಂಗಕ್ಕಾಗಿ ನಿಯಮಿಸಲ್ಪಡುವ ಪುಸ್ತಕಗಳನ್ನು ಶೋಧಿಸಿ ನಿರಾಕ್ಷೇಪವಾದ ಪುಸ್ತಕಗಳನ್ನು ಏರ್ಪಾಡುಮಾಡಬೇಕೆಂಬ ವಿಚಾರಣೆಯನ್ನೂ ಕೂಡಾ ನಡೆಸುತ್ತಲಿದಾರೆ. ವಿದ್ಯಾರ್ಥಿಗಳ ಜ್ಞಾನಾಭಿವೃದ್ಧಿಗೆ ಬೇಕಾದ ಕೆಲಸಗಳು ಮಾತ್ರವೇ ಪರಿತೀಲನೀಯವಲ್ಲ. ದೇಹಶಕ್ತಿಯೂ ಆರೋಗ್ಯವೂ ಸಮರ್ಪಕವಾಗಿದ್ದಹೊರತು ಬುದ್ಧಿಶಕ್ತಿಯು ಸರಿಯಾಗಿರುವದಕ್ಕಾಗುವುದಿಲ್ಲ. ಆದುದರಿಂದ ಪ್ರತಿಯೊಂದು ಸ್ಥಳದಲ್ಲಿಯೂ ಎಲ್ಲಾ ಸ್ಕೂಲಿನ ವಿದ್ಯಾರ್ಥಿಗಳೂ ಸೇರಿ ಸ್ಪೋರ್ಟ್ಸ (ಆಟ) ಗಳನ್ನು ಏರ್ಪಾಡುಮಾಡಿ ಅದರಲ್ಲಿ ಗೆಲ್ಲತಕ್ಕವರಿಗೆ ಇನಾಮುಗಳನ್ನು ಕೊಡತಕ್ಕ ಏರ್ಪಾಡುಗಳು ಪರ್ಯಾಲೋಚಿಸಲ್ಪಡುತ್ತಲಿದೆ. ಇದಲ್ಲದೆ ಪ್ರತಿಯೊಂದು ಸ್ಕೂಲಿನಲ್ಲಿಯೂ ಕ್ರಿಕೆಟ್, ಫುಟ್‌ಬಾಲ್ ಮೊದಲಾದ ಆಟಗಳಲ್ಲಿಯೂ ಬೈಲುಸಾಧನೆಗಳಲ್ಲಿಯೂ ವಿದ್ಯಾರ್ಥಿಗಳು ಅಭ್ಯಾಸವನ್ನು ಹೊಂದುವುದಕ್ಕೆ ಮಾಡಬೇಕಾದ ಯೋಚನೆಗಳನ್ನು ಮಾಡುತ್ತಲಿದಾರೆ. ಈ ಏರ್ಪಾಡುಗಳೆಲ್ಲಾ ಬ್ರಿಟಿಷ್ ರಾಜ್ಯದಲ್ಲಿ ಹೇಗೆ ವೃದ್ಧಿಗೆ ಬರುತ್ತಲಿವೆಯೋ ಅದನ್ನು ಪರಿತೀಲಿಸಿ ನಮ್ಮ ದೇಶದ ಪ್ರತಿಯೊಂದು ಪಟ್ಟಣದ ವಿದ್ಯಾರ್ಥಿಗಳೂ ಕೂಡಾ ಅವುಗಳನ್ನು ಅನುಸರಿಸುವಂತೆ ಮಾಡಬೇಕು. ಆ ವಿದ್ಯಾರ್ಥಿಗಳಿಗೆ ಇರತಕ್ಕ ವ್ಯಾಯಾಮದ ಏರ್ಪಾಡುಗಳೆಲ್ಲ ವಿದ್ಯಾರ್ಥಿನಿಯರಿಗೂ ಅನ್ವಯಿಸುವಂತೆ ಮಾಡುವುದು ಅಸಾಧ್ಯ. ಇವರಿಗೆ ಅನುಕೂಲವಾದ ವ್ಯಾಯಾಮಗಳನ್ನು ಕೆಲಸಗಳನ್ನೂ ಪರ್ಯಾಲೋಚಿಸಿ ನಿಷ್ಕರ್ಷೆಯನ್ನು ಮಾಡುವುದು ಅವಶ್ಯಕ. ಈ ವಿಷಯದಲ್ಲಿಯೂ ಈ ಪಾಠಕರ ಸಭೆಯವರು ತಕ್ಕ ಏರ್ಪಾಡನ್ನು ಮಾಡುವರು.

ಬಾಲಪಾಠಕ್ರಮ.

ಬಾಲಪಾಠಕ್ರಮದಲ್ಲಿ ಏನು ತಿದ್ದುಪಾಟುಗಳಾಗಬೇಕು ಎಂಬುದನ್ನು ಸರ ಕಾರದವರೂ ಮತ್ತು ಪಾಠಕರೂ ಪರ್ಯಾಲೋಚಿಸುತ್ತಲಿದಾರೆ. ಕಳೆದ ಏಳು ವರ್ಷಗಳಿಂದಲೂ ಇಂಡಿಯಾದೇಶದ ವಿದ್ಯಾಭ್ಯಾಸಕ್ರಮದಲ್ಲಿ ಎಷ್ಟೋ ಬದಲಾ ವಣೆಗಳಾಗಿರುವುವು. ಯೂನಿವರ್ಸಿಟೀಸ್ ಆಕ್ಟ್ ಎಂಬುದಾಗಿ ಒಂದು ಕಾನೂನು ಜಾರಿಗೆ ತರಲ್ಪಟ್ಟಿತು. ಇದಲ್ಲದೆ ಹೊಸದಾಗಿ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಕೆಲವು ರೂಲುಗಳು ಮಾಡಲ್ಪಟ್ಟುವು. ರಿಜಲ್ಟ್ ಗ್ರಾಂಟ್ಸ್ ಎಂಬದಾಗಿ ಪರೀಕ್ಷೆ ಯನ್ನು ಕೊಟ್ಟ ಹುಡುಗರ ಸಂಖ್ಯೆಗೆ ಅನುಸಾರವಾಗಿ ಗ್ರಾಂಟುಗಳು ಕೊಡಲ್ಪ ಡುತ್ತಾ ಇದ್ದವು. ಅದನ್ನು ತೆಗೆದುಹಾಕಿ ಸ್ಕೂಲುಗಳ ಸ್ಥಿತಿಯನ್ನು ನೋಡಿ ಗ್ರಾಂಟುಗಳನ್ನು ಕೊಡುವ ಏರ್ಪಾಡಾದವು. ಬಾಲವಿದ್ಯಾಭ್ಯಾಸಕ್ಕೆ ಫೀಜನ್ನು ತೆಗೆದುಹಾಕಬೇಕೆಂಬ ಏರ್ಪಾಡನ್ನು ಇಂಡಿಯಾಗೌರ್ನಮೆಂಟಿನವರು ಆಚರಣೆಗೆ ತರುವುದರಲ್ಲಿದಾರೆ. ನಮ್ಮ ದೇಶದ ವಿದ್ಯಾಭ್ಯಾಸವು ನಮ್ಮ ಸನಾತನ ಧರ್ಮಗಳಿ ಗೆ ಅನುಸಾರವಾಗಿರಬೇಕೆಂಬ ವಿಷಯವು ಪರ್ಯಾಲೋಚಿಸಲ್ಪಡುತ್ತಲಿದೆ.

ಇಂಡಿಯಾಗೌರ್ನಮೆಂಟಿನವರ ಉದ್ದೇಶವು ಸಮಸ್ತ ಜನಗಳಿಗೂ ವಿದ್ಯಾ ಭ್ಯಾಸವಾಗಲಿ. ಎಂಬುದಾಗಿ ಇದ್ದಾಗ್ಯೂ ಲೋಕಲ್‌ಗೌರ್ನಮೆಂಟಿನವರಲ್ಲಿ ಕೆಲ ವರು ಉಚಿತವಾಗಿ ವಿದ್ಯಾಭ್ಯಾಸ ಮಾಡಿಸುವುದೇ ತಪ್ಪೆಂದು ಹೇಳುತ್ತಲಿದಾರೆ. ಹೀಗಿದ್ದಾಗ್ಯೂ ಇಂಡಿಯಾಗೌರ್ನಮೆಂಟಿನವರ ಉದ್ದೇಶವೇ ಜಾರಿಗೆ ಬರಬಹು ದೆಂಬದಾಗಿಯೂ ತೋರುತ್ತದೆ. ಪಾಠಶಾಲೆಗಳ ಮ್ಯಾನೇಜರುಗಳಿಗೆ ಪಾಠಗಳ ಕ್ರಮದ ವಿಷಯದಲ್ಲಿ ಕಾಲದೇಶ ವರ್ತಮಾನಗಳಿಗೆ ಅನುಸಾರವಾಗಿ ಪಾಠ ಕ್ರಮವನ್ನು ಏರ್ಪಡಿಸಿಕೊಳ್ಳುವುದಕ್ಕೆ ಸ್ವಾತಂತ್ರ್ಯವು ಕೊಡಲ್ಪಡಬೇಕೆಂಬು ದಾಗಿಯೂ ಇನ್‌ಸ್ಪೆಕ್ಟರುಗಳು ಪಾಠಕರ ಉತ್ಸಾಹಭಂಗಕ್ಕೆ ಕಾರಣಭೂತರಾಗಿ ರದೇ ಇರುವಂತೆಯೂ ಮಾಡಲ್ಪಡಬೇಕೆಂಬ ಆಲೋಚನೆಯು ನಡೆಯುತ್ತಲಿದೆ. ಬಾಲಪಾಠವನ್ನು ಹೇಳತಕ್ಕ ಪಾಠಶಾಲೆಗಳಲ್ಲಿ ಏಳು ಸ್ಟಾಂಡರ್ಡುಗಳವರಿಗೂ ಪಾಠ ಹೇಳತಕ್ಕ ಪಾಠಶಾಲೆಗಳಿಗೆ ಫಸ್ಟ್‌ಗ್ರೇಡ್ ಎಲಿಮೆಂಟರಿ ಸ್ಕೂಲ್ ಎಂಬುದಾಗಿ ಯೂ ಈ ಸ್ಕೂಲುಗಳಲ್ಲಿ ಫೀಜಿಲ್ಲದೇ ಪಾಠಹೇಳಬೇಕೆಂಬುದಾಗಿಯೂ ಪಾಠಕ ರಿಗೂ ಜೀವನವಾಗುವಂತೆ ಸಂಬಳಗಳನ್ನು ಕೊಡಬೇಕೆಂಬುದಾಗಿಯೂ ಈಗಿರ

ತಕ್ಕ ಅಪ್ಪರ್‌ಪ್ರೈಮರೀ ಸ್ಕೂಲುಗಳೇ ಸೆಕೆಂಡ್‌ಗ್ರೇಡ್ ಎಲಿಮೆಂಟರೀಸ್ಕೂಲುಗಳೆಂಬುದಾಗಿಯೂ ಈಗಿನ ಲೋವರ್‌ಪ್ರೈಮರೀ ಸ್ಕೂಲುಗಳೇ ಥರ್ಡ್‌ಗ್ರೇಡ್ ಎಲಿಮೆಂಟರೀ ಸ್ಕೂಲುಗಳೆಂಬುದಾಗಿಯೂ ಏರ್ಪಾಡು ಮಾಡಿಕೊಂಡಿದಾರೆ. ಒಂದನೇ ಎರಡನೇ ಗ್ರೇಡ್ ಎಲಿಮೆಂಟರೀ ಸ್ಕೂಲುಗಳಲ್ಲಿ, ದೇಶಭಾಷೆ ಗಣಿತ ಬರೆದ ಕಾಗದ ಓದುವುದು, ಡ್ರಾಯಿಂಗ್, ವಾಚಕಪಾಠ, ಸಂಗೀತ, ಅಂಗಸಾಧನೆ ಇದಿಷ್ಟು ಕಡ್ಡಾಯವಾಗಿ ಹೇಳಲ್ಪಡಬೇಕೆಂಬುದಾಗಿಯೂ ಭೂಗೋಳ, ಚರಿತ್ರೆ, ಸಸ್ಯಶಾಸ್ತ್ರ ಪ್ರಾಣಿಶಾಸ್ತ್ರ ಉಪಭಾಷೆ ವ್ಯವಸಾಯ ಆರೋಗ್ಯಶಾಸ್ತ್ರ ಮೊದಲಾದುವುಗಳಲ್ಲಿ ಯಾವುದಾದರೂ ಒಂದು ಐಚ್ಛಿಕವಾಗಿ ವ್ಯಾಸಂಗ ಮಾಡಬೇಕೆಂಬುದಾಗಿಯೂ ಏರ್ಪಾಡು ಮಾಡಿ ಇದಾರೆ. ಮೊದಲನೇ ಗ್ರೇಡ್ ಎಲಿಮೆಂಟರೀ ಸ್ಕೂಲುಗಳಲ್ಲಿ ಅಕ್ಷರಾಭ್ಯಾಸವು, ಓದುವುದು, ಬರೆಯುವುದು, ಮುಖ್ಯವಾದುದರಿಂದ ಪಾಠಕರಿಗೆ ತಮ್ಮ ಇಷ್ಟಾನುಸಾರವಾಗಿ ಪಾಠಹೇಳುವುದಕ್ಕೆ ಸ್ವಾತಂತ್ರ್ಯವು ಕೊಡಲ್ಪಟ್ಟಿದೆ. ಇದಲ್ಲದೆ ಪಾಠಕರಿಗೆ ಆತರು ಹೇಳತಕ್ಕ ಪಾಠಗಳಲ್ಲಿ ವಿದ್ಯಾರ್ಥಿಗಳಿಗೆ ಆಸಕ್ತಿಯುಂಟಾಗುವಂತೆ ಮಾಡಬೇಕಾದರೆ ಯಾವರೀತಿಯಲ್ಲಿ ಯಾವ ಯಾವ ಪಾಠಗಳನ್ನು ಹೇಳಬೇಕೋ ಅದನ್ನೆಲ್ಲಾ ಪರ್ಯಾಲೋಚಿಸಿ ಅದಕ್ಕೆ ಬೇಕಾದ ಕಟ್ಟಳೆಗಳನ್ನು ಏರ್ಪಡಿಸಿ ಇದಾರೆ. ಈ ಪಾಠಪ್ರವಚನಗಳು ಸರಿಯಾಗಿ ನಡೆಯುವುದೋ ಇಲ್ಲವೋ ಎಂಬುದನ್ನು ಪರೀಕ್ಷಿಸುವುದಕ್ಕೂ ಪಾಠಕರಿಗೆ ಮಾರ್ಗದರ್ಶನವನ್ನು ಮಾಡುವುದಕ್ಕೂ ಸೂಪರ್ವೈಜರುಗಳನ್ನು ಸಬ್ ಆಸಿಸ್ಟೆಂಟ್ ಇನ್‌ಸ್ಪೆಕ್ಟರುಗಳನ್ನು ನಿಯಮಿಸಿರುತ್ತಾರೆ. ಪರೀಕ್ಷೆಯನ್ನು ಕೊಟ್ಟಮಾತ್ರದಿಂದಲೇ ಇನ್‌ಸ್ಪೆಕ್ಟರು ಕೆಲವಕ್ಕೆ ಜನಗಳು ಅರ್ಹರಾಗುವುದಿಲ್ಲ. ಪರೀಕ್ಷೆಯನ್ನು ಕೊಟ್ಟು ಈ ಬಾಬುಗಳಲ್ಲಿ ಪಾಠಹೇಳುವ ಶಕ್ತಿಯನ್ನು ಕೂಡಾ ಪಡೆದಿರಬೇಕೆಂದು ನಿಷ್ಕರ್ಷೆ ಮಾಡಿ ಇದಾರೆ. ಈ ಏರ್ಪಾಡಿಗೆ ಅನುಸಾರವಾಗಿ ಪಾಠಪ್ರವಚನಗಳು ನಡೆದರೆ ತುಂಬಾ ಉಪಯೋಗವಾಗುವುದರಲ್ಲಿ ಸಂದೇಹವಿಲ್ಲ.

ಜಪಾನ್ ದೇಶೀಯರು.

ಜಪಾನಿಗೂ ಇಂಗ್ಲೆಂಡಿಗೂ ಅನೇಕ ವಿಷಯಗಳಲ್ಲಿ ಹೋಲಿಕೆ ಇರುವುದು. ಎರಡೂ ದ್ವೀಪರಾಜ್ಯಗಳಾಗಿರುವುವು. ಆದೇಶಗಳಲ್ಲಿ ಖನಿಜಗಳು ವಿಶೇಷವಾಗಿರುವುವು. ಜನರು ಶೂರರು ಮತ್ತು ಕೈಗಾರಿಕೆಗಳಲ್ಲಿ ಚತುರರು. ಅನುಪಯುಕ್ತವಾದ ಹಳೆಯ ಪದ್ಧತಿಗಳನ್ನು ತ್ಯಜಿಸಿ ಪ್ರಯೋಜನಕರವಾದ ಹೊಸ ಹೊಸ ಸಂಪ್ರದಾಯಗಳನ್ನು ಕಲ್ಪಿಸಿಕೊಂಡಿರುವರು. ಇನ್ನೂ ಕಲ್ಪಿಸುವುದರಲ್ಲಿಯೂ ಉದ್ಯುಕ್ತರಾಗಿರುವರು. ಕಾಲಸ್ಥಿತಿಗೆ ತಕ್ಕಂತೆ ಆಚರಿಸುತ್ತಿರುವರು. ಹಿಂದೆ ಬೀಳುವವರಲ್ಲ. ಯಾವಾಗಲೂ ಮುಂದರಿದು ಹೋಗುವಂಥವರಾಗಿರುವರು. ಹೀಗೆ ಈ ವಿಷಯಗಳಲ್ಲಿಯೂ ಇನ್ನೂ ಬೇರೆ ಕೆಲವು ವಿಷಯಗಳಲ್ಲಿಯೂ ಆ ಎರಡು ದೇಶೀಯರಿಗೂ ಹೋಲಿಕೆಯು ಕಂಡುಬರುವುದು.

ಜಪಾನಿನ ಪುರಾತನ ಚರಿತ್ರೆಯು ಚೆನ್ನಾಗಿ ಗೊತ್ತಿಲ್ಲ. ಅನ್ಯದೇಶೀಯರು ಅನೇಕ ವೇಳೆಗಳಲ್ಲಿ ಒಬ್ಬರಾಗುತ್ತಲೇ ಮತ್ತೊಬ್ಬರು ಅಲ್ಲಿಯ ದ್ವೀಪಗಳಿಗೆ ದಂಡೆತ್ತಿಹೋಗಿ ಅವುಗಳನ್ನು ಧ್ವಂಸ ಮಾಡಿದರೆಂದು ತಿಳಿದುಬಂದಿದೆ. ಜಪಾನಿಯರ ಪೂರ್ವಿಕರೂ ಅಲ್ಲಿಗೆ ದಂಡೆತ್ತಿ ಬಂದು ಅಲ್ಲಿಯ ಪೂರ್ವನಿವಾಸಿಗಳನ್ನು ಓಡಿಸಿ ತಾವು ಅಲ್ಲಿಯೇ ನೆಲೆಸಿದರೆಂದು ಗೊತ್ತಾಗಿದೆ. ಆದರೆ ಎಲ್ಲಿಂದ ಯಾವಕಾಲದಲ್ಲಿ ಬಂದರೆಂಬುದು ವ್ಯಕ್ತವಾಗಿಲ್ಲ. ಪೂರ್ವಜಪಾನೀಯರಲ್ಲಿ ಚೀನ, ಮಾಂಚು, ಕೋರಿಯ, ಮಲೆಯ, ಪಾಪುವ—ಈ ಸಂತತಿಗಳ ಜನರು ಸಂಕರವಾಗಿದ್ದರೆಂದು ಅನೇಕ ಚರಿತ್ರಕಾರರು ಕೆಲವು ಆಧಾರಗಳಮೇಲೆ ಊಹಿಸಿರುವರು.

ಕಿಯೋಟೊ ಎಂಬ ಪಟ್ಟಣವು ಜಪಾನ್ ಚಕ್ರಾಧಿಪತ್ಯಕ್ಕೆ ಪೂರ್ವದಲ್ಲಿ ರಾಜಧಾನಿಯಾಗಿದ್ದಿತು. ಅಲ್ಲಿಯ ಚಕ್ರವರ್ತಿಗಳಿಗೆ ಬಹುಕಾಲದಿಂದ ಮಿಕಾಡೊ ಎಂಬ ಹೆಸರು ಬಂದಿದೆ. ಪೂರ್ವದಲ್ಲಿ ಚಕ್ರವರ್ತಿಯು ಕೆಲವು ರಾಜವಂಶಿಕರ ಸಹಾಯದಿಂದ ರಾಜ್ಯವನ್ನಾಳುತ್ತಿದ್ದನು. ಅಲ್ಲಿಯ ಪೂರ್ವನಿವಾಸಿಗಳ ದಾಂದಲೆಯನ್ನಡಗಿಸುವುದಕ್ಕೂ ಅನ್ಯದೇಶೀಯರ ಸುಗ್ಗುವಿಕೆಯನ್ನು ತಡೆಯುವುದಕ್ಕೂ ಚಕ್ರವರ್ತಿಯೂ ರಾಜಸಂತತಿಯವರೂ ಸೇರಿ ಕ್ರಮೇಣ ಒಬ್ಬ ಸೇನಾಪತಿಯನ್ನು ನೇಮಕ ಮಾಡಿಕೊಂಡರು. ಆತನಿಗೆ ಷೊಗನ್ ಎಂಬ ಹೆಸರು ಬಂದಿತು. ಕ್ರಮೇಣ ಆತನ ಕೈಕೆಳಗೆ ದೊಡ್ಡ ಸೇನೆಯು ನಿಯಾಮಕವಾಯಿತು. ಆತನ ಅಧಿಕಾರವೂ ಪರಂಪರೆಯಾಗಿ ತಂದೆಯಿಂದ ಮಗನಿಗೆ ಬಂದಿತು.

ಕ್ರಮೇಣ ಷೊಗನಿನ ಅಧಿಕಾರವು ಹೆಚ್ಚಿತು. ಚಕ್ರವರ್ತಿಯು ಮೂಲೆಗೆ ಕೂಡಬೇಕಾಯಿತು. ಹತ್ತು ಹನ್ನೊಂದನೆಯ ಶತಮಾನದಲ್ಲಿ ಎರಡು ಪ್ರಬಲವಂಶದವರು ಸದರಿಯುಮೇಲೆ ಸೇನಾಪತಿತ್ವವನ್ನು ವಹಿಸುತ್ತಾ ಬಂದರು. ಕ್ರಿಸ್ತಶಕದ ೧೨೧೧ ಸಲ್ಲಿ ಕುಬ್ಲಾಖಾನಿನ ಕಾಲದಲ್ಲಿ ಮೊಗಲರು ದೊಡ್ಡ ಸೇನೆಯೊಂದಿಗೆ ಜಪಾನದೇಶಕ್ಕೆ ದಂಡೆತ್ತಿ ಬಂದರು. ಆದರೆ ಅವರನ್ನು ಜಪಾನಿಯರು ಹಿಂದಕ್ಕೋಡಿಸಿದರು. ಆಮೇಲೆ ಕೆಲವು ಕಾಲಾನಂತರ ಆ ಎರಡು ಸೇನಾಪತಿಗಳ ವಂಶದವರಿಗೂ ಇತರರಿಗೂ ಮಹಾ ಘೋರ ಯುದ್ಧಗಳು ಪ್ರಾಪ್ತವಾದುವು. ಬಹು ಪ್ರಜೆಗಳು ಹಾಳಾದರು. ಕ್ರಮೇಣ ಇತರ ವಂಶದವರೂ ಸೇನಾಪತಿತ್ವವನ್ನು ವಹಿಸಲಾರಂಭಿಸಿದರು. ಕಡೆಗೆ ೧೬೩೦ ರಿಂದ ೧೮೬೭ ನೆಯ ವರ್ಷದವರಿಗೂ ಟೊಕುಗಾವಾ ವಂಶದವರು ಆ ಪದವಿಯನ್ನು ವಹಿಸಿದರು.

ಟೋಕುಗಾವಾ ವಂಶದ ಸೇನಾಪತಿಗಳು ಯಡೊ ಎಂಬ ಪಟ್ಟಣದಲ್ಲಿ ವಾಸವಾಗಿದ್ದರು. ಆ ಪಟ್ಟಣವು ಅವರ ಕಾಲದಲ್ಲಿ ತುಂಬಾ ಅಭಿವೃದ್ಧಿಗೆ ಬಂದಿತು. ಸೇನಾಪತಿಯೇ ರಾಜ್ಯಕ್ಕೆಲ್ಲಾ ಮುಖ್ಯಾಧಿಕಾರಿಯಾದನು. ಅತನ ಕೈಕೆಳಗೆ ಅನೇಕ ಶ್ರೀಮಂತರೂ ಸಾಮಂತರೂ ಇದ್ದರು. ಈಗಿನ ಕಾಲದಲ್ಲಿ ಜಪಾನ್ ಚಕ್ರಾಧಿಪತ್ಯವು ೧೮ ರಾಷ್ಟ್ರಗಳಾಗಿ ವಿಭಾಗಿಸಲ್ಪಟ್ಟಿತ್ತು. ಪ್ರತಿರಾಷ್ಟ್ರವನ್ನೂ ಒಬ್ಬೊಬ್ಬ ಸಾಮಂತನು ಆಳುತ್ತಿದ್ದನು. ಆದರೆ ಎಲ್ಲಾ ಸಾಮಂತರೂ ಷೊಗನಿನ ಅಧಿಕಾರಕ್ಕೆ ಒಳಪಟ್ಟಿದ್ದರು.

ದೇಶಪದ್ಧತಿಗಳು, ಕಾನೂನುಗಳು, ನಾಣ್ಯಗಳು ಮಂತಾದುವು ಪ್ರತಿರಾಷ್ಟ್ರದಲ್ಲಿಯೂ ಭಿನ್ನಭಿನ್ನವಾಗಿದ್ದುವು. ಆದುದರಿಂದ ಎಲ್ಲಾ ರಾಷ್ಟ್ರದವರೂ ಸೇರಿ ಬಳಕೆ ಮಾಡಲು ಸಾಧ್ಯವಿರಲಿಲ್ಲ. ರಾಜ್ಯದಲ್ಲೆಲ್ಲಾ ಸುಭಿಕ್ಷವೂ ಶಾಂತಿಯೂ ಇದ್ದುವು. ಆದರೆ ಸಾಮಂತರು ಹೆಚ್ಚಾಗಿ ತೆರಿಗೆ ಹಾಕಿದುದರಿಂದ ರೈತರು ಕಷ್ಟಕ್ಕೆ ಗುರಿಯಾಗಿದ್ದರು. ಚಕ್ರವರ್ತಿಯು ಕಿಯೊಟೊ ಪಟ್ಟಣದಲ್ಲಿಯೇ ವಾಸವಾಗಿದ್ದನು. ಅತನು ಹೆಸರಿಗೆಮಾತ್ರ ಸರ್ವಾಧಿಕಾರಿಯಾಗಿದ್ದನು. ಆದರೆ ರಾಜ್ಯದ ಆಡಳಿತೆಗಳಿನ್ನೆಲ್ಲಾ ಸೇನಾಪತಿಯೇ ನಡಿಸುತ್ತಿದ್ದನು. ಹೀಗೆ ಕಾರ್ಯತಃ ಸೇನಾಪತಿಯು ಸರ್ವ ಸ್ವತಂತ್ರನಾದಾಗ್ಯೂ ಅತನಿಗೆ ಅಧಿಕಾರವು ಹೆಸರಿಗೆ ಮಾತ್ರ ಚಕ್ರವರ್ತಿಯಿಂದ ಬಹಿರಂಗವಾಗಿ ಕೊಡಲ್ಪಡುತ್ತಿದ್ದಿತು.

ಪೂರ್ವದಲ್ಲಿ ಜಪಾನೀಯರು ಪರರಾಜ್ಯಗಳಿಗೆ ಸ್ವೇಚ್ಛೆಯಾಗಿ ಪ್ರಯಾಣಚಿಳಿ

ಸಿ ತಮ್ಮ ಶಕ್ತಿ ಸಾಹಸಗಳನ್ನು ತೋರಿಸುತ್ತಿದ್ದರು. ಕ್ರಮೇಣ ಅವರು ಸರ್ಕಾರದ ಅಪ್ಪಣೆಯಿಲ್ಲದೆ ಪರದೇಶಗಳಿಗೆ ಹೋಗಕೂಡದೆಂದು ಕಟ್ಟು ಮಾಡಲ್ಪಟ್ಟಿತು. ಇದರಿಂದ ಅನೇಕರು ಇದ್ದಕಡೆಯಲ್ಲಿಯೇ ಇರಬೇಕಾಯಿತು. ಪರದೇಶದವರೂ ಕೂಡ ಧಾರಾಳವಾಗಿ ಜಪಾನಿಗೆ ಬಾರದಂತೆ ಪ್ರತಿಬಂಧಕವಿದ್ದಿತು. ಸಾಮಂತರ ಮತ್ತು ಸೇನಾಪತಿಯ ಈ ರೀತಿಯಾದ ಕಟ್ಟಳೆಗೂ ಮತ್ತು ನಾನಾಪ್ರಕಾರವಾದ ಪ್ರಜೆಗಳು ಬೇರೆ ನಿರ್ಬಂಧಗಳಿಗೂ ಒಳಗಾಗಲು ಒಡಂಬಡದೆ ಕಡೆಗವರು ಚಕ್ರವರ್ತಿಯೇ ತಮಗೆ ಮುಖ್ಯಾಧಿಕಾರಿಯೆಂದೂ ಅತನೇ ತಮ್ಮ ಕಷ್ಟಗಳನ್ನು ನಿವಾರಣೆ ಮಾಡತಕ್ಕವನೆಂದೂ ಆಲೋಚಿಸಿ ಅತನ ಪಕ್ಷವನ್ನು ವಹಿಸಿದರು.

ಹೀಗಿರುತ್ತಿರಲು ಕೊನೆಗೆ ೧೪೭೭ ನೆಯ ಇಸವಿಯಲ್ಲಿ ಸೇನಾಪತಿಯು ತನ್ನ ಕೆಲಸಕ್ಕೆ ರಾಜೀನಾಮೆಯನ್ನು ಕೊಡಬೇಕಾಗಿಬಂದಿತು. ಆ ಮಾರನೆಯ ವರ್ಷವೇ ಮಿಕಾಡೊವು ರಾಜ್ಯದ ಸರ್ವಾಧಿಕಾರವನ್ನೂ ತಾನೇ ವಹಿಸಿದನು. ಈ ಸಂದರ್ಭದಲ್ಲಿ ಸ್ವಲ್ಪಮಟ್ಟಿಗೆ ಯುದ್ಧವೂ ನಡೆಯಿತು. ೧೮೬೯ ರಲ್ಲಿ ಚಕ್ರವರ್ತಿಯು ಕಿಯೊಟೊ ದಿಂದ ಯಡೊ ಪಟ್ಟಣಕ್ಕೆ ಬಂದು ಅಲ್ಲಿ ತನ್ನ ರಾಜಧಾನಿಯನ್ನು ಸ್ಥಾಪಿಸಿ ಆ ಪಟ್ಟಣಕ್ಕೆ ಟೋಕಿಯೊ ಎಂಬ ಹೆಸರನ್ನು ಕೊಟ್ಟನು. ಈಗಲೂ ಜಪಾನಿನ ರಾಜಧಾನಿಯು ಆ ನಗರದಲ್ಲಿಯೇ ಇರುವುದು. ಹೆಸರಿಗೆ ಮಾತ್ರ ಚಕ್ರವರ್ತಿಯಾಗಿದ್ದವನು ಹೀಗೆ ವಿಶೇಷ ಶ್ರಮವಿಲ್ಲದೆ ಪುನಃ ರಾಜ್ಯದ ಸರ್ವಾಧಿಕಾರವನ್ನೂ ಹೊಂದಿದನು.

ಚಕ್ರವರ್ತಿಯು ಕ್ರಮೇಣ ತನ್ನ ದೇಶದ ಪ್ರಜೆಗಳಿಗೆ ಅನೇಕ ಸೌಕರ್ಯಗಳನ್ನುಂಟುಮಾಡಿದನು. ೧೮೭೫ ರಲ್ಲಿ ಪ್ರಜಾಪ್ರತಿನಿಧಿಗಳ ಸಭೆಯು ಸ್ಥಾಪಿಸಲ್ಪಟ್ಟಿತು. ೧೮೮೫ ರಲ್ಲಿ ಸಿನೆಟ್ ಎಂಬ ಸಭೆಯೂ ಮಹಾ ಮಂತ್ರಾಲೋಚನೆಯ ಸಭೆಯೊಂದೂ ಸ್ಥಾಪಿತವಾದುವು. ಆಮೇಲೆ ೧೮೯೦ ರಲ್ಲಿ ಬೇರೆಬೇರೆ ರಾಷ್ಟ್ರಗಳಿಗೂ ಇಲಾಖೆಗಳಿಗೂ ಪ್ರತ್ಯೇಕಪ್ರತ್ಯೇಕ ಸಭೆಗಳು ಏರ್ಪಡಿಸಲ್ಪಟ್ಟವು. ಇದಾದ ಬಳಿಕ ಜಪಾನ ದೇಶಿಯರು ಕ್ರಮಕ್ರಮೇಣ ಬಹಳ ಅಭಿವೃದ್ಧಿಯನ್ನು ಹೊಂದುತ್ತಾ ಬಂದರು. ಈಗಲಂತೂ ಉತ್ತಮೋತ್ತಮ ಸ್ಥಿತಿಗೆ ಬರುವುದರಲ್ಲಿರುವರು.

ಹದಿನಾರನೆಯ ಶತಮಾನದಲ್ಲಿ ಕೆಲವರು ಪೋರ್ಚುಗೀಸ್ ಜನಗಳು ಜಪಾನಿಗೆ ಬಂದು ಸ್ವದೇಶದವರೊಂದಿಗೆ ವ್ಯಾಪಾರ ಮಾಡಲಾರಂಭಿಸಿದರು. ಆಮೇಲೆ ಸ್ವಲ್ಪ ಕಾಲದಲ್ಲಿಯೇ ಪೊರ್ತು ಗಲ್ಲಿನಿಂದ ಕೆಲವರು ಪಾದ್ರಿಗಳೂ ಅಲ್ಲಿಗೆ ಬಂದರು. ಪೋ

ರ್ತುಗೀಸರು ವಾಣಿಜ್ಯದಿಂದ ಮಾತ್ರ ತೃಪ್ತರಾಗದೆ ಜಪಾನ್ ದೇಶವನ್ನೇ ಜಯಿಸಿ ತಮ್ಮ ಸ್ವಾಧೀನ ಮಾಡಿಕೊಳ್ಳಲು ಪ್ರಯತ್ನಿಸಿದರು. ಆದರೆ ಜಪಾನಿಯರು ಇವರನ್ನು ೧೬೩೯ ರಲ್ಲಿ ತಮ್ಮ ದೇಶದಿಂದ ಓಡಿಸಿದರು. ಆಮೇಲೆ 1610 ರಲ್ಲಿ ಡಚ್ ಜನರು ಜಪಾನಿಗೆ ಬಂದು ಅಲ್ಲಿ ಬಹುಕಾಲದವರೆಗೆ ವ್ಯಾಪಾರವನ್ನು ನಡೆಸಿದರು.

(ಸಶೇಷ) S. V.

ವಿದ್ಯೆ.

ವಡನೆಗಳೊಳಗೆಲ್ಲಾ ವಿದ್ಯೆಯೇ ಶ್ರೇಷ್ಠವಾದ ಒಡವೆ. ಕುರೂಪಿಗಳಾಗಿದ್ದರೂ ವಿದ್ಯೆಯಿಂದ ಮನೋಹರವಾಗುತ್ತಾರೆ. ಒಡತನವು ಬಂದು ಎಷ್ಟೋಜಾಧಿಸಿದರೂ, ವಿದ್ಯೆಯು ಆನಂದವನ್ನುಂಟುಮಾಡುವುದು. ತತ್ವವನ್ನು ವಿಚಾರಮಾಡಲಾಗಿ ಸುಖಿಗಳಲ್ಲಿ ಯಾರು ಮೇಲಾದ ಸುಖಿಗಳು? ವಿದ್ವಾಂಸರೇ. ವಿದ್ಯೆಯೆಂದರೇನು? ವಿದ್ಯೆಯೆಂದರೆ ಜ್ಞಾನವು. ಹಾಗಾದರೆ ಇದು ಭೂಮಿ, ಅದು ನೀರು, ಅಗೋ ಸೂರ್ಯನು. ಎಂದು ನಮಗೆ ಉಂಟಾಗುವ ಜ್ಞಾನವು ವಿದ್ಯೆಯೆನಿಸುವುದೋ? ವಸ್ತುಗಳ ವಿಷಯವಾದ ಸಾಮಾನ್ಯಜ್ಞಾನವು ವಿದ್ಯೆಯಾಗಲಾರದು. ಭೂಮಿಯು ಸ್ವರೂಪವೇನು? ಅದು ಹೇಗಾಯಿತು? ಅದರ ಪೂರ್ವೋತ್ತರಸ್ಥಿತಿಗಳೇನಾಗಿರಬಹುದು? ಈರೀತಿಯಾಗಿ ಪ್ರಪಂಚದಲ್ಲಿ ಆಯಾವಿಷಯಗಳ ತತ್ವವನ್ನು ವಿಚಾರಮಾಡುವುದರ ಮೂಲಕ ಒಂದುಬಗೆಯಾದ ನಿಷ್ಕರ್ಷೆಯನ್ನುಂಟುಮಾಡುವ ಜ್ಞಾನವಿಶೇಷವು ವಿದ್ಯೆಯೆನಿಸುವುದು. ಅದುದರಿಂದ ಜ್ಞಾನವನ್ನುಂಟುಮಾಡುವ ಜ್ಞಾನವು ವಿದ್ಯೆಯೆನಿಸುವುದೇ? ಒಂದು ನಿಷ್ಕರ್ಷೆ ಅಥವಾ ಸಿದ್ಧಾಂತದ ರೂಪವಾದ ಜ್ಞಾನಕ್ಕೆ ಸಾಧಕವಾದ ವಿಷಯ ವಿಚಾರರೂಪವಾದ ಜ್ಞಾನವು ವಿದ್ಯೆಯೆನಿಸುವುದು. ಇದಕ್ಕೆ ಶಾಸ್ತ್ರವೆಂದು ಬೇರೆಹೆಸರು. ಹೇಗಂದರೆ—ಎಣಿಕೆಯ ಮೂಲಕವಾಗಿ ವಸ್ತುಗಳ ಕಾರ್ಯಕಾರಣಭಾವವೇ ಮೊದಲಾದ ನಿಯಮಗಳ ವಿಚಾರ ರೂಪವಾದ ನಿಷ್ಕರ್ಷೆಯನ್ನುಂಟುಮಾಡುವುದು. ಗಣಿತವಿದ್ಯೆ ಅಥವಾ ಗಣಿತ ಅಥವಾ ಗಣಿತಶಾಸ್ತ್ರವು. ಇದರಲ್ಲಿಯೂ ವಿಷಯ ಭೇಧದಿಂದ ಅಂತರ್ಭೇದಗಳಿರಬಹುದು. ಗ್ರಹಗಳವಿಷಯವಾದ ಗಣಿತ ವಿದ್ಯೆ ಅಥವಾ ಜ್ಯೋತಿಶ್ಶಾಸ್ತ್ರ, ಅಂಕಗಣಿತ, ಬೀಜಗಣಿತ, ರೇಖಾಗಣಿತ ಮೊದಲಾದ ಭೇದಗಳಿರುವುವು. ಹೀಗೆಯೇ ಭೂಮಿ, ನೀರು, ಗಾಳಿ, ಬೆಂಕಿ ಇವುಗಳ ವಿಷಯವಾದ ವಿಚಾರವು ಭೂತವಿದ್ಯೆ ಅಥವಾ ಭೌತಿಕಶಾಸ್ತ್ರವೆನಿಸುವುದು. ಈರೀತಿಯಾಗಿ ಅನೇಕ ಶಾಸ್ತ್ರಗಳು ಉಂಟಾಗಿವೆ.

ಆಟಪಾಟಗಳಿಂದ ಕೂಡಿದ ಡ್ರಿಲ್.

ಮಕ್ಕಳ ದೇಹವನ್ನು ಬಲವುಳ್ಳದಾಗಿಯೂ, ಅಂದವಾಗಿಯೂ, ಬೇಕಾದಂತೆ ಬಾಗಿಸಲು ಅನುಕೂಲಿಸುವುದಾಗಿಯೂ, ಮಾಡುವುದೇ ಡ್ರಿಲ್ಲಿನ ಮುಖ್ಯೋದ್ದೇಶ. ದೊಡ್ಡ ದೊಡ್ಡ ಪರೀಕ್ಷಾಧಿಕಾರಿಗಳ ಮೆಚ್ಚಿಕೆಯನ್ನು ಪಡೆಯಬೇಕೆಂತಲೊ, ಈ ಪಾಠವನ್ನು ಕಲಿಸಿಲ್ಲವೆಂದು ಆಕ್ಷೇಪಿಸುವರೆಂಬ ಭಯದಿಂದಲೋ, ವಿಧಿಯಿಲ್ಲದೆ ಬೋಧಕರು ತಮ್ಮ ಪಾಠಶಾಲೆಗಳಲ್ಲಿ ಈ ಡ್ರಿಲ್ಲನ್ನು ಕಲಿಸುತ್ತಿರುವರೇ ಹೊರತು ಹುಡುಗರ ಅವಯವಗಳಿಗೆ ಬಲವನ್ನುಂಟುಮಾಡಲಿಕ್ಕೆ ಕಲಿಸಬೇಕಾದ ವಿಷಯು ವಿದೆಂದು ಭಾವಿಸಿರುವ ಬಾಲಪಾಠದ ಬೋಧಕರು ಸ್ವಲ್ಪಮಂದಿ ಮಾತ್ರವಿದಾರೆ. ಡ್ರಿಲ್ಲೆಂಬುದು ಹುಡುಗರ ಕ್ಷೇಮಕ್ಕಾಗಿ ಏರ್ಪಡಿಸಲ್ಪಟ್ಟ ಪಾಠವೆಂದು ಎಲ್ಲರೂ ನೆನಪಿನಲ್ಲಿಡತಕ್ಕುದು. ವಾಚಕಾದಿಗಳಿಂದ ಬುದ್ಧಿ ವಿಕಾಸವಾಗುವಂತೆಯೇ ಡ್ರಿಲ್ ಆಟದಿಂದ ದೇಹಬಲವು ಬೆಳೆಯುವಂತೆ ಪ್ರಯತ್ನಿಸಬೇಕು. ಡ್ರಿಲ್ ವಿಷಯವಾಗಿ ನಾವು ಗಮನಿಸಬೇಕಾದ ವಿಷಯಗಳು ಏನೆಂದರೆ.—

ಸಣ್ಣ ಮಕ್ಕಳ ಮೈ ಬಹು ಕೋಮಲವಾದುದು. ಅಂತ ಮೃದು ಶರೀರದಿಂದ ಕಠಿಣವಾದ ಸಾಧನಗಳನ್ನಾಗಲಿ ಒರಟು ಕಸರತ್ತುಗಳನ್ನಾಗಲಿ ಮಾಡಿಸಬಾರದು. ಹಾಗೆ ಮಾಡಿಸಿದರೆ ಹುಡುಗರಿಗೆ ದೊಡ್ಡ ಹಾನಿ ಸಂಭವಿಸಬಹುದು. ಅಂತಪ ಕೇಡು ಒದಗದಿದ್ದರೂ, ಆ ಸಾಧನೆಗಳಿಂದ ದೇಹದ ಅಭಿವೃದ್ಧಿಗೆ ಭಂಗವೇ ಹೊರತು ಲಾಭ ಉಂಟಾಗದು.

ಕೆಲವು ಶಾಲೆಗಳಲ್ಲಿ ಹುಡುಗರನ್ನು ಹೆಬ್ಬೆಟ್ಟುಮೇಲೆಯೇ ನಿಲ್ಲಿಸಿ, ಸೊಂಟದಲ್ಲಿ ಕೈ ಯಿರಿಸಿ ಹೆಬ್ಬೆಟ್ಟಿನಮೇಲೆಯೇ ಕುಳ್ಳಿರಿಸತಕ್ಕ ಒಂದು ಸಾಧನೆ ಹೇಳಲ್ಪಟ್ಟಿದೆ. ಇದನ್ನು ಮಾಡುವುದು ಬಹು ಕಷ್ಟ. ಹುಡುಗರಿಗೂ ಅಪಾಯಕರವಾದುದು. ಮಾದಪೆಲ್ಲ ಹೊರಬೇಕಾದ ದೇಹ ಭಾರವನ್ನು ಹೊರಲಾರದೆ ಬೆರಳುಗಳಿಗೆ ತುಂಬ ನೋವು ಉಂಟಾಗುವುದು. ಬೆರಳು ಸೊಂದು ಮೈ ನಡುಗಿ ಹುಡುಗರು ಕೆಳಕ್ಕೆ ಬೀಳಬಹುದು. ಕೂತುಕೊಳ್ಳುವಾಗ ನಡುವಿಗೆ ನೋವಾಗಿ ಸೊಟ್ಟನಾಗಬಹುದು.

ಕುತ್ತಿಗೆಯನ್ನು ಎಡಬಲಗಡೆಗಳಿಗೆ ಬಗ್ಗಿಸುವ ಸಾಧನೆಯೊಂದು ಹೇಳಲ್ಪಟ್ಟಿರುವುದು. ಈ ಸಾಧನೆ ಮಾಡುವಾಗ ಬಲಕೆವಿಗೆ ಬಲ ಭುಜವೂ ಎಡ ಕೆವಿಗೆ

ಎಡ ಭುಜವೂ ಕಗ್ಗುಲುಪಂತೆ ಹುಡುಗರು ತಲೆ ಬಗ್ಗಿಸುತ್ತಿರುವರು. ಇದರಿಂದ ಮಕ್ಕಳೆಲ್ಲರಿಗೂ ಒಂದೇಸಾರಿ ಉಳಕು ಹಿಡಿಯುವಿದ್ದರೂ, ಕತ್ತನ್ನು ಓರೆಮಾಡಿ ಬಗ್ಗಿಸುವುದರಿಂದ ನರಗಳು ಹೊರಳಿ ತುಂಬ ಅಪಾಯ ಉಂಟಾಗುವುದು. ಆದುದರಿಂದ ಡ್ರಿಲ್ ಮಾಡಿಸತಕ್ಕ ಸಾಧನೆಗಳು ಹುಡುಗರ ವಯಸ್ಸಿಗೆ ತಕ್ಕಂತೆ ಸುಲಭವಾಗಿರತಕ್ಕುದು.

೨ ನೆಯದು—ಸಾಧನೆ ಮಾಡುವ ಕಾಲ ಅನುಕೂಲವಾಗಿರಬೇಕು. ಬೆಳಗ್ಗೆ ಪಾಠವನ್ನು ಆರಂಭಿಸುವುದಕ್ಕೆ ಮುಂಚೆಯೂ, ಸಾಯಂಕಾಲ ಪಾಠಗಳು ಮುಗಿದ ಮೇಲೆಯೂ ಡ್ರಿಲ್ ಮಾಡಿಸುವುದೇ ಉತ್ತಮ. ಹುಡುಗರು ಪಾಠಗಳಿಂದ ಸ್ವಲ್ಪ ಬೇಸರಗೊಂಡಿರುವಾಗ ಬೆಳಿಗ್ಗೆ 8–30 ಸಾಯಂಕಾಲ 3-30 ರಲ್ಲಿ ಪಾಠಗಳ ನಡುವೆ ಡ್ರಿಲ್ ಮಾಡಿಸುವುದು ಒಳ್ಳೆಯದು. ಬಿಸಿಲಿನ ಎದುರಿಗೆ ನಿಲ್ಲಿಸಿಯಾಗಲಿ ಮಳೆ ಹೆಚ್ಚಾಗಿ ಸುರಿಯುತ್ತಿರುವಾಗಲಾಗಲಿ ಡ್ರಿಲ್ ಮಾಡಿಸಕೂಡದು. ಮಕ್ಕಳಿಗೆ ಬೇಸರ ಉಂಟಾಗುವಷ್ಟು ಹೆಚ್ಚಾಗಿ ಮಾಡಿಸಕೂಡದು. ಬಯಲಲ್ಲಿ ಮಾಡುವ ಸಾಧನೆ ಆರೋಗ್ಯಕರವಾದುದು. ಮನೆಯೊಳಗೆ ಸಾಧನೆ ಮಾಡಿಸುವಾಗ ಗಾಳಿಯೂ ಬೆಳಕೂ ಧಾರಾಳವಾಗಿ ಬರುವ ಸ್ಥಳ ಅಂದರೆ ಪಡಸಾಲೆ, ಹಜಾರ, ಮುಂತಾದುವುಗಳಲ್ಲಿ ಡ್ರಿಲ್ ಮಾಡಿಸಬಹುದು. ಮೈಗೆ ಭಾರವಾದ ಅಂಗಿ ಮುಂತಾದನ್ನು ಧರಿಸಿ ಸಾಧನೆ ಮಾಡಕೂಡದು. ಪೆನ್ಸಿಲ್ ಲೇಖನಿ, ಇವುಗಳು ಮಕ್ಕಳ ಹತ್ತರ ಇರಲಾಗದು.

೩ ನೆಯದು.—ಡ್ರಿಲ್ಲು ಮಕ್ಕಳಿಗೆ ಸಂತೋಷವನ್ನು ಹುಟ್ಟಿಸತಕ್ಕದ್ದಾಗಿರಬೇಕು. ಸ್ಕೂಲುಗಳಲ್ಲಿ ನಡಿಸುವ ಡ್ರಿಲ್ಲು ಮನಸ್ಸಿಗೆ ಹಿತಕರವಾಗಿಲ್ಲದುದರಿಂದಲೇ ದೊಡ್ಡ ದೊಡ್ಡ ಸಾಲೆಗಳಲ್ಲಿಸುದಾ ಹುಡುಗರು ಡ್ರಿಲ್ ಪಾಠಕ್ಕೆ ತಪ್ಪಿಸಿಕೊಳ್ಳಲು ಯತ್ನಿಸುವರು. ಹೊಸ ಹೊಸ ಸಾಧನೆಗಳನ್ನು ಕಲ್ಪಿಸಿ ಕಲಿಸುವುದರಿಂದಲೂ, ಕಥೆಗಳನ್ನೂ, ಹಾಡುಗಳನ್ನೂ, ಸೇರಿಸಿ ಹೇಳುವುದರಿಂದಲೂ ಮಕ್ಕಳಿಗೆ ಉತ್ಸಾಹ ಹುಟ್ಟಿಸಬಹುದು. ಕಥೆಗಳ ಮೂಲಕ ಡ್ರಿಲ್ಲು ಕಲಿಯುವುದು 5—6 ವರ್ಷದ ಹುಡುಗರಿಗೆ ತುಂಬ ಇಷ್ಟವಾಗಿರುವುದು. ಉದಾಹರಣೆಗಾಗಿ ಕೆಳಗೆ ಒಂದು ಕಥೆ ಕೊಡಲ್ಪಟ್ಟಿದೆ. ಬೋಧಕರು, ಇಂಥ ಕಥೆಗಳನ್ನು ತಾವೇ ಕಲ್ಪಿಸಿಕೊಂಡು ಹೇಳಬಹುದು.

— ಕಥೆ. —

ಹೊಸಹಳ್ಳಿ ಎಂಬ ಊರಿನಲ್ಲಿ ನರಸನೆಂಬ ಒಬ್ಬ ಹುಡುಗನಿದ್ದನು. ಅವನು ಮನೆಯಲ್ಲಿ ಪ್ರತಿಯೊಂದು ಕೆಲಸವನ್ನೂ ತಾನೇ ಮಾಡಲಿಕ್ಕೆ ಹೋಗುವನು. ಪ್ರತಿ ವಸ್ತುವನ್ನೂ ತಾನು ನೋಡಬೇಕೆಂಬ ಆಶೆ ಅವನಿಗೆ ಹೆಚ್ಚು, ಆದುದರಿಂದ ಆ ಮನೆಯಲ್ಲಿದ್ದ ಅಜ್ಜಿಯು ಅವನನ್ನು ತುಂಟ ಹುಡುಗನೆಂದು ಯಾವಾಗಲೂ ಬಯ್ಯುತ್ತಿರುವಳು. ಆದರೆ ನರಸನು ನಿಜವಾಗಿ ತುಂಟನಲ್ಲ. ಒಂದುದಿನ ಬೆಳಗ್ಗೆ ಅವನು ತನ್ನ ತಂದೆಯೊಂದಿಗೆ ಕೂತುಕೊಂಡು ತಂಗಳನ್ನು ಉಣ್ಣುತ್ತಿದ್ದನು. ಮಜ್ಜಿಗೆ ಹುಳಿಯಾಗಿರುವುದೊ, ಸಿಹಿಯೋ ನೋಡಬೇಕೆಂದು ಮಜ್ಜಿಗೆ ಬಟ್ಟಲನ್ನು ಅವನು ಎತ್ತಲಿಕ್ಕೆ ಹೋದನು. ಬಟ್ಟಲು ಭಾರವಾಗಿದ್ದುದರಿಂದ ಕೆಳಕ್ಕೆ ಬಿದ್ದು ಮಜ್ಜಿಗೆಯೆಲ್ಲಾ ಸುರಿದು ಹೋಯಿತು. ಅಜ್ಜಿಗೆ ಅವನ ಮೇಲೆ ಹಿಡಿಯಲಾರದಷ್ಟು ಕೋಪಬಂದಿತು ಆಗಲಾ ಹುಡುಗನು "ಅವ್ವಾ! ಅಪ್ಪಾ! ನಾನು ಬೇಕೆಂದು ಬಟ್ಟಲನ್ನು ಕೆಡವಿದೆನೇ ಹೇಳು. ಮಜ್ಜಿಗೆ ಚೆನ್ನಾಗಿದೆಯೋ ಇಲ್ಲವೋ ನೋಡಬೇಕೆಂದಲ್ಲವೆ." ಎಂದು ಪೋರೆ ಚಿಕ್ಕದು ಮಾಡಿಕೊಂಡು ತಂದೆಗೆ ಹೇಳಿದನು. "ಹೌದು, ಮಗುವೇ! ನಿಜ, ನಿನಗೆ ಭಾರವಾದಾಗ ನನ್ನೊಂದಿಗೆ ಹೇಳಿದ್ದರೆ ನಾನು ತೆಗೆದು ಕೊಡಲಾರದೆ ಹೋದೆನೇ" ಎಂದು ತಂದೆ ಸಮಾಧಾನ ಹೇಳಿದನು. ಏನು ಹೇಗಿದೆಯೋ ತಿಳಿದುಕೊಳ್ಳಬೇಕೆಂತಲೇ ನರಸನು ಅವುಗಳನ್ನು ಮುಟ್ಟಿ ನೋಡುವನೇ ಹೊರತು ಅದನ್ನು ಹಾಳುಮಾಡಬೇಕೆಂಬ ಅಭಿಪ್ರಾಯ ಅವನಿಗೆ ಇರಲಿಲ್ಲ. "ಈ ತುಂಟ ಹುಡುಗನನ್ನು ಸುದಾರಿಸುವುದು ನನ್ನಿಂದಾಗದು. ಇವನನ್ನು ನಿನ್ನ ಸಂಗಡ ಹೊಲಕ್ಕಾದರೂ ಕರೆದುಕೊಂಡು ಹೋಗು." ಎಂದು ಅಜ್ಜಿಯು ಗದರಿಸಿದಳು. ಬರುತ್ತೇನೆ, ನನ್ನನ್ನು ಕರೆದುಕೊಂಡು ಹೋಗೆಂದು ಆ ಹುಡುಗನೂ ಕೇಳಿದನು. ತಂದೆ ಆದಕ್ಕೆ ಒಪ್ಪಿದನು. (ಈ ಕಥೆಯನ್ನು ಹೀಗೆ ವಿವರಿಸಿ ಹೇಳಿದರೂ ಹೇಳಬಹುದು. ಸಂಕ್ಷೇಪವಾಗಿ ಹೇಳಬೇಕಾದರೆ "ನರಸನು ಹೊಲಕ್ಕೆ ಬರುವೆನೆಂದು ತಮ್ಮ ತಂದೆಯನ್ನು ಕೇಳಿದನು. ತಂದೆ ಸಮ್ಮತಿ ಪಟ್ಟನು." ಎಂದು ಹೇಳಬಹುದು.) ಆಗ ತಂದೆ ಮಕ್ಕಳಿಬ್ಬರೂ ಮೂಡಲಕಡೆಯಲ್ಲಿರುವ ತಮ್ಮ ಹೊಲಕ್ಕೆ ಹೊರಟರು. ಮೊದಲು ಎಡಗಾಲನ್ನೂ ಆಮೇಲೆ ಬಲಗಾಲನ್ನು ಇಡುತ್ತಾ, ತಲೆಯನ್ನು ಮೇಲಕ್ಕೂ, ಎದೆಯನ್ನು ಸ್ವಲ್ಪ ಮುಂದಕ್ಕೂ ಕೈಗಳನ್ನು ಹಿಂದಕ್ಕೆ ಇಟ್ಟುಕೊಂಡು ನಡೆದರು. (ಬಲಗಡೆಗಾಗಲೀ, ಎಡಗಡೆಗಾಗಲೀ ತಿರುಗಿದರೆ

ಪೂರ್ವದಿಕ್ಕು ಬರುವಂತೆ ಹುಡುಗರನ್ನು ಮೊದಲೇ ನಿಲ್ಲಿಸಿ ಆಮೇಲೆ ಮೂಡಣ ದಿಕ್ಕಿಗೆ ಹುಡಗರನ್ನು ತಿರಿಗಿಸಬೇಕು. ಹಾಡಿನಲ್ಲಿ ಹೇಳಿರುವ 1 ಪಲ್ಲವಿಯನ್ನು ಹಾಡಿಸುತ್ತ, ಕಥೆಯುಲ್ಲಿ ಹೇಳಿದ ಹಾಗೆ ಹುಡುಗರನ್ನು ನಡಿಸಿಕೊಂಡು ಹೋಗ ಬೇಕು.) ಹೊಲವನ್ನು ನೋಡುವುದು ಆ ಹುಡುಗನಿಗೆ ಬಹು ಸಂತೋಷವಾ ಗಿತ್ತು. ಕೂಲಿಯವರು ಬೀಜಗಳನ್ನು ಬಿತ್ತುತ್ತಿದ್ದರು. (ಹುಡುಗರು ಬಲಗೈ ಯಿಂದ ಎಂಟುಸಾರಿಯೂ ಎಡಗೈಯಿಂದ ಎಂಟು ಸಾರಿಯೂ ಬಿತ್ತುವಂತೆ ಅಭಿನ ಯಿಸಬೇಕು.) ಬಿತ್ತುಗಳನ್ನು ತಿನ್ನಲಿಕ್ಕೆ ಕೆಲವು ಹಕ್ಕಿಗಳು ಹೊಲದೊಳಕ್ಕೆ ಬರು ತ್ತಿದ್ದುವು. ಪಕ್ಷಿಗಳಿಗೆ ಕಲ್ಲು ತಗಲಿದರೆ ನಮ್ಮಹಾಗೆ ಅವುಗಳಿಗೂ ನೋವಾಗುವು ದೆಂದು ನರಸನಿಗೆ ತಿಳಿದಿತ್ತು. ಆದುದರಿಂದ ಅವನು ಕಲ್ಲುಗಳಿಂದ ಹೊಡೆಯದೆ ಕೈಗ ಳನ್ನು ಕೂಡಿಸಿ ಬೆದರಿಸಿ ಅವುಗಳನ್ನು ಓಡಿಸುತ್ತಿದ್ದನು. ಕೈಗಳನ್ನು ಕೂಡಿಸು ವುದು ಹೇಗೆ? ಮೊದಲು ಬಲಗೈ ಚಾಚಿ ಐಂಗೈಗಳು ತಾಗುವಂತೆ ಎರಡು ಕೈಗ ಳನ್ನೂ ಹತ್ತಿರಕ್ಕೆ ತರತಕ್ಕುದು. (ಹುಡುಗರಿಂದ ಎಂಟುಸಾರಿ ಹೀಗೆ ಮಾಡಿಸ ಬೇಕು.) ಆಗ ಹಕ್ಕಿಗಳು ಹಾರಿಹೋಗುವುವು. ಅದು ಹೇಗೆ. (ಮುದುಡಿದ ಬೆರಳಿನಿಂದ ಮೊದಲು ಬಲಗೈಯ್ಯನ್ನೂ ಆಮೇಲೆ ಮುದುಡಿದ ಬೆರಳುಗಳಿಂದ ಎಡಗೈಯನ್ನೂ ತಲೆಯಮೇಲೆ ಇಟ್ಟು ಬೆರಳುಗಳನ್ನು ಬಿಡುತ್ತ ಎರಡು ಕೈಗಳನ್ನೂ ಮೇಲಕ್ಕೆ ಬಿರುಸಾಗಿ ಎತ್ತಿದರೆ ಹಕ್ಕಿಗಳು ಹಾರುವ ರೀತಿಯನ್ನು ಅನುಕರಿಸ ಬಹುದು. ಹೀಗೆ ಎಂಟಾವರ್ತಿ ಮಾಡುವುದು.) ಮಧ್ಯಾಹ್ನದ ಹೊತ್ತಿಗೆ ತಂದೆ ಯು ಹೊಲದಲ್ಲಿದ್ದ ಹುಲ್ಲುಕಡ್ಡಿಗಳನ್ನು ಬಂಡಿಯುಲ್ಲಿ ತುಂಬಿದನು. (ಕೈಗಳನ್ನು ನೆಲಕ್ಕೆ ಬಗ್ಗಿಸಿ ಭುಜಗಳನ್ನು ತಂದು ತರುವಾಯ ಮೇಲಕ್ಕೆ ಎತ್ತಬೇಕು. ಹೀಗೆ ಎಂಟುಸಾರಿ.) ನರಸನು ತನ್ನ ತಂಗಿಗೆ ಹೂಗಳನ್ನೂ, ಬಜ್ಜಿಗೆ ಬದನೇಕಾಯಿಗ ಳನ್ನೂ, ಹಸಿಯು ಮೆಣಸಿನ ಕಾಯಿಗಳನ್ನೂ ಕೊಯಿದನು. (ಬಲಗೈ ಚಾಚಿ ಮುಂ ಗೈಯನ್ನು ಅಡಿಸುವುದು, ಕೊಯ್ಯುವ ಅಭಿನಯವು.) ಬಂಡಿಯನ್ನು ಹೊಡೆದು ಕೊಂಡು ಕೂಲಿಯವರೊಂದಿಗೆ ತಂದೆ ಮಕ್ಕಳು ಮನೆಗೆ ಬಂದರು.) ಕೈಗಳನ್ನು ಪಕ್ಕಗಳಿಗೆ ಪೂರಾ ಚಾಚಿ ಗುಂಡಾಗಿ ತಿರಿಗಿಸಿದರೆ ಬಂಡಿಯ ಚಕ್ರ ತಿರುಗುವಂತೆ ಆಗುವುದು. ಹುಡುಗರನ್ನು ತಮ್ಮ ತಮ್ಮ ಕಡೆಗಳಿಗೆ ನಡಿಸತಕ್ಕುದು.) ಕಥೆ ಕಂಚಿಗೆ ಹೋಯಿತು; ನಾವು ನಮ್ಮ ಮನೆಗೆ ಬಂದೆವು.

— ಹಾಡು —

ಪಲ್ಲವಿ. ॥ ತಂದೆಮಕ್ಕ । ಳೆಯ್ನಿದರಾ । ಹೊಲವನೋಡು. I

ಚರಣ ॥ ಮಗನು ತನ್ನ ನೊಯ್ವುದೆಂದು ಬೇಡೆ ತಂದೆಯು । ಮಿಗಿಲು ಕರುಣೆ
ಯಿಂದಲೊಪ್ಪಿ ಹೊಲಗಯೊಯ್ದನು । ತಂದೆ ಹೊಲಕೆಬಯ್ದನು ॥೧॥
ಬಿತ್ತುಗಳನು ಚೆಲ್ಲುತಿರ್ದರಲ್ಲಿ ಯೊಳ್ಗಳು । ಮುತ್ತಿಬಂದ ಹಕ್ಕಿಯ
ಪಾ । ರಿಸಿದ ಮೆಲ್ಲಗೆ ನರಸನು ಪಾ । ರಿಸಿದ ಮೆಲ್ಲಗೆ ॥ ॥೨॥
ಜೋಯಿ ಜೋಯಿ ಎನುತ್ತಲೆತುಗಳನು ನಡಿಸುತ । ಬಂಡಿಯ
ನಾಗ ನಡಿಸುತ । ಹಾಯಿಯಾಗಿ ತಮ್ಮ ಮನೆಗೆ ಸೇರ್ದರೆಲ್ಲರೂ ಮನೆ
ಗೆ ಸೇರ್ದರೆಲ್ಲರು ॥ ॥೩॥

(ಸಂದರ್ಭಕ್ಕೆ ತಕ್ಕಂತೆ ಚರಣಗಳನ್ನು ಆಟದೊಂದಿಗೆ ಸೇರಿಸಿಕೊಂಡು ಹೇಳತಕ್ಕದ್ದು.)

K. R.

ಕ್ಷೇತ್ರಗಣಿತದ ಸೂತ್ರಗಳು.

ಕಾಟುಕೋಣ ತ್ರಿಭುಜ.

1. ಕರ್ಣವನ್ನು ಕಂಡುಹಿಡಿಯುವುದಕ್ಕೆ:—

ಬಾಹುಗಳೆರಡರ ವರ್ಗವ
ಸಾಹಸಿ, ನೀಂಕೂಡಿ ವರ್ಗಮೂಲಂಗೊಳ್ಳ ॥
ಲ್ಯೂಹಿಸಿದ ಕರ್ಣರೇಖೆಯ ।
ಬಾಹುವತಾಂ ತಿಳಿಯಬಹುದು ಸುಲಭದೆ ಕೇಳ್ದೈ. ॥

ಸಮೀಕರಣ. $\sqrt{\text{ಭುಜ}^2 + \text{ಪಾದ}^2} = \text{ಕರ್ಣ}$.

ಉದಾ.—ಬಾಹುಗಳು 24,32 ಅಡಿಗಳಾದರೆ ಕರ್ಣವೆಷ್ಟು?

$\sqrt{24^2 + 32^2} = \sqrt{576 + 1024} = \sqrt{1600} = 40$ ಅಡಿ ಕರ್ಣ.

2. ತಿಳಿಯದ ಬಾಹುವನ್ನು ಕಾಣುವಿಕೆ.—

ಕರ್ಣದ ವರ್ಗದೆ ತಿಳಿದಿಹ।
ನಿರ್ಣಯಬಾಹುವಿನ ವರ್ಗವುಂ ಕಳೆದದರೋಳ್॥
ಕರ್ಣದೆ ಮೂಲವಕೊಳ್ಳಲ್।
ಕರ್ಣೇತರಬಾಹುವೆನಿಪುದಿಲೆ ಚತುರಮತೀ॥

ಸಮೀ.— $\sqrt{\text{ಕರ್ಣ}^2 - \text{ಕಳೆದಭುಜ}^2} = \text{ತಿಳಿದಭುಜ}$.

ಉದಾ.— ಕರ್ಣ 120, ಭುಜ 96, ಮತ್ತೊಂದುಭುಜವಾದುದೆಷ್ಟು,

$$\sqrt{120^2 - 96^2} = \sqrt{14400 - 9216} = \sqrt{5184} =$$

72 ಅಡಿಪಾದ.

3. ಭುಜಕರ್ಣಗಳನ್ನು ಪ್ರತ್ಯೇಕಿಸಲಿಕ್ಕೆ.—

ತಿಳಿದ ಬಾಹುವಿನ ವರ್ಗವ।
ಫಳಿಲನೆ ಭುಜಕರ್ಣಯೋಗದಿಂದಾದೊಡವುಂ॥
ತಿಳಿದಂತರದಿಂದಾದೊಡ।
ಮುಳಿಯದೆ ಭಾಗಿಸುತೆ ಕೂಡಿಯರ್ಧಿಸು, ಕಳೆದುಂ॥ (ಅರ್ಧಿಸು).

ಸಮ.—(a) $\dfrac{\dfrac{\text{ತಿಳಿದ ಬಾಹು}^2}{\text{ಭು} + \text{ಕರ್ಣ}} + \text{ಭುಜ ಕರ್ಣಯೋಗ}.}{2} = \text{ಕರ್ಣ}.$

ಉದಾ.—ಭುಜ ಕರ್ಣಗಳು ಸೇರಿ 45 ತಿಳಿದ ಭುಜ 15, ಕರ್ಣವೆಷ್ಟು? ತಿಳಿಯದ ಭುಜವೆಷ್ಟು?

ರೀತಿ.— $\dfrac{\dfrac{15^2}{45} + 45}{2} = \dfrac{225}{45} = \dfrac{5 + 45}{2} = 25$ ಕರ್ಣ

$45 - 25 = 20$ ತಿಳಿಯದ ಭುಜ.

(b) $\dfrac{\dfrac{\text{ತಿಳಿದ ಬಾಹು}^2}{\text{ಭು} - \text{ಕರ್ಣ}} - \text{ಭುಜ ಕರ್ಣಾಂತರ}}{2} = \text{ತಿಳಿಯದ ಭುಜ}.$

ಉದಾ.—ತಿಳಿದ ಬಾಹು 20. ಭುಜ ಕರ್ಣಾಂತರ 10. ಕರ್ಣ ಭುಜಗಳೆಷ್ಟು?

ರೀತಿ.— $\frac{20^2}{10} - 10 = \frac{40-10}{2} = 15$ ತಿಳಿಯುದ ಭುಜ.

$15+10=25$ ಕರ್ಣ.

೬ ಎರಡು ಭುಜಗಳನ್ನು ಪ್ರತ್ಯೇಕಿಸಲಿಕ್ಕೆ:—

ಭುಜಪಾದ ಯೋಗವರ್ಗದೆ (ಅಥವಾ)

ಭುಜಪಾದಾಂತರ ವರ್ಗವ ।

ತ್ಯಜಿಸದೆ ಕಳೆಯುತ್ತಿರ್ಕರ್ಣವರ್ಗದ್ವಯಮುಂ ॥

ನಿಜದಿಂ ಮೂಲವ ಕೊಳುತದ ।

ಭುಜಗಳಯೋಗದೊಳು ಕೂಡಿಯುರ್ಧಿಸು ಕಳೆದುಂ ॥ (ಅರ್ಧಿಸು)

ಸೂ.—(a) $\frac{\sqrt{\text{ಭುಜಪಾದಯೋಗ}^2 - 2\text{ಕರ್ಣ}^2} + \text{ಭುಜಪಾದಯೋಗ}}{2} = \text{ಭುಜ}$

(b) $\frac{\sqrt{2\text{ಕರ್ಣ}^2 - \text{ಭುಜಪಾದಾಂತರ}^2} - \text{ಭುಜಪಾದಾಂತರ}}{2} = \text{ಪಾದ}$

ಉದಾ.—(a) ಭುಜ ಪಾದಯೋಗ 35, ಕರ್ಣ 25, ಭುಜವೆಷ್ಟು? ಪಾದವೆಷ್ಟು?

ರೀತಿ.— $\frac{35^2 - 2\times 25^2 + 35}{2}$

$= 1275 - 1250 = \sqrt{25} = \frac{5+35}{2} = \text{ಭುಜ}$

$35-20=15$ ಪಾದ.

(b) ಭುಜ ಪಾದಾಂತರ 5 ಕರ್ಣ 25. ಭುಜವೆಷ್ಟು? ಪಾದವೆಷ್ಟು?

ರೀತಿ.— $\frac{2\times 25^2 - 5^2 - 5}{2}$

$= \frac{\sqrt{625\times 2 - 25} - 5}{2} = 15$ ಪಾದ

$15+5=20$ ಭುಜ.

ಕ್ಷೇತ್ರಗಣಿತದ ನಿಯಮಗಳನ್ನು ನೆನಪಿನಲ್ಲಿಡುವುದು ಕಷ್ಟ. ಸೂತ್ರಗಳನ್ನು ಪದ್ಯಗಳಾಗಿ ಕಲಿತರೆ ಮರೆಯಲಾರದು. ಮಾದರಿಗಾಗಿ ಕೆಲವು ಸೂತ್ರಗಳನು ಕಲ್ಪಿಸಿದೆ.

K. R.

ಲೋವರ್ ಸೆಕಂಡರಿ ಕನ್ನಡ ಗ್ರಂಥದ ಪ್ರಶ್ನೆಗಳು.

I. (1) ಶೇಷರಾಮಾಯಣ, ದಿಲೀಪಚರಿತ್ರೆ. ಇವುಗಳು ಯಾವ ಮೂಲ ಗ್ರಂಥಗಳಿಂದ ಕನ್ನಡಿಸಲ್ಪಟ್ಟವೆ?

(2) "ಕಂದು ಕಸರಿಕೆ ಹೋಗಬೇಕು ಮುಕುಂದನಲಿ ತನಗೆಂದು" ಇಲ್ಲಿ ಕಂದು ಕಸರಿಕೆ ಯೇನು? ಅದು ಯಾರಿಗೆ ಉಂಟಾಯಿತು ಅದು ಹೇಗೆ ಹೋಯಿತು?

(3) ಜನಕರಾಯನ ಐಶ್ವರ್ಯವು ಎಷ್ಟರಮಟ್ಟಿಗೆ ಇತ್ತು ಎಂಬುದನ್ನು ಸಂಗ್ರಹವಾಗಿ ತಿಳಿಸಿರಿ.

II. (1) ಸೀತೆಯು ಮಹಾ ಪತಿವ್ರತೆಯೆಂದು ತಿಳಿದಿದ್ದರೂ ಆಕೆಯನ್ನು ಶ್ರೀ ರಾಮನು ಯಾಕೆ ಅರಣ್ಯಕ್ಕೆ ಕಳುಹಿದನು?

(2) ರಘು ಎಂದು ಆ ರಾಯನಿಗೆ ಹೆಸರು ಹೇಗಾಯಿತು?

(3) ಕಾಡೊಳ್ ಕವಲ್ತು ಪಕ್ಕಿಗಳಾಡುಂಬೊಲನಾಗಿ ನಿಲ್ತುದದು ಮರ ನಲ್ಲಂ – ಇನ್ನು ಯಾವದು ಮರ?

(4) "ಮನೆಯೊಳ್ ವನಿತೆ ಗುಣರಹಿತೆಯಾದೊಡೆ ಮನೆಯಲ್ತದು" ಅದು ಇನ್ನೇನು?

III. (1) ಹನುಮಂತನು ರಾಮನಲ್ಲಿಗೆ ಏಳೆ ಸನ್ಯಾಸಿವೇಷವನ್ನು ಧರಿಸಿ ಬಂದನು?

(2) ಲಂಕಿಣಿ, ಸಿಂಹಿಕೆ, ಮೈನಾಕ, ತ್ರಿಜಟೆ. ಇವರುಗಳ ವಿಷಯ ವನ್ನು ಸಂಗ್ರಹವಾಗಿ ತಿಳಿಸಿರಿ.

(3) ರುರು, ಅಟ್ಟಲು, ಮಹ, ಸೊಡರು, ಕಡವರ, ಏಗೊಂಡ, ಈ ಮಾತುಗಳ ಅರ್ಥವೇನು?

IV. (1) ಕೆಳಗಣ ಉಪಮಾನ ವಾಕ್ಯಗಳಿಗೆ ಉಪಮೇಯ ವಾಕ್ಯಗಳನ್ನು ಬರೆಯಿರಿ

a. ಗತಿವೇಗದಿಂದ ಮಾರುತನನಿಳಿಸುವ ತುರಗತತಿಯಿಂದ ರವಿ ದೆಸೆಯ ದಾಂಟುವಂತೆ.

b. ತರಣಿ ಸಂಜೆಯೊಳಿತ್ತ ಕೆರಣದೈಸಿರಿಯಿಂದ ಮಿರುಮಿರುಪ ಪಾವಕನ ಮೈಸಿರಿವೊಲು.

(2) ಕೆಳಗಳ ವಾಕ್ಯಗಳಿಗೆ ಹೇಳಿರುವ ದೃಷ್ಟಾಂತ ವಾಕ್ಯಗಳೇನು?

a. ವಿಲಸದ್ಗುಣದಿಂದಲ್ಲದೆ ಕುಲದಿಂದಮೆ ಪೂಜ್ಯರಪ್ಪರೇ ಜನರಿಳೆಯೊಳ್.

b. ಖೇದಪರಂಪರೆ ಪಿರಿದಂ ಮೋದಿ ದೊಡಂ ಸಂತರಾತ್ಮ ಶೀಲ ಮನುಳಿಯರ್.

ವಿದ್ಯಾದಾಯಿನಿ

(A MONTHLY JOURNAL.)

ಭಾಗ ೧೬.] ಏಪ್ರಿಲ್.--೧೯೦೮. [ಸಂಚಿಕೆ ೪

ಪ್ರೈಮರೀ ಪಾಠಶಾಲೆಗಳು.

ಗ್ರಾಮ ಪಾಠಶಾಲೆಗೆ ಸರಿಯಾದ ಕಟ್ಟಡಗಳು ಇರುವುದೇ ಅಪೂರ್ವ. ಗಾಳಿ, ಬೆಳಕು, ಇಲ್ಲದೇ ಇರತಕ್ಕ ಮನೆಗಳಲ್ಲಿಯೂ, ಗುಡಿಸಲುಗಳಲ್ಲಿಯೂ, ಕೆಲವುಸ್ಥಳಗಳಲ್ಲಿ ಮಂಟಪಗಳಲ್ಲಿಯೂ, ಚಾವಡಿಗಳಲ್ಲಿಯೂ, ಹಾರೀ ಗುಡಿಗಳಲ್ಲಿಯೂ ಈ ಪಾಠಶಾಲೆಗಳು ಮಾಡಲ್ಪಡುತ್ತವೆ. ಕೆಲವು ಬಚ್ಚಲು ಮತ್ತು ತಿಪ್ಪೆಗಳ ಸಮೀಪದಲ್ಲಿ ಇರುತ್ತವೆ. ಗ್ರಾಮಸಾರದ ದುರ್ಗಂಧವು ದುಸ್ಸಹವಾಗಿರುತ್ತದೆ. ಹಗಲು ಹೊತ್ತಿನಲ್ಲಿಯೂ ಕೂಡಾ ಕೆಲವು ಪಾಠಶಾಲೆಗಳಲ್ಲಿ ಸೊಳ್ಳೆಗಳು ಕಾಡುತ್ತಲಿರುತ್ತವೆ. ಅದು ಹಾಗಿರಲಿ. ಈ ಗ್ರಾಮವಾಸಿಗಳಿಗೆ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಮಾಡಿಸಬೇಕೆಂಬ ಆಶೆಯು ಬಹಳ ಅಪೂರ್ವ. ಅವರು ಎಷ್ಟು ಕಷ್ಟಪಟ್ಟಾಗ್ಯೂ ಅನ್ನವಸ್ತ್ರಗಳಿಗೆ ಅನುಕೂಲವನ್ನು ಮಾಡಿಕೊಳ್ಳುವದು ಬಹಳ ಕಷ್ಟವಾಗುವುದು. ಸಾಮಾನ್ಯಕಾಲದಲ್ಲಿ ಕೂಡಾಕಷ್ಟಕ್ಕೆ ಗುರಿಯಾಗತಕ್ಕ ಈ ಜನರು ಅನಾವೃಷ್ಟಿ ಕಾಲವು ಬಂದರೆ ಇನ್ನೂ ವಿಶೇಷಕಷ್ಟಕ್ಕೆ ಗುರಿಯಾಗಿ ಸಾಲ ಸೋಲಗಳನ್ನು ಮಾಡಿಕೊಂಡು ಉದರಭರಣವನ್ನು ಮಾಡುವುದೇ ಇವರಿಗೆ ಅಸಾಧ್ಯವಾಗುವುದು. ಇಂಥ ದರಲ್ಲಿ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಮಾಡಿಸುವುದಕ್ಕೆ ಇವರಿಗೆ ಉತ್ಪತ್ತಿಯು ಎಲ್ಲಿಂದ ಬರುವುದು ? ಪುಸ್ತಕಗಳನ್ನು ತೆಗೆದುಕೊಡುವದಕ್ಕೆ ಇವರಿಗೆ ಅನುಕೂಲ್ಯವೇ ಇರುವುದಿಲ್ಲ. ಚಿಕ್ಕ ಮಕ್ಕಳಿಂದ ಕೂಡಾ ಕೆಲಸವನ್ನು ತೆಗೆಯಬೇಕಾಗುವುದು. ದನಾಕಾಯುವುದೇ ಮೊದಲಾದ ಕೆಲಸಗಳಿಗೆ ಅವರನ್ನು ಉಪಯೋಗಿಸಿ

ಕೊಂಡ ಹೊರತು ಇವರ ಕೆಲಸಗಳೇ ನಡೆಯುವುದಿಲ್ಲ. ಗ್ರಾಮಾಂತರಗಳಿಗೆ ಹೋಗಿ ಇವರ ಸ್ಥಿತಿಯನ್ನು ಪರೀಕ್ಷಿಸಿದರೆ ಅನ್ನಕ್ಕಿದ್ದರೆ ಒಟ್ಟಿಗಿಲ್ಲದೆ ಒಟ್ಟಿಗಿದ್ದರೆ ಅನ್ನಕ್ಕಿಲ್ಲದೆ ಬಡರೈತರಲ್ಲಿ ಬಹುಜನಗಳು ಎಷ್ಟು ಕ್ಲೇಶಪಡುತ್ತಲಿರುವರೋ ಅದು ಗೊತ್ತಾಗುವುದು. ಬಹುಜನಗಳನ್ನು ನೋಡಿದ ಮಾತ್ರದಿಂದಲೇ ಅವರ ದಾರಿದ್ರ್ಯಾತಿಶಯವು ಎಂಥಾ ಕಠಿಣವಾದ ಹೃದಯವುಳ್ಳವನಿಗೂ ಕೂಡ ಅನುತಾಪವನ್ನುಂಟು ಮಾಡುವುದು. ವಿದ್ಯಾಭ್ಯಾಸವನ್ನು ಹೊಂದಬೇಕಾದಜನಗಳ ಪೈಕಿ ರೈತರ ಅವಸ್ಥೆಯು ಎಷ್ಟು ಶೋಚನೀಯವಾಗಿರುವುದು. ಎಲ್ಲಾ ಗ್ರಾಮಗಳಲ್ಲಿಯೂ ಶ್ಯಾನುಭೋಗ, ಪಟೇಲ, ಪುರೋಹಿತ, ಮೊದಲಾದ ಕೆಲವು ಜನ ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರು ಸ್ವಲ್ಪ ಉಪಪನ್ನರಾಗಿರುವರು. ಇವರು ವಿದ್ಯಾಭ್ಯಾಸದಿಂದ ಜೀವಿಸತಕ್ಕವರು. ಪ್ರೈಮರೀ ಪಾಠಶಾಲೆಗಳ ಪ್ರಯೋಜನವನ್ನು ಹೊಂದತಕ್ಕವರೇ ಇವರು. ಇವರ ಹುಡುಗರಿಗೋಸ್ಕರವೇ ಪಾಠಶಾಲೆಗಳಿರುವುವು. ಇವರ ವಿದ್ಯಾಭ್ಯಾಸವೂ ಕೂಡ ಅಷ್ಟು ಸಮರ್ಪಕವಾಗಿ ನಡೆಯುವುದಿಲ್ಲ. ಇದಕ್ಕೆ ಕಾರಣವೇನು?

ವಿದ್ಯಾರ್ಥಿಗಳು ವಿದ್ಯಾವಂತರಾಗಬೇಕಾದರೆ ತಾಪತ್ರಯಗಳಿಂದ ಪೀಡಿತರಾಗದಿರುವ ಗುರು ದೊರೆಯಬೇಕು. ಇದು ಕಷ್ಟವಾದರೂ, ಗ್ರಾಮ ಪಾಠಶಾಲೆಯ ಉಪಾಧ್ಯಾಯರ ಸ್ಥಿತಿಯು ಕ್ರಮೇಣ ಅನುಕೂಲಿಸುತ್ತಿರುವುದು. ಈಚೆಗೆ ನಮ್ಮ ಶ್ರೀಮನ್ಮಹಾರಾಜರವರ ಕೃಪಾಕಟಾಕ್ಷದಿಂದ ಕ್ರಮಕ್ರಮವಾಗಿ 10 ರೂಪಾಯಿನ ವರೆಗೂ ಬಡ್ತಿಯಾಗಬಹುದು. 8 ರೂಪಾಯಿಗೆ ಕಡಿಮೆಯಾಗಿ ಯಾರಿಗೂ ಸಂಬಳವಿಲ್ಲದಂತೆಯೂ ಆಗಬಹುದು. ಆದಾಗ್ಯೂ ಈ ಕಾಲದಲ್ಲಿ ಕುಟುಂಬಿಯಾದವನಿಗೇನೂ ಕ್ಲೇಶವಿಲ್ಲದೆ, ಶ್ರದ್ಧೆಯಿಂದ ಕೆಲಸಮಾಡಬೇಕಾದರೆ ಈ ಸಂಬಳವು ಸಾಲದೆನ್ನಬಹುದು. ನಾರ್ಮಲ್ ಸ್ಕೂಲ್ ಆದಾರಭ್ಯ ಪಾಠಕರಲ್ಲಿ ಲೋವರ್ ಸೆಕೆಂಡರಿ ಅಥವಾ ಅಪ್ಪರ್ ಸೆಕೆಂಡರಿ ಟ್ರೈನಿಂಗ್ ಪರೀಕ್ಷೆ ಕೊಟ್ಟವರು ಪಾಠಕರಾಗಿರುವುದಕ್ಕೆ ನಿಯಮಿಸಲ್ಪಡುತ್ತಲಿದ್ದಾರೆ. ಆದಾಗ್ಯೂ ಈಗಿರತಕ್ಕ ಪಾಠಕರಲ್ಲಿ ಟ್ರೈನಿಂಗ್ ಪರೀಕ್ಷೆಯನ್ನು ಮಾಡದೇ ಇರತಕ್ಕವರು ಅನೇಕರಿರುವರು. ಇಂಥಾ ಜನಗಳಿಗೆಲ್ಲಾ ಒಂದು ವಾಯಿದೆಯನ್ನು ಕಲ್ಪಿಸಿ ಅಷ್ಟರೊಳಗಾಗಿ ಅವರು ಟ್ರೈನಿಂಗ್ ಪರೀಕ್ಷೆಯನ್ನು ಕೊಡುವಂತೆ ಮಾಡಿಕೊಳ್ಳಬೇಕು. ಈಚೆಗೆ ಕಿಂಡರ್ ಗಾರ್ಟ್ನ್ ಪಾಠಗಳನ್ನು ಕಲಿತುಕೊಳ್ಳುವಂತೆ ಏರ್ಪಾಡು ಮಾಡಲ್ಪಟ್ಟಿತು. ಕೆಲವ್ರಜನ ಪಾಠಕರು ಚಿಕ್ಕ ಮಕ್ಕಳಿಗೆ ಕಿಂಡರ್ ಗಾರ್ಟ್ನ್ ಪಾಠ ಹೇಳುವುದಕ್ಕೂ ಆಕ್ಷೇಪಣೆಯನ್ನು

ಹೊಂದಿಯಿದಾರೆ. ಆಚರೆ ಈ ಪಾಠಗಳನ್ನು ಹೇಳುವುದಕ್ಕೆ ಬೇಕಾದ ಸಲಕರಣೆಗಳುಬೇಕು.

ಈ ಏರ್ಪಾಡು ಮಾಡುವುದರಲ್ಲಿ ಸಾವಕಾಶವನ್ನು ಮಾಡಿದರೆ ಅವರು ಕಲಿತ ವಿದ್ಯೆಯು ಮಲಿನವಾಗುವುದಕ್ಕೂ ಅದರಿಂದ ವಿದ್ಯಾರ್ಥಿಗಳಿಗೆ ಸಮಗ್ರವಾದ ಪ್ರಯೋಜನವು ಇಲ್ಲದಂತಾಗುವುದಕ್ಕೂ ಅವಕಾಶವಾಗುವುದು.

ಓದುವದು, ಬರೆಯುವುದು, ಗಣಿತ, ಇವುಗಳಲ್ಲಿ ಸ್ವಲ್ಪಮಟ್ಟಿಗಾದರೂ ಎಲ್ಲಾ ಮಕ್ಕಳಿಗು ತಿಳಿಯುವದು ಬಹಳ ಅವಶ್ಯ. ರೈತರು ಪ್ರಾಯಿಕವಾಗಿ ಮಕ್ಕಳನ್ನು ಬೆಳಿಗ್ಯೆ $8\frac{1}{2}$ ಘಂಟೆಯ ಮೇಲೆ ತಮ್ಮ ಕೆಲಸಗಳಿಗೆ ಉಪಯೋಗಿಸಿಕೊಳ್ಳುವರು ಅವರಿಗೆ ಅನುಕೂಲವಾದ ಕಾಲದಲ್ಲಿ ಪಾಠಹೇಳಲು ಏರ್ಪಡಿಸಿದರೆ ಪ್ರಯೋಜನವಾಗಬಹುದು. ಇದಲ್ಲದೆ, ಸಾಯಂಕಾಲದಲ್ಲಿ ತಮ್ಮ ಕೆಲಸಗಳನ್ನು ತೀರಿಸಿಕೊಂಡು ಬಂದಮೇಲೆ ಒಂದು ಘಂಟೆ ಹೊತ್ತು ಪಾಠ ನಡೆಯುವಂತೆಯೂ, ಮಾಡಬಹುದು. ಮ್ಯಾಜಿಕ್‌ಲ್ಯಾಂಟರಿನ ಸಹಾಯದಿಂದ ಲೌಕಿಕ ವ್ಯವಹಾರವನ್ನೂ ಪ್ರಪಂಚಜ್ಞಾನವನ್ನೂ ತಿಳಿಸುವ ಏರ್ಪಾಡನ್ನು ಮಾಡಬಹುದು. ಸ್ಕೂಲುಫೀಗಳ ವಿಷಯದಲ್ಲಿ ತಿದ್ದುಪಾಟು ತುಂಬಾ ಅವಶ್ಯಕವಾದುದು.

ಬರೋಡಾ ಮೊದಲಾದ ಸಂಸ್ಥಾನಗಳಲ್ಲಿ ಪ್ರೈಮರೀ ವಿದ್ಯಾಭ್ಯಾಸವನ್ನೇ ಬಲಾತ್ಕಾರವಾಗಿ ಮಾಡಿಸುವರು. ಎಂದರೆ ಎಲ್ಲಾ ಮಕ್ಕಳೂ ಓದುವದು ಬರೆಯುವುದು, ಸಾಮಾನ್ಯ ಗಣಿತ, ಇಷ್ಟನ್ನು ಹ್ಯಾಗಾದರೂ ಕಲಿಸಲು ಸರಕಾರದವರು ಉಚಿತವಾದ ಏರ್ಪಾಡುಗಳನ್ನು ಮಾಡುತ್ತಾರೆ. ಈ ಏರ್ಪಾಡುಗಳಂತೆಜನರು ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಮಾಡಿಸದೆಯೂ ಹಾಗೆಮಾಡಿಸದೇ ಇದ್ದುದಕ್ಕೆ ಕಾರಣವನ್ನು ತೋರಿಸದೆಯೂ ಇದ್ದರೆ ಅವರಿಗೆ ಒಂದು ದಂಡವು ಹಾಕಲ್ಪಡುವುದು. ಈರೀತಿಯಾದ ಏರ್ಪಾಡಿನಿಂದ ನಿರಕ್ಷರ ಕುಕ್ಷಿಗಳಾದವರು ಇರುವುದಕ್ಕೆ ಅವಕಾಶವಾಗುವುದಿಲ್ಲ. ಈ ಏರ್ಪಾಡನ್ನು ಮೈಸೂರಿಗೆ ತರಬೇಕೆಂದು ಅನೇಕ ಪ್ರತಿನಿಧಿಗಳು ಪ್ರತಿನಿಧಿ ಸಭೆಯಲ್ಲಿ ವಿಜ್ಞಾಪನೆ ಮಾಡಿಕೊಳ್ಳುತ್ತಲಿರುವರು.

ಬಾಲಶಿಕ್ಷೆ.

ಮಕ್ಕಳನ್ನು ಅಪೇಕ್ಷಿಸದೇ ಇರತಕ್ಕವರೇ ಅಪೂರ್ವ. ಆದರೆ ಬಾಲ್ಯದಿಂದ ಅವರನ್ನು ಹೇಗೆ ಸಾಕಿದರೆ ದೊಡ್ಡವರಾದಮೇಲೆ ಅವರು ಗುಣವಂತರಾಗಿಯೂ, ಕೃತಜ್ಞ

ರಾಗಿಯೂ, ಸತ್ಯವಂತರಾಗಿಯೂ, ದೃಢಪ್ರತರಾಗಿಯೂ, ಸಚ್ಚರಿತ್ರರಾಗಿಯೂ, ಭೂತದಯೆಯುಳ್ಳವರಾಗಿಯೂ, ವಿದ್ವಾಂಸರಾಗಿಯೂ, ಸಮರ್ಥರಾಗಿಯೂ, ಜಿತೇಂದ್ರಿಯರಾಗಿಯೂ, ಆಗುವರೋ ಆದನ್ನು ತಿಳಿದುಕೊಂಡು ತಮ್ಮ ಮಕ್ಕಳು ಇಂಥಾ ಗುಣ ವಿಶಿಷ್ಟರಾಗುವಂತೆ ಸರಿಯಾದ ಶಿಕ್ಷೆಯನ್ನು ಮಾಡಿ ಅವರನ್ನು ಪುರೋವೃದ್ಧಿಗೆ ತರಬೇಕೆಂಬ ಅಭಿಲಾಷೆಯುಳ್ಳ ಜನಗಳು ಬಹು ವಿರಳರಾಗಿರುತ್ತಾರೆ. ಸರಿಯಾಗಿ ಶಿಕ್ಷಿಸಲ್ಪಟ್ಟರೆ ಸಕಲವಿದ್ಯಾವಿಶಾರದರಾಗತಕ್ಕ ಶಕ್ತಿಯು ಪ್ರಾಯಿಕವಾಗಿ ಎಲ್ಲಾ ಮಕ್ಕಳಿಗೂ ಇರುವುದು. ಆದರೆ ಆಂಥಾ ಶಕ್ತಿಯು ಶಿಕ್ಷೆಯಿಂದ ಉತ್ತೇಜನವನ್ನು ಹೊಂದುವುದು. ಯಾವ ಮಕ್ಕಳಿಗೆ ಇಂಥಾ ಉತ್ತೇಜಕವಾದ ಶಿಕ್ಷೆಯು ದೊರೆಯುವದೋ ಅವರು ಸರ್ವತೋಮುಖವಾದ ಪ್ರಜ್ಞೆಯುಳ್ಳವರಾಗಿ ಒಳ್ಳೇ ಪದವಿಗೆ ಬರುವರು. ಇತರರು ಅಶಿಕ್ಷಿತರಾಗಿ ಸಾಮಾನ್ಯಪದವಿಯಲ್ಲಿಯೂ, ನೀಚಪದವಿಯಲ್ಲಿಯೂ, ಇರುವ ಸ್ಥಿತಿಗೆ ಬರುವರು. ಸರಿಯಾದ ಶಿಕ್ಷೆಯನ್ನು ಕೊಡತಕ್ಕ ಮಾತಾಪಿತೃಗಳನ್ನೂ ಗುರುಗಳನ್ನೂ ಹೊಂದುವದೇ ಜನಗಳ ಪುಣ್ಯಪರಿಪಾಕವೆಂದು ಹೇಳಬಹುದು. ಅದು ಹೇಗಾದರೂ ಇರಲಿ. ಮಕ್ಕಳನ್ನು ಅಪೇಕ್ಷಿಸತಕ್ಕವರು ಆಮಕ್ಕಳು ಮೇಲೆಹೇಳಿದ ಸುಗುಣಾತಿಶಯಗಳನ್ನು ಸಂಪಾದಿಸಬೇಕಾದರೆ ಯಾವವಿಧವಾದ ಶಿಕ್ಷೆಯನ್ನು ಕೊಡಬೇಕೋ ಆಂಥಾ ಶಿಕ್ಷೆಯನ್ನು ಕೊಡತಕ್ಕ ವಿಧಾನವನ್ನು ತಿಳಿದುಕೊಳ್ಳಬೇಕು. ಅನೇಕ ತಂದೆತಾಯಿಗಳು ಈವಿಷಯವನ್ನು ಪರ್ಯಾಲೋಚಿಸುವುದು ಕೂಡ ಇಲ್ಲಾ. ಇದರಿಂದಲೇ ಬಹುಜನಗಳು ಮಂದಮತಿಗಳಾಗಿಯೂ, ನಿರಕ್ಷರಕುಕ್ಷಿಗಳಾಗಿಯೂ ಸಾರಾಸಾರವಿಚಾರ ವಿಹೀನರಾಗಿಯೂ, ಬೆಳೆಯುವುರಲ್ಲದೆ, ಆತ್ಮಾವಲಂಬನೆಗೆ ಸಾಧಕವಾದ ವಿದ್ಯಗಳನ್ನು ಬಾಲ್ಯದಲ್ಲಿಯೇ ಸಂಪಾದಿಸದೆ ಹೋಗುವುದರಿಂದ ಇಷ್ಟಾರ್ಥ ಪ್ರಾಪ್ತಿಗೆ ಸಮೀಚೀನವಾದ ಉಪಾಯಗಳನ್ನು ತಿಳಿಯಲಾರದೆ, ದುರ್ಮಾರ್ಗ ಪ್ರವರ್ತಕರಾಗಿ ಪಾಪಫಲಗಳನ್ನು ಅನುಭವಿಸುವ ಶೋಚನೀಯವಾದ ಸ್ಥಿತಿಗೆ ಬರುವರು. ಬಾಲ್ಯದಲ್ಲಿ ಮಕ್ಕಳಮನಸ್ಸು ಜೇನುಮೇಣದಂತೆ ಇರುವದು. ಅದನ್ನು ಯಾವ ಆಕಾರಕ್ಕೆ ಬೇಕಾದರೂ ತಿರುಗಿಸಬಹುದು. ಮಾತಾಪಿತೃಗಳೂ ಮತ್ತು ವಿದ್ಯಾಗುರುಗಳೂ ಜಾಣ್ಮಾಗಿ ಪರಿಶೀಲಿಸಿ ತಮ್ಮ ಮೇಲ್ಪಜ್ಞೆಯಿಂದ ಅವರನ್ನು ಒಳ್ಳೇ ಮಾರ್ಗದಲ್ಲಿ ನಡೆಯುವಂತೆಯೂ ಒಳ್ಳೇ ವಿದ್ಯವನ್ನು ಅಭ್ಯಾಸಮಾಡುವಂತೆಯೂ, ಮಾಡುತ್ತಾ ಬಂದರೆ ಸೌಜನ್ಯವು ಅವರ ದೇಹದೊಡನೆಯೂ ಬುದ್ಧಿಯೊಡನೆಯೂ ಬೆಳೆಯುವದು. ದೊಡ್ಡವರತನದಮೇಲೆ ಅವರಲ್ಲಿ ಸುಗುಣಗಳೆಲ್ಲಾ ಮೂರ್ತಿಮತ್ತಾಗಿ ಪರಿಣಮಿಸು

ವವು. ದುರ್ಗುಣಗಳು ದುರ್ಬಲವಾಗಿ ನಾಶವನ್ನು ಹೊಂದುವವು. ಈ ರೀತಿಯಲ್ಲಿ ಬಾಲ್ಯದಿಂದ ಮಕ್ಕಳನ್ನು ಶಿಷ್ಟಿಸಿ ಅವರನ್ನು ಗುಣವಂತರನ್ನಾಗಿಯೂ, ಮೇಧಾವಿಗಳನ್ನಾಗಿಯೂ, ಮಾಡುವುದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡುವುದೇ ತಂದೆ ತಾಯಿಗಳ ಮುಖ್ಯ ಕರ್ತವ್ಯ. ಅನೇಕ ಜನಗಳು ಕುದುರೆ, ನಾಯಿ, ಮೊದಲಾದ ಜಂತುಗಳನ್ನು ಸಾಕುವುದರಲ್ಲಿಯೂ, ಅವುಗಳು ತಮ್ಮ ಆಜ್ಞೆಗೆ ಅನುಸಾರವಾಗಿ ನಡೆಯುವಂತೆ ಮಾಡಿಕೊಳ್ಳುವುದರಲ್ಲಿಯೂ ಎಷ್ಟೋ ಮೆಹನತ್ತು ಮಾಡುತ್ತಾರೆ. ಅದರಲ್ಲಿ 10 ರಲ್ಲಿ ಒಂದು ಭಾಗ ಮೆಹನತ್ತನ್ನು ಕೂಡಾ ಮಕ್ಕಳನ್ನು ಸುಶಿಷ್ಟಿತರನ್ನಾಗಿ ಮಾಡುವುದರಲ್ಲಿ ಮಾಡುತ್ತಲಿಲ್ಲಾ. ಇಂಥಾ ಪ್ರಾಣಿಗಳ ಶಿಕ್ಷೆಯಲ್ಲಿ ನಾವು ತೋರಿಸತಕ್ಕ ಶ್ರದ್ಧೆಯು ಕೂಡಾ ನಮ್ಮ ಮಕ್ಕಳ ದೇಹ ಪೋಷಣೆಯಲ್ಲಿಯೂ, ವಿದ್ಯಾಭ್ಯಾಸದಲ್ಲಿಯೂ, ನಾವು ತೋರಿಸದೆಯಿದ್ದರೆ ನಾವು ಹೇಗೆತಾನೇ ಕೃತ ಕೃತ್ಯರಾಗುತ್ತೇವೆ. ನಮ್ಮ ಮಕ್ಕಳ ವಿಷಯದಲ್ಲಿ ನಮಗಿರತಕ್ಕ ಪ್ರೀತಿಯು ಹೇಗೆತಾನೇ ಚರಿತಾರ್ಥವಾಗುತ್ತದೆ. ಜನನವಾದ ಕೂಡಲೇ ಮಕ್ಕಳ ವಿದ್ಯಾಭ್ಯಾಸವು ಉಪಕ್ರಮವಾಗುವುದು. ಒನಾಮಗಳನ್ನು ಕಲಿಸುವುದಕ್ಕೆ ಮುಂಚೆಯೇ ಈ ಪ್ರಪಂಚದಲ್ಲಿರತಕ್ಕ ಸಮಸ್ತ ವಸ್ತುತತ್ವಜ್ಞಾನವನ್ನೂ ಕೂಡಾ ಮಾಡಿಸಬಹುದು. ಹೀಗೆ ಮಾಡಿಸಿದರೆ ಅಕ್ಷರಾಭ್ಯಾಸವಾದಮೇಲೆ 10—16 ವರುಷಗಳ ಒಳಗಾಗಿ ವಿದ್ಯಾರ್ಥಿಗಳು ಸಕಲಶಾಸ್ತ್ರಗಳಲ್ಲಿಯೂ ನಿಪುಣರಾಗುವರು. ಪಾಶ್ಚಾತ್ಯರಲ್ಲಿ ಬುದ್ಧಿಶಾಲಿಗಳಾದ ಅನೇಕ ತಂದೆತಾಯಿಗಳು ಈ ರೀತಿಯಲ್ಲಿ ಸಮಾಚೀನವಾದ ಶಿಕ್ಷೆಯನ್ನು ತಮ್ಮ ಮಕ್ಕಳಿಗೆ ದೊರೆಯುವಂತೆ ಮಾಡಿರುವುದರಿಂದ ಪರಾಕಾಷ್ಠದಶೆಯನ್ನು ಹೊಂದಿದ ದೇಹಶಕ್ತಿ ಬುದ್ಧಿಶಕ್ತಿಯುಳ್ಳವರು ಆ ದೇಶದಲ್ಲಿ ತಯಾರಾಗುವರು. ಇಂಥಾ ಜನಗಳು ಹೆಚ್ಚಾಗಿ ದೊರೆಯುವುದರಿಂದ ಆ ದೇಶೀಯರು ಐಹಿಕಾಮುಷ್ಮಿಕ ಸುಖಗಳನ್ನು ಸೂರೆಗೊಂಡಿರುವರು. ನಮ್ಮ ದೇಶೀಯರು ಮಕ್ಕಳ ಪೋಷಣೆಯನ್ನೂ ಮಕ್ಕಳ ಶಿಕ್ಷೆಯನ್ನೂ ತಿಳಿದುಕೊಳ್ಳುವುದು ಅವಶ್ಯಕ. ಈ ಎರಡು ವಿದ್ಯೆಗಳು ಪಾಶ್ಚಾತ್ಯರಲ್ಲಿ ಯಾವರೀತಿಯಲ್ಲಿರುವುದೋ ಅದನ್ನು ಸಂಕ್ಷೇಪವಾಗಿ ಮುಂದಿನ ಸಂಚಿಕೆಯಿಂದ ತಿಳಿಸುವುದಕ್ಕೆ ಉಪಕ್ರಮಿಸುತ್ತೇವೆ.

ಪಾಠಶಾಲೋಪವನಗಳು.

ನಮ್ಮ ದೇಶದ ಜನರಲ್ಲಿ ಹೆಚ್ಚು ಜನರು ಕೃಷಿಯಿಂದಲೇ ಜೀವಿಸತಕ್ಕವರು. ಇಂತವರ ಮಕ್ಕಳ ವಿದ್ಯಾಭಿವೃಗೋಸ್ಕರವೇ ಪ್ರೈಮರೀ ಸ್ಕೂಲುಗಳು ಸ್ಥಾಪಿಸಲ್ಪಟ್ಟವೆಯಷ್ಟೆ! ಸ್ಕೂಲುಗಳ ಉದ್ದೇಶವು ಸಮಗ್ರವಾಗಿ ನೆರವೇರಬೇಕಾದರೆ ಶಿಕ್ಷಣಕ್ಕೆ ಅನುಕೂಲಿಸುವಂತೆ ಕೃಷಿವಾಣಿಜ್ಯಾದಿಗಳ ಮರ್ಮಗಳನ್ನು ವ್ಯಕ್ತಪಡಿಸುತ್ತ, ಅವುಗಳನ್ನು ಅಭಿವೃದ್ಧಿಮಾಡಿಕೊಳ್ಳಲಿಕ್ಕೆ ತಕ್ಕ ರಹಸ್ಯಗಳನ್ನು ತಿಳಿಸಲಿಕ್ಕೆ ಸ್ಕೂಲಿನ ತೋಟಗಳು ಸದಾ ಹೆಚ್ಚುತ್ತಿರಬೇಕು. ಇದು ನಮ್ಮ ದೇಶಕ್ಕೆ ಹೊಸದೆಂದು ತೋರಬಹುದಾದರೂ ಯೂರೋಪ್ ಅಮೇರಿಕಾ ಖಂಡಗಳಲ್ಲಿರುವ ಸ್ಕೂಲುಗಳಲ್ಲಿ ಇಂತಹ ತೋಟಗಳು ಬಹು ದಿನಗಳಿಂದಲೂ ಪ್ರಬಲಿಸುತ್ತ ಬಂದಿವೆ. ಹಿಂದೂ ದೇಶದ ಕೆಲವು ಪ್ರದೇಶಗಳಲ್ಲಿ ಈ ಪದ್ಧತಿಯಿಲ್ಲದೆ ಇಲ್ಲ. ಮಧ್ಯಪ್ರಾಂತ್ಯಗಳಲ್ಲಿ ಇಂತಹ ತೋಟಗಳು ವಿಸ್ತರಿಸಲ್ಪಟ್ಟಿರುವಂತೆ ಸರ್ಕಾರಿ ರಿಪೋರ್ಟುಗಳಿಂದ ತಿಳಿಯುಬರುವುದು. ಇಂತಹ ಉಪವನಗಳು ದೇಶಕಾಲಸ್ಥಿತಿಗಳನ್ನನುಸರಿಸಿ ಇರಬೇಕೇ ಹೊರತು ಒಂದು ಕಡೆಯ ಪದ್ಧತಿಯನ್ನೇ ಅನುಸರಿಸಲಾಗದು. ಶಾಲೆಯಿರುವ ಸ್ಥಳ ನೆಲದ ಗುಣ ಇವುಗಳನ್ನನುಸರಿಸಿ ಈ ಉಪವನಗಳನ್ನು ಬದಲಾಯಿಸುತ್ತಿರಬೇಕು.

ಇಂತಹ ಶಾಲೋಪವನಗಳಿಂದ ಲಭಿಸುವ ಪ್ರಯೋಜನಗಳನ್ನು ನೋಡೋಣ.

ತೋಟಗಳು ಪಾಠಶಾಲೆಗೆ ಸೇರಿದಂತೆ ಇದ್ದರೆ ಶಾಲೆಯ ಸೌಂದರ್ಯವು ಹೆಚ್ಚುವುದು. ನೈರ್ಮಲ್ಯ, ಕ್ರಮಾವಲಂಬನ, ಕಷ್ಟಪಡುವುದರಲ್ಲಿ ಆಸಕ್ತಿ, ಸ್ಥಿರಸಂಕಲ್ಪ, ಕಾರ್ಯಕ್ಷಮತೆ, ಅಭಿವೃದ್ಧಿಯಲ್ಲಿ ಆಸಕ್ತಿ, ಈ ಗುಣಗಳನ್ನು ಬಾಲರಲ್ಲಿ ಉಂಟುಮಾಡಲು ತುಂಬಾ ಅನುಕೂಲವಾಗಿರುವುವು. ಪ್ರೈಮರಿ ಸ್ಕೂಲಿನಲ್ಲಿ ಕಲಿಸಲ್ಪಡತಕ್ಕ ಪಾಠಗಳಲ್ಲಿ ಕೃಷಿ ಶಾಸ್ತ್ರಕ್ಕೆ ಸಂಬಂಧಪಟ್ಟ ವಸ್ತುಪಾಠಗಳಿಗೆ ಉಪಯುಕ್ತವಾದ ಉಪಕರಣಗಳೂ ನಿದರ್ಶನಗಳೂ ಈ ಮೂಲಕ ದೊರೆಯುವುವು. ಇಷ್ಟುಮಾತ್ರವಲ್ಲದೆ ಕೃಷಿವಾಣಿಜ್ಯಗಳು ಅಭಿವೃದ್ಧಿಹೊಂದಲಿಕ್ಕೆ ನಾಗರಿಕ ಶ್ರೇಷ್ಠರು ಅನುಸರಿಸುತ್ತಿರುವ ಬೆಳೆಗಳ ಪದ್ಧತಿಗಳನ್ನು ಸುದಾ ಇಲ್ಲಿ ತೋರಿಸಿ ಹುಡುಗರಿಗೆ ವ್ಯವಸಾಯ ಮಾಡುವುದರಲ್ಲಿ ಅಭಿರುಚಿಯನ್ನು ಹುಟ್ಟಿಸಿ, ಸಮಯಬಂದಾಗ ತಮ್ಮ ಕೆಲಸಗಳನ್ನು

ಸುಲಭವಾಗಿಯೂ ಚಮತ್ಕಾರವಾಗಿಯೂ ಮಾಡಿಕೊಳ್ಳಲಿಕ್ಕೆ ಅನೇಕ ವಿಷಯಗಳನ್ನು ಕಲಿಸಬಹುದು. ವ್ಯವಸಾಯವು ವೃದ್ಧಿಯಲ್ಲಿರುವ ದೇಶಗಳಲ್ಲಿ ಎಂತಹ ಕೃಷ್ಯುಪಕರಣಗಳು ಉಪಯೋಗಿಸಲ್ಪಡುತ್ತವೆಯೋ ಯಾವಯಾವ ಕೃಷಿಮರ್ಮಗಳು ಕಲಿಸಲ್ಪಟ್ಟಿವೆಯೋ ಅವುಗಳನ್ನೆಲ್ಲಾ ತಿಳಿದುಕೊಂಡು ತಮ್ಮ ಅನುಭವದೊಂದಿಗೆ ಹೋಲಿಸಲಿಕ್ಕೆ ಇವು ಸಹಕಾರಿಗಳಾಗಿರುವುವು.

ಪಾಠಶಾಲೆಗೆ ಸೇರಿರುವ ಸ್ಥಳವು ಈ ಕಾರ್ಯಕ್ಕೆ ಉಪಯೋಗಿಸಲ್ಪಡತಕ್ಕುದಾಗಿರಬೇಕು. ನೆಲವು ತಕ್ಕಷ್ಟು ಇರತಕ್ಕುದು. ಆಳವಾಗಿ ಅಗೆದು ಒಳ್ಳೆಯ ಮಣ್ಣನ್ನು ತುಂಬಿ ಅನುಕೂಲವಾವಾಗುವಂತೆ ಮಾಡಿಕೊಳ್ಳುವುದು. ಜಲವಸತಿಗೆ ಅನುಕೂಲವಿಲ್ಲದಿದ್ದರೆ ಅನುಕೂಲವಿರುವ ಕೆರೆಯಿಂದ ನೀರನ್ನು ತಂದುಕೊಂಡಾದರೂ ಈ ತೋಟಗಳನ್ನು ಬೆಳೆಯಿಸಬೇಕು. ಸ್ಥಳದ ಸ್ಥಿತಿಯನ್ನೂ ದೇಶೀಯ ಸಸ್ಯಗಳ ಪರಿಚರ್ಯವನ್ನೂ ಕೃಷಿ ವ್ಯಾಪಾರಗಳಲ್ಲಿ ಉತ್ಸಾಹವನ್ನು ಪಡೆದಿರತಕ್ಕುದ್ದು, ಪಾಠಶಾಲಾಧಿಕಾರಿಗಳಿಗೂ ಉಪಾಧ್ಯಾಯರಿಗೂ ಮುಖ್ಯತಾತ್ಪರ್ಯವಾಗಿರತಕ್ಕುದ್ದು ಶಾಲೋಪವನಗಳು ನಾಲ್ಕು ಭಾಗವಾಗಿರಬೇಕು.

ಮೊದಲನೆಯ ಭಾಗ—ಹೂಗಿಡಗಳು.

ಈ ದೇಶದ ಹೂಗಳಿಂದ ಗುಲಾಬಿ, ಗಣಿಗಲು ಮುಂತಾದುವುಗಳಲ್ಲದೆ ಸೀಮೆಯ ಜಾಜಿಯ ಹೂಗಿಡಗಳು ಕೆಲವನ್ನು ಸೇರಿಸಬಹುದು. ಹೂಗಳಲ್ಲಿ ಕೆಲವು ಸದಾಕಾಲದಲ್ಲಿಯೂ ಬಿಡತಕ್ಕವು. ಕೆಲವು ಆಯಾ ಋತುಗಳಲ್ಲಿ ಮಾತ್ರ ಪುಷ್ಪಿಸತಕ್ಕವು. ಮತ್ತೆ ಕೆಲವು ವರುಷಾಂತರದಲ್ಲಿ ನಶಿಸುವುವು. ಇನ್ನು ಕೆಲವು ಎರಡು ವರುಷಗಳ ತನಕ ಇರತಕ್ಕವು. ಹೀಗೆ ನಾನಾಭೇದಗಳುಳ್ಳವುಗಳಾಗಿರುವುವು. ಆದುದರಿಂದ ಯಾವಯಾವ ಕಡೆಗಳಲ್ಲಿ ಯಾವಯಾವ ಹೂಗಿಡಗಳು ಬೆಳೆಯತಕ್ಕವೊ ಅಂತವುಗಳನ್ನು ಬೆಳೆಸುವುದೇ ಸಹಜವಾಗಿಯೂ ಸುಲಭವಾಗಿಯೂ ಇಹ್ದೆ. ಇವುಗಳಲ್ಲದೆ ಸಜಾತಿಯುಗಳಾದ ಬಗೆಬಗೆಯ ಹೂಗಳನ್ನು ಬೆಳೆಸಬಹುದು, ಈ ದೇಶದಲ್ಲಿ ಅಂದವಾಗಿರುವ ಮತ್ತು ಸುವಾಸನೆಯುಳ್ಳ ಹೂವಿನಗಿಡಗಳಿಗೆ ಕೊರತೆ ಇಲ್ಲ. ಅವುಗಳನ್ನು ಬೆಳೆಯಿಸುವುದಕ್ಕೆ ಬೇಕಾದ ಬೀಜಗಳು ಬೆಂಗಳೂರು ಮೊದಲಾದ ದೊಡ್ಡ ಪಟ್ಟಣಗಳಿಂದಲೂ ಹಿಮಾಲಯಾ ಮೊದಲಾದ ಪರ್ವತಪ್ರಾಂತಗಳಿಂದಲೂ ಸುಲಭ ಕ್ರಯಕ್ಕೆ ತರಿಸಬಹುದು. ಹೂವಿನ ಗಿಡಗಳು ಕೆಲವು ಅಂದಕ್ಕೆ ಮಾತ್ರವಲ್ಲ. ವನಸ್ಪತಿಶಾಸ್ತ್ರದಲ್ಲಿನ ಪಾಠಗಳಲ್ಲಿ ಸೃಷ್ಟಿವೈಚಿತ್ರ್ಯಗಳನ್ನೂ ನಾನಾಬ

ಗೆಯು ಗಿಡಗಳ ಅಂತರ್ಭಾಗಗಳ ಮರ್ಮಗಳನ್ನು ದೃಷ್ಟಾಂತಗಳೊಂದಿಗೆ ಬೋಧಿಸಲಿಕ್ಕೆ ತುಂಬಾ ಅನುಕೂಲವಾಗುವುದು. ಪ್ರಕೃತಿಜ್ಞಾನಸಂಪಾದನೆಗೆ ಅಂಕುರವು ಇಲ್ಲಿಯೇ ಪ್ರಾರಂಭವಾಗುವುದು.

ಎರಡನೆಯದು—ಕಾಯಿಪಲ್ಯಗಳು.

ಕಾಯಿಪಲ್ಯಗಳ ಉಪಯೋಗವನ್ನೆಲ್ಲರೂ ಬಲ್ಲರು. ನಾವುತಿನ್ನುವ ಆಹಾರ ಪದಾರ್ಥಗಳಲ್ಲಿ ಇಂತಹ ಶಾಕಗಳೇ ಬಹು ಮುಖ್ಯವಾದುವುಗಳೆಂದು ಸ್ಪಷ್ಟವಾಗುವುದು. ಕೆಲವು ಸಳಗಳಲ್ಲಿ ಸುತ್ತಲೂ ಹೂಗಿಡಗಳನ್ನು ನೆಟ್ಟು ನಡುವೆ ಮಡಿಗಳನ್ನು ಮಾಡಿ ಕಾಯಿಪಲ್ಯಗಳನ್ನು ಬೆಳೆಸುವ ವಾಡಿಕೆಯುಂಟು. ಈ ಪದ್ಧತಿಯೇ ಉತ್ತಮವಾದದ್ದೆಂದು ತೋರುತ್ತದೆ ಇಲ್ಲಿ ನಮ್ಮ ದೇಶದ ಶಾಕಗಳಾವುವೆಂದರೆ, ಬೆಂಡೆ, ಬದನೆ, ಚಪ್ಪರದವರೆ, ಪಡವಲಕಾಯಿ, ಸೌತೇಕಾಯಿ ಮುಂತಾದವುಗಳನ್ನೂ ಗೆಣಸು, ಮೂಲಂಗಿ, ಆಲೂಗಡ್ಡೆ, ಕೋಸಗಡ್ಡೆ ಮುಂತಾದ ಗೆಡ್ಡೆಗಳನ್ನು ಸಾತ್ರವಲ್ಲದೆ ಸೀಮೆಯ ತರ್ಕಾರಿಗಳನ್ನೂ ಬೆಳಸಬಹುದಾಗಿದೆ, ನೋಡಿರಿ, ಸ್ವಲ್ಪ ಸಾರವತ್ತಾದ ಭೂಮಿಯಲ್ಲಿ ಜಲವಸತಿಯಿದ್ದರೆ ಅನೇಕವಿಧವಾದ ತರ್ಕಾರಿಗಳನ್ನು ಬೆಳಸಲಿಕ್ಕೆ ಅನುಕೂಲವಾಗಿರುವುದು. ಒಂದೊಂದು ಜಾತಿಯಲ್ಲಿಯೂ ಹಲವು ಬಗೆಗಳಿರುವುವು. ಸಾಧಾರಣವಾಗಿ ದೊಡ್ಡದೊಡ್ಡ ಸೆರೆಮನೆಗಳಲ್ಲಿ ಕೂಡ ತೋಟಗಳು ನಿರ್ಮಿಸಲ್ಪಟ್ಟಿವೆ. ಅಲ್ಲಿ ಬಗೆಬಗೆಯ ಮೆಂತ್ಯದ ಸೊಪ್ಪು ದಂಟು ಮೊದಲಾದವುಗಳನ್ನು ಸರ್ವದಾ ಎಲ್ಲರೂ ಉಪಯೋಗಿಸುವರು. ಇವುಗಳಿಗಿಂತ ಸೀಮೆಯ ಕೆಲವು ಬಗೆಯ ಸೊಪ್ಪುಗಳು ರುಚಿಕರವಾಗಿಯೂ, ಆರೋಗ್ಯಪ್ರದವಾಗಿಯೂ ಇರುವುವು. ಇವುಗಳಲ್ಲಿ ಕೆಲವನ್ನು ಇಲ್ಲಿಯೂ ಬೆಳಯಬಹುದು . ಈ ತರಕಾರಿಯ ಬೆಳೆಯಿಂದ ತುಂಬ ಲಾಭವುಂಟು. ಯಾವಯಾವ ಶಾಕಗಳಿಗೆ ಯಂಥಾ ಮಣ್ಣು ಅನುಕೂಲವಾಗಿರುವುದೋ ಅದಕ್ಕೆ ತಕ್ಕ ಗೊಬ್ಬರ ಯಾವುದೋ ಬೆಳೆಸುವ ಕ್ರಮ ಎಂತಾದ್ದೋ ಇವುಗಳನ್ನೆಲ್ಲಾ ತಿಳಿಯಪಡಿಸಬಹುದು. ಇದರಿಂದ ಎಲ್ಲರಿಗೂ ಉಪಯೋಗ ಉಂಟು. ಹೀಗಿರುವಲ್ಲಿ ವ್ಯವಸಾಯದಿಂದಲೇ ಜೀವಿಸುವ ಹುಡುಗರಿಗೆ ಇದರ ಪ್ರಯೋಜನವೆಷ್ಟಿರಬಹುದೆಂಬುದನ್ನು ಪ್ರತ್ಯೇಕ ವಿವರಿಸಬೇಕಾಗಿರುವುದಿಲ್ಲ. ಕೆಲವುದೇಶಗಳೆಲ್ಲಿ ಮುಸುಕಿನಜೋಳ, ಹರಳು, ಬಾಳೆ ಮುಂತಾದವುಗಳನ್ನು ಬೆಳೆಸಬಹುದು. ಇವುಗಳನ್ನೆಲ್ಲಾ ಬೆಳೆಸುವುದರಲ್ಲಿ, ಹುಡುಗರಿಗೆ ಅಸಕ್ತಿ ಉಂಟಾಗಬಹುದು. ಹೊಸಹೊಸ ಮಾರ್ಗಗಳನ್ನು ತೋರಿಸಿ ಆವುಗಳನ್ನು

ಹುಡುಗರು ಅನುಭವಕ್ಕೆ ತಂದುಕೊಳ್ಳುವಂತೆ ಮಾಡುವುದೂ, ಮುಖ್ಯಕರ್ತವ್ಯಗಳಾಗಿವೆ. ಹೀಗೆ ಮಾಡಿದಲ್ಲಿ ಪಾಠಶಾಲೆಯಲ್ಲಿ ಬೋಧಿಸಲ್ಪಡುವುವೆಲ್ಲವೂ ಈ ತೋಟಗಳ ಮೂಲಕ ಸ್ಪಷ್ಟವಾಗಿ ತಿಳಿಸುವುದು ಅನುಕೂಲವೆಂದು ಯಾರುತಾನೇ ಹೇಳಲಾರರು. ಇದಲ್ಲದೆ ಶಾಲೆಯೆಂದರೆ ಸೆರೆಮನೆಯೆಂಬ ಭಯತಪ್ಪಿ ಹುಡುಗರು ಯಾವಾಗಲೂ ಸಂತೋಷಚಿತ್ತರಾಗಿ ಕೆಲಸಮಾಡದೆ ಇರುವರೇ? ಅವರ ದೇಹ ಬಲವು ಬೆಳೆದು ಬುದ್ಧಿಬಲಕ್ಕೆ ಸಹಕಾರಿಯಾಗಿರುವುದರಿಂದ ಅವರ ಜೀವಯಾತ್ರೆಯು ಆನಂದದಾಯಕವಾಗಿರುವುದು,

ಮೂರನೆಯದು ಸಸ್ಯಗಳು.

ಇದುವರಿಗೆ ಹೇಳಲ್ಪಟ್ಟವುಗಳಿಗಿಂತ ಇದು ಶ್ರೇಷ್ಠವಾಗಿಯೂ ಕಷ್ಟಸಾಧ್ಯವಾಗಿಯೂ ಇರುವುದು. ಆದುದರಿಂದ ಕೆಲವೆಡೆಗಳಲ್ಲಿ ಶಾಲೋಪವನಗಳಿದ್ದರೂ ಅವುಗಳಲ್ಲಿ ಬೆಳೆಗಳ ಭಾಗವಿರುವುದಿಲ್ಲ. ನಿಜವಾಗಿ ಕೃಷಿ ವ್ಯಾಪಾರಗಳಲ್ಲಿ ಇರುವ ರಹಸ್ಯಗಳು ತಿಳಿಯಬೇಕಾದರೆ ಸಸ್ಯಗಳನ್ನು ಬೆಳೆಯಿಸಬೇಕು. ಬೇಸಾಯಗಾರರ ಮರ್ಮಗಳನ್ನು ಅನುಭವಕ್ಕೆ ತಂದುಕೊಳ್ಳಬೇಕಾದರೆ ಇದಕ್ಕಿಂತ ಅನುಕೂಲವಾವ ಉಪಾಯ ಒಂದೂ ಇಲ್ಲ. ಸರಕಾರದವರು ಅಲ್ಲಲ್ಲಿ ಕೃಷಿಗಳ ನಿದರ್ಶನ ಕ್ಷೇತ್ರಗಳನ್ನು (Good Agricultural Farms)ಮಾಡಿರುವರಷ್ಟೆ! ಅವುಗಳಲ್ಲಿ ಬೋಧಿಸಲ್ಪಡತಕ್ಕವುಗಳೇನೆಂಬುದನ್ನು ವಿಚಾರ ಮಾಡೋಣ. ದೇಶಗಳಲ್ಲಿ ಬೆಳೆಯುವ ಧಾನ್ಯಗಳನ್ನೂ ದ್ವಿದಳ ಧಾನ್ಯಗಳನ್ನೂ ಬೆಳಸುತ್ತಿದ್ದರೂ ವೆಚ್ಚಕ್ಕೂ ದೇಹಶ್ರಮೆಗೂ ತಕ್ಕಷ್ಟು ಲಾಭಸಿಕ್ಕುವಹಾಗಿಲ್ಲ. ಇದಕ್ಕೆ ಹಲವು ಕಾರಣಗಳುಂಟು. (1) ನೆಲದ ಸ್ವಭಾವವನ್ನು ತಿಳಿಯದೆ ಇರೋಣ, (2) ಅನುಕೂಲವಾದ ಬೆಳೆಗಳನ್ನು ಬೆಳಸದೆ ಇರುವುದು, (3) ಸುಲಭವಾಗಿ ಆಗುವ ಕೆಲಸಗಳಿಗೆ ಹೆಚ್ಚು ವೆಚ್ಚ ಮಾಡಿ ಕೆಲಸಕ್ಕೆ ಬಾರದ ಯಾನಗಳನ್ನೂ ಉಪಯೋಗಿಸುತ್ತಿರುವುದು. (4) ಹತ್ತಿರದಲ್ಲಿರುವ ಬೆಳೆಗಳನ್ನು ನೋಡಿ ತಿಳಿದುಕೊಂದು ವರ್ತಿಸದಿರುವಿಕೆ, ಸಸ್ಯಗಳಿಗೆ ತಗಲುವ ರೋಗಗಳನ್ನು ಪರಿಹರಿಸುವ ಕ್ರಮವನ್ನು ತಿಳಿಯದಿರುವುದು, ಸರಿಯಾಗಿ ಬೇಸಾಯಮಾಡದಿರುವುದು. ಮತ್ತು ತಕ್ಕ ಗೊಬ್ಬರ ಹಾಕದೆ ಇರುವುದು. ಇಂತಹ ಅನೇಕಕಾರಣಗಳಿಂದ ಲಾಭಹೊಂದಲು, ಅವಕಾಶವಿಲ್ಲದೆ ಇರುವುದು. ಬಳಕೆಯು ಕ್ರಮದಲ್ಲಿರುವ ಲೋಹಗಳನ್ನು ತಿಳಿಸುವುದಕ್ಕೂ ಅನುಕೂಲವಾದ ಸಂದರ್ಭಗಳನ್ನು ತಿಳಿಸುವುದಕ್ಕೂ ಸರ್ಕಾರದವರು ಈ ಪ್ರಕಾರಂಗ

ಳನ್ನು ಏರ್ಪಡಿಸಿದರು. ಇಂತಹ ಕ್ಷೇತ್ರಗಳಲ್ಲಿ ಹಲವುವಿಧವಾದ ಕೃಷಿಗಳು ಮಾಡಲ್ಪಡುತ್ತವೆ. ಇವುಗಳಿಗೂ ಶಾಲೋಪವನಗಳಿಗೂ ಯಾವ ವ್ಯತ್ಯಾಸವೂ ಇಲ್ಲ. ಅಲ್ಲಿ ನಡೆಯಿಸುವ ಕ್ರಮಗಳನ್ನೇ ಪ್ರಾಯಶಃ ಸ್ಕೂಲಿನ ತೋಟಗಳಲ್ಲಿಯೂ ನಡಿಸಿ ಬೋಧಿಸಬಹುದು.

ಸಸ್ಯಗಳನ್ನು ಮುಖ್ಯವಾದ ಎರಡುಭಾಗಗಳಾಗಿ ವಿಂಗಡಿಸಬಹುದು. (1) ಧಾನ್ಯದ ಪೈರುಗಳು. (2) ದ್ವಿದಳ ಧಾನ್ಯಗಳೆಂದರೆ ಬೇಳೆಯಾಗುವ ಕಾಳುಗಳ ಪೈರುಗಳು, ಇವುಗಳನ್ನು ಕೆಲವು ಅಂತರ್ಭಾಗಗಳಾಗಿ ವಿಭಾಗಿಸಬಹುದು. ಪ್ರತಿಯೊಂದು ಕುಂಡದಲ್ಲಿಯೂ ಆಯಾಬೆಳೆಗೆ ತಕ್ಕಮಣ್ಣನ್ನು ಸಾಕಾದಮಟ್ಟಿಗೆ ಸೇರಿಸಬೇಕು. ಅನುಕೂಲವಾದ ಗೊಬ್ಬರಗಳನ್ನು ಸಂಗ್ರಹಿಸತಕ್ಕುದು. ಪ್ರತಿಯೊಂದು ಬೆಳೆಗೂ ಎರಡೆರಡು ಕುಂಡಗಳಿರತಕ್ಕುದು. ಒಂದರಲ್ಲಿ ಸ್ವದೇಶದಲ್ಲಿ ಬೆಳೆಸಲ್ಪಡುವ ಕ್ರಮವನ್ನವಲಂಬಿಸತಕ್ಕುದು. ಎರಡನೆಯದರಲ್ಲಿ ಹೊಸಮಾರ್ಗಗಳನ್ನೂ, ಶಾಸ್ತ್ರೀಯ ಪದ್ಧತಿಗಳನ್ನೂ, ಅನುಸರಿಸತಕ್ಕುದು. ಹೀಗೆ ಪ್ರತಿಯೊಂದು ಬೆಳೆಯ ವಿಷಯದಲ್ಲಿಯೂ ಹುಡುಗರಿಗೆ ಅನುಕೂಲಪದ್ಧತಿಗಳಿಗೂ ಅನನುಕೂಲಪದ್ಧತಿಗಳಿಗೂ ಇರುವ ವ್ಯತ್ಯಾಸಗಳನ್ನು ತಿಳಿಯಪಡಿಸಬೇಕಾಗಿರುವುದು.

ಸ್ಕೂಲಿನ ಹುಡುಗರು ಇಬ್ಬರು ಅಥವಾ ಮೂವರನ್ನು ಸೇರಿಸಿ ಒಂದೊಂದು ತುಂಡಕ್ಕೂ ಅಧಿಕಾರಿಗಳನ್ನಾಗಿ ಏರ್ಪಡಿಸಿ ಆಯಾ ಸಸ್ಯಗಳ ಹಾನಿವೃದ್ಧಿಗಳಿಗೆ ಅವರನ್ನು ಉತ್ತರವಾದಿಗಳನ್ನಾಗಿ ಗೊತ್ತುಮಾಡತಕ್ಕುದು. ಬೋಧಕರ ಪ್ರೋತ್ಸಾಹದಿಂದಲೂ ಕಲಿಸಲ್ಪಡುವ ಹೊಸಸಂಗತಿಗಳ ಗೌರವದಿಂದಲೂ ಹುಡುಗರಿಗೆ ತಮ್ಮ ತಮ್ಮ ಕೆಲಸಗಳಲ್ಲಿ ಆಸಕ್ತಿಹುಟ್ಟಬೇಕು. ಕೆಲಸಗಳು ಹೆಚ್ಚಾಗಿ ನಡೆಯಬೇಕಾದ ಸಂದರ್ಭದಲ್ಲಿ ಕೂಲಿಯವರನ್ನು ಇಟ್ಟುಕೊಳ್ಳಬಹುದೇ ಹೊರತು ಸಾಧಾರಣವಾದ ಕೆಲಸಗಳೆಲ್ಲವನ್ನೂ ಹುಡುಗರಿಂದಲೇ ಮಾಡಿಸಬಹುದು. ಬಿತ್ತುವದಿನ ಮೊದಲುಗೊಂಡು ಬೆಳೆಯುನೊಕ್ಕುವವರೆಗೂ ಹುಡುಗರು ತಮ್ಮ ತಮ್ಮ ಹೊಲಗಳನ್ನು ತಾವೇ ನೋಡಿಕೊಳ್ಳುತ್ತಾ ತಕ್ಕೆ ಕೆಲಸಗಳನ್ನು ಮಾಡಿಕೊಂಡು ಬೆಳೆಗಳಿಗೆ ಬೇಕಾದ ಉಪಾಯಗಳನ್ನೆಲ್ಲಾ ಮಾಡುತ್ತಾ ಬರತಕ್ಕುದು. ಅವರವರ ಕೆಲಸದ ಆಯುಧಗಳನ್ನು ಅವರವರೇ ತಮ್ಮ ವಶದಲ್ಲಿಟ್ಟುಕೊಂಡು ಬಲುಜಾಗರೂಕತೆಯಿಂದ ಉಪಯೋಗಿಸುತ್ತ ಬರುವಂತೆ ಉಪಾಧ್ಯಾಯರು ಎಚ್ಚರವಿಡಬೇಕು ಈ ಭಾಗದಲ್ಲಿ ಸ್ವದೇಶದಲ್ಲಿರತಕ್ಕ ಪೈರುಗಳಲ್ಲದೆ ಇಲ್ಲಿ ಬೆಳೆಸತಕ್ಕುದಾಗಿರುವ

ಕೆಲವು ಹೊಸಬೆಳೆಗಳನ್ನು ಸಹ ಬೆಳೆಸಬಹುದು. ಛಾವಿಯಲ್ಲಿರುವ ಕಪ್ಪೆಯಹಾಗೆ ಯಾವಾಗಲೂ ಸೋಂಬೇರಿಗಳಾಗಿರದೆ ಹೊಸ ಹೊಸ ವಿಷಯಗಳನ್ನು ಕಲಿತು ಕೊಳ್ಳುತ್ತ, ವ್ಯವಸಾಯ ವೃತ್ತಿಯನ್ನು ವೃದ್ಧಿಗೊಳಿಸಬೇಕೆಂಬವರಿಗೆ ಈ ಕ್ರಮವನ್ನು ಅವಲಂಬಿಸುವುದು ಅಗತ್ಯ. ಸ್ವಲ್ಪತಡಲ್ಲಿ ನಮ್ಮ ದೇಶದ ಬೆಳಸುಗಳಲ್ಲಿ ಕಬ್ಬು, ಹತ್ತಿ, ಮೆಣಸಿನಕಾಯಿ ಮುಂತಾದುವುಗಳು ಇತರ ದೇಶಗಳಿಂದ ತರಲ್ಪಟ್ಟ ವುಗಳಾಗಿವೆ. ವರ್ತಕ ವ್ಯಾಪಾರಗಳು ಹೆಚ್ಚಿದಷ್ಟಾಗೆಲ್ಲ ದೂರದೇಶಸಂಬಂಧವು ಹೆಚ್ಚುತ್ತಲಿರುವುದು. ಹೊಸ ಹೊಸ ಬೆಳಸುಗಳು ನಮಗೆ ಜೀಕಾಗುತ್ತಿರುವುವು. ಸ್ವದೇಶದಲ್ಲಿ ಬೆಳೆಯುವ ದಿನಸುಗಳೇ ನಮಗೆ ಸಾಕೆಂದು ಸಂತೋಷಿಸುವುದು ಅಭಿವೃದ್ಧಿಯನ್ನು ಬಯಸದಿರುವವರ ಕೆಲಸ. ಹೀಗೆ ಅಭಿವೃದ್ಧಿಹೊಂದದಿದ್ದರೆ ನಾವು ಎಂದೆಂದಿಗೂ ನಾಗರಿಕರೂಂದಿಗೆ ಸರಿತೂಗಲಾರೆವು. ಅದುದರಿಂದ ಇದು ಅಗತ್ಯ. ಈ ಸಸ್ಯಭಾಗದಿಂದ ಬೆಳೆಗಳ ಮರ್ಮಗಳು, ಯಾನ ಮತ್ತು ಆಯುಧಗಳ ರಹಸ್ಯಗಳು, ಹೊಸ ಹೊಸ ಪದ್ಧತಿಗಳು, ಹೊಸಪೈರುಪಳ ಪ್ರಯೋಜನಗಳು, ಮುಂತಾದುವುಗಳೆಲ್ಲ ಚೆನ್ನಾಗಿ ತಿಳಿಯುವುವು. ಹುಡುಗರಿಗೆ ತಮ್ಮ ತಮ್ಮ ಕೆಲಸಗಳನ್ನು ತಾವು ಸ್ವಶಕ್ತಿಯಿಂದ ನಿರ್ವಹಿಸಿಕೊಳ್ಳುವ ಶಕ್ತಿಯುಂಟಾಗುವುದು. ಕೆಲಸದಲ್ಲಿ ಚಾತುರ್ಯವೂ, ಶಾಸ್ತ್ರೀಯಾಂಶಗಳಲ್ಲಿ ಅಭಿರುಚಿಯೂ, ಕೃಷಿ ವೃತ್ತಿಯಲ್ಲಿ ಉತ್ಸಾಹವೂ ಬಾಲಕರಿಗೆ ಉಂಟಾಗುವುವು. ಇದರಿಂದ ಹುಡುಗರು ತಮ್ಮ ವಿದ್ಯೆಯನ್ನು ಚೆನ್ನಾಗಿ ಅಭ್ಯಸಿಸಿ ದೊಡ್ಡವರಾದಮೇಲೆ ವ್ಯವಸಾಯವನ್ನು ಹೆಚ್ಚು ಲಾಭಕರವಾದ ವೃತ್ತಿಯಾಗಿ ಬದಲಾಯಿಸಿಕೊಂಡು ಸ್ವದೇಶದ ದರಿದ್ರದೇವತೆಯನ್ನು ಹೊರಕ್ಕೆ ಅಟ್ಟಿ ತಮ್ಮ ತಮ್ಮ ಸಂಸಾರಗಳಲ್ಲಿ ಸೌಖ್ಯವನ್ನೂ ಸಂತೋಷವನ್ನೂ ಹೊಂದಬಹುದು. ತಾವು ಅಭಿವೃದ್ಧಿಗೆ ಬರುವದಲ್ಲದೆ ಇತರರಿಗೆ ಮಾರ್ಗದರ್ಶಿಗಳಾಗಿರುವರು.

ನಾಲ್ಕನೆಯುದು ನೆರಳಿನ ಮರಗಳನ್ನು ಬೆಳೆಸೋಣ.

ಬಹುಕಾಲದಿಂದಲೂ ನಮ್ಮ ದೇಶದಲ್ಲಿ ಒಂದು ದೊಡ್ಡ ಧರ್ಮವು ಅನುಸರಿಸಿ ಬಂದಿರುವುದು. ಪುಣ್ಯಾತ್ಮರು ಒಳ್ಳೇ ನೆರಳನ್ನು ಕೊಡುವ ಗಿಡಗಳನ್ನು ಬೆಳೆಯಿಸಿ ಪ್ರಜೆಗಳಿಗೂ ಪಶುಗಳಿಗೂ ಪಕ್ಷಿಗಳಿಗೂ ಇತರ ಜಂತುಗಳಿಗೂ ಅನುಕೂಲ ಪಡಿಸುತ್ತಿದ್ದರು. ಆಸೇತು ಹಿಮಾಚಲದ ವರೆಗೂ ಎಲ್ಲಿನೋಡಿದರೂ ಗ್ರಾಮಗಳ ಹೊರಗೂ ಹಲವರು ಕುಳಿತುಕೊಳ್ಳುವ ಸ್ಥಳಗಳಲ್ಲಿಯೂ, ದೊಡ್ಡದೊಡ್ಡ ಮರಗಳು

ಬೆಳೆಸಲ್ಪಡುತ್ತಿರುವುವು. ಅವುಗಳ ನೆಳಲು ಆಸೆಯಿಂದ ಅನೇಕ ಜೀವರಾಶಿಗಳು ರಕ್ಷಿಸಲ್ಪಡುತ್ತಿರುವುವು. ನಮ್ಮ ಹಿರಿಯರೆಲ್ಲರೂ ಇಂತಹ ಮರಗಳನ್ನು ಬೆಳೆಯಿಸುವುದು ಘನವಾದ ಪುಣ್ಯ ಕಾರ್ಯವೆಂದು ತಿಳಿಯುತ್ತ ಬಂದರು. ಆಲ, ಆರಳಿ, ಬೇವು, ಹೂವರಸಿ, ಅತ್ತಿ ಮುಂತಾದ ಮರಗಳು, ಬಹು ಶಾಖೆಗಳಿಂದ ಕೂಡಿ ಹೆಚ್ಚಾದ ನೆರಳನ್ನು ಕೊಡುತ್ತಿರುವುವು. ನೂರು ವರ್ಷಗಳಾದರೂ ನಾಶವಾಗದವುಗಳಾಗಿಯೂ ಮುಸ್ಸು ವಿಾರಿದ ಹಾಗೆಲ್ಲಾ ಹೆಚ್ಚಾದ ನೆರಳನ್ನು ಕೊಡುತ್ತಿರುವುದಾಗಿಯೂ ಬೆಳೆಯುವ ಹಲವು ಜಾತಿಯ ಮರಗಳು ಈ ದೇಶದಲ್ಲಿ ಲೆಕ್ಕವಿಲ್ಲದಷ್ಟು ಇವೆ. ನೋಡಿರಿ! ನರ್ಮದಾ ತೀರದಲ್ಲಿ ಈಗಲೂ ಬಂದು ಆಲದ ಮರವಿದೆಯಂತೆ. ನಮ್ಮ ದೇಶಕ್ಕೆ ಆವಿಯುಲ್ಲಿ ಅನ್ಯ ದೇಶದವರು ದಂಡೆತ್ತಿ ಬಂದಾಗಸುದಾ ಆ ಮರ ವಿದ್ದಿತಂತೆ. ಒಂದಾನೊಂದು ಕಾಲದಲ್ಲಿ ಅದರ ನೆಳಲಲ್ಲಿ ಅನೇಕಸಾವಿರ ಸೈನ್ಯವು ವಿಶ್ರಮಿಸಿಕೊಂಡಿತ್ತಂತೆ.

ಶಾಲೋಪವನಗಳಿಗೆ ಸಂಬಂಧಿಸಿದಂತೆ ಇಂತಹ ಮರಗಳನ್ನು ಹುಡುಗರಿಂದಲೇ ಅಭಿವೃದ್ಧಿಪಡಿಸಬೇಕು. ಇದು ಬಹು ಒಳ್ಳೆಯ ಕೆಲಸ. ಪಾಠಶಾಲೆಯು ನಾಲ್ಕು ದಿಕ್ಕುಗಳಲ್ಲಿಯೂ ನೆರಳುಂಟಾಗಿ ಅಂದವಾಗಿರುವುದಕ್ಕೆ ಇದೇ ಮೂಲಾಧಾರವು. ಸೃಷ್ಟಿಪರಿಶೀಲನೆಯುಲ್ಲಿ ಹುಡುಗರಿಗೂ ಆಸೆ ಹುಟ್ಟುವುದು. ಇದಕ್ಕಾಗಿ ಎಲ್ಲಾ ಹುಡಗರಿಗೂ ಬೇರೆ ಬೇರೆ ಸ್ಥಳಗಳನ್ನು ಏರ್ಪಡಿಸಿ ಒಬ್ಬೊಬ್ಬರಿಂದ ಒಂದೊಂದು ಗಿಡವನ್ನು ಹಾಕಿಸಿ ಬೆಳಸುವಂತೆ ಮಾಡಬೇಕು. ಪ್ರತಿದಿನದಲ್ಲಿಯೂ ಅದಕ್ಕೆ ಬೇಕಾದ ವ್ಯವಸಾಯುಗಳನ್ನು ಹುಡುಗರಿಂದಲೇ ಮಾಡಿಸುತ್ತಿರಬೇಕು. ಅವುಗಳಿಗೆ ಹಾನಿಯುಂಟಾದಾಗ ಯಾವ ತಿದ್ದುಪಾಡುಗಳು ಮಾಡಬೇಕೋ ಅವುಗಳನ್ನು ಹುಡುಗರೇ ತಿಳಿದುಕೊಳ್ಳುವಂತೆ ಮಾಡಬೇಕು. ಹೀಗೆ ಮಾಡುವುದರಿಂದ ಒಳ್ಳೇ ಸ್ಥೈರ್ಯವೂ, ಸೃಷ್ಟಿವೈಚಿತ್ರವನ್ನು ವಿಚಾರಮಾಡುವುದರಲ್ಲಿ ಶಕ್ತಿಯೂ, ಬಾಲಕರಿಗೆ ಉಂಟಾಗುವುವು. ಅವರು ತಮ್ಮ ಮನೆಗಳನ್ನು ಗ್ರಾಮಗಳನ್ನು ಅಲಂಕಾರವಾಗಿ ಇಟ್ಟುಕೊಳ್ಳಲು ಶಕ್ತರಾಗುವರು. ಪ್ರಯತ್ನ, ದೃಢಚಿತ್ತ, ಚಾತುರ್ಯ ಮುಂತಾದ ಸದ್ಗುಣಗಳು ಉಂಟಾಗುವುದರಿಂದ ಹುಡುಗರ ನಡತೆಯು ಒಳ್ಳೆಯದಾಗುವುದು. ಮನೆಗಳ ಇದಿರಿಗೆ ಒಳ್ಳೇ ನೆರಳನ್ನು ಕೊಡುತ್ತ ಅಲ್ಲಿ ವಾಸಮಾಡುವ ಜನರಿಗೆ ಸೌಖ್ಯವನ್ನುಂಟುಮಾಡಲಿಕ್ಕೆ ಲತಾ ಗೃಹಗಳು ತುಂಬ ಅನುಕೂಲವಾಗಿರುವುವು. ಇಂತಹ ನಿಕುಂಜಗಳನ್ನು ಬೆಳೆಯಿಸುವುದು ನಮ್ಮ ದೇಶದಲ್ಲಿ ಪೂರ್ವ

ದಿಂದಲೂ ಬಳಕೆಯಲ್ಲಿದೆ. ಕಾಳಿದಾಸನೇ ಮೊದಲಾದ ಕವಿಗಳು ಲತಾಮಂಟಪಗಳನ್ನು ಬಹು ಸರಸವಾಗಿ ಬಣ್ಣಿಸಿರುವರು. ಋಷ್ಯಾಶ್ರಮಗಳಲ್ಲಿ ಇಂತಹ ಲತಾ ಮಂಟಪಗಳಿರುವುದು ಪುರಾಣ ಪ್ರಸಿದ್ಧವು. ಸದಾಕಾಲವೂ ಕಣ್ಣಿಗೆ ಚಂದವಾಗಿರುವ ಹಸುರುಬಣ್ಣದಿಂದ ಮೆರೆಯುವ ಮಾಧವೀ ಲತಾದಿಗಳು ನಮ್ಮ ದೇಶದಲ್ಲಿ ಅನೇಕವಾಗಿವೆ. ಅನುವಾದ ಹಾಗೆ ಇಂತಹ ಲತಾಗೃಹ ವರ್ಧನೆಯನ್ನು ಪಾಠಶಾಲಾರಾಮಗಳ ಒಂದು ಭಾಗವಾಗಿ ಹುಡುಗರಿಂದ ಮಾಡಿಸಬಹುದು. ಬಾಲಕರು ಇಂಥ ಲತಾ ಮಂಟಪಗಳನ್ನು ಬೆಳೆಯಿಸುವುದರಿಂದ ಯಾವಾಗಲೂ ಸಂತುಷ್ಟರಾಗಿರುವರು. ಚಮತ್ಕಾರವಾಗಿ ಮಾಡಲ್ಪಡುವ ಕೈಗಾರಿಕೆಗಳನ್ನು ಚೆನ್ನಾಗಿ ಸರ್ವಹಿಸಲಿಕ್ಕೆ ಬೇಕಾದ ಸದ್ಗುಣಗಳೂ ಹುಡುಗರಲ್ಲಿ ನೆಲೆಗೊಳ್ಳುವುವು. ಹೆಚ್ಚಾಗಿ ಹೇಳುವುದೇಕೆ ? ಚಿತ್ರವನ್ನು ಬರೆಯುವುದೂ ದೊಡ್ಡ ಶಿಲ್ಪಿ ಕಾರ್ಯವನ್ನು ಮಾಡುವುದೂ ಮೊದಲಾದ ಮನೋಹರಕಾರ್ಯವನ್ನು ಮಾಡಬೇಕಾದ ಸಾಮರ್ಥ್ಯವು ಈ ಮೂಲಕ ಉಂಟಾಗುವುದೆಂಬುದರಲ್ಲಿ ಸಂದೇಹವಿಲ್ಲ. ಸೃಷ್ಟಿವೈಭವವನ್ನು ಗ್ರಹಿಸಲಿಕ್ಕೂ ಗೌರವಿಸಲಿಕ್ಕೂ ಇಂತಹ ಕೆಲಸಗಳು ಸಹಾಯಕರಗಳಾಗಿರುವುವು.

ಕೆ. ರಾ.

ವ್ಯಾಕರಣಶಾಸ್ತ್ರ.

ನಾಮಪದದಲ್ಲಿ ಹಲವುಬಗೆಗಳುಂಟು. ಯಾವುವೆಂದರೆ—

ವಸ್ತುವಾಚಕ—ಚೇತನವಾದ ಅಥವಾ ಅಚೇತನವಾದ ವಸ್ತುವಿನ ಹೆಸರನ್ನು ಹೇಳುವುದು.

ಉದಾ—(1) ಕುದುರೆ, ಹಕ್ಕಿ, ಹೆಂಗಸು, (2) ಕಲ್ಲು, ಮರ, ತೋಟ.

೬ ನಿಮ್ಮ ಇದಿರಿನಲ್ಲೆ ಕಾಣುವ ಆರುವಸ್ತುಗಳ ಹೆಸರು ಹೇಳಿರಿ.

೭ ನಿಮ್ಮ ಮನೆಯಲ್ಲಿರುವ ಜನರ ಹೆಸರುಗಳನ್ನೆಲ್ಲ ಹೇಳಿರಿ.

೮ ಈ ಊರಿನಲ್ಲಿ ಇರುವ ಪ್ರಾಣಿಗಳ ಹೆಸರುಗಳನ್ನು ಹೇಳಿರಿ.

೯ ಇಲ್ಲಿ ಬೆಳೆಯುವ ಧಾನ್ಯಗಳ ಹೆಸರು ಆರು, ಹಣ್ಣುಗಳ ಹೆಸರು ಆರು ಸಹ ಹೇಳಿರಿ. ಇವೆಲ್ಲಾ ಯಾವ ವಾಚಕಗಳು ?

೬. ಸಂಖ್ಯೇಯವಾಚಕ.—ಸಂಖ್ಯೆಯಿಂದ ಕೂಡಿದ ವಸ್ತುಗಳ ಹೆಸರುಗಳನ್ನು ತಿಳಿಸುವುದು. (ಸಂಖ್ಯೆಯನ್ನು ಹೇಳುವುದು ಸಂಖ್ಯಾವಾಚಕ).

ಉದಾ—(ಸಂಖ್ಯಾ) ಎರಡು, ಮೂರು, ನಾಲ್ಕು, ಹತ್ತು.

(ಸಂಖ್ಯೇಯ) ನಾಲ್ಕಾಣೆಗಳು, ಏಳೆಮ್ಮೆಗಳು, ನಾಲ್ವರು, ಮೂರು ಹಣ್ಣು,

ಅ—ಅಂಗಿ, ಪಂಜೆ, ಕೋಲು, ಮಣೆ, ಇವುಗಳ ಹಿಂದೆ ಯಾವುದಾದರೂ ಒಂದೊಂದು ಸಂಖ್ಯೆಯನ್ನು ಸೇರಿಸಿ ಹೇಳಿರಿ.

೧೧. ನಿಮ್ಮ ಮನೆಯಲ್ಲಿ ಯಾವ ವಸ್ತುಗಳು ಎಷ್ಟೆಷ್ಟಿವೆ ? ಹೇಳಿರಿ.

೧೨. ನಾಲ್ಕು, ಎಂಟು, ಹದಿನೈದು, ಇವುಗಳ ಮುಂದೆ ಒಂದೊಂದು ವಸ್ತುವಾಚಕವನ್ನು ಬರೆದು ಓದಿರಿ.

೧೩.—ಕುದುರೆ,—ಪುಸ್ತಕ,—ಕಾಗೆ, ಇವುಗಳ ಹಿಂದೆ ಬಂದೊಂದು ಸಂಖ್ಯಾವಾಚಕವನ್ನು ಬರೆದು ಕೂಡಿಸಿರಿ.

೧೪. ಮೂವರು, ಚೌಪದ, ದುಗುಣಿ, ಇವುಗಳಲ್ಲಿರುವ ಸಂಖ್ಯೆಗಳಾವುವು ?

೪. ಗುಣವಾಚಕ—ವಸ್ತುಗಳ ಗುಣ, ಬಣ್ಣ, ಗಾತ್ರ, ಪರಿಮಾಣ, ರೀತಿ, ಮುಂತಾದವುಗಳನ್ನು ತಿಳಿಸುವುದು.

ಉದಾ—ದೊಡ್ಡದು, ಚಿಕ್ಕದು, ಕರಿದು, ಹೊಸದು, ಕೆಲವು, ಇಂಥ, ಇಷ್ಟು

ಅ ೧೫. ಕರಿ, ಬಿಳಿ, ಹೊಸ, ಹಳೆ, ಕೆಲವು ಇವುಗಳಲ್ಲಿ ಪ್ರತಿ ಒಂದಕ್ಕೂ ಒಂದೊಂದು ವಸ್ತುವಾಚಕವನ್ನು ಸೇರಿಸಿ ಹೇಳಿರಿ.

೧೬. ಕಲ್ಲು, ಗೋಡೆ, ಕಾಗದ, ಚಾಪೆ, ಪುಸ್ತಕ, ಇವುಗಳ ಹಿಂದೆ ಒಂದೊಂದು ಗುಣವಾಚಕವನ್ನು ಸೇರಿಸಿ ಹೇಳಿರಿ.

೧೭. ಸಿಹಿಸಾರು, ಹುಳಿಬತ್ತಿ, ದೊಡ್ಡಅನೆ, ಕೆಲವುದಿನ, ಹೊಸಕುರಿ, ಇವುಗಳಲ್ಲಿರುವ ಗುಣವಾಚಕಗಳು ಯಾವುವು ?

೧೮. ನಿಮ್ಮ ಪಾಠದಲ್ಲಿ ನಾಲ್ಕು ಗುಣವಾಚಕಗಳನ್ನೂ ಅವುಗಳುಳ್ಳ ವಸ್ತುವಾಚಕಗಳನ್ನೂ ಹೇಳಿರಿ.

೯. ಕ್ರಿಯಾನಾಮ—ಕ್ರಿಯೆಯಿಂದುಂಟಾದ ಹೆಸರುಗಳನ್ನು ತಿಳಿಸುವುದು.

ಉದಾ—ಓದುವ, ಓದುವವನು, ಹಾಡಿದ, ಹಾಡಿದವನು.

ಅ ೧೯. ಬಿಡು, ಕೊಳ್ಳು, ಕಟ್ಟು, ಕೂಡು, ಹೇಳು, ಇವುಗಳಿಂದುಂಟಾದ ಒಂದೊಂದು ನಾಮಪದವನ್ನು ಹೇಳಿರಿ. (ಬಿಡುವಕೆಲಸ, ಬಿಟ್ಟದ್ದು, ಇತ್ಯಾದಿ.

೨೦. ಪುರಿದ ——ಬರೆದ——ಹೀರುವ——ಸುರಿಯುವ——ಇಲ್ಲಿ ಬಿಟ್ಟಿರುವಕಡೆ ಒಂದೊಂದು ವಸ್ತುವಾಚಕವನ್ನು ಸೇರಿಸಿರಿ.

೨೧. ಬೆಣ್ಣೆ, ಎತ್ತು, ನರಿ, ಕಾಳು, ಹೂಡುವ, ಕಾಸಿದ, ಬೆಂದ, ಓಡುವ ಇವುಗಳಲ್ಲಿ ಅರ್ಥ ಹೊಂದುವಂತೆ ಎರಡೆರಡು ಪದಗಳನ್ನು ಕೂಡಿಸಿರಿ.

೨೨. ಅವರೆ,——ಕೆಲಸ,——ಮಾತು,——ಹುಡುಗಿ.

ಇಲ್ಲಿ ಬಿಟ್ಟಿರುವಕಡೆ ಒಂದೊಂದು ಕ್ರಿಯಾರ್ಥನಾಮವನ್ನು ಸೇರಿಸಿರಿ,

೧೦ ಸರ್ವನಾಮ—ವಸ್ತುವಾಚಕಕ್ಕೆ ಬದಲಾಗಿ ಬರುವುದು.

ಉದಾ—ಅವನು, ಅವಳು, ಅದು, ಅವರು, ಇದು, ನಾನು, ನೀನು, ಅತನು.

ಅ ೨೩. ಹುಡುಗರು ಬರುತ್ತಾರೆ, ತಾಯಿ ಹೇಳಿದಳು, ಕೂಸು ಅಳುತ್ತದೆ, ಇಲ್ಲಿರುವ ವಸ್ತುವಾಚಕಗಳಿಗೆ ಬದಲಾಗಿ ಒಂದೊಂದು ಸರ್ವನಾಮ ಹೇಳಿರಿ.

೨೪. ಅವರು ಬಂದರು, ಇವಳು ಹಾಡಿದಳು, ಅದು ಹಾರಿತು.

ಇಲ್ಲಿರುವ ಸರ್ವನಾಮಗಳನ್ನು ತೆಗೆದು, ತಕ್ಕ ವಸ್ತುವಾಚಕಗಳನ್ನು ಸೇರಿಸಿರಿ.

೨೫. ರಂಗನ ಹೊಲದಲ್ಲಿ ರಂಗನು ಎತ್ತನ್ನು ಮೇಯಿಸುತ್ತಿರಲು, ರಂಗನ ತಾಯಿ ಬಂದು, ರಂಗನನ್ನು ಊಟಕ್ಕೆ ಕರೆದಳು. ಇಲ್ಲಿ ಮೊದಲಿನ 'ರಂಗ' ಎಂಬುದನ್ನುಳಿದು ನಿಕ್ಕಕಡೆಗಳಲ್ಲಿ ಬಂದಿರುವ ರಂಗ ಎಂಬುದಕ್ಕೆಲ್ಲ ತಕ್ಕ ಸರ್ವನಾಮ ಶಬ್ದಗಳನ್ನು ಸೇರಿಸಿ ಹೇಳಿರಿ.

೨೬. ———ಮನೆಯಲ್ಲಿ——— ಕೆಲಸಮಾಡುತ್ತಿರಲು——ಅಣ್ಣನು ಬಂದು, ಎಲಾ——ಕಡೆ ಇಲ್ಲಿಗೆ ಬಂದೆ? ಎಂದು ಕೇಳಿದನು. ಬಿಟ್ಟಿರುವಕಡೆ ಸರ್ವನಾಮ ಶಬ್ದ ಸೇರಿಸಿ?

೧೧. ಭಾವನಾಮ—ವಸ್ತುವಿನ ಅಥವಾ ಕ್ರಿಯಾ ವಾಚಕದ ಸ್ವಭಾವ, ಸ್ಥಿತಿ, ಧರ್ಮ ಮುಂತಾದವುಗಳನ್ನು ತಿಳಿಸುವುದು.

ಉದಾ—ಹಣಗಾರ, ಬಿಳುಪು, ಹಾಸಿಗೆ ತಾಳುಮೆ, ಆಟ, ಜಾಣುತನ.

ಅ ೨೭. ಊಟ, ತೊಡಿಗೆ, ಮೆಲತ ಇವು ಯಾವಕ್ರಿಯೆಗಳಮೇಲೆ ಹುಟ್ಟಿವೆ?

೨೮. ಒಳೆ, ಬಣ್ಣ, ಕಂಚು, ಇವುಗಳ ಮೇಲೆ ಗಾರ, ಎಂಬ ಭಾವವಾಚಕ ಪ್ರತ್ಯಯವನ್ನು ಸೇರಿಸಿ ಹೇಳು.

೨೯. ಸಂಬಳವನ್ನು ತೆಗೆದುಕೊಳ್ಳುವವನು= ಸಂಬಳಗಾರ ಎಂಬಂತೆ ಕೆಲಸ ಮಾಡುವವನು, ಹೊಲವನ್ನು ಮಾಡುವವನು, ಗಾಣವನ್ನು ಆಡುವವನು ಇವುಗಳನ್ನು ಭಾವನಾಮಗಳಾಗಿ ಮಾಡು.

೩೦. ಗೌಡಿತಿ, ಅಕಸುತನ, ಜಾಣೆ, ಗಿಂದಿಗ ಇವು ಭಾವನಾಮಗಳೆಂದು ಏತರಿಂದ ಹೇಳುತ್ತೀ ?

೩೧. ಅವ್ಯಯ—ರೂಪಭೇದವನ್ನು ಹೊಂದದೆ ಇರುವ ಕೆಲವು ಪದಗಳು.

ಉದಾ—ನಿನ್ನೆ, ಹಾಗೆ, ಇಲ್ಲಿ, ಬರೆಯದೆ, ಇಲ್ಲ. ಬೇಡ, ಓಹೋ

ಅ ೩೨. ಅವನು—ಬರುತ್ತಾನೆ, ನೀನು—ಬಂದೆ ? ರಂಗನು—ಕೃಷ್ಣನು ಊರಿಗೆ ಹೋದರು. ಇಲ್ಲಿ ಬಿಟ್ಟಿರುವ ಕಡೆ ಒಂದೊಂದು ಅವ್ಯಯವನ್ನು ಸೇರಿಸಿ?

೩೩. ಮರದಮೇಲೆ ಗಿಳಿಗಳು ಕುಳಿತು ಹಣ್ಣು ತಿನ್ನುತ್ತಿರಲು, ಅಲ್ಲಿಗೆ ಬೇಡನು ಬಂದು ಬಲೆಯೊಡ್ಡಿದನು ಈ ವಾಕ್ಯದಲ್ಲಿ ಅವ್ಯಯಗಳು ಯಾವುವು?

೩೪. ನಿನ್ನ ಪಾಠದಲ್ಲಿ ನಾಲ್ಕು ಅವ್ಯಯಗಳನ್ನು ಆರಿಸಿ ಹೇಳು.

೧೩. ಸ್ವತಂತ್ರವಾದ ಪದಕ್ಕೆ ವಿಶೇಷ್ಯವೆಂತಲೂ, ಮತ್ತೊಂದಕ್ಕೆ ಅಧೀನವಾದ ಪದಗಳಿಗೆ ವಿಶೇಷಣಗಳೆಂತಲೂ ಹೆಸರು.

ಉ (1) ದೊಡ್ಡ, ಕುಂಟುವ, ಸಣ್ಣ, ಹಲವು (2) ಕುದುರೆ, ಕತ್ತೆ, ಮರ, ಜನ

ಅ ೩೫. ಸುಟ್ಟ ರೊಟ್ಟಿ, ಬೇಲದ ಹಣ್ಣು, ಕಟ್ಟದ ಕುದುರೆ ಇವುಗಳಲ್ಲಿ ವಿಶೇಷಣಗಳಾವುವು.

೩೬. ದೊರೆಯು— ಹುರಿದ— ಕುರಿಯು— ಇವುಗಳಿಗೆ ತಕ್ಕ ವಿಶೇಷ್ಯಗಳನ್ನು ಬರಿ.

೩೭. ಹಕ್ಕಿ,——ಕಾಯಿ,——ಹೂವು, ಇವುಗಳಿಗೆ ತಕ್ಕ ವಿಶೇಷಣಗಳನ್ನು ಸೇರಿಸು.

೩೮. ಓದದಬಾಯಿ, ಅವ್ಯತಾನ್ನವ ಮೋದದಬಾಯಿ, ಇಲ್ಲಿ ವಿಶೇಷಣಗಳಾವುವು ?

೧೪. ಒಂದು ಪದವನ್ನು ಮತ್ತೊಂದಕ್ಕೆ ವಿಶೇಷಣವಾಗಿ ಮಾಡಬೇಕಾದರೆ, ಆದ, ಉಳ್ಳ, ಅಂಥ, ಆ, ಮುಂತಾದ ಪ್ರತ್ಯಯಗಳನ್ನು ಸೇರಿಸುವುದು.

ಉದಾ—ಉದ್ದವಾದ, ಬಲವುಳ್ಳ, ಮಾಡಿದಂಥ, ಅರಸನ.

ಅ ೩೯. ಚುರುಕು, ಬುದ್ದಿ, ಅಗಲ, ಇವುಗಳನ್ನು ವಿಶೇಷಣಗಳಾಗಿ ಮಾಡಿ ಒಂದೊಂದು ವಸ್ತುವಾಚಕವನ್ನು ಅದಕ್ಕೆ ಸೇರಿಸಿರಿ.

೩೯. ಹಾವು—ಮರಿ, ಹಕ್ಕಿ—ರೆಕ್ಕೆ, ಓಡು—ನರಿ, ಕೇಳು—ಮಾತು, ಇವುಗಳಲ್ಲಿನ ಪೂರ್ವ ಪದಗಳನ್ನು ವಿಶೇಷಣಗಳಾಗಿ ಮಾಡಿರಿ.

೪೦. ಜನರು—ಕುದುರೆ—ಹಣ್ಣು ಇವುಗಳಿಗೆ ತಕ್ಕ ವಿಶೇಷಣಗಳನ್ನು ಬರೆಯಿರಿ.

೧೫. ಕೆಲವು ನಾಮಪದಗಳಿಗೆ ಅನೇಕ ವಿಶೇಷಣಗಳು ಸೇರಬಹುದು.

ಉ.— ಕೆಂಪು ಜೋಳದ ಪೈರು, ಹಾರಲಾರದ ಮುದಿ ಹದ್ದು, ಅರಸನಮನೆಯ ಅಳುಗಳ ಗದ್ದಲ, ದೇವರ ಕೋಣೆಯ ಬೀಗದ ಕೈ.

೧೬. ದೊಡ್ಡ—ಜೇರು. ಸಣ್ಣ—ನರಿ. ಕುದುರೆಯ ಚೇಷ್ಟೆ - ಹುಡುಗರ ಲಕ್ಷಣ. ಆಲದ—ನೆರಳು. ಇಲ್ಲಿ ಬಿಟ್ಟಿರುವ ಪದಗಳಲ್ಲಿ ತಕ್ಕ ವಿಶೇಷಣಗಳನ್ನು ಸೇರಿಸಿರಿ.

೧೭. ತಟ್ಟೆ, ಹಬ್ಬ, ಸಾರು, ಇವುಗಳ ಹಿಂದೆ ಒಂದೆರಡು ವಿಶೇಷಣಗಳನ್ನು ಸೇರಿಸಿ ಹೇಳಿರಿ.

ಮನೋಗಣಿತದ ಸೂತ್ರಗಳು.

(ಉಪಾಧ್ಯಾಯರು ಉದಾಹರಣೆ ಮೂಲಕ ಈ ಸೂತ್ರಗಳನ್ನು ಸ್ಪಷ್ಟಪಡಿಸತಕ್ಕದ್ದು.)

1. ಒಂದು ಮಣಕ್ಕೆ ಎಷ್ಟು ರೂಪಾಯಿಗಳೋ ಧಡಿಯುಕ್ಕೆ ಅಷ್ಟು ಪಾವಲಿಗಳಾಗುವುದು.
2. ಒಂದು ಮಣಕ್ಕೆ ಎಷ್ಟು ರೂಪಾಯಿಗಳೋ ಪಂಚೇರಿಗೆ ಅಷ್ಟು ದೊಡ್ಡಾಣಿಗಳಾಗುವುದು.
3. ಒಂದು ಮಣಕ್ಕೆ ಎಷ್ಟು ರೂಪಾಯಿಗಳೋ ಅಡಿಸೇರಿಗೆ ಅಷ್ಟು ಅಣಿಗಳಾಗುವುದು.
4. ಒಂದು ಮಣಕ್ಕೆ ಎಷ್ಟು ರೂಪಾಯಿಗಳೋ ಸವಾಸೇರಿಗೆ ಅಷ್ಟು ಅರ್ಧಾಣಿಗಳಾಗುವುದು.
5. ಒಂದು ಮಣಕ್ಕೆ ಎಷ್ಟು ರೂಪಾಯಿಗಳೋ ಅಚ್ಚೇರು ಅರೆಪಾವಿಗೆ ಅಷ್ಟು ಕಾಲಾಣಿಗಳಾಗುವುದು.
6. ಮಣದ ಖರೀದಿಯನ್ನು ಸೇರಿನ ಸಂಖ್ಯೆಯಿಂದ ಗುಣಿಸಿ ಲಬ್ಧದ ಮುಂದೆ ಒಂದು ಸೊನ್ನೆಯನ್ನು ಸೇರಿಸಿ 100 ಕ್ಕೆ ಪಾವಲಿಯುಂತೆ ಲೆಕ್ಕಮಾಡಿದರೆ ಸೇರಿನ ಖರೀದಿ ಸಿಕ್ಕುವುದು.

7. ಖಂಡುಗದ ಖರೀದಿಯನ್ನು ಕೊಳಗದ ದ್ವಿಗುಣ ಸಂಖ್ಯೆಯಿಂದ ಗುಣಿಸಿ ಲಬ್ಧದ ಮುಂದೆ ಒಂದು ಸೊನ್ನೆಯನ್ನು ಸೇರಿಸಿ 100 ಕ್ಕೆ ಪಾವಲಿಯಂತೆ ಲೆಕ್ಕ ಮಾಡಿದರೆ ಕೊಳಗದ ಖರೀದಿ ಸಿಕ್ಕುವುದು.

8. ಖಂಡುಗದ ಖರೀದಿಯ ಅರ್ಧವನ್ನು ಬಳ್ಳದ ಸಂಖ್ಯೆಯಿಂದ ಗುಣಿಸಿ ಲಬ್ಧಕ್ಕೆ ಒಂದು ಸೊನ್ನೆಯನ್ನು ಸೇರಿಸಿ 100 ಕ್ಕೆ ಪಾವಲಿಯಂತೆ ಲೆಕ್ಕಮಾಡಿದರೆ ಬಳ್ಳದ ಖರೀದಿ ಸಿಕ್ಕುವುದು.

9. ಕೊಳಗಕ್ಕೆ ಎಷ್ಟು ರೂಪಾಯಿಗಳೋ ಬಳ್ಳಕ್ಕೆ ಅಷ್ಟು ಪಾವಲಿಗಳು.

10. ಕೊಳಗಕ್ಕೆ ಎಷ್ಟು ರೂಪಾಯಿಗಳೋ ಸೇರಿಗೆ ಅಷ್ಟು ಆಣೆಗಳು.

11. ಖಂಡಗಕ್ಕೆ ಎಷ್ಟು ರೂಪಾಯಿಗಳೋ ಪಂಚಕಕ್ಕೆ ಅಷ್ಟು ಪಾವಲಿಗಳು.

12. ಖಂಡಗದ ಖರೀದಿಯನ್ನು ಸೇರಿನ ಸಂಖ್ಯೆಯಿಂದ ಗುಣಿಸಿ ಲಬ್ಧಕ್ಕೆ ಒಂದು ಸೊನ್ನೆ ಸೇರಿಸಿ 10) ಕ್ಕೆ ಅರ್ಧಾಣೆಯಂತೆ ಲೆಕ್ಕಮಾಡಿದರೆ ಸೇರಿನ ಕ್ರಯವಾಗುವುದು

13. ಪಲ್ಲಾದ ಖರೀದಿಯನ್ನು ಸೇರಿನ ಸಂಖ್ಯೆಯಿಂದ ಗುಣಿಸಿ 100 ಕ್ಕೆ ಒಂದು ರೂಪಾಯಿನಂತೆ ಲೆಕ್ಕಮಾಡಿದರೆ ಸೇರಿನ ಕ್ರಯವಾಗುವುದು.

14. ಒಂದು ಸಂಖ್ಯೆಯನ್ನು 10. 100 ಮುಂತಾದ ಸಂಖ್ಯೆಗಳಿಂದ ಗುಣಿಸಬೇಕಾದರೆ ಗುಣಕದಲ್ಲಿರುವಷ್ಟು ಸೊನ್ನೆಗಳನ್ನು ಗುಣ್ಯಕ್ಕೆ ಸೇರಿಸಬೇಕು.

15. ಒಂದು ಸಂಖ್ಯೆಯನ್ನು 9, 99, 99; ಮುಂತಾದ ಸಂಖ್ಯೆಗಳಿಂದ ಗುಣಿಸಬೇಕಾದರೆ ಗುಣಕದಲ್ಲಿರುವ 9 ರಷ್ಟು ಸೊನ್ನೆಗಳನ್ನು ಗುಣ್ಯಕ್ಕೆ ಸೇರಿಸಿ ಬಳಿಕ ಆ ಗುಣ್ಯವನ್ನು ಅದರಲ್ಲಿ ಕಳೆಯಬೇಕು.

16. ಒಂದು ಸಂಖ್ಯೆಯನ್ನು 5 ರಿಂದ ಗುಣಿಸಬೇಕಾದರೆ ಗುಣ್ಯಕ್ಕೆ ಒಂದು ಸೊನ್ನೆ ಸೇರಿಸಿ ಅದನ್ನು 2 ರಿಂದ ಭಾಗಿಸಬೇಕು.

17. ಒಂದು ಸಂಖ್ಯೆಯನ್ನು 25 ರಿಂದ ಗುಣಿಸಬೇಕಾದರೆ ಗುಣ್ಯಕ್ಕೆ ಎರಡು ಸೊನ್ನೆ ಸೇರಿಸಿ ಬಂದದ್ದನ್ನು 4 ರಿಂದ ಭಾಗಿಸಬೇಕು.

18. ಒಂದು ಸಂಖ್ಯೆಯನ್ನು 125 ರಿಂದ ಗುಣಿಸಬೇಕಾದರೆ ಗುಣ್ಯಕ್ಕೆ ಮೂರು ಸೊನ್ನೆ ಸೇರಿಸಿ ಬಂದದ್ದನ್ನು 8 ರಿಂದ ಭಾಗಿಸಬೇಕು.

19. ಒಂದು ಡಜರ್ಿಗೆ ಎಷ್ಟು ಆಣೆಗಳೋ ಒಂದು ವಸ್ತುವಿಗೆ ಅಷ್ಟು ಕಾಸುಗಳು.

20. ಒಂದು ವಸ್ತುವಿಗೆ ಎಷ್ಟು ಕಾಸು ಅಥವಾ ಪೆನ್ನಿಗಳೋ ಒಂದು ಡಜರ್ಿಗೆ ಅಷ್ಟು ಆಣೆ ಅಥವಾ ಅಷ್ಟು ಶಿಲಿಂಗುಗಳು.

ಭೂವಿವರಣೆ.

(ಈಜಿಪ್ಟ್ ದೇಶ.)

ಉದ್ದೇಶ—ವಾಚನಿಕ ಬೊಧನೆ ಕ್ರಮದಲ್ಲಿ ಈಜಿಪ್ಟ್ ದೇಶವನ್ನು ವಿವರಿಸುವುದು

ಉಪಕರಣಗಳು—ಆಫ್ರಿಕಾ ಖಂಡದ ನಕ್ಷೆ, ಈಜಿಪ್ಟ್ ದೇಶದ ಅಕ್ಷರವಿಲ್ಲದ ಪತ, ಪಿರಮಿಡ್ಡಿನ ಫೋಟೋ, ಪೂರ್ವಾರ್ಧಗೋಳ.

ವಿಷಯ.	ಬೋಧನಾಕ್ರಮ.
I. ಅವತಾರಿಕೆ— ಆಫ್ರಿಕಾ ಖಂಡವು ಏಷ್ಯಾಕ್ಕೆ ನೈರುತ್ಯದಲ್ಲಿದೆ. ಅದರಲ್ಲಿ ಈಜಿಪ್ಟ್ ದೇಶವು ಉತ್ತರ ಭಾಗದಲ್ಲಿರುವುದು	ಪೂರ್ವಾರ್ಧಗೋಳದಲ್ಲಿರುವ ಖಂಡಗಳ ಹೆಸರುಗಳನ್ನು ಹೇಳಿಸಿ, ಅನಂತರ ಈ ಖಂಡವು ಯಾವದಿಕ್ಕಿನಲ್ಲಿದೆಯೋ ಅದನ್ನು ಪ್ರಶ್ನೆ ಮಾಡಿ ಬಾಲಕರಿಂದಲೇ ಹೇಳಿಸಿ, ಅವರೇ ಈ ಖಂಡವನ್ನೂ, ಈ ದೇಶವನ್ನೂ ತೋರಿಸುವಂತೆ ಮಾಡಬೇಕು.
II. (1) ಸ್ಥಾನ, ಮೇರೆ— ಉ. ಮೆಡಟರೇನಿಯರ್ನ್. ಪೂ. ಕೆಂಪುಕಡಲು. ದ. ವಾಡಿಹಫ್. ಪ. ಲಿಬಿಯರ್ನ ಮರುಭೂಮಿ.	ಮೇರೆಗಳನ್ನೂ, ಅದಿರುವ ಸ್ಥಾನವನ್ನೂ ಮ್ಯಾಪಿನ ಸಹಾಯದಿಂದ ಬಾಲಕರಿಂದಲೇ ಹೇಳಿಸುವುದು. ಬಳಿಕ 2–3 ಬಾಲಕರಿಂದ ಆವೃತ್ತಿ ಮಾಡಿಸುತ್ತ ಹಲಗೆಯಲ್ಲಿ ಬರೆಯುವುದು.
(2) ದೇಶದ ಲಕ್ಷಣ.— ಸುಮಾರು $\frac{1}{40}$ ಭಾಗ ಫಲವತ್ತಾಗಿದೆ, ಉಳಿದ ಭಾಗವು ಮರುಭೂಮಿ, ನೈಲ್ ನದಿ ದಕ್ಷಿಣದಿಂದ ಉತ್ತರಕ್ಕೆ ಹರಿಯುವುದು.	ಮೈಸೂರು ದೇಶದಲ್ಲಿ ಹರಿಯುವ ನದಿಗಳ ನಿದರ್ಶನದಿಂದ ಈ ದೇಶದ ಎತ್ತರ ತಗ್ಗನ್ನು ಹೇಳಿಸುವುದು. ನದಿ ಹರಿಯುವುದರಿಂದ ಅದರ ಉಭಯ ಪಾರ್ಶ್ವದ ಭೂಮಿಯು ಸ್ಥಿತಿಯು ಹೇಗಿರುತ್ತೆಂಬುದರ ನಿದರ್ಶನದಿಂದ ನೈಲ್ ನದಿ ಹರಿಯುವ ಕಡೆಗಳಲ್ಲಿ ಫಲವತ್ತೆಂಬುದನ್ನೂ ಮತ್ತು ಉಳಿದ ಭಾಗವು ಮರುಭೂಮಿ ಯೆಂಬುದನ್ನೂ ಆರಬ್ಬೀ ದೇಶಕ್ಕೆ ಹೋಲಿಸಿ ಹೇಳಿಸುವುದು. 2—3 ಬಾಲಕರಿಂದ ಆವೃತ್ತಿ ಮಾಡಿಸಿ ಹಲಗೆಯಲ್ಲಿ ಬರೆಯುವುದು.

ವಿಷಯ.	ಬೋಧನಾಕ್ರಮ.
(3) ವಾಯುಗುಣ— ಪಶ್ಚಿಮದ ಕಡೆಯಿಂದ ಮರು ಭೂಮಿಯ ಮೇಲೆ 'ಸೈಕೋ೯' ತಡೆಯಿಲ್ಲದೆ ಬೀಸುವುದು, ಮತ್ತು ಉತ್ತರ ಪೂರ್ವಗಳಿಂದ ಬೀಸುವ ಸಮುದ್ರ ಮಾರುತಗಳಿಗೆ ಪರ್ವತ ಗಳು ಅಡ್ಡಿ. ಅದರಿಂದ ಸೆಖೆಜಾಸ್ತಿ	ವ್ಯಾಪಿನಲ್ಲಿ ಈ ವಿಷಯವನ್ನು ಅರಬ್ಬೀದೇಶದ ಹೋಲಿಕೆಯಿಂದ ಸ್ಪಷ್ಟಪಡಿಸಬೇಕು. ಬಳಿಕ ಬಾಲಕರೇ ಊಹಿಸಿ ಹೇಳುವಂತೆ ಪ್ರಶ್ನಿಸಬೇಕು ಆವೃತ್ತಿ ಮಾಡಿಸಬೇಕು. ಇದು ಇರುವ ವಲ ಯವನ್ನೂ, ಬಾಲಕರಿಂದಲೇ ಹೇಳಿಸಬೇಕು.
III. ಬೆಳೆಗಳು.— ಹತ್ತಿ, ಕಬ್ಬು, ಧಾನ್ಯ.	ಉಷ್ಣ ವಲಯದ ಬೆಳೆಗಳನ್ನು ಬಾಲಕರಿಂದ ಲೇ ಹೇಳಿಸಿ ಇಲ್ಲಿನ ಬೆಳೆಗಳನ್ನೂ ತಿಳಿಸಿ. 2–3 ಬಾಲಕರಿಂದ ಆವೃತ್ತಿ ಮಾಡಿಸುವುದು.
IV. (1) ಜನರ ಉದ್ಯೋಗ ಮತ್ತು ವ್ಯಾಪಾರ.— ಕೃಷಿ ಮುಖ್ಯೋದ್ಯೋಗ, ಹತ್ತಿ, ಹತ್ತಿಯ ಬೀಜ ರಪ್ತಾಗುತ್ತ. ವರ್ಷ ವರ್ಷ ವ್ಯಾಪಾರ ವೃದ್ಧಿಯಾಗುತ್ತಿರುವುದು.	ನೈಲಿನ ಪ್ರದೇಶದಲ್ಲಿ ಉತ್ಕೃಷ್ಟಭೂಮಿ ಇರು ವುದರಿಂದ ಜನರು ಆ ಸ್ಥಳದಲ್ಲಿ ವ್ಯವಸಾಯ ನಿರತರಾಗಿರುವರೆಂದೂ, ಮತ್ತು ಬೆಳೆಗಳಿಂದ ಇಂಥಿಂಥಾ ವ್ಯಾಪಾರವೇ ಹೆಚ್ಚೆಂದೂ, ಬಾಲಕ ರಿಂದಲೇ ಪ್ರಶ್ನೆಮಾಡಿ ಹೇಳಿಸಬೇಕು. ಈ ನದಿ ಯು ಈ ದೇಶದವರಿಗೆ "ತಾಯಿಯಾಗಿ" ಇ ರುವುದು. ಇದನ್ನು ಕಾವೇರೀ ನದಿಯ ದೃ ಷ್ಟಾಂತದಿಂದ ಸ್ಪಷ್ಟ ಪಡಿಸಬೇಕು. ಬೊಂಬಾಯಿ ಪಟ್ಟಣದಲ್ಲಿ ವರ್ಷ ವರ್ಷ ವ್ಯಾಪಾರ ಹೆಚ್ಚಲು ಸಂಬಂಧಗಳಿಂದ ಕಾರಣಗ ಳನ್ನು ತಿಳಿಸಿ, ಅದರಂತೆ ಇಲ್ಲೂ ಏಷ್ಯದಿಂದ ಅಫ್ರಿಕಕ್ಕೆ ಬರುವ ದಾರಿಗೂ, ಭೂಮಧ್ಯ ಸಮು ದ್ರದಿಂದ ಹಿಂದೂಸಾಗರಕ್ಕೆ ಬರುವ ದಾರಿಗೂ ಮಧ್ಯೆ ಇರುವುದರಿಂದಲೂ, ಸುಯೆಸ್ ಕಾಲ್ವೆ ತಯಾರಿಯಿಂದಲೂ, ಎಲ್ಲಾ ದೇಶದ ಜನರೂ ಇಲ್ಲಿಗೆ ಬರಲು ಜಲಮಾರ್ಗದ ಅನುಕೂಲವಿರು ವುದರಿಂದ ವ್ಯಾಪಾರ ಹೆಚ್ಚಲು ಅವಕಾಶವಿದೆ ಎಂದು ವಿವರಿಸಿ, ವ್ಯಾಪಿನ ಸಹಾಯದಿಂದ ಆ ವೃತ್ತಿಮಾಡಿ ಸುತ್ತ ಹಲಗೆಯಲ್ಲಿ ಬರೆಯುವುದು

ವಿಷಯ.	ಬೋಧನಾಕ್ರಮ.
(2) ಜನರ ನಡತೆ.— ಕಾಪ್ಟರು, ಅರಬ್ಬಿಯವರು, ತುರುಕರು, ಯೂರೋಪಿಯನರು, ಕಾಯುಪುಷ್ಟಿಯುಳ್ಳವರು, ಕಷ್ಟಪಟ್ಟು ಕೆಲಸಮಾಡುತ್ತಾರೆ.	ಇವರು ವ್ಯವಸಾಯುಕ್ಕೋಸ್ಕರ ಮೇಲಕ್ಕೆ ಶ್ರಮಪಟ್ಟು ನೀರನ್ನೆತ್ತಿ, ಬೆಳೆ ಬೆಳೆಯುವುದರಿಂದ ಸೋಮಾರಿಗಳಲ್ಲವೆಂದು ತಿಳಿಸಬೇಕು. ಬಾಲಕರಿಂದಲೂ ಹೇಳಿಸಬೇಕು.
V. ಮುಖ್ಯಪಟ್ಟಣಗಳು. (1) ಕೈರೊ—ರಾಜಧಾನಿ. ಈ ಖಂಡದಲ್ಲಿ ದೊಡ್ಡದು, ನೈಲ್ ನದಿಯ ಬಲದಡದಲ್ಲಿದೆ.	ರಾಜಧಾನಿಯ ಅರ್ಥವನ್ನು ಹೇಳಿಸಿ, ರಾಜಧಾನಿಯು ಗುರುತನ್ನು ಬಾಲಕರಿ ತೋರಿಸುವಂತೆ ಮಾಡಿ ಹೆಸರನ್ನೂ ಹೇಳಿಸುವುದು. ಪ್ರಸಿದ್ಧಿಯನ್ನು ತಿಳಿಸುವುದು.
(2) ಫಿ—ನೈಲಿನ ಎಡ ದಡದಲ್ಲಿದೆ, ಇಲ್ಲಿನ ಚಿಯಾಪಿನ ಪಿರಮಿಡ್ ಅತ್ಯಾಶ್ಚರ್ಯವಾದದ್ದು.	ಶಿಕ್ಷಕರು ಬಾಲಕರಿಂದ ಪಟ್ಟಣದ ಹೆಸರನ್ನು ಹೇಳಿಸಿ ಪ್ರಸಿದ್ಧಿಯನ್ನು ತಿಳಿಸಿ ಕೊಟ್ಟು ಹಲಗೆಯಲ್ಲಿ ಬರೆಯಬೇಕು. ಪಿರಮಿಡ್ಡಿನ ನಕ್ಷೆಯನ್ನು ತೋರಿಸಬೇಕು.
(3) ಅಲಕ್ಸಾಂಡ್ರಿಯ—ಕ್ರಿ. ಶ. 332 ರಲ್ಲಿ ಅಲಕ್ಸಾಂಡರ್ ಸ್ಥಾಪಿಸಿದನು.	ಚರಿತ್ರೆಯಲ್ಲಿ ಬಂದಿರುವ ಅಲಕ್ಸಾಂಡರನ ಚರಿತ್ರೆಯನ್ನೂ ಅವನ ದೇಶವನ್ನೂ ಕೇಳಬೇಕು. ಅಲ್ಲಿ ರಾಜ್ಯಸ್ಥಾಪನೆ ಮಾಡಿದ ಕಾರಣವನ್ನು ತಿಳಿಸಿ ಕೊಡಬೇಕು. ಮ್ಯಾಪಿನಲ್ಲಿ ದೇಶವನ್ನು ತೋರಿಸುವಂತೆ ಕೇಳಬೇಕು.
(4) ಡಾಮಿಯಟ್ಟ, ರೊಸೆಟ್ಟ, ನೈಲ್ ಶಾಖೆಗಳ ದಡದಲ್ಲಿವೆ.	ಹಲಗೆಯಲ್ಲಿ ಮುಖ್ಯಪಟ್ಟಣಗಳನ್ನು ಅವುಗಳ ಮುಖ್ಯ ಪ್ರಸಿದ್ಧಿಗಳನ್ನು ಸೂಚಿಸುವುದು.
VI. ರಾಜ್ಯಭಾರವುಂತಾದುದು. ಇಲ್ಲಿನ ಧೊರೆಗೆ ಖೆಡೀವ್ ಎಂದು ಹೆಸರು. ರಾಜ್ಯವು ತುರ್ಕೀ ಚಕ್ರಾಧಿಪತ್ಯಕ್ಕೆ ಸೇರಿದೆ, ಧೊರೆ ಸಹಾಯುಕ್ಕೆ ಬ್ರಿಟಿಷ್ ಸೈನ್ಯವಿದೆ. ಜನಸಂಖ್ಯೆ 7000000 ಚದರಮೈಲಿ 40000.	ಈ ವಿಷಯುಗಳನ್ನೆಲ್ಲಾ ಉಪಾಧ್ಯಾಯರೇ ಬಾಲಕರಿಗೆ ತಿಳಿಸಬೇಕು. 2–3 ಬಾಲಕರಿಂದ ಆವೃತ್ತಿ ಮಾಡಿಸಿ ಹಲಗೆಯಲ್ಲಿ ಬರೆಯುವುದು. ಜನ ಸಂಖ್ಯೆಯಲ್ಲಿಯೂ, ವಿಸ್ತೀರ್ಣದಲ್ಲಿಯೂ ಸ್ವದೇಶಕ್ಕೂ ಅಲ್ಲಿಗೂ ಹೋಲಿಸಿ ಅವರಿಂದಲೇ ಉತ್ತರ ಹೇಳಿಸಬೇಕು. ಒಟ್ಟು ಪುನರಾವರ್ತನೆ. (ಬರೀ ಗುರ್ತುಮಾಡಿರುವ ಪಠದಲ್ಲಿ.)

ಕರ್ನಾಟಕ ಗ್ರಂಥಕರ್ತರ ಎರಡನೇ ಸಮ್ಮೇಲನವು.

ಕರ್ನಾಟಕ ವಿದ್ಯಾವರ್ಧಕ ಸಂಘದ ವಾರ್ಷಿಕ ಮಹೋತ್ಸವದೊಡನೆ ಕರ್ನಾಟಕ ಗ್ರಂಥಕರ್ತರ ಎರಡನೆಯ ಸಮ್ಮೇಲನವು ಧಾರವಾಡದಲ್ಲಿ ಇದೇ ೧೯೦೮ ನೇ ಇಸವಿಯ ಮೇ ತಿಂಗಳ ೩೦ ನೇ ತಾರೀಖು ಶನಿವಾರ ಮತ್ತು ತದುತ್ತರ ದಿನಗಳಲ್ಲಿ ಆಗಬೇಕೆಂದು ನಿಶ್ಚಯಿಸಲ್ಪಟ್ಟಿದೆ.

ಕರ್ನಾಟಕ ಭಾಷಾಭಿಮಾನಿಗಳಾದ, ಕನ್ನಡದಲ್ಲಿ ಗ್ರಂಥಗಳನ್ನು ಬರೆಯಲು ಪ್ರಯತ್ನಿಸುವ, ಆ ಭಾಷೆಯ ಏಳ್ಗೆಯನ್ನು ಮನಃಪೂರ್ತಿಯಾಗಿ ಒಯಸುವ ಎಲ್ಲ ಜನರೂ ಒಂದೆಡೆಯಲ್ಲಿ ಸೇರಿ ಆ ಭಾಷೆಯ ಏಳ್ಗೆಯ ವಿಷಯದಲ್ಲಿ ವಿಚಾರಗಳನ್ನು ಮಾಡುವದಲ್ಲದೆ, ಪರಸ್ಪರರ ದರ್ಶನವಾಗಿ ಭಾಷಾಭಿಮಾನಿಗಳೆಲ್ಲರಲ್ಲಿಯೂ ಸ್ನೇಹವು ಹೆಚ್ಚುತ್ತ ಹೋಗಬೇಕೆಂಬುದೇ ಈ ಸಮ್ಮೇಲನದ ಮುಖ್ಯೋದ್ದೇಶವು.

ಹೋದ ವರುಷ ಈ ಪ್ರಕಾರದ ಮೊದಲನೆಯ ಸಮ್ಮೇಲನವಾಗಿತ್ತು. ಆದರಲ್ಲಿ ಕೆಲವು ಸಂಗತಿಗಳು ಚರ್ಚಿತಗಳಾಗಿ ನಿರ್ಣಯಿಸಲ್ಪಟ್ಟುವು. ಅವುಗಳಲ್ಲಿ ಮೊದಲನೆಯುದಾದ ಬೇರೆ ಬೇರೆ ಭಾಗಗಳಲ್ಲಿಯ ಭಾಷಾಭೇದವು ನಷ್ಟವಾಗುವ ವಿಷಯದಲ್ಲಿ ಅನೇಕ ವಿದ್ವಾಂಸರಿಂದ ಸೂಚಿಸಲ್ಪಟ್ಟ ಹಲವು ಉಪಾಯಗಳಲ್ಲೊಂದಾದ ಪ್ರಕೃತೋಪಯುಕ್ತವಾದ ಗ್ರಂಥರಚನೆಯ ಕೆಲಸವನ್ನು ಕರ್ನಾಟಕ ವಿದ್ಯಾವರ್ಧಕ ಸಂಘದವರು ಕೈಕೊಂಡಿದ್ದಾರೆ.

ಈ ಸಮ್ಮೇಲನದಲ್ಲಿ ಭಾಷಾಸೇವೆಯೇ ಜನ್ಮಕ್ಕಾಗಿ ಆಗಬೇಕೆಂಬ ಮುಖ್ಯೋದ್ದೇಶದ ಕಡೆಗೆ ವಿಶೇಷವಾಗಿ ಲಕ್ಷ್ಯಗೊಟ್ಟು, ವ್ಯರ್ಥವಾದ ವ್ಯಯಗಳನ್ನು ಆದಷ್ಟು ತೆಗೆದು ಹಾಕಿರುತ್ತೇವೆ. ಈ ಸಮ್ಮೇಲನಕ್ಕೆ ಮೈಸೂರು, ಮದ್ರಾಸು, ಮಂಗಳೂರು, ಕಾರವಾರ ಮುಂತಾದ ಸ್ಥಳಗಳಿಂದ ಅನೇಕ ವಿದ್ವಾಂಸರೂ ಕರ್ನಾಟಕ ಭಾಷಾಭಿಮಾನಿಗಳೂ ಬರುವರೆಂದು ನಾವು ನಂಬಿದ್ದೇವೆ. ಅಲ್ಲದೆ ಕನ್ನಡ ನುಡಿಯ ವಿಷಯದಲ್ಲಿ ನಿಜವಾದ ಪ್ರೇಮವುಳ್ಳ ಪ್ರತಿಯೊಬ್ಬ ಕನ್ನಡಿಗನೂ ಈ ಸಮ್ಮೇಲನಕ್ಕೆ ಬಂದು ಭಾಷಾಸೇವೆಯ ಕೆಲಸವನ್ನು ತನ್ನಿಂದಾದಷ್ಟು ಕೈಕೊಳ್ಳಬೇಕೆಂದು ನಾವು ಅತ್ಯಾಗ್ರಹದಿಂದ ಬಿನ್ನವಿಸುವೆವು.

ಧಾರವಾಡದಲ್ಲಿ ಪರಿಚಯವಿಲ್ಲದ ಈ ಸಮ್ಮೇಲನಕ್ಕೆ ಬರಲಿಚ್ಛಿಸುವ ಪರಸ್ಥಳದವರು, ಮೇ ತಿಂಗಳ ೨೫ನೇ ತಾರೀಖಿನ ಒಳಗಾಗಿ ತಿಳಿಸಿದಲ್ಲಿ ನಾವು ಅವರ ಭೊಜನಾದಿಗಳಿಗೆ ತಕ್ಕ ವ್ಯವಸ್ಥೆಯನ್ನು ಮಾಡುವೆವು.

ಈ ಸಮ್ಮೇಲನವು ಧಾರವಾಡಾದಲ್ಲಿ ಹೊಸದಾಗಿ ಕಟ್ಟುತ್ತಿರುವ ಕರ್ನಾಟಕ ವಿದ್ಯಾವರ್ಧಕ ಸಂಘದ ಮಂದಿರದ ಸವಿಾಪದಲ್ಲಿರುವ ಮಿತ್ರಸಮಾಜದಲ್ಲಿ ಕೂಡುವುದು. ಹೋದ ವರುಷ ಅನೇಕ ವಿದ್ವಾಂಸರಿಂದ ಬೇರೆಬೇರೆ ವಿಷಯಗಳನ್ನು ಕುರಿತ ಅನೇಕ ನಿಬಂಧಗಳು ಕಳುಹಿಸಲ್ಪಟ್ಟಿದ್ದುವು. ಅವುಗಳಲ್ಲಿ ಅವರು ಮಾಡಿದ ಸಂಗ್ರಹ ಯೋಗ್ಯವಾದ ಸೂಚನೆಗಳನ್ನು ತಕ್ಕಮಟ್ಟಿಗೆ ಪ್ರಚಾರದಲ್ಲಿ ತರಲು ಸಂಘದವರು ಪ್ರಯತ್ನಿಸುತ್ತಿರುವರು. ಈ ವರ್ಷವೂ ಅನಿವಾರ್ಯ ಕಾರಣಗಳಿಂದ ಸಮ್ಮೇಲನಕ್ಕೆ ಬರಲಾಗದಿದ್ದಲ್ಲಿ ಅಂಥವರು ಈ ಕೆಳಗೆ ವಿವರಿಸಿದ ವಿಷಯಗಳನ್ನು ಕುರಿತು, ನಿಬಂಧಗಳನ್ನಾದರೂ ಬರೆದು ಆ ಕಾಲಕ್ಕೆ ಕಳುಹಿಸುವಂತೆ ಮಾಡಬೇಕೆಂದು ವಿನಯದೊಡನೆ ಅರ್ಥಿಸುವೆವು.

ಕಳೆದ ವರ್ಷ ಮುಂಬಯಿ ಸರಕಾರದವರ ಕಡೆಯಿಂದಲೂ ಮೈಸೂರ ಸಂಸ್ಥಾನದವರ ಕಡೆಯಿಂದಲೂ ಈ ಸಮ್ಮೇಲನಕ್ಕೆ ವಿದ್ಯಾವಂತರಾದ ಪ್ರತಿನಿಧಿಗಳು ಬಂದಿದ್ದರು. ಅದರಂತೆ ಈ ವರುಷವಾದರೂ ಪ್ರತಿನಿಧಿಗಳು ಬರುವರು. ಅಲ್ಲದೆ ಈ ಸಾರೆ ಮದ್ರಾಸು ಮತ್ತು ಹೈದರಾಬಾದ ಸರಕಾರದವರ ಕಡೆಯಿಂದಲೂ ಸಹ ಕೆಲವು ಪ್ರತಿನಿಧಿಗಳು ಬಂದಾರೆಂದು ನಂಬಿದೇವೆ. ಈ ಸಮ್ಮೇಲನದಿಂದ ಜನರಲ್ಲಿ ಭಾಷಾ ವಿಷಯದಲ್ಲಿ ಜಾಗ್ರತೆ ಹುಟ್ಟಿ, ಭಾಷಾಸೇವೆಯು ಚನ್ನಾಗಿ ಆಗಬೇಕಾದರೆ ಅದು ಭಾಷಾಭಿಮಾನಿಗಳ ಸಹಾಯವನ್ನು ಅವಲಂಬಿಸಿರುವದು,

ಮೇಲಿನ ಎಲ್ಲ ಸಂಗತಿಗಳಿಗೆ ಲಕ್ಷ್ಯಗೊಟ್ಟು, ಕನ್ನಡ ನುಡಿಯ ಏಳ್ಗೆಯನ್ನಿಚ್ಛಿಸುವ ಎಲ್ಲ ಸ್ತ್ರೀ ಪುರುಷರೂ ನಮ್ಮ ಆಮಂತ್ರಣವನ್ನು ಅನುಮೋದಿಸಿ ಸಮ್ಮೇಲನಕ್ಕೆ ಅವಶ್ಯವಾಗಿ ಬಂದು, ಈ ಭಾಷಾಸೇವೆಯು ಪವಿತ್ರವಾದ ಕೆಲಸಕ್ಕೆ ಮನಃಪೂರ್ತಿಯಾಗಿ ಸಹಾಯ ಮಾಡುವರೆಂದು ನಂಬಿದ್ದೇವೆ.

ಈ ವರ್ಷ ಸಮ್ಮೇಲನದಲ್ಲಿ ಚರ್ಚಿಸತಕ್ಕ ವಿಷಯಗಳು.

(೧) ಕನ್ನಡ ನಾಡಿನ ಬೇರೆ ಬೇರೆ ಭಾಗಗಳಲ್ಲಿ ಕಂಡುಬರುವ ಭಾಷಾಭೇಡಗಳ ಸವಿಸ್ತರ ವಿವೇಚನೆ.

ಟೀಪು.—ಈ ಒಗ್ಗೆ ನಿಬಂಧ ಬರೆಯತಕ್ಕವರು ಮಾ॥ ರಾ॥ ಬಿ. ವೆಂಕಟಾಚಾರ್ಯರ "ಅಮೃತಪುಲಿನ" ವೆಂಬ ಕಾದಂಬರಿ ಮತ್ತು ಮಾ॥ ರಾ॥ ವೀರಭದ್ರ ಬಸಪ್ಪ ಹಾಲಭಾಂವಿ ಇವರ "ವಿಜಯನಗರದ ಇತಿಹಾಸ" ಇವೆರಡು ಪುಸ್ತಕಗಳನ್ನೋದಿ ಅವುಗಳಲ್ಲಿ ಯಾವ ಸುಧಾರಣೆಗಳು ಇಷ್ಟವೆಂಬುದನ್ನು ಸವಿಸ್ತಾರವಾಗಿ ವಿವೇಚಿಸತಕ್ಕದ್ದು.

(೨) ಹಿಂದಿನ ಕಾಲದ ಮತ್ತು ಈಗಿನ ಯಾಪ ಗ್ರಂಥಕರ್ತರ ಭಾಷಾ ಸರಣಿಯು ಈ ಕಾಲಕ್ಕೆ ಅನುಸರಿಸಲಿಕ್ಕೆ ತಕ್ಕುದಾಗಿಯೂ ಸುಲಭವಾಗಿಯೂ ಇರುವುದು, ಅಂದರೆ ಅನುಕರಣೀಯವಾದುದು.

ಕಬ್ಬಿಗರಕಾವ ಮುಂತಾದ ಶುದ್ಧ ಹಳೆಗನ್ನಡವನ್ನು ಉಪಯೋಗಿಸುವ ರೂಢಿಯನ್ನಿಡಬೇಕೋ: ಜೈಮಿನಿ, ರಾಜಶೇಖರಗಳ ಭಾಷೆಯನ್ನು ಅನುಸರಿಸಬೇಕೋ? ಪುರಂದರದಾಸ, ಕನಕದಾಸ ಮುಂತಾದವರ ಭಾಷಾಂಶೈಲಿಯನ್ನು ಅನುಸರಿಸಬೇಕೊ?

(೩) ಪ್ರಾಚೀನ ಮತ್ತು ಅರ್ವಾಚೀನ ಗ್ರಂಥಕರ್ತರ ಗ್ರಂಥಸಂಶೋಧನವೂ ಚರಿತ್ರ ಲೇಖನವೂ.

(೪) ಕನ್ನಡ ರಂಗಭೂಮಿಯು ಸದ್ಯಸ್ಥಿತಿಯೂ ಅದನ್ನು ಸುಧಾರಿಸುವ ಉಪಾಯಗಳೂ.

(೫) ಸಾಮಾನ್ಯ ಜನರೊಳಗೆ ವಿವಿಧ ವಿಷಯಗಳ ಜ್ಞಾನವು ಸುಲಭವಾಗುವಂತೆ ಮಾಡುವದಕ್ಕೆ ಉಪಾಯಗಳು.

(೬) ಕನ್ನಡಿಗರಲ್ಲಿ ಕಂಡು ಬರುವ ಸ್ವಭಾಷೆಯ ಔದಾಸೀನ್ಯವನ್ನು ಹೋಗಲಾಡಿಸಿ, ಜನರ ಅಭಿರುಚಿಯನ್ನು ಜಾಗ್ರತೆಗೊಳಿಸುವ ಉಪಾಯ.

(೭) ಕರ್ನಾಟಕದ ಸಾದ್ಯಂತ ಇತಿಹಾಸವನ್ನು ತಯಾರಿಸಲಿಕ್ಕೆ ಬೇಕಾಗುವ ಸಾಧನಗಳು.

(೮) ಶಾಸ್ತ್ರೀಯ ವಿಷಯಗಳಲ್ಲಿ ಉಪಯೋಗಿಸುವುದಕ್ಕೆ ಬೇಕಾಗುವ ಪಾರಿಭಾಷಿಕ ಶಬ್ದಗಳ ವಿಮರ್ಶನೆಯು.

(೯) ಮೇಲಿನ ೧—೭ನೇ ಕಲಮುಗಳಿಗೆ ಅನುಸರಿಸಿ ಒಂದು ಕನ್ನಡ ಕೋಶವನ್ನು ಸಿದ್ಧಪಡಿಸುವದು.

ನಾರಾಯಣರಾವ ಕರಗುದರಿ, ಬಿ.ಎ., ಎಲ್.ಎಲ್.ಬಿ.
ವಕೀಲ, ಕಾರ್ಯದರ್ಶಿ.

ವಿದ್ಯಾದಾಯಿನಿ

(AMONTHLY JOURNAL.)

ಭಾಗ ೧೬.] ಮೇ--೧೯೦೮. [ಸಂಚಿಕೆ ೫.

ನೀತಿಶಿಕ್ಷಣ--(ಉಪನ್ಯಾಸ.)

ದೇಶೀಯ ಪಾಠಶಾಲೆಗಳಲ್ಲಿ ಕೆಲವ್ಯಕಡೆ ಹೆಚ್ಚು ಮಂದಿ ಬೋಧಕರೂ, ಕೆಲವು ಕಡೆ ನಾಲ್ಕಾರು ಮಂದಿ ಬೋಧಕರೂ, ಕೆಲವೆಡೆ ಒಬ್ಬಿಬ್ಬರೂ ಇರುವ ವಿಷಯವು ವಿದ್ಯಾಭ್ಯಾಸದ ಇಲಾಖೆಯಲ್ಲಿ ಕೆಲಸಮಾಡುತ್ತಿರುವ ಪ್ರತಿಯೊಬ್ಬರಿಗೂ, ಮತ್ತು ಇತರಜನಗಳಿಗೂ ತಿಳಿಯದ ಅಂಶವಲ್ಲ. ಆಂಗ್ಲೋವರ್ನಾಕ್ಯುಲರ್ ಸ್ಕೂಲುಗಳಲ್ಲಿಯೂ, ನಾಲ್ಕಾರುಮಂದಿ ಬೋಧಕರಿರುವ ಪಾಠಶಾಲೆಗಳಲ್ಲಿಯೂ, ಸಾಧ್ಯವಾದ ಮಟ್ಟಿಗೂ ಪಾಠಕ್ರಮದಲ್ಲಿ ಹೇಳಿರುವಂತೆ ಪಾಠಗಳನ್ನು ನಡೆಸಲು ಯುಕ್ತಿಸಬಹುದು, ಒಬ್ಬಿಬ್ಬರು ಇದ್ದುಕೊಂಡು ನಾಲ್ಕಾರು ತರಗತಿಗಳನ್ನಿಟ್ಟುಕೊಂಡಿರುವೆಡೆಗಳಲ್ಲಿ ಮಾತ್ರ ಪ್ರತಿಯೊಂದು ತರಗತಿಗೂ ಪಾಠವನ್ನು ಸಿದ್ಧಪಡಿಸಿಕೊಂಡು ಬಂದು ಕರಕ್ಯುಲಂ ಮೇರೆಗೆ ಪಾಠಮಾಡುವುದು ಅಸಾಧ್ಯ.

ಕೆಲವರು ಈಗಿನ ವಿದ್ಯಾಭ್ಯಾಸಕ್ರಮವನ್ನು ದೂಷಿಸುತ್ತಲೂ ಹಿಂದಿನ ಪದ್ಧತಿಯನ್ನು ಭೂಷಿಸುತ್ತಲೂ ಇರುತ್ತಾರೆ. ಒಂದೊಂದು ಸಮಯದಲ್ಲಿಮಾತ್ರ ಈಗಿನ ಕ್ರಮಕ್ಕೇ ಬೆರಗಾಗುತ್ತಾರೆ. ಅಂತಹ ಜನಗಳನ್ನು ಪಾಠಶಾಲೆಗೆ ಕರೆದುಕೊಂಡು ಬಂದು, ಅವರೆದುರಿಗೆಮಕ್ಕಳನ್ನು ಕೂರಿಸಿ ಉಪಾಧ್ಯಾಯುರು ಪಾಠಶೋಧನೆ, ಪಾಠ ನಿದರ್ಶನೆ ಮುಂತಾದವುಗಳನ್ನು ಮಾಡಿ ತೋರಿಸಿ, ಪೂರ್ವದಲ್ಲಿ ಪಾಠಬೋಧನೆ ಮಾಡುತ್ತಿದ್ದ ಕ್ರಮಕ್ಕೂ ಈಗಿನಕ್ರಮಕ್ಕೂ, ಇರುವ ಸಾಮ್ಯ, ವೈಷಮ್ಯಗಳನ್ನು ಅವರಿಂದಲೇ ಹೇಳಿಸಬೇಕು. ಮುಖ್ಯ ಯಾವ ಪಾಠ ಬೋಧಿಸಬೇಕಾದರೂ ಉ

ಪಾಧ್ಯಾಯರಿಗೆ ಬೋಧನಾಶಕ್ತಿಯೂ ವಿಷಯದಲ್ಲಿ ಸಂಪೂರ್ಣ ತಿಳಿವಳಿಕೆಯೂ ಇರಬೇಕು. ಮತ್ತು ಪಾಠದಲ್ಲಿ ಕುತೂಹಲ ಹುಟ್ಟಿಸಿ ಅವಧಾನವನ್ನು ಪಾಠದಕಡೆಗೆ ಳೆಯಬೇಕು. ಅವಧಾನವನ್ನೆಳೆಯಬೇಕಾದರೆ—(1) ಕಾಲಕ್ಕೆ ತಕ್ಕಷ್ಟು ವಿಷಯಗಳನ್ನು ಸಿದ್ಧಪಡಿಸಿಕೊಳ್ಳಬೇಕು. (2) ಬಾಲಕರ ಯೋಗ್ಯತೆಗೆ ತಕ್ಕಂತಿರಬೇಕು. (3) ಪ್ರಶ್ನೆಗಳನ್ನು ಬೇಗ ಬೇಗ ಕೇಳುತ್ತಲೂ ಸಂದರ್ಭಕ್ಕೆ ತಕ್ಕಂತೆ ಬದಲಾಯಿಸಿಕೊಳ್ಳುತ್ತಲೂ ಇರಬೇಕು. (4) ಪಾಠದಲ್ಲಿ ಮನೋಹರತ್ವವಿರುವುದಲ್ಲದೆ ಉತ್ಸಾಹದಿಂದಲೂ ಪಾಠ ಹೇಳಬೇಕು. (5) ಸಮಯಕ್ಕೆ ತಕ್ಕಂತೆ ನಿದರ್ಶನಗಳನ್ನೂ ಕೊಡಬೇಕು. ಈರೀತಿ ಮಾಡಿದರೆ ಅವರ ಅವಧಾನವು ಸ್ಥಿರವಾಗಿ ಪಾಠದಲ್ಲಿ ನಿಲ್ಲುವುದು.

ಒಬ್ಬೊಬ್ಬ ಉಪಾಧ್ಯಾಯರೇ ಇರುವ ಕಡೆಗಳಲ್ಲಿ ಈ ಕ್ರಮವನ್ನನುಸರಿಸುವುದು ಅಸಾಧ್ಯವೆಂದು ಹೇಳಬಹುದಾದರೂ ಅಲ್ಪ ಸ್ವಲ್ಪವಾದರೂ ಅನುಸರಿಸುವುದು ಮುಂದಿನ ಅಭಿವೃದ್ಧಿಗೆ ಅನುಕೂಲ. ಅಂತಹ ಕಡೆಗಳಲ್ಲಿ 2—3 ತರಗತಿಗಳೂ, 20,30 ಮಂದಿ ಬಾಲಕರೂ ಇರುವರು. ಒಂದೊಂದು ತರಗತಿಗಾದರೂ ಟಿಪ್ಪಣಿಗಳನ್ನು ಒರೆದು ಅದರಂತೆ ಪಾಠಗಳನ್ನು ನಡೆಸುವುದು ಒಳ್ಳೆಯದು. ಈಕ್ರಮದಂತೆ ಒಬ್ಬರಿರುವ ಕಡೆಗಳಲ್ಲಿ ನಡೆಯುವುದು ಸ್ವಲ್ಪ ಕಷ್ಟವೇ ಹೌದು. ಆದರೆ ಈ ಪದ್ಧತಿಯಿಂದ ಸದ್ಯಃ ಫಲ, ಶ್ರಮವಾಗಿ ತೋರಿದರೂ ಮುಂದೆ ತಮಗೆ ಎಷ್ಟು ಸುಖವುಂಟೆಂಬುದನ್ನು ಭಾವಿಸಬೇಕು. ಸತ್‌ಶಿಕ್ಷಕನು ಇವ್ವಗಳನ್ನು ಶ್ರಮವೆಂದೂ ಕ್ಲುಪ್ತಕೆಲಸಕ್ಕೆ ವಿಾರಿತೆಂದೂ ಎಂದಿಗೂ ಭಾವಿಸಲಾರನು. ಶ್ರಮವೆಂದು ಭಾವಿಸುವವನಿಗೆ ಎಲ್ಲಾ ಕೆಲಸಗಳೂ ಶ್ರಮವೇ!!

ಪ್ರಕೃತದಲ್ಲಿ ನಾಲ್ಕಾರುಮಂದಿಯೂ, ಅದಕ್ಕೆ ಹೆಚ್ಚಿನ ಸಂಖ್ಯೆಯೂ ಇರುವ ಶಾಲೆಗಳಲ್ಲಿ ಕೆಲಸಗಳು ನಡಿಯುವ ಕ್ರಮವನ್ನು ಚರ್ಚಿಸೋಣ. (1) ಇಂತಹ ಪಾಠಶಾಲೆಗಳಿರುವ ಉಪಾಧ್ಯಾಯರು ಸ್ಕೂಲಿನ ಕೆಲಸದ ವಿಷಯವಾಗಿ ಹೇಗೆ ನಡೆಯಬೇಕು. (2) ಇವರಲ್ಲಿರುವ ದೋಷಗಳಾವುವು. (3) ಪ್ರಥಮೋಪಾಧ್ಯಾಯರ ಕರ್ತವ್ಯಗಳೇನು ಇವ್ವಗಳನ್ನು ಮೊದಲು ವಿಚಾರಮಾಡಬೇಕು.

(1) ಉಪಾಧ್ಯಾಯರು ಪಾಠಶಾಲಾವಿಷಯವಾಗಿ ನಡೆಯಬೇಕಾದುದು

ಪಾಠಶಾಲೆಯು ಕೆಲಸಗಳು ಒಂದು ಗೃಹಕೃತ್ಯದಹಾಗೆ, ಮನೆಯ ಯಜಮಾನನುತನ್ನ ಗೃಹಕೃತ್ಯವನ್ನು ಹೇಗೆ ಸರಿಯಾದ ಕ್ರಮದಲ್ಲಿಟ್ಟುಕೊಂಡಿರುತ್ತಾನೋ

ಅದೇ ಕ್ರಮದಲ್ಲೇ ಪಾಠಶಾಲೆಯ ಕೆಲಸಗಳೂ ನಡೆಯಬೇಕು. ಆದುದರಿಂದ ಪಾಠ ಶಾಲೆಯ ಬೋಧಕರೆಲ್ಲರೂ ಸ್ವಾಮಿಕಾರ್ಯಕ್ಕೂ, ವಿದ್ಯಾಭ್ಯಾಸಕ್ಕೂ ಲೋಪಮಾಡದೆ, ಪರಸ್ಪರ ಸಹಾಯಕರಾಗಿ, ಪಕ್ಷಪಾತ ಮಾಡದ ರೀತಿಯಲ್ಲಿ, ಪ್ರೀತಿಯಿಂದ ಕೆಲಸ ಗಳನ್ನು ನಡಸಿಕೊಂಡು ಹೋಗಬೇಕು. ತಾವು ತಪ್ಪು ಮಾಡಿಕೊಂಡು ಮೇಲ್ಪಟ್ಟವರನ್ನು ದೂಷಿಸಬಾರದು. ಆಗಾಗ್ಯೆ ಬಾಲಕರ ನ್ಯೂನಾತಿರಿಕ್ತಗಳನ್ನು ಅವರ ತಂದೆತಾಯಿಗಳಿಗೆ ತಿಳಿಸುತ್ತಲೂ, ಯಾವುದಾದರೊಂದು ಕೆಲಸಕ್ಕೆ ಪರಸ್ಪರ ಸಹಾ ಯಕರಾಗುತ್ತಲೂ, ಪಾಠಬೋಧನೆ ವಿಷಯಗಳನ್ನು ಸಾಧ್ಯವಾದಹಾಗೆಲ್ಲಾ ಚೆನ್ನಾಗಿ ಕೇಳಿ ತಿಳಿದುಕೊಳ್ಳುತ್ತಲೂ ಇರಬೇಕು. ಮತ್ತು ಬಾಲಕರಲ್ಲಿ ಕ್ರಮ, ಗಮನ, ಸ್ಪರ್ಧೆ, ಸತ್ಯ, ದಯೆ, ನೈರ್ಮಲ್ಯ ಇವೇ ಮುಂತಾದ ಶೀಲಗಳನ್ನುಂ ಟುಮಾಡಲು ಪ್ರಯತ್ನಪಡುವುದಲ್ಲದೆ, ಅಂಥಾ ಶೀಲಗಳಿಗೆ ತಾವೂ ಉದಾಹರ ಣೆಯಾಗಿರಬೇಕು. ಪ್ರತಿಯೊಬ್ಬ ಶಿಕ್ಷಕನೂ ಬಾಲಕರ ವಿಹಯದಲ್ಲಿ ಪ್ರೀತಿಯುಳ್ಳ ವನಾಗಿಯೂ, ದಯಾಳುವಾಗಿಯೂ ಇರಬೇಕು. ಪಕ್ಷಪಾತಮಾಡದೆ ಬಾಲ ಕರ ವಿಷಯದಲ್ಲಿ ನ್ಯಾಯಮಾರ್ಗವನ್ನವಲಂಬಿಸಬೇಕು. ಬಾಲಕರಲ್ಲಿ ಗೌರವ ವನ್ನು ತೋರ್ಪಡಿಸಿಕೊಳ್ಳಬೇಕು. ಪಾಠವಿಷಯಗಳಲ್ಲಿ ಬಾಲಕರಿಗೆ ಆಸಕ್ತಿಹುಟ್ಟಿ ಸಬೇಕು. ಸುಮ್ಮನೆ ಬಂದ, ಓದಿದ, ಹೋದ, ಇಂಥ ಉತ್ತರಗಳನ್ನು ಕೊಡುವ ವನು ಉಪಾಧ್ಯಾಯನಾಗಲು ಎಂದಿಗೂ ಅರ್ಹನಲ್ಲ. ಕೆಲವರು, ಪಾಠ ಹೇಳಿದೆ ಅವನಿಗೆ ಬರುವುದಿಲ್ಲ, ನಾನೇನು ಮಾಡುವುದು, ಎನ್ನುವರು.

(2) ಉಪಾಧ್ಯಾಯರಲ್ಲಿರುವ ದೋಷಗಳು.— ಗುಣಗಳೇನೋ ತಕ್ಕ ಮಟ್ಟಿಗೂ ಇದ್ದೇಇರುವುದು. ಆದರೆ ಮನುಷ್ಯನು ಸಾಧ್ಯವಾದಮಟ್ಟಿಗೂ ದೋ ಷಗಳನ್ನು ತಿಳಿದುಕೊಳ್ಳಬೇಕಲ್ಲವೆ? ಇದಕ್ಕೆ ನೆರೆಹೊರೆಯವರ ನಡವಳಿಕೆಗಳೂ, ಬುದ್ಧಿವಾದವೂ, ಸುತ್ತಲಿರುವ ವಸ್ತುಗಳೂ ಸಹಾಯಕಗಳು. ಸಾಮಾನ್ಯವಾಗಿ ಕೆಲವರಲ್ಲಿ ಕಾಣಬರುವ ದೋಷಗಳು —

(1) ತಾತ್ಸಾರ. (2) ಜನಗಳ ಧೋರಣೆ ಮತ್ತು ದೂಷಣೆ. (3) ಪರೀಕ್ಷೆಯು ಕಾಲದಲ್ಲಿ ಸೋಮಾರಿತನವನ್ನು ಮರೆಮಾಚಿ ಇತರ ಕಾರಣಗಳಿಂದ ತನ್ನ ಸೋ ಮಾರಿತನವನ್ನು ಮರೆಮಾಚುವುದು. (4) ಅದಿಯಿಂದಲೂ ಎಚ್ಚರಿಕೆಯಿಂದ ತಪ್ಪು ನಡತೆಯನ್ನು ನೋಡಿಕೊಳ್ಳದಿರುವಿಕೆ. (5) ಅವಿಧೇಯತೆ. (6) ಆತ್ಮಪ್ರಶಂಸೆ. ಪರದೂಷಣೆ. (7) ಅತಿ ದಂಡನೆ. (8) ಕ್ರೌರ್ಯ. (9) ಡಂಭ. (10) ತಿಳಿವಳಿಕೆ

ಸಾಲದಿರುವಿಕೆ. (11) ಸಕಾಲಕ್ಕೆ ಬಂದು ಕೆಲಸ ಮಾಡದಿರುವಿಕೆ. (12) ಸ್ವಾತಂತ್ರ್ಯವೆಂಬ ಭಾವನೆಯನ್ನುಂಟುಮಾಡಿಕೊಂಡಿರುವುದು. ಮೊದಲಾದ ಹಲವು ದುರ್ಗುಣಗಳಿರುವುವು. ಪ್ರಥಮೋಪಾಧ್ಯಾಯರು ಪಾಠಶಾಲೆಗಳಲ್ಲಿ ಇವುಗಳ ಪ್ರಕಾಶಕ್ಕೆ ಅವ್ಕಾಶ ಕೊಡದೆ ಎಲ್ಲರಿಗೂ ತಾವು ಸನ್ಮಾರ್ಗ ನಿದರ್ಶನರಾಗಿರಬೇಕು. ಇತರ ಬೋಧಕರನ್ನೂ (ತನ್ನ ಅಧೀನದಲ್ಲಿರುವವರು) ತನ್ನ ಹತೋಟಿಯಲ್ಲಿಟ್ಟುಕೊಂಡಿರಬೇಕು. ಮತ್ತು ಪ್ರತಿಯೊಬ್ಬ ಉಪಾಧ್ಯಾಯನೂ ವಿರಾಮಕಾಲದಲ್ಲಿ ಓದೋಣವನ್ನಿಟ್ಟುಕೊಂಡು ಪಾಠಬೋಧನೆಯ ಕಾಲದಲ್ಲಿ ಸಮಯಕ್ಕೆ ತಕ್ಕಂತೆ ನಿದರ್ಶನಗಳನ್ನು ಕೊಡಬೇಕು. ವಿಷಯ ವಿಮರ್ಶನಾಶಕ್ತಿಯೂ ಚನ್ನಾಗಿರಬೇಕು. ಇದರಿಂದ ಅವರಿಗೆ ಗೌರವವು ಬರುವುದು. ಹಾಗೆ ಮಾಡದೆ ಬಾಲಕರೆದುರಿಗೆ ಪಾಠಕಾಲದಲ್ಲಿ ಪುಸ್ತಕಗಳನ್ನು ಕೈಲಿ ಹಿಡಿದುಕೊಂಡು ಒಂದೊಂದು ವಾಕ್ಯವನ್ನು ಮೊದಲು ತಾವು ಓದಿ ಅರ್ಥಮಾಡಿಕೊಂಡಬಳಿಕ ಪ್ರಶ್ನೆ ಕೇಳುವುದರಿಂದಲು, ಒಂದಾನೊಂದು ವೇಳೆ ತೊಡಕಾದ ಸಂದರ್ಭಗಳಲ್ಲಿ ಆ ವಾಕ್ಯಗಳನ್ನೇ "ಗಿಣಿಗೆ ಮಾತು ಕಲಿಸುವಂತೆ" ಕಂಠಪಾಠಮಾಡಿಸುವುದರಿಂದಲೂ, ಶಿಕ್ಷಕರು ತಮ್ಮ ಕಾರ್ಯಗಳನ್ನು ಪೂರೈಸಿಕೊಳ್ಳುವರು. ಈ ಪದ್ಧತಿಯನ್ನು ಮಾತ್ರ ಎಂದಿಗೂ ಆಚರಿಸಬಾರದು. ದಿವಸಕ್ಕೆ ನಿಯಮಿತವಾಗಿರುವ ಕಾಲದಲ್ಲಿ ವಿಷಯಗ್ರಹಣೆಗೆ ಒಂದು ಘಂಟೆ ತೆಗೆದುಕೊಂಡರೂ ಸಾಕಾಗಿದೆ. ಕೆಲವರು, ಓದುವುದನ್ನು ಕಂಡರೆ "ಇದೇನು ಮಗುವಿನಿಂತೆ ಓದುತ್ತೀರಿ! ನೀವು ಇನ್ನೂ ಓದಬೇಕೆ! ಹಾಗಾದರೆ ನಿಮಗೆ ತಿಳಿವಳಿಕೆ ಸಾಲದೆಂದು ತೋರುತ್ತೆ" ಎಂದು ಅಲೆಗಳೆಯುವುರು. ಆವರು ಅಂದರೂ ಅನ್ನಲಿ. ನಾವು ಪಾಠಕ್ರಮ ಪದ್ಧತಿಯನ್ನು ಬಿಡಬಾರದು, ಮತ್ತು ಪಾಠಕಾಲದಲ್ಲಿ ಸುಮ್ಮನೆ ಕಾಲಕಳೆಯುತ್ತ ಬಾಲಕರಿಗೆಒಂದು ನಿಷ್ಪ್ರಯೋಜನವಾದ ಕೆಲಸವನ್ನು ನೇಮಿಸಿ ತಮ್ಮ ಗೃಹಕೃತ್ಯಸಂಬಂಧವಾದ ಆಲೋಚನೆಗಳಿಗೆ ಇತರೊಡನೆ ಎಂದಿಗೂ ಸೇರಬಾರದು. ಇದರಿಂದಬಾಲಕರು ಸ್ವೇಚ್ಛೆಯಾಗಿ ನಡೆಯಲು ದಾರಿ ತೋರಿಸಿಕೊಟ್ಟಂತಾಗುವುದು. ಬೋಧಕರು ಬಾಲಕರಲ್ಲಿ ಅಕ್ರಮವನ್ನು ಕಂಡೊಡನೆಯೇ ಮುರಿಯಬೇಕು. ಎಲ್ಲಾಭಾಗದಲ್ಲೂ ತಮಗಿಂತಲೂ ಮೇಲ್ಪಟ್ಟವರೆಂಬ ಭಾವನೆಯನ್ನುಂಟುಮಾಡಿ ಅದರಂತೆ ತಾವು ನಡೆಯಬೇಕು. ಧೈರ್ಯವೂ, ಸ್ಥೈರ್ಯವೂ, ಚಟುವಟಿಕೆಯೂ ಉಪಾಧ್ಯಾಯರಲ್ಲಿರಬೇಕು. ಇದಕ್ಕೆ ಸಹಾಯಕವಾಗಿ ನೈಜಗುಣವೂ, ಬಹುಮಾನವೂ, ದಂಡನೆಯೂ ಇರುವುವು. ಅದುದರಿಂದ ಬೋಧಕರು ಎಲ್ಲ

ವಸ್ತುವಿಗಿಂತಲೂ, ಮನಸ್ಸೇ ದೊಡ್ಡದೆಂಬುದನ್ನು ಪ್ರಧಾನವಾಗಿಟ್ಟುಕೊಂಡು ಯಾವ ಯಾವ ಸಂದರ್ಭಗಳಲ್ಲಿ ಅದನ್ನು ಹೇಗೆಹೇಗೆ ಉಪಯೋಗಿಸಬೇಕೆಂಬುದನ್ನರಿತು ಅದರಂತೆ ನಡೆಯಬೇಕು. ಸ್ಥಿರತ್ವವು ಅತ್ಯಪೇಕ್ಷಕವಾದುದು.

ಮತ್ತು ಬಾಲಕರ ಆಟಪಾಟಗಳಿಗೂ ಒಂದು ಕ್ಲುಪ್ತಕಾಲವನ್ನು ಗೊತ್ತು ಮಾಡಿ ತಾವು ಅವರ ಸಂಗಡವಿರುತ್ತ ಅವರಿಗೆ ಆಟದಲ್ಲಿ ಉಲ್ಲಾಸಗೊಟ್ಟು ಅವರ ನಡತೆಯನ್ನು ಒಂದು ಕ್ರಮದಲ್ಲಿ ತಿದ್ದಿಕೊಂಡು ಹೋಗಬೇಕು. ಆಟಗಳಿಗೆ ಅಡ್ಡಿ ಮಾಡಬಾರದು. ಭಯವನ್ನು ತೋರ್ಪಡಿಸಬಾರದು. ಕ್ರೂರವಾದ ಆಜ್ಞೆಗಳನ್ನು ಮಾಡಬಾರದು. ವಿದ್ಯೆ, ನಡತೆ ಮುಂತಾದವುಗಳ ವಿಷಯವಾಗಿ ಬಾಲಕರ ತಂದೆ ತಾಯಿಗಳೊಡನೆ ಆಗಾಗ್ಯೆ ಮಾತನಾಡುತ್ತಿರಬೇಕು. ಬಾಲಕರು ಆಡುವ ಆಟಗಳು ತಾವಾಗಿಯೇ ಅಪೇಕ್ಷಿಸಿದಂಥದಾಗಿಯೂ, ಅವರ ಮನಸ್ಸಿಗೆ ಕುತೂಹಲವನ್ನು ಉಂಟುಮಾಡುವಂಥಾದ್ದಾಗಿಯೂ ಇರಬೇಕು. ಈ ಸಾಧನೆಗಳು ವಿಧವಿಧವಾಗಿರಬೇಕು. ಬಾಲಕರ ದೇಹದಾರ್ಢ್ಯ ಮತ್ತು ವಯೋನುಗುಣವಾಗಿರಬೇಕು. ಇಂಥ ಆಟಗಳಿಂದ ಬಾಲಕರು ಚಟವಟಿಕೆಯುಳ್ಳವರಾಗಿಯೂ ಆಗುವರು. ಮತ್ತು ಸ್ವಾತಂತ್ರ್ಯ, ತಾಳ್ಮೆ, ಇವೂ ಉಂಟಾಗುವುವು. ಪ್ರತಿದಿನವೂ ಬೇರೆಬೇರೆ ಪಾತಗಳಿಗೆ ತರಗತಿಗಳನ್ನು ಬದಲಾಯಿಸುವಾಗ ಸ್ವಲ್ಪ ಡ್ರಿಲ್ ಮಾಡಿಸಿ ಕಳುಹಿಸಬೇಕು. ದಿನದ ಪಾತದ ಕೊನೆಯಲ್ಲಿ ಅರ್ಧಘಂಟೆಗೆ ಕಮ್ಮಿ ಇಲ್ಲದೆ ಡ್ರಿಲ್ ಮಾಡಿಸುತ್ತಲೂ ಇರಬೇಕು. ಈ ಸಾಧಕಗಳೆಲ್ಲಾ ವಿಹಾರಾರ್ಥವಾದುದರಿಂದ ಮೇದಸ್ಸಿಗೆ ಆಯಾಸವಾದಾಗಲೇ ಅವರ ಯೋಗ್ಯತಾನುತಾರವಾಗಿ ಮಾಡಿಸಬೇಕು. ಬಾಲಕರಿಗೆ ಆಯಾಸವಾಯಿತೆಂದು ತೋರಿದೊಡನೆಯೇ ಆಟವನ್ನು ನಿಲ್ಲಿಸಿಬಿಡಬೇಕು? ಈ ಸಾಧಕಗಳಲ್ಲಿ ಅಪಾಯಕರವಾದುದು ಯಾವುದೂ ಇರಕೂಡದು. ಇವುಗಳನ್ನು ಪ್ರಾರಂಭಿಸುವಾಗ ಮೊದಲುಮಾಡಿಕೊಂಡು ಅಂತ್ಯದವರೆಗೂ ಶಿಕ್ಷಕರು ಬಾಲಕರಮುಂದೆಯೇ ಇರಬೇಕು. ಸ್ಕೂಲ್ ಕಾಂಪೌಂಡಿನಲ್ಲಾಗಲೀ, ಊರ ಹೊರಗಿನ ಬೈಲಿನಲ್ಲಾಗಲೀ ಆಟಕ್ಕೆ ಅವಕಾಶವನ್ನು ಕಲ್ಪಿಸಬಹುದು. ತಾವು ಮಾಡಿದ ಏರ್ಪಾಡನ್ನು ಪದೇಪದೇ ಬದಲಾಯಿಸುತ್ತಿರಬಾರದು. ಅಪ್ಪಣೆಗಳನ್ನೂ ಬದಲಾಯಿಸಬಾರದು. ಆಜ್ಞೆಗಳಲ್ಲಿ ಹೆಚ್ಚು ಮಾತುಗಳಿಲ್ಲದೆ ಗಂಭೀರವಾಗಿ ಕೊಡಬೇಕು. ಬಾಲಕರಲ್ಲಿ ಪ್ರೀತಿಸಂಪಾದನೆ ಮಾಡಬೇಕು. ಮತ್ತು ತಾವು ಚಿತೇಂದ್ರಿಯರಾಗಿಯೂ, ಒಳ್ಳೆಯ ಸಂವಿಧಾನ, ಬೋಧನೆಗಳನ್ನು ತಿಳಿದವ

ರಾಗಿಯೂ ಇರಬೇಕು. ಆಲೋಚನಪರರಾಗಿರಬೇಕು. ಅಂತು ಉಪಾಧ್ಯಾಯ ರಾಗತಕ್ಕವರು ಸಂವಿಧಾನದ ಎಲ್ಲಾ ಭಾಗಗಳನ್ನೂ ಚೆನ್ನಾಗಿ ತಿಳಿದಿರಬೇಕು. ಕಾಲಕ್ಕೆ ಸರಿಯಾಗಿ ಕೆಲಸಗಳನ್ನು ನಡೆಸಬೇಕು.? ಯಾವಾಗಲೂ ಅತಿ ಚುರು ಕಾಗಿಯೂ, ಅತಿ ಜಾಗರೂಕರಾಗಿಯೂ ಇರಬೇಕು. ಒಂದು ದೊಡ್ಡ ಕಾರ್ಖಾ ನೆಯ ಅಧ್ಯಕ್ಷನಂತೆ ಪ್ರಥಮೋಪಾಧ್ಯಾಯನು ಇದ್ದುಕೊಂಡಿರಬೇಕು.

ಶಿಕ್ಷಕರು ಪಾಠ ಬೋಧಿಸಬೇಕಾದರೆ ಸಾಧ್ಯವಾದಮಟ್ಟಿಗೂ ಟಿಪ್ಪಣಿಯರೂ ಪದಲ್ಲಿ ಬರೆಯುವುದು ಒಳ್ಳೆಯದೆಂದು ಹಿಂದೆಯೇ ಹೇಳಿದೆ. ಪ್ರತಿಪಾಠವನ್ನು ಬೋಧಿಸುವಾಗಲೂ ವಿಷಯವಿಂಗಡವು ಸಹಜವಾಗಿರಬೇಕು. ಸಾಧ್ಯವಾದಮ ಟ್ಟಿಗೂ ಬಾಲಕರಿಂದಲೇ ವಿಷಯಗಳನ್ನು ಪ್ರಶ್ನೆಮಾಡಿ ಹೊರಡಿಸುವುದಕ್ಕೆ ಅನು ಕೂಲಿಸುವಂತೆ ಅವುಗಳನ್ನು ಹುಡುಕಿ ಅರಿಸಿಕೊಂಡಿರಬೇಕು. ಎಲ್ಲಾ ಪಾಠಗಳಿ ಗೂ ಒಂದೇರೀತಿಯಾದ ವಿಭಾಗ ಕ್ರಮವು ಸರಿಹೋಗುವುದಿಲ್ಲ? ಪಾಠಕ್ಕೆ ತಕ್ಕಂತೆ ಬದಲಾಯಿಸಿಕೊಳ್ಳಬೇಕು! ಪ್ರತಿಪಾಠಕ್ಕೂ ಹಲಗೆಯ ಉಪಯೋಗವು ಅತ್ಯವಶ್ಯ ಕವಾದುದು. ಇದರಿಂದ ಪಾಠವು ಪುನರಾವೃತ್ತಿಮಾಡಿದಂತಾಗುವುದಲ್ಲದೆ ಮಾದರಿ ಯಾದ ಅಂಶಗಳನ್ನು ಬರೆವುದಕ್ಕೂ, ಕಷ್ಟಾಂಶಗಳನ್ನು ವಿವರಿಸುವುದಕ್ಕೂ, ಭೂ ಪಠ, ಪ್ರಾಣಿಗಳ ಆಕೃತಿ ಮುಂತಾದುದನ್ನು ಬರೆಯುವುದಕ್ಕೂ, ಹೋಲಿಕೆ ತೋರಿ ಸುವುದಕ್ಕೂ ಉಪಯೋಗವಾಗುವುದು. ಮತ್ತು ಉಪಾಧ್ಯಾಯರ ಬೋಧನಾಶ ಕ್ತಿಯೂ, ಬಾಲಕರ ಮನಸ್ಸಿನಲ್ಲಿ ಹೇಳಿದ ಅಂಶಗಳು ಸ್ಥಿರವಾಗಿ ನಿಸ್ಸಂಶಯವಾಗಿ ನಿಂತುದೂ ಗೊತ್ತಾಗುವುದು. ಕಪ್ಪುಹಲಗೆಯಮೇಲೆ ವಿಷಯಗಳನ್ನು ಅಂದವಾಗಿ ಬರೆಯಬೇಕು. ಪಾಠವಿಷಯವನ್ನು ಗೊತ್ತುಮಾಡಿಕೊಂಡಮೇಲೆ ತರಗತಿಯ ಯೋಗ್ಯತೆ' ಅವರ ಪೂರ್ವಜ್ಞಾನ, ಪಾಠಕ್ಕಿರುವಕಾಲ ಇವುಗಳನ್ನು ಜ್ಞಾಪಕವಿಟ್ಟು ಬೋಧಿಸಬೇಕು.

ಮುಖ್ಯೋಪಾಧ್ಯಾಯರ ಕೆಲಸಗಳು— (1) ತರಗತಿಗಳನ್ನು ವಿಂಗಡಿ ಸುವುದು.—ತಮ್ಮ ದೃಷ್ಟಿಗೆದುರಾಗಿ ಯಾವ ತರಗತಿ ಇರಬೇಕು. ಯಾವ ತರ ಗತಿ ತಮ್ಮ ಎದುರಿಗಿಲ್ಲದಿದ್ದರೂ ಕೆಲಸವು ಚೆನ್ನಾಗಿ ನಡೆಯುವುದು. ಕೆಲಸದಲ್ಲಿ ಅಲಸ್ಯಭಾವದಿಂದಿರುವ ಶಿಕ್ಷಕರ ವರ್ಗವೆಲ್ಲಿರಬೇಕು, ಎಂಬುದನ್ನು ನೋಡುವುದ ಲ್ಲದೆ ಜ್ಞಾನದಲ್ಲೂ, ವಯಸ್ಸಿನಲ್ಲೂ, ಸ್ಪರ್ಧೆಯಲ್ಲೂ, ಸಾಧಾರಣವಾಗಿ ಒಂದೇಸಮ ನಾಗಿರುವವರನ್ನು ಒಂದು ತರಗತಿಯಲ್ಲಿಡಬೇಕು? ತರಗತಿಯು ಯೋಗ್ಯತೆಗೆ ತಕ

ವರನ್ನು ನೋಡಿ ಅವರಿಗೆ ಆಯಾತರಗತಿಗಳನ್ನು ಕೊಡಬೇಕು. ಪರೀಕ್ಷೆಯಲ್ಲಿ ಕ್ರಮವಾಗಿಪ್ಯಾಸಾದವನನ್ನು ಮೇಲಿನ ತರಗತಿಗೆ ಹಾಕಬೇಕಲ್ಲದೆ ತಂದೆತಾಯಿಗಳ ಹಿತವಾಕ್ಯಗಳಿಗೆ ಕಿವಿಗೊಟ್ಟು ತರಗತಿಯನ್ನು ಕೆಡಿಸಬಾರದು. ತರಗತಿಗಳು ಬೇರೆಯಾಗಿದ್ದುಕೊಂಡರಬೇಕಲ್ಲದೆ ಒಂದರಿಂದ ಮತ್ತೊಂದಕ್ಕೆ ಯಾವಭಾಗದಲ್ಲೂ ಅಡಿಯಾಗಬಾರದು. ಬಾಲಕರಿಗೂ, ಉಪಾಧ್ಯಾಯರಿಗೂ, ಸಾಮಾನುಗಳಿಗೂ ತಕ್ಕಷ್ಟು ಸ್ಥಳವಿರಬೇಕು. ತರಗತಿಗಳಲ್ಲಿ ಆಯಾಯ ಪಾಠಕ್ಕೆ ಬೇಕಾದಂಥ ಉಪಕರಣಗಳಿರಬೇಕೇಹೊರ್ತು, ಒಂದು ಪಾಠ ನಡೆಯುತ್ತಿರುವಾಗ ಇನ್ನೊಂದು ಪಾಠಕ್ಕೆ ಗಮನವನ್ನೆಳೆಯುವ ಉಪಕರಣಗಳಿರಬಾರದು. ಚಿಕ್ಕ ತರಗತಿಗಳಲ್ಲಿ ಬಾಲಕರು ವಿಶೇಷವಾಗಿದ್ದರೆ ಬಾಲಕರಿಗೆ ಕೂತುಕೊಳ್ಳುವುದಕ್ಕೆ ಬೆಂಚು ಮತ್ತು ಡೆಸ್ಕುಗಳನ್ನು ಅಳತೆಗೆ ತಕ್ಕಂತೆ ಮಾಡಿಸಿ, ಅವುಗಳನ್ನು ಅನುಕೂಲಕ್ಕೆ ತಕ್ಕಂತೆ ಯಾವುದಾದರೊಂದು ವಿಧದಲ್ಲಿಡಿಸುವುದು, ಮಂದಬುದ್ಧಿಯವರನ್ನೂ, ಸೋಮಾರಿಗಳನ್ನೂ, ನೇತ್ರಪಾಟವು ಕಮ್ಮಿಯಾಗಿರುವವರನ್ನೂ ಮುಂದೆ ಕೂರಿಸಿಕೊಳ್ಳಬೇಕು. ಬಾಲಕರಿಗೆ ಕುಳಿತುಕೊಳ್ಳಲು ಬೆಂಚುಗಳನ್ನು ಒಂದರ ಹಿಂದೆ ಒಂದನ್ನಿಟ್ಟಿದ್ದರೆ ಬಾಲಕರು ತರಗತಿಯ ಹಿಂಭಾಗದಿಂದ ಸರಾಗವಾಗಿ ಬಂದು ಕುಳಿತುಕೊಳ್ಳಲು ತಕ್ಕ ಏರ್ಪಾಡು ಮಾಡಿರಬೇಕು. ಇಂಥಾ ಸಾಲುಗಳು ನಾಲ್ಕರಿಂದ 6 ರ ಒಳಗಿರಬೇಕು. ಗ್ಯಾಲರಿಯಲ್ಲಿ ಕೂರಿಸಿ ಪಾಠ ಹೇಳಬೇಕಾದರೆ, ನೇತ್ರ, ಶ್ರೋತ್ರೇಂದ್ರಿಯಗಳ ಪಾಟವವು ಕಮ್ಮಿಯಾಗಿದ್ದವರನ್ನು ಮುಂಭಾಗಕ್ಕೆ ಕೂಡಿಸಿಕೊಳ್ಳಬೇಕು. ಬಾಲಕರೆಲ್ಲರೂ ತಮಗೆ ಕಾಣುವಂತೆಯೂ, ತಾವು ಮಾತನಾಡುವುದು ಅವರೆಲ್ಲರಿಗೂ ಕೇಳಿಸುವಂತೆಯೂ ತಕ್ಕಸ್ಥಳವನ್ನು ಏರ್ಪಡಿಸಬೇಕು. ಗ್ಯಾಲರಿಯ ಎತ್ತರಕ್ಕೆ ತಕ್ಕಂತೆ ಹಲಗೆಯೂ ತಕ್ಕಸ್ಥಳದಲ್ಲೆತ್ತರದಲ್ಲಿರಬೇಕು. ಇದು ಕೆಲವು ಪಾಠಗಳಿಗೆ ಮಾತ್ರ ಸಾಧ್ಯವು. ಮತ್ತು ನಮ್ಮ ದೇಶೀಯ ಪಾಠಶಾಲೆಗಳಲ್ಲಿ ಈಕ್ರಮವು ಜಾರಿಯಲ್ಲಿಯೂ ಇಲ್ಲವು.

(2) ಪಾಠಶಾಲಾಸ್ಥಾಪನ—ಈ ಸ್ಥಳವು ಸಣ್ಣ ಮಕ್ಕಳಿಗೂ ಅನುಕೂಲಿಸುವಂತೆ ತಕ್ಕಮಟ್ಟಿಗೆ ಹತ್ತರದಲ್ಲಿರಬೇಕು. ಇಲ್ಲದಿದ್ದರೆ ಬಾಲಕರು ದೂರವೆಂದಾಗಲಿ, ಬೇಜಾರಿನಿಂದಲಾಗಲೀ ತಪ್ಪಿಸಿಕೊಳ್ಳಲು ಕಾರಣವಾಗುವುದು. ಬಂಡಿ ಮೋಟು, ಜೂಜಿನಕಟ್ಟೆ, ಮಾರ್ಕಟ್ಟು, ಅಂಗಡಿಗಳ ಮಧ್ಯೆ, ಇತ್ಯಾದಿ ಸ್ಥಳಗಳಲ್ಲಿಡದೆ ಒಳ್ಳೆಯ ನೆಲವುಳ್ಳಂಥಾದುದಾಗಿಯೂ, ಒಳ್ಳೇ ಗಾಳಿ ಬೀಸತಕ್ಕುದ್ದಾಗಿಯೂ

ಎತ್ತರವಾಗಿಯೂ, ಗಲೀಜಿಲ್ಲದೆಯೂ, ಪೇಟೆ ಕೋಟೆಗಳಿಗೆ ಮಧ್ಯರಾಷ್ಟ್ರವಾಗಿಯೂ ಇರುವ ಕಡೆಗಳಲ್ಲಿ ಇಡಬೇಕು. ಗಲಾಟೆ ಸ್ಥಳಕ್ಕೆ ಸಂಬಂಧಿಸಿಕೊಂಡಿರಬಾರದು. ಇದಕ್ಕೆ ಸುತ್ತಲೂ ಬೈಲಿರಬೇಕು. ಬೆಳಕು ಗಾಳಿಗಳ ಬರುವಿಕೆಗೆ ಅಡ್ಡಿ ಇರಬಾರದು. ಪಾಠಶಾಲೆಯೊಳಕ್ಕೆ ತೊಂದರೆ ಇಲ್ಲದಂತೆ ದೂರದಲ್ಲಿ ಕೆಲವು ಮರ ಗಳಿರುವುದೂ ಒಳ್ಳೆಯದು. ಕೆಟ್ಟ ಗಾಳಿ ಧಾರಾಳವಾಗಿ ಹೋಗಲು ವೆಂಟಿಲೆಟರ್ಸ್ ಗಳಿರಬೇಕು.

(3) ವೇಳಾಪತ್ರಿಕೆ.—ಇದು ಪಾಠಶಾಲೆಯಲ್ಲಿ ನಡೆಯುವ ಕೆಲಸದಪಟ್ಟಿಯಾಗಿರುವುದು. ಇದೂ ಮುಖ್ಯೋಪಾಧ್ಯಾಯರ ಕಾರ್ಯವು ಇದರಲ್ಲಿರುವಂತೆ ಪಾಠ ಶಾಲೆಗಳಲ್ಲಿ ಕೆಲಸ ಮಾಡುವ ರೂಢಿಯನ್ನಿಟ್ಟುಕೊಳ್ಳಬೇಕು. ಕೂಲಿಮಠಗಳ ಪದ್ಧತಿಯುನ್ನನುಸರಿಸಿ ಪಾಠ ಹೇಳುವುದಕ್ಕಿಂತಲೂ ಅವಧಾನದಿಂದ ಕೊಂಚಹೊತ್ತು ಒಂದುಕ್ರಮವನ್ನನುಸರಿಸಿ ಪಾಠಹೇಳುವುದು ಎಷ್ಟೋ ಮೇಲು. ಇದರಿಂದ ಬೋಧಕರಿಗೆ ವ್ಯರ್ಥಕಾಲ ಕಳೆಯುವುದು ತಪ್ಪಿ ಕ್ರಮವಾಗಿ ಕೆಲಸಮಾಡುವ ರೂಢಿಯು ಬರುವುದು. ಮತ್ತು ಹೇಳುವ ವಿಷಯದಲ್ಲಿ ಯಾವುದನ್ನೂ ಅಲಕ್ಷ್ಯ ಮಾಡದಂತಾಗುವುದು. ಬಾಲಕರ ಬುದ್ಧಿಶಕ್ತಿಗಳು ಸರಿಯಾಗಿ ಅಭಿವೃದ್ಧಿಹೊಂದುವಂತೆ ವಿಷಯಗಳನ್ನು ವಿಭಾಗಿಸಿಕೊಂಡು ಪಾಠ ಹೇಳಬೇಕಾಗುವುದು. ಅಂದರೆ ಬಾಲಕರ ಬುದ್ಧಿಶಕ್ತಿಗಳಲ್ಲಿ ಒಂದಕ್ಕೆ ಒಂದೇಕಾಲದಲ್ಲಿ ವಿಶೇಷ ಕೆಲಸಕೊಡದೆ ಈ ಘಂಟೆಯಲ್ಲಿ ಒಂದುಶಕ್ತಿಗೂ, ಇನ್ನೊಂದು ಘಂಟೆಯಲ್ಲಿ ಇನ್ನೊಂದುಶಕ್ತಿಗೂ, ಮತೊಂದು ಘಂಟೆಯಲ್ಲಿ ಮತ್ತೊಂದು ಶಕ್ತಿಗೂ ಕೆಲಸ ಕೊಟ್ಟಂತಾಗುವುದು. ಮತ್ತು ಎಲ್ಲಾ ಇಂದ್ರಿಯಗಳಿಗೂ ಬೇರೆ ಬೇರೆ ಕೆಲಸಗಳನ್ನು ಕೊಡುವ ವಿಷಯುಗಳನ್ನು ವಿಂಗಡಿಸಿಕೊಳ್ಳುವುದರಿಂದ ಪಾಠದಲ್ಲಿ ಬಾಲಕರಿಗೆ ಬೇಸರವುತೊಲಗುವುದು. ತಮಗೆಬೇಕಾದ ಒಂದವಿಷಯಕ್ಕೇ ಗಮನಕೊಡುವುದು ಉಪಾಧ್ಯಾಯರಿಗೆ ತಪ್ಪುವುದು. ಒಂದೇಘಂಟೆಯಲ್ಲಿ ಒಂದೇ ವಿಷಯವನ್ನು ತಿಳಿಸುವುದರಿಂದ ಪಾಠದಲ್ಲಿ ಬಾಲಕರ ಮನಸ್ಸು ಅನ್ಯಾಕ್ರಾಂತವಾಗಲಾರದು, ಪ್ರತಿತರಗತಿಗೂ ವರ್ಷಾಂತ್ಯಕ್ಕೆ ಯಾವ ಯಾವವಿಷಯುಗಳು ಎಷ್ಟೆಷ್ಟು ಆಗಬೇಕೆಂಬುದನ್ನು ಮೊದಲೇ ನಿರ್ಧರಿಸಿಕೊಂಡು, ಅದನ್ನು ಪ್ರತಿತಿಂಗಳಿಗೂಭಾಗಿಸಿ ಪಾಠಮಾಡುವುದರಿಂದ ಕೆಲಸಗಳು ಉಭಯತ್ರರೂ ಚೆನ್ನಾಗಿ ಮಾಡುವಂತಾಗುವುದು, ಮತ್ತು ವರ್ಷಾಂತ್ಯದಲ್ಲಿ ಬೇಗ ಬೇಗ ಪಾಠಮಾಡುವ ಗುಣವುತಪ್ಪಿ ಬಾಲಕರ ಮನಸ್ಸನ್ನು ಆಯಾಸಪಡಿಸದಂತಾಗು

ವುದು. ಮತ್ತು ಕ್ಲಪ್ತಕಾಲ ಇದರಿಂದ ವ್ಯರ್ಥಕಾಲಕ್ಷೇಪವು ತಪ್ಪಿ ಕಾಲದ ಬೆಲೆ ಯುಗೊತ್ತಾಗುವುದು. ತರಗತಿಯಲ್ಲಿ ಪಾಠವಿಲ್ಲದೆ ಕೂಡೋಣದರಿಂದ ಆಗುವಗದ್ದ ಲವು ಕೆಲಸಮಾಡುವುದರಿಂದಾಗಲಾರದು. ಮುಖ್ಯವಾಗಿ ಪಾಠ ಬದಲಾವಣೆಯೇ ಇದಕ್ಕೆ ಕಾರಣವು. ಇದರಿಂದ ಅತಿಯಾಗಿ ಉಪಕರಣಗಳು ಬೇಕಿಲ್ಲವು? ವೇಳಾ ಪತ್ರಿಕೆಯನ್ನು ನೋಡಿದಮಾತ್ರದಿಂದಲೇ ಸ್ಕೂಲಿನಲ್ಲಿ ನಡೆಯುವ ಕೆಲಸವೆಲ್ಲಾ ಸ್ಪಷ್ಟ ಪಡುವಂತಿರಬೇಕು. ಆದಕಾರಣ ವೇಳಾಪತ್ರಿಕೆಯಲ್ಲಿ ಕಾಲ,ಪಾಠ, ಇವ್ಯಗಳನ್ನು ತಿಳಿ ಸುವುದರಜೊತೆಗೆ ಪ್ರತಿದಿನವೂ ಬಾಲಕರಿಗೆ ಮನೆಯಲ್ಲಿ ಕೆಲಸಮಾಡಲು ಕೊಡುವ ಮನೇಪಾಠಗಳನ್ನು ತೋರಿಸಬೇಕು. ಮತ್ತು ಉಪಾಧ್ಯಾಯರ ಹೆಸರನ್ನೂ ತೋ ರಿಸಬೇಕು. ವೇಳಾಪತ್ರಿಕೆಯಲ್ಲಿ ವಾರಕ್ಕೆ ಪಾಠಗಳು ಇಷ್ಟು ಘಂಟೆಕಾಲ, ಪರೀ ಕ್ಷೆಗಾಗಿ ಇಷ್ಟುಘಂಟೆಕಾಲವೆಂದು ನಮೂದಿಸಬೇಕು. ಆದರೆ ವೇಳಾಪತ್ರಿಕೆ ಯನ್ನು ತಯಾರ್ಮಾಡುವುದರಲ್ಲಿ ಅನುಸರಿಸಬೇಕಾದ ಮುಖ್ಯಾಂಶಗಳು—ವಾರಕ್ಕೆ ಎಷ್ಟುಘಂಟೆಕಾಲ ಕೆಲಸಮಾಡಬೇಕು. ಯಾವ ಯಾವಪಾಠಗಳಿಗೆ ಎಷ್ಟೆಷ್ಟು ಘಂಟೆಕಾಲಬೇಕು, ಪ್ರತಿವಾರವೂ ಪರೀಕ್ಷೆಗೂ, ವ್ಯಾಯಾಮಕ್ಕೂ ಕಾಲವನ್ನು ಗೊತ್ತುಮಾಡಿಕೊಳ್ಳಬೇಕು, ಎಂದೆಂದು ಯಾವ ಯಾವ ಪಾಠವನ್ನು ಹಾಕಿಕೊಂ ಡರೆ ಬೇಕಾದಷ್ಟುಕಾಲ ದೊರೆಯುವುದು (ಉದಾ—ಭಾಷೆಗೆ 3 ಘಂಟೆ ಆಗಬೇಕೆಂ ದಿಟ್ಟುಕೊಂಡರೆ ಸೋಮವಾರವೂ, ಬುಧವಾರವೂ, ಶುಕ್ರವಾರವೂ, ಬೇಕಾಗು ತ್ತದೆ. ಇದರಂತೆಯೇ) ಪಾಠಗಳ ವಿಂಗಡಕ್ರಮದಲ್ಲಿ ಬಾಲಕರಿಗೆ ಶ್ರಮವು ಏಕ ರೀತಿಯಾಗಿರುವಂತೆ ನೋಡಿಕೊಳ್ಳಬೇಕು, ಇಷ್ಟಾದಮೇಲೆ ಪ್ರತಿಯೊಂದು ದಿನದ ಪಾಠವನ್ನೂ ಯಾವ ಕ್ರಮದಲ್ಲಿ ಹೇಳಿಕೊಡಬೇಕೆಂದು ನಿರ್ಣಯಿಸಬೇಕು. ಎರ ಡು ಘಂಟೆಗಳ ಕಾಲ ಒಂದೇ ವಿಧವಾದ ಬುದ್ಧಿಶಕ್ತಿಯ ವ್ಯಯಕ್ಕೆ ಅವ್ಪದ ಕೊಡ ಕೂಡದು. ಒಂದು ಘಂಟೆ ಕಷ್ಟವಾದರೆ ಮುತ್ತೊಂದು ಘಂಟೆಯಲ್ಲಿ ಸುಲಭವಾಗುವ ಪಾಠವಿಡಬೇಕು, ಆಯಾ ದಿನದ ಪಾಠಕ್ಕೆ ತಕ್ಕಂತೆ ಹೋಂವರ್ಕು ಕೊಡಬೇಕು, ಎಲ್ಲಾ ಕ್ಲಾಸುಗಳ ಮೇಲ್ವಿಚಾರಣೆಗೂ ತಕ್ಕಂತೆ ಅನುಕೂಲ್ಯವನ್ನು ಕಲ್ಪಿಸಬೇಕು. ಮತ್ತು ಯಾವ ಪಾಠವೇ ಆಗಲಿ ಅರ್ಧಘಂಟೆಗೆ ಕಮ್ಮಿಯಾಗಿಯೂ, ಒಂದು ಘಂಟೆಗೆ ಜಾಸ್ತಿಯಾಗಿಯೂ ಇರಬಾರದು. ಇದರಿಂದ ಪಾಠಶಾಲೆಯು ನಿತ್ಯನುಶಾಸನವು ಚೆನ್ನಾಗಿರುವುದೆಂದು ಹೇಳಬೇಕಾದುದೇ ಇಲ್ಲ.

(೪) ದೊಡ್ಡ ತರಗತಿಗಳನ್ನು ತಮ್ಮ ವಶದಲ್ಲಿಟ್ಟುಕೊಳ್ಳುವಿಕೆ.—

ಇದರಿಂದಲೇ ಸ್ಕೂಲಿನ ಒಳ್ಳೆಯ ಅಥವಾ ಕೆಟ್ಟ ಸ್ಥಿತಿಯು ಹೊರಪಡುವುದು. ಆದ್ದರಿಂದ ಮುಖ್ಯೋಪಾಧ್ಯಾಯರೇ ಇದರ ಆಡಳಿತವನ್ನು ನಿರ್ವಹಿಸಬೇಕು, ಇಲ್ಲದಿದ್ದರೆ ಜನಗಳಿಗೆ ಅಲಕ್ಷ್ಯವುಂಟಾಗುವುದು.

(೫) ಮೇಲ್ವಿಚಾರಣೆ.—

ಪ್ರತಿದಿನವೂ ಸಹಾಯೋಪಾಧ್ಯಾಯರುಗಳು ಮಾಡುವ ಕೆಲಸಗಳಲ್ಲಿ ಮೇಲ್ತನಿಖೆ ಇರಬೇಕು, ಅವರು ಮಾಡುವ ಕೆಲಸಗಳಲ್ಲಿ ಅಕಸ್ಮಾತ್ ದೋಷಗಳಿದ್ದರೂ, ತಿಳಿವಳಿಕೆಯಿಲ್ಲದೆ ಮಾಡಿದ ದೋಷಗಳಿದ್ದರೂ, ತಿದ್ದಿ, ಸರಿಪಡಿಸಬೇಕು. ಉದ್ದೇಶ ಪೂರ್ವಕವಾಗಿ ಮಾಡಿದ್ದರೆ ಮೇಲ್ಪಟ್ಟವರಿಗೆ ಕೂಡಲೇ ಆ ವಿಷಯವನ್ನು ಕುರಿತು ರಿಪೋರ್ಟು ಮಾಡಬೇಕು, ಈ ವಿಷಯದಲ್ಲಿ ಎಂದಿಗೂ ಪಕ್ಷಪಾತ ಮಾಡಬಾರದು, ಅಪಪೂನ ಪಡಿಸಬಾರದು, ಆಗಿಂದಾಗ್ಗೆ ಪಾಠಶೋಧನೆ ಮತ್ತು ನಿದರ್ಶನೆಗಳನ್ನು ಮಾಡಿ ತೋರಿಸಬೇಕು. ಮತ್ತು ಸಹಾಯೋಪಾಧ್ಯಾಯರುಗಳಿಂದಲೂ ಆ ಕೆಲಸಗಳನ್ನು ಮಾಡಿಸುತ್ತ ದೋಷಗಳನ್ನು ತಿದ್ದುಬೇಕು, ವಿರಾಮ ಕಾಲಗಳಲ್ಲಿ ವಿದ್ಯೆ, ನಡತೆ ಮುಂತಾದವುಗಳ ವಿಷಯವಾಗಿ ಉಪನ್ಯಾಸಗಳನ್ನು ಕೊಡುತ್ತಿರಬೇಕು, ವಿಶೇಷ ಸಮಾಚಾರಗಳನ್ನು ತಿಳಿಸುತ್ತಲೂ, ತಿಳಿದುಕೊಳ್ಳುತ್ತಲೂ, ಇರಬೇಕು. ಮುಖ್ಯವಾಗಿ ಪಾಠಶಾಲೆಯು ಸರ್ವಸ್ವಾತಂತ್ರ್ಯವೂ ತಮ್ಮ ಅಧೀನದಲ್ಲಿರಬೇಕು.

(೬) ಪರೀಕ್ಷೆಗಳು.—

ಉಪಾಧ್ಯಾಯರು ಬಾಲಕರನ್ನು ವಾಚಾ ಮತ್ತು ಲೇಖನಗಳಲ್ಲಿ ಪರೀಕ್ಷೆ ಮಾಡುತ್ತಿರಬೇಕು, ಇದರಿಂದ ಬಾಲಕರು ತಿಳಿದಿರುವ ಅಂಶಗಳು ಸ್ಥಿರವಾಗಿ ಮನಸ್ಸಿನಲ್ಲಿ ನಿಲ್ಲುವುವು. ಉಪಾಧ್ಯಾಯರೂ ಬಾಲಕರೂ ಉತ್ಸಾಹದಿಂದ ಕೆಲಸಮಾಡುವರು. ಬಾಲಕರ ತಂದೆ ತಾಯಿಗಳೂ ಪಾಠಶಾಲಾ ವಿಷಯದಲ್ಲಿ ಒಳ್ಳೇ ಅಭಿಪ್ರಾಯವನ್ನಿಟ್ಟುಕೊಂಡಿರುವರು. ಸ್ಮೃತಿ ಶಕ್ತಿ ಹೆಚ್ಚುವುದು. ಪ್ರಶ್ನಪತ್ರಗಳನ್ನು ತಾವೇ ಏರ್ಪಡಿಸಿಯಾದರೂ, ಅಥವಾ ಯಾವ್ಯಾವ ಭಾಗಗಳಲ್ಲಿ ಯಾರ್ಯಾರು ಹೆಚ್ಚಾದ ತಿಳಿವಳಿಕೆಯನ್ನು ಹೊಂದಿರುವರೋ ಅವರುಗಳಿಂದ ಆಯಾಯ ಪ್ರಶ್ನೆ ಪತ್ರಗಳನ್ನು ತರಿಸಿಯಾದರೂ, ಪರೀಕ್ಷೆ ನಡೆಸಬೇಕು. ತಾವಾಗಲಿ, ಅಥವಾ ತಮ್ಮ ಅನುಮತಿ ಪಡೆದಸಹಾಯೋಪಾಧ್ಯಾಯರಾಗಲೀ ಪರೀಕ್ಷೆ ನಡೆಸಬಹುದು.

(೭) ದೇಹದಂಡನೆ.—

ಬಾಲಕರು ಪ್ರತಿದಿನವೂ ಕಾಲಕ್ಕೆ ಸರಿಯಾಗಿ ಬರುವಂತೆಯೂ, ಹಾಗೆ ಬಾರದಿದ್ದವನು ಪೋಷಕರಿಂದ ಸಾಕಾದಷ್ಟು ಕಾರಣವುಳ್ಳ ಕಾಗದವನ್ನು ತಾರದಿದ್ದರೆ ದಂಡಿಸುವುದೂ ಸಹ ಇವರ ಕರ್ತವ್ಯಗಳಲ್ಲಿ ಸೇರಿರುವುದು, ಮತ್ತು ಬಾಲಕರ ದುರ್ನಡತೆಯ ವಿಷಯವಾಗಿಯೂ, ಅವರ ವಿದ್ಯಾಭಿವೃದ್ಧಿಯ ವಿಷಯವಾಗಿಯೂ, ಅವರ ತಾಯಿ ತಂದೆಗಳಿಗೆ ಆಗಿಂದಾಗ್ಗೆ ತಿಳಿಸುತ್ತಿರಬೇಕು. ಪಾಠ ಹೇಳುವುದಕ್ಕೇ ವಿಶೇಷ ಕಾಲ ಕಳೆಯ ಕೂಡದು. ಆಫೀಸ್ ಕೆಲಸಕ್ಕೂ ಬೇರೇ ಕಾಲವನ್ನು ಇಟ್ಟುಕೊಳ್ಳಬೇಕು. ಇವರು ದಿನ 1 ಕ್ಕೆ 3 ಘಂಟೆಕಾಲ ಸ್ಕೂಲ್ ಪಾಠಕ್ಕೂ, ಮಿಕ್ಕ ಕಾಲವನ್ನು ಮೇಲ್ವಿಚಾರಣೆ ಆಫೀಸ್ ಕೆಲಸ ಮುಂತಾದವುಗಳಿಗೂ ಉಪಯೋಗಿಸಿಕೊಳ್ಳಬೇಕು. ಜನವನ್ನು ಮೆಚ್ಚಿಸುತ್ತೇನೆಂದು ಎರಡು ಕೆಲಸಗಳನ್ನೂ ಬೆರಕೆ ಮಾಡಿಕೊಂಡು ಬಾಲಕರು ವಿಷಯಗಳನ್ನು ಸರಿಯಾಗಿ ಹೇಳಿದಾಗ್ಗೂ ಸ್ಕೂಲ್ ಹಂಚೆಲ್ಲಾ ಹಾರಿಹೋಗುವಂತೆ ಆರ್ಭಟಮಾಡುತ್ತ, ಅವರನ್ನು ದಂಡಿಸುತ್ತ, ಆ ಸಮಯದಲ್ಲಿ ಬಂದ ಜನಗಳೊಡನೆ ತಮ್ಮ ವಿದ್ಯಾಬಲವಂ ಹೊಗಳಿಕೊಳ್ಳುತ್ತ ಕೆಲಸಮಾಡುವುದು ಸರಿಯಲ್ಲ. ಈ ಪದ್ಧತಿಯು ಕವ್ಮಿ ಸಂಖ್ಯೆಯ ಉಪಾಧ್ಯಾಯರಿರುವೆಡೆಗಳಲ್ಲಿ ಬೇಕಾದಷ್ಟಾಗೆ ನಡೆಯುವುದು. ಪ್ರತಿಯೊಬ್ಬರೂ ಅವರವರ ಕರ್ತ್ಯವ್ಯಗಳನ್ನು ನೋಡಿಕೊಳ್ಳುವುದೇ ದುಸ್ತರವು. ಸಾಲದುದಕ್ಕೆ ಒಬ್ಬಿಬ್ಬರು ರಜ ಹೊಂದಿದರೆ ಸ್ಕೂಲ್ ಕೆಲಸ ಎಷ್ಟರ ಮಟ್ಟಿಗೆ ನಡೆಯಬಹುದು! ಬೋಧಕರು ಇಂಥಾ ಸಂದರ್ಭಗಳಲ್ಲಿ ಶ್ರಮವೆಂದು ಪರಿಗಣಿಸದೆ ಉಪಕಾರ ಬುದ್ಧಿಯಿಂದ ಶಿಷ್ಟಗೇಳದೆ ಕೆಲಸಮಾಡಬೇಕು.

ಬಾಲಕರ ದುರ್ನಡತೆಗೆ ಮಾತ್ರ ದಂಡಿಸಬೇಕು. ಮಾತು ಮಾತಿಗೂ, ಚಿಕ್ಕ ಚಿಕ್ಕ ತಪ್ಪುಗಳಿಗೂ, ದಂಡಿಸಬಾರದು. ಭಾರಿಯಾದ ತಪ್ಪುಗಳಿಗೆ 6 ಏಟಿಗೆ ಮಿಾರದ ಶಿಕ್ಷೆಯನ್ನು ತಾವಾಗಲೀ ತಮ್ಮ ಅನುಮತಿಯಿಂದ ಸಹಾಯೋಪಾಧ್ಯಾಯರಾಗಲೀ ಮಾಡಬಹುದು. ಇತರ ತಪ್ಪುಗಳಿಗೆ ನಿಲ್ಲಿಸುವುದು. ಪಾಠಕ್ಕೆ ಬಾರದಂತೆ ತಡೆಯುವುದು, ನಂಬರ್ ಕಳೆಯುವುದು, ಬೈಯುವುದು, ಪಾಠಶಾಲೆಯಿಂದ ವಜಾ ಮಾಡುವುದು ಇತ್ಯಾದಿ ದಂಡನೆಗಳನ್ನು ತಪ್ಪಿತಕ್ಕೆ ತಕ್ಕಂತೆ ವಿಧಿಸಬೇಕು.

(೮) ದೇಹಪಾರ್ಶ್ವ್ಯ.—

ಇದು ಎಲ್ಲರಿಗೂ ಒಂದು ಸ್ಥಿರವಾದ ನಿಧಿಯು. ಪಾಠಶಾಲೆಯ ಕೆಲಸಗಳೆಲ್ಲ ಕ್ರಮವಾಗಿ ನಡೆಯಬೇಕಾದರೆ ಇದೊಂದು ಆಧಾರವಾದ ಶೀಲವು. ಇದಿಲ್ಲದಿ

ದ್ದರೆ ಕೆಲಸವು ಚುರುಕಾಗಿ ನಡೆಯಲಾರದು. ಉಪಾಧ್ಯಾಯರಿಗೂ, ಬಾಲಕರಿಗೂ, ಚಿತ್ತಸ್ಥೈರ್ಯ, ಧೈರ್ಯ ಸಂತೋಷವೆಂಬುವುಗಳೇ ಇರುವುದಿಲ್ಲ. ಮತ್ತು ಇದಿಲ್ಲದಿದ್ದರೆ ತನ್ನ ತಪ್ಪನ್ನು ನೋಡಿಕೊಳ್ಳದೆ ಮತ್ತೊಬ್ಬರಮೇಲೆ ತಿರಿಗಿಬೀಳುವಂತಾಗುವುದು. ಇದಕ್ಕೆ ಅಗತ್ಯವಾಗಿ ಗಮನ ಕೊಡಬೇಕು. ಮತ್ತು ತಮ್ಮ ಅವಯವಗಳಲ್ಲಿ ಯಾವ ನ್ಯೂನತೆಯೂ ಇಲ್ಲದಂತೆ ನೋಡಿಕೊಳ್ಳಬೇಕು. ಇಲ್ಲದಿದ್ದರೆ ಬಾಲಕರು ಅದನ್ನು ಅನುಕರಿಸುವುರು.

(೯) ಧ್ವನಿ.—

ತಕ್ಕಮಟ್ಟಿಗೆ ತರಗತಿಗೆಲ್ಲಾ ಕೇಳಿಸುವಂತಿರಬೇಕು, ಸ್ಪಷ್ಟವಾಗಿರಬೇಕು. ಧ್ವನಿ ಹೆಚ್ಚಾದರೆ ತಮ್ಮ ದೇಹಕ್ಕೂ ತೊಂದರೆಯಾಗಿ ಇತರ ತರಗತಿಗಳಿಗೂ ತೊಂದರೆಯಾಗಬಹುದು. ಮೆತ್ತಗೆ ಹೇಳಿದರೆ ಬಾಲಕರಿಗೆ ಕೇಳಿಸದಿರಬಹುದು. ಈ ಎರಡು ಪದ್ಧತಿಯನ್ನೂ ಬಾಲಕರು ಹಿಂದೆಯಾದರೂ ಅನುಕರಿಸಬಹುದು. ಅದುದರಿಂದ ಸ್ಪಷ್ಟವಾಗಿಯೂ, ತರಗತಿಗೆಲ್ಲಾ ಕೇಳಿಸುವಂತೆಯೂ ಇರಬೇಕು.

(೧೦) ಇಂದ್ರಿಯಗಳು.—

ಬೋಧಕರ ಇಂದ್ರಿಯಗಳು ಅತಿ ಚುರುಕಾಗಿರಬೇಕು. ಸಹಾಯೋಪಾಧ್ಯಾಯರ ಮತ್ತು ವಿದ್ಯಾರ್ಥಿಗಳ ಅವಿಧೇಯತೆಗೆ ಆಸ್ಪದವಿಲ್ಲದಂತೆ ನೋಡುತ್ತಿರಬೇಕು. ಅಂದರೆ ಉಪಾಧ್ಯಾಯುರು ಅತಿ ಜಾಗರೂಕರಾಗಿರಬೇಕು. ಇದಕ್ಕೆ ಅವರು ಕೂರುವ ಸ್ಥಳವು ಸರಿಯಾದ ಸ್ಥಳದಲ್ಲಿರಬೇಕು, ತರಗತಿಯ ಮೇಲೆಲ್ಲಾ ಇವರ ದೃಷ್ಟಿ ಇರಬೇಕು. ಪ್ರತಿದಿನವೂ ತರಗತಿಗಳಲ್ಲಿ ನಡೆದ ಪಾಠವನ್ನು ತನಿಖೆ ತೆಗೆದು ಕೊಳ್ಳಬೇಕು. ಯಾವ ನ್ಯೂನತೆಯೂ ಇವರ ದೃಷ್ಟಿಗೆ ಬೀಳುವಂತೆ ಎಲ್ಲರಿಗೂ ಸ್ಥಳವನ್ನೇರ್ಪಡಿಸಿ ಕೂಡಿಸಿರಬೇಕು, ನೇತ್ರ, ಶೋತ್ರ, ಈ ಎರಡು ಇಂದ್ರಿಯಗಳೂ ಚುರುಕಾಗಿರುವುದನ್ನು ತಿಳಿದರೆ ತಪ್ಪು ಮಾಡುವುದನ್ನು ಬಿಡುವರು.

(೧೧) ಮೋದಶ್ಯಕ್ಕೆ.—(೧)ತಾನು ಹೇಳಿಕೊಡತಕ್ಕ ವಿಷಯದಲ್ಲಿ ತಪ್ಪಿಲ್ಲದ ತಿಳಿವಳಿಕೆ.—

ಹೇಳುವ ವಿಷಯದಲ್ಲಿ ಪೂರ್ಣ ಜ್ಞಾನವಿದ್ದರೆ ಧೈರ್ಯವೂ, ತನ್ನಿಂದ ಬಾಲಕರಿಗೆ ಪ್ರಯೋಜನವೂ ಆಗುತ್ತದೆಂಬುದು ತನ್ನ ಮನಸ್ಸಿಗೇ ಗೊತ್ತಾಗುವುದು. ಪಾಠದಲ್ಲಿ ಕಷ್ಟಾಂಶಗಳು ಇದ್ದರೆ ಅದನ್ನು ಬಾಲಕರಿಗೆ ಬೋಧಿಸುವದಕ್ಕೆ ಉಪಾಯವು ತೋರುತ್ತದೆ. ಇಲ್ಲದಿದ್ದಲ್ಲಿ, " ಉವಾಧ್ಯರಿಗೆ ಬಾರದು, ಬಾಲಕರಿಗೆ ತಿಳಿಯದು "

ಎಂಬ ಸಾಮತಿಗೆ ಸರಿಹೋಗುವುದು. (2) ಯಾವಾಗಲೂ ವಿಶೇಷವಿದುತ್ತಿರುವುದು.—ಇದು ಮುಖ್ಯವಾದ ಗುಣವು, ಅನೇಕ ಗ್ರಂಥಗಳನ್ನೂ, ವರ್ತಮಾನ ಪತ್ರಿಕೆಗಳನ್ನೂ ಓದುತ್ತ ವಿಷಯಗಳನ್ನು ಸಂಗ್ರಹಮಾಡುತ್ತಿರಬೇಕು. ಇದರಿಂದ ಪಾಠಗಳಲ್ಲಿ ಬರುವ ತೊಡಕುಗಳನ್ನು ಹೋಗಲಾಡಿಸಿಕೊಳ್ಳಬಹುದಲ್ಲದೆ, ವಿವಿಧವಾಗಿ ಬದಲಾವಣೆಗಳನ್ನೂ ಮಾಡಿಕೊಂಡು ಪಾಠವನ್ನು ಬೋಧಿಸಬಹುದು. (3) ಉಲ್ಲಾಸ,—ಪಾಠಬೋಧನೆಯಲ್ಲಿ ಇದು ಅತ್ಯಾವಶ್ಯಕ. ಕ್ರೂರ ವಾಕ್ಯುಗಳಿಂದ ಬಾಲಕರಿಗೆ ಪಾಠ ಹೇಳಿದರೆ ಅವರಿಗೆ ಬೇಜಾರೇ ವಿನಾ ಮತ್ತಾವ ಫಲವೂ ಲಭಿಸದು. ಅವರು ಒಂದುವೇಳೆ ಅಪರೂಪವಾಗಿ ವಿಷಯಗಳನ್ನು ಕಲಿಯುದಿದ್ದರೂ ಸಂತೋಷದಿಂದ ಅವರ ತಪ್ಪನ್ನು ಅವರಿಗೆ ತೋರ್ಪಡಿಸಿದರೆ ಅವರು ತಮ್ಮ ದುರ್ವ್ಯಾಕ್ಯಕ್ಕೆ ವ್ಯಥೆಪಡುವುದಲ್ಲದೆ ಮುಂದೆ ಕೆಲಸವನ್ನೂ ಸರಿಯಾಗಿ ಮಾಡಿಕೊಂಡು ಹೋಗುವರು. ಈ ಗುಣವು ಕೆಲವರಲ್ಲಿ ಸಹಜವಾಗಿ ನೆಲೆಗೊಂಡಿರುವುದು, ಮತ್ತೆ ಕೆಲವರಿಗೆ ತಮ್ಮಲ್ಲಿರುವ ಸಹನ, ಬುದ್ಧಿವಂತಿಕೆ ಮಾಡುವ ಕೆಲಸದಲ್ಲಿ ನಂಬಿಕೆ, ಇವುಗಳಿಂದ ಈ ಶಕ್ತಿಯು ಬರುವುದು. ವಿಶೇಷ ತಿಳಿದವನೇ ಒಳ್ಳೆಯ ಉಪಾಧ್ಯಾಯನೆಂದು ಹೇಳಲಾಗುವುದಿಲ್ಲ, ಯಾವನು ಈ ಕೆಲಸಗಳನ್ನು ಅಕ್ಕರೆಯಿಂದ, ಮನಃಪೂರ್ವಕವಾಗಿ, ಉಲ್ಲಾಸದಿಂದ ಮಾಡುತ್ತಾನೋ ಅವನೇ ಒಳ್ಳೆಯ ಉಪಾಧ್ಯಾಯನು (4) ಆಳಿಕೆ ಸಾಮರ್ಥ್ಯ.—ಇದು ಪಾಠಶಾಲೆಯ ಕೆಲಸಕ್ಕೆ ಮೂಲಾಧಾರವು. ಕೆಲವರಿಗೆ ಇದು ಸ್ವಾಭಾವಿಕವಾಗಿಯೇ ಬಂದಿರುತ್ತದೆ. ಕೆಲವರಿಗೆ ದಿನಕ್ರಮೇಣ ಅಭ್ಯಾಸದಿಂದ ಬರತಕ್ಕುದಾಗಿದೆ.

(೧೦) ಶುಚಿ.—

ಬಾಲಕರು ಉಪಾಧ್ಯಾಯರನ್ನು ನೋಡಿ ಕಲಿಯುತಕ್ಕುದಾಗಿದೆ. ಆದುದರಿಂದ ಉಪಾಧ್ಯಾಯರು ಈ ವಿಷಯದಲ್ಲೂ ತುಂಬಾ ಎಚ್ಚರಿಕೆಯಿಂದಿರಬೇಕು. ಈರೀತಿ ಏರ್ಪಾಡದಿದ್ದರೆ ತಮ್ಮ ಗೌರವಕ್ಕೆ ಸಂದರ್ಭಾನುಸಾರವಾಗಿ ಹಾನಿಯುಂಟಾಗುವುದು, ಜನಮೆಚ್ಚಿಸುವ ಡಂಭವಾದ ಉಡಿಗೆಗಳಿಂದ ವೃಥಾ ದ್ರವ್ಯ ನಷ್ಟವೂ ಅವಮಾನವೂ ಅಲ್ಲದೆ, ಎಂದಿಗೂ ಭೂಷಣ ಬರಲಾರದು. ಇದೊಂದು ಮುಖ್ಯವಾದ ಸುಶೀಲವಾದುದರಿಂದ ಒಂದು ಕ್ರಮದಲ್ಲಿ ಇದನ್ನಾಚರಿಸಬೇಕು.

(೧೧) ಕುತೂಹಲ.—

ಇದರಿಂದ ಬಾಲಕರಿಗೆ ಉಲ್ಲಾಸವೂ, ಕೆಲಸದಲ್ಲಿ ಬುದ್ಧಿವಂತಿಕೆಯೂ ಬರುವುದು. ಬಾಲಕರಲ್ಲಿರುವ ಈ ಗುಣಕ್ಕೆ ತಕ್ಕಂತೆ ಪ್ರೋತ್ಸಾಹಿಸಬೇಕು.

(೧೦) ನ್ಯಾಯ ವಿಮರ್ಶೆ.—

ಈ ಪಾಠಶಾಲೆಯೆಂಬುದು ಒಂದು ನ್ಯಾಯಸ್ಥಾನವು. ಸತ್ಪುರುಷರ ಚರಿತ್ರೆಗಳಿಂದಲೂ, ಕ್ರಮವಾದ ದಂಡನೆಯಿಂದಲೂ, ಇದನ್ನು ಸರಿಪಡಿಸಿಕೊಳ್ಳಬೇಕು. ಇದರಿಂದ ಬಾಲಕರ ನಡತೆಯು ತಿದ್ದಲ್ಪಡುವುದು. ಎಲ್ಲರೂ ವಿಶ್ವಾಸದಿಂದ ನಡೆದುಕೊಳ್ಳುವರು. ಮುಖ್ಯ ಈ ಭಾಗದಲ್ಲಿ ಶಿಕ್ಷಕರಿಗೆ ಪಕ್ಷಪಾತವಿಲ್ಲದಿರಬೇಕು.

ಮೇಲೆ ಹೇಳಿದಂತೆ ಸಾಧ್ಯವಾದಮಟ್ಟಿಗೂ ಬೋಧಕರು ನಡೆಯುಲಾರಂಭಿಸಿದರೆ ನೀತಿಶಿಕ್ಷಣವು ತಿದ್ದಲ್ಪಡುವುದೆಂದು ಧಾರಾಳವಾಗಿ ಹೇಳಬಹುದು.

H. S.

ಅಕ್ಷರಾಭ್ಯಾಸ.

ಯಾವದೇಶವೇ ಆಗಲಿ ಮುಂದಕ್ಕೆ ಒಳ್ಳೇ ಸ್ಥಿತಿಗೆ ಬರಬೇಕಾದರೆ ಈಗ ಆ ದೇಶದ ಬಾಲಕರನ್ನು ಸರಿಯಾದ ರೀತಿಯಲ್ಲಿ ಬೆಳಸಬೇಕಾದುದು ಆವಶ್ಯಕವು

ಈಗ ಎಷ್ಟುಮಂದಿ ಬಾಲಕರು ಸರಿಯಾದ ರೀತಿಯಲ್ಲಿ ಬೆಳೆಯುವರೋ ದೇಶವು ಮುಂದಕ್ಕೆ ಅಷ್ಟು ಒಳ್ಳೇ ಸ್ಥಿತಿಯನ್ನು ಹೊಂದುವುದು. ಆದುದರಿಂದ ದೇಶಾಭಿಮಾನಿಗಳಾದ ಸರ್ವರೂ ಮಕ್ಕಳ ಬೆಳವಳಿಗೆಯು ವಿಚಾರವಾಗಿ ಗಮನಕೊಡಬೇಕು.

ಮಕ್ಕಳನ್ನು ಬೆಳಸುವುದೆಂದರೆ—ಅವರ ಸ್ವಭಾವವನ್ನರಿತು ಹೆಜ್ಜೆಹೆಜ್ಜೆಯಲ್ಲೂ ಜಾಗರೂಕತೆಯಿಂದ ನೋಡಿಕೊಳ್ಳುತ ಸ್ವಭಾವಕ್ರಮದಲ್ಲಿಯೇ ಅವರಿಗೆ ಕಲಿಸಬೇಕಾದ ವಿಷಯಗಳನ್ನು ಕ್ರಮವರಿತು ಕಲಿಸುತ ಬರುವುದು.

ಹೀಗೆ ಮಕ್ಕಳಿಗೆ ಕಲಿಸಬೇಕಾದ ವಿಷಯಗಳಲ್ಲೆಲ್ಲ ಓದುವುದೇ ಅತ್ಯಂತ ಉಪಯುಕ್ತವಾದುದು. ಮಕ್ಕಳಿಗೆ ಓದುವುದೊಂದು ಬಂದರೆ ಮುಂದೆ ಅವರು ಕಲಿಯಬೇಕಾದ ವಿಷಯಗಳನ್ನೆಲ್ಲಾ ಬಹಳ ಸುಲಭವಾಗಿ ಕಲಿಯಬಹುದು.

ಮೇಲಾಗಿ ಓದುವುದರ ಜೊತೆಯಲ್ಲಿ ಬರವಣಿಗೆಯು ಇದ್ದೇ ಇರುವುದು. ಓದು ಬರಹವನ್ನೂ ಬರಹವು ಓದನ್ನೂ ಪರಸ್ಪರ ಸಂಬಂಧಿಸಿಕೊಂಡೇ ಇರುವುದರಿಂದ ಓದನ್ನು ಬಿಟ್ಟು ಬರಹವನ್ನೂ ಬರಹವನ್ನು ಬಿಟ್ಟು ಓದನ್ನೂ ಕಲಿಸುವುದು

ಅಸಂಭವವು. ಸಂಭವವಾದ ಓದು ಬರಹಗಳೆರಡೂಪರಸ್ಪರ ಸಹಾಯಕಗಳಾಗಿಯೇ ಇರುವುವು. ಓದುಬಂದಹಾಗೆಲ್ಲ ಅಕ್ಷರಗಳ ಆಕೃತಿಗಳು ಮನಸ್ಸಿನಲ್ಲಿ ನೆಲೆಗೊಳ್ಳುವುದರಿಂದ ಬರೆಯುವುದು ಬಂದಹಾಗೆಲ್ಲ ಓದುವುದೂ ಹೀಗೆಯೇ ಸುಲಭವಾಗುವುದು.

ಓದುವುದೆಂದರೆ ಅಂಕಿತವಾಗಿರುವ ಅಕ್ಷರಗಳನ್ನು ಬಾಯಲ್ಲಿ ಉಚ್ಚರಿಸುವುದು. ಬರಹವು ಇವುಗಳ ಪ್ರತಿಕೃತಿಯೇ ಆಗಿರುವುದು.

ಈ ಓದುಬರಹಗಳಿಗೆ ಮೂಲಭೂತವಾದ ಅಕ್ಷರಪರಿಚಯವನ್ನು ಮಕ್ಕಳಿಗೆ ಯಾವರೀತಿಯಲ್ಲಿ ಉಂಟುಮಾಡಬೇಕೆಂಬುದನ್ನು ಮುಂದೆ ವಿಚಾರಮಾಡುವೆವು.

ಆದರೆ ಮಕ್ಕಳಿಗೆ ನೊದಲು ಉಂಟುಮಾಡಬೇಕಾದ ಈ ಅಕ್ಷರಪರಿಚಯವೇ ಬಹು ಕಷ್ಟವಾದುದು.

ಇದರಿಂದಲೇ ಹಿಂದಿನ ಉಪಾಧ್ಯಾಯರೂ ಜನಗಳೂ ಮಕ್ಕಳನ್ನು ಕ್ರೂರವಾಗಿ ದಂಡಿಸುತಿದ್ದುದು.

ಇಲ್ಲವಾದರೆ ಶಿಕ್ಷಕರು ಕೋದಂಡ, ಬೆತ್ತ, ಹೆಡಮುಡಿ, ಮೆಣಸಿನಕಾಯಿ ಹೊಗೆ ಮುಂತಾದುವುಗಳನ್ನು ತಮ್ಮ ಉಪಕರಣಗಳನ್ನಾಗಿಯೂ; ಗೃಹಸ್ಥರು ಶಾಲೆಯನ್ನು ಶಿಕ್ಷಣಸ್ಥಾನವನ್ನಾಗಿಯೂ; ಮಕ್ಕಳು ಪಾಳುಗೋಡೆ, ತಿಪ್ಪೆ, ಬಣಿ, ಹುಲ್ಲುಮೆದೆ ಮುಂತಾದವುಗಳನ್ನು ತಮ್ಮ ರಕ್ಷಣಸ್ಥಾನವನ್ನಾಗಿಯೂ ಎಣಿಸುತಿದ್ದುದೇಕೆ?

ವಾಚಕರೇ, ಇದು ಕಲಿಯುಗ. ಈಗ ಹಿರಣ್ಯಾಕ್ಷನ ರೌದ್ರಾವತಾರಕ್ಕೂ, ನರಸಿಂಹನ ಸಿಂಹಾವತಾರಕ್ಕೂ ಕಾಲವಲ್ಲ. ಪ್ರಹ್ಲಾದನನ್ನು ಹಿರಣ್ಯಾಕ್ಷನಂತೆ ತಿದ್ದಲೆಳಿಸಿದರೆ ನಮ್ಮ ಸಿಂಹಾವತಾರವೂ ಖಂಡಿತವಾಗಿ ಸಂಹಾರವಾಗುವುದೆಂಬುದು ಹಿಂದಿನ ಅನುಭವದಿಂದ ಜೆನ್ನಾಗಿ ತಿಳಿದಿರುವುದು. ಈಗ ಚಿರಜೀವಿಯಾದ ಪ್ರಹ್ಲಾದನಕಾಲವು. ಆದುದರಿಂದ ಚಿರಜೀವಿಯಾದೀ ಪ್ರಹ್ಲಾದನ ಸಹಜಸ್ಥಿತಿಯನ್ನು ತಿಳಿದಲ್ಲದೆ ನಮಗೆ ಪ್ರಯೋಜನವಿಲ್ಲ.

ಈಗ ಆದಿಯಲ್ಲಿ ಮಕ್ಕಳಿಗೆ ಕಲಿಸಬೇಕಾದ ಅಕ್ಷರಪರಿಚಯವು ಸುಲಭವಲ್ಲವೆಂದು ಹೇಳಿದಂತಾಯಿತು.

ಈ ಅಕ್ಷರಗಳ ಆಕೃತಿಯನ್ನು ಕುರಿತು ವಿಚಾರಮಾಡಿದರೆ ಎಂಥ ಅಕ್ಷರಗಳ ಕಡೆಗೆ ನಮ್ಮಮನಸ್ಸು ಎಳೆಯುವುದೆಂಬುದನ್ನು ನೋಡಬೇಕಾಗುವುದು.

ಈ ವಿಷಯದಲ್ಲಿ ಭಿನ್ನಾಭಿಪ್ರಾಯವಿರುವುದು. ಕೆಲವರು ಆಂಡಾಕಾರವೇ ಆಂದವೆಂದೂ, ಕೆಲವರು ಗೋಳಾಕಾರವೇ ಆಂದವಂದೂ ಹೇಳುವರು.

ಹೀಗೆ ಭಿನ್ನಾಭಿಪ್ರಾಯದಿಂದ ದುಂಡಾದ ಅಕ್ಷರಕ್ಕೆ ಕೆಲವರೂ, ಕೋಲಕ್ಷರಕ್ಕೆ ಕೆಲವರೂ ಪ್ರಾಶಸ್ತ್ಯವನ್ನು ಕುರಿತು ವಿಚಾರಮಾಡುತ ಹೋದರೆ ಕನ್ನಡಿಗರು ಈ ಬರವಣಿಗೆಗೆ ಹೇಳುವ ಮುಕ್ತಾಫಲಸಾಮ್ಯವನ್ನೂ ಅದಕ್ಕನುಸಾರವಾಗಿರುವ ಪೂರ್ವೀಕರ ಕೈಬರಹದ ಪುಸ್ತಕಗಳನ್ನೂ ನೋಡಬಹುದು. ಅಲ್ಲದೆ ಈಗಿನ ಅಚ್ಚಕ್ಷರಗಳೂ ಸಾಮಾನ್ಯವಾಗಿ ದುಂಡಸ್ಕೇ ಹೋಲುವುವು. ಇಂತಹ ಮುಕ್ತಾಫಲ ಸಾಮ್ಯವನ್ನು ಹೊಂದಿರುವ ನಮ್ಮ ಕನ್ನಡ ಬರವಣಿಗೆಗೆ ವರ್ತುಲಾಕೃತಿಯೇ ಮೂಲವೆಂದು ಧಾರಾಳವಾಗಿ ಹೇಳಬಹುದು.

ಆಕೃತಿಗಳಿಗೆಲ್ಲ ಮೂಲವಾದ ಗೊಳಾಕಾರವನ್ನು ದೂರದಿಂದ (ಎದುರಾಗಿ) ನೋಡಿದರೂ ಅದು ವರ್ತುಲಾಕಾರವಾಗಿಯೇ ಕಾಣುವುದು. ಅಲ್ಲದೆ ರಾತ್ರೀ ವೇಳೆಯಲ್ಲಿ ಆಕಾಶದಲ್ಲಿ ಕಂಗೊಳಿಸುವ ವೃದ್ಧಿ ಚಂದ್ರನನ್ನು ನೋಡುತ ಬಂದರೆ ವರ್ತುಲಭಾಗಗಳಲ್ಲನೇಕ ನಮ್ಮ ಗೋಚರಕ್ಕೆ ಬರುವುದು. ವರ್ತುಲಾಕೃತಿಯ ಮಹತ್ವದ ವಿಸ್ತಾರವನ್ನು ತೆಗೆದರೆ ಬಳೆಯು ಆಕಾರವು ಬರುವುದು.

ಈ ಗೋಳ ವರ್ತುಲ ಮತ್ತು ಬಳೆಯು ಆಕೃತಿಗಳಿಗೆ ನಿದರ್ಶನವಾಗಿ ಸೂರ್ಯ ಚಂದ್ರರು, ಚೆಂಡು, ನಿಂಬೆ, ಚಕ್ಕೊತ, ಬೇಲ ಮುಂತಾದ ಹಣ್ಣುಗಳು, ಬೆಲ್ಲ ರವೆ ಲಾಡು ಮುಂತಾದ ಉಂಡೆಗಳು; ದೋಸೆ, ಹಪ್ಪಳ, ಜಾಗಟೆ, ನಾಣ್ಯ ಮುಂತಾದುವು ಕೈಬಳೆ, ಕಾಲುಬಳೆ, ಕಪ್ಪ, ಡಾಬು, ಉಂಗುರ, ಕೋಡಬಳೆ ಮುಂತಾದುವುಗಳು, ಇಂಥವುಗಳನ್ನು ನೋಡುವುದರಿಂದ ಸ್ಪಷ್ಟವಾಗುವುವು.

ಮಕ್ಕಳಿಗೆ ಬಹಳ ಇಷ್ಟವಾಗಿರುವ ಕೋಡಬಳೆಯನ್ನು ಹೋಲುವ ಗಾಜಿನ ಬಳೆಯನ್ನು ಇಬ್ಬರಿಗೆ, ನಾಲ್ವರಿಗೆ ಮುಂತಾಗಿ ಹಂಚುವುದರಿಂದ ವರ್ತುಲ ಭಾಗಗಳನ್ನು ತಿಳಿಸಬಹುದು. ಸರಳರೇಖಾಕಾರವಾದ ಬಳಪ ಸೀಸದಕಡ್ಡಿ ಮುಂತಾದುವುಗಳು ಮಕ್ಕಳಿಗೆ ಬಳಕೆಯಾಗಿಯೇ ಇರುವುದು. ಈ ಸಾಧನಗಳಿಂದ ಅಕ್ಷರಾಭ್ಯಾಸವನ್ನು ಹೇಗೆ ಮಾಡಿಸಬಹುದೆಂಬುದನ್ನು ಕುರಿತು ವಿಚಾರ ಮಾಡುವುದಕ್ಕಿಂತ ಮುಂಚೆ ಮಕ್ಕಳ ಸ್ವಭಾವವನ್ನು ಕುರಿತು ಸ್ವಲ್ಪಮಟ್ಟಿಗೆ ಯೋಚಿಸುವುದು ಉತ್ತಮ.

ಮಕ್ಕಳ ಸ್ವಭಾವವೆಲ್ಲ ಒಂದೇ ರೀತಿಯಾಗಿರುವುವೆಂದು ಹೇಳುವುದಕ್ಕಾಗದಿದ್ದರೂ ಬಟ್ಟೆಸಲ್ಲಿ ಮಗುವಿನ ಸ್ವಭಾವವು ಇಂಥದೆಂದು ಸಾಮಾನ್ಯವಾಗಿ ಹೇಳಬಹುದು. ಹೀಗೆ ಹೇಳಲು ಮಗುವಿನ ದೇಹ ಬುದ್ಧಿ ನಡತೆ ಇವುಗಳನ್ನು ಕುರಿತು ವಿಚಾರ ಮಾಡಿದರೆ ಸಾಕು.

ದೈಹಿಕಗುಣಗಳಲ್ಲಿ ಮುಖ್ಯವಾದುದು ಚಟವಟಿಕೆ. ಈ ಚಟವಟಿಕೆಯಿಂದ ಮಗುವಿಗೆ ವಿಧವಿಧವಾದ ಕೆಲಸಗಳನ್ನು ಮಾಡಲು ಕುತೂಹಲವಿರುವುದು. ಮಕ್ಕಳಲ್ಲಿ ಸಹಜವಾಗಿರುವ ಈ ಚಟವಟಿಕೆಗೆ ಪ್ರೋತ್ಸಾಹ ಕೊಟ್ಟು ಅವರಿಂದ ಕೆಲಸ ಮಾಡಿಸುತ ಬಂದರೆ ದೇಹದ ಬೆಳವಣಿಗೆಗೂ ಮತ್ತು ಬುದಿಯ ಬೆಳವಣಿಕೆಗೂ ಬಹುಮಟ್ಟಿಗೆ ಸಹಾಯವಾಡಿದಂತಾಗುವುದು.

ದೇಹಜನ್ಯವಾದ ಚಟವಟಿಕೆಯು ಮಗುವಿಗೆ ಹೇಗೆ ಸಹಜವೋ ಹಾಗೆಯೇ ಅದಕ್ಕೆ ಬುದ್ಧಿಯ ಚಟವಟಿಕೆಯೂ ಸಹಜವಾಗಿದ್ದು ಅದು ಬಹುಮಟ್ಟಿಗೆ ಬಾಲ್ಯದಲ್ಲಿ ಇಂದ್ರಿಯಗಳ ಮೂಲಕ ಹೊರಪಡುವುದರಿಂದ ಈ ಬುದ್ಧಿಯ ಸ್ವಭಾವಕ್ಕೆ ತಕ್ಕಂತೆ ವಿಷಯಗಳನ್ನು ಎಷ್ಟೆಷ್ಟುವಿಧವಾಗಿ ಮಕ್ಕಳ ಇಂದ್ರಿಯಗಳಿಗೆ ಗೋಚರಪಡಿಸಬಹುದೋ ಅಷ್ಟುವಿಧದಲ್ಲಿಯೂ ಅವರ ಇಂದ್ರಿಯಗಳ ಗೋಚರಕ್ಕೆ ತರುತಿರಬೇಕು.

ಮತ್ತು ಎಳೆಯ ಸಸಿಯಂತೆ ಮಗುವನ್ನು ನಾವು ಯಾವಕಡೆಗಾದರೂ ಬಗ್ಗಿಸುವುದು ಸುಲಭವಾಗಿರುವುದರಿಂದ ಮಕ್ಕಳಲ್ಲಿ ನಾವು ಉಂಟುಮಾಡಬೇಕಾದ ಗುಣಗಳಿಗೆ ತಕ್ಕಂತೆ ಅವರಿಂದ ತಪ್ಪದೆ ಕೆಲಸಮಾಡಿಸುತ ಬಂದರೆ ಅವರ ನಡತೆಯು ಸರಿಪಡುವುದಕ್ಕೆ ಬಹುಮಟ್ಟಿಗ ಸಹಾಯವಾಗುವುದು.

ಮಕ್ಕಳಲ್ಲಿ ಉಂಟುಮಾಡಬೇಕಾದ ಗುಣಗಳಾವಾವುವು ? ಎಂಬುದನ್ನು ತಿಳಿಯಲು ಸ್ವಚ್ಛಂದವಾಗಿ ಅವರು ಆಡುವ ಆಟಗಳನ್ನು ಪರೀಕ್ಷಿಸುತ ಬರಬೇಕು. ಹೀಗೆ ಮಾಡುವುದರಿಂದ ಅವರಲ್ಲಿ ಸಹಜವಾಗಿರುವ ಗುಣಗಳು ಬಹುಚನ್ನಾಗಿ ಸ್ಪಷ್ಟಪಡುವುವು.

ಆಡುವ ಕುತೂಹಲವು ಮಕ್ಕಳಲ್ಲಿ ನಿರತವಾಗಿ ಇದ್ದೇ ಇರುವುದು. ಇದು ಮಗುವಿಗೆ ಸಹಜವು. ಆದುದರಿಂದ ಈ ಆಟವಾಡುವ ಶಕ್ತಿಯನ್ನೇ ನಮ್ಮ ಅಕ್ಷರಾಭ್ಯಾಸ ಕ್ರಮಕ್ಕೂ ಉಪಯೋಗಿಸಿಕೊಳ್ಳಬೇಕು. ಇದರಿಂದ ಮಕ್ಕಳ ಎಲ್ಲಾ ಶಕ್ತಿಗಳನ್ನೂ ವೃದ್ಧಿಗೊಳಿಸಲು ಮಗೆ ಸಾಕಾದಷ್ಟು ಅವಕಾಶ ದೊರೆತಂತಾಗುವುದು.

ಇದರಜೊತೆಗೆ ಗಾನವನ್ನೂ ಸೇರಿಸಿದರೆ ಮೊದಲೇ ಹೆಚ್ಚಾಗಿರುವ ಮಕ್ಕಳ ಕುತೂಹಲವು ಎರಡರಷ್ಟಾಗಿ ದ್ವಿಗುಣವಾದ ಫಲವನ್ನು ಕೊಡುವುದು. ಇದು

ಹಜವೇ. ಏಕೆಂದರೆ: ಗಾನದಿಂದುಂಟಾಗುವ ಫಲವು ಸದ್ಯಃಫಲವು. ಈ ಫಲ
ನ್ನು ಪಶ್ವಾದಿಗಳೂ ಕೂಡ ತಿಳಿಯಬಲ್ಲವು. ಹಾವಾಡಿಗನ ನಾಗಸ್ವರವನ್ನು ಕೇಳಿ
ಸರ್ಪವೂ ಬೆರಗಾಗುವುದನ್ನು ನಾವು ನೋಡಿಯೆ ಇರುವೆವು. ಆಳುತಿರುವ ಒಂದು
ಸಣ್ಣ ಶಿಶುವು ಇಂಪಾದ ಹಾಡನ್ನು ಕೇಳಿ ಸುಮ್ಮನಾಗುವುದನ್ನೂ ನಾವು ಕಂಡೇ
ಇರುವೆವು. ಕಾವ್ಯಾದಿಗಳಲ್ಲೂ ಗಾನದಿಂದ ಜಿಂಕೆಯು ಮೆಲುಕುಹಾಕುವುದನ್ನು
ಬಿಟ್ಟಿತೆಂದೂ, ದುಷ್ಟಮೃಗಗಳು ಜಾತಿವೈರವನ್ನು ಮರೆತವೆಂದೂ ಕೇಳಿರುವೆವು.
ಇಂತಹ ಗಾನದ ಸುಖವನ್ನು ಸ್ವಂತವಾಗಿ ಅನುಭವಿಸುವ ಮಕ್ಕಳ ಕುತೂಹಲವು
ಇಮ್ಮಡಿಯಾಗುವುದರಲ್ಲಿ ಅತಿಶಯವೇನು ?

ಹಿಂದೆ ಹೇಳಿದಂತೆ ವರ್ತುಲ ಅರ್ಧವರ್ತುಲ ವರ್ತುಲವಾದ ಮತ್ತು ಸರಳ
ರೇಖೆ ಈ ಸಾಧನಗಳನ್ನು ಕೇವಲ ಸುಲಭ ಬೆಲೆಗೆ ದೊರೆಯುವ ಬಳೆಗಳಿಂದ ಕಲ್ಪಿ
ಸಿಕೊಂಡು ಇವುಗಳಿಂದ ಮಕ್ಕಳ ಕೈಲಿ ಕೆಲಸಮಾಡಿಸುತ ಬಂದರೆ ಅಟದರೂಪ
ವಾಗಿ ಶ್ರಮಪಡಿಸಿ ಅಡಿಸುತ ಅದಕ್ಕೆ ತಕ್ಕಂತೆ ಗಾನವನ್ನೂ ಶೇರಿಸಿಕೊಂಡು
ಅಕ್ಷರಾಭ್ಯಾಸಮಾಡಿಸುತ ಬಂದರೆ ಮಕ್ಕಳು ಸದಾ ಸಂತೋಷಚಿತ್ತರಾಗಿ ಕೆಲಸ
ಮಾಡುತ ಬರುವರಲ್ಲದೆ ಮೂರ್ಖತನ ಪಾಲುಮಾಡಿಕೆ ತುಂಟತನ ಮುಂತಾದ ದು
ರ್ಗುಣಗಳು ತಲೆದೋರುವುದಕ್ಕೇ ಅವಕಾಶವಿಲ್ಲದಂತಾಗಿ ಓದುಬರಹಗಳಿಂದ ಮ
ಕ್ಕಳಲ್ಲಿ ಅಭಿವೃದ್ಧಿ ಹೊಂದಬೇಕಾದ ಎಲ್ಲಾ ಶಕ್ತಿಗಳೂ ಅಭಿವೃದ್ಧಿಹೊಂದುತ ಒರು
ವುದು. ಅಲ್ಲದೆ ಮಕ್ಕಳು ಕುತೂಹಲದಿಂದ ಈ ಕೆಲಸಕ್ಕೆ ಆರಂಭಿಸಲು ತಕ್ಕ ಅವ
ಕಾಶವನ್ನು ಕಲ್ಪಿಸಿರುವ ಕಾರಣ ಅವರ ಅವಧಾನವು ಈ ವಾತದಲ್ಲಿ ನೆಲೆಗೊಳ್ಳು
ವುದು. ಇದರಿಂದ ಬೋಧಕರಿಗೂ ಶ್ರಮ ಕಡಮೆಯಾದಂತಾಗುವುದು.

ಆದಿಯಲ್ಲಿ ಮಕ್ಕಳೊಡನೆ ಪ್ರಶ್ನೋತ್ತರರೂಪವಾಗಿ ಹೀಗೆ ಸಂಭಾಷಿಸಬ
ಹುದು.

ಮಕ್ಕಳಿರಾ, ನೀವು ಇಲ್ಲಿಗೇಕೆ ಬಂದಿರಿ? ಹಿಂದೆ ಎಲ್ಲಿರುತಿದ್ದಿರಿ? ಎಂದು ಕೇಳಿ
ದರೆ ಓದುಬರಹಗಳನ್ನು ಕಲಿಯುವುದಕ್ಕೆ ಬಂದಿರುವೆವು. ಮನೆಯಲ್ಲಿರುತಿದ್ದೆವು.
ಎಂದು ಹೇಳುವರು. ಒಂದುವೇಳೆ ಹಾಗೆ ಹೇಳದಿದ್ದರೆ ಸ್ಕೂಲಿನಲ್ಲಿರುವ ಹುಡುಗ
ರೆಲ್ಲರೂ ಓದುತ ಬರೆಯುತ ಇರುವುದನ್ನು ಅವರಿಗೆ ತೋರಿಸುವುದು ಅವಶ್ಯವಾದರೆ
ಮೇಲಿನ ತರಗತಿಯ ಒಂದೆರಡು ಹುಡುಗರನ್ನು ಕರೆದು ಮಕ್ಕಳಿಗೆಲ್ಲಾ ಬಳಕೆಯಾ
ಗಿರುವ ಒಂದೆರಡು ಮಾತುಗಳನ್ನು ಹೇಳಿ ಬರೆಯಿಸಿ ಅದನ್ನೇ ಓದಿಸಬಹುದು.
ಹೀಗೆ ಮಾಡುವುದರಿಂದ ಓದುಬರಹಗಳನ್ನು ಕಲಿಯುವುದಕ್ಕೆ ಬಂದಿರುವೆವೆಂಬು

ದನ್ನು ಸುಲಭವಾಗಿ ಹೊರಡಿಸಬಹುದು. ಪುನಃ ಈಗ ನೀವು ಕಲಿತಿರುವುದೇನೆಂದು ಕೇಳಿದರೆ ಏನೂ ಕಲಿತಿಲ್ಲವೆನ್ನುವರು. ಎಳೆಯ ವ.ಗುವಿಗೂ ತಮಗೂ ಇರುವ ವ್ಯತ್ಯಾಸಗಳನ್ನು ಹೇಳಿಸುತ್ತ ಬಂದರೆ ಮಗುವಿಗೆ ಮಾತನಾಡುವುದಕ್ಕೆ ಬರುವುದಿಲ್ಲ ನಮಗೆ ಮಾತು ಬರುವುದು. ಎಂದು ಹೇಳುವರು.

ಸರಿ. ನೀವು ಮಾತನ್ನು ಮನೆಯಲ್ಲಿಯೇ ಕಲಿತುಬಿಟ್ಟಿರಿ. ಇಲ್ಲಿ ಓದು ಬರಹಗಳನ್ನು ಕಲಿಯುವುದಕ್ಕೆ ಬಂದಿದೀರಿ. ಹಾಗಾದರೆ ಈಗ ಹೇಳಿ. ಏನನ್ನು ಓದುವುದು? ಏನನ್ನು ಬರೆಯುವುದು? ಎಂದು ಮುಂತಾಗಿ ಪ್ರಶ್ನೆ ಮಾಡುವುದರಿಂದ ನಾವು ಆಡುವ ಮಾತುಗಳನ್ನು ಒಂದೊಂದಾಗಿ ಬರೆಯುವುದು ಬರೆದುದನ್ನು ಓದುವುದು ಎಂದು ಹೇಳಿಸಬೇಕು. ಹೀಗೆಯೇ ನಾವು ಆಡುವ ಪ್ರತಿ ಮಾತುಗಳಲ್ಲೂ ಕೆಲ ಕೆಲವು ಅಕ್ಷರಗಳು ಸೇರಿರುವವೆಂಬುದನ್ನೂ ಹೇಳಿಸಬಹುದು.

ಇನ್ನು ಕೆಂಡರ್‌ಗಾರ್ಟ್ನ್ ಪದ್ಧತಿಗನುಸಾರವಾಗಿ ಅಕ್ಷರಾಭ್ಯಾಸವನ್ನು ಮಾಡಿಸುವುದು ಹೇಗೆಂಬುದನ್ನು ವಿವರಿಸುವೆವು.

ಮೊದಲು ಮಕ್ಕಳನ್ನು ಹೊರಗೆ ಕರೆದುಕೊಂಡು ಹೋಗಿ ಚಂಡಾಟವನ್ನು ಆಡಿಸುವುದು. ಈ ಆಟಕ್ಕೆ ತಕ್ಕಂತೆ ಗಾನವನ್ನು ಹೇಳಿಸುವುದು. ತೋಟಕ್ಕೆ ಕರೆದುಕೊಂಡು ಹೋಗಿ ಚಂಡಿನಂತೆ ದುಂಡಗಿರುವ ಹಣ್ಣುಗಳನ್ನು ತೋರಿಸುವುದು. ತರಗತಿಯಲ್ಲಿ ಚಂಡಿನಂತೆ ದುಂಡಗಿರುವ ಮತ್ತು ಅವರು ತಿನ್ನುವ ಉಂಡೆ ಮುಂತಾದುವುಗಳನ್ನು ಜ್ಞಾಪಿಸುವುದು. ಮುಸಿ ಹಿಡಿದಿರುವ ಗಾಜಿನಿಂದ ಸೂರ್ಯನನ್ನೂ, ಚಂದ್ರನನ್ನೂ ತೋರಿಸಿ ಇವರೂ ಚಂಡಿನಾಕಾರವಾಗಿಯೇ ಇರುವರೆಂದು ಹೇಳುವುದು. ಮಣ್ಣಿನಿಂದ ಚಂಡಿನ ಮಾದರಿಯನ್ನು ಮಾಡಿಸುವುದು. ಡ್ರಾಯಿಂಗ್ ಮತ್ತು ಬರವಣಿಗೆಗಳಲ್ಲಿ ಚಂಡಿನಂತೆ ಬರೆಯಿಸುವುದು. ಈ ದುಂಡಾಗಿರುವ ಪ್ರತಿ ಪದಾರ್ಥಗಳನ್ನೂ ಪರಸ್ಪರ ಹೋಲಿಸುವುದು. ವಸ್ತುಪಾಠಕ್ಕೆ ಇವುಗಳಲ್ಲಾವುದಾದರೂ ಒಂದನ್ನು ನಿಷ್ಕರ್ಷಿಸಿಕೊಂಡು ಅದರ ವಿಷಯವನ್ನು ಕ್ರಮವಾಗಿ ವಿಮರ್ಶೆಮಾಡುವುದು, ಇದೇರೀತಿಯಾಗಿ ವರ್ತುಲ ಮತ್ತು ಬಳೆಯು ಆಕೃತಿಗಳನ್ನು ತಿಳಿಸುವುದು. ತೋಟಕ್ಕೆ ಕರೆದುಕೊಂಡು ಹೋದಾಗ ಬಾಳೆಯ ದಿಂಡು ಅಥವಾ ಬಾಳೆಯ ಹಣ್ಣು ಇಲ್ಲವೇ ಸೌತೇಕಾಯಿ ಇಂಥವುಗಳನ್ನು ಬಿಲ್ಲೆ ಬಿಲ್ಲೆಗಳಾಗಿ ಕೊರೆದು ಹುಡುಗರಿಗೆಲ್ಲಾ ಕೊಟ್ಟು ವರ್ತುಲಾಕೃತಿಗೆ ನಿದರ್ಶನವೆಂದು ಹೇಳುವುದು ಮಧ್ಯದ ತಿರುಳನ್ನು ತೆಗೆಸಿ ಬಳೆಯು ಆಕೃತಿಗೆ ನಿದರ್ಶನವೆಂದು ಹೇಳುವುದು.

ಇಷ್ಟಾದನಂತರ ಒಂದು ಕೋಡಬಳೆಯನ್ನು ಇಬ್ಬರು, ನಾಲ್ವರು ಹಂಚಿ ಕೊಳ್ಳಬೇಕಾಗುವಂಥ ನಿದರ್ಶನಗಳಿಂದ ಅರ್ಧ ಬಳೆ, ಕಾಲುಬಳೆಯ ಚೂರುಗಳನ್ನು ತೋರಿಸುವುದು. ಹಿಂದಿನಂತೆ ಇವನ್ನೂ ಎಲ್ಲ ಪಾಠಗಳಿಗೂ ಅನ್ವಯಿಸಿಕೊಳ್ಳಬೇಕು. ಹೀಗೆಯೇ ಸರಳ ರೇಖಾಕೃತಿಗೆ ನಿದರ್ಶನವಾಗಿ ಹಂಚಿ ಕಡ್ಡಿಯಂಥವುಗಳನ್ನು ತೋರಿಸಿದನಂತರ ಮಕ್ಕಳಿಗೆಲ್ಲಾ ಕಿಂಡರ್ ಗಾರ್ಟನ್ ಕರಣಗಳ ಪೆಟ್ಟಿಗೆಯಂತೆ ಒಂದೊಂದು ಸಣ್ಣ (ಪೇಪರ್ ಬಾಕ್ಸ್) ಪೆಟ್ಟಿಗೆಯನ್ನು ಮಾಡಿಸಿದ್ದು ಅವುಗಳಲ್ಲಿ ಈ ಸಾಧನ (ಉಪಕರಣ) ಗಳನ್ನು ತುಂಬಿ ಕೊಡುವುದು. ಬೋಧಕರು ತಾವು ಇಂಥ ಪೆಟ್ಟಿಗೆಯೊಂದನ್ನು ಇಟ್ಟುಕೊಂಡು ಮಕ್ಕಳಿಗೆಲ್ಲಾ ಕಾಣಿಸುವಂತೆ—

ಮಕ್ಕಳಿರಾ, ಇಲ್ಲಿ ನೋಡಿ ನನ್ನ ಕೈಯಲ್ಲೇನಿರುವುದು, ಒಂದು ಬಳೆ. ಇದನ್ನು ಈ ಮೇಜಿನ ಮೇಲೆ ಇಡುತ್ತೇನೆ. ಎಲ್ಲಿ ಎಲ್ಲರೂ ಹೀಗೆಯೇ ನಿಮ್ಮನಿಮ್ಮ ಮುಂದುಗಡೆ ಇಡಿ ಎಂದು ಹೇಳಿ ಇಡಿಸುವುದು. ಹೀಗೆಯೇ ಬಳೆಯ ಮೇಲ್ಭಾಗದಲ್ಲಿ ಒಂದು ಕಡ್ಡಿಯನ್ನೂ ಕಡ್ಡಿಯ ಬಲಪಕ್ಕಕ್ಕೆ ತಲೆಕಟ್ಟಿನ ಆಕೃತಿಯು ಬರುವಂತೆ ಕಾಲು ಬಳೆಯ ಚೂರನ್ನೂ ಇಡಿಸಿದನಂತರ ಇದೊಂದು ಅಕ್ಷರ. ಇದರ ಹೆಸರು 'ರ' ಎಂದು ಹೀಗೆಹೇಳಿ ಈ 'ರ' ಕಾರವು ಜೊತೆಗೆ ಒಬ್ಬರೂ ಇಲ್ಲದೆ ಒಂಟಿಯಾಗಿರುವುದರಿಂದ ಬೇಜಾರು ಹೊಂದಿ ಅಳುತಿದೆಯೆಂದೂ ಮುಂತಾಗಿ ಒಂದು ಸಣ್ಣ ಕಥೆಯನ್ನು ಹೇಳಿ, ತಕ್ಕಂತೆ ಒಂದು ಹಾಡನ್ನೂ ಕಲ್ಪಿಸಿದ್ದು ಹಾಡನ್ನು ಹೇಳುತಾ ಜೋಡಿಸುವಂತೆ ಹೇಳುವುದು. ರಚನೆಗೆ ತಕ್ಕಂತೆ ಹಲಗೆಯಮೇಲೆ ಬರೆಯಿಸುವುದು.

ಹೀಗೆ ಅಕ್ಷರಗಳನ್ನೆಲ್ಲಾ ತಿಳಿಸಿದನಂತರ ಗುಣಿತಾಕ್ಷರಗಳನ್ನೂ ಆಮೇಲೆ ಸಂಯುಕ್ತಾಕ್ಷರಗಳನ್ನೂ ತಿಳಿಸಬಹುದು. ಈ ಸಂಯೋಗ ಮತ್ತು ಸಂಯುಕ್ತಾಕ್ಷರಗಳನ್ನು ತಿಳಿಸುವಾಗ ಮೇಲಿನ ಮಾರ್ಗವನ್ನು ಕೊಂಚ ಬದಲಾಯಿಸಿಕೊಳ್ಳಬೇಕು.

ಬದಲಾಯಿಸಿಕೊಳ್ಳಬೇಕಾದ ಮಾರ್ಗವೂ ಕಲ್ಪಿಸಬಹುದಾದ ಕಥೆಗಳೂ ಸಹ ಅಕ್ಷರಾಭ್ಯಾಸಕ್ರಮವೆಂಬ ಪುಸ್ತಕವನ್ನು ನೋಡುವುದರಿಂದ ತಿಳಿಯುವುದು. ಗಾನಕ್ಕೆ ಮೇಲೆ ಹೇಳಿರುವ ರಚನೆಗನುಸಾರವಾದೊಂದು ಗಾನವನ್ನು ಇಲ್ಲಿ ಬರೆದು ಭಾಷಣವನ್ನು ಮುಗಿಸಿರುವೆನು,

ರಾಗ ॥ ಜುಂಜೋಟಿ ॥ ಏಕತಾಳ.

ಆಹಾ ನೋಡೈಯ್ಯ, ಶಾಬಾಸು ಈಆಟ । ಆಹಾ ॥ಪಲ್ಲವಿ॥

ಮಿದುವಾದ ಕೈಯೊಳೆ । ಮುದದಿಂದ ರಚಿಪುದ ॥ ಹದವಾದ ಕಡ್ಡಿಯು। ಮುದವೀವ ಬಳೆಗಳ ॥ ೧ ॥

ಕೆಳಗೊಂದು ಬಳೆಯನು । ಮೇಲೊಂದು ಕಡ್ಡಿಯು ॥ ಬಲಕೊಂದು ಪಾದವು। ಮೇಲಾಗಿ ರಚಿಪೆವು ॥ ೨ ॥

ಜೊತೆಯಾಗಿ ಬಾಲರು । ಜೊತೆಮಾಡೆ 'ರ' ವನ್ನು । ಜೊತೆಗೊಬ್ಬರಿಲ್ಲದೆ ಅತಿಯಾಗಿ ಅಳುವುದ ॥೩॥

ವ್ಯಾಕರಣ.

ವ್ಯಾಕರಣಶಾಸ್ತ್ರದ ರೀತಿಯಾಗಿ ಶಬ್ದಗಳು ಪುಲ್ಲಿಂಗ ಸ್ತ್ರೀಲಿಂಗ ನಪುಂಸಕ ಲಿಂಗವೆಂದು ಕರೆಯಲ್ಪಡುತ್ತವೆಯಷ್ಟೆ? ಈ ಲಿಂಗದ ವಿಷಯದಲ್ಲಿ ಹೊಸಕನ್ನಡದ ವ್ಯಾಕರಣವಾದ ಶಬ್ದಾದರ್ಶವೆಂಬ ಗ್ರಂಥದಲ್ಲಿ ಹೇಳಿರುವದರಮೇಲೆ ಸ್ವಲ್ಪ ವಿಚಾರಮಾಡುತ್ತೇವೆ. ಮತ್ತು ಅದರಿಂದ ಶಬ್ದಾದರ್ಶ ಪಾಠಕರಿಗೆ ಸ್ವಲ್ಪಮಟ್ಟಿಗೆ ಆ ವಿಷಯದಲ್ಲಿ ಸಹಾಯವಾದೀತೆಂದು ನಂಬುತ್ತೇವೆ.

ಲಿಂಗವೆಂದರೇನು? ಲಿಂಗವೆಂದರೆ ಚಿಹ್ನೆ. "ಪಾಳಿಕೇತುರ್ಧ್ವಜೋಲಿಂಗಂ" ಎಂದು ಅಮರವು. ವಸ್ತುಗಳಲ್ಲಿರುವ ಸ್ತ್ರೀತ್ವ ಪುಂಸ್ತ್ವ ನಪುಂಸಕತ್ವಗಳೆಂಬುವೆ ಇಲ್ಲಿ ಲಿಂಗವೆಂಬ ಶಬ್ದಕ್ಕೆ ಅರ್ಥವು. ಅದಕಾರಣ ಸ್ತ್ರೀತ್ವ ಪುಂಸ್ತ್ವ ನಪುಂಸಕತ್ವಗಳೆಂಬ ಈ ಲಿಂಗವು ವಸ್ತುಗಳನ್ನು ಹೊಂದಿರುವುದರಿಂದ ವಸ್ತು ಧರ್ಮಗಳಾಗಿವೆ. ಅದರೆ ಇದರಂತೆ ಲಿಂಗವು ವಸ್ತುಧರ್ಮವಾದರೆ ಈ ವಸ್ತುವು ಪುಲ್ಲಿಂಗ (ಗಂಡು) ಈ ವಸ್ತು ಸ್ತ್ರೀಲಿಂಗ (ಹೆಣ್ಣು) ಇದು ನಪುಂಸಕಲಿಂಗ ಎಂದು ಈ ಲಿಂಗವನ್ನು ಒಂದು ವಸ್ತುವಿನಲ್ಲಿ ಅಥವಾ ಶಬ್ದದ ಅರ್ಥದಲ್ಲಿ ವ್ಯವಹರಿಸಬೇಕಲ್ಲದೆ, ಈ ಶಬ್ದವು ಪುಲ್ಲಿಂಗ ಆ ಶಬ್ದವು ಸ್ತ್ರೀಲಿಂಗ ಎಂಬದಾಗಿ ಲಿಂಗವನ್ನು ಆಯಾ ಶಬ್ದಗಳಲ್ಲಿ ವ್ಯವಹರಿಸುವುದು ಹೇಗೆ? ಎಂದು ಆಕ್ಷೇಪ ಬರಬಹುದು. ಅದು ನಿಜವು. ಲಿಂಗವು ಅರ್ಥಗತವಾದರೂ ಶಬ್ದಗತವಾಗಿರುವಂತೆ ವ್ಯಾಕರಣ ಶಾಸ್ತ್ರಕಾರರು ಇಟ್ಟುಕೊಂಡಿದಾರೆ.

ಆದರೆ ಪುರುಷರನ್ನು ತಿಳಿಸುವ ಶಬ್ದವು ಪುಲ್ಲಿಂಗವು. ಸ್ತ್ರೀಯರನ್ನು ತಿಳಿಸುವ ಶಬ್ದವು ಸ್ತ್ರೀಲಿಂಗವು, ಉಳಿದ ಶಬ್ದಗಳು ನಪುಂಸಕಲಿಂಗಗಳು ಎಂದು ಸೂತ್ರವಿರುವುದಷ್ಟೆ? ಹುಲಿ ಎಂಬ ಶಬ್ದವು ಗಂಡನ್ನಾಗಲಿ, ಹೆಣ್ಣನ್ನಾಗಲಿ ತಿಳಿಸುವ ಪಕ್ಷದಲ್ಲಿ ಹುಲಿ ಬಂದನು ಅಥವಾ ಬಂದಳು ಎಂದು ಲೋಕದಲ್ಲಿ ಜನಗಳು ಏಕೆ ವ್ಯವಹರಿಸುವುದಿಲ್ಲ? ಎಂದು ಕೇಳಬಹುದು. ಮೇಲಣ ಸೂತ್ರದಲ್ಲಿ ಪುರುಷರನ್ನು ತಿಳಿಸುವ ಶಬ್ದಗಳು—ಎಂದರೆ ಪ್ರಾಣಿಗಳೊಳಗೆ ತಿರ್ಯಗ್ಜಿನ್ನಜಾತಿಯ ಸ್ತ್ರೀ, ಅಥವಾ ಪುರುಷ ಎಂಬುದನ್ನು ಬೋಧಿಸುವ ಶಬ್ದಗಳು ಎಂದರ್ಥ ಮಾಡಬೇಕು. ಆದುದರಿಂದ ಕನ್ನಡದಲ್ಲಿ ಸ್ತ್ರೀಲಿಂಗ ಪುಲ್ಲಿಂಗ ಶಬ್ದಗಳೆಲ್ಲವೂ ತಿರ್ಯಗ್ಜಾತಿಯಲ್ಲದ ಹೆಂಗಸು, ಅಥವಾ ಗಂಡಸು ಎಂಬ ಅರ್ಥವನ್ನು ತಿಳಿಸುತ್ತವೆ. ಉದಾಹರಣೆ ತಂದೆ ಮಾವ, ಅಣ್ಣ ತಮ್ಮ ಇವು ಮುಂತಾದ ಶಬ್ದಗಳು ಪುಲ್ಲಿಂಗಗಳು. ತಾಯಿ, ಅತ್ತೆ, ಅಕ್ಕ, ತಂಗಿ, ಮುಂತಾದ ಶಬ್ದಗಳು ಸ್ತ್ರೀಲಿಂಗಗಳು, ಆದರೆ ಬಸವ ಬಾರೋ ಎಂದು ತಿರ್ಯಗ್ಜಾತಿಯಾದ ಎತ್ತನ್ನು ತಿಳಿಸುವ ಬಸವ ಶಬ್ದವು ಪುಲ್ಲಿಂಗದಲ್ಲಿ ಪ್ರಯೋಗಿಸಲ್ಪಡುತ್ತದೆಯಲ್ಲವೆ! ಅದು ಹೇಗೆ ಸಂಗತವು? ಎಂದರೆ ಮನುಷ್ಯ ಧರ್ಮವನ್ನು ಆರೋಪಿಸಿ, ಅಂಥಾ ಪ್ರಯೋಗವನ್ನು ಮಾಡುವರು. ಈರೀತಿ ಪ್ರಯೋಗವು ಪ್ರಾಚೀನ ಗ್ರಂಥಗಳಲ್ಲಿಯೂ ಕವಿಗಳಿಂದ ಹೇಳಲ್ಪಟ್ಟಿವೆ. ಉದಾ:—" ತಳಿರೇ ತಾವರೆಯೇ ಮದಾಳಿ ಕುಲಮೇಕನ್ನೈದಿಲೇ ಮತ್ತ ಕೋಕಿಲಮೇ ಕಂಡಿರೆ ಸೀತೆಯಂ " ಪಂಪರಾಮಾಯಣ. ಹಾಗಾದರೆ—ಗರುಡನು ಹಾರಿಹೋಯಿತು, ಒಸವನಿಂದ ಬೇಸಾಯ. ಇವು ಮುಂತಾದ ಕಡೆಗಳಲ್ಲಿ ನಪುಂಸಕ ಲಿಂಗಗಳಾದ ಗರುಡ, ಬಸವ ಶಬ್ದಗಳಿಗೆ ಸ್ವರಾದಿ ವಿಭಕ್ತಿ ಪ್ರತ್ಯಯವು ಪರವಾಗಲು, ಪುಲ್ಲಿಂಗ ಶಬ್ದಗಳಿಗೆ ಬರುವ ನಕಾರವು ಆಗಮವಾಗಿ ಬಂದಿದೆಯಲ್ಲವೆ? ಇದು ಹೇಗೆ? ಎಂಬ ಪ್ರಶ್ನೆ ಬರಬಹುದು. ಹೀಗೆ ನಕಾರಾಗಮವು ಬಂದ ಮಾತ್ರಕ್ಕೆ ಗರುಡ, ಬಸವ ಮುಂತಾದ ಶಬ್ದಗಳು ಪುಲ್ಲಿಂಗಗಳಾಗುವುದಿಲ್ಲ. ಈ ನಕಾರಾಗಮವು ಪುಲ್ಲಿಂಗದಲ್ಲಿ ಬರುವಹಾಗೆ ಸ್ತ್ರೀಲಿಂಗ ನಪುಂಸಕಲಿಂಗಗಳಾದ ಹಲವು ಆಕಾರಾಂತ ಶಬ್ದಗಳಲ್ಲಿಯೂ ಬರುವುದು. ಉದಾ—ಅಕ್ಕ, ಅಕ್ಕನನ್ನು, ಅಕ್ಕನಿಂದ; ಗೀಜಗ: ಗೀಜಗನು, ಗೀಜಗನ; ಇತ್ಯಾದಿ. ಆದುದರಿಂದ ಅಗಸಿತಿ, ಹುಡುಗಿ, ಮೊದಲಾಬೆಡೆಗಳಲ್ಲಿ ಇತಿ, ಇ, ಎಂಬ ಪ್ರತ್ಯಯಗಳು ಸ್ತ್ರೀಲಿಂಗದಲ್ಲಿ ಬರುವಹಾಗೆ ಈ ನಕಾರಾಗಮವು ಯಾವ ಲಿಂಗವನ್ನು ತೋರಿಸುವಂತೆಯೂ ಆ ಶಬ್ದಗಳಿಗೆ ಬರುವುದಿಲ್ಲ. ಆಯಾ ಶಬ್ದಗಳ ರೂಪಸಿದ್ಧಿಗೆ ಮಾತ್ರ ಬಂದಿರುವುದು.

ಲಿಂಗದ ಸಾಮಾನ್ಯ ವಿಚಾರವು ಇಲ್ಲಿಗೆ ಸಾಕು. ಇನ್ನು ಲಿಂಗದಲ್ಲಿರುವ ಭೇದಗಳನ್ನು ವಿಚಾರಮಾಡೋಣ.

ಹೊಸ ಕನ್ನಡದಲ್ಲಿ ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗ ಎಂದು ಸಾಮಾನ್ಯವಾಗಿ ಲಿಂಗವು ಮೂರು ವಿಧವು. ಮತ್ತು ಸೂರ್ಯ ಅಂಗಾರಕ ಮೊದಲಾದ ಶಬ್ದಗಳು ಪುನ್ನಪುಂಸಕಗಳಾಗಿಯೂ ದೇವತೆ, ಹುಡುಗಿ ಮೊದಲಾದ ಶಬ್ದಗಳು ಸ್ತ್ರೀನಪುಂಸಕಗಳಾಗಿಯೂ, ಸರ್ವನಾಮ, ಸಂಖ್ಯೇಯವಾಚಕ, ಗುಣವಾಚಕ ಮೊದಲಾದುವುಗಳು ವಾಚ್ಯಲಿಂಗಗಳಾಗಿಯೂ ಹೇಳಲ್ಪಟ್ಟಿವೆ. ಇವು ಮೂರೂ, ಮೊದಲಿನ ಮೂರೂ ಸೇರಿ ಒಟ್ಟು ಲಿಂಗವು ಆರುವಿಧವು ಯುಕ್ತವಾಗಿದೆ. ಆದರೆ ದಂಡು ಗುಂಪು, ಮಗು ಮುಂತಾದ ಶಬ್ದಗಳು ನಿತ್ಯ ನಪುಂಸಕ ಲಿಂಗಗಳೆಂದು, ಲಿಂಗದಲ್ಲಿ ನಿತ್ಯ ನಪುಂಸಕವೆಂಬುದಾಗಿ ಮತ್ತೊಂದು ವಿಧವಿರುವುದನ್ನು ಶಬ್ದಾದರ್ಶದಲ್ಲಿ ನಾವು ನೋಡುತ್ತೇವೆ. ಈ ಭೇದವನ್ನು ವಿಂಗಡಿಸುವುದು ವಿಚಾರಾಸ್ಪದವಾಗಿದೆ. ದಂಡು, ಗುಂಪು, ಮಗು, ಹಸುಳೆ ಮುಂತಾದ ಶಬ್ದಗಳು ನಿತ್ಯನಪುಂಸಕ ಲಿಂಗಗಳು; ನೆಲ, ಹೊಲ, ಪರ್ವತ, ನದಿ ಮುಂತಾದ ಶಬ್ದಗಳು ನಪುಂಸಕ ಲಿಂಗಗಳು, ಎಂಬ ಇವೆರಡಕ್ಕೂ ಏನು ವ್ಯತ್ಯಾಸ! ವೈಯಾಕರಣರು ಇದನ್ನು ಪರಿಶೀಲಿಸಿ ನೋಡಲಿ. ಯಾವ ಪ್ರಯೋಗದಲ್ಲಿಯೂ ಈ ನಪುಂಸಕನಿತ್ಯನಪುಂಸಕಗಳೆರಡಕ್ಕೂ ಭೇದವು ತೋರುವುದಿಲ್ಲ. ದಂಡು, ಗುಂಪು ಮುಂತಾದುವು ನಿತ್ಯ ನಪುಂಸಕಲಿಂಗಗಳಾದರೆ ನೆಲ, ಹೊಲ ಮುಂತಾದುವು ಅನಿತ್ಯನಪುಂಸಕಲಿಂಗಗಳಾಗಬೇಕೋ? ಹಾಗಾಗುವ ಪಕ್ಷದಲ್ಲಿ ನೆಲ, ಹೊಲ ಮುಂತಾದ ಶಬ್ದಗಳು ಬಂದುಸಾರಿ ನಪುಂಸಕಲಿಂಗಗಳು, ಇನ್ನೊಂದುಸಾರಿ ಬೇರೆ ಲಿಂಗಗಳು ಆಗಬೇಕಲ್ಲವೆ? ಹಾಗೆ ಎಂದಿಗೂ ಆಗುವುದಿಲ್ಲ ಆದುದರಿಂದ ಈ ನಿತ್ಯನಪುಂಸಕವೆಂದು ಹೇಳಿರುವ ಭೇದವು ಉಚಿತವಾಗಿ ತೋರುವುದಿಲ್ಲವು.

ಮಾನಸಗಣಿತ.

1. 7, 5, 6 ಈ ಸಂಖ್ಯೆಗಳಿಂದಾಗುವ ದೊಡ್ಡ ಸಂಖ್ಯೆ ಯಾವುದು? ಸಣ್ಣ ಸಂಖ್ಯೆ ಯಾವುದು?
2. 8, 4, 0, 9, 5 ಈ ಅಂಕೆಗಳಿಂದಾಗುವ ದೊಡ್ಡ ಸಂಖ್ಯೆಗೂ ಸಣ್ಣ ಸಂಖ್ಯೆಗೂ ವ್ಯತ್ಯಾಸವೆಷ್ಟು?

3. ಒಂದರಿಂದ ಇಪ್ಪತ್ತರವರೆಗೆ (1+2+3) ಹೀಗೆ ಕೂಡಿಸಿದರೆ ಎಷ್ಟಾಗುವುದು?

4. 9090 ಎಂದು ಹೇಳಿದಾಗ ಬಬ್ಬ ಹುಡುಗನು ಸೊನ್ನೆಗಳನ್ನು ಬಿಟ್ಟು ಬರೆದರೆ ಎಷ್ಟು ಕಡಮೆಯಾಗುವುದು?

5. 4 ರ ವರ್ಗಕ್ಕೂ ಅದರ ಘನಕ್ಕೂ ಇರುವ ವ್ಯತ್ಯಾಸವನ್ನು 4 ರಿಂದ ಭಾಗಿಸಿದರೆ ಎಷ್ಟು?

6. ಅಪವರ್ತನಕ್ಕೂ ಅಪವರ್ತ್ಯಕ್ಕೂ ಭೇದವೇನು?

7. 7 ರಿಂದ 23 ರವರಿಗಿನ ವಿಷಮಸಂಖ್ಯೆಗಳನ್ನೆಲ್ಲ ಹೇಳು.

8. 25, 51, ಇವೆರಡು ಸಂಖ್ಯೆಗಳಿಂದ ನಿಶ್ಶೇಷವಾಗಿ ಭಾಗವಾಗುವ ನಾಲ್ಕು ಅಂಕೆಗಳನ್ನುಳ್ಳ ಸಣ್ಣ ಸಂಖ್ಯೆ ಯಾವುದು?

9. $(3\times4\times5)+(5\times4\times3)-(2\times5\times4)$ ಎಷ್ಟು?

10. ಒಂದು ಸಂಖ್ಯೆಯನ್ನು 108 ರಿಂದ ಭಾಗಿಸಿದರೆ 45 ಶೇಷವಾಗಿ ಉಳಿಯುವುದು. ಆದೇ ಸಂಖ್ಯೆಯನ್ನು 12 ರಿಂದ ಭಾಗಿಸಿದರೆ ನಿಲ್ಲುವುದೆಷ್ಟು?

11. 100 ರ ಮೇಲೆ 1000 ದ ಒಳಗೆ 20 ರಿಂದ ನಿಶ್ಶೇಷವಾಗಿ ಭಾಗವಾಗುವ ಸಂಖ್ಯೆಗಳೆಷ್ಟು?

12. ಒಬ್ಬನು 20 ರೂಪಾಯಿಗಳ ಬಾಬತು 50 ನೋಟುಗಳನ್ನು ಕೊಡಬೇಕಾಗಿತ್ತು. ಅವನು ತಿಳಿವಿಲ್ಲದೆ 50 ರೂ. ಗಳ ಬಗೆ 50 ನೋಟುಗಳನ್ನೆಣಿಸಿ ಕೊಟ್ಟನು. ಇದರಿಂದ ಅವನಿಗೆ ಆದ ನಷ್ಟವೇನು?

13. 5 ರೂ. ಗಳ ಕಾಸುಗಳಿಗೂ 10 ರೂ. ಗಳ ಆಣೆಗಳಿಗೂ ಸಂಖ್ಯೆಯಲ್ಲಿ ಎಷ್ಟು ಹೆಚ್ಚು ಕಡಮೆ ತೋರುವುದು?

14. 6 ರ ಘನದಿಂದ 4 ರ ವರ್ಗವನ್ನು ಕಳೆದು ಬಂದುದನ್ನು 5 ರ ವರ್ಗದಿಂದ ಭಾಗಿಸು.

K: R.

* ವಿದ್ಯಾದಾಯಿನಿ *



(A MONLHLY JOURNAL)

ಭಾಗ ೧೬.] ಜೂನ್—೧೯೦೮. [ಸಂಚಿಕೆ ೬.

ಚಿತ್ರ ಬರೆವುದು.

ಚಿತ್ರ ಬರೆಯುವುದು ನಮ್ಮಲ್ಲಿ ಒಂದು ಕಲೆಯೆಂದು ಭಾವಿಸಲ್ಪಟ್ಟಿದ್ದರೂ ಇದರ ಅಭ್ಯಾಸವು ಅಷ್ಟು ವಿಶೇಷವಾಗಿಲ್ಲ. ಚಿತ್ರದ ಅಭ್ಯಾಸವು ಚಿತ್ರಗಾರರೆಂಬ ಒಂದು ಬಗೆಯ ಜನರಲ್ಲಿ ಮಾತ್ರ ನಿಂತಿರುವುದು. ಇವರಲ್ಲೂ ಅನೇಕರು ಬರೆಯುವ ಚಿತ್ರಗಳು ವಿಶೇಷ ನೈಪುಣ್ಯವನ್ನು ತೋರ್ಪಡಿಸುವುದಿಲ್ಲ. ಕ್ಷತ್ರಿಯ ಸ್ತ್ರೀಯರಿಗೆ ಅವರ ವಿರಾಮಕಾಲವನ್ನು ವಿನೋದದಿಂದ ಕಳೆಯುವುದಕ್ಕಾಗಿ ಚಿತ್ರಬರಿಯುವುದನ್ನು ಅಭ್ಯಾಸ ಮಾಡಿಸುತಿದ್ದುದು ನಮ್ಮ ಗ್ರಂಥಗಳಿಂದ ಗೊತ್ತಾಗುವುದು. ಚಿತ್ರ ಬರೆಯುವುದು ನಮ್ಮಲ್ಲಿ ಇಷ್ಟರಮಟ್ಟಿಗೆ ಮಾತ್ರ ಪ್ರಚಾರದಲ್ಲಿತ್ತು. ಪಾಶ್ಚಾತ್ಯ ರಾಜ್ಯಗಳಲ್ಲೂ ಚಿತ್ರದಲ್ಲಿ ಯಾರಿಗೆ ವಿಶೇಷ ಅಭಿರುಚಿಯಿತ್ತೊ ಅಂತಹ ಕೆಲವರು ಮಾತ್ರ ಚಿತ್ರ ಬರೆಯುವುದನ್ನು ವಿಶೇಷವಾಗಿ ಅಭ್ಯಾಸ ಮಾಡುತಿದ್ದರು. ಹೆಣ್ಣುಮಕ್ಕಳು ತಮ್ಮ ವಿರಾಮ ಕಾಲವನ್ನು ಉಪಯುಕ್ತವಾದ ರೀತಿಯಲ್ಲಿ ಕಳೆಯುವುದಕ್ಕಾಗಿ ಅವರಿಗೂ ಅವರ ಪಾಠಶಾಲೆಯಲ್ಲಿ ಚಿತ್ರ ಬರೆವುದನ್ನು ಸ್ವಲ್ಪಮಟ್ಟಿಗೆ ಅಭ್ಯಾಸ ಮಾಡಿಸುತ್ತಿದ್ದರು. ಅದೇಶಗಳಲ್ಲೂ ಚಿತ್ರದ ಪ್ರಚಾರವು ಇಷ್ಟರ ಮಟ್ಟಿಗೆ ಮಾತ್ರವಿದ್ದಿತು.

ಆದರೆ ಈಚೆಗೆ ಚಿತ್ರದ ವಿಷಯದಲ್ಲಿ ಪಾಶ್ಚಾತ್ಯ ರಾಜ್ಯಗಳ ಜನರ ಅಭಿಪ್ರಾಯವು ಬಹಳಮಟ್ಟಿಗೆ ವ್ಯತ್ಯಾಸವನ್ನು ಹೊಂದಿರುವುದು. ಚಿತ್ರವು ಸಾಧಾರಣ ವಿದ್ಯಾಭ್ಯಾಸದ ಒಂದು ಭಾಗವಾಗಿರಬೇಕೆಂತಲೂ, ಮಕ್ಕಳು ಬರೆವಣಿಗೆಯಿಂದ ತಮ್ಮ ಅಭಿಪ್ರಾಯವನ್ನು ಇತರರಿಗೆ ತಿಳಿಯಪಡಿಸುವಂತೆ ಚಿತ್ರದಿಂದಲೂ ತಿಳಿಯು

ಪಡಿಸಬಹುದೆಂತಲೂ ಕೇವಲ ಸಣ್ಣ ಮಕ್ಕಳಿಗೆ ಅವರ ಮನಸ್ಸಿನ ಅಭಿಪ್ರಾಯಗಳನ್ನು ತಿಳಿಸಲು ಬರೆವಣಿಗೆಗಿಂತಲೂ ಚಿತ್ರವು ವಿಶೇಷ ಸುಲಭವಾದ ಮತ್ತು ಸ್ವಾಭಾವಿಕವಾದ ಮಾರ್ಗವೆಂತಲೂ ಆ ಜನರು ನಿಷ್ಕರ್ಷಿಸಿರುವರು. ಇದಕ್ಕನುಗುಣವಾಗಿ ಆ ರಾಜ್ಯಗಳ ಸಣ್ಣ ಮಕ್ಕಳ ಪಾಠಶಾಲೆಗಳಲ್ಲಿ ಚಿತ್ರವು ಆ ಮಕ್ಕಳ ವಿದ್ಯಾಭ್ಯಾಸದ ಒಂದು ಮುಖ್ಯ ಭಾಗವಾಗಿರುವುದು. ಇದರಿಂದ ಆ ಮಕ್ಕಳು ಎಷ್ಟರಮಟ್ಟಿಗೆ ಅಭಿವೃದ್ಧಿಯನ್ನು ಹೊಂದಿರುವರು, ಅಂಶಗಳನ್ನು ಎಷ್ಟು ಸ್ಪಷ್ಟವಾಗಿಯೂ ನಿಷ್ಕೃಷ್ಟವಾಗಿಯೂ ತಿಳಿದುಕೊಂಡಿರುವರೆಂಬ ಅಂಶಗಳು ಕಳೆದ ವರ್ಷ ಮದರಾಸಿನಲ್ಲೂ ಮೈಸೂರಿನಲ್ಲೂ ನಡೆದ ವಿದ್ಯಾಭ್ಯಾಸ ಸಂಬಂಧವಾದ ವಸ್ತುಪ್ರದರ್ಶನಗಳಲ್ಲಿ ಸ್ಪಷ್ಟವಾಗಿ ಕಾಣುತಿದ್ದುವು. ಮೇಲಾಗಿ ಈಗಿನ ವಿದ್ಯಾಭ್ಯಾಸಕ್ಕನುಗುಣವಾಗಿ ಮುಂದೆ ಮಕ್ಕಳು ಯಾವ ಶಾಸ್ತ್ರವನ್ನು ಅಥವ ಕಲೆಯನ್ನು ಕಲಿಯಬೇಕಾದರೂ ಚಿತ್ರದಲ್ಲಿ ಸರಿಯಾಗ ಜ್ಞಾನವು ಅತ್ಯಾವಶ್ಯಕವಾಗಿರುವುದು. ಎಂಜನಿಯರ್ ಕೆಲಸವನ್ನು ಮಾಡುವವನೂ, ಯಂತ್ರಗಳನ್ನು ರಚಿಸುವವನೂ, ಮರಗೆಲಸ, ಮೊದಲಾದ ನಾನಾವಿಧವಾದ ಉದ್ಯೋಗಗಳನ್ನು ಮಾಡುವವರೂ ಚಿತ್ರದಲ್ಲಿ ಸರಿಯಾದ ಅಭ್ಯಾಸವಿಲ್ಲದೆ ತಮ್ಮ ಕೆಲಸವನ್ನು ಒಂದು ಕ್ಷಣವೂ ನಿರ್ವಹಿಸಲಾರರು. ಯೂರೊಪ್, ಅಮೇರಿಕಾ ಖಂಡಗಳ ಎಲ್ಲ ರಾಜ್ಯಗಳಲ್ಲೂ, ಜನರು ಚಿತ್ರವು ಇಷ್ಟು ಮುಖ್ಯವಾದುದೆಂಬುದನ್ನು ತಿಳಿದು ಪ್ರೈಮರಿ ಮೊದಲಾದ ಎಲ್ಲ ಪಾಠಶಾಲೆಗಳಲ್ಲೂ ಚಿತ್ರದ ಅಭ್ಯಾಸಕ್ಕೆ ಕ್ರಮವಾಗಿ ಅವಕಾಶವನ್ನು ಕಲ್ಪಿಸಿರುವರು. ಆ ರಾಜ್ಯಗಳ ಜನರು ನಮಗಿಂತಲೂ ಉತ್ತಮಸ್ಥಿತಿಯಲ್ಲಿರುವುದಕ್ಕೆ ಇದೂ ಒಂದು ಕಾರಣವಾಗಿರುವುದು. ಹಿಂದುಸ್ಥಾನದ ವಿದ್ಯಾಭ್ಯಾಸದ ಇಲಾಖೆಯ ಅಧಿಕಾರಿಗಳು ಚಿತ್ರವು ವಿದ್ಯಾಭ್ಯಾಸದಲ್ಲಿ ಇಷ್ಟು ಮುಖ್ಯವಾದುದೆಂಬುದನ್ನು ತಿಳಿದು ಅದನ್ನು ನಮ್ಮ ಪಾಠಶಾಲೆಗಳಲ್ಲಿಡುವುದಕ್ಕೆ ಪ್ರಯತ್ನ ಪಡುತಿರುವರು. ಆದರೆ ಈ ಪ್ರಯತ್ನವು ವಿಶೇಷ ಫಲವನ್ನು ಕೊಟ್ಟಿಲ್ಲ. ಈ ವಿಷಯದಲ್ಲಿ ಇನ್ನೂ ವಿಶೇಷ ಪ್ರಯತ್ನವು ಆವಶ್ಯಕವೆ? ಯಾವರೀತಿಯಲ್ಲಿ ಆ ಪ್ರಯತ್ನವನ್ನು ನಡೆಸಬೇಕು? ಎಂಬ ಅಂಶಗಳನ್ನು ಸ್ವಲ್ಪಮಟ್ಟಿಗೆ ತಿಳಿಯಪಡಿಸುವುದು ಪ್ರಕೃತದಲ್ಲಿ ನಮ್ಮ ಉದ್ದೇಶವಾಗಿರುವುದು.

ಮಿಸ್ ಲ್ಯಾಟರವರು ಬೆಂಗಳೂರಲ್ಲಿ ಕಿಂಡರ್ ಗಾರ್ಟ್ನ್ ವಿಷಯದಲ್ಲಿ ಅನೇಕ ಉಪನ್ಯಾಸಗಳನ್ನು ಮಾಡಿದರಷ್ಟೆ, ಅವರು ಕೊಟ್ಟ ಉಪನ್ಯಾಸಗಳಲ್ಲಿ ಚಿತ್ರದ ವಿಷಯವೂ ಒಂದಾಗಿತ್ತು. ಈ ಉಪನ್ಯಾಸದಿಂದ ಚಿತ್ರ ಬರೆಸುವುದು ಮಕ್ಕಳ

ವಿದ್ಯಾಭ್ಯಾಸದಲ್ಲಿ ಯಾವ ಭಾಗವಾಗಿರಬೇಕು, ಈ ಪಾಠವನ್ನು ಯಾವ ರೀತಿಯಲ್ಲಿ ನಡೆಸಬೇಕು ಎಂಬ ಅಂಶಗಳು ಸ್ಪಷ್ಟವಾಗಿ ತಿಳಿಯುವುದರಿಂದ ಅದರ ಸಾರಾಂಶವನ್ನು ಮುಂದೆ ಬರೆಯುವೆವು.

" ಚಿತ್ರ ಬರೆಪುದು ಮಕ್ಕಳಿಗೆ ಸಹಜವಾದ ಒಂದು ಗುಣವು. ಕೈಗೆ ಮಸಿ ಮುಂತಾದ ಯಾವ ವಸ್ತುವು ಸಿಕ್ಕಿದರೂ ಅದರಿಂದ ಅವರು ಗೋಡೆಯಮೇಲೆ ಗೀಚುವುದು ನಮಗೆ ಬಳಿಕೆಯಾದ ಅಂಶವಷ್ಟೆ. ಅವರಲ್ಲಿರುವ ಈ ಸಹಜಗುಣವನ್ನು ಕ್ರಮವಾಗಿ ವೃದ್ಧಿಗೊಳಿಸುವುದೇ ಚಿತ್ರ ಬರೆಸುವುದರ ಉದ್ದೇಶವು. ಮಕ್ಕಳು ತಮ್ಮ ಮನಸ್ಸಿನ ಅಭಿಪ್ರಾಯಗಳನ್ನು ಇತರರಿಗೆ ತಿಳಿಯುಪಡಿಸಲು ಚಿತ್ರದಷ್ಟು ಉತ್ತಮವಾದುದು ಯಾವುದೂ ಇಲ್ಲ. ಅನೇಕ ಉದ್ಯೋಗಗಳಲ್ಲೂ ಚಿತ್ರದಿಂದ ವಿಶೇಷ ಪ್ರಯೋಜನವುಂಟು. ರೇಖಾಗಣಿತ, ಪ್ರಾಕೃತಿಕ ಶಾಸ್ತ್ರಗಳು, ಜರೆಪಣಿಗೆ ಇವುಗಳನ್ನು ಕಲಿಯಲು ಚಿತ್ರದಿಂದ ಸಹಾಯವಾಗುವುದು. ಮಕ್ಕಳ ಪರೀಕ್ಷಣ ಶಕ್ತಿಗೆ ಚಿತ್ರವು ಉತ್ತೇಜನ ಕೊಡುವುದು. ಮಕ್ಕಳ ನೇತ್ರದ ಮತ್ತು ಹಸ್ತದ ಶಕ್ತಿಗಳನ್ನು ಹೆಚ್ಚಿಸುವುದಕ್ಕೂ, ವಸ್ತುಗಳನ್ನು ಪರೀಕ್ಷಿಸುವ ಸ್ವಭಾವವನ್ನುಂಟುಮಾಡುವುದಕ್ಕೂ, ಸ್ಮೃತಿಯನ್ನು ಹೆಚ್ಚಿಸುವುದಕ್ಕೂ, ಸೌಂದರ್ಯದಲ್ಲಿ ಕುತೂಹಲ ಹುಟ್ಟಿಸುವುದಕ್ಕೂ ಚಿತ್ರದಷ್ಟು ಅನುಕೂಲವಾದುದು ಮತ್ತಾವುದೂ ಇಲ್ಲ. ಎಲ್ಲ ವಿಧವಾದ ಕೈಗಾರಿಕೆಗಳಿಗೂ ಚಿತ್ರವು ಅತ್ಯಾವಶ್ಯಕವು. ಕೊಮಿನಿಯಸ್, ಲಾಕ್, ರೂಸ್, ಪೆಸ್ಟಲಾಟ್ಸಿ, ಫ್ರೊಬೆಲ್ ಮುಂತಾದ ಎಲ್ಲಾವಿದ್ವಾಂಸರೂ ಚಿತ್ರಕ್ಕೆ ವಿಶೇಷಪ್ರಾಮುಖ್ಯತೆಯನ್ನು ಕೊಟ್ಟಿರುವರು. ಪೆಸ್ಟಲಾಟ್ಸಿಯು ಈ ವಿಷಯದಲ್ಲಿ ಹೇಳುವುದೇನಂದರೆ " ಎಲ್ಲರೂ ಚಿತ್ರವನ್ನು ಅಭ್ಯಸಿಸಬೇಕು. ಪ್ರಕೃತಿಯನ್ನು ನೋಡಿ ಚಿತ್ರವನ್ನು ಬರೆಯುವನು, ಸಾಧಾರಣವಾಗಿ ಜನರು ಕ್ರಮವಾಗಿ ನೋಡದಿರುವ ಅನೇಕ ಅಂಶಗಳನ್ನು ಸರಿಯಾಗಿನೋಡುವನು. ಚಿತ್ರ ಬರೆಯುವಾಗ ಪೂರ್ಣವಸ್ತುವಿಗೂ ಅದರ ಭಾಗಗಳಿಗೂ ಇರುವ ಪ್ರಮಾಣವು ತಿಳಿಯುವುದು. ಇಂತಹ ತಿಳುವಳಿಕೆಯಿಂದ ಮಕ್ಕಳ ಜ್ಞಾನವು ನಿಷ್ಕೃಷ್ಟವಾಗುವುದು " ಮೆಸೊನಿಯರ್ ಎಂಬ ಫ್ರೆಂಚ್ ವಿದ್ವಾಂಸನು ಈ ವಿಷಯದಲ್ಲಿ ಹೇಳುವುದೇನೆಂದರೆ " ಮಕ್ಕಳಿಗೆ ಕ್ರಮವಾಗಿ ನೋಡುವುದನ್ನು ಕಲಿಸುವುದರಿಂದ ಅವರ ಬುದ್ಧಿಯನ್ನು ಎಷ್ಟರಮಟ್ಟಿಗೆ ವೃದ್ಧಿಗೊಳಿಸಬಹುದು! ನಮ್ಮ ಪಾಠಶಾಲೆಯು ವಿದ್ಯಾಭ್ಯಾಸಕ್ಕೆಲ್ಲಾ ಚಿತ್ರವನ್ನೇ ಆಧಾರವಾಗಿ ಮಾಡಬೇಕೆಂಬುದು ನನ್ನ ಮತವು. ಒಂದು ಪದಾರ್ಥಕ್ಕೆ ಸಂಬಂಧಪಟ್ಟ ಎಲ್ಲಾ

ಾಂಶಗಳನ್ನೂ ಚಿತ್ರರೂಪವಾದ ಭಾಷೆಯೇ ಚೆನ್ನಾಗಿ ತಿಳಿಸುವುದು. ಕ್ರಮವಾಗಿ ಳ್ದ ಆಕಾರ ಅಥವಾ ಚಿತ್ರದಿಂದ ಒಂದು ವಸ್ತುವಿನ ವಿಷಯವಾಗಿ ಬರುವ ನಿಷ್ಕೃ ಷ್ಟವಾದ ಜ್ಞಾನವು ಬಹಳ ಚೆನ್ನಾಗಿ ಯೋಚಿಸಿ ಬರೆಯಲ್ಪಟ್ಟ ಅತ್ಯುತ್ತಮವಾದ ಶಬ್ದಸರಣಿಯಿಂದಲೂ ಬರಲಾರದು. ಚಿತ್ರವು ಅಂಶಗಳನ್ನು ನಿಜವಾಗಿ ತೋರ್ಪ ಡಿಸುವುದು. ಹೀಗೆ ಸತ್ಯವನ್ನೇ ಆಧಾರವಾಗಿ ಉಳ್ಳ ಚಿತ್ರವನ್ನು ನಾವು ಎಲ್ಲಾಕಡೆ ಯಲ್ಲೂ ಕಲಿಸಬೇಕಲ್ಲವೇ ?" ಮಗುವಿನ ಮನೋವಿಕಾಸದಲ್ಲಿ ಚಿತ್ರವು ವಿಶೇಷ ಮುಖ್ಯವಾದ ಭಾಗವನ್ನು ವಹಿಸಿರುವುದು. ಇದರಿಂದ ಮಗುವಿನಲ್ಲಿರುವ ಸೃಷ್ಟಿಸ ಬೇಕೆಂಬ ಸಹಜವಾದ ಕುತೂಹಲವು ತೃಪ್ತಿಯನ್ನು ಹೊಂದುವುದು. ಸಣ್ಣಮ ಕ್ಕಳಿಂದ ಚಿತ್ರ ಬರೆಸುವಾಗ ನಾವು ಅವರ ಯೋಗ್ಯತೆಗೆ ತಕ್ಕ ವಸ್ತುಗಳನ್ನು ಮಾ ತ್ರ ಬರೆಸಬೇಕು. ನಿದರ್ಶನವಾಗಿ A ತರಗತಿಗೆ ರೇಷ್ಮೆಯ ಸ್ವಕೃತಿಪರೀಕ್ಷೆಯನ್ನು ನಡೆಸುವಾಗ ರೇಷ್ಮೆಯ ಗೂಡು, ಹುಳು, ಕೋಶಕ್ರಿಮಿ, ಇವುಗಳನ್ನು ಬರೆಸಬಹು ದು. ಆದರೆ ಚಿಟ್ಟೆಯನ್ನು ಬರಿ ಎಂದು ಹೇಳಿದರೆ ಈ ಮಕ್ಕಳಿಗೆ ಅದು ಅಸಾಧ್ಯ ವಾಗಬಹುದು. ಹೀಗೆಯೆ ಹಸುವಿನ ವಿಷಯದಲ್ಲಿ ಪರೀಕ್ಷೆ ನಡೆಸುತಿರುವಾಗ ಹ ಸುವನ್ನು ಬರಿ ಎಂಬುದಾಗಿ ಹೇಳಿದರೆ ಈ ಮಕ್ಕಳಿಗೆ ಆ ಕೆಲಸವು ಅಸಾಧ್ಯವಾಗು ವುದು. ಹಸುವು ನೀರುಕುಡಿಯುವ ತೊಟ್ಟಿ, ತಿನ್ನುವ ಹುಲ್ಲಿನ ಕಂತೆ ಇಂತಹ ಸು ಲಭವಾದ ಅಂಶಗಳನ್ನೇ ಬರೆಸಬೇಕು. ಮಕ್ಕಳ ಯೋಗ್ಯತೆಗೆ ಮೀರಿದ ಅಂಶಗ ಳನ್ನು ಅವರಿಂದ ಬರೆಸಲು ಪ್ರಯತ್ನಪಟ್ಟರೆ ಅವರು ತಮ್ಮ ಕೆಲಸದಿಂದ ಸರಿಯಾದ ಪ್ರಯೋಜನವುಂಟಾಗದಿರುವುದನ್ನು ನೋಡಿ ಚಿತ್ರ ಬರೆವುದಕ್ಕೆ ಅಧೈರ್ಯಪಡು ವರು. ಆದುದರಿಂದ ಆ ಸಣ್ಣಮಕ್ಕಳ ಯೋಗ್ಯತೆಗೆ ತಕ್ಕಂತಹ ಸುಲಭವಾದ ಅಂಶ ಗಳನ್ನೇ ಚಿತ್ರ ಬರೆಯಲು ಕೊಡಬೇಕು.

ಈ ಮಕ್ಕಳು ಬರೆಯುವ ಚಿತ್ರಗಳು ಅಷ್ಟು ನಿಷ್ಕೃಷ್ಟವಾಗಿರಬೇಕೆಂತಲೂ ನಾವು ಇಟ್ಟುಕೊಳ್ಳಬಾರದು. ಮನಸ್ಸಿನಲ್ಲಿರುವ ಅಭಿಪ್ರಾಯಗಳನ್ನು ಇತರರಿಗೆ ತಿಳಿಯಪಡಿಸುವುದು ಇವರು ಬರೆಯುವ ಚಿತ್ರದ ಉದ್ದೇಶವೇ ಹೊರತು ಸ್ವಲ್ಪ ವೂ ತಪ್ಪಿಲ್ಲದ ಚಿತ್ರಗಳನ್ನು (ಬರೆಯುವುದು) ಇವರ ಉದ್ದೇಶವಲ್ಲ. ಆದುದರಿಂದ ಈ ಮಕ್ಕಳು ಬರೆವ ಚಿತ್ರಗಳಲ್ಲಿ ಅವರ ಮನಸ್ಸಿನ ಅಭಿಪ್ರಾಯಗಳು ತೋರ್ಪಡು ವಂತಿದ್ದರೆ ಅಂತಹ ಚಿತ್ರಗಳನ್ನು ನಾವು ಒಪ್ಪಬೇಕು. ಈ ಚಿತ್ರಗಳಲ್ಲಿರುವ ತಪ್ಪು ಗಳನ್ನು ವಿಶೇಷವಾಗಿ ಹುಡುಕಿ ಆ ತಪ್ಪುಗಳನ್ನು ಮಕ್ಕಳಿಗೆ ತಿಳಿಸುತ ಅವರ ಉತ್ಸಾ

ಹವನ್ನು ಕೆಡಿಸಬಾರದು. ಈ ಮಕ್ಕಳ ತರಗತಿಗಳಲ್ಲಿ ಚಿತ್ರ ಬರೆಸಲು ಅನುಭವಶಾಲಿಗಳಾದ ಉಪಾಧ್ಯಾಯರು ಅವಶ್ಯಕವೇ ಹೊರತು ನಿಷ್ಕೃಷ್ಟವಾದ ಚಿತ್ರಗಳನ್ನು ಬರೆಸುವ ದ್ರಾಯಿಂಗ್ ಮಾಷ್ಟರುಗಳು ಬೇಕಿಲ್ಲ.

ಚಿತ್ರಬರೆವುದನ್ನು ಮುಖ್ಯವಾಗಿ ಪ್ರಕೃತಿವಿಮರ್ಶೆಯ ಪಾಠದೊಡನೆ ಸಂಬಂಧಿಸಬೇಕು. ಪ್ರಕೃತಿವಿಮರ್ಶೆಯಲ್ಲಿ ಮಕ್ಕಳು ನೋಡಿದ ಅಂಶಗಳನ್ನು ಚಿತ್ರರೂಪದಲ್ಲಿ ಇತರರಿಗೆ ತಿಳಿಸಬೇಕು. ಚಿತ್ರಬರೆಸುವುದಕ್ಕೆ ಮಕ್ಕಳು ಪ್ರಕೃತಿವಿಮರ್ಶೆಯಲ್ಲಿ ಕಲಿತ ಅಂಶಗಳನ್ನು ಮಾತ್ರವೇ ಅಲ್ಲ, ಅವರು ತಮ್ಮ ಮನೆಗಳಲ್ಲೂ, ಇತರ ಸ್ಥಳಗಳಲ್ಲೂ ನೋಡಿರುವ ವಸ್ತುಗಳನ್ನೂ ಚಿತ್ರಬರೆಸುವುದಕ್ಕೆ ಆಧಾರವಾಗಿಟ್ಟುಕೊಳ್ಳಬಹುದು. ಈವಿಧವಾದ ಚಿತ್ರಗಳಿಂದ ಮಕ್ಕಳು ತಮ್ಮ ಸುತ್ತಲೂ ಇರುವ ವಸ್ತುಗಳನ್ನು ಎಚ್ಚರಿಕೆಯಿಂದ ನೋಡುವ ಸ್ವಭಾವವುಂಟಾಗುವುದು. ಒಂದು ಕಥೆಯನ್ನು ಅಥವಾ ಪಾಠವುಸ್ತುಕದಲ್ಲಿರುವ ಒಂದು ವಾಕ್ಯವನ್ನು ಹೇಳಿ ಆ ಕಥೆಗೆ ಅಥವಾ ವಾಕ್ಯಕ್ಕೆ ತಕ್ಕ ಚಿತ್ರವನ್ನು ಬರೆಸುವುದೂ ಉಂಟು. ಹೀಗೆ ಮಾಡುವುದು ಅತ್ಯಾವಶ್ಯಕವು. ಇದರಿಂದ ಕಥೆಯು ಅಥವಾ ಪಾಠವು ಮಕ್ಕಳಿಗೆ ಎಷ್ಟರಮಟ್ಟಿಗೆ ತಿಳಿದಿರುವುದು ಎಂಬುದು ಗೊತ್ತಾಗುವುದು. ಕಥೆಗೆ ತಕ್ಕ ಪ್ರತಿಮೆಯು ಮಕ್ಕಳ ಮನಸ್ಸಿನಲ್ಲಿ ಸ್ಥಿರಪಡುವುದು. ತಮ್ಮ ಅಭಿಪ್ರಾಯಗಳನ್ನು ಇತರರಿಗೆ ತಿಳಿಸಲು ಮಕ್ಕಳಿಗೆ ಸೌಲಭ್ಯವುಂಟಾಗುವುದು. ಮಕ್ಕಳೆದುರಿಗೆ ಒಂದು ಪದಾರ್ಥವನ್ನು ಸ್ವಲ್ಪಹೊತ್ತಿಟ್ಟು ಆಮೇಲೆ ಅದನ್ನು ಮರೆಮಾಡಿ ಅದರ ಚಿತ್ರವನ್ನು ಬರೆಸುವುದರಿಂದ ಮಕ್ಕಳಿಗೆ ಸ್ಮೃತಿಯಿಂದಲೇ ಚಿತ್ರಬರೆಯುವ ಅಭ್ಯಾಸವಾಗುವುದು. ಮಕ್ಕಳೇ ಒಂದು ಕಥೆಯನ್ನು ಕಲ್ಪಿಸಿ ಅದಕ್ಕೆ ತಕ್ಕ ಚಿತ್ರವನ್ನು ಬರೆಯುವಂತೆ ಮಾಡುವುದರಿಂದ ಅವರ ಕಲ್ಪನಾಶಕ್ತಿಯು ಹೆಚ್ಚುವುದಲ್ಲದೆ ಕಲ್ಪನೆಯಿಂದುಂಟಾದ ಪ್ರತಿಮೆಗಳನ್ನು ಇತರರಿಗೆ ತಿಳಿಯುಪಡಿಸುವ ಶಕ್ತಿಯೂ ಹೆಚ್ಚುವುದು. ಚಿತ್ರಬರೆಸಲು ಹೀಗೆ ನಾನಾವಿಧವಾದ ಅಂಶಗಳು ಆಧಾರವಾಗುವುವು.

ಚಿತ್ರಬರೆಸಲು ಮೊದಲು ನಾನಾಬಣ್ಣದ ಸುಣ್ಣಗಳನ್ನುಪಯೋಗಿಸಬೇಕು. ಚಿತ್ರಗಳನ್ನು ಸ್ಲೇಟಿನಂತಿರುವ ಫ್ರೀಆರಂ ಬೋರ್ಡಿನಮೇಲೆ ಬರೆಸಬಹುದು. ಗೋಡೆಯಲ್ಲಿ ಮಾಡಿರುವ ಬೋರ್ಡುಗಳಮೇಲೆ ಬರೆಸಬಹುದು. ಅಥವಾ ನಾನಾಬಣ್ಣದ ಕಾಗದಗಳನ್ನು ಗೋಡೆಗೆ ಅಂಟಿಸಿ ಅವುಗಳಮೇಲೆ ಚಿತ್ರಬರೆಸಬಹುದು. ಮಕ್ಕಳು ಪ್ರಕೃತಿಯ ವಸ್ತುಗಳನ್ನು ಲಂಬವಾದ ರೀತಿಯಲ್ಲಿ ನೋಡುವುದರಿಂದ ಲಂ

ಬವಾದ ಗೋಡೆಗಳ ಮೇಲೆ ಚಿತ್ರಬರೆಸುವುದೇ ಉತ್ತಮವಾದ ಮಾರ್ಗವು. ಮಕ್ಕಳಿಗೆ ಅಳತೆಯೂ, ಪ್ರಮಾಣವೂ, ನಿಷ್ಕೃಷ್ಟವಾಗಿ ತಿಳಿಯುವುದಕ್ಕಾಗಿ ಕೆಲವು ದಿವಸಗಳಮೇಲೆ ಚೌಕವಾದ ಮನೆಗಳುಳ್ಳ ಬೋರ್ಡುಗಳನ್ನು ಅಥವಾ ಕಾಗದಗಳನ್ನು ಪಯೋಗಿಸಬಹುದು. ಸಣ್ಣ ಮಕ್ಕಳು ವಸ್ತುಗಳ ಚಿತ್ರಗಳನ್ನು ಬರೆಯುವಾಗ ಒಟ್ಟೊಟ್ಟು ಗಾತ್ರವನ್ನು ತೋರ್ಪಡಿಸಿದರೆ ಸಾಕು. ಈ ಚಿತ್ರಗಳಿಂದ ಪದಾರ್ಥಗಳ ಆಕೃತಿಯು ಸಾಮಾನ್ಯವಾಗಿ ಕಾಣುತಿರಬೇಕು. ಆಕೃತಿಯನ್ನು ಕಾಣಿಸುವುದಕ್ಕಾಗಿ ಮಕ್ಕಳು ಮೊದಲು ರೇಖೆಗಳನ್ನು ಬರೆಯಬಾರದು. ಮಕ್ಕಳು ಶೀಮೇಸುಣ್ಣವನ್ನು ಕೈಯಲ್ಲಿ ಹಿಡಿದುಕೊಂಡು ಕಾಗದದಲ್ಲಿ ಅಥವಾ ಬೋರ್ಡಿನಲ್ಲಿ ಒಂದು ಚುಕ್ಕೆಯನ್ನು ಹಾಕಿ ಅದರ ಸುತ್ತಲೂ ಬೆರಳುಗಳನ್ನು ಸುತ್ತಿಸುತ ಬರೆಯಬೇಕಾದ ಆಕೃತಿಯು ಬೇಕಾದ ಪ್ರಮಾಣಕ್ಕಿರುವಂತೆ ಮಾಡಿಕೊಳ್ಳಬೇಕು. ಆಮೇಲೆ ಈ ಸ್ಥೂಲವಾದ ಆಕೃತಿಯನ್ನು ಸ್ವಲ್ಪತಿದ್ದುವುದರಿಂದ ಅದು ವಸ್ತುವಿನ ಚಿತ್ರವಾಗುವುದು. ಕಿತ್ತಲೆಹಣ್ಣು, ತೆಂಗಿನಕಾಯಿ ಮಾವಿನಹಣ್ಣು, ಮೊಟ್ಟೆ, ಮೊಲ, ಮುಂತಾದ ಸುಲಭವಾದ ವಸ್ತುಗಳ ಚಿತ್ರವನ್ನು ಮಕ್ಕಳು ಈರೀತಿಯಲ್ಲಿ ಬರೆಯಬಹುದು.

ಸುಣ್ಣದಿಂದ ಚಿತ್ರಬರೆಯುವುದು ಅಭ್ಯಾಸವಾದಮೇಲೆ ಮಕ್ಕಳಿಗೆ ಡ್ರಾಯಿಂಗ್ ಪುಸ್ತಕವನ್ನು, ಬಣ್ಣವನ್ನು ಕೊಟ್ಟು ಬ್ರಷ್‌ನಿಂದ ಚಿತ್ರಬರೆಸಬಹುದು. ಬ್ರಷ್‌ನಿಂದ ಚಿತ್ರಬರೆಸುವಾಗ ಪ್ರಕೃತಿಯ ವಸ್ತುಗಳನ್ನು ಬರೆಸಬೇಕೇ ಹೊರತು ನಾನಾವಿಧವಾದ ಹಸೆಗಳನ್ನು ಬರೆಸುವುದರಿಂದ ಪ್ರಯೋಜನವಿಲ್ಲ. ಇಂತಹ ಹಸೆಗಳನ್ನು ಮಕ್ಕಳು ವಯಸ್ಸಾದಮೇಲೆ ಅಭ್ಯಾಸಮಾಡಬಹುದು. ಸಣ್ಣಮಕ್ಕಳು ಬರೆಯುವ ಚಿತ್ರಗಳು ಅಭಿಪ್ರಾಯಗರ್ಭಿತವಾಗಿರಬೇಕು. ಬ್ರಷ್‌ನಿಂದ ಕೆಲಸಮಾಡಿಸುವಾಗ ಮಕ್ಕಳಿಗೆ ಬಣ್ಣಗಳಜ್ಞಾನವನ್ನೂ ಉಂಟುಮಾಡಬೇಕು. ಶುದ್ಧಬಣ್ಣಗಳಿಂದ ಮಿಶ್ರಬಣಗಳು ಉಂಟಾಗುವ ರೀತಿಯನ್ನು ತಿಳಿಸಬೇಕು. ಬ್ರಷ್‌ನಿಂದ ಪದಾರ್ಥಗಳ ಸಾಮಾನ್ಯವಾದ ಆಕೃತಿಯನ್ನು ಮೊದಲು ತೋರ್ಪಡಿಸಿದರೆ ಸಾಕು. ಸ್ವಲ್ಪ ಅಭ್ಯಾಸವಾದಮೇಲೆ ಅವರು ಪದಾರ್ಥಗಳಲ್ಲಿ ಕಾಣುವ ನೆರಳನ್ನು ಪ್ರಕಾಶವನ್ನು ತೋರ್ಪಡಿಸಬಹುದು.

ರೇಖೆಗಳಿಂದ ಬರೆಯುವ ಪೆನ್ಸಿಲ್ ಡ್ರಾಯಿಂಗನ್ನು ಮೇಲಿನ ತರಗತಿಗಳಲ್ಲಿ ಬರೆಸಬೇಕು. ಈಗಲೂ ಮಕ್ಕಳು ಬರೆಯುವ ಚಿತ್ರಗಳಿಗೆ ಪ್ರಕೃತಿಯ ವಸ್ತುಗಳೇ ಆಧಾರವಾಗಿರಬೇಕು. ಒಂದು ಚಿತ್ರವನ್ನು ಪಕ್ಕದಲ್ಲಿಟ್ಟುಕೊಂಡು ಅದರಂತೆ ನಕ

ಲುಮಾಡುವ ವಾಡಿಕೆಯು ಈಗ ಈದೇಶದಲ್ಲಿ ಅನೇಕ ಸ್ಕೂಲುಗಳಲ್ಲಿರುವುದು ಈವಿಧವಾದ ಚಿತ್ರಗಳು ನಮಗೆ ಪ್ರಯೋಜನಕರವಾದವುಗಳೇ ಅಲ್ಲ. ಆದುದರಿಂದ ಈ ಚಿತ್ರಗಳ ಬರೆಪಣಿಗೆಯನ್ನು ನಮ್ಮ ಪಾಠಶಾಲೆಗಳಲ್ಲಿ ಪೂರ್ಣವಾಗಿ ನಿಲ್ಲಿಸಬೇಕು. ಚಿತ್ರಬರೆಸುವ ಕ್ರಮವನ್ನು, ಬರೆಸುವುದಕ್ಕೆ ಬೇಕಾದ ಉಪಕರಣಗಳನ್ನೂ ಮೇಲೆ ಸ್ವಲ್ಪಮಟ್ಟಿಗೆ ವಿವರಿಸಿರುವ ರೀತಿಯಲ್ಲಿ ಮಕ್ಕಳ ವಯಸ್ಸಿಗೂ ಯೋಗ್ಯತೆಗೂ ತಕ್ಕಂತೆ ಸರಿಪಡಿಸಿಕೊಳ್ಳಬೇಕು.

ಜೇಡಿಮಣ್ಣಿನ ಕೆಲಸವು ಚಿತ್ರದ ಒರೆಪಣಿಗೆಗೆ ವಿಶೇಷಸಹಾಯುಮಾಡುವುದರಿಂದ ಅದನ್ನು ಚಿತ್ರಪಾಠದೊಡನೆ ಸಂಬಂಧಿಸಿದರೆ ಮಕ್ಕಳಿಗೆ ವಿಶೇಷ ಸಹಾಯುವಾಗುವುದು.

ಮಕ್ಕಳು ಆಗಾಗ್ಗೆ ಅತ್ಯುತ್ತಮವಾದ ಶಿಲ್ಪಿಯು ಬರೆದ ಚಿತ್ರಗಳನ್ನು ನೋಡುವಂತೆ ಮಾಡುವುದರಿಂದ ಅವರಿಗೆ ಚಿತ್ರವಿಷಯಕವಾದ ಜ್ಞಾನವು ಹೆಚ್ಚುವುದು.

ಮಕ್ಕಳಕೈಗೆ ಸುಣ್ಣವನ್ನು ಕೊಟ್ಟು ತೋಳನ್ನು ನೆಟ್ಟಗೆ ನೀಡಿಸಿ ಡ್ರಿಲ್ಲಿನ ಚಲನೆಗಳ ಸಹಾಯದಿಂದ ಚಿತ್ರಗಳನ್ನು ಬರೆಸುವ ವಾಡಿಕೆಯುಂಟು. ಈವಿಧವಾದ ಚಿತ್ರಗಳಲ್ಲೂ ಮಕ್ಕಳು ವಸ್ತುಗಳನ್ನು ನೋಡಿ ಬರೆಯುವುದಿಲ್ಲ. ಉಪಾಧ್ಯಾಯರ ಆಜ್ಞೆಗೆ ತಕ್ಕಂತೆ ಬರೆಯುವರು. ಆದುದರಿಂದ ಇವೂ ಅಷ್ಟು ಪ್ರಯೋಜನಕರವಾದವುಗಳಲ್ಲ.

ಮೇಲಿನ ತರಗತಿಗಳಲ್ಲಿ ರೇಖಾಗಣಿತದ ಆಕೃತಿಗಳನ್ನು ಬರೆವುದಕ್ಕೂ ಪ್ರಾಕೃತಿಕ ಶಾಸ್ತ್ರಗಳಿಗೆ ಸಂಬಂಧಪಟ್ಟ ಅಂಶಗಳನ್ನು ಬರೆವುದಕ್ಕೂ ರೂಲರ್ ಮುಂತಾದ ಉಪಕರಣಗಳನ್ನು ಉಪಯೋಗಿಸಬೇಕಾಗುವುದು. ಇಂತಹ ಚಿತ್ರಗಳನ್ನು ಬರೆಸಬೇಕಾದರೆ ಮಕ್ಕಳಿಗೆ 7 ವರ್ಷವಾಗಿರಬೇಕು. ಚಿತ್ರಗಳು ನಿಷ್ಕೃಷ್ಟವಾಗಿರುವುದಕ್ಕಾಗಿ ಚೌಕನಾದ ಮನೆಗಳುಳ್ಳ ಪುಸ್ತಕಗಳನ್ನು ಉಪಯೋಗಿಸಬಹುದು. ಮುಂದೆ ಮಕ್ಕಳು ಕಲಿಯುವ ಅನೇಕ ಪಾಠಗಳಿಗೆ ಇಂತಹ ಚಿತ್ರಗಳು ಬೇಕಾಗುವುವು. ಆದರೆ ಇವುಗಳನ್ನು ಬರೆಸಲು ಪ್ರಾರಂಭಿಸುವುದಕ್ಕೆ ಮೇಲೆ ಹೇಳಿದಂತೆ ಸ್ವಲ್ಪ ವಯಸ್ಸಾಗಿರಬೇಕು. ಚಿತ್ರಬರೆಯುವುದಕ್ಕೆ ಮಕ್ಕಳು ಸರಿಯಾಗಿ ಕುಳಿತುಕೊಳ್ಳುವುದು ಮುಖ್ಯವು. ಬರೆಯುವ ಕೊಠಡಿಯೊಳಕ್ಕೆ ಬೆಳಕು ಸರಿಯಾಗಿ ಬರುತ್ತಿರಬೇಕು. ಶರೀರದತೂಕವು ಬಲಗೈಯಿನಮೇಲೆ ಇರಕೂಡದು. ಕಾಲುಗಳಮೇಲಿರಬೇಕು. ಬರೆಯುವ ಸುಣ್ಣವನ್ನು ಆಯುಕಿ ಹಿಡಿ

ದುಕೊಳ್ಳಕೂಡದು. ಬರೆಯುವ ಪೆನ್‌ಸಿಲ್ ಬಹಳ ಮೊನೆಯಾಗಿಯೂ ಅಥವಾ ಮೊಂಡಾಗಿಯೂ ಇರಕೂಡದು.

ಸಣ್ಣ ಮಕ್ಕಳ ತರಗತಿಗಳಲ್ಲಿ ಚಿತ್ರಬರೆಸುವುದು ಮಕ್ಕಳು ತಮ್ಮ ಅಂತರ್ಯವಾದ ಅಭಿಪ್ರಾಯಗಳನ್ನು ಹೊರಪಡಿಸುವುದಕ್ಕೆಂಬುದನ್ನು ಉಪಾಧ್ಯಾಯರು ಸದಾ ಜ್ಞಾಪಕದಲ್ಲಿಟ್ಟಿರಬೇಕು."

ಮೇಲಿನ ಉಪನ್ಯಾಸದಿಂದ ಪಾಠಶಾಲೆಗಳಲ್ಲಿ ಚಿತ್ರಬರೆಸುವುದಕ್ಕೆ ಅನುಕೂಲವಾದ ಮಾರ್ಗವೂ, ಅದಕ್ಕೆ ಬೇಕಾದ ಉಪಕರಣಗಳೂ ಯಾವವು ಎಂಬುದು ಸ್ಪಷ್ಟವಾಗಿ ತಿಳಿಯುವುದು.

M. V.

ಹಿಂದೂ ಬಾಲಕರು.

ಮನುಷ್ಯನಿಗೆ ದೇವರು ಜ್ಞಾನಶಕ್ತಿಯನ್ನು ಬಾಲ್ಯದಿಂದಲೂ ಉಂಟುಮಾಡಿರುವನು. ಅದು ಅವರಲ್ಲಿ ಮೊದಲಿಂದಲೂ ಕ್ರಮ ಕ್ರಮವಾಗಿ ವೃದ್ಧಿಹೊಂದುತ್ತ ಬರುವದು. ಹಾಗೆ ಅಭಿವೃದ್ಧಿಯು ಸ್ವತಃ ವಿಶೇಷವಾಗಿ ಆಗುವದಲ್ಲದೆ ಇತರರ ಸಹಾಯದಿಂದಲೂ ಆಗಬೇಕು. ಆ ಇತರರು ಮುಖ್ಯವಾಗಿ ತಂದೆತಾಯಿಗಳು, ಉಪಾಧ್ಯಾಯರು. ಅದು ಹಾಗಿರಲಿ. ಬಾಲಕರು ಪುಸ್ತಕಗಳನ್ನು ಓದುವದಕ್ಕೆ ಮುಂಚೆ ಎಷ್ಟರಮಟ್ಟಿಗೆ ತಿಳಿವಳಿಕೆಯನ್ನು ಪಡೆದಿರಬೇಕು? ಈಯಂಶವು ನಮ್ಮ ಜನಗಳಲ್ಲಿ ಶೇಕಡಾ 90 ಮಂದಿಗೆ ಗೊತ್ತಿಲ್ಲ. ಹುಡುಗರಿಗೆ 7 ವರ್ಷಗಳು ಆಗುವದರೊಳಗೆ ಅವರ ಸುತ್ತಮುತ್ತಲೂ ಇರುವ ವಸ್ತುಗಳ ಪರಿಜ್ಞಾನವುಂಟಾಗಿ ತನ್ಮೂಲಕ ಪಂಚೇಂದ್ರಿಯಗಳ ಶಕ್ತಿಯು ಹೆಚ್ಚಿ ಪ್ರಪಂಚದ ಜ್ಞಾನವು ಬಹಳಮಟ್ಟಿಗೆ ವೃದ್ಧಿಗೆ ಬರಬೇಕು. ಈವಿಷಯದಲ್ಲಿ ಆಂಗ್ಲೇಯರ ಹುಡುಗರನ್ನು ನೋಡಬಹುದು. ಅವರಿಗೆ ಅಷ್ಟು ಚಿಕ್ಕವಯಸ್ಸಿಗೆ ಪದಾರ್ಥಗಳ ವಿಜ್ಞಾನವು ಬಹಳಮಟ್ಟಿಗೆ ಪ್ರಜ್ವಲಿಸಿರುವದು. ಅದರಿಂದ ಚಟುವಟಿಕೆಯೂ, ಇಂದ್ರಿಯಗಳ ಪಾಟವವೂ ಬಲುಮೇಲಾಗಿರುವವು. ಆಂಗ್ಲೇಯರ ದೃಷ್ಟಾಂತರವನ್ನೆತ್ತುವುದು ಅನೇಕರಿಗೆ ಆಗುವುದಿಲ್ಲ ಅದೇತಕ್ಕೆ? ಸದ್ಗುಣಗಳನ್ನು ಯಾರಿಂದಲಾದರೂ ನೋಡಿ ಕಲಿಯು

ವದು ಉತ್ತಮವಲ್ಲವೇ? ಇತರವಿಧವಾದ ದುರ್ಗುಣಗಳು ಅಂತಿರಲಿ. ಮೊದಲು ವಿದ್ಯಾಭ್ಯಾಸದ ವಿಷಯದಲ್ಲಿ ನಮ್ಮ ಬಾಲಕರಿಗೂ, ಆಂಗ್ಲೇಯ ಬಾಲಕರಿಗೂ ಅಜಗಜಾಂತರವಿರುವದು. ಕಳೆದವರ್ಷ ನವರಾತ್ರಿಯಲ್ಲಿ ಮೈಸೂರಲ್ಲಿ ನಡೆದ ವಿದ್ಯಾಭ್ಯಾಸದ ಸಂಬಂಧವಾದ ಪ್ರದರ್ಶನದಲ್ಲಿ ಇಂಗ್ಲೆಂಡಿನಿಂದ 13 ವರ್ಷಗಳೊಳಗಿನ ವಯಸ್ಸುಳ್ಳ ಬಾಲಕರು ರಚಿಸಿರುವ ಚಿತ್ರಗಳು, ವಾಕ್ಯರಚನೆಗಳು, ಗಣಿತಗಳು ಇನ್ನೂ ಅನೇಕವಿಧವಾದ ಕೈಗಾರಿಕೆಗಳು ಇವುಗಳನ್ನು ನೋಡಿದರೆ ಅವರ ಕುಶಲತೆಯು ನಮ್ಮವರಿಗೆ ಸ್ವಲ್ಪಮಟ್ಟಿಗಾದರೂ ತಿಳಿಯಬರುವದು. ನಮ್ಮ ದೊಡ್ಡ ದೊಡ್ಡ ಹುಡುಗರಿಗೂ ಒಂದು ವಾಕ್ಯವನ್ನಾದರೂ ನೆಟ್ಟಗೆ ಬರೆಯುವದಕ್ಕಾಗುವದಿಲ್ಲ. ವಸ್ತುಗಳಲ್ಲಿರುವ ಬಣ್ಣಗಳನ್ನೂ ಕೂಡ ಬೇರೆಬೇರೆಯಾಗಿ ಕಂಡುಹಿಡಿದು ಹೇಳಲಾರರು. ಹಿತ್ತಲು, ಹೊಲ, ಗದ್ದೆ, ತೋಟಗಳಲ್ಲಿರುವ ಬಳ್ಳಿಗಿಡ ಮುಂತಾದ ಪ್ರಾಕೃತಿಕ ಪದಾರ್ಥಗಳ ಸ್ವರೂಪವೇ ತಿಳಿದಿರುವದಿಲ್ಲ. ಅದನ್ನು ತಿಳಿದುಕೊಳ್ಳುವದರಲ್ಲಿ ಆಸಕ್ತಿಯೂ ಅತ್ಯಂತ ಕಡಮೆ, ಆಯಾವಯಸ್ಸಿಗೆ ತಕ್ಕಂತೆ ದೇಹದ ಬೆಳೆವಳಿಗೆಯೂ, ದಾರ್ಢ್ಯವೂ ಇರುವದಿಲ್ಲ. ಆಹಾರವು ಅವರಿಗೆ ಇರುವಂತೆ ಇವರಿಗೆ ಇಲ್ಲವೆನ್ನಕೂಡದು. ಇವರು ನಿತ್ಯವೂ ತೆಗದುಕೊಳ್ಳುವ ಅಕ್ಕಿ, ರಾಗಿ, ಗೋಧಿ ಮುಂತಾದ ಧಾನ್ಯಗಳ ಆಹಾರವೇ ಇವರಿಗೆ ತಕ್ಕುದಾಗಿಯೂ ಈ ದೇಶಕ್ಕೆ ಅನುಗುಣವಾಗಿಯೂ ಇರುವದು. ಜರ್ಮಾದೇಶದವರ ಆಹಾರಸಾಮಗ್ರಿಯು ಕೇವಲ ಅಕ್ಕಿಯಲ್ಲವೆ? ಅವರು ಎಷ್ಟು ಬಲಶಾಲಿಗಳೆಂದು ಖ್ಯಾತಿಗೊಂಡಿರುವರು? ಆದರೆ ನಮ್ಮ ದೇಶದ ಬಾಲಕರ ವಿದ್ಯಾಭ್ಯಾಸದ ವಿಷಯದಲ್ಲಿ ಈ ರೀತಿ ಕೊರತೆಯಾಗುವದಕ್ಕೆ ಕಾರಣವೇನಿರಬಹುದು? ನಮ್ಮ ಬಾಲಕರಿಗೆ ಮೊದಲಿಂದಲೂ ತಕ್ಕ ಅಭ್ಯಾಸವು ನಡೆಯದಿರುವುದೇ ಇದಕ್ಕೆ ಮುಖ್ಯಕಾರಣವು. ಇಲ್ಲಿನ ಬಾಲಕರಿಗೆ ತಂದೆತಾಯಿಗಳು ಪ್ರಕೃತಿಸಂಬಂಧವಾದ ವಸ್ತುಗಳ ಪರಿಜ್ಞಾನ, ಕಥೆಗಳಮೂಲಕ ಒಳ್ಳೇ ನಡೆನುಡಿಗಳು ಇವು ಮುಂತಾದ ವಿಷಯಗಳಲ್ಲಿ ಬಾಲ್ಯದಿಂದ ಅಭ್ಯಾಸಮಾಡಿಸುವದಕ್ಕೆ ಪ್ರಯತ್ನಿಸುವುದೇ ಅತಿವಿರಳವು. ಹುಟ್ಟಿದ ತಪ್ಪಿಗೆ ಮಕ್ಕಳಿಗೆ ಅನ್ನಬಟ್ಟೆಗಳನ್ನು ಯಥಾಶಕ್ತಿ ಕೊಡುವರು. ಆದರೆ ಅವರ ಜ್ಞಾನಾಭಿವೃದ್ಧಿವಿಷಯದಲ್ಲಿ ಉದ್ಯೋಗವು ಅತ್ಯಂತ ಕಡಮೆ.

ಹುಡುಗರಿಗೆ 3–4ವರ್ಷಗಳಾದ ಒಡನೆ, ಮನೆಯಲ್ಲಿ ಚೇಷ್ಟೆಮಾಡವ್ವದು ತಪ್ಪಿದರೆಸಾಕು ಎಂಬ ಉದ್ದೇಶಮಾತ್ರದಿಂದಲೇ ಅವರನ್ನು ಮಠಗಳಿಗೆಬಿಡಿಸುವರಲ್ಲದೆ, ಆ

ವರು ನಿತ್ಯವೂ ಅಲ್ಲಿ ಏನು ಓದುತ್ತಾರೆ? ಏನು ಹೊಸದಾಗಿ ತಿಳಿದುಕೊಂಡರು? ಎಂಬು
ದೇ ಮೊದಲಾದುದನ್ನು ವಿಚಾರಿಸಿಕ್ಕೊಳ್ಳುವುದೇ ಇಲ್ಲ. ಬಾಲಕರಿಗೆ ಅನೇಕ ದುರಭ್ಯಾ
ಸಗಳು ಮೊದಲಿಂದಲೂ ಉಂಟಾಗಿರಬಹುದು. ಇನ್ನು ಕೆಲವು ಹೊಸದಾಗಿಬರಬಹು
ದು. ಇವುಗಳನ್ನು ನೋಡಿಕೊಳ್ಳುತ್ತ, ತಿದ್ದಬೇಕು. ಮುಖ್ಯವಾಗಿ ಮನುಷ್ಯನ ಕರ್ತ
ವ್ಯಗಳಲ್ಲಿ ಮಕ್ಕಳ ತಿದ್ದುವಾಡು ಮಾಡುವುದೂ ಒಂದು ಮುಖ್ಯವಾದುದು ಎಂಬುದ
ನ್ನು ನೆಮ್ಮವರು ಚೆನ್ನಾಗಿ ತಿಳಿಯಬೇಕು. ಅದುದರಿಂದ ನಮ್ಮಗಳ ಪ್ರತಿಯೊಬ್ಬ
ಬಾಲಕನೂ ಊಟ, ಆಟ, ಓದು, ನಡೆ, ನುಡಿ, ಇವುಗಳ ವಿಷಯದಲ್ಲಿ ಮೊದಲಿಂ
ದಲೂ ಒಳ್ಳೆಯ ಅಭ್ಯಾಸವನ್ನು ಹೊಂದಿದರೆ ಅವರು ಮುಂದೆ ಮೇಲಾಗಿ ಬಾಳುವು
ದಕ್ಕೆ ಸಂಶಯವಿಲ್ಲ.

ಬಿ. ಕೆ.

ಪುರವ್ಯವಹಾರ ಧರ್ಮಗಳು.

ಪೊಲೀಸ್.

ವಿದ್ಯಾರ್ಥಿ—ಇತರ ಸರ್ಕಾರಿ ಉದ್ಯೋಗಸ್ಥರಂತೆ ಅಲ್ಲದೆ ಬೇರೆಯವರದ ಷರಾಯಿ,
ಕೋಟು, ರುಮಾಲು ಇವುಗಳನ್ನು ಧರಿಸಿ, ಕೈಯಲ್ಲಿ ಆಯುಧಗಳನ್ನು ಹಿಡಿದಿ
ರುವ ಈ ಉದ್ಯೋಗಸ್ಥರು ಯಾರು? ಇವರನ್ನೇಕೆ ನಿಯಮಿಸಿರುವರು?

ಉಪಾಧ್ಯಾಯ—ಇವರನ್ನು ಪೊಲೀಸಿನವರೆಂದು ಕರೆಯುವರು. ಸರ್ಕಾರದವರು
ಪ್ರಜೆಗಳ ಸಂರಕ್ಷಣೆಗಾಗಿ ಇವರನ್ನು ನೇಮಿಸಿರುವರು.

ವಿ—ಈ ಉದ್ಯೋಗಸ್ಥರು ಪೂರ್ವಕಾಲದಿಂದ ಇದ್ದರೆ? ಅಥವಾ ಸರ್ಕಾರದವರು
ಹೊಸದಾಗಿ ಇವರನ್ನು ನಿಯಮಿಸಿ ಇರುವರೆ?

ಉ—ಈಗ್ಗೆ ಐವತ್ತು ವರುಷಗಳಿಗಿಂತ ಮುಂಚೆ ಸುಶಿಕ್ಷಿತರಾದ ಪೊಲೀಸಿನವರು ಇರ
ಲಿಲ್ಲ. ಗ್ರಾಮದ ನಾಕರರೂ, ಇತರರೂ ಸೇರಿ ಪ್ರಜಾರಕ್ಷಣೆಯನ್ನು ನಡ
ಯಿಸುತಿದ್ದರು. ಬೇರೆ ಬೇರೆ ಉದ್ಯೋಗಸ್ಥರಿಂದ ಪ್ರಜೆಗಳ ನೆಮ್ಮದಿಯನ್ನು
ಕಾಪಾಡುವುದು ಕಷ್ಟವಾಗಿ ತೋರಿದುದರಿಂದ ೧೮೫೯ನೇ ಇಸವಿಯಲ್ಲಿ
ಹೊಸ ನಿಬಂಧನೆಗಳನ್ನು ಏರ್ಪಡಿಸಿ, ಪೋಲೀಸ್ ಇಲಾಖೆಯೊಂದನ್ನು ಏಪ

ಡಿಸಿದರು. ಆ ಕಾನೂನು ಜಾರಿಗೆ ಬಂದಮೇಲೆ ಪ್ರತಿ ಒಂದು ರಾಷ್ಟ್ರದಲ್ಲಿಯೂ ಈ ಇಲಾಖೆಯು ಏರ್ಪಟ್ಟು, ಸರಿಯಾಗಿ ತರಬಿಯಿತ್ತು ಹೊಂದಿದ ಜನರನ್ನೇ ಈ ಕೆಲಸಗಳಿಗೆ ನಿಯಮಿಸಿ, ಸರ್ಕಾರದವರು ಪ್ರಜೆಗಳ ಪ್ರಾಣ, ಮಾನ, ಧನಗಳನ್ನು ಕಾಪಾಡುತ್ತ ಬರುತ್ತಲಿದಾರೆ.

ವಿ—ಈ ಇಲಾಖೆಗೆ ನಮ್ಮ ದೇಶದಲ್ಲಿ ಮುಖ್ಯಾಧಿಕಾರಿ ಯಾರು ?

ಉ—ಈ ಶಾಖೆಯು ಮುಖ್ಯಾಧಿಕಾರಿಗೆ ಪೊಲೀಸ್ ಇಲಾಖೆಯು ಇನ್ಸ್ಪೆಕ್ಟರ್ ಜನರಲ್ ಎಂಬುದು ಉದ್ಯೋಗದ ಹೆಸರು. ಈ ದೇಶದ ಪೋಲೀಸು ಸಿಬ್ಬಂದಿಯೆಲ್ಲವೂ ಅತನ ಅಧೀನದಲ್ಲಿರುವುದು.

ವಿ—ಈತನ ಅಧೀನದಲ್ಲಿರುವ ದೊಡ್ಡ ಉದ್ಯೋಗಸ್ಥರು ಯಾರು ?

ಉ—ನಮ್ಮ ದೇಶವು ಡಿಸ್ಟ್ರಿಕ್ಟುಗಳಾಗಿ ಭಾಗಿಸಲ್ಪಟ್ಟಿದೆಯಷ್ಟೆ ? ಪ್ರತಿಯೊಂದು ಡಿಸ್ಟ್ರಿಕ್ಟಿಗೂ ಒಬ್ಬೊಬ್ಬ ಪೋಲೀಸ್ ಸೂಪರಿಂಟೆಂಡೆಂಟ್ ಎಂಬ ಪ್ರಧಾನೋದ್ಯೋಗಸ್ಥನಿರುವನು. ಆಯಾಡಿಸ್ಟ್ರಿಕ್ಟಿನ ಪೋಲೀಸು ನೌಕರರೆಲ್ಲರೂ ಈತನ ಅಧೀನದಲ್ಲಿರುವರು.

ವಿ—ಪೋಲೀಸು ಇನ್ಸ್ಪೆಕ್ಟರೆಂಬವರಾರು ? ಇವರಿಗೆ ಎಷ್ಟರಮಟ್ಟಿಗೆ ಅಧಿಕಾರವಿರುವುದು ?

ಉ—ಪ್ರತಿ ತಾಲ್ಲೂಕಿನ ಅಮಲ್ದಾರರೂ, ತಮ್ಮ ತಾಲ್ಲೂಕಿನ ಪೊಲೀಸ್ ಸಿಬ್ಬಂದಿಯಮೇಲೆ ಅಧಿಕಾರವುಳ್ಳವರಾಗಿದ್ದರೂ, ಈ ಇಲಾಖೆಗೆ ಪ್ರತ್ಯೇಕವಾಗಿ ತಾಲ್ಲೂಕಿಗೆ ಒಬ್ಬೊಬ್ಬ ಪೋಲೀಸ್ ಇನ್ಸ್ಪೆಕ್ಟರ್ ಎಂಬ ಅಧಿಕಾರಿ ಇರುವರು. ಇವರು ಅಮಲ್ದಾರರ ಮುಖಾಂತರ ಕಾಗದಪತ್ರಗಳನ್ನು ನಡಿಸುತಿದ್ದರೂ ತಾಲ್ಲೂಕಿನ ಪೊಲೀಸ್ ಅಧಿಕಾರವನ್ನೆಲ್ಲ ವಹಿಸಿರುವರು.

ವಿ—ಇವರ ಅಧೀನದಲ್ಲಿರುವ ಉದ್ಯೋಗಸ್ಥರು ಯಾರು ?

ಉ—ಸಾಮಾನ್ಯವಾಗಿ ತಾಲ್ಲೂಕಿಗೆ ಒಬ್ಬ ಪೋಲೀಸ್ ಜಮಾದಾರನಿರುವನು. ಪ್ರತಿ ಒಂದು ದೊಡ್ಡ ಊರಿನಲ್ಲಿಯೂ ಒಂದೊಂದು ಪೋಲೀಸ್ ಸ್ಟೇಷನ್ ಉಂಟು. ಆ ಸ್ಟೇಷನ್ ಅಧಿಕಾರಿಗೆ ಹೆಡ್‌ಕಾನ್ಸ್ಟೇಬಲ್ ಅಥವಾ ಪೊಲೀಸ್ ದಫೇದಾರ ಎಂಬ ಹೆಸರು ಇರುವುದು. ಸ್ಟೇಷನ್ನಿನ ಅನುಕೂಲಕ್ಕೆ ತಕ್ಕಂತೆ ಹಲವರು ಪೊಲೀಸ್ ಕಾನ್ಸ್ಟೇಬಲ್‌ಯಾನೆ ನೌಕರರಿರುವರು.

ವಿ—ಸಾಮಾನ್ಯವಾಗಿ ಒಂದೊಂದು ಸ್ಟೇಷನ್ನಿಗೆ ಎಷ್ಟು ಗ್ರಾಮಗಳು ಸೇರಿರುವುವು ?

ಉ—ಜನಸಂಖ್ಯೆಯಮೇಲೆ ಸ್ಟೇಷ್ಟಗೆ ತಕ್ಕಷ್ಟು ಗ್ರಾಮಗಳನ್ನೊಳಪಡಿಸಿರುವರು. ಕೆಲವ್ಯಕಡೆ ೨೦—೩೦ ಗ್ರಾಮಗಳಿಗೆ ಒಂದೊಂದು ಸ್ಟೇಷ್ಟ (ಠಾಣಾ) ಇರಬಹುದು.

ವಿ—ಒಂದೊಂದು ಸ್ಟೇಷನಿಗೆ ಎಷ್ಟು ಸಿಬ್ಬಂದಿಯುಂಟು ?

ಉ—ಸ್ಟೇಷ್ಟನ ಹೆಡ್ ಕಾರ್ಸ್ಟೇಬಿಲ್ಲಲ್ಲದೆ ೫ ರಿಂದ ೧೦ ರವರಿಗೆ ಪೋಲೀಸ್‌ನೌಕರರು ಇರಬಹುದು.

ವಿ—ಈ ಜವಾನರು ಮಾಡತಕ್ಕ ಕೆಲಸಗಳು ಯಾವ್ಯವು ?

ಉ—ಸ್ಟೇಷ್ಟಗೆ ಸೇರಿದ ಗ್ರಾಮಗಳನ್ನು ಬೀಟುಗಳಾಗಿ ಅಂದರೆ ಐದಾರು ಗುಂಪುಗಳಾಗಿ ಭಾಗಿಸಿರುವರು. ಸ್ಟೇಷ್ಟನಲ್ಲಿ ಇಬ್ಬರು ಮೂವರು ಜವಾನರು ಹಾಜರಿರುವರು. ಮಿಕ್ಕವರನ್ನು ಬೀಟಿಗೆ ಒಬ್ಬೊಬ್ಬರಂತೆ ದಿನಂಪ್ರತಿ ಗ್ರಾಮಾಂತರಗಳಮೇಲೆ ಕಳುಹಿಸುವರು.

ವಿ—ಜವಾನರು ಗೊತ್ತಾಗಿ ಇಂತಿಂತ ಗ್ರಾಮಗಳಿಗೆ ನಿತ್ಯವೂ ಹೋಗಿಬರಬೇಕೆಂಬ ನಿಯಮವುಂಟೊ ?

ಉ—ಇಲ್ಲ. ಜವಾನರನ್ನು ಬದಲಾಯಿಸಿ ಬೀಟುಗಳಿಗೆ ಕಳುಹುವ ಪದ್ಧತಿ ಇಟ್ಟಿರುವರು. ಸ್ಟೇಷನಿನಲ್ಲಿರುವವರನ್ನು ಬೀಟಿಗೆ ಅಗಾಗ್ಗೆ ಕಳುಹಿ, ಬೀಟಿನಲ್ಲಿರುವವರನ್ನು ಸ್ಟೇಷ್ಟ ಅಪ್ಪಣೆಗೂ ಇಡುವರು. ಯಾವಾಗಲೂ ಒಬ್ಬೊಬ್ಬರಿಗೆ ಒಂದೇ ಕೆಲಸ ನಿಯಮಿಸದೆ ಬದಲಾಯಿಸುತ್ತಿರುವ್ಯದರಿಂದ ಲಾಭವುಂಟು.

ವಿ—ಇಂತಹ ಏರ್ಪಾಡುಗಳನ್ನು ಮಾಡುವವರು ಯಾರು ?

ಉ—ಪ್ರತಿ ಸ್ಟೇಷ್ಟ ಅಧಿಕಾರಿಯೇ ಜವಾನರ ಕಾರ್ಯವನ್ನು ನಿರ್ಣಯಿಸುವನು.

ವಿ—ಸ್ಟೇಷ್ಟ ಆಫೀಸರು ಮಾಡುವ ಕೆಲಸ ಯಾವ್ಯದು ?

ಉ—ಅತನು ಆಗಾಗ್ಗೆ ಗ್ರಾಮಗಳನ್ನು ಗಸ್ತುಮಾಡುತ್ತ, ಜವಾನರು ತಮ್ಮ ಕೆಲಸವನ್ನು ಕ್ರಮವಾಗಿ ನಡಿಸುವರೋ ಇಲ್ಲವೋ ಎಂಬುದನ್ನು ವಿಚಾರಿಸುವನು. ಸಮಯಬಿದ್ದಾಗ ಯಾವ್ಯದಾದರೂ ಒಂದು ಮೊಕದ್ದಮೆಯನ್ನು ತನಿಖೆ ಮಾಡಲು ಒಬ್ಬರಿಬ್ಬರು ಜವಾನರೊಂದಿಗೆ ಹೋಗಿ ವಿಚಾರಮಾಡಿಕಳುಹುವನು.

ವಿ—ಬೀಟಿಗೆ ಹೋಗುವ ಜವಾನನ ಕರ್ತವ್ಯವೇನು ?

ಉ—ಪ್ರತಿ ಜವಾನನಲ್ಲಿಯೂ ಒಂದು ಬೀಟು ಬುಕ್ಕಿರುವುದು. ಇದರಲ್ಲಿ ಗುಮಾನಿ ಆಸಾಮಿಗಳನ್ನೂ, ಹೆಂಡದಂಗಡಿ, ಜೂಜಿನಮನೆ ಮುಂತಾದ ಜನಸಂಘ ಸೇರುವಕಡೆ ನಡೆವ ವಿಶೇಷಗಳನ್ನೂ, ಗ್ರಾಮದಲ್ಲಿ ನಡೆದ ಹೆಚ್ಚುವಿಷಯುಗಳನ್ನೂ, ಒಡ್ಡರು ಮುಂತಾದ ಗುಂಪಿನವರ ವಿಚಾರಗಳನ್ನೂ ಗುರುತಿಸುವುದಲ್ಲದೆ ಅಲ್ಲಿನ ವಿಶೇಷಾಂಶಗಳನ್ನು ಬರೆಯಿಸಿ ಗ್ರಾಮಾಧಿಕಾರಿಯು ರುಜು ಪಡೆಯತಕ್ಕುದು.

ವಿ.—ಪೋಲೀಸಿನವರು ಗ್ರಾಮಾಂತರಕ್ಕೆ ಹೋದಾಗ ಮತ್ತೇನಾದರೂ ವಿಚಾರಿಸಬಹುದೆ?

ಉ.—ಯಾವದಾದರೂ ತಪ್ಪು ನಡೆದಾಗ ಅದನ್ನು ಸ್ಟೇಷ್ಟ ಅಧಿಕಾರಿಗೆ ತಿಳಿಸಬೇಕು. ಖೂನಿ, ಕಳ್ಳತನ, ಹಿಂಸೆ, ದರೋಡೆ ಮುಂತಾದುವು ನಡೆದಾಗ ಪಟೇಲನ ಸಹಾಯದಿಂದ ಅಪರಾಧಿಗಳನ್ನು ಸ್ಟೇಷನಿಗೆ ಕರೆದೊಯ್ದು ಒಪ್ಪಿಸತಕ್ಕುದು.

ವಿ.—ಪೋಲೀಸಿನವರು ಬೀಟಿನ ಕೆಲಸ ಮುಗಿಸಿದಮೇಲೆ ಮಾಡತಕ್ಕುದೇನು?

ಉ.—ಮಧ್ಯಾಹ್ನದೊಳಗೆ ಈ ಕೆಲಸ ಮುಗಿಸಿಕೊಂಡು ಸ್ಟೇಷನಿಗೆ ಬಂದು ಸೇರಬೇಕು.

ವಿ.—ಅಮೇಲೆ ಸ್ಟೇಷನಿನಲ್ಲಿ ಮಾಡುವ ಕೆಲಸ ಯಾವುದು?

ಉ.—ಜವಾನರು ತಮ್ಮ ಬೀಟು ಬುಕ್ಕುಗಳನ್ನು ರುಜು ಮಾಡಿ ಸ್ಟೇಷ್ಟ ಆಫೀಸರಿಗೆ ಒಪ್ಪಿಸತಕ್ಕುದು, ಅವನು ಅದನ್ನು ತನಿಖೆ ಮಾಡಿ, ವಾಪಸು ಮಾಡುವನು. ರೋಗಗಳು, ಜನನಮರಣಗಳು, ಪ್ರಜೆಗಳ ನೆಮ್ಮದಿ, ಅವರ ರಕ್ಷಣೆ ಮುಂತಾದುವುಗಳನ್ನು ವಿಚಾರ ಮಾಡುವುದು ಇವರ ಮುಖ್ಯಕೆಲಸವಾಗಿರುವುದು.

ವಿ.—ಬೀಟು ಇಲ್ಲದ ಕಾಲದಲ್ಲಿ ಜವಾನರು ಏನುಮಾಡತಕ್ಕುದು?

ಉ.—ತಮ್ಮ ಕರ್ತವ್ಯವನ್ನು ತಿಳಿದುಕೊಳ್ಳಲು ತಕ್ಕಂತ ವಿದ್ಯೆಕಲಿಯುವುದು, ನಿತ್ಯವೂ ಕವಾಯತು ಯಾನೆ ಅಂಗಸಾಧನೆಯನ್ನು ಅಭ್ಯಾಸ ಮಾಡತಕ್ಕುದು.

ವಿ.—ಜವಾನರಿಗೆ ಸರ್ಕಾರದಿಂದ ಕೊಡಲ್ಪಡುವ ಆಯುಧಗಳು ಯಾವುವು?

ಉ.—ಸ್ಟೇಷ್ಟನಲ್ಲಿರುವ ಜವಾನರಿಗೆ ಸರ್ಕಾರದಿಂದ ೧ ದೊಣ್ಣೆ ೧ ಕತ್ತಿ ೧ ಮದ್ದಿನ ತುಪಾಕಿ ಈ ಮೂರು ಆಯುಧಗಳು ಕೊಡಲ್ಪಡುವುವು.

ವಿ.—ಪ್ರತಿ ಜವಾನನು ಇವುಗಳನ್ನೆಲ್ಲ ಉಪಯೋಗಿಸುವನೊ ?

ಉ:—ಹಾಗಲ್ಲ. ಯಾವಾಗಲೂ ಇವುಗಳನ್ನು ಧರಿಸಿ ಬೀದಿಬೀದಿ ತಿರುಗಬೇಕೆಂಬ ವಿಧಿಯಿಲ್ಲ, ಕೆಲಸಗಳ ಗಲಾಟೆಗೆ ತಕ್ಕಂತೆ ಆಯುಧಗಳನ್ನು ಆಯಾ ಸ್ಟೇಷನಿಗೆ ಕೊಟ್ಟಿರುವರು. ಆ ಅಧಿಕಾರಿಯು ಜವಾನರ ಕೆಲಸವನ್ನರಿತು ಸಂದರ್ಭಾನುಸಾರ ಅವರಿಗೆ ಬೇಕಾದ ಆಯುಧಗಳನ್ನು ಕೊಡುತ್ತಿರುವನು.

ವಿ.—ಜವಾನರು ಯಾವಾಗಲೂ ಧರಿಸಬೇಕಾದ ಆಯುಧ ಯಾವುದು ?

ಉ.—ಸಾವಾನ್ಯವಾಗಿ ಬಿದುರು ದೊಣ್ಣೆಯನ್ನು ಯಾವಾಗಲೂ ಧರಿಸಬಹುದು. ಅವಶ್ಯಕ ಬಿದ್ದಾಗ ಇತರ ಆಯುಧಗಳನ್ನು ಧರಿಸಬೇಕಾಗುವುದು.

ವಿ.—ತುಪಾಕಿಗಳನ್ನು ಕತ್ತಿಗಳನ್ನು ಯಾವಾಗ ಉಪಯೋಗಿಸಬೇಕು ?

ಉ.—ಖೈದಿಗಳೆಮೇಲೆ ಪಹರೆ ಇರುವಾಗಲೂ, ಖಜಾನೆಯು ಕಾವಲು ಇರುವಾಗಲೂ ಇವುಗಳನ್ನು ಉಪಯೋಗಿಸಬಹುದು. ವಿಶೇಷ ಸಂದರ್ಭಗಳಲ್ಲಿ ಅಧಿಕಾರಿಗಳ ಅಪ್ಪಣೆಯಾದತೆ ಇವುಗಳನ್ನು ಧರಿಸುವರು.

ವಿ.—ಈ ಆಯುಧಗಳನ್ನು ಶುಚಿಯಾಗಿಡುವ ಕೆಲಸ ಯಾರದು ?

ಉ.—ಇದು ಜವಾನರ ಕರ್ತವ್ಯ ಪೊ. ಸ್ಟೇಷ ಅಧಿಕಾರಿಯು ವಾರಕ್ಕೊಂದು ಸಾರಿ ಇದರ ವಿಚಾರಣೆ ಮಾಡತಕ್ಕುದು.

ವಿ.—ಈ ಆಯುಧಗಳನ್ನೆಲ್ಲದೆ ಮತ್ತೇನನ್ನಾದರೂ ಸರ್ಕಾರದವರು ಇವರಿಗೆ ಕೊಡುತ್ತಿರುವರೆ ?

ಉ.—ಅವರು ತೊಟ್ಟುಕೊಳ್ಳುವ ಕೋಟು, ಷರಾಯಿ, ರುಮಾಲು, ಕಂಬಳಿ ಮುಂತಾದುವುಗಳನ್ನು ಸರ್ಕಾರದವರೇ ಕೊಡುವರು.

ವಿ.—ಇವುಗಳನ್ನು ಶುಭ್ರಪಡಿಸುವರು ಯಾರು ?

ಉ.—ಇದಕ್ಕೂ ಜವಾನರೇ ಉತ್ತರವಾದಿಗಳು, ಆಗಾಗ್ಗೆ ಅಧಿಕಾರಿಗಳು ನೋಡುವರು.

ವಿ.—ತುಪಾಕಿಗಳನ್ನುಪಯೋಗಿಸಲಿಕ್ಕೆ ಮದ್ದು ಗುಂಡುಗಳನ್ನು ಕೊಡತಕ್ಕವರಾರು ?

ಉ.—ಪ್ರತಿ ಸ್ಟೇಷನಿಗೂ ಗೊತ್ತಾದ ಮದ್ದು ಗುಂಡುಗಳು ಸರ್ಕಾರದಿಂದಲೇ ಸಿಗ್ಯುವುವು.

ವಿ.—ಇವುಗಳನ್ನು ಯಾವಾಗಲಾದರೂ ಉಪಯೋಗಿಸಬಹುದೆ ?

ಉ.—ಸರ್ಕಾರದ ಅಧಿಕಾರಿಗಳ ಅಪ್ಪಣೆಯಿಲ್ಲದೆ ಮನಸ್ಸು ಬಂದಂತೆ ಉಪಯೋಗಿಸ ಕೂಡದು.

ವಿ.—ಪ್ರಜೆಗಳು ತಮ್ಮ ಕಷ್ಟನಿವಾರಣೆಗಾಗಿ ಯಾರಲ್ಲಿ ಹೇಳಿಕೊಳ್ಳಬೇಕು?

ಉ.—ಪ್ರತಿ ಸ್ಟೇಷನಿನಲ್ಲಿಯೂ ಯಾವಾಗಲೂ ಒಬ್ಬ ಜವಾನನು ಕಾದೇ ಇರುವನು. ತಮ್ಮ ಫಿರ್ಯಾದನ್ನು ಬರಹದ ಮೂಲಕ ಆತನಿಗೆ ತಿಳಿಸತಕ್ಕದ್ದು.

ವಿ.—ಒಂದು ಫಿರ್ಯಾದು ಕೊಟ್ಟಮೇಲೆ ಏನು ನಡೆಯುವುದು?

ಉ.—ಸ್ಟೇಷ್ ಅಧಿಕಾರಿಯು ಫಿರ್ಯಾದು ಬಂದ ಒಡನೆ ಹತ್ತಿರವಿರುವ ಮ್ಯಾಜಿಸ್ಟ್ರೇಟರಿಗೆ ತಿಳಿಸುವನು. ಆಗಲೇ ವಿಚಾರಣೆಗೆ ಪ್ರಾರಂಭವಾಗಿ ನಿಜವೋ ಸುಳ್ಳೋ ಎಂದು ತಿಳಿದು, ನಿಜವಾಗಿ ತೋರಿದರೆ ಛಾರ್ಜ್ ಷೀಟನ್ನು ಮ್ಯಾಜಿಸ್ಟ್ರೇಟರಿಗೆ ಕಳುಹುವರು. ಸುಳ್ಳಾಗಿ ತೋರಿದರೆ ಇದನ್ನು ತೆಗೆದುಹಾಕಬೇಕೆಂದು ತಿಳಿಸುವರು. ಅದರಂತೆ ಆ ಫಿರ್ಯಾದನ್ನು ರದ್ದುಮಾಡುವರು.

ವಿ.—ದೊಡ್ಡ ಅಪರಾಧಗಳ ವಿಷಯವಾಗಿ ರಿಪೋರ್ಟು ಬಂದಾಗ ಆಫೀಸರೇನು ಮಾಡಬೇಕು?

ಉ.—ತಪ್ಪಿತದ ಸ್ವಭಾವದಮೇಲೆ ನಿನ್ನೇ ಆಥವಾ ೨ನೇ ತರದ ಮ್ಯಾಜಿಸ್ಟ್ರೇಟರಿಗೆ ತಿಳಿಸಿ, ಕೃತ್ಯನಡೆದ ಸ್ಥಳಕ್ಕೆ ಹೋಗಿ ವಿಚಾರಮಾಡಿ, ಸಾಕ್ಷಿಗಳನ್ನೊದಗಿಸಿ, ಆಪರಾಧಿಗಳನ್ನು ದಂಡಾಧಿಕಾರಿಯು ಎದುರಿಗೆ ತರತಕ್ಕದ್ದು.

ವಿ.—ಜನರಮೇಲೆ ಸ್ಟೇಷ್ ಆಫೀಸರ ಅಧಿಕಾರವೆಷ್ಟರಮಟ್ಟಿಗೆ ಇರುವುದು?

ಉ.—ಅವರ ನಡತೆ ಚೆನ್ನಾಗಿರುವಂತೆ ನೋಡತಕ್ಕದ್ದು. ಅವರು ಏನಾದರೂ ತಪ್ಪು ಮಾಡಿದರೆ ಮೇಲಿನ ಅಧಿಕಾರಿಗೆ ತಿಳಿಸಿ, ಅವರ ತಪ್ಪು ನಿಜವಾಗಿದ್ದಲ್ಲಿ ನಿಂದಾ ವಾಚಕವಾದ ಒಂದು ಬ್ಲಾಕ್ ಮಾರ್ಕ್ (ಕರಿಯ ಚುಕ್ಕೆ) ಕೊಡುವರು.

ವಿ.—ಇದರಿಂದ ಅವನಿಗೆ ಆದ ನಷ್ಟವೇನು?

ಉ.—ಮೂರು ಕರಿಯಚುಕ್ಕೆ ಪಡೆದವನ ಸಂಬಳ ತಗ್ಗಿಸಲ್ಪಡುವದೂ ಆರು ಚುಕ್ಕೆಗಳನ್ನು ಪಡೆದವರಿಗೆ ಕೆಲಸ ನಿಲ್ಲದು.

ವಿ.—ಸ್ಟೇಷ್ ಆಫೀಸರನ್ನು ಶಿಕ್ಷಿಸುವ ಅಧಿಕಾರ ಯಾರದು?

ಉ.—ಇನ್‌ಸ್ಪೆಕ್ಟರ ರಿಪೋರ್ಟಿನಮೇಲೆ ಸೂಪರಿಂಟೆಂಡೆಂಟರು ಇನ್‌ಸ್ಪೆಕ್ಟರು ಜನರಲ್ ರವರಿಗೆ ತಿಳಿಸುವರು. ಅವರು ತಕ್ಕ ಶಿಕ್ಷೆ ವಿಧಿಸುವರು.

ವಿ.—ಪೋಲಿಸ್ ಜವಾನರ ವಾಸಸ್ಥಳ ಯಾವುದು?

ಉ.—ಸರ್ಕಾರದವರು ಇವರ ವಾಸಕ್ಕಾಗಿ ಸ್ಟೇರ್ಷ ಬಳಿ ಮನೆಗಳನ್ನು ಕಟ್ಟಿಸಿರುವರು. ಸ್ವಲ್ಪ ಬಾಡಿಗೆ ಕೊಡಬೇಕು.

ವಿ.—ಪೋಲಿಸು ಸ್ಟೇರ್ಷಗೆ ಯಾರಾದರೂ ಉದ್ಯೋಗಸ್ತರು ಹೋಗಿಬರಬಹುದೆ?

ಉ.—ಪಾಠಶಾಲೆ ಆಸ್ಪತ್ರೆ ಮುಂತಾದ ಸ್ಥಳಗಳಂತೆಯೇ ಪೋಲಿಸು ಸ್ಟೇರ್ಷಗಳಿಗೂ ಅಧಿಕಾರಿಗಳು ಹೋಗಿಬರಬಹುದು. ತಮ್ಮ ಅಭಿಪ್ರಾಯಗಳನ್ನು ಸರ್ಕಾರಕ್ಕೆ ತಿಳಿಸಬಹುದು. ಇವರ ಅಭಿಪ್ರಾಯವನ್ನು ಬರೆದಿಡಲು ಒಂದು ಪುಸ್ತಕ ಇಡಲ್ಪಟ್ಟಿರುವುದು. ಅದರ ಬರವಣಿಗೆಗೆ ಸರ್ಕಾರದವರು ಹೆಚ್ಚಾಗಿ ಗಮನ ಕೊಡುವರು.

ಒಂದನೆ ಇಯತ್ತೆಯ ಬಾಲರಿಗೆ ಅಭಿನಯರೂಪವಾಗಿ ಬೋಧಿಸತಕ್ಕ ಕಥೆ ಮತ್ತು ಹಾಡು.

ಹುಡುಗರಿಗೆ ಉಪಾಧ್ಯಾಯನು ಈ ಕಥೆಯುನ್ನು ಸಂಗ್ರಹವಾಗಿ ತಿಳಿಸಬೇಕು. (ಕಥೆ)

ರಂಗಯ್ಯನೆಂಬ ಹುಡುಗನನ್ನು ಶಾಲೆಗೆ ಹೋಗಿ ವಿದ್ಯೆ ಕಲಿಯಬೇಕೆಂದು ಅವನ ತಾಯಿತಂದೆಗಳು ಕಟ್ಟುಮಾಡಿದ್ದರು. ತಂದೆಯು ಒಂದಾನೊಂದು ಕೆಲಸಕ್ಕಾಗಿ ಮತ್ತೊಂದೂರಿಗೆ ಹೋಗಿಬರಬೇಕಾದ ಅಗತ್ಯ ಬಿದ್ದುದರಿಂದ ಮಗನಿಗೆ ತಪ್ಪದೆ ಸ್ಕೂಲಿಗೆ ಹೋಗಿ ಬಾರೆಂದು ಹೇಳಿ, ಹೋದನು. ಹುಡುಗನು ತಾಯಿಯು ಮಾತನ್ನು ಲಕ್ಷ್ಯವಿಡದೆ, ಶಾಲೆಗೆ ಹೋಗುವುದನ್ನು ಬಿಟ್ಟು, ಊರಹೊರಗೆ ಆಡಲಿಕ್ಕೆ ಹೋದನು. ಆಟಕ್ಕೆ ತಕ್ಕ ಜತೆ ಯಾರೂ ಇಲ್ಲದುದರಿಂದ ಹತ್ತಿರ ಹೋಗುತಲಿದ್ದ ನಾಯನ್ನು "ತನ್ನೊಡನೆ ಆಡುಬಾ" ಎಂದು ಕರೆದನು. ನನ್ನೊಡೆಯನ ಮಂದೆ ಕಾಯುಬೇಕಾಗಿರುವುದರಿಂದ ನನಗೆ ತೀರುವುದಿಲ್ಲವೆಂದು ಹೇಳಿ ಅದು ಹೊರಟುಹೋಯಿತು. ಆಮೇಲೆ ಆದೇದಾರಿಯಲ್ಲಿ ಹೋಗುತ್ತಿದ್ದ ಕಾಗೆಯನ್ನು "ನೋಡಿ; ನನ್ನೊಡನೆ ಆಡಲಿಕ್ಕೆ ಬರುವೆಯಾ?" ಎಂದು ಕೇಳಿದನು. ನಾನು ಈದಿನವೆಲ್ಲ ಕಷ್ಟಪಟ್ಟು ಗೂಡುಕಟ್ಟಬೇಕಾಗಿದೆ; ಮಳೆಗಾಲ ಸವಿನಾಪಿಸಿತು; ಆದುದರಿಂದ ನಿನ್ನಕೂಡ ಆಡಲು ನನಗೆ ವಿರಾಮವಿಲ್ಲವೆಂದು ಹೇಳಿ ಅದು ಹಾರಿಹೋ

ಯಿತು. ಹತ್ತಿರ ಕೆಲವು ಜೀನುನೊಣಗಳು ಹಾರಾಡುತ್ತಿದ್ದುವು. ಅವುಗಳನ್ನು ನೋಡಿ, ನೀವಾದರೂ ನನ್ನೊಡನೆ ಆಡಬನ್ನಿರೆಂದು ಕರೆದನು. ನಾವು ಹಗಲೆಲ್ಲ ದುಡಿದು ಹೂಗಳ ಮಕರಂದ (ರಸ) ವನ್ನು ಕೂಡಿಸಬೇಕಾಗಿದೆ. ನಮಗೆ ಒಂದು ನಿಮಿಷವೂ ಬಿಡುವಿಲ್ಲವೆಂದು ಅವು ಹೊರಟವು. ಆ ಹುಡುಗನು ಹತ್ತಿರ ಹರಿದಾಡುತ್ತಿದ್ದ ಇರುವೆಗಳನ್ನು ನೋಡಿ, ನೀವಾದರೂ ಆಡಲಿಕ್ಕೆ ಬರಬಾರದೆ? ಎಂದನು. ಮುಂದಿನ ಚಳಿಗಾಲಕ್ಕೆ ಆಹಾರವನ್ನು ಕೂಡಿಡಬೇಕಾದುದರಿಂದ ನಮಗೆ ಅವಕಾಶವು ಸ್ವಲ್ಪವೂ ಇಲ್ಲವೆಂದು ಹೇಳಿದುವು ಆಗ ಆ ಹುಡುಗನು ಬೇಸತ್ತು, ನಾಚಿಕೊಂಡು, ಮುಂದೆ ತಪ್ಪದೆ ಸ್ಕೂಲಿಗೆ ಹೋಗಿಬರಬೇಕೆಂದು ನಿಶ್ಚಯಿಸಿದನು.

ಆಟ— ಉಪಾಧ್ಯಾಯನು ಕೆಲವು ಹುಡುಗರನ್ನು ನಿಯಮಿಸಿ, ಅವರವರು ಆಡಬೇಕಾದ ಮಾತುಗಳನ್ನು ಅಭಿನಯಿಸಿ ತೋರಿಸಬೇಕೆಂದು ತಿಳಿಸಿ, ಸಿದ್ಧಪಡಿಸತಕ್ಕದ್ದು.

ಸೋಮಾರಿ ರಂಗಯ್ಯನ ತಾಯಿತಂದೆಗಳಂತೆ ಇಬ್ಬರು ಬಾಲರು ಅಭಿನಯಿಸತಕ್ಕದ್ದು.

(ಗೋಪಾಲ, ನಾರಾಯಣ ಇವರಿಬ್ಬರು ಪ್ರವೇಶಿಸುವರು) ಗೋಪಾಲನು ಕುರ್ಚಿಯಮೇಲೆ ಕುಳಿತಿರುವನು; ನಾರಾಯಣನು ನಿಂತಿರುವನು. ಇನ್ನೊಬ್ಬ ಹುಡುಗನು ರಂಗಯ್ಯನನ್ನು ಅಭಿನಯಿಸುತ್ತಾ, ಕೈಯಲ್ಲಿ ಪುಸ್ತಕಗಳನ್ನು ಹಿಡಿದುಕೊಂಡು, ಒಂದು ಮೂಲೆಯುಲ್ಲಡಗಿರುವನು.

ಗೋಪಾಲ— ರಂಗ ನೀನು ನಿತ್ಯವೂ ತಪ್ಪದೆ ಶಾಲೆಗೆ ಹೋಗಬೇಕು; ನಿನ್ನ ಪಾಠಗಳನ್ನು ಚೆನ್ನಾಗಿ ಕಲಿಯಬೇಕು; ವಿದ್ಯೆ ಕಲಿತರೆ ತುಂಬಾ ಹಣ ಸಂಪಾದಿಸಬಹುದು, ಎಲ್ಲರಲ್ಲಿಯೂ ಗೌರವವನ್ನು ಸಂಪಾದಿಸಬಹುದು.

ರಂಗ—(ಗೋಪಾಲನ ಕಡೆ ತಿರಸ್ಕಾರದಿಂದ ನೋಡುತ್ತ) ಎನು! ನಿತ್ಯವೂ ಸ್ಕೂಲಿಗೆ ಹೋಗಬೇಕೆ? ಎಂದಾದರೂ ಒಂದುದಿನ ತಪ್ಪಿದರೆ ನಷ್ಟವೇನು?

ಗೋಪಾ—(ಥಟಕ್ಕನೆ ಎದ್ದು ರಂಗಯ್ಯನಕಡೆ ಕೋಪದಿಂದ ನೋಡಿ) ಏನೋ? ಇಷ್ಟರವನಾದೆ! ಜೋಟುದ್ದವಿರುವ ನಿನಗೆ ಇಷ್ಟು ಹರಟೆಯೆ? ಈ ಮಾತುಗಳನ್ನೆಲ್ಲಿ ಕಲಿತೆ? (ಕೈಯ್ಯಲ್ಲಿ ಬೆತ್ತವನ್ನು ಹಿಡಿದು ಬೆದರಿಸುತ್ತ) ನೀನು ಶಾಲೆಗೆ ಹೋಗದಿದ್ದರೆ ನಿನ್ನ ಮೂಳೆಗಳನ್ನು ಮುರಿದು ಪುಡಿಪುಡಿಮಾಡಿಬಿಡುವೆನು. (ಎಂದು ಉಗ್ರವಾಗಿ ಹಲ್ಲುಕಡಿಯುತ್ತಾ) ನಾನು ಒಂದು ಕೆಲಸದ

ನಿಮಿತ್ತ ಹೋಗಿಬರುವೆನು, ತಿರುಗಿ ಬರುವಾಗ್ಗೆ ನೀನು ಶಾಲೆಗೆ ಹೋಗಿಲ್ಲ ವೆಂದು ತಿಳಿಯಬಂದರೆ ಆಗ ಏನುಮಾಡುವೆನೊ ? ನಿನಗೇ ತಿಳಿದೀತು, (ಎಂದು ಹೊರಟುಹೋಗುವನು)

ನಾರಾಯಣ—(ರಂಗಯ್ಯನ ತಾಯಿ ಎಂದು ಅಭಿನಯಿಸುತ್ತ, ರಂಗಯ್ಯನನ್ನು ಅಪ್ಪಿಕೊಂಡು ಮುದ್ದಾಡಿ, ಕಣ್ಣೀರು ಕಾರುವಂತೆ ಅಭಿನಯಿಸುತ್ತ) (ತನ್ನಲ್ಲಿ) ಹುಟ್ಟದೆ ಹುಟ್ಟದೆ ಎಲ್ಲೋ ಒಬ್ಬ ಮಗ ಹುಟ್ಟಿದರೆ ಅವನನ್ನು ಭೂಮಿಯುಮೇ ಲಯೇ ಇರಗೊಳಿಸರು, ಸಾಕುಸಾಕು! ಒಂದುದಿನದಲ್ಲೆ ವಿದ್ಯೆಯೆಲ್ಲ ಹೋಗಿಬಿಡುವುದೆ ? (ಬಹಿರಂಗವಾಗಿ ರಂಗಯ್ಯನೊಂದಿಗೆ) ಅಣ್ಣಯ್ಯ! ನಿನ್ನನ್ನು ಅವರು ಹೊಡೆಯುವರು ; ಇದ್ದರಿಂದ ತಪ್ಪದೆ ಶಾಲೆಗೆ ಹೋಗಿ ಓದಿ ಕೊಳ್ಳಪ್ಪಾ !

ರಂಗ—ಸರಿಸರಿ. (ಎಂದು ತಾಯಿಯಿಂದ ಬಿಡಿಸಿಕೊಂಡು ಊರಹೊರಕ್ಕೆ ಹೋ ಗುವಂತೆ ಸ್ವಲ್ಪದೂರ ಹೋಗಿ, ಇತ್ತತ್ತ ನೋಡುತ್ತಿರುವನು)

(ಇಲ್ಲಿ ನಾಯುನ್ನಭಿನಯಿಸುತ್ತ ಹನುಮನೆಂಬ ಹುಡುಗನು ರಂಗಯ್ಯನ ಈಡೆ ನೋಡದೆ ಬಹು ಕೆಲಸವಿರುವನಂತೆ ನಟಿಸುತ್ತ, ಆವನ ಹತ್ತಿರದಲ್ಲಿಯೇ ಹೋಗು ತ್ತಿರುವನು)

(ರಂಗಯ್ಯನು ಹನುಮನ ಕೈಹಿಡಿದುಕೊಂಡು) ಇಷ್ಟು ಅವಸರದಿಂದ ಎಲ್ಲಿಗೆ ಹೋಗುತ್ತೀ ; ನಾವಿಬ್ಬರೂ ಸ್ವಲ್ಪ ಹೊತ್ತು ಆಡೋಣ ಬಾ.

ಹನುಮ—(ಮುಖ ಗಂಟುಹಾಕಿಕೊಂಡು ಅಸಹ್ಯದಿಂದ) ಸಾಕು ಬಿಡು ! ನಾನು ಮಾಡತಕ್ಕ ಕೆಲಸವೇನು ? ಎಷ್ಟು ಹಣವನ್ನು ನಾನು ರಕ್ಷಿಸಬೇಕಾಗಿದೆ ? ಬಲ್ಲೆಯಾ ? ಯಜಮಾನನ ಉಪ್ಪುತಿಂದು, ಅವನ ಕೆಲಸಮಾಡದೆ, ನಿನ್ನೊಡನೆ ಆಡುತ್ತಿರಲೆ ? ಹೀಗೆ ಹೇಳಲು ನಿನಗೆ ಹೇಗೆ ಬಾಯಿಬಂತು ; ಹುಚ್ಚಾ ಹೋಗು, ಹೋಗು, ನಾನು ನಿನ್ನೊಂದಿಗೆ ಆಡಲಾರೆನು. (ಎಂದು ಸಂಭ್ರ ಮದಿಂದ ಹೊರಟುಹೋಗುವನು)

K. R.

ವಿಷಯಗಳು.	ಪರೀಕ್ಷಕರ ಹೆಸರು ಮತ್ತು ವಿಳಾಸ.
ಇಂಗ್ಲೀಷು ವ್ಯಾಕರಣ ಮತ್ತು ಭಾಷೆ.	೧ ನೆಯ ಭಾಗಕ್ಕೆ ತುಮಕೂರು ಗೌ॥ ಹೈಸ್ಕೂಲ್ ಹೆಡ್ಮಾಸ್ಟರ್ ಮೆ॥ ವಿ. ಸುಬ್ರಮಣ್ಯಯ್ಯರ್, ಬಿ. ಎ. ಯವರು. ೨ ನೇ ಭಾಗಕ್ಕೆ ಬೆಂಗಳೂರು ವೆಸ್ಲಿಯನ್ ಮಿಷನ್ ಹೈಸ್ಕೂಲ್ ಮುಖ್ಯೋಪಾಧ್ಯಾಯರಾದ ರೆವರೆಂಡ್ ಎ. ಆರ್. ಫುಲ್ಲರ್ ಬಿ. ಎ. ಯವರು.
ಇಂಗ್ಲೀಷು ಬರವಣಿಗೆ ಮತ್ತು ಉಕ್ತಲೇಖನ.	ತುಮಕೂರು ಗೌ॥ ಹೈಸ್ಕೂಲ್ ಸಹಾಯೋಪಾಧ್ಯಾಯರಾದ ಮೆ॥ ಟಿ. ಕೃಷ್ಣಮೂರ್ತಿ ಬಿ. ಎ. ಯವರು.
ಇಂಗ್ಲೀಷು ವಾಕ್ಯರಚನೆ (ಲೋವರ್ ಸೆಕೆಂಡರಿ ಪರೀಕ್ಷೆಗೆ)	ತುಮಕೂರು ಗೌ॥ ಹೈಸ್ಕೂಲ್ ಹೆಡ್ಮಾಸ್ಟರ್ ಮೆ॥ ವಿ. ಸುಬ್ರಮಣ್ಯಯ್ಯರ್ ಬಿ. ಎ. ಯವರು.
ಭಾಷಾಂತರ (ಲೋವರ್ ಸೆಕೆಂಡರಿ ಪರೀಕ್ಷೆಗೆ)	ಶಿವಮೊಗ್ಗ ಗೌ॥ ಹೈಸ್ಕೂಲ್ ಹೆಡ್ಮಾಸ್ಟರ್ ಮೆ॥ ಎಂ. ಕೃಷ್ಣಯ್ಯಂಗಾರ್ ಬಿ. ಎ. ಯವರು.
ಗಣಿತ—ಲೋವರ್ ಸೆಕೆಂಡರಿ ಇಂಗ್ಲೀಷ್ ವಿದ್ಯಾರ್ಥಿಗಳಿಗೆ ಮಾತ್ರ.	ಕೋಲಾರದ ಗೌ॥ ಹೈಸ್ಕೂಲ್ ಹೆಡ್ಮಾಸ್ಟರಾದ ಮೆ॥ ಯಸ್. ಮಲ್ಲಾರಿರಾವ್ ಬಿ. ಎ. ಯವರು.
ಗಣಿತ—ಲೋವರ್ ಮತ್ತು ಅಪ್ಪರ್ ಸೆಕೆಂಡರಿ ಪರೀಕ್ಷೆಗೆ (ಇಂಗ್ಲೀಷ್ ವಿದ್ಯಾರ್ಥಿಗಳು ಹೊರತು.)	೧ ನೆಯ ಭಾಗಕ್ಕೆ ಚಿತ್ರದುರ್ಗದ ಗೌ॥ ಹೈಸ್ಕೂಲ್ ಸಹಾಯೋಪಾಧ್ಯಾಯರಾದ ಮೆ॥ ಎಂ. ಶಿವರಾಮ ಕೃಷ್ಣಯ್ಯರ್ ಯವರು. ೨ ನೆಯ ಭಾಗಕ್ಕೆ ಚಿಕ್ಕಬಳ್ಳಾಪುರದ ಗೌ॥ ಹೈಸ್ಕೂಲ್ ಸಹಾಯೋಪಾಧ್ಯಾಯರಾದ ಮೆ॥ ಕೆ. ಶ್ರೀನಿವಾಸ ಐಯ್ಯಂಗಾರ್ ಯವರು.

ವಿಷಯಗಳು.	ಪರೀಕ್ಷಕರ ಹೆಸರು ಮತ್ತು ವಿಳಾಸ.
ಹಿಂದೂಸ್ಥಾನಿ ವ್ಯಾಕರಣ, ಹಿಂದೂಸ್ಥಾನಿ ವಾಕ್ಯರಚನೆ; ಫಾರಸೀ ಭಾಷಾಪುಸ್ತಕಗಳು ಮತ್ತು ವ್ಯಾಕರಣ. (ಅಪ್ಪರ್ ಸೆಕೆಂಡರಿ ಪರೀಕ್ಷೆಗೆ) ಫಾರಸಿ ವ್ಯಾಕರಣ ಮತ್ತು ಉಕ್ತಲೇಖನ ಇತರ ಭಾಷಾ ಪುಸ್ತಕಗಳು, ಭಾಷಾಂತರ ಮತ್ತು ಹಿಂದೂಸ್ಥಾನಿ ಉಕ್ತಲೇಖನ. (ಲೋವರ್ ಸೆಕೆಂಡರಿ ಪರೀಕ್ಷೆಗೆ):	ಮೈಸೂರು ಮಹಾರಾಜಾ ಕಾಲೇಜ್ ಹಿಂದೂಸ್ಥಾನಿ ಮುನಿಷಿ ಹಜರತ್ ಸುಲ್ತಾನ್ ಮಹಮ್ಮದ್‌ಖಾನ್ ರವರು.
ಹಿಂದೂಸ್ಥಾನಿ ಟಿಕ್ಸ್‌ಟ್, ಹಿಂದೂಸ್ಥಾನಿ ಮತ್ತು ಪರಿಷಿಯನ್ ಭಾಷೆಯ ಭಾಷಾಂತರ ಮತ್ತು ಇತರ ಭಾಷಾಪುಸ್ತಕಗಳು.	ಮೈಸೂರು ಗ್ರಾ ॥ ನಾರ್ಮಲ್ ಸ್ಕೂಲ್ ಸಹಾಯೋಪಾಧ್ಯಾಯರಾದ ಹಜರತ್ ಮಹಮ್ಮದ್ ದಸ್ತಗೀರ್ ರವರು.
(ಲೋವರ್ ಸೆಕೆಂಡರಿ ಪರೀಕ್ಷೆಗೆ) ಹಿಂದೂಸ್ಥಾನಿ ಟಿಕ್ಸ್‌ಟ್, ವ್ಯಾಕರಣ, ವಾಕ್ಯರಚನೆ; ಹಿಂದೂಸ್ಥಾನಿ ಕೈಬರಹ, ಪರಿಷಿಯನ್ ಭಾಷಾಂತರ, ಉಕ್ತಲೇಖನ, ಕೈಬರಹ.	ಮೈಸೂರು ಗ್ರಾ ॥ ನಾರ್ಮಲ್ ಸ್ಕೂಲ್ ಸಹಾಯೋಪಾಧ್ಯಾಯರಾದ ಹಜರತ್ ಖಾದರ್ ಹುಸೇನ್ ರವರು.
ಅಪ್ಪರ್ ಸೆಕೆಂಡರಿ ಪರೀಕ್ಷೆಯ ಹಿಂದೂಸ್ಥಾನಿ ಗಣಿತ, ರೇಖಾ ಮತ್ತು ಕ್ಷೇತ್ರಗಣಿತ, ಬೀಜಗಣಿತ, ಆರೋಗ್ಯ, ವ್ಯವಸಾಯ, ಚರಿತ್ರೆ, ಭೂಗೋಳ ಮತ್ತು ಲೋವರ್ ಸೆಕೆಂಡರಿ ಪರೀಕ್ಷೆಗೆ ಭಾಷಾಂತರ ಇವುಗಳಿಗೆ.	

* ವಿದ್ಯಾದಾಯಿನಿ *

(A MONTHLY JOURNAL)

ಭಾಗ ೧೫.] ಜುಲೈ—೧೯೦೮. [ಸಂಚಿಕೆ ೭.

ಲ್ಯಾಂಪ್—(ದೀಪಸ್ತಂಭ).

ಈ ಪಾಠವನ್ನು ಬೋಧಿಸುವುದಕ್ಕೆ ಬೇಕಾದ ಲ್ಯಾಂಪುಗಳ ಭಾಗಗಳನ್ನು ಪ್ರಸಿದ್ಧವರ್ತಕರಾದ ಮದರಾಸಿನ ಮೆಸರ್ಸ್ ಸ್ಪೆನ್ಸರ್ ಮತ್ತು ಕಂಪೆನಿಯವರು ದಯವಿಟ್ಟು ತಯಾರ್ಮಾಡಿಸಿ ಕಳುಹಿಸಿರುವುದಕ್ಕಾಗಿ ಅವರಿಗೆ ನಾವು ಬಹಳ ಕೃತಜ್ಞರಾಗಿರುತ್ತೇವೆ.

ಈ ಪಾಠಕ್ಕೆ ಬೇಕಾದ ಉಪಕರಣಗಳು.



ಚೆನ್ನಾಗಿ ಮಾಡಲ್ಪಟ್ಟಿರುವ ಹಿತ್ತಾಳೆಯು ಅಥವಾ ಮತ್ಯಾವುದಾದರೂ ಒಂದುದೀಪಸ್ತಂಭ. ಚೆನ್ನಾಗಿ ಮಾಡದೆಯಿರುವ ಮತ್ತೊಂದು ದೀಪಸ್ತಂಭ. ಅಂದರೆ—ತಳವು ಬಹಳ ಕಿರಿದಾಗಿಯೂ, ಗಾಜಿನ ಅಥವಾ ಸೀಮೆ ಮಣ್ಣಿನಿಂದ ಮಾಡಲ್ಪಟ್ಟ ಎಣ್ಣೆ ಬುರುಡೆಯುಳ್ಳದಾಗಿಯೂ. ದೀಪವನ್ನು ಆರಿಸುವದಕ್ಕೆ ತಕ್ಕ ಸಾಧನವಿಲ್ಲದೆಯೂ ಇರಬೇಕು.

ಸ್ವಲ್ಪ ಸೀಮೇಎಣ್ಣೆ, ಹಸನು ಮತ್ತು ಕಿರಿದಾದ ತರಹೆಯುದು. ಒಳ್ಳೆ ದೀಪಸ್ತಂಭಕ್ಕೆ ಹಾಕತಕ್ಕ ಸ್ವಲ್ಪ ಹೊಸಬತ್ತಿ, ಕತ್ತರಿ, ಚಿಮ್ನಿಯನ್ನು ಒರಿಸುವುದಕ್ಕೆ ಬುರುಸು, ಒರಟು ಕಾಗದ, ದೀಪಸ್ತಂಭವನ್ನು ಒರಸುವದಕ್ಕೆ ಬಟ್ಟೆ ದೀಪದಕಡ್ಡಿಗಳು, ಒಂದು ಗಾಜಿನ ತಟ್ಟೆ ಮತ್ತು ಬಿಸಿನೀರು. ಎಣ್ಣೆಯಡಬ್ಬದಿಂದ ಎಣ್ಣೆಯನ್ನು ಹೊರಕ್ಕೆ ತರತಕ್ಕಂಥ ಸಂಪು ಒಂದು. ತವರ



ಮಂದ ಮಾಡಿದಾಗ ಬತ್ತಿ ಸರಿಯಾಗಿ ಕಣ್ಣು ಬಂದು ಕೊನೆಯು ಅಥವಾ ಬಿಂದು ಸಂತ.

ಪಾಠದ ಉದ್ದೇಶ

(1) ದೀಪಸ್ತಂಭಗಳನ್ನು ಉಪಯೋಗಿಸುವ ದರಲ್ಲಿ ಶುಚಿತ್ವವೂ ಮತ್ತು ಜಾಗರೂಕತೆಯೂ ಅವಶ್ಯಕವಾದುದೆಂದು ಬೋಧಿಸುವುದು.

(2) ಬಾಲಕರನ್ನೋಟದ ಶಕ್ತಿಯನ್ನು ಅಭಿವೃದ್ಧಿಗೊಳಿಸುವುದಲ್ಲದೆ ಅವರಿಗೆ ಪ್ರಯೋಜನಕರವಾದ ವಿಷಯುಗಳನ್ನು ತಿಳಿಸತಕ್ಕುದು.

ದೀಪಸ್ತಂಭದ ರಚನೆ.

ದೀಪಸ್ತಂಭಗಳನ್ನು ತೋರಿಸಿ, ಬೇರೆ ಬೇರೆ ಭಾಗಗಳನ್ನೂ ಅವರಿಗೆ ಮುಂದಟ್ಟು ಮಾಡಿಸಿ, ಪ್ರತಿಯೊಂದು ಭಾಗದ ಉಪಯೋಗವನ್ನೂ ಮಕ್ಕಳಿಗೆ ತಿಳಿಸುವುದಕ್ಕಾಗಿ ತಕ್ಕ ಪ್ರಶ್ನೆಗಳನ್ನು ಕೇಳಬೇಕು.

ಬೇರೆ ಬೇರೆ ಭಾಗಗಳು.



ಪೀಠ :—ಇದರದೆಸೆಯಿಂದ ಲ್ಯಾಂಪು ನೆಲದ ಮೇಲಾಗಲಿ ಅಥವಾ ಮೇಜಿನ ಮೇಲಾಗಲಿ ಭದ್ರವಾಗಿ ನಿಲ್ಲುತ್ತದೆ.

N.B.—ದೀಪಸ್ತಂಭವೆಂದೊಡನೆ ಮಕ್ಕಳು ತಮ್ಮ ಮನೆಯಲ್ಲಿರುವ ಹರಳೆಣ್ಣೆ, ಹೊಂಗೆಯೆಣ್ಣೆ ಹಾಕಿ ಉರಿಸುವ ದೀವಿಗೆಯು ಕಂಭವೆಂದು ತಿಳಿಯುತ್ತಾರೆ. ಆದುದರಿಂದ ಮೇಜಿನಮೇಲೆ ಇರಿಸುವ ಸೀಮೆಯಣ್ಣೆಯ ಲ್ಯಾಂಪ್‌ಸ್ಟ್ಯಾಂಡನ್ನು ತೋರಿಸಿ ಈ ಜಾತಿಯವಾದ ದೀಪದಕಂಭದ ವಿಚಾರವಾಗಿ ಮುಂದೆ ಹೇಳುವ ವಿಷಯುಗಳು ತಿಳಿದುಕೊಳ್ಳಬೇಕೆಂದು ಬಾಲಕರಿಗೆ ಸೂಚಿಸಬೇಕು.

ಕಂಭ:—ಇದರಿಂದ ದೀಪಸ್ತಂಭವನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಎತ್ತಿಡಬಹುದು.

ಬುಡ್ಡಿ:—ಇದು ಎಣ್ಣೆಯನ್ನು ತುಂಬುವುದಕ್ಕೆ. ದೀಪವು ಉರಿಯುವುದಕ್ಕೆ ರಚಿಸಿರುವ ಭಾಗವು ಇದು. ಇದಕ್ಕೆ ಬರ್ನರ್ ಎನ್ನುವರು. ಇದು ತಿರುಪು. ಇದರಲ್ಲಿ ಬತ್ತಿಯನ್ನು ಏರಿಸುವುದಕ್ಕೆ ಇದು ಸಹಕಾರಿಯಾಗಿರುತ್ತದೆ.



ಚಿಮ್ನಿ; ಷೇಡ್:—ಇದು ದೀಪದ ಜ್ವಾಲೆಗೆ ಗಾಳಿ ಮೊದಲಾದವುಗಳು ಬೀಸದಂತೆ ಅಡ್ಡಿಮಾಡುತ್ತದೆ ಯಲ್ಲದೆ ಬೆಳಕನ್ನು ಹೆಚ್ಚಿಸುತ್ತದೆ. ಬೆಳಕು ಹೆಚ್ಚುವುದಕ್ಕೆ ಥಳಥಳಿಸುವ ಹೊಳಪುಕನ್ನಡಿ.



ಬೇರೆ ಬೇರೆ ವಿಧವಾದ ಲ್ಯಾಂಪುಗಳನ್ನು ಹುಡುಗರುಹೋಲಿಸಿ ನೋಡಿ ಅಗ್ಗವಾಗಿರುವ ದೀಪಸ್ತಂಭದ ರಚನೆಯಲ್ಲಿ ಅನೇಕ ಕೊರತೆಗಳಿರುವುದರಿಂದ, ಅನೇಕ ಅಪಾಯಗಳು ಸಂಭವಿಸಬಹುದೆಂದು ಬಾಲಕರೇ ಕಂಡುಹಿಡಿಯಲಿ. ದೀಪವು ಕಿರಿದಾಗಿರುವುದರಿಂದ ದೀಪಸ್ತಂಭಕ್ಕೆ ತಲೆಭಾರವಾಗಿ ಸುಲಭವಾಗಿ ಮಗುಚಿಕೊಳ್ಳಬಹುದು. ಒಡೆದುಹೋಗಬಹುದಾಗ ಎಣ್ಣೆಯು ಪಾತ್ರೆಯು ಬೇಗನೆ ಒಡೆದುಹೋಗಿ, ಒಳಗಿದ್ದ ಎಣ್ಣೆಯೆಲ್ಲಾ ಚೆಲ್ಲಿಹೋಗಿ, ಬಗ್ಗನೆ ಬೆಂಕಿಹತ್ತಿಕೊಳ್ಳಬಹುದು. ಆದರೆ ಈಚಿತ್ರಗಳಲ್ಲಿ ತೋರಿಸಿರುವ ದೀಪಸ್ತಂಭಗಳೆಲ್ಲವೂ ಚೆನ್ನಾಗಿಯೂ, ಅನುಕೂಲವಾಗಿಯೂ ಮಾಡಲ್ಪಟ್ಟಿರುವವು.

ಎಣ್ಣೆ ತುಂಬುವಿಕೆ.

ಎಣ್ಣೆ ಹಾಕುವ ಬುರುಡೆ (ಬುಡ್ಡಿ) ಯನ್ನು ತೋರಿಸಿ ಅದನ್ನು ಯಾವರೀತಿಯಿಂದ ಮತ್ತು ಯಾತಕ್ಕೆ ಧೂಳುಬೀಳದಂತೆ ಭದ್ರವಾಗಿ ಮುಚ್ಚಿಡಬೇಕೆಂಬುದನ್ನು ಮಕ್ಕಳಿಗೆ ತಿಳಿಸಬೇಕು. ಪಟ್ಟಣಗಳಲ್ಲಿ ಮಾರತಕ್ಕ ಬೇರೆಬೇರೆ ತರಹದ ತೀಮೆಯೆಣ್ಣೆ ವಿಚಾರವಾಗಿ ಇಲ್ಲಿ ತಿಳಿಸಬೇಕು.

ಮಷ್ಟಿನಿಂದ ಕೂಡಿದ ಕೆಂಪು ಎಣ್ಣೆಯು ಇರುವುದು. ಇದು ಸುಲಭಕ್ರಯಕ್ಕೆ ದೊರೆಯುವುದು. ಇದನ್ನು ಉಪಯೋಗಿಸೋಣದರಿಂದ ದೀಪವು ಮಸಕಾಗಿಯೂ ಕೆಂಪಗೂ, ಕಾಣಬರುವುದು. ಹೊಗೆಯು ಹೆಚ್ಚು. "ಬರ್ನರ್" ಅಥವಾ "ತಿರುವುಗಳು" ಬೇಗ ಕೆಟ್ಟುಹೋಗುವುವು. ಶೋಧಿಸಿದ, ಉತ್ತಮವಾದ ನಿರ್ಮಲವಾದ ಎಣ್ಣೆಯು ಇರುವುದು. ಇದನ್ನು ಉಪಯೋಗಿಸೋಣದರಿಂದ ಶುಭ್ರವಾದ ಬೆಳಕು ಬೀಳುವುದು. ಹೊಗೆಯೂ, ವಾಸನೆಯೂ ಕಡಮೆ. ತಿರುಗಳೂ ಕೆಡುವುದಿಲ್ಲ. ಈ ಎಣ್ಣೆಯು ತಡೆದೂ ಉರಿಯುವುದು.

ಎಣ್ಣೆಯು ತರಹವನ್ನು ಬೇಗ ಗೊತ್ತುಮಾಡಲು ಅವಕಾಶವಾಗುವಂತೆ ಬೇರೆ ಬೇರೆ ಗುರುತುಳ್ಳ ಕೋತಿ ಗುರುತು, ಗುಡಿ ಗುರುತು ಟಿನ್‌ಗಳಮೇಲೆ ಹಾಕಿರುವರು. ಉತ್ತಮವಾದ ಎಣ್ಣೆಗೆ ಹೆಚ್ಚಾದ ಬೆಲೆ. ಕೆಲವು ದೀಪಸ್ತಂಭಗಳನ್ನು ಮುಕ್ಕಳು ಮೂಸಿನೋಡುವಂತೆ ಮಾಡಿ ಅವುಗಳನ್ನು ಕೇವಲ ಜೊಕ್ಕಟವಾಗಿಡದೆ ಇದ್ದಪಕ್ಷದಲ್ಲಿ ದುರ್ವಾಸನೆಯು ಉಂಟಾಗುವುದೆಂದೂ ಬಾಲಕರ ಮುಖದಿಂದ ಹೇಳಿಸಬೇಕು.

ಬಿಸಿನೀರು ಹಾಕಿರುವ ಒಂದು ಗಾಜಿನತಟ್ಟೆಯೊಳಕ್ಕೆ ಬಹಳ ಹಸನುತರಹೆ ಸ್ವಲ್ಪ ಎಣ್ಣೆಯನ್ನೂ ಮತ್ತೊಂದು ಬಿಸಿನೀರು ಹಾಕಿದ ತಟ್ಟೆಯಲ್ಲಿ ಸಾಧಾರಣವಾದ ತರಹೆ ಸ್ವಲ್ಪ ಎಣ್ಣೆಯನ್ನೂ ಸುರಿದು ಅವುಗಳ ಹಬೆಯು ಹತ್ತರ ಒಂದು ದೀಪದಕಡ್ಡಿಯನ್ನು ಗೀಚಿ ಹಿಡಿದು (ಈ ಸಮಯದಲ್ಲಿ ಬಹಳ ಎಚ್ಚರಿಕೆ ಇರಬೇಕು.) ಅದರಿಂದ ಆಗುವುದನ್ನು ನೋಡುತಿರುವಂತೆ ಹೇಳಬೇಕು. ಇದರಿಂದ ಅಗ್ಗವಾದ ಎಣ್ಣೆಯು ಬಹುಬೇಗ ಹತ್ತಿಕ್ಕೊಂಡು ಉರಿಯುವ ಸ್ವಭಾವವುಳ್ಳದೆಂತಲೂ ಆದುದರಿಂದ ಒಳಗೆಲ್ಲ ಬಗ್ಗನೆ ಹತ್ತಿಕ್ಕೊಂಡು ಬುಡ್ಡಿಯು ಒಡೆದುಹೋಗಬಹುದೆಂತಲೂ ಬಹಳ ದುರ್ವಾಸನೆಯುಳ್ಳದೆಂತಲೂ ಆಲ್ಲದೆ ಬೆಳಕು ಚೆನ್ನಾಗಿ ಕೊಡುವುದಿಲ್ಲವೆಂತಲೂ ತಿಳಿಸಬೇಕು.

ತಣ್ಣಗೆಯಿರುವ ಸೀಮೇಎಣ್ಣೆಯಲ್ಲಿ ಉರಿಯುತ್ತಿರುವ ದೀಪದಕಡಿಯನ್ನು ಅದ್ದಿ ದೀಪವು ಆರಿಹೋಗುವುದನ್ನು ತೋರಿಸಿ ಉರಿಯುವದು ಎಣ್ಣೆಯಲ್ಲ. ಇದರ ಬಿಸಿಯಾದ ಆವಿಯು ಸ್ವರೂಪವೆಂದು ಬೋಧಿಸಬೇಕು.

ಇಂಥ ದೀಪಗಳನ್ನು ಉಪಯೋಗಿಸುವುದರಿಂದ ಉಂಟಾಗಿರುವ ಅಪಾಯಗಳನ್ನು ಮತ್ತು ಅನನುಕೂಲಗಳನ್ನು ವ್ಯಕ್ತಪಡಿಸಿ, ಇಂಥ ದೀಪಗಳನ್ನು ಉಪಯೋಗಿಸಬೇಕಾದ ಸಂದರ್ಭಗಳಲ್ಲಿ ಇವುಗಳನ್ನು ಬಹಳ ಎಚ್ಚರಿಕೆಯಿಂದಲೂ ಜಾಗರೂಕತೆಯಿಂದಲೂ ಉಪಯೋಗಿಸಬೇಕೆಂಬ ಸಂಗತಿಯನ್ನು ಮಕ್ಕಳಿಗೆ ತೋರುವಂತೆ ಮಾಡಬೇಕು.

ಪ್ರತಿಯೊಬ್ಬ ಬಾಲಕರಿಗೂ ಎಣ್ಣೆಯನ್ನು ತುಂಬುವುದಕ್ಕೂ, ದೀಪವನ್ನು ಹತ್ತಿಸುವದಕ್ಕೂ ಮತ್ತು ಆರಿಸುವುದಕ್ಕೂ ಸಹ ತಿಳಿಸಿರಬೇಕು. ಉರಿಯುತ್ತಿರುವ ಎಣ್ಣೆಯನ್ನು ನೀರಿನಿಂದ ಆರಿಸುವುದಕ್ಕೆ ಆಗುವುದೇ ಇಲ್ಲವೆಂಬ ಸಂಗತಿಯನ್ನೂ ಒಣಗಿದ ಮರಳುಅಥವಾ ಸೊರಜುಕಲ್ಲಿನ ಪುಡಿಯಿಂದ ಆರಿಸಬಹುದೆಂಬ ಸಂಗತಿಯನ್ನೂ ನಿದರ್ಶನರೂಪವಾಗಿ ತೋರಿಸಬೇಕು.

ಸೀಮೆಯೆಣ್ಣೆದೀಪಗಳು ಉರಟಾಡುವ ಮೇಜುಗಳು, ಮತ್ತು ಚಿಕ್ಕ ಮಕ್ಕಳು ಇರತಕ್ಕಂಥ ಮನೆಗಳಲ್ಲಿ, ಒಂದು ಸಣ್ಣ ಕೈಪೆಟ್ಟಿಗೆ ತುಂಬಾ ಯಾವಾಗಲೂ ಮರಳು ಇಟ್ಟುಕೊಂಡಿರಬೇಕೆಂದು ಹೇಳಬೇಕು.

ದೀಪದ ಆವಶ್ಯಕತೆಯನ್ನು ತಿಳಿಸಿದಬಳಿಕ ಅಪೇಕ್ಷಿಸಿದಾಗಲೆಲ್ಲಾ ಮಕ್ಕಳು ಎಣ್ಣೆಯನ್ನು ತುಂಬಿ ದೀಪವನ್ನು ಹತ್ತಿಸಿ ದೀಪವನ್ನು ಆರಿಸುವಂತೆ ಮಾಡಬೇಕು. ಬತ್ತಿಯನ್ನು ಚೆನ್ನಾಗಿ ಬಿಸಲಿನಲ್ಲಿ ಒಣಗಿಸಿ, ಎಣ್ಣೆಯಲ್ಲಿ ನೆನೆಸಿ, ಬತ್ತಿ ಹಾಕುವ ಕೊಳವಿಯಲ್ಲಿ ಹಾಕಿ ಬತ್ತಿಯು ಕೊಳವಿಯಲ್ಲಿ ಹಿಡಿಯತಕ್ಕುದಾಗಿರಬೇಕೆಂತಲೂ ಆ ಎಣ್ಣೆ, ಬುರುಡೆಯ ತಳವನ್ನು ಮುಟ್ಟುವಷ್ಟು ಉದ್ದವಾಗಿರಬೇಕೆಂತಲೂ ಮಕ್ಕಳಿಗೆ ತೋರಿಸತಕ್ಕದ್ದು. ಶುದ್ಧಾಂಗವಾಗಿ ಬತ್ತಿಯಲ್ಲಾ ಒಣಗಿಹೋಗುವಂತೆ ದೀಪವುರಿಸಕೂಡದೆಂದು ಮಕ್ಕಳಿಗೆ ಹೇಳಬೇಕು ಯಾಕೆಂದರೆ ಎಣ್ಣೆಯ ಆವಿಯೂ ಮತ್ತು ಗಾಳಿಯೂ ಸೇರಿ ಪ್ರಬಲಕರವಾದ ಅಗ್ನಿವರ್ಧಕ ವಸ್ತುವಾಗಿ ಪರಿಣಮಿಸಿ ಆರಿಹೋಗುತ್ತಿರುವ ದೀಪದ ತುದಿಯಿಂದ ಪಕ್ಕನೆ ಹತ್ತಿಕೊಂಡು ಬಿಡಬಹುದು.

ದೀಪವು ತಮಗೆ ಸ್ವಲ್ಪಹೊತ್ತು ಬೇಡದೆಯಿದ್ದಾಗ ಅದನ್ನು ಬಹಳವಾಗಿ ಕಡಮೆಮಾಡಿ ಕೆಳಕ್ಕೆ ಇಳಿಸಬಾರದೆಂದು ಅವರಿಗೆ ತಿಳಿಸಬೇಕು. ಇದರಿಂದ ಎಣ್ಣೆಯು

ಉಳಿತಾಯವೇನೂ ಆಗುವದಿಲ್ಲ. ಅದರೆ ದೀಪವೆಲ್ಲಾ ಹೊಗೆಯಾಗುವುದಕ್ಕೆ ಅವ ಕಾಶವಾಗುತ್ತದೆ.

ದೀಪಸ್ತಂಭಕ್ಕೆ ಎಣ್ಣೆತುಂಬಿದ ತರುವಾಯ ಅದರ ಮೇಲ್ಭಾಗವನ್ನೆಲ್ಲಾ ಬಟ್ಟೆಯಿಂದ ಚೆನ್ನಾಗಿ ಒರಸಬೇಕು. ಹಾಗೆಮಾಡದೆ ಬಿಟ್ಟರೆ ಮೇಲೆ ಜಲ್ಲಿರುವ ಎಣ್ಣೆಯು ನಾತಬಡಿಯುವದು. ಮತ್ತು ಕೆಲವುವೇಳೆ ಬೆಂಕಿ ಹತ್ತಿಕೊಳ್ಳಬಹುದು.

ದೀಪವನ್ನು ಹತ್ತಿಸುವಿಕೆ.

ಒಂದು ಮಗುವು ದೀಪವನ್ನು ಹತ್ತಿಸಬೇಕಾದರೆ ಬರ್ನರಿನಲ್ಲಿರುವ ಗುಪ್ಪಿನ ಮೇಲೆ ಸೀಳಿರುವ ಸ್ಥಳಕ್ಕೆ ಸ್ವಲ್ಪವೇಲಕ್ಕೆ ಬತ್ತಿ ಬರುವಂತೆ ತಿರುಪನ್ನು ತಿರುಗಿಸಿ ಆಮೇಲೆ ದೀಪಹತ್ತಿಸಿದ ಕಡ್ಡಿಯೊಂದನ್ನು ತೋರಿಸಿ ತತ್‌ಕ್ಷಣವೆ ಬತ್ತಿಯನ್ನು ಕೆಳಗೆ ಇಳಿಸಿ ಗಾಜಿನ ಚಿಮ್ನಿಯನ್ನು ಮೇಲೆ ಇರಿಸಲಿ. ಮೂರು ನಿಮಿಷಗಳತರುವಾಯ ದೀಪವನ್ನು ಮೇಲಕ್ಕೆ ಎತ್ತಬಹುದು. ಆದರೆ ದೀಪವನ್ನು ಹತ್ತಿಸಿದ ಕೆಲವುಕಾಲಪ





ರ್ಯಂತ ಅದನ್ನು ಜಾಗರೂಕತೆಯಿಂದ ನೋಡಿಕೊಳ್ಳಬೇಕು. ಒಂದುವೇಳೆ ಅದು ಬಹಳ ದೊಡ್ಡದಾಗಿ ಹೊಗೆ ಸುತ್ತಿಕೊಳ್ಳಬಹುದು. ಎಣ್ಣೆಯೂ ಖರ್ಚಾದಾಗಿ ದೀಪ

ಸ್ತಂಭವೂ ಚೆನ್ನಾಗಿ ಮಾಡಲ್ಪಟ್ಟಿದ್ದು ಅದಾಗ್ಯೂ ಹೆಚ್ಚಾಗಿ ಹೊಗೇಸುತ್ತಿಕೊಂಡರೆ ಬತ್ತಿಯನ್ನು ಮತ್ತು ಬರ್ನರ್ ಎಲ್ಲಾ ಭಾಗವನ್ನು ಬಿಸಿನೀರಿನಿಂದ (ತೊಳೆಯುವ) ಸೋಡಾಪುಡಿಯಿಂದ ತಿಕ್ಕಿ ತೊಳೆದು ಚೆನ್ನಾಗಿ ಒಣಗಿಸಿ ಬತ್ತಿಯನ್ನು ವಿನಿಗರಿನಲ್ಲಿ ಅದ್ದಿ ಪುನಃ ಬರ್ನರ್‌ನ ಒಳಕ್ಕೆ ಹಾಕಬೇಕು. ಬರ್ನರನ್ನೂ, ಚಿಮ್ನಿಯನ್ನೂ ಅದರಮೇಲೆ ಮುಚ್ಚುವ ಗಾಜಿನ ಗೋಳವನ್ನೂ ಚೆನ್ನಾಗಿ ಇಟ್ಟುಕೊಳ್ಳದಿದ್ದರೆ ದೀಪದ ಪ್ರಕಾಶವು ಕಡಮೆ. ಒಳ್ಳೇ ದೀಪಸ್ತಂಭವನ್ನೂ ಎಣ್ಣೆಯನ್ನೂ ಕೊಂಡುಕ್ಕೊಂಡು ಗಾಜಿನ ಚಿಮ್ನಿಯನ್ನೂ ಅದರ ಹೊರಭಾಗದಲ್ಲಿ ಕವಿಚುವ ಗಾಜಿನ ಗೋಳವನ್ನೂ ಕಶ್ಮಲವಾಗಿಟ್ಟುಕೊಂಡು, ಪ್ರಕಾಶಮಾನವಾದ ಬೆಳಕನ್ನು ಹೊಂದಬೇಕೆಂದು ನಿರೀಕ್ಷಿಸುವದು ವ್ಯರ್ಥವೆಂದು ಮಕ್ಕಳಿಗೆ ಚೆನ್ನಾಗಿ ಮಂದಟ್ಟುಮಾಡಿಕೊಡಬೇಕು. ಅವುಗಳನ್ನು ಪದೆ ಪದೆ ತೊಳೆದು ಉಜ್ಜಿ ಇಡಬೇಕು.

ದೀಪವನ್ನು ಅರಿಸುವಿಕೆ.

ಬುರಿಯನ್ನು ಅರಿಸುವುದಕ್ಕಾಗಿ ತಕ್ಕ ಕೀಲನ್ನು ಏರ್ಪಡಿಸಿದ್ದಲ್ಲಿ ಅದನ್ನು ಮಗುವು ಉಪಯೋಗಿಸಬೇಕು. ಇಲ್ಲವಾದರೆ ಜ್ವಾಲೆಯು ಚಿಕ್ಕದಾಗಿ



ಮಿಣಕು ಮಿಣಕು ಎನ್ನುವಪರಿಗೆ ತಗ್ಗಿಸುವಂತೆ ಹೇಳಿದ ತರುವಾಯ ಚಿಮ್ನಿಯ ಒಳಗಡೆ ಊದದಂತೆ ಎಚ್ಚರಿಸಿ ಮೇಲೆ ಆಡ್ಡಡ್ಡಲಾಗಿ ಬೀಸಿ ದೀಪವನ್ನು ಆರಿಸಬೇಕೆಂದು ತಿಳಿಸಬೇಕು.

ದೀಪದಿಂದ ಉಂಟಾಗುವ ಅಪಾಯಗಳನ್ನು ತಪ್ಪಿಸುವ ಉಪಾಯಗಳು.

(ಈ ವಿಷಯಗಳನ್ನು ಮಕ್ಕಳಿಂದ ಹೇಳಿಸಿ ಕಪ್ಪುಹಲಗೆಯಮೇಲೆ ಬರೆಯಬೇಕು.)



ದೀಪಸ್ತಂಭವು ಚನ್ನಾಗಿ ಮಾಡಲ್ಪಟ್ಟುದಾಗಿರಬೇಕು. ಮತ್ತು ಭದ್ರವಾದ ಬುಡದಮೇಲೆ ನಿಲ್ಲಿಸಿರಬೇಕು. ಉರಿಯುತ್ತಿರುವ ದೀಪಸ್ತಂಭವನ್ನು ದೊಡ್ಡವರ ಅಪ್ಪಣೆ ವಿನಾ ಮಕ್ಕಳು ಎಂದಿಗೂ ಮುಟ್ಟಬಾರದು ಎಂಬುದಾಗಿ ಮಕ್ಕಳಿಗೆ ಎಚ್ಚರಿಸಬೇಕು.

ಒಳ್ಳೆ ಎಣ್ಣೆಯನ್ನು ಉಪಯೋಗಿಸಬೇಕು. ಬೇಗ ಬೆಂಕಿ ಹತ್ತಿಕೊಳ್ಳುವಂಥ ಅಗ್ಗವಾದ ಎಣ್ಣೆಯನ್ನು ಮಾರಕೂಡದೆಂದು ಸರಕಾರದವರು ವಿಧಾಯಕಮಾಡಿರುತ್ತಾರೆಂದು ಮಕ್ಕಳಿಗೆ ತಿಳಿಸಬೇಕು.

ಎಣ್ಣೆಯನ್ನು ತುಂಬುವದರಲ್ಲಿಯೂ, ಬರಸುವದರವಿಷಯದಲ್ಲಿಯೂ, ದೀಪವನ್ನು ಹತ್ತಿಸುವ ವಿಷಯದಲ್ಲಿಯೂ ಆರಿಸುವ ವಿಷಯದಲ್ಲಿಯೂ ಮೇಲೆ ಹೇಳಲ್ಪಟ್ಟಿರುವ ಎಚ್ಚರಿಕೆಗಳಿಗೆ ತಕ್ಕಷ್ಟು ಗಮನಕೊಡಬೇಕು.

ದೀಪ ಉರಿಯುತ್ತಿರುವ ಸ್ತಂಭವನ್ನು ಮನೆಯಲ್ಲಿ ಒಂದುಕಡೆಯಿಂದ ಮತ್ತೊಂದುಕಡೆಗೆ ತೆಗದುಕ್ಕೊಂಡು ಹೋಗಬಾರದು.

ಮೊದಲು ಹತ್ತಿಸಿಟ್ಟಿರುವ ದೀಪದ ಹತ್ತಿರವೇ ಮತ್ತೊಂದು ದೀಪವನ್ನು ಹತ್ತಿಸಬಾರದು.



ದೀಪಗಳನ್ನು ಮಕ್ಕಳಕೈಗೆ ಸಿಕ್ಕದಂತೆ ದೂರವಾಗಿಡಬೇಕು.

ದೀಪಸ್ತಂಭಗಳು ಉರಟಹೋಗಿಯಾಗಲಿ ಎಣ್ಣೆ ಪತ್ತಿಕ್ಕೊಂಡಾಗಲಿ ಉಂಟಾಗಿರುವ ಅನೇಕ ಘೋರವಾದ ಸಂಕಟಗಳನ್ನು ತಿಳಿಸುತ್ತಿರಬೇಕು.

ಹರಿದುಹೋಗುವ ಮತ್ತು ಹತ್ತಿಕ್ಕೊಂಡು ಉರಿಯುವ ಎಣ್ಣೆಯ ಉರಿಯನ್ನು ನೀರಿನಿಂದ ಆರಿಸಲು ಆಗುವದಿಲ್ಲವೆಂದು ಮಕ್ಕಳಿಗೆ ಜ್ಞಾಪಕ ಕೊಡಬೇಕು.

ಇಂಥಾಸಮಯದಲ್ಲಿ ಧೈರ್ಯತಂದುಕೊಂಡು ದಪ್ಪಕಂಬಳಿಗಳನ್ನು ಮತ್ತು ಮರಗಳನ್ನೂ ಉಪಯೋಗಿಸಬೇಕಾದ ಆವಶ್ಯಕತೆಯನ್ನು ಚೆನ್ನಾಗಿ ಮಂದಟ್ಟಾಗುವಂತೆ ಮತ್ತೆ ಮತ್ತೆ ಹೇಳಿ ತಿಳಿಸಬೇಕು.

ಮಿಸ್. ಸಿ. ಇ. ಪಾರ್ಸನ್ಸ್.

ಮೈಸೂರಲ್ಲಿ ನಡೆದ ಕಿಂಡರ್‌ಗಾರ್ಟ್ನ್ ಟ್ರೇನಿಂಗ್.

ಕಳೆದವರ್ಷದ ಡಿಸೆಂಬರ್ ತಿಂಗಳು ಮೊದಲ್ಗೊಂಡು ಈವರ್ಷದ ಏಪ್ರೀಲ್ ತಿಂಗಳವರೆಗೆ ಮೈಸೂರಲ್ಲಿ ಕಿಂಡರ್‌ಗಾರ್ಟ್ನ್ ಟ್ರೇನಿಂಗ್ ನಡೆಯಿತಷ್ಟೆ. ಈಕಾಲ

ಇಲ್ಲಿ ಉದಹರಿಸಿರುವಂಥಾ ಲ್ಯಾಂಪುಗಳು ಇತರ ತರಹವಾದ ಲ್ಯಾಂಪುಗಳು ಮೆಸರ್ಸ್ ಸ್ಪೆನ್ಸರ್ ಅಂಡ್ ಕಂಪೆನಿಯಲ್ಲಿ ದೊರೆಯುವುವು. ಬೇಕಾದವರು ಬರೆದು ಕ್ಯಾಟಲಾಗ್‌ಗಳನ್ನು ತರಿಸಿ, ತಮಗೆ ಬೇಕಾದ ಲ್ಯಾಂಪುಗಳನ್ನು ಬಿಲೆ ಕೊಟ್ಟು ತೆಗೆದುಕೊಳ್ಳಬೇಕು.

ದಲ್ಲಿ ಮಹಾರಾಣಿಯವರ ಕಾಲೇಜಿನಲ್ಲೂ, ನಾರ್ಮಲ್ ಸ್ಕೂಲಿನಲ್ಲೂ ಕೆಲಸಮಾಡುತಿದ್ದ ಮಃ ರಾ॥ ವೆಂಕಟಸುಬ್ಬಯ್ಯನವರು ನಾರ್ಮಲ್‌ಸ್ಕೂಲಿನಲ್ಲಿ ತಮ್ಮ ಕೆಲಸವನ್ನು ಮುಗಿಸುವಾಗ ಮುಂದೆ ಬರೆದಿರುವ ಉಪನ್ಯಾಸವನ್ನು ಮಾಡಿದರು. ಈ ಉಪನ್ಯಾಸದಿಂದ ಕಿಂಡರ್‌ಗಾರ್ಟ್ನ್ ಟ್ರೇನಿಂಗಿಗೆ ಬಂದಿದ್ದ ಉಪಾಧ್ಯಾಯರಿಗಲ್ಲದೆ ಇತರರಿಗೂ ಪ್ರಯೋಜನವಾಗಬಹುದೆಂದು ತೋರುವುದರಿಂದ ಅದನ್ನು ಮುಂದೆ ಬರೆಯುವೆವು :—

ಮಹನೀಯರೆ!

ಈ ಪ್ರಾತಃಕಾಲದಲ್ಲಿ ಇಲ್ಲಿ ನಡೆದ ಕೆಲಸವೇ ಕಿಂಡರ್ ಗಾರ್ಟ್ನ್ ಸಂಬಂಧದಲ್ಲಿ ನಾನು ನಿಮ್ಮ ಜೊತೆಯಲ್ಲಿ ಮಾಡುವ ಕೊನೇ ಕೆಲಸವಾಗಿರುವುದು. ಸರ್ಕಾರದವರು ಮೈಸೂರಿನಲ್ಲಿ ಕಿಂಡರ್‌ಗಾರ್ಟ್ನ್ ಉಪನ್ಯಾಸಗಳನ್ನು ನಡೆಸಬೇಕೆಂದು ಮಾಡಿದ ಉದ್ದೇಶಕ್ಕೆ ಆದಿಯಲ್ಲೆ ಉಂಟಾದ ದೊಡ್ಡ ಕೊರತೆಯು ನಿಮಗೆಲ್ಲರಿಗೂ ತಿಳಿದೇ ಇರುವುದು. ಇಂತಹ ದೊಡ್ಡ ಕೊರತೆಯು ಸಂಭವಿಸಿದರೂ ಈ ಕೆಲಸವು ಇಷ್ಟರಮಟ್ಟಿಗೆ ನಡೆದುದು ಬಹಳ ತೃಪ್ತಿಕರವಾಗಿರುವುದು. ಕಾರ್ಡ್‌ಬೋರ್ಡ್ ಕೆಲಸದ ಪ್ರಾರಂಭದಲ್ಲಿ ಅದರ ಉದ್ದೇಶವೇನೆಂಬುದನ್ನು ನಾನು ನಿಮಗೆ ತಿಳಿಸಿರುವೆನು. ಕಿಂಡರ್‌ಗಾರ್ಟ್ನ್‌ಕಾಲದಲ್ಲಿ ಮಕ್ಕಳಿಗುಂಟಾದ ಹಸ್ತಕೌಶಲವನ್ನು ಈಕೆಲಸದಿಂದ ಮುಂದಕ್ಕೆ ವೃದ್ಧಿಗೊಳಿಸಬಹುದೆಂಬುದೂ, ಮತ್ತು ಕಿಂಡರ್‌ಗಾರ್ಟ್ನಿನಂತೆ ಇದರಲ್ಲೂ ಮಕ್ಕಳಲ್ಲಿ ಸಹಜವಾಗಿರುವ ಕಾರ್ಯಾಪೇಕ್ಷೆಯನ್ನು ತೃಪ್ತಿಗೊಳಿಸಬಹುದೆಂಬುದೂ, ಸ್ಪಷ್ಟವಾಗಿಯೇ ಇರುವವು. ಈ ಕೆಲಸದಲ್ಲಿ ನಿಮಗೆ ಇಲ್ಲಿ ಉಂಟಾದ ಅನುಭವದಿಂದ ಇದರ ಉಪಯೋಗವನ್ನು ನೀವೇ ಊಹಿಸಿಕೊಳ್ಳಬಹುದಾಗಿದೆ. ಮಕ್ಕಳು ಮುಂದಕ್ಕೆ ಕಲಿಯುವ ರೇಖಾಗಣಿತಕ್ಕೆ ಈಕೆಲಸದಿಂದ ಎಷ್ಟರಮಟ್ಟಿಗೆ ಸಹಾಯವಾಗುವುದು? ಈಕೆಲಸದಿಂದ ಮಕ್ಕಳಲ್ಲಿ ನೈರ್ಮಲ್ಯ, ತಪ್ಪಿಲ್ಲದೆ ಕೆಲಸ ಮಾಡುವುದು, ಮುಂತಾದ ಸುಶೀಲಗಳು ಹೇಗೆ ನೆಲೆಗೊಳ್ಳುವವು? ಮತ್ತು ಇದು ಮಕ್ಕಳ ಮನೋವೃತ್ತಿಗಳನ್ನು ಹೇಗೆ ವಿಕಾಸಗೊಳಿಸುವುದು? ಮುಂತಾದ ಅಂಶಗಳನ್ನು ನೀವೇ ನೋಡಿರುವಿರಿ. ಆದುದರಿಂದ ಈ ವಿಷಯದಲ್ಲಿ ನಾನು ವಿಶೇಷಹೇಳಬೇಕಾದುದಿಲ್ಲ.

ಕಿಂಡರ್‌ಗಾರ್ಟ್ನ್ ವಿಷಯದಲ್ಲಿ ಉಪನ್ಯಾಸಗಳನ್ನು ಕೇಳುವುದಕ್ಕಾಗಿಯೆ ಸರ್ಕಾದವರು ಮುಖ್ಯವಾಗಿ ನಿಮ್ಮನ್ನು ಇಲ್ಲಿಗೆ ಕರೆಸಿದುದು. ಇಲ್ಲಿ ನಿಮಗೆ ನಡೆ

ಉಪನ್ಯಾಸಗಳಿಂದ ಮಕ್ಕಳಲ್ಲಿ ಸಹಜವಾಗಿರುವ ಕಾರ್ಯಾಪೇಕ್ಷೆಯನ್ನು ತಕ್ಕ ಕೆಲಸಗಳಿಂದ ವೃದ್ಧಿಗೊಳಿಸಬೇಕೆಂಬುದೇ ಕಿಂಡರ್‌ಗಾರ್ಟ್ನಿನ ಮುಖ್ಯೋದ್ದೇಶವೆಂಬುದು ನಿಮಗೆ ತಿಳಿದಿರುವುದು. ಆದರೆ ಕಾರ್ಯಕ್ಕೆ ಔತ್ಸುಕ್ಯವೇ ಕಾರಣವಷ್ಟೆ. ಇಂತಹ ಔತ್ಸುಕ್ಯವನ್ನು ಹುಟ್ಟಿಸಲು ಕೆಲವರು ಒಂದು ಕಥೆಯನ್ನು ಆಧಾರವಾಗಿಟ್ಟುಕೊಂಡು ಕಿಂಡರ್‌ಗಾರ್ಟ್ನ್‌ ಕೆಲಸಗಳನ್ನೆಲ್ಲಾ ಅದಕ್ಕೆ ಸಂಬಂಧಿಸುವರು. ಆದರೆ ವಿಶೇಷಜನರು ಪ್ರಕೃತಿಸಂಸರ್ಗವನ್ನೇ ಕಿಂಡರ್‌ಗಾರ್ಟ್ನ್‌ ಕೆಲಸಕ್ಕೆಲ್ಲಾ ಆಧಾರವಾಗಿಟ್ಟುಕೊಂಡಿರುವರು.

ಪ್ರಕೃತಿಯು ಅದರಲ್ಲೂ ಸಜೀವವಾದ ಪ್ರಕೃತಿಯು ಎಲ್ಲರಿಗೂ ಆದರವನ್ನುಂಟುಮಾಡುವುದು. ಸ್ರಪಂಚದ ಅನುಭವವು ವಿಶೇಷವಾಗಿಲ್ಲದ ಮಕ್ಕಳಿಗಂತೂ ಇನ್ನೂ ವಿಶೇಷ ಆದರವನ್ನುಂಟುಮಾಡುವುದು. ಮಕ್ಕಳು ಕೆಲವು ಗಿಡಗಳನ್ನೂ ಪ್ರಾಣಿಗಳನ್ನೂ, ನೋಡಿಕೊಳ್ಳುವಂತೆ ಮಾಡಿ ಅವರಿಗೆ ಪ್ರಕೃತಿಯಲ್ಲಿರುವ ಆಶ್ಚರ್ಯದೊಡನೆ ಸ್ವತ್ವವನ್ನು ಸಂಬಂಧಿಸಿದರೆ ಕಿಂಡರ್‌ಗಾರ್ಟ್ನ್‌ ಕೆಲಸದಲ್ಲಿ ಆದರವು ಇನ್ನೂ ಹೆಚ್ಚುವುದು. ಇಂತಹ ಮಕ್ಕಳು ಬ್ರಷ್‌ನಿಂದ, ಇಟ್ಟಿಗೆಗಳಿಂದ, ಜೇಡಿಮಣ್ಣಿನಿಂದ ಅಥವಾ ಮರಳಿನಿಂದ ಪ್ರಕೃತಿವಿಷಯದಲ್ಲಿ ತಮ್ಮ ಮನಸ್ಸಿನೊಳಗಿರುವ ಅಭಿಪ್ರಾಯಗಳನ್ನು ಹೊರಪಡಿಸುವಾಗ ಈ ಕೆಲಸಗಳನ್ನು ಅತ್ಯಾದರದಿಂದ ಮಾಡುವರೆಂಬುದರಲ್ಲಿ ಸಂಶಯವೇ ಇಲ್ಲ. ಹೀಗೆ ಮಕ್ಕಳ ಕಾರ್ಯಾಪೇಕ್ಷೆಯನ್ನು ಅತಿ ಸುಲಭವಾದ ಮಾರ್ಗದಲ್ಲಿ ಬೆಳೆಸುವುದರಿಂದ ಅದು ನಿಸ್ಸಂಶಯವಾಗಿ ವಿಶೇಷಅಭಿವೃದ್ಧಿಯನ್ನು ಹೊಂದುವುದೆಂದು ತೋರುವುದು.

ಇದುವರೆಗೂ ಮಕ್ಕಳು ಪ್ರಕೃತಿಯ ವಸ್ತುಗಳ ವಿಷಯದಲ್ಲಿ ಜ್ಞಾನವನ್ನು ಹೊಂದಲು ಪುಸ್ತಕಗಳೇ ವಿಶೇಷ ಆಧಾರವಾಗಿದ್ದುವು. ಇಂತಹ ಜ್ಞಾನವು ಎಂದಿಗೂ ನಿಷ್ಕೃಷ್ಟವಾಗಿರಲಾರದು. ಮಕ್ಕಳು ಇದನ್ನು ಯಾವ ಕೆಲಸದಲ್ಲೂ ಉಪಯೋಗಿಸಲಾರರು. ಕ್ರಮವಾದ ವಸ್ತುವಿಮರ್ಶೆಯಿಂದಾಗುವ ಜ್ಞಾನವೇ ಮಕ್ಕಳಿಗೆ ಬೇಕಾದುದು. ಇದೇ ಮಕ್ಕಳಿಗೆ ಮುಂದೆ ವಿಶೇಷ ಉಪಯೋಗಕ್ಕೆ ಬರುವ ಜ್ಞಾನವಾಗಿರುವುದು. ಆದುದರಿಂದ ಕೇವಲ ಬಾಲ್ಯದಲ್ಲಿ ಮಕ್ಕಳು ಓದಬೇಕಾದ ಪುಸ್ತಕವು ಒಂದೇ ಒಂದಿರುವುದು. ನಮ್ಮ ಸುತ್ತಲೂ ಇರುವ ಪ್ರಪಂಚವೇ ಈ ಪುಸ್ತಕವು. ಈ ಪುಸ್ತಕಾಭ್ಯಾಸಕ್ಕೆ ಅವರ ಕೈಗಳು, ಕಾಲುಗಳು, ಇಂದ್ರಿಯಗಳೇ

ಅವರ ಉಪಾಧ್ಯಾಯರಾಗಿರುವುವು. ಪ್ರಕೃತಿ ವಿಷಯದಲ್ಲಿ ಇಂತಹ ಸಂಸರ್ಗಕ್ಕೆ ಮಕ್ಕಳನ್ನು ಆಗಾಗ್ಗೆ ಹೊರಕ್ಕೆ ಸಂಚಾರಕ್ಕೆ ಕರೆದುಕೊಂಡು ಹೋಗುವುದು, ಪಾಠ ಶಾಲೆಯಲ್ಲಿ ತೋಟ ಮಾಡಿಸುವುದು ಪ್ರಕೃತಿ ಸಂಬಂಧವಾದ ಸಾಮಾನ್ಯವಾದರೊಂದು ವಸ್ತುವನ್ನು ವಿಶೇಷ ವಿಮರ್ಶೆಗೆ ಗುರಿಮಾಡುವುದು, ಇವೇ ಮುಖ್ಯವಾದ ಉಪಾಯಗಳೆಂದು ಇಲ್ಲಿನ ಉಪನ್ಯಾಸಗಳಿಂದ ನಿಮಗೆ ತಿಳಿದಿರಬಹುದು.

ಕಿಂಡರ್‌ಗಾರ್ಟ್ನ್ ಕೆಲಸಗಳಲ್ಲಿ ಮಕ್ಕಳಿಗೆ ಅದರ ಹುಟ್ಟುವುದಕ್ಕೆ ಮಾತ್ರ ಪ್ರಕೃತಿ ವಿಮರ್ಶೆಯನ್ನು ಕಿಂಡರ್‌ಗಾರ್ಟ್ನ್ ಕೆಲಸಗಳಿಗೆಲ್ಲ ಆಧಾರವಾಗಿಟ್ಟುಕೊಳ್ಳಬೇಕೆಂದು ಹೇಳುವುದು ನ್ಯಾಯವಾಗಿ ಕಾಣುವುದಿಲ್ಲ. ನಾವು ಹೀಗೆ ಹೇಳುವಾಗ ಈ ಕ್ರಮದ ಸ್ಥಾಪಕನ ಮನಸ್ಸಿನಲ್ಲಿದ್ದ ಮತ್ತೊಂದು ದೊಡ್ಡ ಉದ್ದೇಶವನ್ನು ಮರೆತಂತಾಗುವುದು. ಪ್ರಕೃತಿಯು ವಸ್ತುಗಳಲ್ಲಿ ಪ್ರೀತಿಯನ್ನೂ ಆಶ್ಚರ್ಯವನ್ನೂ ಹುಟ್ಟಿಸಿ ಇಂತಹ ವಸ್ತುಗಳನ್ನು ಸೃಜಿಸಿದ ಪರಮಾತ್ಮನ ಮಹಿಮೆಯನ್ನು ಮಕ್ಕಳಿಗೆ ತಿಳಿಸಿ, ಅವನಲ್ಲಿ ಅವರಿಗೆ ನಿಶ್ಚಲವಾದ ಭಕ್ತಿಯುಂಟಾಗುವಂತೆ ಮಾಡುವುದು ಫ್ರೊಬೆಲ್ಲನು ಕಿಂಡರ್‌ಗಾರ್ಟ್ನ್‌ನಲ್ಲಿ ಪ್ರಕೃತಿ ವಿಮರ್ಶೆಯನ್ನೇರ್ಪಡಿಸಿದುದಕ್ಕೆ ಒಂದು ಮುಖ್ಯ ಕಾರಣವಾಗಿರುವುದು. ಈ ವಿಷಯದಲ್ಲಿ ಈಗ ನಮ್ಮಲ್ಲಿರುವ ವಿದ್ಯಾಭ್ಯಾಸದಲ್ಲಿ ವಿಶೇಷ ಕೊರತೆಯಿರುವುದು. ನಮ್ಮಲ್ಲಿದ್ದ ಪ್ರಾಚೀನ ವಿದ್ಯಾಭ್ಯಾಸದಲ್ಲಿ ಮಕ್ಕಳಿಗೆ ಧರ್ಮೋಪದೇಶಕ್ಕೆ ದೇವರ ಮಹಿಮೆಯನ್ನು ತಿಳಿಯುವುದೇ ಆದಿಯಾಗಿತ್ತು. ಅಂತಹ ವಿದ್ಯಾಭ್ಯಾಸವು ಈಗ ನಿಂತುಹೋಗಿರುವುದು ಮಕ್ಕಳ ತಾಯಿ ತಂದೆಗಳು ಈಗಿನ ಕಷ್ಟಕಾಲಗಳಲ್ಲಿತಮ್ಮ ಜೀವನೋಪಾಯವನ್ನು ಕಲ್ಪಿಸಿಕೊಳ್ಳಲು ವಿಶೇಷಕಾಲವನ್ನು ಪಯೋಗಿಸಬೇಕಾಗಿರುವುದರಿಂದ ತಮ್ಮ ಮಕ್ಕಳ ವಿದ್ಯಾಭ್ಯಾಸದ ಈ ಭಾಗಕ್ಕೆ ಗಮನ ಕೊಡಲು ಅವರಿಗೆ ವಿಶೇಷ ಅವಕಾಶವಿಲ್ಲ. ಆದುದರಿಂದ ಈ ಭಾರವನ್ನೆಲ್ಲ ಪಾಠಶಾಲೆಯು ಉಪಾಧ್ಯಾಯರು ವಹಿಸಬೇಕಾಗಿರುವುದು. ಪಾಠಶಾಲೆಗಳಲ್ಲಿ ಮಕ್ಕಳ ನಡತೆಯನ್ನು ತಿದ್ದಿ ಅವರಿಗೆ ಧರ್ಮಮಾರ್ಗವನ್ನು ತಿಳಿಸಲು ಸ್ವಲ್ಪಮಟ್ಟಿಗೆ ಪ್ರಯತ್ನಗಳೇನೊ ನಡೆಯುತಿರುವವು.

ಆದರೆ ಈ ಪ್ರಯತ್ನಗಳು ಸಾಲವು. ಈ ವಿಷಯಗಳಲ್ಲಿ ಇನ್ನೂ ವಿಶೇಷ ಪ್ರಯತ್ನವು ಅವಶ್ಯಕವೆಂಬುದಕ್ಕೆ ಈಗ ಹಿಂದೂಸ್ಥಾನದಲ್ಲಿ ನಡೆಯುತಿರುವ ಘೋರಕೃತ್ಯಗಳೆ ನಿದರ್ಶನವಾಗಿರುವವು. ಈ ಕೃತ್ಯಗಳನ್ನು ನಡೆಸುವವರಲ್ಲಿ ಅನೇಕರು

ಪಾಠಶಾಲೆಗಳಲ್ಲಿ ಓದುವುದಕ್ಕೆ ಅರ್ಹವಾದ ಕೇವಲ ಸಣ್ಣ ವಯಸ್ಸಿನವರು. ಇವರ ಬುದ್ಧಿಯನ್ನು ಮಾತ್ರ ಬೆಳೆಸಿ ಇವರಿಗೆ ಧರ್ಮಮಾರ್ಗವನ್ನು ಕಲಿಸದೇ ಇದ್ದುದೇ ಇವರು ಹೀಗೆ ದುರ್ಮಾರ್ಗಕ್ಕೆ ಹೋಗಲು ಕಾರಣವಾಯಿತೆಂದು ನನಗೆ ತೋರುವುದು. ಜಗತ್ಕರ್ತನಾದ ದೇವರನ್ನು ಆಧಾರನಾಗಿ ಇಟ್ಟುಕೊಳ್ಳದ ಧರ್ಮೋಪದೇಶದಲ್ಲಿ ನನಗೆ ಸ್ವಲ್ಪವೂ ನಂಬಿಕೆಯಿಲ್ಲ. ಮಕ್ಕಳಿಗೆ ಈ ಮಾರ್ಗದಲ್ಲಿ ಧರ್ಮೋಪದೇಶವನ್ನು ಮಾಡಿ ಈಗಿನ ವಿದ್ಯಾಭ್ಯಾಸದಲ್ಲಿರುವ ದೊಡ್ಡ ಕೊರತೆಯನ್ನು ಹೋಗಲಾಡಿಸಲು ಇಲ್ಲಿ ನಮ್ಮ ಮಂಡಲಿಯಲ್ಲಿರುವ ಮಿ॥ ರಾ॥ ನರಹರಿಶಾಸ್ತ್ರಿಗಳು ಪ್ರಯತ್ನಪಡುತ್ತಿರುವುದು ಬಹಳ ಶ್ಲಾಘನೀಯವಾದುದು. ಸಾಧ್ಯವಾದಮಟ್ಟಿಗೆ ನಾವೆಲ್ಲರೂ ಈರೀತಿಯಲ್ಲೇ ಪ್ರಯತ್ನ ಪಡಬೇಕೆಂದು ನಾನು ಕೋರುವೆನು.

ಆದುದರಿಂದ ಮಕ್ಕಳಿಗೆ ಸಹಜವಾಗಿರುವ ಕಾರ್ಯಾನೇಕ್ಷೆಯನ್ನು ವೃದ್ಧಿಗೊಳಿಸುವುದಕ್ಕೆ ತಕ್ಕ ಕೆಲಸಗಳನ್ನು ಕೊಡುವುದಕ್ಕೂ, ಇದಕ್ಕಿಂತಲೂ ಮುಖ್ಯವಾಗಿ ಅವರ ನಡೆ ನುಡಿಗಳನ್ನು ತಿದ್ದುವುದಕ್ಕೂ ಪ್ರಕೃತಿ ಸಂಸರ್ಗದಿಂದ ಸಹಾಯುವಾಗುವುದೆಂದು ನನಗೆ ತೋರುವುದು. ಪ್ರಪಂಚದಲ್ಲಿ ತುಂಬಿರುವ ವಿಷವು ಮಕ್ಕಳ ಹೃದಯವನ್ನು ಪ್ರವೇಶಿಸಿ ಆದನ್ನು ಕೆಡಿಸುವುದಕ್ಕೆ ಮುಂಚೆ ನಾವು ಈ ಕೆಲಸಕ್ಕೆ ಪ್ರಯತ್ನಪಡಬೇಕು. ಈ ಕೆಲಸದಲ್ಲಿ ಉದ್ಯುಕ್ತನಾಗುವ ಉಪಾಧ್ಯಾಯನು ಮಕ್ಕಳಿಗೆ ಅಂಶಗಳನ್ನು ಬೋಧಿಸುವುದೇ ತನ್ನ ಕೆಲಸವೆಂದು ಭಾವಿಸಕೂಡದು. ಇವನ ಕೆಲಸವು ಸದಾ ಮಕ್ಕಳಿಗೆ ಬೋಧಿಸುವುದಲ್ಲ. ಅವರನ್ನು ಸರಿಯಾದ ಮಾರ್ಗದಲ್ಲಿ ನಡೆಸುವುದು. ಈತನು ಮಕ್ಕಳ ಜೊತೆಯಲ್ಲಿ ತಾನೂ ಕಲಿಯಲು ಸಿದ್ಧನಾಗಿರಬೇಕು. ಒಂದೊಂದು ವೇಳೆ ಮಕ್ಕಳಿಂದಲೂ ಕಲಿಯಬೇಕಾಗುವುದು. ಇದಕ್ಕೆ ಸಣ್ಣ ನಿದರ್ಶನವನ್ನು ಕೊಡುವೆನು. ಕೆಲವು ದಿವಸಗಳ ಹಿಂದೆ ನಾನು ಸಣ್ಣ ಮಕ್ಕಳನ್ನು ತೋಟಕ್ಕೆ ಕರೆದುಕೊಂಡು ಹೋಗಿದ್ದಾಗ ಒಂದು ಮಗುವಿನ ಕೈಯಲ್ಲಿ ರಮ್ಯವಾದ ವರ್ಣಗಳಿಂದ ಕೂಡಿದ ಎಡ್ವರ್ಡ್ ಚಕ್ರವರ್ತಿಗಳ ಪಠವಿತ್ತು. ಈ ಪಠವನ್ನು ನಾನು ಕೈಯಲ್ಲಿ ತೆಗೆದುಕೊಂಡು ನೋಡಿ ಮಗುವು ಏನುಮಾಡುವುದೊ ನೋಡೋಣವೆಂದು ಜೇಬಿನಲ್ಲಿ ಹಾಕಿಕೊಂಡೆನು. ಆ ಮಗುವು ನನ್ನ ಮುಖವನ್ನು ನೋಡಿ ಸಕ್ಕು ಸುಮ್ಮನಾಯಿತು. ಸ್ವಲ್ಪಹೊತ್ತಿನಮೇಲೆ ನಾನು ಪಠವನ್ನು ಹಿಂದಕ್ಕೆ ಕೊಟ್ಟೆನು. ಮಗುವು ಅದನ್ನು ಒಂದು ಕ್ಷಣ ಕೈಯ್ಯಲ್ಲಿ ಹಿಡಿದುಕೊಂಡಿದ್ದು ಅಮೇಲೆ ಅದನ್ನು ನನಗೇ ಕೊಡುವುದಕ್ಕೆ ಬಂದಿತು. ನಾನು ಬೇಡ

ವೆಂದರೂ ಬಲಾತ್ಕರಿಸಿತು. ಆರಮ್ಯವಾದ ಪತದಲ್ಲಿ ಮಗುವಿಗೆ ಎಷ್ಟು ಮಮತೆ ಇದ್ದಿತು? ಈ ಮಮತೆಯನ್ನು ತ್ಯಜಿಸಿ ಅದನ್ನು ನನಗೆ ಕೊಡಲು ಬಂದಾಗ ಅದಕ್ಕೆ ಅಸ್ವಾರ್ಥತೆಯು ಎಷ್ಟರಮಟ್ಟಿಗೆ ಇರಬಹುದು! ಈ ಮಗುವಿನಿಂದ ನಾವು ಕಲಿಯಬೇಕಾದ ಅಂಶವಿಲ್ಲವೇ? ಇಂತಹ ವಿಷಯಗಳನ್ನು ನೀವೇ ಯೋಚಿಸಬಹುದು.

ಮಕ್ಕಳನ್ನು ಈ ಮಾರ್ಗದಲ್ಲಿ ನಡೆಸುವ ರೀತಿಯನ್ನು ನಿಮಗೆ ತಿಳಿಸುವುದಕ್ಕಾಗಿಯೇ ಮಿಸ್. ಲ್ಯಾಟರವರು ಇಲ್ಲಿಗೆ ಬಂದಿದ್ದದ್ದು. ಈ ಕ್ರಮವನ್ನು ತಿಳಿಸುವುದಕ್ಕೆ ಮೊದಲು ಅವರು ಲೋಕಾಂತರವನ್ನೈದಿದು ನಮ್ಮ ದುರದೃಷ್ಟವೇಸರಿ ಈಗ ನಾನು ಹೇಳಿದ ಮಾತುಗಳನ್ನು ಅವರು ಹೇಳಿದ ಮಾತುಗಳೆಂದು ನೀವು ಭಾವಿಸಿಕೊಂಡು ನಿಮ್ಮ ಪಾಠಶಾಲೆಗಳಿಗೆ ಹೋದಮೇಲೆ ನಿಮ್ಮಲ್ಲಿ ಬರುವ ಮಕ್ಕಳ ಸಂತೋಷವನ್ನು ಹೆಚ್ಚಿಸುವುದಕ್ಕೂ, ಅವರನ್ನು ಸನ್ಮಾರ್ಗಪ್ರವರ್ತಕರನ್ನಾಗಿ ಮಾಡುವುದಕ್ಕೂ ಕೈಲಾದಷ್ಟು ಪ್ರಯತ್ನಪಡಬೇಕೆಂದು ನಾನು ಕೋರುವೆನು.

ನಾನು ಇಲ್ಲ ಪ್ರಾರಂಭಿಸಿದ ಕೆಲಸಕ್ಕೆ ಬೇಕಾದ ಸಹಾಯಗಳನ್ನೆಲ್ಲಾ ಕೇಳಿದೊಡನೆಯೇ ಒದಗಿಸಿಕೊಟ್ಟು ನನ್ನ ಪ್ರಯತ್ನದಲ್ಲಿ ನನಗೆ ವಿಶೇಷ ಸಹಾಯವಾಗಿರುವ ನಾರ್ಮಲ್‌ಸ್ಕೂಲ್ ಹೆಡ್ಮಾಸ್ಟರು ಮ॥ ರಾ॥ ಹಿರಿಯಣ್ಣನವರನ್ನು ನನ್ನಕೆಲಸದಲ್ಲಿ ನನಗೆ ನಾನಾವಿಧವಾದ ಸಹಾಯಗಳನ್ನು ಮಾಡಿರುವ ಶಿಕಾರಿಪುರದ A. V. ಸ್ಕೂಲ್ ಹೆಡ್ಮಾಸ್ಟರ್ ಮ॥ ರಾ॥ ಶ್ರೀನಿವಾಸರಾಯರನ್ನೂ, ನಾನು ಉದ್ದೇಶಿಸಿದ ಕೆಲಸಗಳನ್ನೆಲ್ಲಾ ಬಹಳ ಉತ್ಸಾಹದಿಂದ ನಡೆಸುತಲಿರುವ ಪ್ರಾಕ್ಟಿಸಿಂಗ್ ಸ್ಕೂಲ್ ಹೆಡ್ಮಾಸ್ಟರ್ ಮ॥ ರಾ॥ ಶೇಷಯ್ಯಂಗಾರ್ಯರನ್ನೂ, ಇವರ ಸಹಾಯೋಪಾಧ್ಯಾಯರನ್ನೂ, ನಾನು ಬಹಳವಾಗಿ ವಂದಿಸುವೆನು. ಇಲ್ಲಿಗೆ ಬಂದಿರುವ ನೀವುಗಳೆಲ್ಲರೂ ಇಲ್ಲಿ ನಡೆಯುತಿರುವ ಕೆಲಸದಲ್ಲಿ ತೋರ್ಪಡಿಸಿದ ಉತ್ಸಾಹವನ್ನು ನೋಡಿ ನಮ್ಮ ದೇಶದ ವಿದ್ಯಾಭ್ಯಾಸಕ್ಕೆ ಮುಂದೆ ಉತ್ತಮವಾದ ದಶೆಯು ಬರಬಹುದೆಂಬ ನಿರೀಕ್ಷಣೆಯು ನನ್ನ ಮನಸ್ಸಿನಲ್ಲುಂಟಾಗಿರುವುದು.

ಕರ್ಣಾಟಕ ವ್ಯಾಕರಣ.

ಶಬ್ದಾದರ್ಶದಲ್ಲಿ ಹೇಳಿರುವಂತೆ ಸಮಾಸಗಳಲ್ಲಿ (೧) ದ್ವಿತೀಯಾ ತತ್ಪುರುಷ ಸಮಾಸಕ್ಕೂ ಕ್ರಿಯಾ ಸಮಾಸಕ್ಕೂ (೨) ಕರ್ಮಧಾರಯ ಸಮಾಸಕ್ಕೂ ದ್ವಿಗು ಸಮಾಸ ಗಮಕ ಸಮಾಸಗಳಿಗೂ ಭೇದವನ್ನು ಕಂಡುಹಿಡಿಯುವದು ಪಾಠಕರಿಗೇ ದುರ್ಗಮವಾಗಿರುವುದು. ಇನ್ನು ಬಾಲಕರಿಗೆ ಅದನ್ನು ಅರಿಯುವುದು ಸುತರಾಂ ಕಷ್ಟವಾಗಿರುವುದು. ಈ ವಿಷಯವನ್ನು ಇಲ್ಲಿ ಸ್ವಲ್ಪವಿಚಾರ ಮಾಡೋಣ.

(೧) "ದ್ವಿತಿಯಾ ವಿಭಕ್ತ್ಯಂತವಾದ ಪದವು ಉತ್ತರ ಪದಗಳಾದ ತಿಜಿನ್ತ ಕೃದಂತಗಳೊಡನೆ ಸಮಾಸವಾದರೆ ಕ್ರಿಯಾಸಮಾಸವೆನಿಸುವುದು.

ಉದಾಹರಣೆ—ತಿಜಿನ್ತಕ್ಕೆ ಮನೆಯನ್ನು + ಕಟ್ಟಿದನು = ಮನೆಕಟ್ಟಿದನು.
ಕೃದನ್ತಕ್ಕೆ ಕಾಗದವನ್ನು + ಬರೆದವನು = ಕಾಗದ ಬರೆದವನು.

ಇತ್ಯಾದಿ."

ಎಂದು ಕ್ರಿಯಾ ಸಮಾಸಕ್ಕೆ ಲಕ್ಷಣವನ್ನೂ ಉದಾಹರಣೆಯನ್ನೂ ಬರೆದಿರುವರು. ಆದರೆ ಮನೆಕಟ್ಟಿದವನು, ಹಣ್ಣುಮಾರುವವನು ಎಂದು ದ್ವಿತೀಯಾ ತತ್ಪುರುಷ ಸಮಾಸಕ್ಕೆ ಉದಾಹರಿಸಿರುವರು. ಈ ಎರಡು ಸಮಾಸಗಳಿಗೂ ಕೃದಂತೋತ್ತರ ಪದದೊಡನೆ ಕೂಡಿದ ಉದಾಹರಣೆಯು ಸಮಾನವಾಗಿರುವದು. ಅದುದರಿಂದ ಈವಿಧದ ಉದಾಹರಣೆಗಳಿಂದ ಈ ಎರಡು ಸಮಾಸಗಳಿಗೂ ಭೇದವು ತೋರದಿದ್ದರೂ, ಮನೆಕಟ್ಟಿದನು ಮುಂತಾದ ತಿಜನ್ತೋತ್ತರ ಪದದೊಡನೆ ಕೂಡಿದ ಉದಾಹರಣೆಯಿಂದ ಭೇದವನ್ನು ತಿಳಿಯಬಹುದು. ಆದರೆ ಕೃದನ್ತೋತ್ತರ ಪದದೊಡನೆ ಕೂಡಿದ ಉದಾಹರಣೆಗಳನ್ನು ಈ ಯೆರಡು ಸಮಾಸಗಳಿಗೂ ಏಕೆ ಕೊಟ್ಟಿರುವರು ಎಂದು ಆಕ್ಷೇಪಣೆ ಮಾಡಬಹುದು. ಇದಕ್ಕೆ ಸಮಾಧಾನಹೇಳುವುದು ಕಷ್ಟವು. ಆದರೂ ಸ್ವಲ್ಪ ನೋಡೋಣ. ಮನೆ ಕಟ್ಟಿದವನು ಮುಂತಾಗಿ ಕೃದನ್ತೋತ್ತರಪದದೊಡನೆ ಕೂಡಿದ ಉದಾಹರಣೆಗಳು ಮೇಲೆಹೇಳಿದ ಕ್ರಿಯಾಸಮಾಸ ತತ್ಪುರುಷಸಮಾಸಗಳಲ್ಲಿ ಯಾವದಾದರೂ ಒಂದಕ್ಕೆ ಸಲ್ಲಬೇಕಲ್ಲದೆ ಎರಡಕ್ಕೂ ಸಲ್ಲಲಾರವು ಎಂಬ ವಿಷಯದಲ್ಲಿ ಯಾವ ವಿವಾದವೂ ಇಲ್ಲ. ತತ್ಪುರುಷ ಸಮಾಸದಲ್ಲಿ

ಉತ್ತರಪದವು ಸುಬನ್ತವಾಗಿಯೇ ಇರುವುದರಿಂದ ಮೇಲಣ ಉದಾಹರಣೆಗಳು ತತ್ಪುರುಷಕ್ಕೆ ಉಚಿತವಾಗಬಹುದು. ಆದರೆ ಅವ್ಯಯಗಳಿಗೆ ಸುಪ್ ಪ್ರತ್ಯಯ ಹತ್ತಿ ಲೋಪಹೊಂದಿರುವುದರಿಂದ ಪಾಠಹೇಳುತ್ತಾ, ಮನೆಸೋದಿ, ಮುಂತಾಗಿ ಅವ್ಯಯ ಕೃದನ್ತೋತ್ತರ ಪದದೊಡನೆ ಕೂಡಿದ ಸಮಾಸಪದಗಳೂ ತತ್ಪುರುಷಕ್ಕೆ ಉದಾಹರಣೆಗಳಾಗಲಿ. ಆದರೆ ಈಗ ಶಬ್ದಾದರ್ಶದಲ್ಲಿ ಇಂತಹ ಪದಗಳನ್ನು ಕ್ರಿಯಾಸಮಾಸಕ್ಕೆ ಉದಾಹರಿಸುವುದು ಅನುಚಿತವಾಗಬೇಕಲ್ಲವೆ ? ಎಂಬ ಆಕ್ಷೇಪಣೆ ಉಂಟಾಗುವುದು. ಸಮಾಸ ಮತ್ತು ಉದಾಹರಣೆಗಳ ಔಚಿತ್ಯವನ್ನು ಪರ್ಯಾಲೋಚಿಸುವಲ್ಲಿ ಈ ಆಕ್ಷೇಪಣೆಯನ್ನು ಒಪ್ಪಿಕೊಂಡು, ಇಂಥಾ ಉದಾಹರಣೆಗಳನ್ನು ಕ್ರಿಯಾಸಮಾಸಕ್ಕೆ ಕೊಟ್ಟಿರುವುದು ಅಷ್ಟು ಉಚಿತವಲ್ಲವೆಂದು ಹೇಳಬೇಕಾಗಿದೆ. ಹಾಗಾದರೆ ಕ್ರಿಯಾಸಮಾಸಕ್ಕೆ ಮನೆ ಕಟ್ಟಿದನು ಮುಂತಾದ ತಿಜನ್ತೋತ್ತರ ಪದದೊಡನೆ ಕೂಡಿದ ಉದಾಹರಣೆ ಮಾತ್ರ ಕೊಡಬೇಕು.

ಉಳಿದ ಉದಾಹರಣೆಗಳು ಅಂದರೆ ಕೃದನ್ತೋತ್ತರಪದದೊಡನೆ ಕೂಡಿದ ಸಮಾಸಪದಗಳು—ಮನೆಕಟ್ಟಿದವನು, ಮನೆ ಕಟ್ಟಿ, ಮನೆಕಟ್ಟಿತ ಮುಂತಾದವುಗಳು ಕ್ರಿಯಾಸಮಾಸಕ್ಕೆ ಉದಾಹರಣೆಯಾಗಲಾರವು. ಆದುದರಿಂದ " ದ್ವಿತೀಯಾವಿಭಕ್ತ್ಯಂತವಾದ ಪದವು ತಿಜನ್ತಕೃದನ್ತಗಳೊಡನೆ ಸಮಾಸವಾದರೆ ಕ್ರಿಯಾಸಮಾಸವೆನಿಸುವುದು " ಎಂಬ ಕ್ರಿಯಾಸಮಾಸಲಕ್ಷಣವು ಸರಿಯುಲ್ಲವು. " ದ್ವಿತೀಯಾವಿಭಕ್ತ್ಯಂತವಾದ ನಾಮಪದಕ್ಕೆ ತಿಜಿನ್ತವಾದ ಪದದೊಡನೆ ಆಗುವ ಸಮಾಸವು ಕ್ರಿಯಾಸಮಾಸವೆನಿಸುವುದು " ಎಂದೂ ಮತ್ತು " ದ್ವಿತೀಯಾವಿಭಕ್ತ್ಯಂತವಾದ ನಾಮಪದಕ್ಕೆ ಸುಬನ್ತವಾದ ಪದದೊಡನೆ ಆಗುವ ಸಮಾಸವು ದ್ವಿತೀಯಾತತ್ಪುರುಷವೆನಿಸುವುದು " ಎಂದೂ ಲಕ್ಷಣಗಳಿರಬೇಕಾಗುವುದು. ಹೀಗೆಮಾಡುವುದರಿಂದ ದ್ವಿತೀಯಾ ತತ್ಪುರುಷ ಕ್ರಿಯಾಸಮಾಸಗಳಿಗೆ ಪರಸ್ಪರ ವ್ಯತ್ಯಾಸವು ವ್ಯಕ್ತವಾಗುವುದು—

ಪರಸ್ಪರ ಸಂಬಂಧವುಳ್ಳ ಭೂಗೋಳದ ಪಾಠ ಮತ್ತು ಹಾಡು.

ಬಂದನೆಯ ಇಯತ್ತೆ.

ನೀಗ್ರೋ ಹುಡುಗರು.

[ಸಿದ್ಧಗೊಳಿಸತಕ್ಕ ಉಪಕರಣಗಳು:—ನೀಗ್ರೋಜನರ ಬೊಂಬೆಗಳು, ಆಫ್ರಿಕಾಖಂಡದ ಸಿಂಹ, ಆನೆ, ಜಿರಾಫೆ ಇವುಗಳ ಚಿತ್ರಗಳು; ನೀಗ್ರೋಜನರ ಗುಡಿಸಲುಗಳು, ಹಳ್ಳಿಗಳು ಇವುಗಳ ಪಠಗಳನ್ನು ಬೋರ್ಡಿನಮೇಲೆ ಬರೆಯತಕ್ಕದ್ದು. ಅವರು ಉಪಯೋಗಿಸುವ ಭಲ್ಲೆಗಳು, ಬಿಲ್ಲುಗಳು, ಬಾಣಗಳು, ಪಾತ್ರೆಗಳು ಮುಂತಾದುವುಗಳನ್ನು ಕಪ್ಪುಹಲಗೆಯಮೇಲೆ ಬರೆದು ತಿಳಿಸುವುದು.]

ಪ್ರಾರಂಭ:—ನೀಗ್ರೋಜನರು ಕಪ್ಪು ಬಣ್ಣದವರು. ಅವರ ಚರ್ಮ ದಪ್ಪ, ತಲೆಕೂದಲು ಬಿರುಸು. ಅವರು ವಾಸಿಸುವ ಖಂಡಕ್ಕೆ ಆಫ್ರಿಕಾ ಎಂದು ಹೆಸರು. ಅಲ್ಲಿ ಸೆಕೆ ಹೆಚ್ಚು. ದೇಶವು ಬಲು ಅಂದವಾಗಿದೆ. ಎಲ್ಲೆಲ್ಲಿ ನೋಡಿದರೂ ಮನೋಹರವಾದ ಗಿಡಗಳೂ ಹೂವುಗಳೂ ಕಾಣಬರುವುವು. ನೈದಿಲೆಹೂಗಳು ಮಿಗಿಲು ಅಂದವಾದುವು. ಅವುಗಳ ನೆಲೆ ಆಫ್ರಿಕಾಖಂಡವೇ.

ನೀಗ್ರೋಜನರ ನಿವಾಸಸ್ಥಳಗಳು:—ಅಡವಿಗಳ ನಡುವೆಯೂ, ಬೆಟ್ಟಗಳಲ್ಲಿಯೂ, ಬಯಲುಗಳಲ್ಲಿಯೂ ಅವರು ಮನೇಕಟ್ಟಿಕೊಳ್ಳುವರು. ಅವರಿಗೆ ಅರಮನೆಗಳಾಗಲಿ, ಮಹಡಿಮನೆಗಳಾಗಲಿ ಇಲ್ಲ. ಅವರು ಗುಡಿಸಲುಗಳನ್ನು ಹಾಕಿಕೊಂಡು ವಾಸಮಾಡುತ್ತಿರುವರು. ಅವು ಜೇನುಗೂಡಿನಂತಿರುವುವು. ಆ ಗುಡಿಸಲುಗಳಿಗೆ ಕಿಟಕಿಗಳಿಲ್ಲ. ಗಾಳಿ ಒಳಕ್ಕೆ ಬರಲಾರದು. ಬಾಗಿಲುಗಳು ಬಹುಕಿಳಗೆ ಇರುವುದರಿಂದ ಒಳಕ್ಕೆ ಹೋಗುವವರು ಕೈಗಳನ್ನು ಹಿಡಿದುಕೊಂಡು ಹೋಗಬೇಕು. ಉದ್ದವಾಗಿ ಬೆಳೆದ ಹುಲ್ಲನ್ನು ಕೊಯ್ದು, ಒಣಗಿಸಿ, ಆವುಗಳನ್ನು ಹೊದಿಸುವರು. ಗುಡಿಸಲ ನೆಲಕ್ಕೆ ತೆಳ್ಳಗೆ ಮಬ್ಬು ಬಳಿದಿಡುವುರು. ಅದರ ಮೇಲೆ ಮೃದುವಾದ ಹುಲ್ಲನ್ನು ಹಾಸಿರುವರು. ಇದರಮೇಲೆ ಧೂಳಿತುಂಬುವುದರಿಂದ ಆಗಾಗ್ಗೆ ಹೋದ ಹುಲ್ಲನ್ನು ತಂದು ಅದರಮೇಲೆಯೇ ಹಾಸುವುರು. ಹುಲ್ಲುಮನೆಗಳಾದುದರಿಂದ ಸುಲಭವಾಗಿ ಬೆಂಕಿಗೆ ಗುರಿಯಾಗುವುವು. ಅಂಥ ಸಂದರ್ಭದಲ್ಲಿ ಕೂಡಲೆ ಹೊಸ ಗುಡಿಸಲನ್ನು ಕಟ್ಟಿಕೊಳ್ಳುವರು.

ನೀಗ್ರೋಜನರು ಇಂತಹ ಗುಡಿಸಲುಗಳನ್ನು ಕಟ್ಟಬೇಕಾದರೆ ಬಿದಿರು ಕೋಲುಗಳನ್ನು ಗುಂಡಾಗಿ ನೆಟ್ಟು, ಬಲವಾದ ಹುಲ್ಲುಕಡ್ಡಿಗಳಿಂದ ಅವುಗಳನ್ನು ಹೆಣೆದು, ಅವುಗಳಮೇಲೆ ಕೆಂಪು ಜೇಡನ್ನು ಬಳಿಯುವರು. ಈ ಸುತ್ತುಗೋಡೆ ಸಿದ್ಧವಾದ ತರುವಾಯ ಮೇಲುಗಡೆ ಹೊದಿಕೆ ಹಾಕುವರು.

ಈ ಗುಡಿಸಲುಗಳಲ್ಲಿ ಸಾಮಾನುಗಳು ಬಹು ಸ್ವಲ್ಪವಾಗಿರುವುವು. ಅಡಿಗೆಗೆ ಒಂದು ಭಾಗವನ್ನೂ ಮಲಗಲಿಕ್ಕೆ ಒಂದು ಭಾಗವನ್ನೂ ಮಾಡಿಕೊಂಡಿರುವರು. ಮಲಗುವ ಕೋಣೆಯಲ್ಲಿ ಹುಲ್ಲಿನ ಮೆತ್ತೆಗಳೂ ಚಾಪೆಗಳೂ ಇರುವುವು. ಅಡಿಗೆ ಮನೆಯಲ್ಲಿ ಒಲೆ ಇರುವುದು. ಹೆಚ್ಚಿನ ಸಾಮಾನುಗಳೇನೂ ಇರವು. ಮಣ್ಣಿನ ಪಾತ್ರೆಗಳು, ಮರದ ಸೌಟುಗಳೂ ಇರುವುವು. ಇವರ ಹಳ್ಳಿಗಳು ಅಲ್ಲಲ್ಲಿ ಗುಡಿಸಲುಗಳಿಂದ ಕೂಡಿರುವುದೇ ಹೊರತು ಅಂದವಾದ ಬೀದಿಗಳಿಲ್ಲ.

ನೀಗ್ರೋಜನರ ಸ್ವರೂಪ ಮತ್ತು ಉಡುಪು :— ಈಜನರ ತಲೆಗಳು ದೊಡ್ಡವು ಅವರ ಮೂಗು ನಿಡಿದಾಗಿ ತೆಳ್ಳಗಿರುವುದು. ತುಟಿಗಳು ವಿಶಾಲವಾಗಿಯೂ ಕೆಂಪಾಗಿಯೂ ಇರುವುವು. ಅವರ ಕಾಲುಗಳು ಬಹು ಉದ್ದವಾಗಿಯೂ ಬಲವಾಗಿಯೂ ಇರುವುವು. ಇದರಿಂದ ಅವರನಡಿಗೆ ಅಂದವಾಗಿ ಕಾಣಿಸದು. ಉಷ್ಣಪ್ರದೇಶದಲ್ಲಿ ವಾಸಮಾಡುವುದರಿಂದ ಅವರಿಗೆ ಬಟ್ಟೆಗಳ ಅಗತ್ಯವಿಲ್ಲ. ಸಣ್ಣ ಹುಡುಗರು ಬರಿಯ ಕೈಯಲ್ಲಿ ತಿರುಗಾಡುತ್ತಿರುವರು. ಮುಕ್ಕಳು ಕರೀಮಣಿಯ ದಂಡೆಗಳನ್ನು ಕೊರಳಲ್ಲಿ ಹಾಕಿರುವರು. ಕೀಲುಮಂಡೆಗಳಲ್ಲಿಯೂ, ಮುಂಗೈಗಳಲ್ಲಿಯೂ ದಂತದ ಬಳೆಗಳನ್ನೂ, ಹಿತ್ತಾಳೆಯ ಕಡಗಗಳನ್ನೂ ಹಾಕಿರುವರು.

ನೀಗ್ರೋಜನರ ವೃತ್ತಿ :— ಈಜನರು ಅಡವಿಗೆ ಹೋಗಿ, ಬೇಟೆಯಾಡಿ, ತಮ್ಮ ಆಹಾರಕ್ಕಾಗಿ ಮೃಗಗಳನ್ನು ಕೊಲ್ಲುವರು. ದಂತಗಳಿಗಾಗಿ ಆನೆಗಳನ್ನು ಬೇಟೆಯಾಡುವರು. ನೇಗಿಲಯ ಕೆಲಸವನ್ನು ಕೆಲವರು ಮಾಡುವರು. ಬಿದಿರು ಕೋಲುಗಳಿಂದ ಮಾಡಿದ ಮಗ್ಗಗಳನ್ನು ಪಯೋಗಿಸುವರು. ಆ ಮಗ್ಗಗಳಮೇಲೆ ಒರಟುಬಟ್ಟೆಗಳನ್ನು ನೇಯುವರು. ಒಂದು ಹಚ್ಚಡವನ್ನು ನೇಯುವುದಕ್ಕೆ ಒಂದು ತಿಂಗಳು ಹಿಡಿಯುವುದು. ಕೆಲವರು ಕಬ್ಬಿಣದ ಕೆಲಸವನ್ನು ಮಾಡುವರು. ಅವರು ಉಪಯೋಗಿಸುವ ಸುತ್ತಿಗೆಗಳೂ, ಇತರ ಮುಟ್ಟಿಗಳೂ, ಒರಟಾಗಿರುವುವು. ಚರ್ಮದ ತಿದಿಗಳನ್ನು ಪಯೋಗಿಸುವರು.

ಹೆಂಗಸರು ಧಾನ್ಯಗಳನ್ನು ಬೀಸುವ ಕಲ್ಲುಗಳ ನಡುವೆ ಹಾಕಿ, ಒತ್ತಿದು, ಅಕ್ಕಿ ಮಾಡುವರು. ಮಣ್ಣನ್ನು ಹದಗೊಳಿಸಿ ಕೈಯಿಂದಲೇ ಬಗೆ ಬಗೆಯ ಮಡಕೆ ಗಳನ್ನು ಮಾಡುವರು. ಆಮೇಲೆ ಅವುಗಳನ್ನು ಬಿಸಿಲಲ್ಲಿ ಬಣಗಿಸಿ ಉಪಯೋಗಿ ಸುವರು.

ಹುಡುಗರು ಯಾವಾಗಲೂ ಆಡುತ್ತಿರುವರು. ಅಲಗ ಹಾಕುವುದು, ಹಗ್ಗ ಗಳನ್ನೆಳೆಯುವುದು, ತೂಗುಯ್ಯಾಲೆಯಲ್ಲಿ ತೂಗುವುದು, ಇವೇ ಮುಖ್ಯವಾದ ಆಟ ಗಳು. ಅವರಿಗೆ ಪಾಠಶಾಲೆಗಳಿಲ್ಲ; ಹುಡುಗರು ದೊಡ್ಡವರಸಂಗಡ ಬೇಟೆಗೆ ಹೋಗಿ, ಬಿಲ್ಲು, ಭಲ್ಯಗಳನ್ನು ಉಪಯೋಗಿಸುವುರು. ಇವರು ಎಂಥ ಅಪಾಯಕ ರವಾದ ಕೆಲಸಗಳನ್ನಾದರೂ ಮಾಡಲು ಸಿದ್ಧರಾಗಿರುವರು. ಸಣ್ಣ ಮಕ್ಕಳಿಗೆ ಮು ದ್ದಾದ ಹೆಸರುಗಳಿರುವುವು. ದೊಡ್ಡವರಾದಮೇಲೆ ಬೇರೆ ಹೆಸರಿಟ್ಟುಕೊಳ್ಳುವರು.

ನೀಗ್ರೋಜನರ ಊಟ: – ಹೆಂಗಸರು ಸಿದ್ಧಮಾಡಿದ ಅಕ್ಕಿಹಿಟ್ಟಿನಿಂದ ಮಾಡಿ ದರೊಟ್ಟಿಗಳೇ ಇವರ ಮುಖ್ಯಾಹಾರ. ಹಸಿಹಿಟ್ಟನ್ನು ನೀರಿನಲ್ಲಿ ಕಲಿಸಿ ಮಡಕೆ ಯಲ್ಲಿ ಬೇಯಿಸುವುರು. ಒಂದು ಮಗು ಅಲ್ಲಿಯೇ ಇದ್ದು ಅದನ್ನು ಸೌಟಿನಿಂದ ತಿರುಪುತ್ತಿರುವುದು; ಆಮೇಲೆ ಅದು ಮುದ್ದೆಯಾಗುವುದು; ಆ ಮುದ್ದೆಯನ್ನು ಇಳಿಸಿ ಉಂಡೆಗಳಾಗಿ ಮಾಡುವರು. ಆಮೇಲೆ ಆ ಉಂಡೆಗಳನ್ನೇ ತಿನ್ನುವರು. ಗಂಡ ಸರು ಬೇಟೆಯಾಡಿ, ಕೊಂದುತಂದ ಹಕ್ಕಿಗಳು ಮೊದಲಾದುವನ್ನು ಬೆಂಕಿಯಲ್ಲಿ ಸುಟ್ಟು ತಿನ್ನುವರು. ಆಹಾರ ಸಿದ್ಧವಾದಕೂಡಲೇ ಗಂಡಸರು ಒಂದು ಮಡಕೆ ಯಲ್ಲಿ ಹಾಕಿ ಕೆಲವರು, ಕೈಯಲ್ಲಿ ತೆಗೆದು ತಿನ್ನುವರು. ಆಮೇಲೆ ಹೆಂಗಸರೂ ಹುಡುಗರೂ ಅದೇ ಮಡಕೆಯಲ್ಲಿಯೇ ತೆಗೆದು ತಿನ್ನುವರು. ಕೈಯಿಂದ ತಿನ್ನುವುದೇ ಅವರಿಗೆ ಅಭ್ಯಾಸ, ಒಂದೊಂದುವೇಳೆ ಸೌಟಿನಿಂದ ತೆಗೆದು ತಿನ್ನುವುದೂಉಂಟು.

ನೀಗ್ರೋದೇಶದಲ್ಲಿ ಅಂದವಾದ ಸಿಂಹಗಳು ಉಂಟು, ಅವುಗಳ ಕೇಸರಗಳು (ಹೆಗ್ಗತ್ತಿನಕೂದಲು) ಮೃದುವಾಗಿರುವುದು. ನೀಗ್ರೋಜನರು ಸಿಂಹದ ಮರಿಗ ಳನ್ನು ಸಾಕಿ, ಪಳಗಿಸಿಕೊಳ್ಳುವುರು. ಅವು ದೊಡ್ಡವಾಗುವ ತನಕ ಯಾವ ಅಪಾಯ ವನ್ನೂ ಮಾಡುವುದಿಲ್ಲ. ಅಲ್ಲಿನ ಅನೆಗಳು ದಂತಗಳಿಗೆ ಪ್ರಸಿದ್ಧವಾಗಿವೆ. ಇನ್ನೊಂ ದುವಿಚಿತ್ರವಾದ ಪ್ರಾಣಿವುಂಟು. ಅದರ ಚರ್ಮ ಪರಿಪರಿಯಾಗಿರುವುದು. ಕುತ್ತಿಗೆ ಬಲು ಉದ್ದವಾಗಿರುವುದು. ಇದಕ್ಕೆ ಜಿರಾಫೆ ಎಂದು ಹೆಸರು. ಅಲ್ಲಿ ಬಾಲವಿಲ್ಲದ ಕೋತಿಗಳೂ ಬಾಲವುಳ್ಳ ಕೋತಿಗಳೂ ಅನೇಕವಾಗಿರುವುವು.

ಈಪಾಠಕ್ಕೆ ಸಂಬಂಧಿಸಿದ ಕೈಕೆಲಸಗಳು.

ಬ್ರಷ್ಷಿನಿಂದ ಬರೆವುದು—ನೆಯ್ದಲೆಹೂಗಳನ್ನು ಅಂದವಾದ ಬಣ್ಣದ ರೇಕುಗಳಿಂದ ಬರೆಯಿಸು.

ಚಿತ್ರಬರಿಯುವುದು—ಬಣ್ಣದ ಸುದ್ದೆಮಣ್ಣಿನಿಂದ ನೀಗ್ರೋಜನರ ಗುಡಿಸಲುಗಳ ಚಿತ್ರವನ್ನು ಬರೆಯಿಸುವುದು.

ಮಣ್ಣಿನ ಕೆಲಸ—ನೀಗ್ರೋಜನರ ಮಡಕೆಗಳ ರೂಪಗಳನ್ನು ಮಾಡಿಸು.

ಕಾಗದದ ಕೆಲಸ—ನೀಗ್ರೋಜನರ ಭಲ್ಯಗಳನ್ನು ಕಾಗದಗಳಿಂದ ಮಾಡಿಸು.

ಸೀಮೇಸುಣ್ಣದ ಕೆಲಸ—ನೀಗ್ರೋಜನರ ರೂಪಗಳನ್ನು ಬರೆಯಿಸು.

ಈಹಾಡನ್ನು ಅಭಿನಯದಿಂದ ಹಾಡಿಸುವುದು.

ರಾಗ. ತಾಳ.

ಪಲ್ಲ—ನೋಡಿದೇನು ಸೋಬಗ! ಕಾಡಜನರ ನಡವಳಿ.

ಅನುಪಲ್ಲವಿ—ನೋಡಿಕವಿಯು ದೊಡ್ಡದು, ಮೂಗು ತೆಳ್ಳಗಿರ್ಪುದು.

ಗುಡಿಸಲುಗಳೆ ಮನೆಗಳೂ, ತಡಿಕೆಗೋಡೆಯಾಗಿವೇ
ಹುಡುಕಿಹುಡುಕಿನೋಡಲು, ಬೆಳಕುಗುಳಿಬಾಲವು ॥೧॥

ಹಿಟ್ಟುಬೀಸಿರೊಟ್ಟಿಯೂ, ತಟ್ಟಿತಿಂಬರೆಲ್ಲರು,
ಸುಟ್ಟುಹಕ್ಕಿಮಿತಗಳಂ, ಹೊಟೆಹೊರೆದುಕೊಂಬರು ॥೨॥

ಉಡುಗೆತೊಡಿಗೆಯರಿಯುರು, ಬಡವೆಯಿಡಲುಕಾಣರು.
ಬಡತನದಿಂಮಣಿಯುದುಡೆ, ಪಡಗಗಳನೆಧರಿಪರು. ॥೩॥

ಅಂದವಾದ ಸಿಂಹವು, ಚಂದದಾನೆ ಮರಿಗಳು.
ಸುಂದರಜೀರಾಫೆ ಫಲವುಮೃಗಜಾತಿಯುರ್ವುವು. ॥೪॥

ಮಡದಿಯರೇ ಕೈಗಳಿಂ, ಮಡಕೆಮಾಡುತಿರ್ಪರು.
ಉಡುವರದರೊಳಂದಿದಂ, ಮಡಿವವಾತ್ರೆಯುದರದೇ. ॥೫॥

ಹೂಗಳಲ್ಲಿ ನೈದಿಲು, ಲಾಗವಾಗಿ ತೋರುತ,
ಮೂಗಿಗಿನಿದಬೀರುತಸೊಗ, ಸಾಗಿಕಾಣುತಿರ್ಪುದು. ॥೬॥

ಬರಹದ ಒಕ್ಕಣೆಗಳು.

ಪೂರ್ವಕಾಲದ ಬರೆವಣಿಗೆಯ ಕ್ರಮಕ್ಕೂ ಈಗಿನ ಬರಹದ ಕ್ರಮಕ್ಕೂ ಬಹಳ ವ್ಯತ್ಯಾಸ ತೋರುತ್ತಿದೆ. ಹಿಂದಿನ ಕಾಲದವರು ಪೂರ್ವಮರ್ಯಾದೆಗಳನ್ನು ಸ್ವಲ್ಪವೂ ಬಿಡದೆ ನಡಿಸಿಕೊಂಡು ಬರಬೇಕೆಂಬ ನಿಯಮವುಳ್ಳವರಾಗಿದ್ದರು; ಆದುದರಿಂದ ಅವರು ಹಿರಿಯರ ಮೇಲುಪಜ್ಞೆಯನ್ನು ಸ್ವಲ್ಪವೂ ಕೆಡಿಸದೆ ಆಚರಣೆಯಲ್ಲಿಟ್ಟುಕೊಂಡಿದ್ದರು. ಆದಿಯಲ್ಲಿ ಶ್ರೀಕಾರವನ್ನೂ, ಇಷ್ಟದೈವದ ಹೆಸರನ್ನೂ ಬರೆದಹೊರತು ಯಾವ ಅಕ್ಷರವನ್ನಾಗಲಿ ಆರಂಭಿಸುತ್ತಿರಲಿಲ್ಲ. ಗುರುಗಳಿಗೆ, ಹಿರಿಯರಿಗೆ, ಕಿರಿಯರಿಗೆ, ಸಮಾನರಿಗೆ, ಅಧಿಕಾರಿಗಳಿಗೆ ಇಂತಿಂತಹ ಮರ್ಯಾದೆಗಳನ್ನೇ ಇಟ್ಟು ಬರೆಯಬೇಕೆಂಬ ವಿಧಿಯಿತ್ತು. ಈಗಲೂ ಮತಗಳಿಗೂ ರಾಜಸ್ಥಾನಗಳಿಗೂ ಬರಿಯುವಲ್ಲಿ ಪೂರ್ವದ ಒಕ್ಕಣೆಯಲ್ಲಿ ಸ್ವಲ್ಪವಾದರೂ ಹೆಚ್ಚುಕಡಮೆ ಮಾಡದೆ ಬರೆಯಬೇಕೆಂಬ ನಿಯಮವೇ ಬಳಕೆಯಲ್ಲಿದೆ. ಸರಕಾರಿ ಬರವಣಿಗೆಗಳಲ್ಲಿ ರಾಜಶಾಸನದಂತೆ ಸಾಮಾನ್ಯವಾದ ಕೆಲವು ನಿಯಮಗಳಿಗೆ ಒಳಪಟ್ಟಿರಬೇಕೆಂಬ ಕಟ್ಟುಪಡಿ ಇರುವುದು. ಇತರಕಾಗದಗಳ ವಿಚಾರವಾಗಿ ಎಷ್ಟುಮಟ್ಟಿಗೆ ವ್ಯತ್ಯಾಸಗಳುಂಟಾಗಿವೆಯೋ ಅವುಗಳನ್ನು ತಿಳಿಸುವುದೇ ಕಷ್ಟವಾಗಿದೆ. ನವನಾಗರಿಕಾಭಿಲಾಷಿಗಳಾದ ಈಗಿನ ಪರೀಕ್ಷೆಯು ವರ್ಗದ ಬಾಲಕರೂ, ಈ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಮುಕ್ತರಾದಮೇಲುವ ಕರೂ ಬರಿಯುವ ಕಾಗದಗಳಂತೂ ಕೇವಲ ಹಾಸ್ಯಕರವಾಗಿವೆ ಎಂದು ಹೇಳಿದರೂ ಅತಿಶಯೋಕ್ತಿಯೆನಿಸದು. ಪರೀಕ್ಷೆಗೆ ಓದುತ್ತಿರುವ ಹುಡುಗನು "ತನಗೆ ಒಂದು ದಿನದ ವಿರಾಮಕೊಡಿಸಬೇಕೆಂದು" ಉಪಾಧ್ಯಾಯನಿಗೆ ವಿಜ್ಞಾಪ್ತಿಮಾಡಿಕೊಳ್ಳುವ ಪತ್ರದ ಕ್ರಮವೂ ತಿಳಿಯದು, ತಮಗಿಂತಲೂ ದೊಡ್ಡವರಿಗೆ ಆಶೀರ್ವಾದ ಕಿರಿಯರಿಗೆ, ಬಿನ್ನಹ, ಸ್ತ್ರೀಯರಿಗೆ ಮಹಾರಾಜಶ್ರೀ ಮುಂತಾದ ಒಕ್ಕಣೆಯ ಪತ್ರಗಳು ಅನೇಕವಾಗಿ ಸಿಕ್ಕುವುವು. ಇಂಗ್ಲೀಷ್ ವಿದ್ಯಾಭ್ಯಾಸಮಾಡುತ್ತಿರುವ ಮಾತ್ರದಿಂದಲೇ ನಮ್ಮ ಪೂರ್ವದ ನಡೆ, ನುಡಿ, ಆಚಾರ, ವ್ಯವಹಾರಗಳನ್ನು ಬಿಡಬೇಕೆಂದು ಯಾರು ಹೇಳಿರುವರೋ ತಿಳಿಯದು. ಅಪ್ರಕೃತವಾದ ಹೆಚ್ಚು ಬರವಣಿಗೆಗೆ ಅವಕಾಶ ಕೊಡಬಾರದೆಂದು ಅಪೇಕ್ಷೆಯಿದ್ದರೆ ಮರ್ಯಾದೆಯನ್ನು ಬಿಡದೆ, ಉಚಿತವಾದ ಸಂಕೇತಪದಗಳನಾಗಲಿ, ಅಕ್ಷರಗಳನಾಗಲಿ ಉಪಯೋಗಿಸುವುದು ಉತ್ತಮವಲ್ಲವೆ? ಪ್ರತಿ ಒಂದು ಮತದಲ್ಲಿಯೂ ಒಂದೊಂದು ಬಗೆಯ ಕಟ್ಟಳೆಗಳಿರುವುವು.

ಅವುಗಳನ್ನುಲ್ಲಂಘಿಸಿ, ನಾಸ್ತಿಕರಾಗಿ ಕೆಡುವುದಕ್ಕಿಂತ ಆ ಜಿಹ್ವೆಗಳನ್ನಾದರೂ ಕಾಪಾಡಿಕೊಂಡು ಬರುವುದು ಭೂಷಣವೆಂದು ತೋರುವುದು. ಅಲ್ಪಸ್ವಲ್ಪ ವಿದ್ಯೆಯನ್ನು ಕಲಿತು, ಇತರರನ್ನು ದೂಷಿಸುವ ನೋಟಿಸುಗಳನ್ನು ಬರೆದು ಕೆಡುತ್ತಿರುವ ಈಗಿನ ವಿದ್ಯಾವಂತರು ಮುಂದೆಯಾದರೂ ತಮ್ಮ ವಿದ್ಯೆಗೂ, ಪದ್ಧತಿಗೂ, ದೋಷವನ್ನು ತಾರದಂತೆ ಪೂರ್ವದ ಮರ್ಯಾದೆಗಳನ್ನು ತಮ್ಮ ಬರಹಗಳಲ್ಲಿಯೂ, ನಡೆನುಡಿಗಳಲ್ಲಿಯೂ, ತೋರಿಸುತ್ತ ಸನ್ಮಾರ್ಗಪ್ರವರ್ತಕರಾದರೆ ವಿದ್ಯಾಭ್ಯಾಸದ ಫಲವನ್ನು ಪಡೆದಂತೆ ಆಗುವುದು. ದೇಶಾಂತರದ ಬರಹಗಳಲ್ಲಿ ಇಂತಹ ದೋಷಕ್ಕೆ ಆಸ್ಪದವಿಲ್ಲದಂತೆ ಬಾಲ್ಯದಲ್ಲಿಯೇ ತಿದ್ದುವುದಲ್ಲದೆ, ತಕ್ಕ ಪುಸ್ತಕಗಳನ್ನೂ ಬರೆಯಿಸಿ ಪ್ರಸಿದ್ಧಿಗೊಳಿಸಿರುವರು. ಕನ್ನಡದಲ್ಲಿಯೂ 'ಲೇಖ್ಯಬೋಧಿನಿಯಂತಹ ನಾಲ್ಕಾರು ಪುಸ್ತಕಗಳಾದರೂ ಪ್ರಚಾರದಲ್ಲಿದ್ದರೆ ಬಹುಮಟ್ಟಿಗೆ ಸಹಾಯವಾಗುವುದರಲ್ಲಿ ಸಂಶಯವಿಲ್ಲವು.

ಚರಿತ್ರೆ.

ಪಾಠಶಾಲೆಗಳಲ್ಲಿ ಸಾಮಾನ್ಯವಾಗಿ ಚರಿತ್ರೆಯ ಪಾಠಗಳನ್ನು ಪುಸ್ತಕಗಳಲ್ಲಿರುವಂತೆ ಕಂಠಪಾಠಮಾಡಿಸುವ ಪದ್ಧತಿಯೇ ಬೇರೂರಿಕೊಂಡಿದೆ. ಇದರಿಂದ ವಿದ್ಯಾರ್ಥಿಗಳ ಬುದ್ಧಿ ಪಸರಣಕ್ಕೆ ಸುತರಾಂ ಅವಕಾಶವಿಲ್ಲ. ತಾವು ಕಲಿತುದರ ತಾತ್ಪರ್ಯವೇನೆಂಬುದೇ ಬಹುಜನ ಹುಡುಗರಿಗೆ ತಿಳಿಯದು. ಬೋಧನಕ್ರಮದಲ್ಲಿ ವಿದ್ಯಾರ್ಥಿಗಳ ಬುದ್ಧಿಯನ್ನು ಪ್ರಕಾಶಗೊಳಿಸಲು ಬೋಧಕರು ಪ್ರಯತ್ನಪಡಬೇಕೆಂಬ ನಿಯಮವನ್ನು ನಮ್ಮ ಉಪಾಧ್ಯಾಯರು ಗಮನಿಸದೆ ಇರುವುದು ವಿಷಾದಕರವಾದುದು. ಈಗಿನ ಬೋಧಕರಲ್ಲಿ ತಮ್ಮ ಕರ್ತವ್ಯವನ್ನು ಚೆನ್ನಾಗಿ ತಿಳಿದುಕೊಂಡು, ಕ್ರಮವಾದ ಶಿಕ್ಷಣವನ್ನು ಕೊಡತಕ್ಕವರು ಅತಿ ವಿರಳರೆಂದು ಹೇಳಿದರೂ ಅತಿಶಯೋಕ್ತಿಯಾಗಿರದು. ತಿಳುವಳಿಕೆಯಿಲ್ಲದೆ ಕಂಠಪಾಠ ಮಾಡಿಸುವುದರಿಂದ ಸ್ವಲ್ಪವೂ ಪ್ರಯೋಜನವಿಲ್ಲವೆಂಬುದನ್ನು ಬೋಧಕರು ಲಕ್ಷ್ಯದಲ್ಲಿಡತಕ್ಕುದು ಅಗತ್ಯ.

ತುಂಬ ಅನುಭವಸ್ಥರಾದ ಶಿಕ್ಷಕರು ಸುದಾ ಚರಿತ್ರೆಯಲ್ಲಿ ಒಂದೆರಡು ಪುಟಗಳನ್ನು ಕಲಿತುಬನ್ನಿರೆಂದು ಹುಡುಗರಿಗೆ ಆಜ್ಞಾಪಿಸಿ, ಮರುದಿನ ಅದನ್ನು ಅವರಿಂದ ಹೇಳಿಸುವ ವಾಡಿಕೆಯನ್ನಿಟ್ಟಿರುವರು. ಪುಸ್ತಕಗಳಲ್ಲಿ ಬರೆಯಲ್ಪಟ್ಟಿರುವ ಭಾಷೆಯು

ರೂಢಿಯಲ್ಲಿರುವ ಭಾಷೆಗಿಂತ ಸ್ವಲ್ಪಮಟ್ಟಿಗೆ ಕಠಿಣವಾಗಿಯೇ ಇರುವುದಷ್ಟೆ? ಇ
ಪಾಸಗಳನ್ನು ಕಥಾರೂಪವಾಗಿ ಬೋಧಿಸಿದರೆ ಒಂದೆರಡಾವೃತ್ತಿ ಓದುವುದರಲ್ಲಿಯೆ
ಹುಡುಗರು ಸ್ವಂತಮಾತುಗಳಿಂದ ಕಥೆಯನ್ನು ಹೇಳಲು ಶಕ್ತರಾಗುವರು. ಹಾ
ಲ್ಲದೆ ಅಕ್ಷರಶಃ ಕಂಠಪಾಠಮಾಡಬೇಕಾದರೆ ಹತ್ತೆಂಟುಸಾರಿ ಓದಿದರೂ ನೆನಪಿನಲ್ಲ
ನಿಲ್ಲುವುದು ಕಷ್ಟ. ವಿದ್ಯಾರ್ಥಿಗಳು ಬರೆಯುವ ಉತ್ತರಪತ್ರಗಳಲ್ಲೆಲ್ಲ ಪ್ರಾಯಶ
ಪುಸ್ತಕಗಳಲ್ಲಿರುವ ಶಬ್ದಗಳೇ ಪ್ರಯೋಗಿಸಲ್ಪಡುವವೇ ಹೊರತು ಬಾಲಕರ ಸ್ವಂ
ಭಾಷೆಯ ಪದಗಳು ಕಾಣಬರುವುದಿಲ್ಲ. ಇದರಿಂದ ರಚನಾಶಕ್ತಿಯು ಕುಗ್ಗಿಹೋಗಿ
"ಗಿಣಿಯು ಮಾತಿನಂತೆ" ಬುದ್ಧಿಯು ಮಂಕಾಗುವುದು. ಸುಶಿಕ್ಷಿತರಾದ ಉಪಾ
ಧ್ಯಾಯರು ಹುಡುಗರಿಂದ ಕೆಲಸಮಾಡಿಸುವುದು ಅಂದರೆ ಪ್ರತಿವಿಷಯವನ್ನೂ ತಿಳಿದ
ಕೊಂಡು, ಸ್ವಂತ ಮಾತುಗಳಿಂದ ಹೇಳುವಂತೆ ಅಭ್ಯಾಸಮಾಡಿಸುವುದು ಲಾಭಕರ
ವಾದುದು, ವಿಷಯಜ್ಞಾನವು ಮುಖ್ಯವೇ ಹೊರತು ಪುಸ್ತಕದಲ್ಲಿದ್ದಂತೆ ಹೇಳುವುದು
ಪ್ರಯೋಜನಕರವಾದುದಲ್ಲ. ಸಣ್ಣಸಣ್ಣ ಇಯತ್ತೆಗಳಲ್ಲಿ ಕಥೆಗಳನ್ನು ಕಲಿಸಬೇ
ಕೆಂಬ ಉದ್ದೇಶವೂ ಇದೇ, ಎರಡನೆಯ ಇಯತ್ತೆಯಲ್ಲಿ ಮೈಸೂರು ಚರಿತ್ರೆಯೆಂಬ
ದೊಡ್ಡ ಪುಸ್ತಕದ ಪತ್ರಗಳನ್ನೆಲ್ಲ ಕಂಠಪಾಠಮಾಡಿ, ಸಣ್ಣ ವಿದ್ಯಾರ್ಥಿಯೊಬ್ಬನು ನೆನ
ಪಿನಲ್ಲಿಡುವುದಸಾಧ್ಯವೊ? ಸುಲಭವಾಗಿ ಅದರಲ್ಲಿನ ವಿಷಯಗಳನ್ನು ಶಿಕ್ಷಕರು ಕಥೆ
ಯಂತೆ ಹುಡುಗರಿಗೆ ಹೇಳಿ, ಅವರ ಸ್ವಂತಮಾತುಗಳಿಂದ ಹೇಳಿಸಿದರೆ ಎಂದಿಗೂ ಆ
ವಿಷಯಗಳನ್ನು ಮರೆಯದೆ ಇರಬಹುದು, "ಸರಕಾರದವರು ದೊಡ್ಡದೊಡ್ಡ ಚರಿ
ತ್ರೆಯ ಪುಸ್ತಕಗಳನ್ನಿಟ್ಟಿರುವರು, ಅವುಗಳಲ್ಲಿ ಪ್ರಶ್ನೆಗಳೇ ಸಿಕ್ಕವು, ಹುಡುಗರು ಅವ
ಗಳನ್ನು ಕಲಿಯುವುದು ಕಷ್ಟ" ಎಂದು ಬಹುಜನ ಉಪಾಧ್ಯಾಯರು ನಿಂದಿಸುತ್ತಿ
ರುವರು. ಶಿಕ್ಷಣ ಕ್ರಮವನ್ನು ತಿಳಿದವರು ಇಂತಹ ದೋಷವನ್ನು ಹೇಳಲಾರರು.

ಮುಖ್ಯವಾಗಿ ಯಾವ ವಿಷಯವನ್ನು ಕಲಿಸಬೇಕಾದರೂ ವಿದ್ಯಾರ್ಥಿಗಳಿಗೆ
ಸುಲಭವಾಗಿ ತಿಳಿಯುವಂತೆ ಬೋಧಿಸಿ, ಅವರ ಸ್ವಂತಬುದ್ಧಿಯು ವೃದ್ಧಿಯಾಗುವಂತೆ
ಪ್ರಯತ್ನಪಡುವುದು ಬೋಧಕರ ಕರ್ತವ್ಯವೆಂಬುದನ್ನು ಮರೆಯಬಾರದು.

K. R.

ಗ ಣಿ ತ.

1 A ಇವುಗಳನ್ನು ಅಕ್ಷರದಲ್ಲಿ ಬರೆಯಿರಿ.

(1) 2670909 (2) 9090909

B ಇವುಗಳನ್ನು ಅಂಕೆಯಲ್ಲಿ ಬರೆಯಿರಿ.

(1) ನಲವೆತ್ತೊಣ್ಬತ್ತು ಲಕ್ಷದ ಮುವತ್ತಾರು.

(2) ಹದಿನೈದುಕೋಟಿಯು ಹತ್ತುಸಾವಿರದೊಂದು.

2 (1) ಸಂಕಲನ, ವ್ಯವಕಲನ, ಗುಣ್ಯ, ಭಾಜ್ಯಗಳಂದರೇನು ?
ಶೋಧಕ 68400, ಅಂತರ 8600, ಶೋಧನೀಯವೆಷ್ಟು ?

(2) ರೂ. 387–1–4 ನ್ನು ರೂ. 9—10—10 ನಿಂದ ಭಾಗಿಸು.

(3) ಒಂದು ಸಂಖ್ಯೆಗೆ 56 ನ್ನು ಸೇರಿಸಿ, ಬಂದ ಒಟ್ಟಿನಲ್ಲಿ 21 ನ್ನು ಕಳೆದರೆ 135 ಬರುತ್ತದೆ. ಆ ಸಂಖ್ಯೆಯಾವುದು ?

3 (*a*) ಒಂದು ಗಾಲಿಯು ಸುತ್ತಳತೆ 550 ಅಂಗುಲ, ಅದು 16 ಮೈ. 2 ಫರ್ಲಾಂಗ ಹೋಗುವಷ್ಟರಲ್ಲಿ ಎಷ್ಟುಸಾರಿ ಸುತ್ತುತ್ತದೆ ?

(*b*) $(4+5+6+7+8)\div(1+2+3+4+5)+1$ ಇದೆಷ್ಟು ?

(*c*) 422 ವರ್ಷ, 10 ತಿಂ, 21 ದಿನಗಳನ್ನು 31 ರಿಂದ ಭಾಗಿಸು.

4 (1) ಈ ಲೆಕ್ಕವನ್ನು ಕರಿಯು ಹಲಿಗೆಯು ಮೇಲೆ ಬರೆದಿದೆ. ನೀವು ಲೆಕ್ಕವನ್ನು ಬರೆದುಕೊಳ್ಳದೆ, ನೋಡಿ ಕೂಡಿ, ಉತ್ತರವನ್ನುಮಾತ್ರ ತೋರಿಸಿ.
ಪೌಂಡು:—1605—10—10. +650—15—10. +409—18—5. +2090—14—0. ;

(2) ಒಬ್ಬಮನುಷ್ಯನು ರೂ. 48 ಗಳನ್ನು 4 ದಿನಗಳಲ್ಲಿ ಸಂಪಾದಿಸುತ್ತಾನೆ. ಇನ್ನೊಬ್ಬನು ಅದೇ ಹಣವನ್ನು 12 ದಿವಸಗಳಲ್ಲಿ ಸಂಪಾದಿಸುತ್ತಾನೆ. ಇವರಿಬ್ಬರೂ ಸೇರಿ ಆ ಹಣವನ್ನು ಎಷ್ಟುದಿನಗಳಲ್ಲಿ ಸಂಪಾದಿಸಬಹುದು?

(3) ರೂ 1ಕ್ಕೆ 8 ಸೇರಿನಂತೆ 1 ಪಲ್ಲಾ ಸಣ್ಣಕ್ಕಿಯನ್ನು ರೂ. 1ಕ್ಕೆ 12 ಸೇರಿನಂತೆ 1 ಪಲ್ಲಾ ದಪ್ಪಕ್ಕಿಯನ್ನೂ ತಂದು ಬೆರಸಿ ರೂ. 1ಕ್ಕೆ ಎಷ್ಟು ಸೇರಿನಂತೆ ಮಾರಿದರೆ ರೂ. 4—2—8 ಲಾಭ ಬರುತ್ತದೆ?

5 (*a*) ಆಗಸ್ಟ್ ತಿಂಗಳಲ್ಲಿ ಎಷ್ಟು ಘಂಟೆಗಳು ?

(*b*) (1) 4727 ನ್ನು 210 ರಿಂದ ಆಪವರ್ತನರೀತಿ ಭಾಗಿಸಿರಿ.

(2) 6567 ನ್ನು 65 ,, ,, ,, ಗುಣಿಸಿರಿ.

(*c*) ರೂಪಾಂತರಕರಣವಂದರೇನು ?
250 ರೂ. ಗಳನ್ನು ಕಾಸುಗಳನ್ನಾಗಿ ಮಾಡಿರಿ.

ವಿದ್ಯಾದಾಯಿನಿ.

(A MONTHLY JOURNAL)

ಭಾಗ ೧೬.] ಆಗಸ್ಟ್—೧೯೦೮. [ಸಂಚಿಕೆ ೮.

ಶೈಶವದಲ್ಲಿ ನಡೆಯಬೇಕಾದ ವಿದ್ಯಾಭ್ಯಾಸ.

ಪಾಶ್ಚಾತ್ಯ ರಾಜ್ಯಗಳಲ್ಲಿ ಹದಿನಾರನೆಯ ಶತಮಾನದ ಅಂತ್ಯದವರೆಗೂ ಜನರು ಸಣ್ಣಮಕ್ಕಳ ವಿದ್ಯಾಭ್ಯಾಸಕ್ಕೆ ವಿಶೇಷ ಗಮನ ಕೊಡುತಿರಲಿಲ್ಲ. ಭಾಷೆಯ ಪಾಠವನ್ನೋದುವ ವಯಸ್ಸು ಮಕ್ಕಳಿಗೆ ಒದಗಿದಾಗ ಉಪಾಧ್ಯಾಯರು ಅವರ ವಿದ್ಯಾಭ್ಯಾಸವನ್ನು ಪ್ರಾರಂಭಿಸುತಿದ್ದರು. ಈ ಉಪಾಧ್ಯಾಯರು ಮಕ್ಕಳಿಗೆ ಭಾಷೆಯ ಪಾಠವನ್ನು ಓದುವ ವಯಸ್ಸು ಬರುವವರೆಗೂ ಅವರು ಕಳೆಯಬೇಕಾದ ಕಾಲವನ್ನು ವಿಶೇಷ ಬೆಲೆಯುಳ್ಳದ್ದೆಂದು ಭಾವಿಸಿರಲಿಲ್ಲ, ಮತ್ತು ಮಕ್ಕಳು ಅವರ ಈ ವಯಸ್ಸನ್ನು ಸರಿಯಾದ ರೀತಿಯಲ್ಲಿ ಕಳೆಯುವಂತೆ ಮಾಡುವುದಕ್ಕೂ ಇವರು ವಿಶೇಷ ಪ್ರಯತ್ನಪಡುತಿರಲಿಲ್ಲ. ಮುಂದೆ ಪಾಠಪುಸ್ತಕಗಳಲ್ಲೋದುವ ಕೆಲವು ಶಬ್ದರೂಪಗಳನ್ನೂ, ಆವುಗಳ ಅರ್ಥವನ್ನೂ ಮಕ್ಕಳು ಈ ವಯಸ್ಸಿನಲ್ಲಿ ಕಲಿತರೆ ಸಾಕೆಂದು ಈ ಶಿಕ್ಷಕರು ತಿಳಿದಿದ್ದರು. ಈ ಯಂಶಗಳನ್ನು ಮಕ್ಕಳು ಕಲಿಯುವಂತೆ ಮಾಡಲು ದಂಡವನ್ನು ಉಪಯೋಗಿಸುವುದಕ್ಕೂ ಇವರು ಸಿದ್ಧರಾಗಿದ್ದರು. ಇವರು ಪುಸ್ತಕವೆಂಬ ಪ್ರಪಂಚದಲ್ಲಿ ಮುಳುಗಿ ಪ್ರಕೃತಿ ಯೆಂಬ ಪ್ರಪಂಚವನ್ನೆ ಮರೆತಿದ್ದರು. ಆದುದರಿಂದ ಆ ಕಾಲದ ಉಪಾಧ್ಯಾಯರಿಗೆ ಸಣ್ಣ ಮಕ್ಕಳಲ್ಲಿ ವಿಶೇಷ ಅನುತಾಪವಿಲ್ಲದಿದ್ದುದೂ, ಅವರಿಗೆ ವಿದ್ಯಾಭ್ಯಾಸ ಮಾಡಿಸುವ ಕ್ರಮವನ್ನು ತಿಳಿಯದಿದ್ದುದೂ, ಆಶ್ಚರ್ಯಕರವೇನೂ ಇಲ್ಲ. ಬಹಳ ಹಿಂದಿನಿಂದಲೂ ಅನುಸರಿಸಿ ಬಂದಿದ್ದ ಈ ಪದ್ಧತಿಯನ್ನು ಉಪಾಧ್ಯಾಯರು ಕ್ರಮವಾಗಿ ಬಿಡುತ ಬಂದರು. ಆವರು

ಮಕ್ಕಳ ಸ್ವಭಾವವನ್ನರಿತು ಅದಕ್ಕನುಗುಣವಾದ ವಿದ್ಯಾಭ್ಯಾಸಕ್ರಮವನ್ನು ಗೊತ್ತು ಮಾಡಲು ಉಪಕ್ರಮಿಸಿದರು. ಮಕ್ಕಳ ವಿದ್ಯಾಭ್ಯಾಸದ ವಿಷಯದಲ್ಲಿ ಪಾಶ್ಚಾತ್ಯ ರಾಜ್ಯದಲ್ಲಿ ಹದಿನಾರನೆಯ ಶತಮಾನದ ಅಂತ್ಯದವರೆಗೂ ಇದ್ದ ಸ್ಥಿತಿಯೇ ನಮ್ಮಲ್ಲಿ ಈಗೀಗಿನವರೆಗೂ ಇದ್ದಿತು. ಅವರ ಮೇಲ್ಪಜ್ಞೆಯನ್ನನುಸರಿಸಿ ನಮ್ಮ ದೇಶದ ವಿದ್ಯಾಭ್ಯಾಸಕ್ರಮವನ್ನು ಸರಿಪಡಿಸಿಕೊಳ್ಳಲು ನಾವು ಈಗೀಗ ಪ್ರಯತ್ನಪಡುತಿರುವೆವು. ಈ ವಿಷಯದಲ್ಲಿ ಅವರು ಮಾಡಿರುವ ಪ್ರಯತ್ನಗಳನ್ನು ತಿಳಿಯುವುದರಿಂದ ನಮ್ಮ ಕೆಲಸವನ್ನು ಸರಿಯಾಗಿ ನೆರವೇರಿಸಲು ನಮಗೆ ವಿಶೇಷ ಸಹಾಯವಾಗುವುದಿಲ್ಲವೇ?

ಸಣ್ಣಮಕ್ಕಳ ವಿದ್ಯಾಭ್ಯಾಸವನ್ನು ಕ್ರಮಪಡಿಸಲು ಪ್ರಯತ್ನಪಟ್ಟವರಲ್ಲಿ ಕೊಮಿನಿಯಸ್, ರೂಸೊ, ಪೆಸ್ಟಲಾಟ್ಸಿ, ಫ್ರೋಬೆಲ್ ಎಂಬುವರೇ ಪ್ರಮುಖರಾದವರು. ಶೈಶವದ ಪ್ರತಿಯೊಂದು ಸೋಪಾನಕ್ಕೂ ತಕ್ಕ ವಿಲಕ್ಷಣವಿರುವುದೆಂತಲೂ ಸೊಂಪಾಗಿ ಬೆಳೆದ ಮೊಗ್ಗೇ ಒಳ್ಳೆಯ ಹೂವಾಗುವಂತೆ ಶೈಶವವನ್ನು ಸರಿಯಾದ ರೀತಿಯಲ್ಲಿ ಕಳೆದ ಮಕ್ಕಳೇ ಉತ್ತಮರಾದ ಮನುಷ್ಯರಾಗುವರೆಂತಲೂ ಇವರು ಸ್ಥಿರಪಡಿಸಿರುವರು.

ಮಕ್ಕಳ ವಿದ್ಯಾಭ್ಯಾಸದ ವಿಷಯದಲ್ಲಿ ಇವರು ಮಾಡಿರುವುದನ್ನು ತಿಳಿಯುವುದಕ್ಕೆ ಮೊದಲು, ಶೈಶವಕ್ಕೆ ಸಹಜವಾದ ಲಕ್ಷಣಗಳು ಯಾವುವು? ಇವು ಕ್ರಮಕ್ರಮವಾಗಿ ಹೇಗೆ ವಿಕಾಸವನ್ನೈದುವುವು? ಇವುಗಳ ಸಹಾಯದಿಂದ ನಮ್ಮ ಉದ್ದೇಶವನ್ನು (ಮಕ್ಕಳನ್ನು ಉತ್ತಮರಾದ ಮನುಷ್ಯರನ್ನಾಗಿ ಮಾಡುವುದನ್ನು) ನಾವು ಹೇಗೆ ನೆರವೇರಿಸಬಹುದೆಂಬುದನ್ನು ತಿಳಿಯಬೇಕು.

ಮಗುವಿಗೆ ಪ್ರಪಂಚದ ಜ್ಞಾನವುಂಟಾಗುವುದಕ್ಕೆ ಇಂದ್ರಿಯಗಳೇ ಮುಖ್ಯವಾದ ಆಧಾರವು. ಯಾವ ಇಂದ್ರಿಯದಲ್ಲಿ ಸ್ವಲ್ಪ ನ್ಯೂನತೆಯಿದ್ದರೂ ಮಗುವಿನ ಜ್ಞಾನದಲ್ಲಿ ಅದಕ್ಕನುಗುಣವಾದ ನ್ಯೂನತೆಯುಂಟಾಗುವುದು. ಇಂದ್ರಿಯಗಳು ಮೊದಲು ವಿಶೇಷ ಪಟುವಾಗಿರುವುದಿಲ್ಲ. ಉಪಯೋಗದಿಂದ ಪಟುವಾಗುವುವು. ಜಿಹ್ವೇಂದ್ರಿಯವೂ, ಘ್ರಾಣೇಂದ್ರಿಯವೂ, ಅಷ್ಟು ನಿಷ್ಕೃಷ್ಟವಾದ ಜ್ಞಾನವನ್ನು ಕೊಡುವ ಶಕ್ತಿಯನ್ನು ಹೊಂದಲಾರವು. ಇವಕ್ಕಿಂತಲೂ ಉತ್ತಮವಾದ ಇಂದ್ರಿಯಗಳಾದ ಸ್ಪರ್ಶ, ಶ್ರೋತ್ರ, ನೇತ್ರಗಳು ನಿಷ್ಕೃಷ್ಟವಾದ ಜ್ಞಾನವನ್ನು ಕೊಡುವಷ್ಟು ಪಟುವಾಗುವವು. ಈ ಇಂದ್ರಿಯಗಳಿಂದ ಮಗುವಿಗುಂಟಾದ ಅನುಭವಗಳ

ಮುಂದಿನ ಜ್ಞಾನಕ್ಕೆಲ್ಲ ಆಧಾರವಾಗುವುದರಿಂದ ಇಂತಹ ಅನುಭವಗಳು ಬಲವಾಗಿಯೂ ನಿಷ್ಕೃಷ್ಟವಾಗಿಯೂ ಆಗಬೇಕಾದುದು ಅವಶ್ಯಕವು ಮೇಲಾಗಿ ಬಾಲ್ಯದಲ್ಲಿ ಉಂಟಾದ ಅನುಭವಗಳು ವಯಸ್ಸಾದಮೇಲೆ ಉಂಟಾಗುವವುಗಳಿಗಿಂತಲೂ ಸ್ಥಿರವಾಗಿ ನಿಲ್ಲುವುದರಿಂದ ಇವು ಬಲವಾಗಿಯೂ ತಪ್ಪಿಲ್ಲದವುಗಳಾಗಿಯೂ ಆಗಬೇಕೆಂದು ಹೇಳುವುದರ ಅವಶ್ಯಕತೆಯು ಸ್ಪಷ್ಟಪಡುವುದು. ಮಕ್ಕಳ ಕೈಗೆ ಪುಸ್ತಕಗಳನ್ನು ಕೊಟ್ಟು ಶಬ್ದರೂಪಗಳನ್ನು ಬಾಯಿಪಾಠಮಾಡಿಸುವುದರಿಂದ ಈ ಕೆಲಸವು ಸಾಧ್ಯವಲ್ಲ. ಮಕ್ಕಳನ್ನು ಪ್ರಕೃತಿಗೆ ಕರೆದುಕೊಂಡು ಹೋಗಿ ಅಲ್ಲಿ ಸದಾ ಕಾಣುತಲಿರುವ ಅಂಶಗಳನ್ನು ಪರೀಕ್ಷಿಸುವಂತೆ ಮಾಡುವುದರಿಂದ ಮಾತ್ರ ಸಾಧ್ಯವು. ಅಲ್ಲದೆ ಪ್ರಕೃತಿಯು, ವಿಶೇಷವಾಗಿ ಸಜೀವವಾದ ಪ್ರಕೃತಿಯು ಸದಾ ವ್ಯತ್ಯಾಸವನ್ನು ಹೊಂದುತಲೇ ಇರುವುದು. ಈ ವ್ಯತ್ಯಾಸವು ಮಕ್ಕಳ ಕುತೂಹಲಕ್ಕೆ ಉತ್ತೇಜನವನ್ನು ಕೊಟ್ಟು ಕ್ರಮವಾದ ಪರೀಕ್ಷೆಗೆ ಅವಶ್ಯಕವಾದ ಆದರವನ್ನು ಹುಟ್ಟಿಸುವುದು.

ಮಕ್ಕಳ ಇಂದ್ರಿಯಪಾಟವಕ್ಕೆಮಾತ್ರ ಗಮನಕೊಟ್ಟ ಶಿಕ್ಷಕನು ತನ್ನ ಕರ್ತವ್ಯವನ್ನು ಪೂರ್ಣವಾಗಿ ನೆರವೇರಿಸಿರುವನೆ? ಬಹಿಃಪ್ರಪಂಚದ ವಿಷಯದಲ್ಲಿ ನಿಷ್ಕೃಷ್ಟವಾದ ಜ್ಞಾನವನ್ನು ಕೊಡುವ ಕೆಲವು. ಇಂದ್ರಿಯಗಳೊಡನೆ ಮಾತ್ರವೇ ಅಲ್ಲ ಮಗುವು ಈ ಪ್ರಪಂಚದಲ್ಲಿ ಜನಿಸಿರುವುದು, ಈ ಜ್ಞಾನವನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸುವುದಕ್ಕನುಕೂಲವಾದ ಮನಸ್ಸಿನೊಡನೆಯೂ ಜನಿಸಿರುವುದು. ಮಗುವಿನ ಬುದ್ಧಿಯು ಇಂದ್ರಿಯಗಳಿಂದ ಬಂದ ಅನುಭವಗಳನ್ನೆಲ್ಲ ಗ್ರಹಿಸಿ ಅವುಗಳನ್ನು ಕ್ರಮಪಡಿಸುವುದು. ಬುದ್ಧಿಯು ಈರೀತಿಯಲ್ಲಿ ಪ್ರವರ್ತಿಸದಿದ್ದರೆ ಇಂದ್ರಿಯಗಳಿಂದುಂಟಾದ ಅನುಭವಗಳು ಸಂತೆಯಲ್ಲಿ ಸೇರುವ ಜನಸಮುದಾಯದಂತೆ ಸ್ವಲ್ಪವೂ ಕ್ರಮವಿಲ್ಲದ ರೀತಿಯಲ್ಲಿರುವವು. ಬುದ್ಧಿಯು ಈ ಕೆಲಸವನ್ನು ಸರಿಯಾಗಿ ನೆರವೇರಿಸಬೇಕಾದರೆ ಬಾಲ್ಯದಿಂದಲೂ ಅದು ಈ ಮಾರ್ಗದಲ್ಲಿ ಪ್ರವರ್ತಿಸಬೇಕು. ಈ ಪ್ರವರ್ತನೆಗೆ ಸಾಧಕವಾದ ಅಂಶಗಳಿರುವುದು ಪುಸ್ತಕಗಳಲ್ಲಲ್ಲ, ಪ್ರಕೃತಿಯಲ್ಲಿ.

ಬುದ್ಧಿಯು ಮನಸ್ಸಿನ ಮುಖ್ಯಭಾಗವಾದರೂ ಮನಸ್ಸಿನಲ್ಲಿರುವುದು ಬುದ್ಧಿಯೊಂದೇ ಎಂದು ಉಪಾಧ್ಯಾಯರು ಭಾವಿಸಬಾರದು. ಕ್ರಮವಾಗಿ ಯೋಚಿಸಿ ಏರ್ಪಡಿಸಿದ ಯಾವುದೊಂದು ಶಿಕ್ಷಣಕ್ರಮದಲ್ಲೂ ಮಕ್ಕಳಲ್ಲಿ ಸಹಜವಾಗಿರುವ ರಸಗಳನ್ನು ಕ್ರಮಪಡಿಸಲು ಅವಕಾಶವಿರಬೇಕು. ಈ ರಸಗಳಲ್ಲಿ ಕೆಲವನ್ನು ಎಚ್ಚರಿಕೆಯಿಂದ

ಬೆಳಿಸಬೇಕಾಗುವುದು, ಕೆಲವನ್ನು ತಗ್ಗಿಸಬೇಕಾಗುವುದು, ಇನ್ನು ಕೆಲವನ್ನು ಪೂರ್ಣವಾಗಿ ನಾಶಪಡಿಸಬೇಕಾಗುವುದು. ನಿದರ್ಶನವಾಗಿ ಭೂತದಯೆ ಸೌಂದರ್ಯಾಭಿನಿವೇಶಮುಂತಾದವುಗಳನ್ನು ಎಚ್ಚರಿಕೆಯಿಂದ ಬೆಳೆಸಬೇಕು. ಆದರೆ ಕೋಪ, ಭಯ, ಗರ್ವ, ಅಸೂಯೆ, ಮುಂತಾದುವನ್ನು ಬಹುಮಟ್ಟಿಗೆ ತಗ್ಗಿಸಬೇಕು ಅಥವ ಪೂರ್ಣವಾಗಿ ನಾಶಪಡಿಸಬೇಕು. ಈ ಕೆಲಸವನ್ನು ಸರಿಯಾಗಿ ನಡೆಸಬೇಕಾದರೆ ಶೈಶವದಲ್ಲೆ ಪ್ರಾರಂಭಿಸಬೇಕು. ಹಾಗೆ ಮಾಡದಿದ್ದರೆ ಪ್ರಯತ್ನದಿಂದ ವೃದ್ಧಿಗೊಳಿಸಬೇಕಾದ ರಸಗಳು ಅಂಕುರದಲ್ಲೆ ನಶಿಸಿಹೋಗ ಬಹುದು. ಅನಪೇಕ್ಷಣೀಯವಾದವು ವಿಶೇಷವಾಗಿ ಬೆಳೆದು ಮಗುವಿನ ಅಭ್ಯುದ್ಧಿಗೆ ಕುಂದನ್ನುಂಟುಮಾಡಬಹುದು. ಆದರೆ ಮಕ್ಕಳು ಇಷ್ಟುಕಾಲದಲ್ಲಿ ಇಷ್ಟು ಅಂಶಗಳನ್ನು ಬಾಯಿಪಾಠ ಮಾಡುವ ಯಂತ್ರಗಳೆಂದು ಭಾವಿಸುವ ಉಪಾಧ್ಯಾಯನು ಅವರನ್ನು ಈ ಮಾರ್ಗದಲ್ಲಿ ನಡೆಸಲು ಅರ್ಹನಾಗಲಾರನು. ಈತನಿಗೆ ಮಕ್ಕಳಲ್ಲಿ ಅನುತಾಪವಿರಬೇಕು ತಾನು ದೊಡ್ಡವನೆಂದು ಭಾವಿಸಿ ಮಕ್ಕಳ ಮನಸ್ಸಿನಲ್ಲಿ ನಡೆಯುವ ಅಂಶಗಳಿಗೆ ಗಮನಕೊಡದೆ ಅವರನ್ನು ದೂರದಲ್ಲಿ ಇಟ್ಟಿರುವವನು ಈ ಕೆಲಸವನ್ನು ನಿರ್ವಹಿಸಲಾರನು. ಈತನೂ ಅವರ ಸಮಕ್ಕೆ ಇಳಿದು ಅವರ ಮನಸ್ಸನ್ನು ಪ್ರವೇಶಿಸಿ ಅಲ್ಲಿ ನಡೆಯುತಿರುವ ಕೆಲಸಗಳನ್ನು ತಿಳಿಯಬೇಕು. ಅನೇಕವೇಳೆ ಉಪಾಧ್ಯಾಯನು ಮಕ್ಕಳ ಜತೆಯಲ್ಲಿ ಆಟಪಾಟಗಳಿಗೆ ಸೇರಿ ತಾನೂ ಅವರಲ್ಲೊಬ್ಬನಂತಿರಬೇಕು. ಮಕ್ಕಳ ಹೃದಯದಲ್ಲಿ ಮಾರ್ದವವನ್ನುಂಟುಮಾಡುವುದು ಉಪಾಧ್ಯಾಯನ ಮೃದುವಾದ ಹೃದಯವೇ ಹೊರತು ಉಗ್ರವಾದ ದಂಡವನ್ನು ಹಿಡಿದಿರುವ ಸ್ವಲ್ಪವೂ ಕರುಣೆಯಿಲ್ಲದ ಹಸ್ತವಲ್ಲ.

ಶಿಕ್ಷಕನ ಕೆಲಸವು ಇಷ್ಟುಮಾತ್ರಕ್ಕೆ ಮುಗಿಯಿತೆಂದು ಎಣಿಸಲಾಗದು. ಕಾರ್ಯಾಭಿನಿವೇಶವು ಮಗುವಿಗೆ ಸಹಜವಾದ ಒಂದು ಮುಖ್ಯ ಲಕ್ಷಣವು. ಈ ಕುತೂಹಲವನ್ನು ಕ್ರಮವಾದ ದಾರಿಗೆ ತಿರಿಗಿಸುವುದು ಶಿಕ್ಷಕನ ಕರ್ತವ್ಯವು. ತಾವು ಪ್ರೀತಿಸುವ ವಸ್ತುಗಳ ವಿಷಯದಲ್ಲಿ ಮಕ್ಕಳು ಆದರದಿಂದ ಕೆಲಸಮಾಡುವರು. ಆದುದರಿಂದ ಮಕ್ಕಳಿಗೆ ಪ್ರಕೃತಿಯ ವಸ್ತುಗಳಲ್ಲಿ ಪ್ರೀತಿಯನ್ನು ಹುಟ್ಟಿಸಿದರೆ ಅವರು ಈ ವಸ್ತುಗಳ ವಿಷಯದಲ್ಲಿ ಕೆಲಸಮಾಡುವುದಕ್ಕೂ, ಅವುಗಳನ್ನು ಪರೀಕ್ಷಿಸುವುದಕ್ಕೂ ಕುತೂಹಲಪಡುವರು. ಈ ಕಾರ್ಯಾಪೇಕ್ಷೆಯನ್ನು ಮುಂದೆ ಮ್ಯಾನ್ಯುಯಲ್ ಟ್ರೇನಿಂಗ್ ಕೆಲಸಗಳಲ್ಲಿ ಉಪಯೋಗಿಸಿಕೊಳ್ಳಬಹುದು. ಕಾರ್ಯಾಭಿ

ನಿವೇಶವನ್ನು ಸರಿಯಾದ ಮಾರ್ಗದಲ್ಲಿ ತಿರಿಗಿಸುವುದರಿಂದ ಮಕ್ಕಳ ನಡತೆಯಲ್ಲೂ ಮೇಲುಂಟಾಗುವುದು. ಬಾಲ್ಯದಿಂದಲೂ ಕ್ರಮವಾಗಿ ಕೆಲಸದಲ್ಲಿ ನಿರತರಾಗಿರುವ ಮಕ್ಕಳಲ್ಲಿ ಕಾಣುವ ಕಷ್ಟಸಹನೆ, ಸ್ವಾವಲಂಬನೆ, ಮೊದಲಾದ ಗುಣಗಳು ಸೋಮಾರಿಯೂಗಿ ಬೆಳೆದ ಮಗುವಿನಲ್ಲಿ ಕಾಣಲಾರವು.

ಅಪ್ಪಗಳ ಶಕ್ತಿಯು ಕಡಮೆಯಾಗಿ ಅವು ತಮ್ಮ ಕೆಲಸವನ್ನು ಸರಿಯಾಗಿ ನಿರ್ವಹಿಸಲಾರದೆ ಹೋಗುವವು. ಬಾಲ್ಯದಿಂದಲೂ ಮಕ್ಕಳನ್ನು ಅವರಿಗೆ ಅನುಕೂಲವಾದ ಕೆಲಸಗಳಲ್ಲಿ ತೊಡಗಿಸುವುದರಿಂದ ಅವರ ದೈಹಿಕವಾದ ಶಕ್ತಿಗಳೂ ಕ್ರಮವಾಗಿ ವೃದ್ಧಿ ಹೊಂದುವವಲ್ಲವೇ?

ಶಿಕ್ಷಕನು ಈ ರೀತಿಯಲ್ಲಿ ಮಗುವಿನಲ್ಲಿರುವ ಎಲ್ಲಭಾಗಗಳಿಗೂ ಸರಿಯಾಗಿ ಗಮನಕೊಟ್ಟರೆ ತನ್ನ ಕೆಲಸವನ್ನು ಪೂರ್ಣವಾಗಿ ನೆರವೇರಿಸಿದಂತಾಗುವುದು. ಮಕ್ಕಳಲ್ಲಿ ಸಹಜವಾಗಿರುವ ದೈಹಿಕ ಮಾನಸಿಕ ಶಕ್ತಿಗಳನ್ನು ಬೆಳಸಿ ಒಳ್ಳೆಯಸಡತೆಯನ್ನುಂಟುಮಾಡಿ ಅವರನ್ನು ಲೋಕವ್ಯವಹಾರಕ್ಕೆ ಸಿದ್ಧಗೊಳಿಸುವುದೇ ಈ ವಿಧವಾದ ಶಿಕ್ಷಣದ ಪರಮೋದ್ದೇಶವು. ಮಕ್ಕಳನ್ನು ನಿರ್ಬಂಧಪಡಿಸಿ ದೊಡ್ಡವರ ಅಭಿಪ್ರಾಯಗಳನ್ನು ಅವರ ಮನಸ್ಸಿನಲ್ಲಿ ತುಂಬುವುದರಿಂದ ಈಯುದ್ದೇಶವು ನೆರವೇರಲಾರದು. ಮಕ್ಕಳು ತಮ್ಮ ಸಹಜಶಕ್ತಿಗಳಿಗನುಸಾರವಾಗಿ ಬೆಳೆಯಲು ಅವಕಾಶ ಕೊಡುವುದರಿಂದಲೂ ಅವರಲ್ಲಿರುವ ಎಲ್ಲಶಕ್ತಿಗಳ ಬೆಳುವಳಿಕೆಗೂ ಗಮನಕೊಡುವುದರಿಂದಲೂ, ಅವರಲ್ಲಿ ಪೂರ್ಣವಾದ ಪ್ರೀತಿಯನ್ನಿಟ್ಟು ಅವರ ಶಿಕ್ಷಣವನ್ನು ಕೈಕೊಳ್ಳುವುದರಿಂದಲೂ ಈಕೆಲಸವು ಸಾಧ್ಯವು.

ವ್ಯಾಕರಣ.

ಶಬ್ದಾದರ್ಶದ ಸಮಾಸ ಪ್ರಕರಣದಲ್ಲಿ ಕನ್ನಡದ ಕರ್ಮಧಾರಯ ಸಮಾಸ ದ್ವಿಗು ಸಮಾಸ ಗಮಕ ಸಮಾಸಗಳಿಗೆ ಇರುವ ಭೇದವನ್ನು ಇಲ್ಲಿ ವಿಚಾರ ಮಾಡುತ್ತೇವೆ.

1. ಪೂರ್ವಪದವು ಉತ್ತರಪದಕ್ಕೆ ಲಿಂಗವಿಭಕ್ತಿ ವಚನಗಳಲ್ಲಿ ಸಮಾನವಾದ ವಿಶೇಷಣವಾಗಿದ್ದು ಸಮಾಸವಾದರೆ ಕರ್ಮಧಾರಯವೆನಿಸುವುದು.

2. ಸಂಖ್ಯಾವಾಚಕವಾದ ಪೂರ್ವಪದವು ಉತ್ತರಪದದೊಡನೆ ಸಮಾಸವನ್ನು ಹೊಂದಿದರೆ ದ್ವಿಗುವೆನಿಸುವುದು.

3. ಸಂಖ್ಯಾವಾಚಕ ಸರ್ವನಾಮ ಗುಣವಾಚಕ ಕೃದನ್ತಗಳಲ್ಲಿ ಯಾವುದಾದರೂ ಒಂದು ಪೂರ್ವಪದವಾಗಿದ್ದು ಸುಬನ್ತದೊಡನೆ ಆಗುವ ಸಮಾಸವು ಗಮಕ ಸಮಾಸವೆನಿಸುವುದು.

ಎಂದು ಮೇಲೆ ಹೇಳಿದ ಮೂರು ಸಮಾಸಗಳಿಗೆ ಕ್ರಮವಾಗಿ ಲಕ್ಷಣಗಳು ಬರೆಯಲ್ಪಟ್ಟಿವೆ. ಇವುಗಳೊಳಗೆ ಕರ್ಮಧಾರಯ ಸಮಾಸದಲ್ಲಿ ಪೂರ್ವಪದವು ಉತ್ತರಪದಕ್ಕೆ ಲಿಂಗ ವಿಭಕ್ತಿ ವಚನಗಳಲ್ಲಿ ಸಮಾನವಾದ ವಿಶೇಷಣವಾಗಿರಬೇಕಾದರೆ ಅದು ಎಂಥ ಶಬ್ದವಾಗಬೇಕೆಂದು ವಿಚಾರಿಸಿದಲ್ಲಿ ಗುಣವಾಚಕ, ಸರ್ವನಾಮ ಸಂಖ್ಯಾವಾಚಕ ಕೃದಂತಗಳೇ ಆಗಿರಬೇಕು.

ಉದಾಹರಣೆ — ಕಿರಿಯವನು + ಮಗನು = ಕಿರೀಮಗನು.

ಅವಳು + ಹುಡುಗಿ = ಅಹುಡುಗಿ.

ಮೂರು + ಕೊಡೆಗಳು = ಮುಕ್ಕೊಡೆಗಳು.

ಕೊಡುವನನು + ತಂದೆ = ಕೊಡುವ ತಂದೆ. ಇತ್ಯಾದಿ.

ಆದರೆ ಇವುಗಳಲ್ಲಿ ಪೂರ್ವಪದವು ಸಂಖ್ಯಾವಾಚಕವಾಗಿರುವ ಮುಕ್ಕೊಡೆಗಳು ನಾಲ್ಮಾನೆಗಳು ಮುಂತಾದ ಉದಾಹರಣೆಗಳಲ್ಲಿ ಕರ್ಮಧಾರಯ ಸಮಾಸವೆ? ದ್ವಿಗುಸಮಾಸವೆ? ಅಥವಾ ಈ ಎರಡು ಸಮಾಸಗಳೂ ಆಗಿರಬಹುದೇ? ಎಂಬ ಸಂಶಯವು ಓದುವವರಿಗೆ ತೋರುವುದಿಲ್ಲವೆ? ಮತ್ತು ಮೇಲೆಹೇಳಿದ ಕಿರೀಮಗನು ಮುಂತಾದ ಕರ್ಮಧಾರಯ ಸಮಾಸದ ಉದಾಹರಣೆಗಳೆಲ್ಲೆಲ್ಲ ಗಮಕ ಸಮಾಸವನ್ನು ಹೇಳಬಹುದು. ಕರ್ಮಧಾರಯ ಗಮಕ ಸಮಾಸಗಳೆರಡರಲ್ಲಿಯೂ, ಪೂರ್ವಪದವು ಗುಣವಾಚಕ ಸರ್ವನಾಮ ಸಂಖ್ಯಾವಾಚಕ ಕೃದಂತಗಳಲ್ಲಿ ಯಾವದಾದರೂ ಒಂದಾಗಿದ್ದು ಉತ್ತರಪದವು ವಿಶೇಷ್ಯವಾಗಿರಬೇಕು. ಆದರೆ ಪೂರ್ವಪದವು ಲಿಂಗವಿಭಕ್ತಿವಚನಗಳಲ್ಲಿ ಉತ್ತರಪದಕ್ಕೆ ಸಮಾನವಾದ ವಿಶೇಷಣವಾಗಿರಬೇಕು ಎಂದು ಹೇಳಿದ ಮಾತ್ರಕ್ಕೆ ಕರ್ಮಧಾರಯದ ಲಕ್ಷಣವು ಬೇರೆಯಾಗಲಿಲ್ಲ. ಅಂಥ ವಿಶೇಷಣಪದಗಳು ಗಮಕ ಸಮಾಸದಲ್ಲಿ ಹೇಳಿರುವಂತೆ ಗುಣವಾಚಕ, ಸಂಖ್ಯಾವಾಚಕ, ಸರ್ವನಾಮ, ಕೃದಂತಗಳೇ ಆಗುವವಲ್ಲದೆ ಬೇರೆಯಿಲ್ಲ. ಹೀಗೆ ಶಬ್ದಾದರ್ಶದಲ್ಲಿ ಹೇಳಿರುವ ಲಕ್ಷಣವಾಕ್ಯಗಳಿಂದಲೂ, ಉದಾಹರಣೆಗಳಿಂದಲೂ ಒಂದೇ ವಿಧದಲ್ಲಿ

ಪರ್ಯವಸಾನವಾಗುವುದರಿಂದ ಈ ಸಮಾಸಗಳಿಗೆ ಭೇದ ಹೇಳುವದು ದುರ್ಘಟವೆಂಬುದು ಈಗ ವಾಚಕರಿಗೆ ವ್ಯಕ್ತವಾಗಬಹುದು. ಅದುದರಿಂದ ಈರೀತಿ ವಿರೋಧವು ತೋರದಂತೆ ಹೇಳಬೇಕಾದ ಪಕ್ಷದಲ್ಲಿ ಮೇಲೆಹೇಳಿದ ಸಮಾಸಗಳಿಗೆ ಲಕ್ಷಣಗಳು ಮುಂದೆ ಹೇಳುವ ರೀತಿಯಲ್ಲಿ ಇರಬಹುದು. ಹೇಗೆಂದರೆ—

1. ವಿಶೇಷಣ ಪದವು ವಿಶೇಷ್ಯ ಪದದೊಡನೆ ಸೇರಿ ಆಗುವ ಸಮಾಸವು ಕರ್ಮಧಾರಯವೆನಿಸುವುದು.

2. ಸಂಖ್ಯಾವಾಚಕವಾದ ಪೂರ್ವಪದವು ನಾಮವಾಚಕವಾದ ಉತ್ತರ ಪದದೊಡನೆ ಸೇರಿ ಸಮಾಸವಾಗುವಲ್ಲಿ ಸಮಾಹಾರವು (ಒಟ್ಟು ಎಂಬರ್ಥ) ತೋರಿದರೆ ದ್ವಿಗುಸಮಾಸವೆನಿಸುವುದು.

3. ವಿಶೇಷಣವಾದ ಕರ್ಣಾಟಕ ಶಬ್ದವು ವಿಶೇಷ್ಯವಾದ ಸಂಸ್ಕೃತೋತ್ತರ ಪದದೊಡನೆ ಸೇರಿ ಆಗುವ ಸಮಾಸವು ಗಮಕ ಸಮಾಸವು.

ಇವುಗಳ ಉದಾಹರಣೆಗಳು ಕ್ರಮವಾಗಿ,—

ಕರ್ಮಧಾರಯಕ್ಕೆ—ಹಿರಿಯಮಗನು, ನಾಲ್ಕುಹುಡುಗರು, ಅಮಸೆ,
ಮಾಡಿದ ಕೆಲಸ

ದ್ವಿಗುಗೆ—ನಾಲ್ಕುಕಾಲುಗಳ ಬಟ್ಟೆ—ನಾಗಾಲು, ಹತ್ತು ಒಂದು ಇವುಗಳ
ಒಟ್ಟು—ಹನ್ನೊಂದು, ಇತ್ಯಾದಿ.

ಗಮಕಕ್ಕೆ—ದೊಡ್ಡದು + ಪುಸ್ತಕ = ದೊಡ್ಡಪುಸ್ತಕ, ಅರುಪಕ್ಷಿಗಳು,
ಆ ಮನುಷ್ಯನು, ಒರುವ ಜನರು, ಇತ್ಯಾದಿ.

ಈಗ ಈ ಮೂರು ಸಮಾಸಗಳಿಗೂ ಪರಸ್ಪರ ಭೇದವು ಸ್ಪಷ್ಟವಾಗಬಹುದು. ಹೇಗೆಂದರೆ – ಕರ್ಮಧಾರಯದಲ್ಲಿಯೂ, ದ್ವಿಗುವಿನಲ್ಲಿಯೂ ಪೂರ್ವಪದವು ಸಂಖ್ಯಾವಾಚಕವಾಗಿದ್ದರೂ ದ್ವಿಗುವಿನಲ್ಲಿ ಸಮಾಹಾರವು ಸಮಾಸದಿಂದ ಅಧಿಕವಾಗಿ ತೋರುತ್ತದೆ. ನಾಗಾಲಿನಒಟ್ಟ, ಕುದುರೆಯು ನಾಗಾಲಿನಿಂದ ಓಡುತ್ತದೆ. ಮುಂತಾದ ಪ್ರಯೋಗಗಳಲ್ಲಿ ನಾಲ್ಕುಕಾಲುಗಳ ಒಟ್ಟುಎಂಬರ್ಥವು ಹೆಚ್ಚಾಗಿ ತೋರುತ್ತದೆ. ನಡಿಗೆಯಲ್ಲಿ ಕುದುರೆಯು ಒಂದೊಂದುಕಾಲಿನಲ್ಲಿ ಅಥವಾ ಎರಡೆರಡುಕಾಲಿನಲ್ಲಿ ಬೇನೆಬೇರೆ ವಿಧವಾದ ನಡಿಗೆ ಅಂದರೆ ಒಂದುಕಾಲಿನಲ್ಲಿ ಮೆಲ್ಲಗೆ ಇನ್ನೊಂದು ಕಾಲಿನಲ್ಲಿ ಬೇಗನೆ ಇರಬೆ ಎಲ್ಲಾಕಾಲಿನಲ್ಲಿಯೂ ಒಟ್ಟು ಒಂದೇರೀತಿಯಲ್ಲಿ ವೇಗವಾಗಿತ್ತು ಎಂಬ ಅರ್ಥವು ತೋರುವದು. ಹೀಗೆ ಕರ್ಮಧಾರಯಸಮಾಸಕ್ಕೂ ದ್ವಿಗುಸಮಾ

ಸಕ್ಕೂ ಭೇದವನ್ನು ತಿಳಿಯಬಹುದು. ಮತ್ತು ಕರ್ಮಧಾರಯಕ್ಕೂ ಗಮಕಸಮಾ ಸಕ್ಕೂ ಪೂರ್ವಪದದ ವಿಷಯದಲ್ಲಿ ಸಾಮ್ಯವಿದ್ದರೂ, ಉತ್ತರಪದದಲ್ಲಿ ವೈಷಮ್ಯವಿದೆ. ಗಮಕದಲ್ಲಿ ಉತ್ತರಪದವು ಸಂಸ್ಕೃತ ಶಬ್ದವೇ ಆಗಿರಬೇಕು. ಇಲ್ಲದಿದ್ದರೆ ಇವೆರ ಡಕ್ಕೂ ಭೇದವೇಇಲ್ಲದೆ ಬೇರೆಬೇರೆ ಈಯೆರಡು ಸಮಾಸಗಳನ್ನು ಹೇಳುವದು ವ್ಯರ್ಥ ವಾಗುವದು. ಆದರೆ ಗಮಕದಲ್ಲಿ ಉತ್ತರಪದವು ಸಂಸ್ಕೃತ ಶಬ್ದವೇ ಆಗಿರಬೇಕೆ ನ್ನುವ ವಿಷಯದಲ್ಲಿ ಆಸಮಾಸಕ್ಕೆ ಬಂದಿರುವ ಗಮಕವೆಂಬ ಹೆಸರೇ ಸಾಕಾದಷ್ಟು ಪ್ರಮಾಣವಾಗಿದೆ. ಸಂಸ್ಕೃತ ಶಬ್ದಗಳಿಗೂ, ಕರ್ಣಾಟಕ ಶಬ್ದಗಳಿಗೂ ಸಮಾಸ ಮಾಡಕೂಡದೆಂದು ಸಾಮಾನ್ಯ ವಿಧಿ ಯಿರುವದಷ್ಟೆ? ಆ ವಿಧಿಯನ್ನು ಮೀರಿ ಕವಿ ಗಳು ಕೆಲವುಕಡೆ ಅಂಥ ಸಮಾಸವನ್ನು ಮಾಡಿರುವದೂ ಉಂಟು. ಉದಾಹರಣೆ. ಮಂಗಳಾರತಿ. ಮತ್ತು ಬಿರುದಾವಳಿಯಾಗುವ ಸಂದರ್ಭದಲ್ಲಿ ಧಾರಾಳವಾಗಿ ಬೇಕಾದ ಸಮಾಸವನ್ನು ಸಂಸ್ಕೃತ ಪದಕ್ಕೂ ಕರ್ಣಾಟಕ ಪದಕ್ಕೂ ಮಾಡುವರು. ಹೀಗೆ ಮಾಡುವ ಸಮಾಸಕ್ಕೆ ಅರಿಸಮಾಸವೆಂದು ಹೆಸರಿಟ್ಟಿರುವರು. ಏಕಂದರೆ ಅರಿಸವಾಸವೆಂಬಮಾತಿಗೆ ವಿರುದ್ಧಸಮಾಸವೆಂದರ್ಥವು. ಅಂದರೆ ಸಂಸ್ಕೃತ ಕರ್ಣಾ ಟಕ ಶಬ್ದಗಳಿಗೆ ಪರಸ್ಪರ ಸಮಾಸಮಾಡುವದಕ್ಕೂ, ಒಂದುವೇಳೆ ಹಾಗೆಮಾಡಿದರೆ ಸನ್ಧಿಮೊದಲಾದ ಕಾರ್ಯಗಳನ್ನು ಮಾಡುವದಕ್ಕೂ ವ್ಯವಸ್ಥೆಯಿಲ್ಲದೆ ಹೋಗಿ, ಇಂಥಾ ಸಮಾಸ ಪದೆಗಳಿಂದ ಸರಿಯಾದರ್ಥ ಸ್ಫೂರ್ತಿಯಾಗುವದೇ ದುರ್ಘಟವಾಗಿರುವದ ರಿಂದ ಸಂಸ್ಕೃತ ಶಬ್ದಗಳಿಗೂ ಕರ್ಣಾಟಕ ಶಬ್ದಗಳಿಗೂ ಸಮಾಸವೇ ಮಾಡಕೂಡ ದೆಂಬ ಸಾಮಾನ್ಯವಿಧಿಯು ಏರ್ಪಟ್ಟಿತು. ಈವಿಧಿಯನ್ನು ಮೀರಿ ಮಾಡುವಸಮಾ ಸವು ಅಪ್ರಮಾಣವು. ಪ್ರಕೃತ ಗಮಕವೆಂಬ ಹೆಸರು ಗಮಯತಿ ಬೋಧಯತೀ ತಿಗಮಕಃ ಎಂಬದಾಗಿ, ಮೇಲೆ ಹೇಳಿದ ಸಾಮಾನ್ಯ ವಿಧಿಯನ್ನು ಮೀರಿಯೂ ಕವಿಗಳು ಒಪ್ಪಿ ಮಾಡಿರುವ ಇಂಥಾ ಸಮಾಸ ಪ್ರಯೋಗಗಳುಂಟು ಎಂಬರ್ಥವನ್ನು ತೋರಿಸುವುದರಿಂದ, ಮೇಲೆ ಹೇಳಿದಂತೆ ಪೂರ್ವಪದವು ಕನ್ನಡದ ಗುಣವಾಚಕ, ಸರ್ವನಾಮ ಸಂಖ್ಯಾವಾಚಕ ಕೃದಂತಗಳಲ್ಲೊಂದಾಗಿ ಉತ್ತರಪದವಾದ ಸಂಸ್ಕೃತ ಶಬ್ದದೊಡನೆ ಮಾಡುವ ಸಮಾಸವು ಗಮಕ ಸಮಾಸವೆಂದು ನಿಷ್ಕರ್ಷೆ ಮಾಡು ವುದು ಯುಕ್ತವೆಂದು ಅಭಿಜ್ಞರು ಒಪ್ಪಬಹುದು. ಮತ್ತು ಇದೇ ಗಮಕ ಸಮಾ ಸದ ಲಕ್ಷಣವನ್ನು ಇನ್ನೂ ವಿಚಾರಮಾಡಿ ನೋಡಿದಲ್ಲಿ, ಪೂರ್ವಪದವು ಸಂಖ್ಯಾವಾ ಚಕವಾಗಿರಬೇಕೆಂಬುದೂ ಸರಿಯಲ್ಲ. ಮೂವರು + ಬಾಲಕರು = ಮೂರುಬಾಲ

ಕರು, ಎಂಬಲ್ಲಿ ಮೂರು ಶಬ್ದವು ಕೇವಲ ಸಂಖ್ಯೆ (ಲೆಕ್ಕ) ಯನ್ನು ತಿಳಿಸುವುದಿಲ್ಲ. ಸಂಖ್ಯೆಯು ಅಂದರೆ ಲೆಕ್ಕಿಸಲ್ಪಡುವ ವಸ್ತುವನ್ನು ತಿಳಿಸುವದರಿಂದ ಸಂಖ್ಯಾವಾಚಕವೆನ್ನುವದಕ್ಕೆ ಬದಲಾಗಿ ಸಂಖ್ಯೇಯವಾಚಕವೆಂದಿರಬೇಕು. ಕೇವಲಸಂಖ್ಯಾವಾಚಕವು ವಿಶೇಷಣಪದವಾಗುವದಿಲ್ಲವಾದುದರಿಂದ ಅಂಥದಕ್ಕೆ ವಿಶೇಷಣ ವಿಶೇಷ್ಯಗಳಿಗಾಗತಕ್ಕ ಸಮಾಸವಾಗುವದು ಅಸಂಭವವೆಂಬುದು ಸ್ಪಷ್ಟವು. ಮತ್ತು ಪೂರ್ವಪದವು ಕೃದಂತವಾಗಿರಬೇಕೆಂಬಲ್ಲಿ ಕೃದಂತವೆಂದರೆ ಅವ್ಯಯಕೃದಂತ ಭಾವಕೃದಂತ ಕಾರಕಕೃದಂತವೆಂಬ ಮೂರು ವಿಧವೂ ತೋರುವದರಿಂದ ಬಾಲಕರಿಗೆ ಸೂತ್ರಾರ್ಥಜ್ಞಾನವು ಕಷ್ಟಸಾಧ್ಯವಾಗುವದಾದಪ್ರಯುಕ್ತ, ಕೃದಂತವೆಂಬ ಸಾಮಾನ್ಯಶಬ್ದಕ್ಕೆ ಬದಲಾಗಿ ಕಾರಕಕೃದಂತವೆಂದು ಹೇಳಿದರೆ ವಿಶದವಾಗುವದೆಂದು ತೋರುವುದು.

ಆದರೆ 1931 ನೆ ಇಸವಿಯಲ್ಲಿ ಮಾಡಿದ ಶಬ್ದಾದರ್ಶದ ನವೀನಮುದ್ರಣದಲ್ಲಿಯೂ ಕರ್ಮಧಾರಯ ದ್ವಿಗುಗಳಿಗೆ ಲಿಂಗವಿಭಕ್ತಿವಚನಗಳಲ್ಲಿ ಸಮಾನವಾದ ವಿಶೇಷಣಪದವು.....ಇದು ಮುಂತಾಗಿ ಮೇಲೆ ಹೇಳಿದಂತೆಯೇ ಲಕ್ಷಣಗಳನ್ನು ಬರೆದು, ಗಮಕಸಮಾಸಲಕ್ಷಣದಲ್ಲಿ ಸರ್ವನಾಮ ಕೃದಂತಗಳನ್ನು ಮಾತ್ರ ಪೂರ್ವಪದವಾಗಿಟ್ಟುಕೊಂಡು, ಕರ್ಮಧಾರಯ ದ್ವಿಗುಸಮಾಸಗಳಿಗೂ, ಗಮಕಸಮಾಸಕ್ಕೂ ಭೇದ ತೋರಿಸುವುದಕ್ಕಾಗಿ ಗುಣವಾಚಕ ಸಂಖ್ಯಾವಾಚಕಗಳು ಬಿಡಲ್ಪಟ್ಟಿರುವಂತೆ ಟಿಪ್ಪಣಿಯಲ್ಲಿ ಬರೆದಿದೆ. ಇದರಂತೆಯೂ ಓದುವವರಿಗೆ ಕ್ಲೇಶ ತಪ್ಪಲಿಲ್ಲ. ಈ ಹೊಸ ಮುದ್ರಣದ ಲಕ್ಷಣಗಳನ್ನು ನೋಡಲಾಗಿ ಪೂರ್ವಪದವು ಗುಣವಾಚಕವಾಗಿದ್ದರೆ ಕರ್ಮಧಾರಯವೆಂತಲೂ, ಸಂಖ್ಯಾವಾಚಕವಾಗಿದ್ದರೆ ದ್ವಿಗುವೆಂತಲೂ, ಸರ್ವನಾಮ ಕೃದಂತಗಳಾಗಿದ್ದರೆ ಗಮಕವೆಂತಲೂ ವಿವರ್ಜಿಸುವದು. ಆದರೆ ಗುಣವಾಚಕವು ಪೂರ್ವಪದವಾಗುಳ್ಳದ್ದು ಕರ್ಮಧಾರಯವೆಂದು ಸ್ಪಷ್ಟವಾಗಿ ಬರೆಯದೆ ಲಿಂಗ ವಿಭಕ್ತಿವಚನಗಳಲ್ಲಿ ಸಮಾನವಾದ ವಿಶೇಷಣಪದವು ಪೂರ್ವಪದವಾಗಿ...ಈ ರೀತಿ ಲಕ್ಷಣ ಹೇಳಿರುವದರಿಂದ ಪೂರ್ವದಂತೆ ತೊಂದರೆಯು ಇದ್ದೇ ಇರುವುದು. ಮತ್ತು ಈ ಲಕ್ಷಣಗಳು ಪ್ರಾಚೀನ ವ್ಯಾಕರಣಕಾರರಿಗೆ ಸಮ್ಮತವೂ ಆಗಿಲ್ಲ. ಆದುದರಿಂದ ಮೇಲೆ ನಾವು ಹೇಳಿದಂತೆ ಈ ಸಮಾಸಗಳ ಲಕ್ಷಣಗಳನ್ನು ಕನ್ನಡಿಗರು ವಿಚಾರ ಮಾಡಿ ನಿಷ್ಕರ್ಷಿಸಬೇಕಾಗಿದೆ.

III ನೆಯ ತರಗತಿ] ಕನ್ನಡವ್ಯಾಕರಣ—ವಿಶೇಷಣ ಪ್ರಕರಣ. [ಕಾಲ 50 ನಿಮಿಷ.

ವಿಷಯ	ಬೋಧನ ಕ್ರಮ
ಹಿಂದಣ ಪಾಠದ ಪರೀಕ್ಷೆ:—ಕರ್ತೃ ಕ್ರಿಯಾಪದಗಳ ವಿಷಯ.	ಉಪಾಧ್ಯಾಯರು ಕೆಲವು ವಾಕ್ಯಗಳನ್ನು ಹೇಳಿ ಅದರಲ್ಲಿ ಕರ್ತೃ ಕ್ರಿಯಾಪದಗಳನ್ನು ಬಾಲಕರು ಗುರ್ತಿಸುವಂತೆ ಮಾಡುವುದು. ಮತ್ತು ಬಾಲಕರಿಂದಲೇ ಕೆಲವನ್ನು ಹೇಳಿಸುವುದು.
ಹೊಸಪಾಠ—I ವಿಶೇಷ್ಯ ವಿಶೇಷಣಗಳ ಸ್ವರೂಪ (a) 1 ರಾಮನು ಕಾಡಿಗೆ ಹೋದನು. 2 ಸೂರ್ಯನು ಪೂರ್ವದಿಕ್ಕಿನಲ್ಲಿ ಹುಟ್ಟುತ್ತಾನೆ. 3 ಜಿಟ್ಟೆಗಳು ಕುಸ್ತಿ ಮಾಡುತ್ತಾರೆ. 4 ವಿಕ್ಟೋರಿಯಾ ಮಹಾರಾಣಿಯು ಗತಿಸಿಹೋದಳು.	ಇಲ್ಲಿ ನಾಮಪದಗಳು ಸ್ವತಂತ್ರವಾಗಿ ಪ್ರಯೋಗಿಸಲ್ಪಟ್ಟಿವೆ. ಇವಕ್ಕೆ ಯಾವ ಸಹಾಯವೂ ಬೇಡವೆಂದುಹೇಳಿಸುವುದು.
(b) 1 ಯೋಗ್ಯನಾದ.....ಕಾಡಿಗೆ ಹೋದನು. 2 ಕೆಂಪಾದ.....ಪೂರ್ವದಿಕ್ಕಿನಲ್ಲಿ ಹುಟ್ಟುತ್ತಾನೆ. 3 ಬಲವ್ಳಳ್ಳ.....ಕುಸ್ತಿ ಮಾಡುತ್ತಾರೆ. 4 ವೃದ್ಧಳಾದ.....ಗತಿಸಿಹೋದಳು.	ಇಲ್ಲಿ ನಾಮಪದಗಳು (a) ಯಲ್ಲಿ ಗುರ್ತಿಸಿರುವ ನಾಮಪದಗಳಿಗೆ ಅಧೀನವಾಗಿವೆ; ಎಂದು ತಿಳಿಸುವುದು. ವಿಶೇಷ್ಯ ವಿಶೇಷಣಗಳಿಗೆ ಗಂಡಹೆಂಡಿರ ನಿದರ್ಶನೆ ಕೊಡುವುದು.
ವಿಧಿ:—ನಾಮಪದವು ಸ್ವತಂತ್ರವಾಗಿ ಪ್ರಯೋಗಿಸಲ್ಪಟ್ಟಾಗ ವಿಶೇಷ್ಯವೆನಿಸುವುದು. ಅಧೀನವಾಗಿ ಪ್ರಯೋಗಿಸಲ್ಪಟ್ಟಾಗ ವಿಶೇಷಣವೆನಿಸುವುದು.	ಈಯಂಶಗಳನ್ನು ಬಾಲಕರಿಂದ ಹೇಳಿಸಿ ಹಲಗೆಯ ಮೇಲೆ ಒರೆದು ಅಭ್ಯಾಸ ಮಾಡಿಸುವುದು. ಅಭ್ಯಾಸಕ್ಕಾಗಿ ಬಾಲಕರಿಂದಲೇ ಕೆಲವು ಉದಾಹರಣೆಗಳನ್ನು

ವಿಷಯ.	ಬೋಧನ ಕ್ರಮ.
ವಿಶೇಷಣವು ವಿಶೇಷ್ಯದ ಯೋಗ್ಯತೆಯನ್ನು ತಿಳಿಸುವುದು; ಮತ್ತು ಅದರ ವ್ಯಾಪ್ತಿಯನ್ನು ಕಡಮೆ ಮಾಡುವುದು.	ಹೇಳಿಸುವುದು.
II ವಿಶೇಷ್ಯ ವಿಶೇಷಣಗಳಿಗಿರುವ ಸಂಬಂಧ.	ಇಂತಹ ತಪ್ಪಾದ ಕೆಲವು ವಾಕ್ಯಗಳನ್ನು ಕೊಟ್ಟು ಬಾಲಕರಿಂದಲೇ ತಿದ್ದಿಸುತ್ತ ವಿಶೇಷ್ಯ ವಿಶೇಷಣಗಳನ್ನು ಗುರ್ತಿಸುವಂತೆ ಮಾಡುವುದು. ಇದರಿಂದ ವಿಷಯದಲ್ಲಿ ಬರೆದಿರುವ ವಿಧಿಯನ್ನು ಹೇಳಿಸುವುದು. ಗಂಡನ ಜಾತಿ ಕುಲಗಳಿಗೆ ಹೆಂಡತಿಯು ತಕ್ಕವಳಾಗಿರಬೇಕೆಂದು ನಿದರ್ಶನೆಯನ್ನು ತೋರಿಸುವುದು. ಈಯುಂಶಗಳನ್ನು ಹಲಗೆಯ ಮೇಲೆ ಬರೆದು ಆವೃತ್ತಿ ಮಾಡಿಸುವುದು.
1 ಮುಂಕಳಾದ ಎಮ್ಮೆಯು ಹುಲ್ಲು ಮೇಯುತ್ತದೆ.	
2 ಶಕ್ತಳಾದ ಶಂಕರನು ಕುಸ್ತಿಯಲ್ಲಿ ಗೆದ್ದನು.	
3 ಬುದ್ಧಿವಂತನಾದ ರಾಮ ಲಕ್ಷ್ಮಣರು ಇಲ್ಲಿ ಬಂದಿದ್ದರು.	
ವಿಧಿ:—ವಿಶೇಷಣವು ಲಿಂಗ ವಚನಗಳಲ್ಲಿ ವಿಶೇಷ್ಯದಂತೆಯೇ ಇರುವುದು.	ಇವುಗಳನ್ನು ಹಲಗೆಯ ಮೇಲೆ ಬರೆದು ವಿಶೇಷಣಗಳು ವಿಶೇಷ್ಯದ ಹಿಂದುಗಡೆಯೂ ಮತ್ತು ಮುಂದುಗಡೆಯೂ ಇರುವುವೆಂಬುದನ್ನು ಹೇಳಿಸುವುದು.
III ವಿಶೇಷಣಗಳ ಭೇದಗಳು.	
1 ಜಾಣನಾದ ರಂಗಶೆಟ್ಟಿಯು ಲಾಭ ಪಡೆದನು.	
2 ರಂಗಶೆಟ್ಟಿಯು ಜಾಣನಾಗಿ ಲಾಭ ಪಡೆದನು.	
3 ನಿರ್ಮಲವಾದ ನೀರು ಸಿಕ್ಕಿತು. ನೀರು ನಿರ್ಮಲವಾಗಿ ಸಿಕ್ಕಿತು.	
ವಿಧಿ:—ಪೂರ್ವ ವಿಶೇಷಣವೆಂದೂ, ಉತ್ತರವಿಶೇಷಣವೆಂದೂ ಎರಡು ಭೇದಗಳು. 'ಉಳ್ಳ', 'ಆದ', 'ಅಂಥ' ಇವು ಪೂರ್ವವಿಶೇಷಣಕ್ಕೆ ಹೆಗ್ಗುರುತು. 'ಆಗಿ' ಎಂದು ಉತ್ತರವಿಶೇಷಣದ ಹೆಗ್ಗುರುತು.	ಈ ಸೂತ್ರವನ್ನು ಬಾಲಕರಿಂದಲೇ ಹೇಳಿಸಿ, ಈಯುಂಶಗಳನ್ನು ಹಲಗೆಯ ಮೇಲೆ ಬರೆದು ಆವೃತ್ತಿಮಾಡಿಸುವುದು. ಇವುಗಳನ್ನು ಹಲವು ದೃಷ್ಟಾಂತಗಳ ಸಹಾಯದಿಂದ ತಿಳಿಸುವುದು.
IV ವಿಶೇಷಣವಾಗಿ ಉಪಯೋಗಿಸಬಹುದಾದ ವಾಚಕಗಳು.—	ವಾಚಕಗಳ ಸ್ವರೂಪ ವಿಷಯವಾಗಿ ಪ್ರಶ್ನೆ ಮಾಡುವುದು.
1 ವಸ್ತುವಾಚಕಕ್ಕೆ—ಗಂಗಾ ನದಿ ಬಹು ಶ್ರೇಷ್ಠವಾಗಿದೆ.	

1 ವಸ್ತುವಾಚಕಕ್ಕೆ— ಬುದ್ಧಿವಂತನಾದ ಮನುಷ್ಯನು ಮರ್ಯಾದೆ ಹೊಂದುವನು. ಹಣವುಳ್ಳ ಜನಗಳು ಸುಖ ಪಡುತ್ತಾರೆ.

2 ಭಾವನಾಮಕ್ಕೆ —ಬಡತನವೆಂಬ ಪಾಪವು ಸಂಕಟಪಡುತ್ತದೆ. ಅಶ್ರದ್ಧೆ ಎಂಬ ದೋಷದಿಂದ ಕೆಟ್ಟನು.

3 ಕ್ರಿಯಾನಾಮಕ್ಕೆ—ಓದುವುದೆಂಬ ಸಂಪತ್ತು ಎಲ್ಲರಿಗೂ ಬೇಕು. ಒಟ್ಟಿಯೊಗೆಯುವ ಕೆಲಸವು ಅಗಸನದು.

4 ಗುಣವಾಚಕಕ್ಕೆ—ನೇರಿಲ ಹಣ್ಣು ಕಪ್ಪಾಗಿರುತ್ತದೆ. ಹಸುರಾದ ಬಣ್ಣವು ಕಣ್ಣಿಗೆ ಹಿತಕರ.

5 ಸಂಖ್ಯಾವಾಚಕಕ್ಕೆ —ಪರೀಕ್ಷೆಯಲ್ಲಿ ಮೊದಲನೆಯವನಾದ ಗೋಪಾಲನಿಗೆ ಬಹುಮಾನ ಬಂತು. ಶಂಕರನು ತರಗತಿಯಲ್ಲಿ ಐದನೆಯವನು.

6 ಸರ್ವನಾಮಕ್ಕೆ—ಅವರು ಎಲ್ಲರೂ ಬರುತ್ತಾರೆ. ಇವು ನಾಲ್ಕೂ ಹೊಸಪಾಠಗಳು.

7 ಪರಿಮಾಣವಾಚಕಕ್ಕೆ — ಇಷ್ಟು ಮಣ್ಣು ಸಾಲದು ಕೆಲವು ಮಂದಿ ಸುಡುಗರು ಬಂದರು.

ವಿಧಿ:—ವಸ್ತುವಾಚಕ, ಭಾವನಾಮ, ಕ್ರಿಯಾನಾಮ, ಗುಣವಾಚಕ, ಸಂಖ್ಯಾವಾಚಕ, ಸರ್ವನಾಮ, ಪರಿಮಾಣವಾಚಕ ಮುಂತಾದುವು ವಿಶೇಷಣವಾಗಿಯೂ ಉಪಯೋಗಿಸಲ್ಪಡಬಹುದು.

ಈ ಉದಾಹರಣೆಗಳನ್ನು ಕೊಟ್ಟು ಈ ವಾಚಕಗಳ ನಾಮಪದಗಳೆಲ್ಲ ವಿಶೇಷಣವಾಗಿ ಪ್ರಯೋಗಿಸಲ್ಪಡಬಹುದು, ಎಂದು ಅವರಿಂದಲೇ ಹೊರಡಿಸುವುದು. ಈ ಯಂಶಗಳನ್ನು ಹಲಗೆಯ ಮೇಲೆ ಬರೆದು ಆವೃತ್ತಿ ಮಾಡಿಸುವುದು.

ಇದನ್ನು ಹಲಗೆಯ ಮೇಲೆ ಬರೆದು ಇಬ್ಬರು ಮೂವರಿಂದ ಓದಿಸಿ ಆವೃತ್ತಿ ಮಾಡಿಸುವುದು.

ಒಟ್ಟು ಪಾಠದಪುನರಾವರ್ತನೆ.

B. O. S.

ಪ್ರಕೃತಿ ವಿಮರ್ಶೆ.

ಪ್ರಪಂಚದಲ್ಲಿರುವ ವಸ್ತುಗಳನ್ನೆಲ್ಲಾ ಎರಡಾಗಿ ವಿಭಾಗಿಸುವ ಸಂಪ್ರದಾಯವುಂಟು. ಇವುಗಳಲ್ಲಿ ಮನುಷ್ಯನೇ ಮೊದಲನೇ ಭಾಗ. ಉಳಿದ ವಸ್ತುಗಳೆಲ್ಲ ಸೇರಿ ಮತ್ತೊಂದು ಭಾಗವೆನಿಸಿಕೊಳ್ಳುವುದು. ಈ ಎರಡನೆಯ ಭಾಗಕ್ಕೆ ವಾಡಿಕೆಯಾಗಿ ಪ್ರಕೃತಿಯೆಂಬ ಹೆಸರುಂಟು. [ಶಾಸ್ತ್ರಾಂತರಗಳಲ್ಲಿ ಮಾಡಲ್ಪಡುವ 'ಆತ್ಮ, ಅನಾತ್ಮಗಳೆಂಬ' ಭಾಗಗಳು ಬಹು ಸೂಕ್ಷ್ಮಗಳಾದುದರಿಂದ ಪ್ರಕೃತಕ್ಕೆ ಸಂಬಂಧಿಸಿಕೊಳ್ಳದಿರುವುದು ಮೇಲು.]

ಲೋಕವ್ಯವಹಾರಕ್ಕೆ ಮಕ್ಕಳನ್ನು ಸಿದ್ಧಿಪಡಿಸುವುದೇ ಶಿಕ್ಷಣದ ಮುಖ್ಯೋದ್ದೇಶವಾದುದರಿಂದಲೂ, ಆ ಲೋಕವ್ಯವಹಾರವು ಮೇಲೆ ಹೇಳಿರುವ ಎರಡುವಿಧವಾದ ವಸ್ತುಗಳ ಸ್ವಭಾವವನ್ನನುಸರಿಸಿಯೇ ನಡೆಯುವುದರಿಂದಲೂ ವಿದ್ಯಾಭ್ಯಾಸದಲ್ಲಿ ಮನುಷ್ಯನಿಗೂ, ಪ್ರಕೃತಿಗೂ ಸಹ ಸಂಬಂಧಪಟ್ಟಿರುವ ಅಂಶಗಳನ್ನು ಹೇಳಿಕೊಡಬೇಕು. ಆದರೆ ವಿಚಾರಮಾಡಲಾಗಿ ಇದುವರೆಗಿನ ಶಿಕ್ಷಣಕ್ರಮದಲ್ಲಿ ಮನುಷ್ಯನಿಗೆ ಸಂಬಂಧಪಟ್ಟಿರುವ ವಿಷಯಗಳೇ ವಿಶೇಷವಾಗಿದ್ದು ಪ್ರಕೃತಿ ವಿಷಯವು ಪ್ರಾಯಶಃ ಇಲ್ಲದಂತೆಯೇ ತಿಳಿಯಬರುವುದು. ಭಾಷೆ, ಚರಿತ್ರೆ ಇವೆಲ್ಲ ಮನುಷ್ಯನ ಸ್ವರೂಪವನ್ನೇ ಬಹಳವಾಗಿ ತಿಳಿಸುವುವು. ಮಕ್ಕಳಿಗೆ ಹೇಳಿಕೊಡುವ ವಿದ್ಯೆಯಲ್ಲಿ ಲೆಕ್ಕವನ್ನೇನೋ ಮೊದಲಿನಿಂದಲೂ ಸೇರಿಸಿದ್ದಾರೆ; ಆದರೆ ಇದನ್ನು ಹೇಳಿಕೊಡುವುದರಲ್ಲಿ ಪ್ರಕೃತಿ ವಿಷಯಗಳಿಗೆ ವಿಶೇಷವಾಗಿ ಹೊಂದಿಸದೆ ಮಗುವಿನ ಊಹಾಶಕ್ತಿಯನ್ನು ಬೆಳೆಯಿಸುವುದೊಂದೇ ಉದ್ದೇಶಮಾಡಿಕೊಂಡಿದ್ದಾರೆ. ಆದ್ದರಿಂದ ಈ ಪಾಠವು ಪ್ರಕೃತಿಗೆ ಸಂಬಂಧಪಡದಂತೆ ಆಯಿತು. ಈಗ ಹೇಳಿಕೊಡುತ್ತಿರುವ ಪಾಠಗಳಲ್ಲಿ ಭೂಗೋಳವು ಬಾಹ್ಯಪ್ರಪಂಚಕ್ಕೆ ಸಂಬಂಧಪಟ್ಟುದೇ ಸರಿ; ಆದರೂ ಇದನ್ನು ಹೇಳಿಕೊಡುವಾಗ ಪ್ರಕೃತಿ ಸಂಬಂಧವಾದ ಮಳೆ, ಕಾಡು ಮುಂತಾದ ವಿಷಯಗಳನ್ನು ಬಿಟ್ಟು ಮನುಷ್ಯನಿಂದ ಕೃತ್ರಿಮವಾಗಿ ಮಾಡಲ್ಪಟ್ಟಿರುವ ವಿಭಾಗಗಳನ್ನೂ, ಅವುಗಳಲ್ಲಿ ಮನುಷ್ಯನು ನಡೆಯಿಸುವ ವ್ಯಾಪಾರ ಮುಂತಾದುವುಗಳನ್ನೂ ಮಾತ್ರ ತಿಳಿಸುವರು. ಈ ಕಾರಣಗಳಿಂದ ಈಗ ನಡೆಯುತ್ತಿರುವ ವಿದ್ಯಾಭ್ಯಾಸದಲ್ಲಿ ಅಪೂರ್ಣತೆಯಿದೆ ಎಂತಲೂ, ಮುಂದಕ್ಕೆ ಪ್ರಕೃತಿಜ್ಞಾನವನ್ನು ಇದು ಒಳಗೊಂಡ ಹೊರತು ಪೂರ್ಣತೆಯು ಬರುವದಿಲ್ಲವೆಂತಲೂ ಹೇಳುವುದು ವಿಹಿತವಾಗಿದೆ. ಇಲ್ಲಿ ಪ್ರಕೃತವಾದ ಪ್ರಕೃತಿಜ್ಞಾನಕ್ಕೆ ಸಾಮಾನ್ಯವಾಗಿ 'ಸೈನ್ಸ' ಎಂದು ಹೇಳುವರು.

ಮಕ್ಕಳಿಗೆ ಹೇಳಿಕೊಡುವ ವಿಷಯಗಳಲ್ಲಿ ಭಾಷೆ, ಚರಿತ್ರೆ ಮುಂತಾದುವುಗಳನ್ನು ಸೇರಿಸುವುದರ ಜೊತೆಗೆ ಸೈನ್ಸನ್ನೂ ಸೇರಿಸಬೇಕೆಂದು ಮೇಲೆ ಹೇಳಿರುವುದರಿಂದ ಸ್ಪಷ್ಟವಾಗುವುದು. ಆದರೆ ಈ ಸೈನ್ಸನ್ನು ಸೇರಿಸುವುದರಲ್ಲಿ ಒಂದು ಕಷ್ಟವಿದೆ. ಚಿಕ್ಕತನದಲ್ಲಿ ಸೈನ್ಸನ್ನು ಸಾಕ್ಷಾತ್ತಾಗಿ ಪಾಠಹೇಳುವುದು ಅಸಾಧ್ಯ. ಒಂದು ವೇಳೆ ಸಾಧ್ಯವಾದರೂ ಆ ಪಾಠದಿಂದ ಅವರಿಗೆ ಪ್ರಯೋಜನವು ಬಹಳ ಕಡಮೆಯಾಗುವುದು; ಏಕೆಂದರೆ ಸೈನ್ಸ್ ಪಾಠದಲ್ಲಿ ಅಂಶಗಳನ್ನು ಅತಿ ನಿಷ್ಕೃಷ್ಟವಾಗಿ ತಿಳಿಸಬೇಕಾಗುವುದು. ಇಷ್ಟು ನಿಷ್ಕೃಷ್ಟವಾದ ಅಂಶಗಳನ್ನು ಗ್ರಹಿಸುವುದಕ್ಕೆ ಚಿಕ್ಕತನದಲ್ಲಿ ಶಕ್ತಿಸಾಲದೆಂದು ಮಕ್ಕಳನ್ನರಿತಿರುವವರಿಗೆಲ್ಲಾ ಗೊತ್ತಿರುವುದು. ಇಷ್ಟೇ ಅಲ್ಲ. ಸೈನ್ಸನ್ನು ಈಗ ವಾಡಿಕೆಯಾಗಿರುವಂತೆ ಬೋಧಿಸುವುದಾದರೆ ಸೈನ್ಸನ್ನು ತಿಳಿದವರ ವಿವಿಧವಾದ ಪರೀಕ್ಷೆಗಳ ಫಲಿತಾಂಶವನ್ನು ಮೊದಲು ತಿಳಿಸಬೇಕು. ಅನಂತರದಲ್ಲಿ ಪ್ರಕೃತಿಯಲ್ಲಿರುವ ವಸ್ತುಗಳ ಸ್ವರೂಪವನ್ನು ಒಂದೊಂದಾಗಿ ವಿಚಾರಮಾಡಬೇಕು. ಎಂದರೆ ಮೊದಲು ಸಾಮಾನ್ಯಾಂಶಗಳನ್ನು ತಿಳಿಸಿ ಅನಂತರದಲ್ಲಿ ವಿಶೇಷಾಂಶಗಳಿಗೆ ಹೋಗಬೇಕಾಗುವುದು. ಇದು ಪ್ರಕೃತಿಪ್ರತ್ಯಯಗಳನ್ನು ತಿಳಿಸಿಕೊಟ್ಟಮೇಲೆ ಮಾತುಗಳನ್ನು ಹೇಳಿಕೊಟ್ಟಂತಾಗುವುದು. ಇದು ಅಸಹಜವಾದ ಮಾರ್ಗ.

ಸೈನ್ಸ್ ಪಾಠವನ್ನು ಸೈನ್ಸ್ ಪಾಠದಂತೆಯೇ ನಡೆಯಿಸುವುದರಿಂದ ಚಿಕ್ಕತನದಲ್ಲಿ ಮತ್ತೊಂದು ಕೊರತೆಯುಂಟು. ಅದೇನೆಂದರೆ ಪ್ರಕೃತಿಯಲ್ಲಿ ಒಂದೊಂದಾಗಿ ಪದಾರ್ಥಗಳನ್ನು ನೋಡುತ್ತ ಬಂದರೆ ಎಲ್ಲೆಲ್ಲಿಯೂ ಚೈತನ್ಯವು ಯಾವ ರೂಪದಲ್ಲಿಯಾದರೂ ಹೊರಡುತ್ತಲೇ ಇರುವುದು. ಈ ಕಾರಣದಿಂದ ಮಗುವಿಗೆ ಅದರಲ್ಲಿ ಅದರ ಹುಟ್ಟುವುದು. ಸೈನ್ಸ್ ಪಾಠದಲ್ಲಾದರೋ ಕುತೂಹಲಕ್ಕೆ ಕಾರಣವಾದ ಚೈತನ್ಯಾಂಶವನ್ನು ಬಿಟ್ಟು ಮೂರುಪಾಲು ವಸ್ತುಗಳ ರಚನಾಕ್ರಮ, ಆಕಾರ ಮುಂತಾದುವುಗಳನ್ನೇ ವಿಚಾರಮಾಡುವರು. ಇದರಿಂದ ಮಗುವಿಗೆ ಉತ್ಸಾಹ ಕಡಮೆಯಾಗಿ ಪಾಠದ ಫಲವು ಕುಗ್ಗುವಂತಾಗುವುದು.

ಇಲ್ಲಿ ಕೆಲವರು ಆಕ್ಷೇಪಿಸಬಹುದು. ಚಿಕ್ಕತನದಲ್ಲಿ ಸೈನ್ಸನ್ನು ಬೋಧಿಸುವುದು ಸಾಧ್ಯವಲ್ಲದಿದ್ದರೆ ಆದು ಸಾಧ್ಯವಾಗುವ ವಯಸ್ಸು ಬರುವವರೆಗೂ ಆ ಪಾಠವು ಮಗುವಿಗೆ ಬೇಡವೇ ಬೇಡವೆಂದು. ಇದು ಸರಿಯೆ. ಆದರೆ ಯಾವ ಕೆಲಸ ಮಾಡಬೇಕಾದರೂ ಅದನ್ನು ಮಾಡುವ ಅಭ್ಯಾಸವು ಚಿಕ್ಕತನದಿಂದ ಬರುವುದು ಒಳ್ಳೆ

ಯದು. ಚಿಕ್ಕತನದಲ್ಲಿ ಉಂಟಾದ ಸಂಸ್ಕಾರವು ಬಲವಾಗಿ ನಿಂತು ಹೆಚ್ಚಾದ ಫಲವನ್ನು ಕೊಡುವುದು. ಆದುದರಿಂದ ಲೋಕವ್ಯವಹಾರಕ್ಕೆ ಆವಶ್ಯಕವಾದ ಪ್ರಕೃತಿ ಜ್ಞಾನವನ್ನು ಮಗುವಾಗಿರುವಾಗಿನಿಂದಲೂ ಉಂಟು ಮಾಡುವುದಕ್ಕೆ ಯತ್ನಿಸದಿದ್ದರೆ ಮುಂದಕ್ಕೆ ಸೈನ್ಸ್ ಪಾಠದಿಂದ ಫಲವುಪೂರ್ಣವಾಗಿ ಉಂಟಾಗದಿರುವುದು. ಆದುದರಿಂದ ಪ್ರಕೃತಿ ಜ್ಞಾನವನ್ನು ಯಾವ ರೂಪದಲ್ಲಿಯಾದರೂ ಮೊದಲಿನಿಂದಲೂ ಉಂಟುಮಾಡುವುದಕ್ಕೆ ಯತ್ನಿಸುವುದು ಒಳ್ಳೆಯದು. ಮುಂದೆ ಹೇಳುವ ಪ್ರಕೃತಿ ವಿಮರ್ಶೆಯು ಪಾಠವು ಶೈಶವಕ್ಕೆ ಯೋಗ್ಯವಾಗಿರುವುದು. ಪ್ರಕೃತಿವಿಮರ್ಶೆಯಂದರೆ 'ಸೈನ್ಸ್' ಎಂಬ ಅರ್ಥವು ಪೂರ್ಣವಾಗಿಲ್ಲದಿದ್ದರೂ ಅದರಲ್ಲಿ ಸೈನ್ಸಿಗೆ ವಿರುದ್ಧವಾದಯಾವ ಅಂಶವೂ ಇರುವುದಿಲ್ಲ'.

ಪ್ರಕೃತಿ ವಿಮರ್ಶೆಯಲ್ಲಿ ಪ್ರಕೃತಿಯನ್ನೇ ಸಾಕ್ಷಾತ್ತಾಗಿ ವಿಮರ್ಶೆ ಮಾಡಬೇಕು. ಪುಸ್ತಕಗಳನ್ನೋದಿದರೆ ಪ್ರಕೃತಿ ವಿಮರ್ಶೆಯಾಗುವುದಿಲ್ಲ. ಪುಸ್ತಕಗಳ ಮೂಲಕ ಪ್ರಕೃತಿ ವಿಷಯವಾಗಿ ಜ್ಞಾನವನ್ನು ಸಂಪಾದಿಸಬಹುದೇ ಹೊರತು ಅದರಿಂದ ಪ್ರಕೃತಿಯನ್ನು ನಾವೇ ವಿಮರ್ಶೆ ಮಾಡಿದಂತಾಗುವುದಿಲ್ಲ; ಮತ್ತು ಉಪಾಧ್ಯಾಯರು ಪ್ರಕೃತಿವಿಷಯವಾಗಿ ಮಾಡಿದ ಉಪನ್ಯಾಸವನ್ನು ಕೇಳಿದ ಮಾತ್ರಕ್ಕೆ ಮಗುವು ತಾನೇ ವಿಮರ್ಶೆಯನ್ನು ಮಾಡಿದಂತಾಗುವುದಿಲ್ಲ. ಪ್ರಕೃತಿ ವಿಮರ್ಶೆಯನ್ನು ಮಾಡಬೇಕಾದರೆ ಪ್ರತಿಯೊಂದು ಮಗುವೂ ಸ್ವತಃ ಪ್ರಕೃತಿಯನ್ನು ಪರೀಕ್ಷಿಸಿ ಅದರ ಸ್ವರೂಪವನ್ನು ಕಂಡುಹಿಡಿಯುತ್ತಾ ಬರಬೇಕು. ಇದರಿಂದ ಮಕ್ಕಳು ನಿಸ್ಸಹಾಯರಾಗಿ ಈ ಕೆಲಸವನ್ನು ಮಾಡಬೇಕೆಂದು ತಿಳಿಯಬಾರದು. ಉಪಾಧ್ಯಾಯರು ಮಕ್ಕಳೊಡನೆ ಕೆಲಸಮಾಡಬೇಕು. ಹೀಗೆ ಮಾಡಿದರೆ ಉಪಾಧ್ಯಾಯರು ಮಕ್ಕಳಿಗೆ ಅಲ್ಲಲ್ಲಿ ದಾರಿತೋರಿಸುತ್ತಾ ಇರಬಹುದು. ಇದರಿಂದ ಮಕ್ಕಳಿಗೆ ಅಧಿಕವಾದ ಪ್ರಯೋಜನವು ದೊರೆಯುವುದು. ಒಂದೊಂದುವೇಳೆ ಮಕ್ಕಳ ಜೊತೆಯಲ್ಲಿ ಕೆಲಸಮಾಡುವುದರಿಂದ ಉಪಾಧ್ಯಾಯರಿಗೆ ಸಹ ಹೊಸ ಅಭಿಪ್ರಾಯಗಳು ಹೊಳೆಯಲು ಮಕ್ಕಳ ಮೂಲಕ ಅವಕಾಶವಾಗುವುದು.

ಈ ಕೆಲಸವನ್ನು ಮಾಡುವ ಉಪಾಧ್ಯಾಯರು ವಿಮರ್ಶೆಗೆ ವಿಷಯವಾಗಿರುವ ವಸ್ತುವನ್ನು ಮಕ್ಕಳು ನೋಡುವಂತೆ ನೋಡುತ್ತಾ ಪಾಠವನ್ನು ಮುಂದು ಮುಂದಕ್ಕೆ ಸಾಗಿಸಬೇಕೇ ಹೊರತು ಜಿಳೆದಿರುವ ತನ್ನ ಬುದ್ಧಿಯನ್ನೇ ಅನುಸರಿಸಕೂಡದು. ಮಕ್ಕಳ ಯೋಗ್ಯತೆಗೆ ತಕ್ಕಂಥ ಅಂಶಗಳನ್ನು ವಿವೇಚಿಸಿ ತೆಗೆದುಕೊಂಡು ಆವುಗ

ಳನ್ನು ಮಕ್ಕಳಿಗೆ ಹೊಂದುವ ಮಾರ್ಗದಲ್ಲಿ ಬೋಧಿಸುತ್ತ ಬರಬೇಕು. ಇತರ ಪಾಠಗಳಂತೆ ಈ ಪಾಠದಲ್ಲಿಯೂ ಮಕ್ಕಳೇ ಕಂಡು ಹಿಡಿಯಬಹುದಾದ ಯಾವ ಅಂಶವನ್ನೂ ನಾವಾಗಿ ಹೇಳಿಕೊಡಬಾರದು.

ಪ್ರಕೃತಿವಿಮರ್ಶೆಯ ವಿಷಯದಲ್ಲಿ ಮತ್ತೊಂದಂಶವನ್ನು ಹೇಳಬೇಕು. ಪ್ರಕೃತಿಗೆ ಸಂಬಂಧಪಟ್ಟ ವಸ್ತುವನ್ನು ಸಾಧ್ಯವಾದಮಟ್ಟಿಗೂ ಆ ವಸ್ತುವಿದೆ ಸಹಜವಾದ ಸನ್ನಿವೇಶದಲ್ಲಿ ಇರುವಾಗಲೇ ವಿಮರ್ಶೆಮಾಡಬೇಕು. ಈ ಕಾರಣದಿಂದ ಪ್ರಕೃತಿ ವಿಮರ್ಶೆಯನ್ನು ಅನೇಕವೇಳೆ ಪಾಠಶಾಲೆಯ ಹೊರಗಡೆ ನಡೆಯಿಸಬೇಕಾಗುವುದು. ನಾವು ಬೋಧಿಸಲಿ; ಬೋಧಿಸದೇ ಇರಲಿ; ಮಗುವು ತಾನೇ ಪ್ರಕೃತಿಯಿಂದ ಸಾಕ್ಷಾತ್ತಾಗಿ ಅನೇಕ ವಿಷಯಗಳನ್ನು ಕಲಿಯುತ್ತಿರುವುದು. ಹೀಗೆ ಆದಾಗಿ ಕಲಿಯುವ ಸಹಜವಾದ ಮಾರ್ಗವನ್ನನುಸರಿಸಿಯೇ ಆದಕ್ಕೆ ಪ್ರಕೃತಿಯಿಂದ ಸಾಕ್ಷಾತ್ತಾಗಿ ಇನ್ನಷ್ಟು ಹೆಚ್ಚಾಗಿಯೂ, ಇನ್ನಿಷ್ಟು ಸಿಷ್ಕೃಷ್ಟವಾಗಿಯೂ ಅಂಶಗಳನ್ನು ಕಲಿಯುವಂತೆ ಮಾಡಬೇಕು. ಈಗ ನಡೆಯುತ್ತಿರುವ ವಸ್ತುಪಾಠದಿಂದ ಪ್ರಕೃತಿ ವಿಮರ್ಶೆಯ ಕೆಲಸವು ಸರಿಯಾಗಿ ನಡೆಯುವುದೆಂದು ಹೇಳುವುದಕ್ಕೆ ಆಗುವುದಿಲ್ಲ. ಏಕೆಂದರೆ ವಸ್ತುಪಾಠದಲ್ಲಿ ವಿಷಯವನ್ನು ಪ್ರಕೃತಿಯಿಂದ ಹೊರಪಡಿಸಿ ಪೃಥಕ್ಕಾಗಿ ಬೋಧಿಸುವೆವು; ಅಲ್ಲದೆ ಅನೇಕಕಾಲದಲ್ಲಿ ತೋರಿಬರುವ ಅವಸ್ಥಾವಿಶೇಷಗಳ ಕ್ರಮಸ್ಥಿತಿಯನ್ನು ಏಕಕಾಲದಲ್ಲೇ ನಾಟಕದಂತೆ ತೋರಿಸಿಬಿಡುವೆವು. ಇದು ಅಸಹಜವಾದ ಮಾರ್ಗವು.

ಸೈನ್ಸ್ ಪಾಠಕ್ಕೆ ಬೇಕಾಗಿರುವಂತೆ ಪ್ರಕೃತಿ ವಿಮರ್ಶೆಗೆ ಉಪಕರಣಗಳು ವಿಶೇಷವಾಗಿ ಬೇಕಾಗಿಲ್ಲ. ಇದಕ್ಕೆ ಬೇಕಾದ ಸಾಮಾನುಗಳೆಲ್ಲ ಪ್ರಕೃತಿಯಲ್ಲೇ ಪ್ರಾಯಶಃ ದೊರೆಯುವುವು. ಇದರ ಜೊತೆಗೆ ಮಗುವಿಗೆ ಬೇಕಾದ್ದು ಏನಂದರೆ— ತನಗಿರುವ ಕಣ್ಣು ಕಿವಿ ಮುಂತಾದ ಇಂದ್ರಿಯಗಳನ್ನು ಉಪಯೋಗಿಸುವುದು. ಇವುಗಳನ್ನು ಉಪಯೋಗಿಸಬೇಕಾದರೆ ಮಗುವಿಗೆ ಪ್ರಕೃತಿಗೆ ಸಂಬಂಧಪಟ್ಟ ಪದಾರ್ಥಗಳಲ್ಲಿ ಕುತೂಹಲವಿರಬೇಕು. ಈ ಕುತೂಹಲವು ತಾನಾಗಿಯೇ ಮಗುವಿನಲ್ಲಿ ಕಂಡು ಬರುವುದು. ಪ್ರಕೃತಿ ವಿಮರ್ಶೆಯಂದರೆ, ಪ್ರಕೃತಿವಿಷಯಕವಾದ ವಿಮರ್ಶೆ: ಎಂದರೆ ಪ್ರಕೃತಿ ವಿಷಯವಾಗಿ ಮಾತಾಡುವುದೂ, ಓದುವುದೂಅಲ್ಲ. ಪ್ರಕೃತಿಯನ್ನು ನಿರ್ದಿಷ್ಟವಾಗಿ, ಕ್ರಮವಾಗಿ ಸ್ವತಂತ್ರವಾಗಿ ಪರ್ಯಾಲೋಚಿಸಿ ಅದರ ಸ್ವರೂಪವನ್ನು ಒಂದೊಂದಾಗಿ ಕಂಡು ಹಿಡಿದು ಅದರ ಪ್ರಯೋಜ

ನಾ ಪ್ರಯೋಜನಗಳನ್ನು ತಿಳಿಯುವುದು ಪ್ರಕೃತಿ ವಿಮರ್ಶೆಯಾಗುವುದು. ಹೀಗೆ ಮಾಡುವುದರಲ್ಲಿ ಒಂದು ವಸ್ತುವನ್ನು ಆರಿಸಿಕೊಂಡು ಅದನ್ನು ಮಾತ್ರ ವಿಚಾರ ಮಾಡುತ ಬಂದರೆ ಸಾಕೆಂದು ತಿಳಿಯಬಾರದು. ಏಕೆಂದರೆ ಪ್ರಪಂಚದಲ್ಲಿರುವ ಪ್ರತಿ ಯೊಂದು ಪದಾರ್ಥವೂ ಸುತ್ತುಮುತ್ತಲಿರುವ ಇತರ ಪದಾರ್ಥಗಳಿಗೆ ಸಂಬಂಧಿಸಿ ಕೊಂಡೇ ಇರುವುದು. ಗಿಡವು—ಮಣ್ಣು, ಮಳೆ, ಬೆಳಕು, ಗಾಳಿ ಇಂಥವುಗಳಿ ಗೆಲ್ಲ ಸಂಬಂಧಪಟ್ಟೇಯಿದೆ. ಎಲೆಗಳ ಮೇಲೆ ಕೂತು ಅದನ್ನು ತಿಂದು ಗಿಡವನ್ನು ಹಾಳುಮಾಡುವ ಕ್ರಿಮಿಗಳಿಗೂ ಆಗಿಡವು ಸಂಬಂಧಪಟ್ಟೇ ಇರುವುದು. ಹೀಗೆಯೇ ಅದು ಮನುಷ್ಯನಿಗೂ ಸಂಬಂಧಪಟ್ಟೇ ಇರುವುದು. ಈ ಸಂಬಂಧವು ಅನೇಕವಾ ಗಿರಬಹುದು. ಮನುಷ್ಯನಿಗೆ ಆಹಾರವಾಗುವುದರಿಂದ ಗಿಡವು ಅವನಿಗೆ ಸಂಬಂಧ ಪಟ್ಟಿರಬಹುದು; ಅಥವಾ ತನ್ನಲ್ಲಿರುವ ರಾಮಣೀಯಕತೆಯಿಂದ ಮನುಷ್ಯನಿಗೆ ಅತಿ ಸುಂದರವಾದ ಅಭಿಪ್ರಾಯಗಳನ್ನು ಕೊಡುವುದರಿಂದ ಅವನಿಗೆ ಸಂಬಂಧವಾಗಿರ ಬಹುದು; ಹೀಗೆ ಇನ್ನೂ ಅನೇಕವಿಧವಾಗಿ ಅದು ಇವನಿಗೆ ಸಂಬಂಧಪಟ್ಟಿರ ಬಹುದು; ಆದ್ದರಿಂದ ಯಾವ ಪದಾರ್ಥವನ್ನು ಪರಿಶೀಲಿಸುತಿದ್ದರೂ ಅದೊಂದನ್ನೇ ಪರಿಶೀಲಿಸದೆ ಅದಕ್ಕೆ ಸಂಬಂಧಪಟ್ಟ ಸಂದರ್ಭಗಳನ್ನೆಲ್ಲ ಯಥೋಚಿತವಾಗಿ ಪರಿ ಶೀಲಿಸುತ್ತಾ ಬರಬೇಕು. ಇದು ಸಾಧ್ಯವಾಗಲೆಂದೇ ಪ್ರಕೃತಿವಿಮರ್ಶೆಗೆ ವಿಷಯ ವಾದ ಪದಾರ್ಥವನ್ನು ಪ್ರಕೃತಿಯಿಂದ ಪೃಥಕ್ಕರಿಸದೆ ವಿಮರ್ಶಿಸಬೇಕೆಂದು ಮೇಲೆ ಹೇಳಿದುದು. ಇದುವರೆಗೆ ಹೇಳಿರುವುದರಿಂದ ಬಾಲವಿದ್ಯಾಭ್ಯಾಸದಲ್ಲಿ ಇತರ ಪಾ ಠಗಳಂತೆ ಪ್ರಕೃತಿವಿಮರ್ಶೆಯೂ ಒಂದಾಗಿರಬೇಕೆಂಬ ಅಭಿಪ್ರಾಯ ಬರುವುದು. ಇವೆರಡೂ ಏಕರೀತಿಯಾಗಿ ನಡೆಯಬೇಕೆಂಬ ಅಭಿಪ್ರಾಯವನ್ನು ಇಟ್ಟುಕೊಳ್ಳಬಾ ರದು. ಶೈಶವದಲ್ಲಿ ಪ್ರಕೃತಿಸಂಬಂಧವಾದ ಪಾಠವೇ ಮುಖ್ಯವಾಗಬೇಕು. ಇತರ ಪಾಠಗಳಿದ್ದರೆ ಅವುಗಳನ್ನು ಪ್ರಕೃತಿಪಾಠಕ್ಕೆ ಅಂಗವಾಗಿ ಮಾಡಬೇಕು. ಎಂದರೆ ಒಟ್ಟಿನಲ್ಲಿ ಪ್ರಕೃತಿಪಾಠವೇ ಚಿಕ್ಕತನದಲ್ಲಿ ಪ್ರಧಾನವಾಗಿರಬೇಕು.

ವಿದ್ಯಾಭ್ಯಾಸದಲ್ಲಿ ನಾವು ಮಕ್ಕಳಿಗೆ ಲೋಕವ್ಯವಹಾರಕ್ಕೆ ಉಪಯುಕ್ತವಾದ ಅಂಶಗಳನ್ನು ಹೇಳಿಕೊಡುವುದರ ಜೊತೆಯಲ್ಲಿ ಮಕ್ಕಳ ಬುದ್ಧಿಶಕ್ತಿಯು ಬೆಳೆಯು ವಂತೆಯೂ ಮಾಡಬೇಕು. ಪ್ರಕೃತಿವಿಮರ್ಶೆಯನ್ನು ಕ್ರಮವಾಗಿ ನಡೆಯಿಸಿದರೆ ಈ ಎರಡು ಪ್ರಯೋಜನಗಳೂ ಸಿದ್ಧಿಸುವುವು. ಪ್ರಕೃತಿಯನ್ನು ಕ್ರಮವಾಗಿ ವಿಮ ರ್ಶಿಸುವುದರಿಂದ ಸುತ್ತಮುತ್ತಲಿರುವ ಪದಾರ್ಥಗಳ ಸ್ವರೂಪವು ತಿಳಿದು, ಆ ಪದಾ ರ್ಥಗಳ ಸ್ವರೂಪಜ್ಞಾನವನ್ನೇ ಬಲವಾಗಿ ಆಶ್ರಯಿಸಿ ನಡೆಯುವ ಲೋಕವ್ಯವಹಾರಕ್ಕೆ ಸಹಾಯವಾಗುವುದು; ಮತ್ತು ವಿಮರ್ಶೆಗೆ ವಿಷಯವಾದ ಸಂಗತಿಯನ್ನು ಉಪಾ ಧ್ಯಾಯರ ಮೇಲ್ವಿಚಾರಣೆಯಲ್ಲಿ ಬಾಲಕರು ಪ್ರಾಯಶಃ ಸ್ವತಂತ್ರವಾಗಿಯೇ ಪರಿ ಶೀಲಿಸುವುದರಿಂದ ಇಂದ್ರಿಯಶಕ್ತಿ ಊಹಾಶಕ್ತಿ ಮುಂತಾದವುಗಳು ಬೆಳೆದು ಬುದ್ಧಿ ಸಂಸ್ಕಾರಕ್ಕೆ ಕಾರಣವಾಗುವುದು. ಈ ಕಾರಣದಿಂದ ಬಾಲಪಾಠದಲ್ಲಿ ಪ್ರಕೃತಿ

ವಿಮರ್ಶೆಯನ್ನು ಮುಖ್ಯವಾಗಿಟ್ಟುಕೊಂಡು ಶಿಕ್ಷಣವನ್ನು ನಡೆಯಿಸಿದರೆ ಶಿಕ್ಷಣದ ಉದ್ದೇಶಕ್ಕೆ ಲೇಶವೂ ಭಂಗಬರುವುದಿಲ್ಲ.

ಚಿಕ್ಕತನದಲ್ಲಿ ಈ ವಿಧವಾದ ಪ್ರಕೃತಿ ಸಂಸರ್ಗವು ಇರಬೇಕಾದ್ದು ಅವಶ್ಯ. ಎಳೇ ಮಗುವನ್ನು ಅನೇಕ ಭಾಗಗಳಲ್ಲಿ ಪ್ರಕೃತಿಯಲ್ಲಿರುವ ಸಸ್ಯಮುಂತಾದ ವಸ್ತುಗಳಿಗೆ ಹೋಲಿಸಬಹುದು. ಆ ವಯಸ್ಸಿನಲ್ಲಿ ಮಗುವು ಮನುಷ್ಯನಿಗಿಂತಲೂ ಪ್ರಕೃತಿಗೆ ಹೆಚ್ಚು ಸದೃಶವಾಗಿದೆಯೆಂದು ಹೇಳಬಹುದು. ಈ ವಯಸ್ಸಿನಲ್ಲಿ ಸಾಕಾದಷ್ಟು ಪ್ರಕೃತಿ ಸಂಸರ್ಗವು ಉಂಟಾಗಬೇಕಾದರೆ ಇದುವರೆಗೆ ಹೇಳಿದ ಪ್ರಕೃತಿ ವಿಮರ್ಶೆಯು ಒಂದು ಸಾಧಕ. ಈಗಿನಂತೆ ಪಾಠಶಾಲೆಯಲ್ಲಿ ಓದುವುದು, ಬರೆಯುವುದು ಇಂತಹ ಪಾಠಗಳನ್ನೇ ಹೇಳುವುದಾದರೆ ಅವರಿಗೆ ಸಹಜವಾಗಿರಬೇಕಾದ ಪ್ರಕೃತಿ ಸಂಸರ್ಗವನ್ನು ತಪ್ಪಿಸಿ, ಕೃತ್ರಿಮವಾದ ಸನ್ನಿವೇಶದ ಮಧ್ಯದಲ್ಲಿ ಇಟ್ಟಂತೆ ಆಗುವುದು. ಇದರಿಂದಲೇ ಸಾಧಾರಣವಾದ ಮತಗಳಿಗೆ ಬರಲು ಮಕ್ಕಳಿಗೆ ಆದರ ಕಡಮೆಯಾಗಿರುವುದು; ಆದ್ದರಿಂದ ನಾವು ವಿದ್ಯಾಭ್ಯಾಸ ಮಾಡಿಸುವಕಾಲದಲ್ಲಿ ಪ್ರಕೃತಿ ಸಂಸರ್ಗವು ಮಗುವಿಗೆ ಹೋಗದಂತೆ ನೋಡಿಕೊಳ್ಳಬೇಕು. ಪ್ರಕೃತಿ ಸಂಸರ್ಗವು ಸಾಕ್ಷಾತ್ತಾಗಿಯೇ ಇರುವಂಥ ಪಾಠಗಳನ್ನು ಅನೇಕವಾಗಿ ನಡೆಯಿಸಬೇಕು. ಇಂಥಾ ಸಂಸರ್ಗವು ಸಾಕ್ಷಾತ್ತಾಗಿ ಸಾಧ್ಯವಾಗದಿರುವ ಕೆಲವು ಪಾಠಗಳನ್ನು ಹೇಳುವುದಾದರೆ ಅದನ್ನು ಪರಂಪರೆಯಾಗಿಯಾದರೂ ಪ್ರಕೃತಿಗೆ ಹೊಂದಿಸಬೇಕು. ಹೀಗೆ ಮುಖ್ಯವಾದ ಪಾಠಗಳನ್ನೆಲ್ಲಾ ಇಟ್ಟುಕೊಂಡು ಪ್ರಕೃತಿಪಾಠವನ್ನು ಮುಖ್ಯತಮವನ್ನಾಗಿ ಮಾಡಿಕೊಂಡು ವಿದ್ಯಾಭ್ಯಾಸವನ್ನು ನಡೆಯಿಸುತ ಬಂದರೆ ಅಂತಹ ವಿದ್ಯಾಭ್ಯಾಸದಲ್ಲಿ ಮಕ್ಕಳಿಗೆ ಆದರ ಹೆಚ್ಚಿ ಹೆಚ್ಚಾದ ಫಲವನ್ನು ಸಹಜವಾದ ರೀತಿಯಲ್ಲಿ ಪಡೆಯುವರು.

ಪ್ರಕೃತಿವಿಮರ್ಶೆಯಿಂದ ಮಕ್ಕಳಿಗೆ ವ್ಯವಹಾರದಲ್ಲಿ ಉಪಯೋಗಿಸುವ ಅಂಶಗಳು ತಿಳಿಯುವುದೂ, ಅವರ ಬುದ್ಧಿಗೆ ಸಂಸ್ಕಾರವಾಗುವುದೂ ಇವೆರಡೇ ಫಲವೆಂದು ತಿಳಿಯಬಾರದು. ಇವೆರಡಕ್ಕಿಂತಲೂ ದೊಡ್ಡದಾದ ಪ್ರಯೋಜನವೊಂದು ಪ್ರಕೃತಿವಿಮರ್ಶೆಯಿಂದ ಮಗುವಿಗೆ ಉಂಟಾಗುವುದು. ಸಾಮಾನ್ಯವಾಗಿ ಮಕ್ಕಳಿಗೆಲ್ಲಾ ಪ್ರಕೃತಿಗೆ ಸಂಬಂಧಪಟ್ಟ ಪದಾರ್ಥಗಳಲ್ಲಿ ಪ್ರೀತಿಯು ಇರುವುದು. ಈ ಪ್ರೀತಿಯು ಪ್ರಕೃತಿವಿಮರ್ಶೆಯ ಪಾಠದಲ್ಲಿ ವೃದ್ಧಿಯಾಗುವುದಕ್ಕೆ ಅವಕಾಶವಿದೆ. ಹೀಗೆ ಈ ಪ್ರೀತಿಯು ವೃದ್ಧಿಹೊಂದಿದರೆ ತನ್ನ ಸುತ್ತುಮುತ್ತಲಿರುವ ಪದಾರ್ಥಗಳಿಗೆ ತನ್ನಿಂದಾಗುವ ಪ್ರಯೋಜನವನ್ನು ಮನಃಪೂರ್ವಕವಾಗಿ ಉಂಟುಮಾಡುವುದು, ಅವುಗಳ ಅಭಿವೃದ್ಧಿಯಲ್ಲಿ ತಾನು ಸಂತೋಷಪಡವುದು, ಇವೆಲ್ಲಾ ಮಗುವಿಗೆ ಅಭ್ಯಸ್ತವಾಗುವುದು. ಹೀಗೆ ಪರೋಪಕಾರದಲ್ಲಿ ಆಸಕ್ತಿ ಹುಟ್ಟುವುದರಿಂದ ಮಗುವಿನ ನೀತ್ಯನುಶಾಸನಕ್ಕೆ ವಿಶೇಷವಾದ ಸಹಾಯವುಂಟು.

ಪ್ರಕೃತಿವಿಮರ್ಶೆಯನ್ನು ಮೇಲೆ ಹೇಳಿರುವ ಫಲಗಳು ದೊರೆಯುವಂತೆ ಮಕ್ಕಳೊಡನೆ ನಡೆಯಿಸಬೇಕಾದರೆ ಉಪಾಧ್ಯಾಯರಲ್ಲಿ ಅತ್ಯುತ್ತಮವಾದ ಗುಣಗಳಿರಬೇಕು. ಮಕ್ಕಳಲ್ಲಿಯೂ, ಪ್ರಕೃತಿಯಲ್ಲಿಯೂ ಸಹಜವಾದ ಪ್ರೀತಿ ಇರಬೇಕು. ದೇವರಲ್ಲಿ ನಿಜವಾದ ಭಕ್ತಿಯಿರಬೇಕು.

ಪ್ರಕೃತಿ ಸಂಸರ್ಗವನ್ನುಂಟು ಮಾಡುವುದಕ್ಕೆ ಪ್ರಕೃತಿವಿಮರ್ಶೆಯು ಪಾಠವು ಒಂದು ಒಳ್ಳೇ ಸಾಧಕವೆಂದು ಮೇಲೆ ಹೇಳಿದೆ. ಆದರೆ ಇದೊಂದೇ ಇದ್ದರೆ ಪ್ರಕೃತಿ ಸಂಸರ್ಗಕ್ಕೆ ಪೂರ್ಣವಾದ ಸಾಧಕಗಳಿದ್ದಂತೆ ಆಗುವುದಿಲ್ಲ. ಆದ್ದರಿಂದ ಮಕ್ಕಳಿಗೆ ಸಾಕಾದಷ್ಟು ಪ್ರಕೃತಿಯೊಡನೆ ಸಂಸರ್ಗವನ್ನುಂಟುಮಾಡುವುದಕ್ಕಿರುವ ಮಿಕ್ಕ ಸಾಧಕಗಳನ್ನು ಮುಂದೆ ವಿಚಾರಮಾಡಬೇಕು.

ಮಕ್ಕಳಿಗೆ ಪ್ರಕೃತಿ ಸಂಸರ್ಗವನ್ನು ಪ್ರಕೃತಿವಿಮರ್ಶೆಯು ಪಾಠದಮೂಲಕ ಉಂಟುಮಾಡುವುದರ ಜೊತೆಗೆ ಮತ್ತೆರಡು ಪಾಠಗಳ ಮೂಲಕ ಉಂಟುಮಾಡಬಹುದು. ಅವು ಯಾವುವೆಂದರೆ:—

(i) ಬಾಲಕರಿಂದ ಕೈತೋಟ ಮಾಡಿಸುವುದು.

(ii) ನೇಚರ್ ರ್ಯಾಂಬಲ್ಸ್; ಎಂದರೆ ಅವರನ್ನು ಆಗಾಗ್ಗೆ ಹೊರಗೆ ಕರೆದುಕೊಂಡು ಹೋಗಿ. ತೋಟ, ತೋಪು ಅಥವಾ ಸಣ್ಣ ಕಾಡು ಇಂಥವುಗಳಲ್ಲಿ ದೃಷ್ಟಿಗೆ ಗೋಚರವಾಗುವ ಪದಾರ್ಥಗಳ ಸ್ವರೂಪವನ್ನು ವಿಮರ್ಶೆ ಮಾಡಿಸುವುದು.

ಪ್ರಕೃತಿವಿಮರ್ಶೆಯೊಂದನ್ನೇ ಇಟ್ಟುಕೊಂಡರೆ ಪೂರ್ಣವಾದ ಪ್ರಕೃತಿ ಸಂಸರ್ಗವು ಉಂಟಾಗುವುದಿಲ್ಲ. ಪ್ರಕೃತಿವಿಮರ್ಶೆಯಲ್ಲಿ ಯಾವುದಾದೊಂದಂಶವನ್ನು ನಿಷ್ಕರ್ಷಿಸಿಕೊಂಡು ಅದನ್ನೇ ಕೆಲವುಕಾಲ ಕ್ಲಿಷ್ಟವಾಗಿ ವಿಚಾರಮಾಡುವುದರಿಂದ ಮಕ್ಕಳಿಗೆ ಪ್ರಕೃತಿಯೊಡನೆ ಸಹವಾಸವು ಸಂಕುಚಿತವಾಗುವುದು. ಆದ್ದರಿಂದ ಮೇಲೆ ಹೇಳಿದ ಇನ್ನೆರಡುಪಾಠಗಳನ್ನೂ ನಡೆಯಿಸಬೇಕು. ಹೀಗೆ ಪ್ರಕೃತಿಬೋಧೆಗಾಗಿ ಮೂರುಪಾಠಗಳನ್ನಿಡುವುದರಿಂದ ಮತ್ತೊಂದು ಸಹಾಯವು ದೊರೆಯುವುದು. ಪಾಠಶಾಲೆಯಲ್ಲಿ ನಡೆಯತಕ್ಕ ಪಾಠಗಳನ್ನು ಪ್ರಕೃತಿಪಾಠಕ್ಕೆ ಸಂಬಂಧಿಸಿಕೊಂಡು ಹೇಳಬೇಕೆಂದು ಮೇಲೆ ಹೇಳಿದೆ. ಪ್ರಕೃತಿವಿಮರ್ಶೆಯೊಂದೇಪಾಠವು ನಡೆಯುವುದಾದರೆ ಅದಕ್ಕೆ ಪಾಠಗಳನ್ನೆಲ್ಲ ಹೊಂದಿಸುವುದು ಶ್ರಮವಾಗುವುದು. ಮಿಕ್ಕ ಎರಡುಪಾಠಗಳೂ ಜೊತೆಯಲ್ಲಿದ್ದರೆ ಈ ಪಾಠಸಮನ್ವಯವು ಸುಲಭವಾಗುವುದು. ಈ ಮಿಕ್ಕ ಎರಡುಪಾಠಗಳ ವಿಷಯದಲ್ಲಿಯೂ ಮುಂದೆ ವಿಚಾರ ಮಾಡಬೇಕಾಗಿದೆ.

B O.S.

ಪರಸ್ಪರ ಸಂಬಂಧವುಳ್ಳ ಬೋಧನ ಪದ್ಧತಿಗಳು

———:o:———

ಬಹು ಕಾಲದಿಂದಲೂ ವಿದ್ಯೆ ಕಲಿಸುವವರು ಕಲಿಸುವ ಪಾಠಗಳನ್ನೊಂದೊಂದರೊಂದಿಗೆ ಸಂಬಂಧವಿರುವಂತೆ ಕಲಿಸದೆ, ಪ್ರತಿ ಒಂದು ವಿಷಯವನ್ನೂ ಬೇರೆಬೇರೆ ಕಲಿಸುತ್ತ ಬಂದರು. ಯಾವುದಾದರು ಒಂದು ಪಾಠವನ್ನು ಕಲಿಸಬೇಕಾಗಿ ಬಂದರೆ ಅದೊಂದನ್ನೇ ಪ್ರತ್ಯೇಕವಾಗಿ ಬೋಧಿಸುವರೇ ಹೊರತು ಅದರ ವಿಷಯಗಳಿಲ್ಲ ಮಕ್ಕಳಿಗೆ ಹೇಗೆ ಬೋಧಕವಾಗುವುದೋ ಆ ಮಾರ್ಗವನ್ನು ಯೋಚಿಸುವುದೇ ಇಲ್ಲ. ಹುಡುಗರಿಗಾಗಲಿ ದೊಡ್ಡವರಿಗಾಗಲಿ ಯಾವುದಾದರೂ ಒಂದು ವಿಷಯವನ್ನು ಚೆನ್ನಾಗಿ ಹೇಳಬೇಕಾದರೆ ಅನೇಕ ಮಾರ್ಗಗಳಿಂದ ಅದನ್ನು ತಿಳಿಸಬೇಕಾಗುವುದು. ಒಂದು ವಿಷಯಕ್ಕೆ ಸಂಬಂಧಪಟ್ಟ ವಿಷಯಗಳನ್ನು ಕಲಿಸುವುದೊಂದು, ಆ ಅಂಶಗಳನ್ನು ಒಂದೊಂದರೊಂದಿಗೆ ಸೇರಿಸಿ, ಜ್ಞಾನಾಭಿವೃದ್ಧಿ ಮಾಡುವುದು ಮತ್ತೊಂದು, ನಾವು ಸಣ್ಣ ಮಕ್ಕಳನ್ನು ನೋಡೋಣ. ಅವು ಈ ಸೃಷ್ಟಿಯಲ್ಲಿ ಯಾವುದಾದರೂ ಒಂದು ವಸ್ತುವನ್ನು ನೋಡಿದ ಕೂಡಲೇ ಮೊದಲು ಅದನ್ನು ಪರಿಶೀಲನೆ ಮಾಡುವವು. ಆಮೇಲೆ ಆ ಅಂಶಗಳನ್ನು ಬಾಯಿಂದ ಹೇಳುವವು; ಆಮೇಲೆ ಅವು ತಿಳಿದುಕೊಂಡ ಅಂಶಗಳನ್ನು ಚಿತ್ರ ಬರೆಯಲು ಯತ್ನಿಸುವುವು. ಶೋಧಿಸಿದ ವಸ್ತುಗಳಂತಹ ಪ್ರತಿಮೆಗಳನ್ನು ನಿರ್ಮಿಸಲಿಕ್ಕೆ ಕುತೂಹಲಗೊಳ್ಳುವವು. ಹೊಸದಾಗಿ ಕಲಿತ ಅಂಶಗಳನ್ನು ತಿಳಿಸಲಿಕ್ಕೆ ತಕ್ಕ ಆಟಪಾಟಗಳನ್ನು ಕಲ್ಪಿಸಿಕೊಳ್ಳುವವು. ಜ್ಞಾನವನ್ನು ಅಭಿವೃದ್ಧಿಗೊಳಿಸುವುದಕ್ಕಾಗಿ ಸಣ್ಣ ಮಕ್ಕಳೇ ಸಹಜವಾಗಿ ಏನೇನು ಮಾಡಬೇಕೆಂಬುವುವನ್ನು ತಿಳಿದುಕೊಳ್ಳುವಾಗ ಬೋಧಕರು ಯಾವ ಪ್ರಯತ್ನಗಳನ್ನು ಮಾಡುವರೋ ಯೋಚಿಸತಕ್ಕುದು, ಸಹಜ ಬಂಧುತ್ವವುಳ್ಳ ಮಾರ್ಗಗಳೇ ಮಕ್ಕಳಿಗೆ ತೋರುತ್ತಿರುವುವು. ಹುಡುಗರು ತಾವು ಬೇರಬೇರೆ ಅಡಿಕೊಳ್ಳುವಾಗ ಅವಲಂಬಿಸುವ ಮಾರ್ಗಗಳು ಕೆಲಸಕ್ಕೆ ಬಾರದವುಗಳೆಂತಲೂ, ತಾವು ಮೊದಲು ಶಾಲೆಗಳಲ್ಲಿ ಕಲ್ತ ಮಾರ್ಗಗಳೇ ಉತ್ತಮವಾದುವುಗಳೆಂತಲೂ, ತಿಳಿದುಕೊಂಡು, ಬಾಲ್ಯದಲ್ಲಿ ಸಣ್ಣ ಮಕ್ಕಳಿಗಿರುವ ಸಹಜಮಾರ್ಗಗಳನ್ನು ಆತಂಕಪಡಿಸುತ್ತ ನಿಷ್ಪ್ರಯೋಜಕಪದ್ಧತಿಗಳನ್ನೇ ಅನುಸರಿಸುವ ಉಪಾಧ್ಯಾಯರೂ ಕೆಲವರಿರುವರು. ಸಹಜವಾಗಿ ಉತ್ಪನ್ನವಾಗುವ ಮಾರ್ಗಗಳನ್ನು ಗ್ರಹಿಸಿ, ಮಕ್ಕಳಿಗೆ ಹಿತವಾಗಿಯೂ, ಪ್ರತಿ ಮನುಷ್ಯನೂ ದೇವರು ದಯಪಾಲಿಸಿರುವ ಜ್ಞಾನೇಂದ್ರಿಯಗಳನ್ನನುಸರಿಸಿಯೂ, ವಿದ್ಯಾವಿಷಯಗಳನ್ನು ಬೋಧಿಸತಕ್ಕುದು, ಹಾಗಿಲ್ಲದೆ ಈಶ್ವರನು ನಿರ್ಮಿಯಿಸಿದ ಜ್ಞಾನಾಂಕುರದ ಮಾರ್ಗಗಳೊಂದು ಬಗೆಯಾಗಿಯೂ ಬೋಧಕನು ಏರ್ಪಡಿಸಿಕೊಂಡಿರುವುದೊಂದು ಬಗೆಯಾಗಿಯೂ ಇದ್ದಲ್ಲಿ ವಿದ್ಯೆಯು ಸ್ವಭ್ಯಸಿಸುವುದು ಅಸಂಭವನೀಯವು. ಬೋಧನ ಶಾಸ್ತ್ರಜ್ಞರು ಸ್ವಾಭಾವಿಕವಾಗಿ

ಮಕ್ಕಳ ಮನಸ್ಸಿನಲ್ಲಿ ನೆಡಲ್ಪಟ್ಟ ಜ್ಞಾನೇಛ್ಛೆಗಳನ್ನು ಚೆನ್ನಾಗಿ ಪರಿಶೋಧಿಸಿ, ಸ್ವಭಾವಸಿದ್ಧಗಳಾದ ಇಚ್ಛೆಗಳನ್ನೇ ಬಲಪಡಿಸುತ್ತ, ಮಕ್ಕಳಿಗಿಂಪಾಗಿಯೂ, ಸುಲಭವಾಗಿ ತಿಳಿಯುತಕ್ಕುದಾಗಿಯೂ, ಇರುವ ಪರಸ್ಪರ ಸಂಬಂಧ ಪದ್ಧತಿಗಳೇ ನಿಜವಾದ ಮಾರ್ಗಗಳೆಂದು ನಿಶ್ಚಯಿಸಿರುವರು.

ಮಕ್ಕಳಿಗೆ ಜ್ಞಾನವನ್ನುಂಟುಮಾಡುವುದೂ, ವಿದ್ಯೆಯನ್ನಭಿವೃದ್ಧಿಮಾಡುವುದೂ ಬೋಧಕರ ಮುಖ್ಯೋದ್ದೇಶಗಳು, ಬಿಡಿಬಿಡಿಯಾಗಿ ಕೆಲಕೆಲವು ಹೊಸ ವಿಷಯಗಳನ್ನು ತಿಳಿಸಿದರೆ ಫಲವೇನು? ಹಲವು ಬಣ್ಣಗಳನ್ನು ಕೂಡಿಸಿಟ್ಟರೆ ಚಿತ್ರವಾಗುವುದೆ? ಬರಿಯುವುದಕ್ಕೆ ಕುಂಚ (ಬ್ರಷ್) ಗಳಿದ್ದ ಮಾತ್ರದಿಂದಲೇ ಸ್ವಂತ ವ್ಯವಹಾರಗಳನ್ನು ಸಮರ್ಥಿಸಿಕೊಳ್ಳತಕ್ಕ ಶಕ್ತಿಯುಂಟಾಗುವುದೇ? ಪಟ್ಟಣ ಹಳ್ಳಿ, ಭೂಶಿರ, ಜಲಸಂಧಿ, ಭೂಸಂಧಿ ಇವುಗಳ ಹೆಸರುಗಳನ್ನು ನೆನಪಿನಲ್ಲಿಟ್ಟುಕೊಂಡ ಮಾತ್ರಕ್ಕೆ ನಿಜವಾದ ಭೂಗೋಳಶಾಸ್ತ್ರದ ಜ್ಞಾನ ಉಂಟಾಗುವುದೇ? ಇಲ್ಲವೇ ಇಲ್ಲ. ಪ್ರತಿಯೊಂದು ವಿಷಯವನ್ನು ಕುರಿತ ಅಂಶಗಳು ಸಹಜವಾಗಿ ಒಂದಕ್ಕೊಂದು ಸಂಬಂಧಪಟ್ಟವುಗಳಾಗಿರತಕ್ಕುವು. ಸಹಜಸಂಬಂಧವುಳ್ಳ ರಹಸ್ಯಗಳನ್ನು ಗೊತ್ತುಮಾಡಿಕೊಂಡು, ಅಂಶಗಳನ್ನು ಗೊತ್ತಾದ ಕಡೆಗಳಲ್ಲಿಟ್ಟುಕೊಂಡು ಯಾವುವು ಯಾವವರಿಗೆ ಪ್ರಾಮುಖ್ಯವನ್ನು ಹೊಂದತಕ್ಕುವೋ ಅಂತಹ ಮಾರ್ಗಗಳನ್ನನುಸರಿಸಿ ಗಮನಿಸುವುದೇ ಸಹಜಮಾರ್ಗ, ಸಹಜಮಾರ್ಗವೇ ಸಂಬಂಧಮಾರ್ಗ.

ಬೋಧಕನು ಮೊದಲಲ್ಲಿ ಮಕ್ಕಳಿಗೆ ಸಂತೋಷವನ್ನೂ ಉಲ್ಲಾಸವನ್ನೂ ಉಂಟುಮಾಡತಕ್ಕ ವಿಷಯಗಳನ್ನು ಕುರಿತು ಸಂಭಾಷಿಸುತ್ತಿರಬೇಕು. ಪ್ರತಿ ಒಂದು ವಸ್ತುವನ್ನೂ ಅಪರೇ ಪರಿಶೀಲನೆ ಮಾಡುವಂತೆ ಏರ್ಪಡಿಸಿ, ಚೆನ್ನಾಗಿ ತಿಳಿಯತಕ್ಕ ದೃಷ್ಟಾಂತಗಳನ್ನೇ ಉಪಯೋಗಿಸಿ, ಸಾಧ್ಯವಾದ ಮಟ್ಟಿಗೆ ಅಗತ್ಯವಾದ ಶೋಧನಕಾರ್ಯಗಳೆಲ್ಲವನ್ನೂ ಅವರಿಂದಲೇ ಮಾಡಿಸಿ, ಅದಕ್ಕೆ ಸಂಬಂಧಪಟ್ಟ ಅಂಶಗಳನ್ನು ಸ್ಪಷ್ಟವಾಗಿ ನಿರೂಪಿಸತಕ್ಕದ್ದು. ಯಾವ ವಸ್ತುವಿನ ವಿಷಯವನ್ನು ಕುರಿತ ಅಂಶಗಳಾದರೂ ನಮ್ಮಷ್ಟಕ್ಕೆ ನಾವೇ ಪರಿಶೋಧಿಸಿ ನೋಡಿದಹೊರತು ನಿಸ್ಸಂದೇಹವಾಗಿ ಸ್ಪಷ್ಟಪಡುವವು. ದೊಡ್ಡ ವಯಸ್ಸಿನವರಾದ ನಮಗೇ ಹೀಗಿರುವಾಗ ಸಣ್ಣ ಮಕ್ಕಳಿಗೆ ಅಂತಹ ಪರಿಶೋಧನೆಯೇ ವಿದ್ಯಾಭ್ಯಾಸಕ್ಕೆ ಮೂಲಕಾರಣವಾಗಿರತಕ್ಕುದು. ಮಕ್ಕಳು ಪರಿಶೋಧನೆ ಮಾಡುವಾಗ ಸ್ವೇಚ್ಛೆಯಾಗಿ ತಮ್ಮ ಕೈಗಳಿಂದ ಕೆಲಸಮಾಡುತ್ತ, ತಮ್ಮ ಬುದ್ಧಿಯಿಂದ ಗ್ರಹಿಸುತ್ತ, ತಮ್ಮ ದೃಷ್ಟಿಯಿಂದ ಪರಿಶೀಲಿಸುತ್ತ, ಈ ಮೂರು ಕಾರ್ಯಗಳನ್ನೂ ಸದಾ ಮಾಡಿ, ತಮ್ಮಷ್ಟಕ್ಕೆತಾವೇ ವಿಷಯಗಳನ್ನು ಗ್ರಹಿಸತಕ್ಕುದು. ಬೋಧಕನು ಅವುಗಳನ್ನು ಸರಿಯಾದ ಮಾರ್ಗಗಳಲ್ಲಿಟ್ಟು, ಬೇಕಾದಕಡೆ ತಿದ್ದುತ್ತಿರಬೇಕೇ ಹೊರತು ಎಲ್ಲವನ್ನೂ ತಾನೇ ಹೇಳಿಕೊಡಕೂಡದು. ಎಲ್ಲವನ್ನೂ ಹೇಳಿ ಸುಮ್ಮನಿರುವದೂ, ಆಮೇಲೆ ಹುಡುಗರಿಂದ ಗಳಿವುಳನ್ನು ಉರುವುಹಾಕಿಸಿ ಬಾಯಿಪಾಠಮಾಡಿಸುವುದೂ ಸುಲಭವಾದ ಕೆಲಸಗಳಾ

ದುದರಿಂದ ತಿಳಿವಿಲ್ಲದ ಉಪಾಧ್ಯಾಯರು ಈ ಮಾರ್ಗವನ್ನು ಬಿಟ್ಟು, ಹೊಸ ಮಾದರಿಯಲ್ಲಿ ತಿರುಗಲಿಕ್ಕೆ ಇಷ್ಟಪಡರು; ಈ ಮಾರ್ಗವು ಬೋಧೆಗೆ ತಕ್ಕುದಲ್ಲ. ಸ್ಥೈರ್ಯಗೊಂಡು, ಹುಡುಗರಿಂದಲೇ ಪ್ರತಿಕಾರ್ಯವನ್ನೂ ಮಾಡಿಸುತ್ತ, ಅವರೇ ಪ್ರತಿ ಅಂಶವನ್ನೂ ಗ್ರಹಿಸುವಂತೆ ಉಪಾಯಗಳನ್ನೂ ತೋರಿಸಿಕೊಟ್ಟು, ಪ್ರಯತ್ನದಿಂದ ಕೆಲಸವಮಾಡಿಸುವುದು ಸ್ವಲ್ಪ ಕಷ್ಟವೇ ಸರಿ, ಕಷ್ಟಪಡದೆ ಯಾವ ಕೆಲಸವೂ ಕೈಗೂಡದು, ಆದುದರಿಂದ ವಿದ್ಯಾ ವಿಷಯದ ಅಂಶಗಳನ್ನು ಹುಡುಗರೇ ಗ್ರಹಿಸುವಂತೆ ಮಾಡತಕ್ಕುದು ಬೋಧಕರ ಕರ್ತವ್ಯವು.

ಮಕ್ಕಳು ಗ್ರಹಿಸಿದ ಅಂಶಗಳು ಅವರ ಮನಸ್ಸಿನಲ್ಲಿ ನೆಲೆಗೊಂಡು, ಜ್ಞಾನದಲ್ಲಿ ಒಂದು ಭಾಗವಾಗಿ ಏರ್ಪಡುವಂತೆ ಈ ಅಂಶಕ್ಕೆ ಸಂಬಂಧಿಸಿದ ಇನ್ನೂ ಕೆಲವು ಇತರ ವಿಷಯಗಳ ಮೂಲಕವಾಗಿ ಅವರು ತಿಳಿಯುವಂತೆ ಮಾಡತಕ್ಕುದು. ಹೀಗೆ ಮೊದಲಿನ ಅಂಶಗಳನ್ನು ಹುಡುಗರು ಸಂತೋಷದಿಂದ ಗ್ರಹಿಸುತ್ತ, ತರುವಾಯ ಅವುಗಳನ್ನೇ ಇತರ ಸಂಬಂಧಮಾರ್ಗಗಳಿಂದ ತಮ್ಮ ಮನಸ್ಸಿನಲ್ಲಿ ಮರಿಯದೆ ಇಟ್ಟುಕೊಳ್ಳುವಂತೆ ಮಾಡತಕ್ಕದ್ದು. ಈ ಪದ್ಧತಿಯನ್ನು ನಿರೂಪಿಸಲಿಕ್ಕೆ ಕೆಲವು ದೃಷ್ಟಾಂತಗಳನ್ನು ಕೊಡಬಹುದು. ಪ್ರಕೃತಿವಿಮರ್ಶೆಯ ಪಾಠಗಳು (Nature Study) ಭೂಗೋಳದ ಪಾಠಗಳು, ಚರಿತ್ರೆಯ ಪಾಠಗಳು, ಮುಂತಾದುವುಗಳನ್ನು ಬಾಲ ಪಾಠಶಾಲೆಗಳಲ್ಲಿ ಕಲಿಸುವರಷ್ಟೆ? ಬೋಧಕರು ಇವುಗಳನ್ನು ಹೇಗೆ ಕಲಿಸುವರು? ಇವುಗಳನ್ನು ಬೇರೆಬೇರೆ ಕಲಿಸುವರೇ ಹೊರತು ಒಂದೊಂದಕ್ಕೆ ಸಂಬಂಧಪಟ್ಟ ಇತರ ಮಾರ್ಗಗಳನ್ನು ಕಂಡುಹಿಡಿದು, ಅವುಗಳ ಮೂಲಕ ಮಕ್ಕಳೇ ವಿಷಯಗಳನ್ನು ಗ್ರಹಿಸಿ, ನಿಜವಾದ ಜ್ಞಾನವನ್ನು ಸಂಪಾದಿಸಿಕೊಳ್ಳಲಿಕ್ಕೆ ಅವಕಾಶವನ್ನುಂಟು ಮಾಡಿಕೊಂಡರು.

ಪ್ರಕೃತಿವಿಮರ್ಶೆಯ ಪಾಠಗಳನ್ನು ಬೋಧಿಸುವಾಗ ಅವುಗಳನ್ನು ಅನೇಕ ವಿಧವಾಗಿ ತಿಳಿಸಬಹುದು, ಕಲಿಸಲ್ಪಟ್ಟ ವಸ್ತುಗಳನ್ನು ಮಣ್ಣಿನಿಂದ ಮಾಡಿಸುವುದು; ಆ ವಸ್ತುವಿನ ಚಿತ್ರವನ್ನು, ಸೀಮೆಯ ಸುಣ್ಣದಿಂದಲಾಗಲಿ, ಕುಂಚದಿಂದಲಾಗಲಿ ಬರಿಯಿಸುವುದು; ಅದರ ಆಕೃತಿಯನ್ನು ಸುಲಭವಾಗಿ ಮತ್ತಾವವಿಧದಿಂದಲಾದರೂ ನಿರೂಪಿಸುವುದು; ಅದನ್ನೇ ಕುರಿತು ಸಂಭಾಷಣೆಯನ್ನು ಸಣ್ಣ ಸಣ್ಣ ವಾಕ್ಯಗಳಿಂದ ಬರೆಯಿಸವುದು; ಆ ಸಂಭಾಷಣೆಯಲ್ಲಿ ವ್ಯಾಕರಣದ ಮುಖ್ಯವಿಷಯಗಳನ್ನು ಆಗಾಗ್ಗೆ ಕಲಿಸುವುದು; ಹೊಸದಾಗಿ ಕಲಿಸಲ್ಪಟ್ಟ ಅಂಶಗಳು ಮರಿಯದಂತೆ ಅಭಿನಯಿಸಿ ತೋರಿಸಲು ತಕ್ಕ ಆಟಪಾಟಗಳನ್ನು ಕಲ್ಪಿಸುವುದು. ಈ ಮೊದಲಾದ ಕ್ರಮಗಳೇ ಸಂಬಂಧಮಾರ್ಗಗಳೆನಿಸುವುವು.

ಇನ್ನೊಂದು ನಿದರ್ಶನವನ್ನು ಕೊಡೋಣ.—ಮೇಲಿನ ಇಯತ್ತೆಗಳಲ್ಲಿ ಭೂಗೋಳದ ಪಾಠವನ್ನು ಕಲಿಸುವಾಗ ಅಂಶಗಳನ್ನು ಮಾತ್ರ ಹೇಳಿಸಿಬಿಡುವುದು ರೂ

ಥಿಯಾಗಿದೆ. ಇದು ದೊಡ್ಡ ತಪ್ಪೆನಿಸುವುದು. ಯೂರೋಪ್ ಖಂಡದಲ್ಲಿ ಹಾಲೆಂಡ್ ಎಂಬ ದೇಶವಿರುವುದಷ್ಟೆ? ಇದನ್ನು ಕುರಿತು ಪಾಠಕಲಿಸುವಾಗ ಅಂಶಗಳನ್ನು ಕಲಿಸಿದ ಕೂಡಲೇ ಕೆಲವು ಸಂಬಂಧ ಮಾರ್ಗಗಳಿಂದ ಆ ದೇಶದ ವಿಷಯವಾದ ಜ್ಞಾನವನ್ನು ಒಲಪಡಿಸಿ ನೆಲೆಗೊಳಿಸಬಹುದು, ಆ ದೇಶದಲ್ಲಿ ಬಹಳವಾಗಿ ಉಪಯೋಗಿಸುವ ಗಾಳಿಯ ಯಂತ್ರ (Wind-mills) ಗಳ ಪಾಠಗಳನ್ನು ಬರೆಯಿಸುವುದು; ಆ ದೇಶದ ಪ್ರಕೃತಸ್ಥಿತಿಗೆ ಕಾರಣವಾದ ಚರಿತ್ರೆಯ ಅಂಶಗಳನ್ನು ಬೋಧಿಸುವುದು; ಆ ದೇಶದಲ್ಲಿ ಪ್ರಸಿದ್ಧವಾದ ಹೂವುಗಳ ಚಿತ್ರಗಳನ್ನು ಬರಿಯಿಸುವುದು, ಆ ದೇಶದಲ್ಲಿ ಬಳಕೆಯಲ್ಲಿರುವ ಹಣ, ತೂಕ, ಅಳತೆಗಳನ್ನು ತಿಳಿಸಿ ನಮ್ಮ ದೇಶದವುಗಳಿಗೂ ಆ ದೇಶದವುಗಳಿಗೂ ಇರುವ ಭೇದಗಳನ್ನು ತೋರಿಸಿ, ಆ ಮೂಲಕ ಗಣಿತದ ಅಭ್ಯಾಸ ಮಾಡಿಸುವುದು; ಆ ದೇಶವು ಸಮುದ್ರಮಟ್ಟಕ್ಕಿಂತ ತಗ್ಗಿನಲ್ಲಿರುವುದರಿಂದ ಸಮುದ್ರವು ದೇಶದೊಳಕ್ಕೆ ನುಗ್ಗಿ ಬಾರದಂತೆ ಹಾಕಿಕೊಂಡಿರುವ ಏರಿ (dykes) ಗಳನ್ನು ಕುರಿತು ಸಣ್ಣಸಣ್ಣ ಉಪನ್ಯಾಸಗಳನ್ನು ಬರಿಯಿಸುವುದು, ಇವುಗಳೆಲ್ಲ ಪರಸ್ಪರ ಸಂಬಂಧವುಳ್ಳ ಬೋಧನಕ್ರಮಗಳು. ಇಂತಹ ಸಂಬಂಧ ಬೋಧನಕ್ರಮದ ಪ್ರಯೋಜನಗಳು.

1. ಯಾವುದಾದರೂ ಒಂದು ವಿಷಯವನ್ನು ತೆಗೆದುಕೊಂಡರೆ ಅದಕ್ಕೆ ಸಂಬಂಧಪಟ್ಟ ಎಲ್ಲ ಅಂಶಗಳನ್ನೂ ಸವಿಸ್ತಾರವಾಗಿ ಬೋಧಿಸಬಹುದು.

2. ಒಂದೊಂದು ವಿಷಯವು ಹಲವು ಮಾರ್ಗಗಳಿಂದ ಬೋಧಿಸಲ್ಪಡುವುದರಿಂದ ಅದರ ಅಂಶಗಳೆಲ್ಲ ಪೂರ್ಣವಾಗಿ ಗ್ರಹಿಸಲ್ಪಡುವುವು.

3. ಪ್ರತಿಕಾರ್ಯವೂ ಅದಕ್ಕೆ ತಕ್ಕ ಕಾರಣಗಳಿಂದ ಸಂಬಂಧಿಸಲ್ಪಡುವುದರಿಂದ ಕಾರ್ಯಕಾರಣಜ್ಞಾನ ಹೆಚ್ಚುವುದು, ಈ ಕ್ರಮವು ಬಾಲ್ಯದಲ್ಲಿಯೇ ಅಭ್ಯಾಸಕ್ಕೆ ಬಂದರೆ ಕುರುಡುಪಾಠ ಮಾಡುವ ಪದ್ಧತಿ ತಪ್ಪಿ, ಹುಡುಗರ ಬುದ್ಧಿ ವಿಕಾಸವಾಗಲು ಅವಕಾಶವುಂಟಾಗುವುದು.

4. ಬೋಧನವಿಷಯದ ಕಾರ್ಯಗಳು ಹುಡುಗರಿಂದಲೇ ಮಾಡಿಸಲ್ಪಡುವುದರಿಂದ ಅವರ ಮನಸ್ಸಿಗೆ ಸಂತೋಷವೂ, ಜ್ಞಾನಕ್ಕೆ ಪ್ರಕಾಶವೂ, ಕಣ್ಣಿಗೆ ಸೂಕ್ಷ್ಮವಸ್ತುಗಳನ್ನು ಪರೀಕ್ಷಿಸುವ ಶಕ್ತಿಯೂ, ಕೈಗಳಿಗೆ ನಿಪುಣತ್ವವೂ ಉಂಟಾಗುವುವು.

K. R.

॥ ಮಾತಾಪಿತೃಭಕ್ತಿ ॥

॥ ಇಂಗ್ಲೀಷ್ ನೋಟ್. ॥ (ಸೇರುತೆ ಬೇಡುವನಾವೆಲ್ಲ)

ತರಳರ್ಕಳೆ ನೀವಾಲಿಪುದು । ಭರದಿಂದಾಪರಿ ವರ್ತಿಪುದು ॥ಪ॥
ಬೆಳಗಾಗುತ ನೀವೇಳುತ್ತಂ । ಜಳಜನಯನ ನಡಿನೆನೆಯುತ್ತಂ ॥
ಜಳದಿಂ ಮೊಗಮಂ ತೊಳೆವುತ್ತಂ ।ವಿಳಸದ್ಭಾವದೊಳನವರತಂ ॥೧॥
ಜನನೀಜನಕರ್ಗಭಿನಮಿಸಿ । ಜನನುತಗುಣಿಗಳ್ ನೀವೆನಿಸಿ ॥
ಮಾನಿತಗುರುವರ್ಯರ ನಮಿಸಿ । ಮಾನ್ಯರ ಸಂಗವ ಘಳಿಸುವುದು ॥೨॥
ಜನನೀಜನಕರೆ ಗುರುದೈವಂ । ಜನನೀ ಜನಕರೆ ಸರ್ವಸ್ವಂ ॥
ಜನನೀಜನಕರ ರಕ್ಷಿಸುವರ್ । ಜನನೀಜನಕರ್ಗಭಿನಮಿಸೈ ॥೩॥
ಜನನೀಜನಕರ ಪೊಲ್ಧರೆಯೊಳ್ । ಘನದಿಂ ಮಾನ್ಯರದಾರಿರ್ಪರ್ ॥
ಶ್ರೀನವಮೋಹನ ನೀರೂಪಿಂ । ಧ್ಯಾನಿಸೆವರ್ತಿಪ ನನವರತಂ ॥೪॥
ಸುಗುಣಗಣಾನ್ವಿತ ರಾಗುತ್ತಂ । ಭಗವತ್ಕೃಪೆಯುಂ ಪೊಂದುತ್ತಂ ॥
ಸೊಗದಿಂವರ್ತಿಪ ತೆರದಿಂದಂ । ಸುಗುಣೋತ್ತಂಸನ ಭಜಿಸುವುದು ॥೫॥

॥ ಮಕ್ಕಳಿಗೆ ನಲ್ನುಡಿ ॥

॥ರಾಗ—ಶಹನ; ಅಟತಾಳ। (ಭಾಸುರಮಾದುದು ಜೀಸಿಗೆದಿನಗಳು)

ಶ್ರೀವರನಡಿಯುಂ । ಭಾವದೆನಿರುತಂ ॥ ಭಾವಿಸಿ ಜಾಳಿಸಂ । ಭಾವಿತಗುಣರೇ ॥
॥ ಪ ॥ ಮಕ್ಕಳಿರಾನೀ । ವಕ್ಕರೆಯಿಂದಂ ॥ ಅಕ್ಕರಬಿಜ್ಜೆಯ । ನಿಕ್ಕದಿಕಲಿವುದು ॥೧॥
ಪೆತ್ತವರಂ ಸಲ । ಪುತ್ತೆ ನಿರುತಮುಂ ॥ ಉತ್ತಮರೆನಿಸುತೆ । ವಿತ್ತವಘಳಿಪುದು ॥೨॥
ಪುಸಿಯನು ನುಡಿಯದೆ । ನುಸುಳದೆ ಕಜ್ಜದೋ ॥ ಳೆಸೆವುದುಬೋಕದೆ । ವಸುಜಯು
ಯುತರೇ ॥೩॥ ಒಡನಾಡಿಗರೊಳು । ಇಡುತಲಿ ದಯೆಯುಂ ॥ ಜಡೆಮುಡಿ ಹಿಡಿಯದೆ ।
ಸಡಗರವಳಿದು ॥೪॥ ದಿನದಿನಮುಂ ಸಂ । ಜನಿಸುವ ಕೊ್ರಧಮುಂ ॥ ಅನುನಯದಿಂ
ಬಿಡಿ । ಜನನುತಗುಣರೇ ॥೫॥ ನಿಮ್ಮಯಗುಣದಿಂ । ಸಮ್ಮತವಾಗಿಹ ॥ ಸಮ್ಯಗ್ವ
ರ್ತ್ತನೆ । ಯಿಂ ಮೆರೆದವುದು ॥೬॥ ಗುರುವರರೊರೆದಾ । ಪರಿಯೊಳು ನಡೆದಾ ॥ ದ
ದೊಳುವರ್ತಿಪಂ । ತಿರುವುದು ಜಗದೊಳ್ ॥೭॥ ಧರೆಯೊಳು ಪೆತ್ತವರ್ । ಗುರುವ
ರುಂ ನಿರಂ ॥ ತರವಾರಾಧ್ಯರ್ । ತರಳನೆ ಕೇಳ್ದೈ ॥೮॥ ಮಾಲಿಕ ಪುರಿಯೊಳ್ ! ಲಿ
ಲೆಯಂ ಮೆರೆವಾ ॥ ಶ್ರೀಲಲನಾವರ । ನೊಲಿವುತೆ ಪೊರೆವಂ ॥೯॥

M. N. S.

ವಿದ್ಯಾದಾಯಿನಿ.

(A MONTHLY JOURNAL)

ಭಾಗ ೧೬.] ಸೆಪ್ಟಂಬರ್—೧೯೦೮. [ಸಂಚಿಕೆ ೯

ಋತುಗಳು.

ಪ್ರತಿವರ್ಷದಲ್ಲೂ ವಸಂತಋತು, ಗ್ರೀಷ್ಮಋತು, ಈ ಕ್ರಮದಲ್ಲಿ ಋತುಗಳು ಒಂದಾಗುತಲು ಇನ್ನೊಂದು ಕ್ರಮವಾಗಿ ಬರುತಿರುವುದರಿಂದ ಇವು ನಮಗೆ ಆಶ್ಚರ್ಯ ಅಥವಾ ಔತ್ಸುಕ್ಯವನ್ನುಂಟುಮಾಡದಷ್ಟು ಬಳಕೆಯಾಗಿರುವುವು. ಇವು ಕ್ರಮವಾಗಿ ಬಾರದಿದ್ದರೆ ಮಾತ್ರ ಆಶ್ಚರ್ಯವಾಗುವುದು. ವರ್ಷದಲ್ಲೆಲ್ಲ ಋತು ಧರ್ಮವು ಏಕೆ ಒಂದೇವಿಧವಾಗಿ ಇರಬಾರದಿತ್ತು? ಈಗ ಉಂಟಾಗುತಲಿರುವ ಋತುಭೇದಕ್ಕೆ ಕಾರಣವೇನು? ಈ ವಿಧವಾದ ಅಂಶಗಳನ್ನು ಅನೇಕರು ಗಮನಿಸುವುದೇ ಇಲ್ಲ. ವರ್ಷೇವರ್ಷೇ ಉಂಟಾಗುತಲಿರುವ ಈ ಋತುಭೇದಕ್ಕೆ ಕಾರಣವೇನೆಂಬುದನ್ನು ಸ್ವಲ್ಪಮಟ್ಟಿಗೆ ವಿವರಿಸುವುದು ಪ್ರಕೃತದಲ್ಲಿ ನಮ್ಮ ಉದ್ದೇಶವಾಗಿರುವುದು. ವರ್ಷದಲ್ಲಿ ವಸಂತ ಮೊದಲಾದ ಆರು ಋತುಗಳಿರುವುವೆಂದು ನಾವು ಭಾವಿಸಿರುವೆವು. ಪಾಶ್ಚಾತ್ಯರಾಜ್ಯಗಳಲ್ಲಿರುವವರು ವರ್ಷದಲ್ಲಿ ವಸಂತಋತು, ಗ್ರೀಷ್ಮರ್ತು, ಶರದೃತು, ಹಿಮಂತಋತು ಈ ನಾಲ್ಕು ಋತುಗಳಿರುವುವೆಂದು ಭಾವಿಸಿರುವರು. ವಸ್ತುತಃ ವರ್ಷದಲ್ಲಿ ಬೇಸಿಗೆ, ಮಳೆಗಾಲ, ಚಳಿಗಾಲವೆಂಬ ಮುಖ್ಯವಾದ ಮೂರೇ ಋತುಗಳಿರುವುವು. ಇವುಗಳಲ್ಲೂ ಮಳೆಗಾಲವು ಬೇಸಿಗೆಯಭಾಗವಾದುದರಿಂದ ವರ್ಷದಲ್ಲಿ ಮುಖ್ಯವಾಗಿ ಎರಡೇ ಋತುಗಳಾಗುವುವು. ನಾವು ಈ ಎರಡುವಿಧವಾದ ಋತುಭೇದಕ್ಕೆ ಕಾರಣವನ್ನು ತಿಳಿಯಬೇಕಾಗುವುದು.

ಭೂಮಿಯು ದಕ್ಷಿಣೋತ್ತರ ಭಾಗಗಳಲ್ಲಿ ಸ್ವಲ್ಪ ಚಪ್ಪಟೆಯಾದ ಗೋಳನಾಗಿ

ರುವುದೆಂದು ಶಾಸ್ತ್ರಜ್ಞರು ನಿರ್ಣಯಿಸಿರುವರು. ಬುಗುರಿಯು ಮಧ್ಯದಲ್ಲಿರುವ ಕಡ್ಡಿಯಂತೆ ಈ ಗೋಳದ ಮಧ್ಯದಲ್ಲಿ ಎಳೆಯುಲ್ಪಟ್ಟಿದೆ ಎಂದು ಭಾವಿಸಬಹುದಾದ ರೇಖೆಗೆ ಅಕ್ಷವೆಂಬ ಹೆಸರನ್ನಿಟ್ಟಿರುವರು. ಬುಗುರಿಯು ಮಧ್ಯದಲ್ಲಿರುವ ಕಡ್ಡಿಯ ಸುತ್ತಲೂ ಸುತ್ತುವಂತೆ ಭೂಮಿಯು ತನ್ನ ಅಕ್ಷದ ಸುತ್ತಲೂ ಒಂದಾವೃತ್ತಿ ತಿರುಗುವುದರಿಂದ ಅಹೋರಾತ್ರಿಗಳಾಗುವುವು. ಮತ್ತು ಇದು ತನ್ನ ಅಕ್ಷದ ಸುತ್ತಲೂ ಈರೀತಿಯಲ್ಲಿ ಸುತ್ತುತ ಸೂರ್ಯನನ್ನು ಒಂದು ಪ್ರದಕ್ಷಣೆ ಮಾಡಿದರೆ ಒಂದು ಸೌರವತ್ಸರವಾಗುವುದು. ಭೂಗೋಳವು ಸೂರ್ಯನನ್ನು ಪ್ರದಕ್ಷಿಣೆ ಮಾಡುವ ಮಾರ್ಗಕ್ಕೆ ಭೂಪಥ ಅಥವಾ ಭೂಕಕ್ಷ್ಯವೆಂದು ಹೆಸರು.

ಭೂಗೋಳವು ತನ್ನ ಪಥದಮೇಲೆ ಸುತ್ತುತಿರುವಾಗ, ಆ ಪಥದಮೇಲೆ ಅದು ನೇರವಾಗಿ ನಿಂತಿದ್ದರೆ ಸೂರ್ಯರಶ್ಮಿಯು ಭೂಮಿಯಮೇಲೆ ಎಲ್ಲಾ ಕಡೆಗೂ ಆಯಾ ಸ್ಥಳಕ್ಕೆ ತಕ್ಕಂತೆ ಒಂದೇವಿಧವಾಗಿ ಯಾವಾಗಲೂ ಬೀಳುತಿದ್ದುದರಿಂದ ಋತುಭೇದಗಳುಂಟಾಗಲು ಕಾರಣವೇ ಇರುತಿರಲಿಲ್ಲ. ಪ್ರತಿಯೊಂದು ಸ್ಥಳದಲ್ಲೂ ವರ್ಷದಲ್ಲೆಲ್ಲ ಒಂದೇವಿಧವಾದ ಋತುಧರ್ಮವಿರುತಿತ್ತು.

ಆದರೆ ಭೂಮಿಯು ತನ್ನ ಪಥದ ಮೇಲೆ ನೇರವಾಗಿ ನಿಂತಿಲ್ಲ. ಓರೆಯಾಗಿ ನಿಂತಿರುವುದು. ಹೀಗಿರುವುದರಿಂದ ಉತ್ತರ ಮೇರುವು ಸೂರ್ಯಾಭಿಮುಖವಾಗಿ ಅದರ ಸವಿಾಪದಲ್ಲಿ ಸೂರ್ಯರಶ್ಮಿಗಳು ಬಿದ್ದಾಗ ದಕ್ಷಿಣಮೇರುವು ಸೂರ್ಯನಿಗೆ ವಿಮುಖವಾಗುವುದರಿಂದ ಅದರ ಸವಿಾಪದಲ್ಲಿ ರಶ್ಮಿಗಳು ಬೀಳುವುದಿಲ್ಲ. ಈ ಕಾಲದಲ್ಲಿ ಸೂರ್ಯರಶ್ಮಿಗಳು ಉತ್ತರಗೋಳದಲ್ಲಿರುವ ಪ್ರದೇಶಗಳಮೇಲೆ ನೆಟ್ಟಗೆ ಅಥವಾ ಸ್ವಲ್ಪ ಓರೆಯಾಗಿ ಬೀಳುವುವು. ದಕ್ಷಿಣಗೋಳದಲ್ಲಿರುವ ಪ್ರದೇಶಗಳಮೇಲೆ ಓರೆಯಾಗಿಯೇ ಬೀಳುವುವು. ನೆಟ್ಟಗೆ ಬೀಳುವ ರಶ್ಮಿಗಳಿಗಿಂತಲೂ ಓರೆಯಾಗಿ ಬೀಳುವ ರಶ್ಮಿಗಳು ಹೆಚ್ಚು ಸ್ಥಳವನ್ನು ಆಕ್ರಮಿಸುವುವು. ಈ ಓರೆಯಾಗಿ ಬೀಳುವ ರಶ್ಮಿಗಳಿಂದ ಬರುವ ಉಷ್ಣಾಂಶವು ಹೆಚ್ಚು ವಿಸ್ತೀರ್ಣವುಳ್ಳ ಪ್ರದೇಶದಮೇಲೆ ಹರಡಿಕೊಳ್ಳುವುದರಿಂದ ಕಡಿಮೆಯಾಗಿ ಕಾಣುವುದು. (ಈಕಾರಣದಿಂದಲೇ ಬೆಳಿಗ್ಗೆ ಅಥವಾ ಸಾಯಂಕಾಲದಲ್ಲಿ ಸೂರ್ಯನು ನಮಗೆ ಅಷ್ಟು ತೀಕ್ಷ್ಣವಾಗಿ ಕಾಣಿಸುವುದಿಲ್ಲ.) ಆದುದರಿಂದ ಈ ಕಾಲದಲ್ಲಿ ಉತ್ತರಾರ್ಧಗೋಳಕ್ಕಿಂತಲೂ ದಕ್ಷಿಣಾರ್ಧಗೋಳದಲ್ಲಿ ಬಿಸಲಿನ ತಾಪವು ಕಡಿಮೆಯಾಗುವುದು. ಮೇಲಾಗಿ ಓರೆಯಾಗಿ ಬೀಳುವ ರಶ್ಮಿಗಳು ನೆಟ್ಟಗೆ ಬೀಳುವ ರಶ್ಮಿಗಳಿಗಿಂತಲೂ ವಾಯುಮಂಡಲದಲ್ಲಿ ಹೆಚ್ಚುದೂರ ಹೋಗು

ವುದರಿಂದ ಈ ಮಂಡಲವು ಅವುಗಳಿಂದ ಬರುವ ಉಷ್ಣಾಂಶದ ಹೆಚ್ಚು ಭಾಗವನ್ನು ಪೀರುವುದು. ಇದರಿಂದಲೂ ದಕ್ಷಿಣಾರ್ಧಗೋಳದಮೇಲೆ ಬೀಳುವ ಸೂರ್ಯನ ಉಷ್ಣಪ್ರಮಾಣವು ಉತ್ತರಾರ್ಧಗೋಳದಮೇಲೆ ಬೀಳುವ ಪ್ರಮಾಣಕ್ಕಿಂತಲೂ ಕಡಿಮೆಯಾಗುವುದು.

ಅಲ್ಲದೆ ಈ ಕಾಲದಲ್ಲಿ ಉತ್ತರಾರ್ಧಗೋಳದಲ್ಲಿ ಅಹಃಪ್ರಮಾಣವೂ ಹೆಚ್ಚಾಗಿರುವುದು. ಈಯಂಶವು ಮುಂದಿನ ನಿದರ್ಶನದಿಂದ ಸ್ಪಷ್ಟಪಡುವುದು. AB, DE ಎಂಬ ಎರಡು ರೇಖೆಗಳು ವಿಷುವದ್ರೇಖೆಗೆ ಸಮದೂರದಲ್ಲಿ ಉತ್ತರಾರ್ಧ ದಕ್ಷಿಣಾರ್ಧಗೋಳಗಳಲ್ಲಿರುವುವೆಂದು ಭಾವಿಸೋಣ AB ರೇಖೆಯುಲ್ಲಿ ಸೂರ್ಯಾಭಿಮುಖವಾದ AC ಭಾಗವು ಒಟ್ಟು ರೇಖೆಯ $\frac{7}{10}$ ಭಾಗವಾಗಿರಲಿ. ಈ AB ರೇಖೆಯು ಮೇಲಿರುವ ಪ್ರತಿಯೊಂದು ಪ್ರದೇಶಕ್ಕೂ ಅಹಸ್ಸು $24 \times \frac{7}{10}$ ಅಥವಾ 16 ಘಂ. 48 ನಿಮಿಷಗಳ ಪ್ರಮಾಣವುಳ್ಳದ್ದಾಗುವುದು; ರಾತ್ರಿಯು ಉಳಿದ 7 ಘ. 12 ನಿಮಿಷಗಳ ಪ್ರಮಾಣವುಳ್ಳದ್ದಾಗುವುದು. ಈ ಕಾಲದಲ್ಲಿ DE ರೇಖೆಯು ಮೇಲಿರುವ ಪ್ರತಿಯೊಂದು ಪ್ರದೇಶಕ್ಕೂ 7ಘಂ. 12 ನಿಮಿಷ ಅಹಸ್ಸೂ, 16ಘಂ. 48 ನಿಮಿಷದ ರಾತ್ರಿಯೂ ಆಗುವುವು. ಈ ರೀತಿಯಲ್ಲಿ ಉತ್ತರಾರ್ಧಗೋಳವು ಸೂರ್ಯಾಭಿಮುಖವಾಗಿರುವಾಗ ಅಲ್ಲಿರುವ ಪ್ರದೇಶಗಳಿಗೆ ದಕ್ಷಿಣಾರ್ಧಗೋಳದಲ್ಲಿರುವ ಪ್ರದೇಶಗಳಿಗಿಂತಲೂ ಅಹಃಪ್ರಮಾಣವು ಅಧಿಕವಾಗುವುದು. ಆದುದರಿಂದ ಈ ಕಾಲದಲ್ಲಿ ಸೂರ್ಯನಿಂದ ಬರುವ ಉಷ್ಣಾಂಶದ ಹೆಚ್ಚು ಭಾಗವನ್ನು ಉತ್ತರಾರ್ಧಗೋಳವೂ, ಕಡಿಮೆಯಾದ ಭಾಗವನ್ನು ದಕ್ಷಿಣಾರ್ಧಗೋಳವೂ ಸ್ವೀಕರಿಸುವುವು.

ಈ ಕಾರಣಗಳಿಂದ ಉತ್ತರಾರ್ಧಗೋಳದಲ್ಲಿ ಬೇಸಿಗೆಯಾಗಿರುವಾಗ ದಕ್ಷಿಣಾರ್ಧಗೋಳದಲ್ಲಿ ಚಳಿಗಾಲವಾಗುವುದು.

ಇನ್ನಾರುತಿಂಗಳಾದಮೇಲೆ ಭೂಮಿಯು ತನ್ನ ಪಥದಲ್ಲಿ ತಾನಿದ್ದ ಸ್ಥಳದ ಅಭಿಮುಖಸ್ಥಾನಕ್ಕೆ ಬರುವುದು ಮತ್ತು ಇದರ ಅಕ್ಷವು ಆಕಾಶದಲ್ಲಿ ಯಾವಾಗಲೂ ಒಂದೇಕಡೆಯನ್ನು (ಧ್ರುವನಕ್ಷತ್ರದ ಕಡೆಯನ್ನು) ತೋರಿಸುವುದು. ಈ ಕಾರಣಗಳಿಂದ ಮೊದಲಿನ ಸ್ಥಾನಕ್ಕೆ ಅಭಿಮುಖವಾದ ಪ್ರದೇಶಕ್ಕೆ ಭೂಮಿಯು ಬಂದಾಗ ಅದರ ದಕ್ಷಿಣಮೇರುವು ಸೂರ್ಯಾಭಿಮುಖವಾಗಿ ಉತ್ತರಮೇರುವು ಸೂರ್ಯವಿಮುಖವಾಗುವುದು.

ಆಗ ಈ ಗೋಳಾರ್ಧಗಳು ಋತುಧರ್ಮವನ್ನು ಪರಸ್ಪರ ವಿನಿಮಯಮಾಡಿಕೊಳ್ಳುವುವು. ಒಂದು ವರ್ಷವಾದಮೇಲೆ ಮೊದಲಿದ್ದ ಸ್ಥಾನಕ್ಕೆ ಭೂಮಿಯು ಬರುವುದರಿಂದ ಹಿಂದಿನಂತೆಯೇ ಋತುಧರ್ಮವುಂಟಾಗುವುದು.

ಈ ರೀತಿಯಲ್ಲಿ ಭೂಮ್ಯಕ್ಷವು ಭೂಪಥಕ್ಕೆ ಲಂಬವಾಗಿರದೆ ಓರೆಯಾಗಿರುವುದರಿಂದಲೂ, ಈ ಅಕ್ಷವು ಆಕಾಶದಲ್ಲಿ ಸದಾ ಒಂದೇಕಡೆಯನ್ನು ತೋರಿಸುವುದರಿಂದಲೂ, ಮತ್ತು ಭೂಮಿಯು ಸೂರ್ಯನನ್ನು ಪ್ರದಕ್ಷಿಣೆ ಮಾಡುವುದರಿಂದಲೂ ಋತುಭೇದಗಳುಂಟಾಗುವುವು.

ಈಗ ನಡೆಯುತಿರುವ ಋತುಧರ್ಮದಲ್ಲಿ ಮತ್ತೊಂದು ವಿಶೇಷಾಂಶವು ಕಂಡುಬರುವುದು. ನೂರಾರು ವರ್ಷಗಳ ಹಿಂದೆ ಯಾವಯಾವ ಕಾಲದಲ್ಲಿ ಯಾವ ಯಾವ ಋತುಧರ್ಮವು ಕಾಣುತಿತ್ತೋ ಆ ಕಾಲವು ಈಗ ಸ್ವಲ್ಪ ವ್ಯತ್ಯಸ್ತವಾಗಿರುವುದು. ಚೈತ್ರಮಾಸದ ಋತುಧರ್ಮವು ಈಗ ಫಾಲ್ಗುಣಮಾಸದಲ್ಲಿ ಕಾಣಿಸುವುದು ಮತ್ತು ಈ ಕ್ರಮದಲ್ಲೇ ಎಲ್ಲಾ ಋತುಗಳೂ ಸುಮಾರು ಒಂದೊಂದು ತಿಂಗಳು ಮುಂಚಿತವಾಗಿ ಬರುವುವು. ಮುಂದೆ ವಿವರಿಸಿರುವ ಅಂಶವು ಇದಕ್ಕೆ ಕಾರಣವಾಗಿರುವುದು. ಬುಗರಿಯು ಆಡುವಾಗ ಅದರ ಕಡ್ಡಿಯು ಒಂದೊಂದುಸಲ ಓಲಾಡುವಂತೆ ಭೂಮಿಯ ಅಕ್ಷವು ಸದಾ ಆಕಾಶದಲ್ಲಿ ಓಲಾಡುತಿರುವುದು. ಅಕ್ಷವು ಹೀಗೆ ಓಲಾಡುತಿರುವಾಗ ಆಕಾಶದಲ್ಲಿ ಅದರಮೇಲಿರುವ ಬಿಂದುವು ಎಲಿಪ್ಸ್ ಎಂಬ ವೃತ್ತ ವಿಶೇಷವನ್ನು ರಚಿಸುವುದು. ಮೇಲೆ ಋತುಭೇದಕ್ಕೆ ಕಾರಣವನ್ನು ವಿವರಿಸುವಾಗ ಅಕ್ಷವು ಯಾವಾಗಲೂ ಒಂದೇ ಕಡೆಯನ್ನು ತೋರಿಸುವುದೆಂದು ಹೇಳಿದೆವು. ಸ್ವಲ್ಪಕಾಲವನ್ನು ಅಂದರೆ ನೂರಾರು ವರ್ಷಗಳನ್ನು ತೆಗೆದುಕೊಂಡರೆ ಈ ಅಂಶವು ಸರಿಯಾಗಿರುವುದು. ಸಾವಿರಾರು ವರ್ಷಗಳನ್ನು ತೆಗೆದುಕೊಂಡರೆ ಹೀಗೆ ಹೇಳುವುದು ಸರಿಯಲ್ಲ. ಅಕ್ಷವು ತೋರಿಸುವ ಕಡೆಯು ಕ್ರಮಕ್ರಮವಾಗಿ ವ್ಯತ್ಯಸ್ತವಾಗುವುದು. ಒಂದಾವೃತ್ತಿ ಅಕ್ಷವು ಹೀಗೆ ಓಲಾಡುವುದಕ್ಕೆ 25 ಸಾವಿರ ವರ್ಷಗಳಾಗುವುವು. ಅದುದರಿಂದ ಈಗ ತೋರಿಸುತಿರುವ ಕಡೆಯನ್ನೇ ಪುನಃ ತೋರಿಸಬೇಕಾದರೆ ಇನ್ನು 25 ಸಾವಿರ ವರ್ಷಗಳಾಗುವುವು. ಈ ಓಲಾಟದಿಂದ ವಿಷುವದ್ರೇಖೆಯು ಭೂಪಥದ ಕ್ಷೇತ್ರವನ್ನು ಭೇದಿಸುವ ಸ್ಥಾನಗಳು ಹಿಂದು ಹಿಂದಕ್ಕೆ ಸರಿಯುತಿರುವುವು. ಇದರಿಂದ ವಿಷುವತ್ಕಾಲಗಳೂ, ಅಯನ ಕಾಲಗಳೂ, ಹಿಂದು ಹಿಂದಕ್ಕೆ ಹೋಗುತಿರುವುವು. ನಮ್ಮ ಪಂಚಾಂಗದ ರೀತಿಯಾಗಿ ಮಕರ ಸಂಕ್ರ

ಮಣವು ಜನವರಿ 11, 12 ಆಥವಾ 13 ಕ್ಕೆ ಬರುವುದು, ಆದರೆ ಈ ಸಂಕ್ರಮಣವು ವಸ್ತುತಃ ಡಿಸೆಂಬರ್ 22, 23 ರಲ್ಲೇ ಆಗಿಬಿಡುವುದು. ಆದುದರಿಂದ ಜನವರಿ 12, 13 ರಲ್ಲಿ ಕಾಣುತಿದ್ದ ಋತುಧರ್ಮವು ಈಗ ಡಿಸೆಂಬರ್ 22, 23 ರಲ್ಲೇ ಕಾಣುವುದು. ಈ ರೀತಿಯಲ್ಲಿ ಪ್ರತಿಯೊಂದು ಋತುಧರ್ಮವೂ ವ್ಯಕ್ತವಾಗುವ ಕಾಲವು ಹಿಂದು ಹಿಂದಕ್ಕೆ ಸರಿಯುತ 25 ಸಾವಿರ ವರ್ಷಗಳ ತರುವಾಯ ಪೂರ್ವಸ್ಥಿತಿಗೆ ಬರುವುದು.

ಋತುಭೇದಕ್ಕೆ ಕಾರಣಗಳು ಇಲ್ಲಿ ಸಂಕ್ಷೇಪವಾಗಿ ವಿವರಿಸಲ್ಪಟ್ಟಿರುವುವು. ಕುತೂಹಲವುಳ್ಳವರು ಖಗೋಳಶಾಸ್ತ್ರದಿಂದ ಈ ಕಾರಣಗಳನ್ನು ಇನ್ನೂ ವಿಶೇಷವಾಗಿ ತಿಳಿಯಬಹುದು.

ದನದಮೇವೂ ಚರಾಯಿ.

ಇಂಡಿಯಾ ದೇಶವು ಬಹು ವಿಸ್ತಾರವಾದುದು. ವಿಸ್ತಾರವಾದ ಈ ಭೂಭಾಗದಲ್ಲಿ ಫಲವತ್ತಾದ ಪ್ರದೇಶಗಳು ಅನೇಕವಿರುವುವು. ಜಲವಸತಿಯಿಂದ ತೃಣಕಾಷ್ಠ ಸಮೃದ್ಧಿಯಾದ ಈ ದೇಶದಲ್ಲಿ ವಾಸಮಾಡುತಿದ್ದ ಜನರು ವ್ಯವಸಾಯ ದಾರಿದ್ರ್ಯವೆಂಬದನ್ನು ಕೇಳಿ ಅರಿಯರು. ಇಲ್ಲಿಯ ಜನರಿಗೆ ವ್ಯವಸಾಯ ಮಾರ್ಗವನ್ನು ವೃದ್ಧಿಗೊಳಿಸಬೇಕೆಂಬ ಆತುರವು ಹುಟ್ಟಲಿಲ್ಲ. ಕೃಷಿಗೆ ಸಹಕಾರಿಯಾದ ಗೋಕಾಯಿಗಳಲ್ಲಿ ಭಕ್ತಿ, ವಿಶ್ವಾಸವಿದ್ದರೂ ಅವುಗಳನ್ನು ಸಾಕಲು ವಿಶೇಷ ಶ್ರಮ ಪಡಬೇಕಾದ ಅಗತ್ಯವಿರಲಿಲ್ಲ. ಎಲ್ಲೂ ನೀರು, ಎಲ್ಲೆಲ್ಲೂ ಹುಲ್ಲು ನೆರಳು ಕಾಣಬರುತಿದ್ದುವು.

ಹೀಗೆ ವಸತಿಯಾದ ಈ ಭೂಭಾಗವು ಜನಸಮುದಾಯಕ್ಕೆ ಈಡಾಯಿತು. ಜನಸಂಖ್ಯೆಯು ಹೆಚ್ಚುತಾ ಹೆಚ್ಚುತಾ ವಿಶೇಷ ಫಲವತ್ತಲ್ಲದ ಭೂಭಾಗೆಗಳೆಲ್ಲಾ ಆಕ್ರಮಿಸಲ್ಪಡುತ ಬಂದವು. ಇದರಿಂದ ಗೋಕಾಯಿಗಳಿಗೆ ಮೇವು ಕಡಮೆಯಾಗುವ ಸಂಭವವು ಹೆಚ್ಚಿತು. ಒಳ್ಳೆಯ ಮೇವಿಲ್ಲದೆ ರೋಗವು ಹೆಚ್ಚಿ ದನಕರುಗಳು ವರ್ಷೆವರ್ಷೆ ನಷ್ಟವಾಗುತ್ತಿರುವದು ತಮಗೆಲ್ಲಾ ತಿಳಿದ ವಿಷಯವಾಗಿದೆ.

ಮೇಯಲು ದನಗಳನ್ನು ಅಟ್ಟುವುದಕ್ಕೆ ರೈತರಿಗೆ ಅನುಕೂಲವಾದ ಎಡೆಯಿಲ್ಲವೆಂ ಬುದು ಸುಲಭೋಪಾಯದಿಂದ ನಿವಾರಿಸಿಕೊಳ್ಳಬಹುದಾಗಿರುತ್ತೆ.

ಆದರೆ ಜನರು ದವಸ ಧಾನ್ಯ ಅಥವಾ ಫಲವುಷ್ಪಗಳನ್ನು ಬೆಳೆಯುವುದೇ 'ಆರಂಭ' ವೆಂದು ಸಾಮಾನ್ಯವಾಗಿ ಅರಿತಿರುವರು ಎಂಥಾ ನಿಕೃಷ್ಟವಾದ ಭೂಮಿ ಯಾಗಿದ್ದರೂ, ಗೊಬ್ಬರಗೋಡನ್ನು ಹಾಕಿ, ಬಹು ಶ್ರಮಬಿದ್ದಾದರೂ ನಾಲ್ಕುಕಾಳ ನ್ನು ಬೆಳೆಯಲು ಯತ್ನಿಸುವರು, ಅದಕ್ಕಾಗಿ ದ್ರೋಹಶ್ರಮವೆಷ್ಟೆಂಬುದೇ ಆಗಲಿ ಧನ ವ್ಯಯ ಎಷ್ಟೆಂಬುದಾಗಲಿ ಪರಿಗಣಿಸರು. ಅಷ್ಟು ಶ್ರಮಪಡದೆ, ಅಷ್ಟು ಧನವ್ಯಯ ವಿಲ್ಲದೆ, ಕಾಳಿಲ್ಲದಿದ್ದರೆ ಹುಲ್ಲನ್ನಾದರೂ ಚೆನ್ನಾಗಿ ಬೆಳೆದು, ಧಾನ್ಯಬೆಳೆದು ಪಡೆಯು ವ ಲಾಭಕ್ಕೆ ಇಮ್ಮಡಿಯಾಗಿ ಲಾಭವನ್ನು ಪಡೆಯೋಣವೆಂದು ಯೋಚಿಸರು. ಹುಲ್ಲುಬೆಳೆಯೋಣವೆಂದರೇನು ? ಹುಲ್ಲಿಗೇನು, ಬೇಕಾದಷ್ಟು ಇಲ್ಲವೆ? ಸುತ್ತ ಮುತ್ತಲ ಕಾಡುಮೇಡು ಬಯಲಾದವೆ? ದನಕರುಗಳು ಕಾಲಾಡಿಕೊಂಡು, ಹಾಗೆ ಅಲ್ಲಲ್ಲೆ ಬಾಯಾಡಿಕೊಂಡು ಬಂದರೆ ಸಾಲದೆ? ಭೂಮಿಯನ್ನುತ್ತು ಗೊ ಬ್ಬರಗೋಡನ್ನು ಹಾಕಿ, ಹುಲ್ಲುಬೀಜವನ್ನು ಬಿತ್ತು ಹುಲ್ಲನ್ನು ಬೆಳೆಯುವುದೆಂದರೆ ನಗೆಗೇಡು ಎಂದು ಭಾವಿಸುವರು. ಆದರೆ — ಈ ವಿಷಯವನ್ನು ಚೆನ್ನಾಗಿ ಯೋ ಚಿಸಿದಲ್ಲಿ ಹುಲ್ಲು ಬೆಳೆಯೋಣದರಿಂದ,ದನಕರಗಳಿಗೆ ಒಳ್ಳೆಯ ಮೇವೂ, ಪೈರುಮಾಡಿ ದವನಿಗೆ ವಿಶೇಷ ಲಾಭವೂ ದೊರೆಯುವುದೆಂಬುದರಲ್ಲಿ ಸಂದೇಹವಿಲ್ಲವು. ಮುಖ್ಯ ವಾಗಿ ಒಳ್ಳೆಯ ಜಾತಿ ಹುಲ್ಲನ್ನು ಚೆನ್ನಾಗಿ ಬೆಳಸಿ ದನಗಳಿಗೆ ಕೊಡೋಣದರಿಂದ, ದನಗಳು ಪುಷ್ಟಿಯಾಗಿಯೂ, ವಿಶೇಷ ಕರಾವು ಉಳ್ಳದ್ದಾಗಿಯೂ ಆಗುವವು. ಗಿಡ ಶೀಮೆಗೆ ಸವಿಾಪವಾದ ಗ್ರಾಮಗಳ ರೈತರು, ದನಗಳನ್ನು ಚರಾಯಿಗೋಸ್ಕರ ಗಿಡಕ್ಕೆ ಅಟ್ಟುವರು. ಗಿಡಕ್ಕೆ ಸೇರಿದ ಹುಲ್ಲುಗಾವಲಿನಲ್ಲಿ ಮೇದ ದನಗಳಿಗೆ ಕೈಆರೇಕೆ ಇಲ್ಲದೆ ಕರಾವು ಕಡಮೆಯಾಗುವುದೆಂದೂ, ಮಂದೆಯಲ್ಲಿ ಮೇಯುವುದರಿಂದ, ಸಾಂಕ್ರಾ ಮಿಕರೋಗಕ್ಕೆ ಹೆಚ್ಚಾಗಿ ಈಡಾಗುವುದೆಂದೂ, ಕಾಡಿನಲ್ಲಿ ಬೆಳೆಯುವ ನಾನಾತೆರ ನಾದ ಹುಲ್ಲು, ಸೊಪ್ಪು ಸೆದೆಯನ್ನು ಸ್ವೇಚ್ಛೆಯಾಗಿ ಮೇಯುವುದರಿಂದ ದನಗಳಿಗೆ ಕೇಡೆಂದು—ನಿಶ್ಚೈಸಿ, ಈಚೆಗೆ ದನಗಳನ್ನು ಕಾಡಿಗೆ ಅಟ್ಟುವ ಪದ್ಧತಿಯುನ್ನೆ ಅಮೆ ರಿಕಾ ಮತ್ತು ಯೂರೋಪ್‌ಖಂಡಗಳಲ್ಲಿ ವಿಶೇಷವಾಗಿ ತಪ್ಪಿಸಿರುವರು. ನಮ್ಮ ದೇಶದಲ್ಲಾದರೋ ಜನರು ಈ ವಿಷಯವನ್ನು ತಿಳಿಯದೆ ದನಕರಗಳನ್ನು ಕಾಡಿಗೆ ಅಟ್ಟಿ, ತಾವು ನಷ್ಟಪಡುವುದಲ್ಲದೆ, ಮುಂದೆ ಏಳುವ ಸಸಿಗಳನ್ನೂ ಪೈರುಗಳನ್ನೂ

ಹಾಳುಮಾಡಿ, ಕಾಡನ್ನು ಫ್ರೀಜಾದೆಸೆಗೆ ತರಲು, ತಿಳಿಯದೆ ಯತ್ನಿಸುವರು. ಅಲ್ಲದೆ, ಹುಲ್ಲನ್ನು ಸುಡುವುದರಿಂದ ಹುಲ್ಲು ಮುಂಚೆ ಹುಲುಸಾಗಿ ಏಳುವುದೆಂಬ ಭ್ರಾಂತಿಯಿಂದ, ಹುಲ್ಲುಗಾವಲಿಗೆ ಬೆಂಕಿ ಇಡುವರು. ಇದರಿಂದ ಗಿಡ ಬಹಳ ನಷ್ಟವಾಗುವುದಲ್ಲದೆ, ವರಟಾದ ಹುಲ್ಲು ಹೇರಳವಾಗಿ ಬೆಳೆದು ದನದ ಮೇವಿಗೂ ಕುಂದಕವಾಗುವುದು. ಗಿಡಶೀಮೆಗೆ ಎಲ್ಲಾ ಗ್ರಾಮಗಳೂ ಹೇಗೆ ಸಮೀಪವಾಗಿದ್ದಾವು? ಗಿಡಕ್ಕೆ ದೂರವಾಗಿ ನಾವಿರಾರು ಗ್ರಾಮಗಳು ಇರುವವು. ಈ ಗ್ರಾಮಗಳ ರೈತರ ದನಕರುಗಳು ಮೇವಿಲ್ಲದೆ ತೊಂದರೆ ಪಡುತಿರುವುದೆಂಬುದೂ ಆರಂಬಕೆಲಸಕ್ಕೆ ಅವು ಒದಗದೆಂಬುದೂ ಜನರು ಅರಿಯುದ ವಿಷಯವಲ್ಲ.

ಒಳ್ಳೆಯದಾದ ಹುಲ್ಲನ್ನು ಬೆಳೆಯುವುದಕ್ಕೆ, ಅನುಕೂಲವಾದ ಭೂಮಿಯೂ, ಜಲಸಮತಿಯೂ ಸ್ವಲ್ಪಮಟ್ಟಿಗೆ ಅವಶ್ಯಕವು. ಮುಖ್ಯವಾಗಿ ಮೈಸೂರು ದೇಶದ ಕೆಲಕೆಲಭಾಗದಲ್ಲಿ ಉತ್ಕೃಷ್ಟವಾದ ಗೋಮಾಳವೂ, ಸಾರವತ್ತಾದ ಜಮೀನೂ ಅನೇಕವಿರುವುವೆಂದು ಧಾರಾಳವಾಗಿ ಹೇಳಬಲ್ಲೆನು.

ದನಗಳಿಗೆ ಪುಷ್ಟಿಯಾದ ಮೇವು ಹರಿಯಾಳಿ ಹುಲ್ಲು (ಗರಿಕೆಹುಲ್ಲು). ಇದು ಮೈಸೂರು ದೇಶದಲ್ಲಿ ಹೇರಳವಾಗಿ ಬೆಳೆಯುವುದು. ತಾನಾಗಿ ಸ್ವೇಚ್ಛೆಯಾಗಿ ಬೆಳೆದ ಹುಲ್ಲು—ಒಂದು, ಒಂದೂವರೆ ಅಡಿ ಎತ್ತರವಿರುವುದುಂಟು. ಇದು ಒಳ್ಳೆಯಂತೆ ನೆಲದಮೇಲೆ ಹಬ್ಬಿದಾಗ ನಾಲ್ಕು ಐದು ಅಡಿ ಉದ್ದವಿರುವುದು, ಹೀಗೆ ಹಬ್ಬುತ ಅಲ್ಲಲ್ಲಿಯೇ ಬೇರೂರಲು ಹೊಸಹೊಸ ಬಿಗುರುಗಳು ಹುಟ್ಟಿಕೊಳ್ಳುವವು. ಈ ಜಾತಿಯ ಹುಲ್ಲು ದನಗಳಿಗೆ ಬಹಳ ಒಳ್ಳೆಯದು. ಇದರಲ್ಲಿ ಸೊಗದೆಬೇರಿನಲ್ಲಿರುವ ಔಷಧ ಗುಣವು ತಕ್ಕಮಟ್ಟಿಗೆ ಇರುವುದು. ಈ ಹುಲ್ಲಿನ ವ್ಯವಸಾಯದಿಂದ ಜನರು ವಿಶೇಷ ಪ್ರಯೋಜನವನ್ನು ಪಡೆಯಬಹುದು. ಈ ಹುಲ್ಲನ್ನು ತಿಂದು ಬೆಳೆದ ದನವು ಕಾಯಪುಷ್ಟಿಯಲ್ಲಿ ಪ್ರಸಿದ್ಧಿಗೊಂಡ ದ್ವೀಪಾಂತರ ದನಕ್ಕೆ ಯಾರದಿರದು. ಯಾವತೆರನಾದ ಹುಲ್ಲನ್ನು ಕೊಟ್ಟು ದನವನ್ನು ಸಾಕಿದರೆ ಪ್ರಯೋಜನ ಉಂಟೆಂಬುದನ್ನು ಅನೇಕರು ಅರಿಯರು. ಒಂದುವೇಳೆ ಅರಿತಿದ್ದರೂ, ಅದನ್ನು ಆಚರಣೆಗೆ ತರದೆ ಹಿಮ್ಮೆಟ್ಟುವರು. ನಿಸ್ಸಾರವಾದ ಹುಲ್ಲನ್ನು ತಿಂದು ಬಲಹೀನವಾಗಿ ಕುಗ್ಗಿರುವ ಇಲ್ಲಿಯ ದನಗಳು ಕಾಲಕ್ರಮೇಣ ಬಲಹೀನತೆಯಿಂದ ಕ್ಷಯಿಸಿಹೋಗಬಹುದು. ವ್ಯವಸಾಯಕ್ಕೆ ಅತ್ಯವಶ್ಯವಾದ ದನಗಳನ್ನು ಬಲಹೀನವನ್ನಾಗಿ ಮಾಡೋಣದಿಂದ ರೈತನಿಗೆ ಉಂಟಾಗುವ ಕಷ್ಟವು ಅಷ್ಟಿಷ್ಟೆಂದು ಹೇಳಲಾಗದು.

ಒಂದು ಜೋಡಿ ಸಾಯುಲ ಎತ್ತು ಮೂರು ದಿವಸ ಮಾಡುವ ಕೆಲಸವನ್ನು ಬಲಿಷ್ಠವಾದ ಜೋಡಿಯು ಒಂದು ದಿನದಲ್ಲಿ ಮಾಡಲಾಪುದು. ನಾರವಾದ ಕಾವಲುಗಳುಳ್ಳ ಈ ಮೈಸೂರು ಸೀಮೆಯಲ್ಲಿ ರೈತರು ಕುದುರೆ, ದನ, ಕುರಿ, ಮುಂತಾದವುಗಳನ್ನು ಚೆನ್ನಾಗಿ ಆರೈಕೆ ಮಾಡಿ ಬೆಳಸಿ, ನಾನಾಫಲಗಳನ್ನು ಪಡೆಯದಿರುವುದಕ್ಕೆ ಅವರ ಅವಿಜ್ಞತೆಯೇ ಕಾರಣವೆಂದು ಇಲ್ಲಿ ಭೂ ಇಷ್ಟವನ್ನು ತಿಳಿದ ಒಬ್ಬ ಶಾಸ್ತ್ರಜ್ಞನು ಬರೆದಿರುವನು. ಬಿಸಲುಕಾಲದಲ್ಲಿ ನಿಲ್ಲಲಿಕ್ಕೆ ನೆರಳಿಲ್ಲದೆ ಕುಡಿಯುವುದಕ್ಕೆ ನೀರಿಲ್ಲದೆ, ಹಸಿದು ಬಾಯಾರಿರುವ ಬಡಕಲಾದ ದನದ ಮಂದೆಯನ್ನು ಅಲ್ಲಲ್ಲಿ ಮಿಟ್ಟೆಗಳಲ್ಲೂ ಹಳ್ಳಗಳಲ್ಲೂ, ಬೆಟ್ಟ ಕಿಬ್ಬಿಗಳಲ್ಲೂ ತಡೆಯುವ ಪಾಡಿಕೆಯನ್ನು ಅರಿಯದವರ್ಯಾರು? ಹೀಗೆ ಹಗಲೆಲ್ಲಾ ನೆಲವನ್ನೇ ಕೆತ್ತು ತಿನ್ನಲೆತ್ನಿಸುವ ದನಕರುಗಳು ಸಂಜೆಯಲ್ಲಿ ಹಿಂದಿರುಗಲು, ಒಂದು ಹಿಡಿ ಹುಲ್ಲು ಸಹಾ ಹೆಚ್ಚಾಗಿ ಇಲ್ಲದೆ ನೀರನ್ನು ತೋರಿಸಿ ಕೊಟ್ಟಿಗೆಯಲ್ಲಿ ಸಾಲುಸಾಲಾಗಿ ಬಿಗಿಯುವ ಪದ್ಧತಿಯು ಎಲ್ಲರಿಗೂ ತಿಳಿದ ವಿಷಯವಾಗಿದೆ. ಊರಿ ಬೇಸಗೆಯಲ್ಲಿ ನಾನಾಕಷ್ಟಕ್ಕೆ ಈಡಾಗಿರುವ ದನಗಳಿಗೆ ಹುಲ್ಲನ್ನು ಸೇಖರಿಸಿ ಇಡುವ ಯೋಚನೆಯನ್ನು ಮಾಡಿರುವ ರೈತರು ಎಷ್ಟುಮಂದಿ? ಪಾಶ್ಚಾತ್ಯದೇಶದಲ್ಲಾದರೋ ದನಗಳಿಗೆ ಛಳಿಗಾಲದಲ್ಲಿ ಬಹು ಕಷ್ಟ. ಮಂಜು ಮುಸಕಿ ಹಸಿರೇ ಕಾಣುವುದಿಲ್ಲ. ಛಳಿಯಿಂದ ಗಿಡವೇ ಚಿಗರದು ಕಾಲ್ಮಡಿಗಳೆಲ್ಲಕ್ಕೂ ಬಹು ಕಷ್ಟ. ಆ ಕಾಲಕ್ಕೆ ಬೇಕಾದಷ್ಟು ಆಹಾರವನ್ನು ರೈತರು ಒದಗಿಸಿ ಇಡದಿದ್ದರೆ—ಬಹು ದನಕರುಗಳು ನಷ್ಟವಾಗುವುವು. ಆ ನಷ್ಟಕ್ಕೆ ಗುರಿಯಾಗದೆ ಬಹು ವಿಧವಾಗಿ ಹುಲ್ಲನ್ನು ಸೇಖರಿಸಿದ್ದು—ದನವನ್ನು ಸಾಕುವರು. ನಮ್ಮ ರೈತರಾದರೋ 'ಮಳೆ ಬರಬೇಕು, ಹಸರು ಕಾಣಬೇಕು, ದನ ಮೈಗೂಡಬೇಕು' ಎಂದು ತಟಸ್ಥರಾಗಿ—ಭೂಮಿ ಆಕಾಶವನ್ನು ನೋಡತೊಡಗುವರು. ಈ ದೇಶದ ಭೂ ಇಷ್ಟವು ಬಹು ಫಲವತ್ತಾದುದೆಂದು ನಾನು ಮೊದಲೇ ಹೇಳಿರುವೆನು. ಕಾಲದಲ್ಲಿ ಸ್ವಲ್ಪ ಶ್ರಮಬಿದ್ದು ಹುಲ್ಲನ್ನು ಸೇಖರಿಸಿಟ್ಟರೆ ರೈತರಿಗೆ ಎಷ್ಟೊಂದು ಮೇಲಾಗುವುವೆಂಬುದರಲ್ಲಿ ಸಂದೇಹವಿಲ್ಲವು.

ಹುಲ್ಲು ಬೆಳೆಯುವುದು ಏನು ಕಷ್ಟ? ಎಂದು ಅನೇಕರು ತಿಳಿದಿರಬಹುದು. ಹುಲ್ಲನ್ನು ಪದ್ಧತಿಯಿಂದ ವ್ಯವಸಾಯ ಮಾಡುವುದೇ ಇಲ್ಲಿಯ ರೈತರಿಗೆ ತಿಳಿಯದು. ಸುಮ್ಮನೆ ನೆಲವನ್ನು ಕೆರೆದು ಗೊಬ್ಬರವನ್ನು ತೋರಿಸಿ, ನೀರನ್ನು ಬಿಟ್ಟರೆ ಬೇಕಾದಷ್ಟು ಹುಲ್ಲನ್ನು ಬೆಳದಂತಾಗಲಿಲ್ಲ. ಈ ದೇಶದ ಬೇಸಿಗೆಯ ಬೇಗೆಯಲ್ಲಿ ಗೊಬ

ರೆಷ್ಟ ನಿಸ್ಸಾರವಾಗಿ ಒಣಗಿಹೋಗಲು, ಸಸಿಗೆ ಗೊಬ್ಬರದಿಂದ ಯಾವ ಪ್ರಯೋಜನವೂ ಇಲ್ಲವೆಂಬುದು ನಾನು ಹೊಸದಾಗಿ ಹೇಳಬೇಕಾಗಿಲ್ಲ. ಹರಿಯಾಳಿ ಹುಲ್ಲಿನ ಬೇರು ಸಾಧಾರಣವಾಗಿ ಎರಡು ಅಡಿಯುದ್ದ ಭೂಮಿಯಲ್ಲಿಳಿದಿರುವುದು. ಮೇಲೆ ಮೇಲೆ ಹಾಕಿದ ನಿಸ್ಸಾರವಾದ ಗೊಬ್ಬರದ ಅಲ್ಪಸ್ವಲ್ಪ ಸಾರವು ಹುಲ್ಲಿನ ಬೇರನ್ನು ಸೇರದು. ಬೇರನ್ನು ಸೇರದಿದ್ದರೆ ಹುಲ್ಲು ಹುಲಸಾಗಿ ಬೆಳೆಯದು. ಅದುದರಿಂದ ಹುಲ್ಲಿನ ಜಾತಿಯಲ್ಲೆಲ್ಲಾ ರುಚಿಯುಳ್ಳಿ ಸಿಯಾಗಿಯೂ, ಸಾರವತ್ತಾಗಿಯೂ, ಸಣ್ಣಸಣ್ಣ ಗರಿಕೆಯಿಂದ ಕೂಡಿದುದಾಗಿಯೂ ಇರುವ ಹರಿಯಾಳಿ ಹುಲ್ಲಿನ ಬೆವಸಾಯವನ್ನು ಅವಶ್ಯ ತಿಳಿಯಬೇಕು. ಇದನ್ನು ಬೆಳೆಯಲು ಅಷ್ಟು ಉತ್ತಮಜೆರನಾದ ಭೂಮಿಯೇನೂ ಬೇಕಾಗಿಲ್ಲ. ಅದರೆ ಮಿದುವಾದ ಮಣ್ಣುಳ್ಳ ಭೂಮಿಯನ್ನು ಚುನಾಯಿಸಿಕೊಳ್ಳೋಣದರಲ್ಲಿ ಬೇವಸಾಯದ ಖರ್ಚು ಬಹಳಮಟ್ಟಿಗೆ ಕಡಮೆಯಾಗುವುದು. ಗದ್ದೆಯಲ್ಲಾದರೂ ಕೆರೆಯ ಮಣ್ಣನ್ನು ಸಮನಾಗಿ ಬೆರೆಸೋಣದರಿಂದ ಸೊಗಸಾದ ಹುಲ್ಲನ್ನು ಬೆಳೆಯಬಹುದು. ಹರಿಯಾಳಿ ಗರಿಕೆಯನ್ನು ಬೆಳೆಯಲು ಭೂಮಿಯನ್ನು ಮೊದಲು ಪಾಕು ಮಾಡಬೇಕು. ಎಂದರೆ ಭೂಮಿಯನ್ನು ಕೊನೇಪಕ್ಷ ಅರ್ಧಗಜ ಅಗೆದು, ಮಣ್ಣನ್ನು ಈಕಡೆ ಆಕಡೆ ರಾಸಿ ಹಾಕಬೇಕು. ತರುವಾಯ ಬಂಡಿ ಮೋಟಿನ ಗೊಬ್ಬರವನ್ನಾಗಲಿ, ಇನ್ನೆಲ್ಲಾದರೂ ಸಿಕ್ಕುವ ಸೆಗಣಿ ಕಸ ಕಡ್ಡಿಯ ಗೊಬ್ಬರವನ್ನಾಗಲಿ ತರಿಸಿ, ಒಂಬತ್ತು ಅಂಗುಲ ಎತ್ತರ ಅಗೆದ ಹಳ್ಳದಲ್ಲಿ ಹರವಬೇಕು. ಆಮೇಲೆ ರಾಸಿ ಮಣ್ಣನ್ನು, ಸುಣ್ಣ ಶೋಧಿಸುವ ಜರಡಿಯಿಂದ ಶೋಧಿಸಿ ಸುರಿಯಬೇಕು. ಏನುಮಾಡಿದರೂ ಹೋಗದೆ, ಪೈರನ್ನೆಲ್ಲಾ ನಾಶಮಾಡುವ ಕೊನ್ನಾರಿಗೆಡ್ಡೆಯನ್ನು ತೆಗೆದುಹಾಕುವುದೇ ಶೋಧಿಸುವುದರ ಉದ್ದಿಶ್ಯ. ಹೀಗೆ ಭೂಮಿಯನ್ನು ಶೋಧಿಸಿ ಅಣಿಮಾಡಿದ ತರುವಾಯ ನೀರನ್ನು ಹಾಯಿಸಲು, ಕಾಲುವೆಗಳನ್ನು ತಿದ್ದಿ ಆಮೇಲೆ ಒಂದು ಮಮಟೆ ಇಂದ ಒಬ್ಬನು ಅಗಿಯುತ್ತಾ ಹೋಗಬೇಕು. ಸಂಗಡಲೆ ಒಬ್ಬರು ಹರಿಯಾಳಿ ಹುಲ್ಲಿನ ಗೆಡ್ಡೆಯನ್ನು ನೆಡುತ್ತಾ ಬರಬೇಕು. ಒಂದು ಸಾಲಾದಮೇಲೆ ಗೆಡ್ಡೆಯಮೇಲೆ ಕ್ರಮವಾಗಿ ಮಣ್ಣುಮುಚ್ಚಬೇಕು. ಹೀಗೆ ಸಾಲುಸಾಲಾಗಿ ನೆಟ್ಟು ಮೂರು ಮೂರು ಅಡಿ ಅಗಲ ಇಪ್ಪತ್ತು ಮುವ್ವತ್ತು ಅಡಿ ಉದ್ದ ಮಡಿ ಆಫವಾ (ಪಾತಿ) ಮಾಡಬೇಕು. ಪಾತಿಗೆ ಎತ್ತರವಾಗಿ ದಿಂಡು ಕಟ್ಟಬಾರದು. ನೀರು ಹೆಚ್ಚಾಗಿ ಹಿಡಿದರೆ ಗೆಡ್ಡೆಯು ಕೊಳೆಯುವುದು. ಒಂದು ಎರಡು ಅಂಗುಲ ಎತ್ತರದ ಕಟ್ಟೆಯಾದರೆ ಸಾಕು. ಇಷ್ಟು

ಒಂದು ಜೋಡಿ ಸಾಯುಲ ಎತ್ತು ಮೂರು ದಿವಸ ಮಾಡುವ ಕೆಲಸವನ್ನು ಬಲಿಷ್ಠವಾದ ಜೋಡಿಯು ಒಂದು ದಿನದಲ್ಲಿ ಮಾಡಲಾಪುದು. ನಾರವಾದ ಕಾವಲುಗಳುಳ್ಳ ಈ ಮೈಸೂರು ತೀವೆಯಲ್ಲಿ ರೈತರು ಕುದುರೆ, ದನ, ಕುರಿ, ಮುಂತಾದವುಗಳನ್ನು ಚೆನ್ನಾಗಿ ಆರೈಕೆ ಮಾಡಿ ಬೆಳಸಿ, ನಾನಾಫಲಗಳನ್ನು ಪಡೆಯುದಿರುವುದಕ್ಕೆ ಅವರ ಅವಿಜ್ಞತೆಯೇ ಕಾರಣವೆಂದು ಇಲ್ಲಿ ಭೂ ಇಷ್ಟವನ್ನು ತಿಳಿದ ಒಬ್ಬ ಶಾಸ್ತ್ರಜ್ಞನು ಬರೆದಿರುವನು. ಬಿಸಲುಕಾಲದಲ್ಲಿ ನಿಲ್ಲಲಿಕ್ಕೆ ನೆರಳಿಲ್ಲದೆ ಕುಡಿಯುವುದಕ್ಕೆ ನೀರಿಲ್ಲದೆ, ಹಸಿದು ಬಾಯಾರಿರುವ ಬಡಕಲಾದ ದನದ ಮಂದೆಯನ್ನು ಆಲ್ಲಲ್ಲಿ ಮಿಟ್ಟೆಗಳಲ್ಲೂ ಹಳ್ಳಗಳಲ್ಲೂ, ಬೆಟ್ಟ ಕಿಬ್ಬಿಗಳಲ್ಲೂ ತಡೆಯುವ ವಾಡಿಕೆಯನ್ನ ಅರಿಯದವರ್ಯಾರು? ಹೀಗೆ ಹಗಲೆಲ್ಲಾ ನೆಲವನ್ನೇ ಕಿತ್ತು ತಿನ್ನಲೆತ್ನಿಸುವ ದನಕರುಗಳು ಸಂಜೆಯಲ್ಲಿ ಹಿಂದಿರುಗಲು, ಒಂದು ಹಿಡಿ ಹುಲ್ಲು ಸಹಾ ಹೆಚಾಗಿ ಇಲ್ಲದೆ ನೀರನ್ನು ತೋರಿಸಿ ಕೊಟ್ಟಿಗೆಯಲ್ಲಿ ಸಾಲುಸಾಲಾಗಿ ಬಿಗಿಯುವ ಪದ್ಧತಿಯು ಎಲ್ಲರಿಗೂ ತಿಳಿದ ವಿಷಯವಾಗಿವೆ. ಉರಿ ಬೇಸಗೆಯಲ್ಲಿ ನಾನಾಕಷ್ಟಕ್ಕೆ ಈಡಾಗಿರುವ ದನಗಳಿಗೆ ಹುಲ್ಲನ್ನು ಸೇಖರಿಸಿ ಇಡುವ ಯೋಚನೆಯನ್ನು ಮಾಡಿರುವ ರೈತರು ಎಷ್ಟುಮಂದಿ? ಪಾಶ್ಚಾತ್ಯದೇಶದಲ್ಲಾದರೋ ದನಗಳಿಗೆ ಛಳಿಗಾಲದಲ್ಲಿ ಬಹು ಕಷ್ಟ. ಮಂಜು ಮುಸಕಿ ಹಸಿರೇ ಕಾಣುವುದಿಲ್ಲ. ಛಳಿಯಿಂದ ಗಿಡವೇ ಚಿಗರದು ಕಾಲ್ನಡೆಗಳೆಲ್ಲಕ್ಕೂ ಬಹು ಕಷ್ಟ. ಆ ಕಾಲಕ್ಕೆ ಬೇಕಾದಷ್ಟು ಆಹಾರವನ್ನು ರೈತರು ಒದಗಿಸಿ ಇಡದಿದ್ದರೆ—ಬಹು ದನಕರುಗಳು ನಷ್ಟವಾಗುವುವು. ಆ ನಷ್ಟಕ್ಕೆ ಗುರಿಯಾಗದೆ ಬಹು ವಿಧವಾಗಿ ಹುಲ್ಲನ್ನು ಸೇಖರಿಸಿದ್ದು—ದನವನ್ನು ಸಾಕುವರು. ನಮ್ಮ ರೈತರಾದರೋ 'ಮಳೆ ಬರಬೇಕು, ಹಸರು ಕಾಣಬೇಕು, ದನ ಮೈಗೂಡಬೇಕು' ಎಂದು ತಟಸ್ಥರಾಗಿ—ಭೂಮಿ ಆಕಾಶವನ್ನು ನೋಡತೊಡಗುವರು. ಈ ದೇಶದ ಭೂ ಇಷ್ಟವು ಬಹು ಫಲವತ್ತಾದುದೆಂದು ನಾನು ಮೊದಲೇ ಹೇಳಿರುವೆನು. ಕಾಲದಲ್ಲಿ ಸ್ವಲ್ಪ ಶ್ರಮಬಿದ್ದು ಹುಲ್ಲನ್ನು ಸೇಖರಿಸಿಟ್ಟರೆ ರೈತರಿಗೆ ಎಷ್ಟೊಂದು ಮೇಲಾಗುವುವೆಂಬುದರಲ್ಲಿ ಸಂದೇಹವಿಲ್ಲವು.

ಹುಲ್ಲು ಬೆಳೆಯುವುದು ಏನು ಕಷ್ಟ? ಎಂದು ಅನೇಕರು ತಿಳಿದಿರಬಹುದು. ಹುಲ್ಲನ್ನು ಪದ್ಧತಿಯಿಂದ ವ್ಯವಸಾಯ ಮಾಡುವುದೇ ಇಲ್ಲಿಯ ರೈತರಿಗೆ ತಿಳಿಯದು. ಸುಮ್ಮನೆ ನೆಲವನ್ನು ಕೆರೆದು ಗೊಬ್ಬರವನ್ನು ತೋರಿಸಿ, ನೀರನ್ನು ಬಿಟ್ಟರೆ ಬೇಕಾದಷ್ಟು ಹುಲ್ಲನ್ನು ಬೆಳದಂತಾಗಲಿಲ್ಲ. ಈ ದೇಶದ ಬೇಸಿಗೆಯ ಬೇಗೆಯಲ್ಲಿ ಗೊಬ

ರವು ನಿಸ್ಸಾರವಾಗಿ ಒಣಗಿಹೋಗಲು, ಸಸಿಗೆ ಗೊಬ್ಬರದಿಂದ ಯಾವ ಪ್ರಯೋಜನವೂ ಇಲ್ಲವೆಂಬುದು ನಾನು ಹೊಸದಾಗಿ ಹೇಳಬೇಕಾಗಿಲ್ಲ. ಹರಿಯಾಳಿ ಹುಲ್ಲಿನ ಬೇರು ಸಾಧಾರಣವಾಗಿ ಎರಡು ಅಡಿಯುದ್ದ ಭೂಮಿಯಲ್ಲಿಳಿದಿರುವುದು. ಮೇಲೆ ಮೇಲೆ ಹಾಕಿದ ನಿಸ್ಸಾರವಾದ ಗೊಬ್ಬರದ ಅಲ್ಪಸ್ವಲ್ಪ ಸಾರವು ಹುಲ್ಲಿನ ಬೇರನ್ನು ಸೇರದು. ಬೇರನ್ನು ಸೇರದಿದ್ದರೆ ಹುಲ್ಲು ಹುಲಸಾಗಿ ಬೆಳೆಯದು. ಆದುದರಿಂದ ಹುಲ್ಲಿನ ಜಾತಿಯಲ್ಲೆಲ್ಲಾ ರುಚಿಯುಳ್ಳಿ ಸಿಯಾಗಿಯೂ, ಸಾರವತ್ತಾಗಿಯೂ, ಸಣ್ಣ ಸಣ್ಣ ಗರಿಕೆಯಿಂದ ಕೂಡಿದುದಾಗಿಯೂ ಇರುವ ಹರಿಯಾಳಿ ಹುಲ್ಲಿನ ಬೆವಸಾಯವನ್ನು ಅವಶ್ಯ ತಿಳಿಯಬೇಕು. ಇದನ್ನು ಬೆಳೆಯಲು ಅಷ್ಟು ಉತ್ತಮತೆರನಾದ ಭೂಮಿಯೇನೂ ಬೇಕಾಗಿಲ್ಲ. ಆದರೆ ಮಿದುವಾದ ಮಣ್ಣುಳ್ಳ ಭೂಮಿಯನ್ನು ಹುನಾಯಿಸಿಕೊಳ್ಳೋಣದರಲ್ಲಿ ಬೇವಸಾಯದ ಖರ್ಚು ಬಹಳಮಟ್ಟಿಗೆ ಕಡಮೆಯಾಗುವುದು. ಗದ್ದೆಯಲ್ಲಾದರೂ ಕೆರೆಯ ಮಣ್ಣನ್ನು ಸಮನಾಗಿ ಬೆರೆಸೋಣದರಿಂದ ಸೊಗಸಾದ ಹುಲ್ಲನ್ನು ಬೆಳೆಯಬಹುದು. ಹರಿಯಾಳಿ ಗರಿಕೆಯನ್ನು ಬೆಳೆಯಲು ಭೂಮಿಯನ್ನು ಪೊದಲು ಪಾಕು ಮಾಡಬೇಕು. ಎಂದರೆ ಭೂಮಿಯನ್ನು ಕೊನೇಪಕ್ಷ ಅರ್ಧಗಜ ಅಗೆದು, ಮಣ್ಣನ್ನು ಈಕಡೆ ಅಕಡೆ ರಾಸಿ ಹಾಕಬೇಕು. ತರುವಾಯು ಬಂಡಿ ಮೋಟಿನ ಗೊಬ್ಬರವನ್ನಾಗಲಿ, ಇನ್ನೆಲ್ಲಾದರೂ ಸಿಕ್ಕುವ ಸೆಗಣಿ ಕಸ ಕಡ್ಡಿಯ ಗೊಬ್ಬರವನ್ನಾಗಲಿ ತರಿಸಿ, ಒಂಬತ್ತು ಅಂಗುಲ ಎತ್ತರ ಅಗೆದ ಹಳ್ಳದಲ್ಲಿ ಹರವಬೇಕು. ಆಮೇಲೆ ರಾಸಿ ಮಣ್ಣನ್ನು, ಸುಣ್ಣ ಶೋಧಿಸುವ ಜರಡಿಯಿಂದ ಶೋಧಿಸಿ ಸುರಿಯಬೇಕು. ಏನುಮಾಡಿದರೂ ಹೋಗದೆ, ಪೈರನ್ನೆಲ್ಲಾ ನಾಶಮಾಡುವ ಕೊನ್ನಾರಿಗೆಡ್ಡೆಯನ್ನು ತೆಗೆದುಹಾಕುವುದೇ ಶೋಧಿಸುವುದರ ಉದ್ದಿಶ್ಯ. ಹೀಗೆ ಭೂಮಿಯನ್ನು ಶೋಧಿಸಿ ಆಣಿಮಾಡಿದ ತರುವಾಯ ನೀರನ್ನು ಹಾಯಿಸಲು, ಕಾಲುವೆಗಳನ್ನು ತಿದ್ದಿ ಆಮೇಲೆ ಒಂದು ಮಮಟಿ ಇಂದ ಒಬ್ಬನು ಅಗಿಯುತ್ತಾ ಹೋಗಬೇಕು. ಸಂಗಡಲೆ ಒಬ್ಬರು ಹರಿಯಾಳಿ ಹುಲ್ಲಿನ ಗೆಡ್ಡೆಯನ್ನು ನೆಡುತ್ತಾ ಬರಬೇಕು. ಒಂದು ಸಾಲಾದಮೇಲೆ ಗೆಡ್ಡೆಯಮೇಲೆ ಕ್ರಮವಾಗಿ ಮಣ್ಣುಮುಚ್ಚಬೇಕು. ಹೀಗೆ ಸಾಲುಸಾಲಾಗಿ ನೆಟ್ಟು ಮೂರು ಮೂರು ಅಡಿ ಅಗಲ ಇಪ್ಪತ್ತು ಮುವ್ವತ್ತು ಅಡಿ ಉದ್ದ ಮಡಿ ಅಥವಾ (ಪಾತಿ) ಮಾಡಬೇಕು. ಪಾತಿಗೆ ಎತ್ತರವಾಗಿ ದಿಂಡು ಕಟ್ಟಬಾರದು. ನೀರು ಹೆಚ್ಚಾಗಿ ಹಿಡಿದರೆ ಗೆಡ್ಡೆಯು ಕೊಳೆಯುವುದು. ಒಂದು ಎರಡು ಅಂಗುಲ ಎತ್ತರದ ಕಟ್ಟೆಯಾದರೆ ಸಾಕು. ಇಷ್ಟು

ಮಾಡಿಬಿಟ್ಟರೆ ಕೆಲವು ದಿವಸಗಳಲ್ಲಿಯೇ ಗೆಡ್ಡೆಯು ಚಿಗುರುವುದು. ಸ್ವಲ್ಪ ಹುಲ್ಲು ಗರಿಕೆ ಕಂಡಮೇಲೆ ಒಂದು ತಿಂಗಳಲ್ಲಿ ಎರಡಾವೃತ್ತಿ ನೀರು ಹಾಯಿಸಿದರೆ ಸಾಕು. ನಾಲ್ಕು ಐದು ವಾರದಲ್ಲಿಯೇ ಹುಲ್ಲು ಕಟಾವಿಗೆ ಸಿದ್ಧವಾಗುವುದು. ಒಂದು ಎಕರೆಗೆ ಎರಡು ಟನ್ ತೂಕ ಹುಲ್ಲು ಸಿಕ್ಕುವುದು. ಒಂದು ವರ್ಷದಲ್ಲಿ ಎಂಟು ದಫ ಹುಲ್ಲು ಕಟಾಯಿಸಿಕೊಳ್ಳಬಹುದು. ಹುಲ್ಲು ಕಡ್ಡಿ ಬಲಿತು ಬಹುದಪ್ಪನಾಗಿ ಬೆಳೆದರೆ ಒಂದಾವೃತ್ತಿ ಉಕ್ತು ಮತ್ತೆ ಪಾತಿಮಾಡಿದರೆ ಯಥಾಪ್ರಕಾರ ಬೆಳೆಯುವುದು. ಮಳೆಯು ಹೆಚ್ಚಾದರೆ ಒಂದುತೆರನಾದ ಕಂಬಳಿ ಹುಳು ಹೆಚ್ಚುವುದು. ಅದಕ್ಕೆ ತಟ್ಟನೆ ಹುಲ್ಲನ್ನು ಕುಯಿದುಹಾಕಲು ಹುಳುಗಳು ಕೆಳಗೆ ಬೀಳುವುವು. ಆಗ ಹಕ್ಕಿಪಕ್ಷಿ ತಿಂದು ಅವನ್ನು ನಾಶಮಾಡುವುವು. ಉರಿ ಬೇಸಿಗೆಯಲ್ಲೂ ಹಸಿರಾದ ಹುಲ್ಲನ್ನು ಬೆಳೆಯಬಹುದು. ಒಂದು ವರ್ಷಕ್ಕೆ ಐದು ಎಕರೆ ಜಮೀನು ನಾಗುವಳಿ ಮಾಡಿದರೆ ಐವತ್ತು ಟನ್ ಹುಲ್ಲು ಬೆಳೆಯುವುದು. ಹುಲ್ಲು ಬೆಳೆದರೆ ಏನುಫಾಯಿದೆ ಆಯಿತು? ಶ್ರಮವೆಷ್ಟು? ಗೊಬ್ಬರ ಗೋಡೆಷ್ಟು? ಕೊಂಡುಕೊಳ್ಳುವರ್ಯಾರು? ಎಂಬ ಶಂಕೆ ಉಂಟಾಗಬಹುದು. ಉರಿಬೇಸಿಗೆಯಲ್ಲಿ ಹಸಿರಾದ ಹಸಿರನ್ನು ಕೊಟ್ಟರೆ ಕೊಂಡುಕೊಳ್ಳುವುರಿಲ್ಲವೆ? ಐದು ಎಕರೆಯನ್ನು ಅಣಿಮಾಡುವುದಕ್ಕೆ ಕೂಲಿ ಆಳು ಒಂದು ಪಕ್ಕಾಮಂದಿ, ಗೊಬ್ಬರ ಹೂಡುವುದಕ್ಕೆ ಬಂಡಿ, ಹುಲ್ಲು ಕೊಯ್ಯುವುದಕ್ಕೆ ಹೆಣ್ಣಾಳು. ನೀರುಹಾಯಿಸುವುದಕ್ಕೆ ನಾಲ್ಕು ಗಂಡಾಳು. ಇಷ್ಟು ಇಟ್ಟರೂ, ಈ ವ್ಯವಸಾಯವು ಬಹಳ ಲಾಭಕರವೆಂಬುದು, ಒಂದು ಟನ್ ಹುಲ್ಲಿಗೆ ಐವತ್ತು, ಅರವತ್ತು ರೂ. ಬೆಲೆ ಸಿಕ್ಕುವುದೆಂಬುದರಿಂದ ವ್ಯಕ್ತವಾಗುವುದು. ಅಲ್ಲಲ್ಲಿಯೇ ಹತ್ತು ಗುಂಟೆ, ಇಪ್ಪತ್ತು ಗುಂಟೆ ಅಥವಾ ಒಂದು ಎಕರೆ ಯೆಷ್ಟು ಹೀಗೆ ಹುಲ್ಲು ಬೆಳೆಯುವುದರಿಂದ ರೈತನು ತನ್ನ ದನಕರುಗಳನ್ನು ಚೆನ್ನಾಗಿ ಪೋಷಣೆ ಮಾಡಿಕೊಂಡು, ಮುಂದೆಯುನ್ನು ಮನೆಯಲ್ಲಿಯೇ ತಡೆದು ಗೊಬ್ಬರವನ್ನು ಕೂಡಿಹಾಕಿ ವಿಶೇಷ ಲಾಭವನ್ನು ಪಡೆಯುಬಹುದಲ್ಲದೆ ಬೇಸಿಗೆಯಲ್ಲಿ ದನವು ಕಂಗೆಡುವುದೆಂಬ ಭಯವೇ ಆಗಲಿ, ರೋಗಾದಿಗಳಿಂದ ನಾಶವಾಗುವ ಶಂಕೆಯಾಗಲಿ ಇಟ್ಟುಕೊಳ್ಳತಕ್ಕುದು ಇಲ್ಲ. ಈ ವ್ಯವಸಾಯವು ಒಹಳ ಲಾಭಕಾರಿಯು.

ಕ್ರಮವರಿತು ಹುಲ್ಲಿನ ವ್ಯವಸಾಯವನ್ನು ಮಾಡಿದಲ್ಲಿ ಈಗಿರುವಷ್ಟು ಗೋ ಮಾಳವೂ ಅವಶ್ಯವಿಲ್ಲ—ಅಷ್ಟು ಕಾಪಲುಗಳು ಬೇಕಾಗಿಲ್ಲ. ಈ ಸಂಸ್ಥಾನದಲ್ಲಿರುವ ಕೆರೆಕೆಳಗಣ ಅನೇಕ ಜಮೀನುಗಳು, ಕೆಲವು ನೀರು ತರಿ ಫಸಲಿಗೆ ಸಾಲದೆ

ಇರುವುದರಿಂದ ಬಂಜರು ಬಿದ್ದಿರುವುವು. ಇಂಥಾ ಜವಿಾನುಗಳೇ ಹುಲ್ಲಿನ ಬೆಳೆಗೆ ಕೇವಲ ಅನುಕೂಲವಾದವು ಮತ್ತೂ ಲಾಭಕಾರಿಯಾದವು.

ಉಷ್ಣವಲಯುದಲ್ಲಿ ಹೇರಳವಾಗಿಯೂ, ನಶ್ವರವಾಗಿಯೂ ಬೆಳೆಯುವ ಗಿನಿ ಹುಲ್ಲು ಎಂಬುದು ಒಂದು ತೆರವಾದ ಹುಲ್ಲು. ಇದಕ್ಕೆ ಆಫ್ರಿಕಾಖಂಡವೇ ಜನ್ಮ ಭೂಮಿ. ಉಷ್ಣದೇಶವೇ ಇದಕ್ಕೆ ತೌರುಮನೆಯಾದುದರಿಂದ ಇತರ ಉಷ್ಣದೇಶ ಗಳಲ್ಲೂ ಇದರ ಸಾಗುವಳಿಯನ್ನು ಮಾಡಲೆತ್ನಿಸಿರುವರು. ಇದನ್ನು ಹಿಂದೂಸ್ಥಾನ ದಲ್ಲೂ ವಿಶೇಷನಾಗಿ ಬೆಳೆಯಬಹುದೆಂದು ನೂರುನೂರಇಪ್ಪತ್ತೈದು ವರ್ಷದ ಕೆಳಗೆ ಹಿಂದೂಸ್ಥಾನಕ್ಕೆ ತಂದು ಪ್ರಯತ್ನವನ್ನು ಮಾಡಲಾರಂಭಿಸಿರುವರು. ಇದು ಹವಿಯಾಲಿ ಹುಲ್ಲಿನಂತೆ ಬಳ್ಳಿಯಾಗಿ ಬೆಳೆಯುವುದಿಲ್ಲ. ಗುಂಪುಗುಂಪಾಗಿ ಬಂ ದೊಂದು ತೆಕ್ಕೆಯಾಗಿ ಬೆಳೆಯುವ ಹಸಿರಹುಲ್ಲು. ಹುಲ್ಲಿನ ಬೇರು ಹೆಣೆದುಕೊಂಡು ನಾರಾಗಿ ಭೂಮಿಯ ಮೇಲಭಾಗದಲ್ಲಿಯೆ ಹತ್ತಿಕೊಂಡಿರುವುದು — ಫಳಿಗಾ ಲದಲ್ಲಿ ಇದು ಕೊಂಚ ಮಂಡಾಗಿದ್ದು ಬೇಸಗೆಯಲ್ಲಿ ಚಿಗರಲು ತಲೆದೋರು ವುದು—ನೀರು ಚೆನ್ನಾಗಿ ಹಾಯಿಸುತ್ತಿದ್ದಲ್ಲಿ ಇದು ಉರಿ ಬೇಸಿಗೆಯಲ್ಲೂ ಹಸಿರಾಗಿ ಯೇ ಇರುವುದು. ಒಂದೆರಡು ಹದ ಮಳೆ ಬಿದ್ದೊಡನೆ ಇದು ಬೇಕಾದಹಾಗೆ ಚಿಗು ರುವುದು. ವರ್ಷಋತುವಿನಲ್ಲೂ ಇತರ ಋತುಗಳಲ್ಲೂ ಹುಲ್ಲು ಹೂವಾಗಿ ಬೀಜ ವಾಗಿ ಬೇಕಾದಷ್ಟು ದೊರೆಯುವುದು. ಇದು ಹೂ ಬಿಡುವುದಕ್ಕೆ ಬಂದಾಗ ಸುಮಾ ರು ಐದು, ಎಂಟು ಅಡಿ ಎತ್ತರ ಬೆಳೆಯುವುದು. ಇದರಲ್ಲಿ ಬಿಡುವ ಹುವ್ವಿನ ಗೊಂಚಲು ಬಹು ಮನೋಹರವಾಗಿ ಇರುವುದು. ಆದರೆ ಹುವ್ವಿನ ಕಾಲವೇ ಕಡಮೆ—ಹುಲ್ಲಿನ ಗರಿಕೆ ಒಡೆಯುವುದೇ ಹೆಚ್ಚು. ಚೆನ್ನಾಗಿ ಆಳವಾಗಿ ಭೂಮಿ ಯನ್ನು ಅಗೆದು, ಎಕರೆಯೊಂದಕ್ಕೆ ಮೂವತ್ತು ಗಾಡಿ ಗೊಬ್ಬರಕ್ಕೆ ಕಡಮೆಯಿಲ್ಲದೆ ಹಾಗೆ ಗೊಬ್ಬರವನ್ನು ಹೂಡಿ, ಉಕ್ಕೆಹೊಡೆದು, ಎರಡೆರಡು ಅಡಿಯು ದೂರಕ್ಕೆ ಈ ಹುಲ್ಲಿನ ಬೀಜವನ್ನು ಬಿತ್ತಾಗಲಿ, ಬೇರನ್ನು ಹೂಳಿಯಾಗಲಿ ಬೆಳೆಯುಬಹುದು— ಇದರ ನಾಲು ಒಂದೇ ನೇರವಾಗಿರಬೇಕು. ಮಳೆಯುಗಾಲದಲ್ಲಿ ಇದನ್ನು ನಾಟಿ ಹಾಕುವುದರಲ್ಲಿ ವಿಶೇಷ ಪ್ರಯೋಜನ ಉಂಟು. ನಾಟಿಯು ಚೆನ್ನಾಗಿ ನಿಂತಮೇಲೆ ಬುಡಕ್ಕೆ ಮಣ್ಣು ಏರುಹಾಕಬೇಕು. ಆಮೇಲೆ ನೀರು ಹಾಯಿಸಬೇಕು—ನೀರ ನ್ನು ನಿಲ್ಲಿಸಲಾಗದು. ಸೊಪ್ಪು ಸೆದೆ ಬೆಳೆಯುದಂತೆ—ಆಗಾಗ್ಗೆ ಕಳೇಕೀಳಬೇಕು. ಗೊಬ್ಬರ ಗೋಡು ಹೇರಳವಾಗಿ ಹಾಕಿದಹಾಗೆಲ್ಲಾ—ಹುಲ್ಲು ಹುಲುಸಾಗಿ ಬೆಳೆಯು

ವುದು. ಒಂದೊಂದು ಕಟಾವಿಗೆ ಒಂದು ಎಕರೆಗೆ ಐದು ಟ್ಗಗೆ ಕಡಮೆ ಇಲ್ಲದೆ ಹುಲ್ಲು ಸಿಕ್ಕುವುದು. ಇದು ಮರದ ನೆಳಲಲ್ಲೂ ವಸತಿಯಾದ ಸ್ಥಳದಲ್ಲೂ ಹೇರಳವಾಗಿ ಬೆಳೆಯುವುದು. ಈ ಹುಲ್ಲಿನ ಬೆಳೆಯಲ್ಲಿ ಏನು ಅನುಕೂಲವೆಂದರೆ ವರ್ಷೇ ವರ್ಷೆ ಹುಲ್ಲನ್ನೇ ಬೆಳೆಯುತಿರಬಹುದು. ಬೆಳೆಯು ಕಡಮೆಯಾಗುವುದಿಲ್ಲ. ಇದು ದನಕರಗಳಿಗೆ ಬಹಳ ಪುಷ್ಟಿಕಾರಿ. ವರ್ಷಕ್ಕೆ ಎಂಟಾವರ್ತಿ ಇದನ್ನು ಕಟಾವ ಮಾಡಿಕೊಳ್ಳಬಹುದು. ಮಳೆ ಚೆನ್ನಾಗಿ ಆದಾಗಲೂ, ನೀರನ್ನು ಚೆನ್ನಾಗಿ ಹಾಯಿಸಿದಾಗಲೂ ಹುಲ್ಲು ಹೇರಳವಾಗಿ ಬೆಳೆಯುವುದಂದರೆ ಮಳೆ ಇಲ್ಲದೆ ನೀರಿಲ್ಲದೆ ಇರುವಾಗ ಇದು ಹೇಗೆ ಪ್ರಯೋಜನವಾಗುವುದು? ಮೇವಿನ ಕ್ಷಾಮವು ಇಂಗುವುದು ಹೇಗೆ? ಎಂಬ ಪ್ರಶ್ನೆಗೆ—ಸಮಾಧಾನ ಉಂಟು. ಹುಲ್ಲನ್ನು ನಮ್ಮಲ್ಲಿ ಮೆದೆ ಹಾಕುವ ಪದ್ಧತಿಯುಂಟು. ಅದನೆ ಹದವರಿತು ಮೆದೆ ಹಾಕುವ ಕ್ರಮವು ರೈತಾಬಿಜನ ಸಾಮಾನ್ಯಕ್ಕೆ ತಿಳಿಯದು.

ಹುಲ್ಲಿನ ಮೆದೆ ಹಾಕಬೇಕಾದರೆ ಹುಲ್ಲು ಹೂಬಿಟ್ಟೊಡನೆ ಕೊಯ್ಯಬೇಕು. ಆ ಕಾಲದಿಟ್ಟು ಹೂ ಕಾಯಿಯಾದಮೇಲೆ ಕೊಯಿದರೆ ಹುಲ್ಲು ಮೆದುವಾಗದು, ನಾರಾಗುವುದು. ರಸವತ್ತಾಗಿರದು. ಹುಲ್ಲಿನ ನಾರವೆಲ್ಲವೂ ಹೂ ಕಾಯಿಯಾಗುವುದರಲ್ಲಿ ಪರಿಣಮಿಸಿದ್ದುದರಿಂದ—ಹುಲ್ಲು ನಿಸ್ಸಾರವಾಗುವುದು. ಹುಲ್ಲನ್ನು ಕೊಯಿದೊಡನೆ ಒಣಹಾಕಬೇಕು. ಸಂಜೆಯಾದೊಡನೆ ಮಂಜುಬಿದ್ದು ನೆನೆಯದ ಹಾಗೆ ಸಣ್ಣ ಸಣ್ಣ ರಾಸಿ ಹಾಕಬೇಕು. ಎರಡನೆಯ ದಿನ ಮತ್ತೆ ಅದನ್ನು ಬಿಸಲಲ್ಲಿ ಹರವಿ, ಚೆನ್ನಾಗಿ ಕೀಳುಮೇಲು ಮಾಡಿ, ಮಗಿಚಿಹಾಕಿ—ಸಂಜೆಹೊತ್ತಿಗೆ ಮೆದೆ ಹಾಕಬೇಕು. ಹೀಗೆ ಒಣಗಿಸಿದ ಹುಲ್ಲು ಹಸಿ ಹುಲ್ಲಿನ ಮೂಡರಲ್ಲಿ ಒಂದು ಭಾಗದಷ್ಟು ತೂಕವಿರುವುದು. ಹಸಿರ ಛಾಯೆಯುಳ್ಳದಾಗಿರುವುದು. ಮುಗ್ಗಿಲ ವಾಸನೆಯು ಬಾರದಂತೆ ಯಾವಾಗಲು ಹೊಸಹೊಸ ಸೋಂಕು ಇರುತಿರಬೇಕು. ಹುಲ್ಲು ಮೆದೆಯಮೇಲೆ ಛಾವಣಿಯನ್ನು ಕವಚಬೇಕು. ತೇಪವಾಗಲಿ, ಗೆಜ್ಜಲಾಗಲಿ ಮೆದೆಗೆ ಹಿಡಿಯುದಂತೆ ಮೆದೆಯ ಸುತ್ತಲು ಒಂದು ಬಚ್ಚಲನ್ನು ಹೊಡೆದು, ಮೆದೆಯಮೇಲೆ ಬಿದ್ದನೀರು ಬಚ್ಚಲ ಕಟ್ಟಿಕಟ್ಟೆ ಆಚೆ ಬೀಳುವಂತಿರಬೇಕು.

—ಗುಳಿಯಲ್ಲಿಟ್ಟ ಹುಲ್ಲು—

ರಾಗಿಯನ್ನು ಗುಳಿಯಲ್ಲಿ ಸಪ್ತಾಂತರವಿಡುವುದು ನಮ್ಮೆಲ್ಲರಿಗೂ ತಿಳಿದ ವಿಚಾರವಾಗಿದೆ. ಆದರೆ ಹುಲ್ಲನ್ನು ಗುಳಿಯಲ್ಲಿ ಹಾಕುವ ಪದ್ಧತಿಯು ನಮ್ಮಲ್ಲಿ

ವಾಡಿಕೆ ಇಲ್ಲ. ಈಚೆಗೆ ಗುಳಿಯಲ್ಲಿ ಹುಲ್ಲಿಡುವ ಪದ್ಧತಿಯನ್ನು ಪರೀಕ್ಷಿಸಲು ಇದು ಬಹು ಅನುಕೂಲವಾಗಿ ಕಂಡುಬಂದಿರುವುದು. ಇದರಲ್ಲಿ ಮುಖ್ಯವಾದ ಅನುಕೂಲವೇನೆಂದರೆ -- ಮಳೆಗಾಲದಲ್ಲಿಯೇ, ಹುಲ್ಲು ಹಸಿಯಾಗಿರುವಹಾಗೆಯೇ ಗುಳಿಗೆ ಜಾಕಬಹುದು. ಗುಳಿಯಲ್ಲಿ ಮಾತ್ರ ವಾಯುಸಂಚಾರಕ್ಕೆ ಅವಕಾಶ ಕೊಡಬಾರದು. ಗುಳಿಯನ್ನು ಚೆನ್ನಾಗಿ ಮುಚ್ಚಿದಾಗ ಗುಳಿಯಮೇಲೆ ಮಣ್ಣನ್ನು ಭಾರವಾಗಿ ಎಳೆಯಬೇಕು. ಗುಳಿಯಲ್ಲಿ ಗಾಳಿಯಾಡಲು ಅವಕಾಶವಿಲ್ಲವೆಂಬುದೂ, ಗುಳಿಯಮೇಲೆ ಭಾರವು ಸಮವಾಗಿ ಕವಿಚಿರುವುದೆಂಬುದೂ ದೃಢಪಡಿಸಿಕೊಂಡರೆ ಅಯಿತು. ಎಂಥಾ ಹುಲ್ಲನ್ನು ಬೇಕಾಗಲಿ, ಒಳ್ಳೇದು ಕೆಟ್ಟದು ಸಕಟು ಗುಳಿಯಲ್ಲಿಡಬಹುದು. ಗುಳಿಯ ಹಬೆಗೆ ಹುಲ್ಲು ಒಂದು ತೆರನಾದ ಪಕ್ವವನ್ನು ಹೊಂದಿರುವುದು. ಗುಣಿಯನ್ನು ಗಟ್ಟಿಯಾದ, ಗಾಳಿಯಾಡಲು ಅನುಕೂಲವಿಲ್ಲದ ಕಲ್ಲುಭೂಮಿಯಲ್ಲಿ ತೆಗೆಯಬೇಕು. ಹುಲ್ಲನ್ನು ಸಮನಾಗಿ ಕೊಯ್ದು ಅಡಕನಾಗಿ ಅದರಲ್ಲಿ ಮೆದೆ ಹಾಕಿ ಗಾಳಿಯಾಡಲು ಆಸ್ಪದವಿಲ್ಲದಂತೆ ಮುಚ್ಚಬೇಕು. ಮೇಲಣಭಾಗದಲ್ಲಿ ಬಿರಕು ಬಿಡದಂತೆ ನೋಡಿಕೊಳ್ಳಬೇಕು. ಹೀಗೆ ಹೂಳಿಟ್ಟ ಹುಲ್ಲನ್ನು ಮೂರುತಿಂಗಳಮೇಲೆ ಆರು ತಿಂಗಳಲ್ಲಿ ತೆಗೆದು ಉಪಯೋಗಿಸಬಹುದು. ಆರು ತಿಂಗಳಿಗೂ ಹೆಚ್ಚಾಗಿ ಗುಳಿಯಲ್ಲಿಟ್ಟರಬಹುದು. ಆದರೆ ಗುಳಿಯನ್ನು ತೆಗೆದಮೇಲೆ ಬಹುದಿನಗಳು ಬಿಡಲಿಕ್ಕಿಲ್ಲ. ಗಾಳಿಯಾಡಿದರೆ ಹುಲ್ಲು ಕೆಟ್ಟುಹೋಗುವುದು.

ಹೀಗೆ ನಾನಾರೀತಿಯಲ್ಲಿ ಹುಲ್ಲನ್ನು ಅಣಿಮಾಡಿಟ್ಟುಕೊಂಡು ಬೇಸಗೆಯಲ್ಲಿ ಉಪಯೋಗಿಸಬಹುದು. ಇದನ್ನು ಅರಿಯದೆ ಜನರು ಧನಕರುಗಳನ್ನು ಕಾಡಿಗೆ ಅಥವಾ ಕಾವಲಿಗೆ ಬಿಟ್ಟು ನಾನಾ ಕಷ್ಟಕ್ಕೆ ಗುರಿಯಾಗುವರು.

ಹುಲ್ಲಿನ ಪೈರನ್ನು ಬೆಳೆಯುವುದರಿಂದಲೂ, ಹುಲ್ಲನ್ನು ಸೇಮಿರಿಸಿಡುವುದರಿಂದಲೂ, ರೈತನಿಗೂ ಧನಕರುಗಳಿಗೂ ವಿಶೇಷ ಪ್ರಯೋಜನಕಾರಿ ಎಂದು ನಾನು ಹೇಳಬೇಕಾದ್ದಿಲ್ಲ. ಧನಕರವೇ ರೈತನ ಸಂಪತ್ತು. ಧನದ ಮೇವೇ ರೈತನ ಆಸ್ತಿ. ಧನಕರವಿನ ಏಳಿಗೆಯೇ ರೈತನ ಏಳಿಗೆ. ಧನಕ್ಕೆ ಬೇಕಾದ ಮೇವನ್ನು ಮನುಷ್ಯನು ತನಗೆ ಬೇಕಾದ ಧಾನ್ಯವನ್ನು ಬೆಳೆದು ಕೂಡಿದುವಂತೆ ಬೆಳೆದು ಕೂಡಿಟ್ಟಲ್ಲಿ ಧನಗಳು ಪುಷ್ಟಿಯಾಗಿ ಬೆಳೆದು ಬೇಕಾದಹಾಗೆ ಕರಾವು ಕೊಟ್ಟು ರೈತನ ದಾರಿದ್ರ್ಯವನ್ನೆಲ್ಲಾ ನೀಗಿಸುವುದು. ಪ್ರತಿಯೊಬ್ಬ ರೈತನೂ ತನ್ನ ಜಮೀನಿನ ಕೀಳಾದ ಒಂದುಭಾಗದಲ್ಲಿ ಹುಲ್ಲನ್ನೇ ಬೆಳೆದು, ಮೆದೆ ಹಾಕಿಯಾಗಲಿ, ಗುಳಿಯಲ್ಲಿಟ್ಟಾಗಲಿ ಸೇಮಿರಿಸೋಣದರಲ್ಲಿ ಅವನು ಎಂದಿಗೂ ನಷ್ಟಪಡನು.

ಎಂ. ಜಿ. ರಾಮರಾವ್,
ಡಿಪ್ಯುಟಿ ಕನ್‌ಸರ್ವೇಟರ್ ಆಫ್ ಫಾರೆಸ್ಟ್, ಮೈಸೂರು.

ವಸಂತಕಾಲದ ಪಾಠ.

ಸಂಭಾಷಣೆ, ವಾಚಕ, ಬರಹ, ಕೈಕೆಲಸ, ಹಾಡುಗಳಿಂದ ಕೂಡಿದ್ದು.

ಮುಕ್ಕಳ ಇಯತ್ತಿಗೆ.

ಉಪಕರಣಗಳು:—ಬಗೆಬಗೆಯ ಕಾಳುಗಳು, ಮೊಳಕೆಗಳು, ಎಲೆಗಳು, ಹೂಗಳು, ಹಲಗೆಗಳು, ಜೇಡಿಮಣ್ಣು, ಚಿಗುರು, ಮೊಳೆತಬೀಜ, ತೊಟ್ಟು.

ಸಂಭಾಷಣೆ.

ಉಪಾಧ್ಯಾಯ—ಈ ಕಾಲವು ಕಳೆದ ಚಳಿಗಾಲದಂತೆ ಇಹೆಯೆ?

ವಿದ್ಯಾರ್ಥಿ—ಇಲ್ಲ. ಗಾಳಿ ಮನೋಹರವಾಗಿದೆ.

ಉ—ಆಕಾಶ ಹೇಗಿದೆ?

ವಿ—ನಿರ್ಮಲವಾಗಿಯೂ, ಅಂದವಾಗಿಯೂ ಇದೆ.

ಉ—ನಾವೆಲ್ಲರೂ ತೋಟಕ್ಕೆ ಹೋಗಿ ಗಿಡಗಳೂ ಬಳ್ಳಿಗಳೂ ಹೇಗಿವೆಯೋ ನೋಡಿಬರೋಣ.

ಎಲ್ಲರೂ ಹೋಗಿ ನೋಡುವರು.

ವಿ—ಆಹ! ಎಷ್ಟು ಮನೋಹರವಾಗಿದೆ!

(ಹಾಡು)

ಗಿಡಗಳೆಲ್ಲಾ ಚಿಗುರುಪೂತು ಕಾಯುತಿರ್ಪುವು । ಪಡುಮನೋಜ್ಞವಾಗಿ ಬಳ್ಳಿಪರಿವುತಿರ್ಪುದು ॥೧॥

ಹಕ್ಕಿಪಕ್ಕಿ ಕಿಚಕಿಚೆಂದು ಕೂಗುತಿರುವುದು । ಜೊಕ್ಕನಿದು ವಸಂತಮೆನುತೆ ತೋರುತಿರುವುದು ॥೨॥

ಉ—ಹಕ್ಕಿಗಳು ಈಗ ಯಾವ ಕೆಲಸಮಾಡುತ್ತಿವೆ?

ವಿ—ಅವುಗಳು ಜತೆಜತೆಯಾಗಿ ಗೂಡುಕಟ್ಟಿಕೊಳ್ಳುವ ಸಡಗರದಲ್ಲಿವೆ. ಅದಕ್ಕೆ ಬೇಕಾದ ಸರಕುಗಳನ್ನು ತರಲು ದಿಕ್ಕುದಿಕ್ಕಿಗೂ ಓಡುತ್ತಾಲಿವೆ.

ಉ—ಹಕ್ಕಿಗಳು ಎಲ್ಲೆಲ್ಲಿ ಗೂಡುಗಳನ್ನು ಕಟ್ಟುವುವು?

ವಿ—ಮರಗಳಮೇಲೆ ಸೌಖ್ಯವಾಗಿರುವುದರಿಂದ ವಿಶೇಷವಾಗಿ ಅಲ್ಲಿಯೇ ಕಟ್ಟುವುವು.

ಉ—ಈ ಗೂಡುಗಳಿಲ್ಲದಿದ್ದರೆ ಏನಾಗುವುದು?

ವಿ—ಸಣ್ಣ ಮರಿಗಳಿಗೆ ಸಂರಕ್ಷಣೆಯಾಗುವುದಿಲ್ಲ. ಅವುಗಳಿಗಾಗಿಯೇ ಗೂಡು ಕಟ್ಟುವುವು?

ಉ—ದಿಕ್ಕುಗಳು ಹೇಗೆ ಕಾಣಬರುತ್ತಿವೆ?

ವಿ—ಹಸುರು ಹುಲ್ಲಿನಿಂದಲೂ, ಎಳೆಯ ಮೊಳಕೆಗಳಿಂದಲೂ ಅಂದವಾಗಿವೆ.

ಉ—ಆ ಮೇಕೆಯ ಮರಿಗಳನ್ನು ನೋಡಿದಿಯಾ? ಹೇಗಿವೆ?

ವಿ—ಕುಣಿದಾಡುತ್ತ ತಾಯಿಯ ಬಳಿ ಆಡುತ್ತಿವೆ.

ಉ—ಹಸುಗಳನ್ನು ನೋಡು. ಅವುಗಳ ಕರುಗಳೇನು ಮಾಡುತ್ತಿವೆ?

ವಿ—ಹಸಿರುಹುಲ್ಲು ಮೇದುಕೊಂಡು ಅಲ್ಲಿಗಿಲ್ಲಿಗೆ ಓಡಾಡುತ್ತಿವೆ.

ಉ—ಸ್ವಲ್ಪದೂರ ಹೋಗಿ ನೋಡಿ. ಜನರು ಗಿಡಗಳಿಂದಲೂ ಬಳ್ಳಿಗಳಿಂದಲೂ ಏನೇನೋ ಕುಯ್ದು ಕುಕ್ಕೆಗಳಲ್ಲಿಟ್ಟುಕೊಂಡು ಹೋಗುವರು. ಏನದು?

ವಿ—ಅವು ಹೂಗಳು. ಎತ್ತನೋಡಿದರೂ ಹೂವುಗಳೂ ಮೊಗ್ಗುಗಳೂ ಘಮಘಮಿಸುತ್ತವೆ.

ಉ—ಈ ಹಾಡನ್ನು ಹೇಳಿರಿ?

ಎತ್ತಲೆತ್ತಲುಂ। ಸುತ್ತಿಕೊಂಡಿದೆ। ಉತ್ತಮಸುಮಜಾತಿ, ಕಂಪಬಿತ್ತರಿಸುತಲಿ ॥ ಮಲ್ಲೆಮಲ್ಲಿಗೆ। ಜೆಲ್ವಪಾದರಿ। ಸಲ್ಲಲಿತದಜಾಜಿ ಸುರಗಿ ಪುಲ್ಲಚಂಪಕ ॥೩॥

ತಳಿರುಮೊಗ್ಗೆಯು। ಜೆಲುವಹೂಗಳು। ಎಳೆಯಕೆಂಪುಬಿಳುಪು ಕಪ್ಪು ತೊಳದ ಬಣ್ಣದಿ ॥ ೪ ॥

(ಎಲ್ಲರಿಂದಲೂ ಹಾಡಿಸಿ)

ಉ—ಹೂಗಳಲ್ಲಿ ಜುಂಜುಮ್ಮೆಂದು ಮೊರೆಯುತ್ತಿರುವುದು ಏನು?

ವಿ—ಜೇನುಹುಳುಗಳೂ, ತುಂಬಿಗಳೂ ಇನ್ನೂ ಕೆಲವು ರೆಕ್ಕೆಯ ಹುಳುಗಳೂ ಹೂಗಳಲ್ಲಿ ಸೇರಿ, ಅವುಗಳಲ್ಲಿನ ರಸವನ್ನು (ಮಕರಂದ) ಕುಡಿದುಕೊಂಡೊಯ್ಯುವು.

ಉ—ಬೇಸಾಯಗಾರರು ಈಗ ಏನುಮಾಡುವರು?

ವಿ—ಹೊಲಗಳನ್ನು ಉತ್ತು ಬಿತ್ತಲು ಸಿದ್ಧಮಾಡುವರು.

ಉ—ಗಿಡಗಳು ಹೇಗೆ ಬೆಳೆಯುವುವು?

ವಿ—ಎಲ್ಲಾ ಪೈರುಗಳೂ ಬೀಜಗಳಿಂದಲೇ ಬೆಳೆಯುವುವು. ಆ ಬೀಜಗಳು ಗಿಡಗಳಿಂದಲೇ ಆಗುವುವು. ಆದುದರಿಂದ ಬೀಜಗಳೇ ಮೊಳಕೆಗೆ ಆಧಾರವಾಗಿವೆ.

ಉ—ಬೀಜದಲ್ಲಿ ಏನೇನಿದೆ?

ವಿ—ಮೇಲೆ ಒಂದು ಪೊರೆ ಇರುವುದು. ಇದೇ ಬೀಜವನ್ನು ರಕ್ಷಿಸುವುದು. ಗಿಡವನ್ನು ಬೆಳಸುವ ಪೊಳಕೆಯು ಒಳಗಿರುವುದು.

(ಪೊರೆಯ ಬಿಚ್ಚಿ ತೋರಿಸಿರಿ)

ಉ—ಬೀಜದ ಕಾಳುಗಳಲ್ಲಿ ಎರಡುಬಗೆಯುಂಟು. ಒಂದೆಲೆಯದು, ಎರಡು ಎಲೆಯದು. ಒಡೆದರೆ ಬೇಳೆಯಾಗುವ ಕಾಳುಗಳು ಮಾತ್ರ ಎರಡೆಲೆ ಬರುವುದು. ಇವುಗಳಲ್ಲಿ ಕೆಲವನ್ನು ಹೇಳಬಲ್ಲೆಯಾ ?

ವಿ—ರಾಗಿ, ಜೋಳ, ನಾಸುನೆ, ಒಂದೆಲೆಯವು, ಅವರೆ, ಹುರಳಿ, ಕಡಲೆ, ಎರಡೆಲೆಯವು.

ಉ—ಪೊಳಕೆಯಾಗುವುದು ಹೇಗೆ ?

ವಿ—ಕಾಳನ್ನು ನೆಲದಲ್ಲಿಟ್ಟು ನೀರು ಹಾಕಿದರೆ ಉಬ್ಬುವುದು. ಆಗ ಮೇಲಿನ ಪೊರೆ ಕಳೆದು ಪೊಳಕೆ ಹೊರಡುವುದು. ಬಿಸಿಲು, ಗಾಳಿ ತಾಕಿದರೆ ಪೊಳಕೆಯು ಮೇಲಕ್ಕೆ ಏಳುವುದು.

ಉ—ಗಿಡದ ಭಾಗಗಳು ಯಾವುವು ?

ವಿ—ಬೇರು, ಎಲೆ, ಕಾಳು.

ಉ—ಇವುಗಳ ಉಪಯೋಗವನ್ನು ಬಲ್ಲೆಯಾ ? ಬೇರು ನೆಲದೊಳಕ್ಕೆ ಇಳಿದು ನಸಿಗೆ ಬೇಕಾದ ಆಹಾರಗಳನ್ನು ನೆಲದಿಂದ ಒದಗಿಸುವುದು, ಎಳೆಯಬಿಸಿಲಿಗೆ ಎದುರಗಿದ್ದು ಗಾಳಿಯಿಂದ ಆಹಾರ ವಸ್ತುಗಳನ್ನು ತೆಗೆದುಕೊಡುವುದು. ಕಾಳು ಗಿಡ ಬೆಳೆದು ಹೂ ಕಾಯಿ ಕಾಳುಗಳಾಗಲು ಅನುಕೂಲವಾಗಿರುವುದು.

ವಾಚಕಪಾಠ.

ಈ ಕೆಳಗಿನ ವಾಕ್ಯಗಳನ್ನು ಬೋರ್ಡಿನಮೇಲೆ ಬರೆದು ಓದಿಸಿ. ವಸಂತ ಕಾಲದಲ್ಲಿ ಗಿಡಗಳೆಲ್ಲ ಚಿಗುರಿ ಹೂಬಿಡುವುವು. ಹೂಗಳು ಹೀಚಾಗಿ ಕಾಯಾಗಿ ಬಳಿಕ ಹಣ್ಣಾಗುವುವು. ಹಕ್ಕಿಗಳು ಸಂತೋಷದಿಂದ ಹಾರುತ್ತಿರುವುವು. ದನಕರುಗಳು ನಲಿದಾಡುವುವು. ಆಕಾಶ ನಿರ್ಮಲವಾಗಿರುವುದು.

ಬರಪ.

ಈ ಪದಗಳನ್ನು ಹುಡುಗರಿಂದ ಬರೆಯಿಸಿ.

ಸಂತೋಷ, ನಿರ್ಮಲ, ಪಕ್ಷಿ, ಆಕಾಶ, ಪುಲ್ಲಿಗೆ, ಪ್ರಕಾಶ, ಭ್ರಮರ.

— ಕೈಕೆಲಸ. —

ಈ ಪಾಠಕ್ಕೆ ಸಂಬಂಧಿಸಿದ ಕೆಲವು ಕೈಕೆಲಸಗಳನ್ನು ಹುಡುಗರಿಂದ ಮಾಡಿಸ ಬಹುದು. ಯಾವುವೆಂದರೆ:—

೧. ಪಕ್ಷಿಗಳ ಆಕೃತಿಯನ್ನು ಹಲಗೆಯಮೇಲೆ ಬರೆವುದು.

೨. ಎಲೆ, ಹೂ, ಕಾಯಿ, ಹಣ್ಣುಗಳ ಆಕೃತಿಯನ್ನು ಕಾಗದಗಳಿಂದಲೂ, ಜೇಡುಮಣ್ಣಿನಿಂದಲೂ ಮಾಡಿಸುವುದು.

೩. ಕಾಗದಗಳಿಂದ ಹೂವಿನಗಿಡಗಳನ್ನು ಮಾಡಿಸುವುದು.

೪. ಮಣ್ಣಿನಿಂದ ಹೂವಿನತೊಟ್ಟು, ದಳ ಮುಂತಾದುವನ್ನು ಮಾಡಿಸುವುದು.

೫. ಮಣ್ಣಿನಿಂದ ಹೂಗಿಡಗಳನ್ನಿಡುವ ಪಾತ್ರೆ ಮಾಡಿಸುವುದು.

— ಹಾಡು —

ನೋಡುನೋಡೆಲಾ । ಕಾಡಸೊಬಗನು । ಕೂಡಿಕೊಂಡು ಸುತ್ತಿ ಬರುವ ವಿಾಗಲೆಲ್ಲರು ॥ ಮರಗಳೆಲ್ಲವು । ಚಿಗುತುಪೂತಿವೆ । ವರಫಲಂಗಳಹವು ಮುಂದೆ ರುಚಿಯು ಬೀರುತ ॥೧॥

ಲತೆಗಳೆಲ್ಲವೂ । ವಿತತಿತುಂಬಿದೆ, ಹಿತದಕಂಪನೀವುತಿಹುವು ಮುಡಿಯುಬ ಪ್ಪುದು ॥೨॥

ಪಾಡುತಿಪ್ಪುದು । ಪಕ್ಷಿಸಂತತಿ । ಧಾರಿಣಿಯೊಳ್ಪೀವಮಹಿಮೆ ಸಾರುವಂದದಿ ॥

— ಕಥೆ. —

ಒಂದು ದೇಶದಲ್ಲಿ ವೀರಸೇನನೆಂಬ ಅರಸನು ಇದ್ದನು. ಅವನಿಗೆ ಹತಿವು ಕಡಮೆಯಾಗುತ್ತಾ ಬಂತು. ಆಗ ತನ್ನ ಮಂತ್ರಿಸಂಗಡ ಯೋಚಿಸಿ ಒಳ್ಳೇ ವೈದ್ಯನನ್ನು ಕರೆಯಿಸೆಂದು ಹೇಳಿದನು. ಅವನು ಜಾಗರೂಕನೆಂಬ ಸೇವಕನಿಗೆ ಹೇಳಲು ಅವನು ಆವೂರಲ್ಲಿ ವಿಚಾರಿಸಿ ಡಂಭಾಚಾರಿ ಎಂಬ ವೈದ್ಯನನ್ನು ಕರೆದುಕೊಂಡು ಬಂದು ಮಂತ್ರಿಯಬಳಿ ಬಿಟ್ಟನು. ಅವರೆಲ್ಲರೂ ಅರಸನ ಬಳಿಗೆ ಹೋಗಲು ರಾಜನು ವೈದ್ಯನಿಗೆ ಕೈಮುಗಿದು ಮನ್ನಿಸಿ, ತನಗೆ ಒಳ್ಳೆಯ ಔಷಧವನ್ನು ಕೊಡಿ

ರೆಂದು ಹಲವುಬಗೆಯಿಂದ ಬೇಡಿದನು. ಅದಕ್ಕವನು ತನ್ನ ಕರಾಟವನ್ನು ಬಿಚ್ಚಿ ಒಂದೊಂದು ಮಾತ್ರೆಯನ್ನು ತೆಗೆದು ಅವುಗಳ ಹೆಸರನ್ನೂ ಗುಣಗಳನ್ನೂ ಬಣ್ಣಿಸುತ್ತಾ ಘನತರವಾದುದೆಂದು ಕೆಲವು ಮಾತ್ರೆಗಳನ್ನು ಕೊಟ್ಟು ಮನೆಗೆ ಹೋದನು. ರಾಜನು ಆ ಮಾತ್ರೆಗಳನ್ನು ಸೇವಿಸುತ್ತ ಬಂದರೂ ಹಶಿವು ಉಂಟಾಗಲಿಲ್ಲ. ಆದುದರಿಂದ ಯೋಗ್ಯನಾದ ಮತ್ತೊಬ್ಬ ಪಂಡಿತನನ್ನು ಕರೆಯಿಸಬೇಕೆಂದು ಮಂತ್ರಿಗೆ ಆಜ್ಞಾಪಿಸಿದನು. ಆಗ ಅವನು ದಿಕ್ಕು ತೋರದೆ ಚಿಂತಿಸುತ್ತಾ ದಾರಿಯಲ್ಲಿ ಹೋಗುತ್ತಿರಲು, ಅವ್ಯತಹಸ್ತನೆಂಬ ಯೋಗಿಯು ಮಾರ್ಗವಶಾತ್ ಆ ವೂರಿಗೆಬಂದು ಗ್ರಾಮಸ್ಥರಿಂದ ಜರಸನ ರೋಗದ ಸುದ್ದಿಯನ್ನು ಕೇಳಿ ಆತನನ್ನು ನೋಡಬೇಕೆಂದು ಬರುತ್ತಿದ್ದನು. ಜಾಗರೂಕನು ಯೋಗಿಯನ್ನು ಅರಸನ ಬಳಿಗೆ ಕರೆದುತರಲು ರಾಜನು ಅವನಿಗೆ ನಮಸ್ಕರಿಸಿ ಮನ್ನಿಸಿ ತನ್ನ ದುಃಖವನ್ನು ತಿಳಿಸಲು ಆತನು ರೋಗದ ಕಾರಣವನ್ನು ತಿಳಿದುಕೊಂಡು, ನೀನು ಹೆದರಬೇಡ. ಒಂದು ಚೆಂಡನ್ನು ಮಾಡಿಸಿಡು, ಎಂದು ಹೇಳಿ ತಾನು ಅಡವಿಗೆ ಹೋಗಿ ಕೆಲವು ಸೊಪ್ಪುಗಳನ್ನು ತಂದು ಅವುಗಳ ರಸವನ್ನು ಹಿಂಡಿ, ಆ ಚೆಂಡಿಗೆ ಬಳಿದು, ಅದನ್ನು ಕಾಲಲ್ಲಿ ಒದೆಯುತ್ತಾ ತನ್ನೊಂದಿಗೆ ಆಡಬೇಕೆಂದು ಅರಸನಿಗೆ ಹೇಳಿದನು. ರಾಜನು ಹಾಗೆಯೇ ಮಾಡುತ್ತ ಬರಲು ಒಂದೆರಡು ದಿನಗಳಲ್ಲಿಯೇ ಹಶಿವು ಉಂಟಾಗಿ ಆರೋಗ್ಯವಾಯಿತು.

ಈ ಕಥೆಯನ್ನು ಅಭಿನಯದಿಂದ ಆಡಿಸತಕ್ಕದ್ದು.

ರಾಜನು, ಮಂತ್ರಿ, ಸೇವಕ, ವೈದ್ಯ, ಗ್ರಾಮಸ್ಥನು, ಯೋಗಿ, ಇವರ ಹೆಸರುಗಳನ್ನು ಒಬ್ಬೊಬ್ಬ ಹುಡುಗನಿಗೆ ಇಟ್ಟು ಉಳಿದ ಹುಡುಗರೆಲ್ಲ ಸಭಿಕರಾಗಿ ನೋಡುತ್ತಿರುವುದು.

ಮೊದಲನೆಯ ಪಾಠ.

(30 ನಿಮಿಷಗಳು)

ವೀರಸೇನ, ಬುದ್ಧಿವಂತನೆಂಬ ಮಂತ್ರಿ, ಜಾಗರೂಕ, ಇವರು ಸಭೆಯನ್ನು ಪ್ರವೇಶಿಸುವರು.

ವೀರ.—ಬುದ್ಧಿವಂತ, ಕೇಳು.

ಪಸಿವಡಂಗಿ, ಪೋದುದೆನೆಗೆ, ನಿದ್ರೆಬಾರದು ।
ಪೊಸಚಿಕಿತ್ಸೆಗೆಯ್ಯದಿರಲು, ಬದುಕಲಾರೆನು ॥೧॥
ಮನಕೆ ಹರುಷವಿನಿಸುಮಿಲ್ಲ ಕನಸು ಹೇರಳ ।
ಉಣಿಸಸಹ್ಯವಾಗಿ ತೋರ್ಪುದೆನಗೆ ಮಂತ್ರಿಯೆ ॥೨॥

ಅಯ್ಯಾ, ನನಗೆ ಸ್ವಲ್ಪವೂ ಹಸಿವು ತೋರುವುದಿಲ್ಲ. ಒಳ್ಳೇ ವೈದ್ಯನನ್ನು ಕರೆಯಿಸಿ ಔಷಧ ಕೊಡಿಸದಿದ್ದರೆ ಬದುಕುವುದು ಕಷ್ಟ.

ಬುದ್ಧಿ.—ಜೀಯಾ, ಅಪ್ಪಣೆಯುಂತೆ! ಕರೆಯಿಸುವೆನು (ಜಾಗರೂಕನನ್ನು ನೋಡಿ) ಜಾಗರೂಕ, ಈ ಊರಲ್ಲಿ ಯಾರಾದರೂ ಗಟ್ಟಿಗನಾದ ವೈದ್ಯನನ್ನು ವಿಚಾರಿಸಿ ಕರೆದುಕೊಂಡು ಬಾ.

ಜಾಗ.—ಅಪ್ಪಣೆ (ಎಂದು ಊರೊಳಕ್ಕೆ ಹೋಗಿ ಹಿತವಾದಿ ಎಂಬ ದೊಡ್ಡಮನುಷ್ಯನನ್ನು ಕಂಡು) ಈ ಊರಲ್ಲಿ ಗಟ್ಟಿಗರಾದ ವೈದ್ಯರು ಯಾರಪ್ಪಾ!

ಹಿತ.—ಇಲ್ಲಿ ಒಬ್ಬ ಘನಪಂಡಿತನಿರುವನು. ಅವನ ಹೆಸರು ಡಂಭಾಚಾರಿ. ಅವನ ಮನೆ ಆ ದೇವಸ್ಥಾನದ ಪಕ್ಕದಲ್ಲಿದೆ.

ಜಾಗ.—(ವೈದ್ಯನ ಮನೆಯನ್ನು ವಿಚಾರಿಸಿಕೊಂಡುಹೋಗಿ) ಅಚಾರ್ರೆ! ಶರಣು ಶರಣು.

ಡಂಭಾ —ಬಹುಕಾಲ ತಣ್ಣಗೆ ಬದುಕು. ಏನಿದು? ಎಂದೂ ಇಲ್ಲದೆ ಹೀಗೆ ಹೊರಟುಬಂದೆ?

ಜಾಗ—ಮಂತ್ರಿಯವರ ಅಪ್ಪಣೆಯಾಗಿದೆ. ಈಗಲೇ ಹೊರಡಬೇಕು. ದಯಮಾಡಿರಿ. (ಎಂದು ಅತನನ್ನು ಕರೆದುಕೊಂಡು ಮಂತ್ರಿಯ ಬಳಿಗೆ ಬರಲು)

ಮಂತ್ರಿ—ಇವರೇನೋ ಪಂಡಿತರು. ನಮಸ್ಕಾರ ಸ್ವಾಮಿ.

ಡಂಭಾ.—ಅಹಹಾ! ದೀರ್ಘಾಯುಷ್ಯಮಸ್ತು. ರಾಜದ್ವಾರೇ ವಿಜಯುಮಸ್ತು. ಏನಪ್ಪಣೆ?

ಬುದ್ಧಿ.—ದಯಮಾಡಿ. ನಾವು ರಾಜರ ಬಳಿಗೆ ಹೋಗೋಣ (ಎಂದು ಅತನನ್ನು ಕರೆದುಕೊಂಡು ಅರಮನೆಗೆ ಬರುವನು.)

ವೀರ.—(ಅವರನ್ನು ನೋಡಿ ಅತುರದಿಂದ) ಇವರೇನೋ ಪಂಡಿತರು!! ನಮಸ್ಕಾರ ನಮಸ್ಕಾರ. (ಎಂದು ಅಡ್ಡಬೀಳುವನು)

ಡಂಭಾ.—ಚಿತ್ತ, ಚಿತ್ತ. ದೀರ್ಘಾಯುರ್ಭವ. ಅಖಂಡಸಾಮ್ರಾಜ್ಯಸಿದ್ಧಿರಸ್ತು.

ವೀರ.—ಇಲ್ಲಿ ದಯಮಾಡಬೇಕು. (ಎಂದು ಕುರ್ಚಿಯನ್ನು ತೋರಿಸುವನು)

ಡಂಭಾ.—ಅಪ್ಪಣೆ. (ಎಂದು ಕುರ್ಚಿಯಮೇಲೆ ಕುಳ್ಳಿರುವನು)

ವೀರ—ನನಗೆ ಹಶಿವೇ ಇಲ್ಲವೈಯ್ಯಾ, ದಯಮಾಡಿ ಯಾವ್ರದಾದರೂ ಒಳ್ಳೇ ಔಷಧ ಕೊಡಬೇಕು. [ಎಂದು ರೋಗಿಷ್ಠನಂತೆ ಮುಖ ಸಪ್ಪಗೆ ಮಾಡಿಕೊಂಡು ಹೇಳುವನು.]

ಡಂಭಾ—ಇಷ್ಟೇನೋ? ಅದೆಷ್ಟುಹೊತ್ತು? ಒಂದು ನಿಮಿಷದಲ್ಲಿ ಹಶಿವಾಗುವಂತೆ ಮಾಡುವೆನು. ಎಲ್ಲಿ? ತಮ್ಮ ಕೈಯನ್ನು ದಯಮಾಡಿ ಇತ್ತ ಕೊಡಿರಿ. [ಎಂದು ಕೈಹಿಡಿದು ತಲೆಯನ್ನು ತಗ್ಗಿಸಿ ಕಣ್ಣುರಪ್ಪೆ ಮುಚ್ಚಿ ಮೇಲೆ ನೋಡಿ ಚಿಂತಿಸುವಂತೆ ನಟಿಸಿ ಮೆಲ್ಲಗೆ] ಬುದ್ಧಿ! ಬಹಳ ಮಂದವಾಗಿದೆ. [ಎಂದು ಕಂಕುಳಲ್ಲಿದ್ದ ವಸ್ತ್ರದ ಗಂಟಿನ್ನು ಬಿಚ್ಚಿ ಭರಣಿಯ ಮುಚ್ಚಳವನ್ನು ತೆರದು ಕೆಲವು ಮಾತ್ರೆಗಳನ್ನು ಕೈಯಲ್ಲಿ ತೆಗದುಕೊಂಡು] ಈ ಮಾತ್ರೆಗಳನ್ನು ಬೆಳಿಗ್ಗೆ ಸಾಯಂಕಾಲ ಒಂದೊಂದರಂತೆ ಬಾಯಲ್ಲಿ ಹಾಕಿಕೊಂಡು ಬಿಸಿನೀರನ್ನು ಕುಡಿಯಿರಿ.

ಮೂರುಮಾತ್ರೆಯಿಂದ ಗುಣವು।
ತೋರುತಿಹುದು ನಿಮಗೆ ಮುಂದೆ।
ಬಾರದೆಂದು ಯಿಂತಜೀನೆ।
ಧಾರಿಣೀಶ ಸಟೆಯಿದಲ್ಲ ॥೧॥

ಗುಣ ತೋರದಿದ್ದರೆ ನನಗೆ ಬದುಲು ಹೆಸರಿಡಿರಿ. [ಎಂದು ಮಾತ್ರೆಗಳನ್ನು ಕೊಟ್ಟು] ನನಗೆ ಇನ್ನು ಅಪ್ಪಣೆಯೊ? [ಎಂದು ಹೊರಟುಹೋದನು.]

ಎಲ್ಲರೂ ಅವರವರ ಮನೆಗಳಿಗೆ ಹೋಗುವರು.

ಎರಡನೆಯ ಪಾಠ.

ಕಾಲ 30 ನಿಮಿಷಗಳು.

ಅರಸನೂ, ಮಂತ್ರಿಯೂ ಪ್ರವೇಶಿಸುವರು.

ವೀರ.—ಬುದ್ಧಿವಂತ, ಆ ಪಂಡಿತನ ಮಾತ್ರೆಗಳಿಂದ ನನಗೆ ಸ್ವಲ್ಪವೂ ಗುಣತೋರಲಿಲ್ಲ. ಉತ್ತಮನಾದ ಮತ್ತೊಬ್ಬ ವೈದ್ಯನನ್ನು ಕರೆಯಿಸು.

ಬುದ್ಧಿ.—ಅಪ್ಪಣೆ [ಎಂದು ಯಾರನ್ನು ಕರತರೋಣವೆನ್ನುತ್ತಾ ಯೋಚಿಸುವನು] ಇಷ್ಟರಲ್ಲಿ ಕೋಟೆಯ ಬಳಿ ಒಬ್ಬ ಯೋಗಿ ಬರುತ್ತಿರುವನು.

ಜಾಗ.—ಯಾರಯ್ಯಾ ನೀವು ?

ಯೋಗಿ.—ನಾನೊಬ್ಬ ಯೋಗಿ. ನನ್ನ ಹೆಸರು ಅಮೃತಹಸ್ತ. ನನಗೆ ಕೆಲವು ಔಷಧಗಳು ಗೊತ್ತುಂಟು. ನಿಮ್ಮ ಮಹಾರಾಜರಿಗೆ ಮೈಯಲ್ಲಿ ಚನ್ನಾಗಿಲ್ಲ ವೆಂದು ಕೇಳಿ ಅವರನ್ನು ನೋಡಬಂದೆನು. ಈ ಸಂಗತಿಯನ್ನು ಅವರಿಗೆ ತಿಳಿಸು.

ಜಾಗ.—(ಧೊರೆಯ ಬಳಿಗೆ ಹೋಗಿ ಬಾಗಿ ನಮಸ್ಕರಿಸಿ) ಮಹಾರಾಜಾ, ಕೋಟೆಯ ಬಳಿ ಅಮೃತಹಸ್ತನೆಂಬ ಯೋಗಿಯು ಬರುತ್ತಿರುವನು. ತಮ್ಮ ದರ್ಶನವನ್ನು ಅಪೇಕ್ಷಿಸುವನು. ಆಪ್ಪಣೆಯಾದರೆ ಕರೆದುತರುವೆನು.

ವೀರ.—ಒಳ್ಳೀದು, ಈಗಲೇ ಕರದುಕೊಂದು ಬಾ. [ಜಾಗರೂಕನೂ, ಯೋಗಿಯೂ, ಪ್ರವೇಶಿಸುವರು.]

ವೀರ.—ಸ್ವಾಮಿಗಾ ನಮಸ್ಕಾರ [ಎಂದು ಬಾಗಿ ವಂದಿಸುವನು.]

ಅಮೃತ.—

ಅರಸನೆ, ನೀನಾರೋಗ್ಯದಿ ।
ಚಿರಕಾಲಂ ಬಾಳ್ದು ಧರ್ಮದಿಂದಾಳುತ್ತಂ ॥
ಧರೆಯಂಪೊರೆಯೈ ನಿನಗುರು ।
ತರಸೌಖ್ಯಂಗಳನೆ ಕೊಟ್ಟು ಪಾಲಿಕೆದೇವಂ ॥೧॥

ವೀರ.—[ಕುರ್ಚಿಯನ್ನು ಕೈಯಿಂದ ತೋರಿಸಿ] ಈ ಪೀಠದಮೇಲಕ್ಕೆ ದಯಮಾಡ ತಕ್ಕದ್ದು (ಎನ್ನುತ್ತಾನೆ)

ಅಮೃತ.—ಜಯಸೀತಾರಾಂ (ಎಂದು ಕಿರುನಗೆ ನಗುತ್ತಾ ಚನ್ನಾಗಿ ಕುಳಿತುಕೊಂಡು) ಮಹಾರಾಜಾ, ನಿನಗೆ ಮೈಯಲ್ಲಿ ಸ್ವಸ್ಥವಿಲ್ಲವೆಂದು ಕೇಳಿ ಇಲ್ಲಿಗೆ ಬಂದೆನು. ಆದು ಯಾವ ರೋಗ?

ವೀರ.—ಸ್ವಾಮಿಗಾ, ಏನುಹೇಳಲಿ.

ತಿಂದತಿಂಡಿಯರಗದೆನಗೆ ।
ಮುಂದವಾಯ್ತು ಪಸಿವುಪೋಗಿ ॥
ಕಂದುತಿರ್ಪೆ ದಿನದಿನಕ್ಕೆ ।
ಚಂದವಿಲ್ಲಮನಕೆ ತನಗೆ ॥ (ಎಂದು ಮೆಲ್ಲಗೆ ಹೇಳುವನು.)

ಅಮೃತ.—ನಾನು ಹೇಳಿದಂತೆ ಮಾಡುವಿಯಾ ? ಬೇಗ ಹಸಿವಾಗುವುದು.

ವೀರ.—ಮಹಾ ಪ್ರಸಾದ. ಅಪ್ಪಣೆ ಆಗಬೇಕು.

ಅಮೃತ.—ನಾನು ಔಷಧದ ಹಸುರುಗಳನ್ನು ತರಲು ಅಡವಿಗೆ ಹೋಗಿಬರುವೆನು. ಅಷ್ಟರಲ್ಲಿ ಒಂದು ಚಂಡು ಮಾಡಿಸಿಡು. [ಎಂದು ಹೊರಡುವನು.]

ವೀರ.—[ಮಂತ್ರಿಯೊಡನೆ] ಇವನು ಸಾಧಕಮಾಡಿರುವನೊ?

ಮಂತ್ರಿ.—ಬುದ್ಧಿ! ಇರಬಹುದು ಯೋಗಿಗಳಿಗೆ ಒಳ್ಳೆ ಸಂಗತಿಗಳು ತಿಳಿಯುವುವಂತೆ.

ಅಮೃತ.—[ಕೆಲವು ಸೊಪ್ಪುಗಳನ್ನು ಹಿಡಿದುಕೊಂಡು ಬಂದು] ನಾನು ಹೇಳಿದ್ದು ಚಂಡು ಎಲ್ಲಿ? [ಎಂದು ಕೇಳುವನು]

ವೀರ.—ಇಗೊ [ಎಂದು ಕೊಡುವನು]

ಅಮೃತ.—(ಸೊಪ್ಪುಗಳನ್ನು ಹಿಂಡಿ ರಸ ತೆಗದು ಆ ಚಂಡಿಗೆ ಬಳಿದು) ಈ ಚಂಡನ್ನು ಕಾಲಿನಿಂದ ಒದೆಯುತ್ತಾ ನನ್ನೊಡನೆ ಆಡಬೇಕು [ಎಂದು ಹೇಳುವನು]

ವೀರ.—ಚಿತ್ತಾ ಹಾಗೆಯೇ ಆಗಲಿ [ಎಂದು ಎದ್ದು ಹುವ್ವಿನ ತೋಟದ ಹತ್ತಿರವಿರುವ ಬಯಲಿಗೆ ಯೋಗಿಯನ್ನು ಕರೆದುಕೊಂಡು ಹೊರಡುವನು. ಸಭೆಯುವರೆಲ್ಲರೂ ಸಂಗಡ ಹೊರಡುವರು.]

ಮೂರನೆಯಪಾಠ.

ಕಾಲ 30 ನಿಮಿಷ.

ಹಾಡುತ್ತಾ ಚಂಡನ್ನು ಕಾಲಿನಿಂದ ಒದೆಯುತ್ತಾ ಆಡುವುದು.

ರಾಜನೂ ಕೆಲವು ಸಭಿಕರೂ ಒಂದು ಗುಂಪಾಗಿಯೂ, ಯೋಗಿಯೂ ಉಳಿದವರು ಮತ್ತೊಂದು ಕ್ಷಿಯವರಾಗಿಯೂ ಗೊತ್ತುಮಾಡಿಕೊಂಡು ಆಡುವರು.

ರಾಜನು ಒಂದು ಪದವನ್ನು ಹಾಡಿದ ಕೂಡಲೇ ಯೋಗಿಯಕಡೆಗೆ ಚಂಡನ್ನು ಒದೆಯುವನು. ಆಮೇಲೆ ಯೋಗಿಯು ಒಂದು ಪದವನ್ನು ಹೇಳಿ ರಾಜನ ಕಡೆಗೆ ಒದೆಯುವನು. ಹೀಗೆ ಮೂರುಸಾರಿ ಹಾಡಿಕೊಂಡು ಒದೆದಮೇಲೆ ಎಲ್ಲರೂ ಸೇರಿ ಮನಸ್ಸಿಗೆ ಬಂದಂತೆ ಚಂಡನ್ನು ಒದೆಯುತ್ತಾ ಸ್ವಲ್ಪಹೊತ್ತು ಆಡುತ್ತಿರುವರು.

ರಾಗ ಹಿಂದೂಸ್ತಾನಿ. ಏಕತಾಳ.

ರಾಜ —ಚಂಡಿನಾಟ। ದಿಂದ ನಮ । ಗೇನು ಲಾಭವು। ನಮ । ಗೇನು ಲಾಭವು॥

ಯೋಗಿ.—ಬಳಲಿ ಮೈಯು। ಕೊಳೆಗಳೆಲ್ಲ। ತೊಳೆದು ಬರುವವು। ಹೊರಗೆ। ತೊಳೆದುಬರುವವು॥

ರಾಜ — ಔಷಧಂಗಳಿಂದ। ರೋಗ। ವಾಸಿಯಾಗದೇ! ರೋಗ। ವಾಸಿಯಾಗದೇ?॥
ಯೋಗಿ.—ಗಾಸಿ ಗೊಳಿಸೆ ತನುವಬೇಗ। ವಾಶಿಯುಪ್ಪುದು। ಬೇಗ। ವಾಶಿಯುಪ್ಪುದು॥
ರಾಜ.—ಬಯಲಿನಲ್ಲಿ ಗಾಸಿಗೊಂಡು ಅಡಲೇತಕೆ। ನಾವ। ಅಡಲೇತಕೆ॥
ಯೋಗಿ.—ಬಲವುಹೆಚ್ಚಿ। ಪಲವುಕಾಲ। ಬದುಕಲಪ್ಪುದು॥ ನಾವು। ಬದುಕಲಪ್ಪುದು॥

ಹೀಗೆ ಹಾಡಿದ ತರುವಾಯ ಮನಸ್ಸು ಬಂದಂತೆ ಸ್ವಲ್ಪ ಹೊತ್ತು ಆಟವಾಡುತ್ತಿರಲು ಸಂಜೆಯಾಗುವುದು. ಆಮೇಲೆ ಎಲ್ಲರೂ ಆಟವನ್ನು ನಿಲ್ಲಿಸುವರು.

ವೀರ.—(ಮೊದಲಿಗಿಂತ ಹೆಚ್ಚಾಗಿ ಹತಿವು ತೋರಲು ಯೋಗಿಯುಕಡೆ ನೋಡಿ) ಸ್ವಾಮಿಗಾ, ತಾವು ಹೇಳಿದ್ದು ನಿಜ. ಇಷ್ಟುಮಾತ್ರ ಆಡಿದ್ದರಿಂದಲೇ ನನಗೆ ಬಹಳ ಹಸಿವಾಗುತ್ತಿದೆಯಲ್ಲಾ! ನಿತ್ಯವೂ ಆಡುತ್ತ ಬಂದರೆ ಬೇಕಾದಹಾಗೆ ಹಸಿವಾಗಬಹುದೆಂದು ತೋರುತ್ತದೆ. ಸುಲುಭವಾದ ಈ ಉಪಾಯವನ್ನು ತೋರಿಸಿದ್ದರಿಂದ ನಿಮ್ಮನ್ನು ಬಹಳವಾಗಿ ವಂದಿಸುವೆನು.
(ಎಂದು ನಮಸ್ಕರಿಸುವನು.)

ಅಮೃತ.—ಸರಿ ಸರಿ!! ನೀನು ಎಲ್ಲವನ್ನೂ ಬಲ್ಲೆಯಲ್ಲವೆ? ಇದರಲ್ಲಿ ಏನಿದೆ! ನಿತ್ಯವೂ ಹೀಗೆಯೇ ಆಡುತ್ತಾ ಬಂದರೆ ಚನ್ನಾಗಿ ಹಸಿವಾಗುವುದಲ್ಲದೆ ಆರೋಗ ದೃಢಕಾಯನಾಗಿ ಬಹುಕಾಲ ಸೌಖ್ಯದಿಂದ ಬದುಕುತ್ತೀ. ಇನ್ನು ನಾನು ಹೊರಡುವೆನು.

ಎಲ್ಲರೂ ಆತನ ಹಿಂದೆ ಸ್ವಲ್ಪದೂರ ಹೋಗಿ ಸಾಗಕಳುಹಿಸಿ ಅಪ್ಪಣೆ ಪಡದು ತಮ್ಮ ತಮ್ಮ ಮನೆಗಳಿಗೆ ಹೊರಡುವರು.

ಮಾದಿರಿಗಾಗಿ ಕಥೆಗಳನ್ನು ಅಭಿನಯರೂಪದಿಂದ ಆಡಿ ತೋರಿಸುವುದರಿಂದ ವಿದ್ಯಾರ್ಥಿಗಳಿಗೆ ಉಲ್ಲಾಸವೂ ಜ್ಞಾಪಕಶಕ್ತಿಯೂ ಹೆಚ್ಚುವುದು.

ಕೆ. ರಾಮಸ್ವಾಮ್ಯಯ್ಯಂಗಾರ್,
ಹೆಡ್‌ಮಾಸ್ಟರ್.

ಗ್ರಂಥ ವಿಮರ್ಶೆ.

ಶ್ರೀ ವಾಸಿಷ್ಠರಾಮಾಯಣ.

ಪ್ರಪಂಚದಲ್ಲಿ ಹುಟ್ಟಿದವರೆಲ್ಲರಿಗೂ ಜ್ಞಾನವತ್ಯಾವಶ್ಯಕವೆಂಬುದನ್ನು ನಾವು ಹೇಳಬೇಕಾದುದಿಲ್ಲ. ಇದು ನಾನಾವಿಧ ಗ್ರಂಥಾಭ್ಯಾಸದಿಂದಲೂ ಗುರುಹಿರಿಯರ ನಡೆನುಡಿಗಳಿಂದಲೂ ಬರಬೇಕೆಂಬುದು ಸಿದ್ಧವಾಗಿಯೇ ಇರುವುದು. ಇದಕ್ಕಾ

ಗಿಯೇ ನಮ್ಮ ಹಿರಿಯರು ಅನೇಕ ಸದ್ಗ್ರಂಥಗಳನ್ನು ರಚಿಸಿರುವರು. ಪ್ರಾಯುಕವಾಗಿ ಅವುಗಳೆಲ್ಲವೂ ಸಂಸ್ಕೃತಭಾಷೆಯಲ್ಲಿಯೇ ಇರುವುವು. ಅವುಗಳಲ್ಲಿ ಅವಶ್ಯಕವಾದುದನ್ನು ದೇಶಭಾಷೆಗಳಲ್ಲಿ ಪರಿವರ್ತಿಸಿದಲ್ಲದೆ ನಮ್ಮ ದೇಶವೂ ಭಾಷೆಯೂ ವೃದ್ಧಿಹೊಂದಲಾರವು. ನಮ್ಮ ಪ್ರಾಚೀನ ಗ್ರಂಥಗಳಲ್ಲೆಲ್ಲ ಸರ್ವೋತ್ತಮವೆಂದು ಸರ್ವರಿಂದಲೂ ನಿರ್ವಿವಾದವಾಗಿ ಸಮ್ಮತಿಸಲ್ಪಡುತಿರುವ "ಶ್ರೀವಾಸಿಷ್ಠರಾಮಾಯಣ" ವನ್ನು ಮೈಸೂರು ಸದ್ವಿದ್ಯಾಶಾಲಾಧ್ಯಕ್ಷರಾದ ವೇ॥ ಬ್ರಂ॥ ಪಂಡಿತ ಗುಂಡಶಾಸ್ತ್ರಿಗಳವರು ಲಲಿತವಾದ ಕನ್ನಡಟೀಕಾ ವಿವರಣೆಗಳೊಡನೆ 'ವಿಜ್ಞಾನವೈಭವ' ಎಂಬ ಮಾಸಪತ್ರಿಕವಾಗಿ ಮುದ್ರಿಸಲುಪಕ್ರಮಿಸಿ, ಇದುವರೆಗೆ ನಮಗೆ ಕಳುಹಿಸಿರುವ ೭ ಸಂಚಿಕೆಗಳನ್ನು ನಾವು ಅತ್ಯಾದರದಿಂದ ಸ್ವೀಕರಿಸಿ ನೋಡಿದೆವು. ಇದರಲ್ಲಿ ಶ್ರೀರಾಮನ ವಿದ್ಯಾಭ್ಯಾಸಕ್ರಮವೂ ಅದರಿಂದುಂಟಾದ ಜ್ಞಾನವೂ ನಮ್ಮ ಬಾಲಕರಿಗಾವಶ್ಯಕವಾದ ಅನೇಕ ನೀತಿಗಳೂ ಬಹುಸರಸವಾಗಿರುವುವು. ಪ್ರಾರಂಭದಲ್ಲಿಯೇ ಇಷ್ಟು ರಸವಿರುವಾಗ ಮುಂದೆ ವಸಿಷ್ಠಮುನಿಯು ಮಾಡುವ ಉಪದೇಶಗಳೂ ಉಪಾಖ್ಯಾನಗಳೂ ಎಷ್ಟು ಸರಸವಾಗಿರಬಹುದೆಂಬುದನ್ನು ನಾವು ಬರೆಯಬೇಕಾದುದಿಲ್ಲ. ಇದಲ್ಲದೆ ವೇ॥ ಶಾಸ್ತ್ರಿಗಳವರು ರಕ್ಷಾಪತ್ರಗಳನ್ನೂ ಅನುಪಯೋಗಪಡಿಸದೆ ಅದರಲ್ಲಿ ಅಬಾಲವೃದ್ಧರಿಗೂ ಅತ್ಯಾವಶ್ಯಕವಾದ ಧರ್ಮನೀತಿಗಳನ್ನೂ ಸರಸವಾಗಿ ನೀತಿಬೋಧಕವಾದ ಮನೋವಿನೋದಕರವಾಗಿರುವ ಪದ್ಯಗಳನ್ನೂ ಕಥೆಗಳನ್ನೂ ಪ್ರಕಟಿಸುತಿರುವುದು ಅತಿಶ್ಲಾಘನೀಯವಾಗಿರುವುದು. ಮುದ್ರಣವು ಅತಿಸುಂದರವಾಗಿಯೂ ಕಾಗದವು ಸರ್ವೋತ್ಕೃಷ್ಟವಾಗಿಯೂ ಇರುವುದು. ಇದಕ್ಕಾಗಿ ಇವರು ಪ್ರಕಟಿಸಿರುವ ನೋಟೀಸುಗಳನ್ನು ಈ ಪತ್ರಿಕೆಯ ಜೊತೆಯಲ್ಲಿ ಕಳುಹಿಸಿರುವೆವು. ಇಂತಹ ಸುಸಮಯವನ್ನು ಕಳೆದುಕೊಳ್ಳದೆ ನಮ್ಮ ವಾಚಕರೆಲ್ಲರೂ ಚಂದಾದಾರರಾಗಿ ಗ್ರಂಥಸೇವನೆಯನ್ನು ಮಾಡಿ ಶ್ರೇಯಸ್ಸನ್ನು ಪಡೆಯುಲೆಂದು ಹಾರೈಸುವೆವು. ನಮ್ಮ ಆರ್ಯಮತ ಧರ್ಮವನ್ನೂ ನೀತಿಯನ್ನೂ ಬೋಧಿಸುವುದರಲ್ಲಿ ಇದಕ್ಕೆ ಸಮಾನವಾದ ಮತ್ತೊಂದು ಗ್ರಂಥವಾವುದೂ ಇಲ್ಲವಾದಕಾರಣ ನಮ್ಮ ದೇಶದ ವಿದ್ಯಾಶಾಲೆಗಳಲ್ಲಿರುವ ಉಪಾಧ್ಯಾಯರು ಬಾಲಕರಿಗೆ ಮತನೀತಿಗಳನ್ನು ಉಪದೇಶಿಸಬೇಕಾಗಿರುವ ಕಾಲವು ಬಂದೊದಗಿರುವುದರಿಂದ, ನಮ್ಮ ದೇಶೀಯರಾದ ಉಪಾಧ್ಯಾಯರೆಲ್ಲರಿಗೂ ಈ ಗ್ರಂಥವತ್ಯಾವಶ್ಯಕವೆಂದು ನಾವು ದೃಢವಾಗಿ ಹೇಳುವೆವು.

———:o:———

ವಿದ್ಯಾದಾಯಿನಿ.

(A MONTHLY JOURNAL)

ಭಾಗ ೧೬] ಅಕ್ಟೋಬರ್—೧೯೦೮. [ಸಂಚಿಕೆ ೧೦

ಪ್ರಜಾಪ್ರತಿನಿಧಿಗಳ ಸಭೆಯಲ್ಲಿ ಮೈಸೂರು ಸಂಸ್ಥಾನದ ದಿವಾನರವರು ಮಾಡಿದ ಉಪನ್ಯಾಸ.

ವಿದ್ಯಾಭ್ಯಾಸ.

1. ಈಗ ವಿದ್ಯಾಭ್ಯಾಸದ ಇಲಾಖೆಯ ವಿಚಾರವಾಗಿ ಪ್ರಸ್ತಾಪಿಸುತ್ತೇವೆ. ಈ ವರುಷ ಈ ಇಲಾಖೆಯ ಅಡಳಿತಗಳಿಗೆ ಸರ್ಕಾರದವರು ತುಂಬಾ ನಿಗೆ ಕೊಟ್ಟಿರುತ್ತಾರೆ.

2. ಈ ವರ್ಷದಲ್ಲಿ ಸ್ಕೂಲುಗಳ ಸಂಖ್ಯೆಯೂ ವಿದ್ಯಾರ್ಥಿಗಳ ಸಂಖ್ಯೆಯೂ ಬಹಳ ಮಟ್ಟಿಗೆ ಹೆಚ್ಚಿರುತ್ತವೆ. ಇದು ತೃಪ್ತಿಕರವಾದದ್ದೇ ಸರಿ. ಸರ್ಕಾರಿ ಮತ್ತು ಖಾಸಗಿ ಸ್ಕೂಲುಗಳ ಒಟ್ಟು ಸಂಖ್ಯೆಯು 4,146; ಇವುಗಳಲ್ಲಿ ವಿದ್ಯಾರ್ಥಿಗಳ ಒಟ್ಟು ಸಂಖ್ಯೆಯು 1,21,106. ಮೈಸೂರಿನಲ್ಲಿ ವಿದ್ಯಾಭ್ಯಾಸದ ಇಲಾಖೆಯು ಏರ್ಪಟ್ಟ ಲಾಗಾಯಿತು ಇದುವರೆಗೆ ಇಷ್ಟು ಸ್ಕೂಲುಗಳೂ ಇರಲಿಲ್ಲ; ಇಷ್ಟುಮಂದಿ ಬಾಲಕರು ವಿದ್ಯಾಭ್ಯಾಸ ಮಾಡುತ್ತಲೂ ಇರಲಿಲ್ಲ. ಕಳೆದ ವರ್ಷದಲ್ಲಿ ಸ್ಕೂಲುಗಳ ಒಟ್ಟು ಸಂಖ್ಯೆಯು 3,964, ವಿದ್ಯಾರ್ಥಿಗಳ ಒಟ್ಟು ಸಂಖ್ಯೆಯು 1,17,951. ಸ್ಕೂಲಿಗೆ ಹೋಗುವ ವಯಸ್ಸಿನ ಮಕ್ಕಳ ಪೈಕಿ ಶೇಕಡ 15·06 ರಷ್ಟು ಈ ವರ್ಷದಲ್ಲಿಯೂ, 14·43 ರಷ್ಟು ಕಳೆದ ವರ್ಷದಲ್ಲಿಯೂ ಸ್ಕೂಲುಗಳಿಗೆ ಹೋಗುತ್ತಿದ್ದರು.

ಸ್ಕೂಲಿನ ಫೀಜು ವಜಾ ಆದದ್ದು.

3. 1907—08 ನೆ ವರ್ಷದಲ್ಲಿಯೂ ಚಾಲ್ತಿ ವರ್ಷದ ಪ್ರಾರಂಭದಲ್ಲಿಯೂ ಈ ಇಲಾಖೆಯಲ್ಲಿ ಬಹಳ ಮುಖ್ಯವಾದ ಮತ್ತು ಪ್ರಯೋಜನಕರವಾದ

ಕೆಲವು ಬದಲಾವಣೆಗಳನ್ನು ಮಾಡಿದೆ. ನಾವು ಹೋದ ವರುಷ ತಮ್ಮಗಳಿಗೆ ಹೇಳಿದಂತೆ 1907 ನೆಯು ಅಕ್ಟೋಬರ್ ತಿಂಗಳ ಲಾಗಾಯಿತು ಹೋಬಳಿ ಸ್ಕೂಲುಗಳಲ್ಲಿ ಫೀಜನ್ನು ವಜಾ ಮಾಡಲಾಯಿತು. ಅಲ್ಲಿಂದೀಜೆಗೆ ಸದರಿ ಸ್ಕೂಲುಗಳ ಲೋವರ್ ಸೆಕೆಂಡರಿ ತರಗತಿಗಳಲ್ಲಿಯೂ, ಆಂಗ್ಲೋ ವರ್ನಾಕ್ಯುಲರ್ ಸ್ಕೂಲುಗಳ ದೇಶಭಾಷಾ ತರಗತಿಗಳಲ್ಲಿಯೂ ಫೀಜನ್ನು ವಜಾ ಮಾಡಿರುತ್ತದೆ; ಇದರಿಂದ ಈಗ ಸರ್ಕಾರಿ ಸ್ಕೂಲುಗಳಲ್ಲೆಲ್ಲಾ ಪ್ರಾಥಮಿಕ ವಿದ್ಯಾಭ್ಯಾಸವು ಮುಫತ್ತಾಗಿಯೇ ದೊರೆಯುವಂತಾಯಿತು. ಈ ಏರ್ಪಾಡಿನಿಂದ ಹಳ್ಳಿಗಾಡುಗಳಲ್ಲಿ ಕೇವಲ ಗರೀಬರೂ ಕೂಡ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮಾಡಲು ಅವಕಾಶವಾಗುವುದೆಂದು ನಂಬಬಹುದಾಗಿದೆ. ಎಲ್ಲಾ ಆಂಗ್ಲೋ ವರ್ನಾಕ್ಯುಲರ್ ಸ್ಕೂಲುಗಳಲ್ಲಿಯೂ ಮೂರನೆ ತರಗತಿಯೊದಲ್ಗೊಂಡು ಇಂಗ್ಲೀಷ್ ಭಾಷೆಯನ್ನು ಕಲಿಸಿಯೇ ತೀರಬೇಕೆಂದು ಏರ್ಪಾಡು ಮಾಡಿದೆ.

ಹೋಬಳಿ ಸ್ಕೂಲು ಮಾಸ್ಟರುಗಳಿಗೆ ಸಂಬಳದ ಬಡ್ತಿ.

4. ಬಹಳ ಮುಖ್ಯವಾದ ಇನ್ನೊಂದು ವಿಷಯವನ್ನು ಈಗ ಪ್ರಸ್ತಾಪಿಸಬೇಕಾಗಿದೆ. ಅದೇನೆಂದರೆ, ಅನೇಕ ಸಂದರ್ಭಗ್ಗಳಲ್ಲಿ ಉಪಾಧ್ಯಾಯರುಗಳಿಗೆ ಜೀವನಕ್ಕೆ ತಕ್ಕಷ್ಟು ವೇತನವು ಇದುವರೆಗೆ ದೊರೆಯುತ್ತಿರಲಿಲ್ಲ. ಇನ್ನು ಮುಂದೆ ಅವರುಗಳಿಗೆ ಅಷ್ಟುಮಟ್ಟಿನ ವೇತನವಾದರೂ ದೊರೆಯುವಹಾಗೆ ಮಾಡಿ ತನ್ಮೂಲಕ ಪ್ರಾಥಮಿಕ ವಿದ್ಯಾಭ್ಯಾಸವನ್ನು ಉತ್ತಮಸ್ಥಿತಿಗೆ ತರಬೇಕೆಂದು ಯೋಚಿಸಿತ್ತು. 1907 ನೆಯು ಅಕ್ಟೋಬರ್ ತಿಂಗಳ ಲಾಗಾಯಿತು ಮಾಹೇಯಾನಾ 10 ರೂಪಾಯಿಗೆ ಕಮ್ಮಿ ತಲಬುಳ್ಳ ಹೋಬಳಿ ಸ್ಕೂಲ್ ಮಾಸ್ಟರುಗಳಿಗೆಲ್ಲಾ ಒಂದು ರೂಪಾಯಿ ಬಡತಿಯನ್ನು ಕೊಟ್ಟ ವಿಚಾರವು ತಮ್ಮಗಳಿಗೆ ತಿಳಿದಿದೆಯಷ್ಟೆ. ಈಗ 1908 ನೆ ಜುಲೈ ಗುರ್ತಿಗೆ ಲಾಗಾಯಿತು ಎಲ್ಲಾ ಸ್ಕೂಲು ಮಾಸ್ಟರುಗಳ ಸಂಬಳವನ್ನೂ 10 ರೂಪಾಯಿಗೆ ಹೆಚ್ಚಿಸಿದೆ.

ಕಾಲೇಜುಗಳಲ್ಲಿನ ಹೊಸ ಏರ್ಪಾಟು.

5. ಸಂಸ್ಥಾನದಲ್ಲಿ ಪ್ರೌಢವಿದ್ಯಾಭ್ಯಾಸವನ್ನು ಎರಡು ಕಾಲೇಜುಗಳಲ್ಲಿ ಮಾಡುತ್ತಿದೆಯಷ್ಟೆ. ಈ ಎರಡು ಕಾಲೇಜುಗಳಲ್ಲಿಯೂ ಮದರಾಸ್ ಯೂನಿವರ್ಸಿಟಿಯು ಹೊಸ ರೆಗ್ಯುಲೇಷನುಗಳಿಗನುಸಾರವಾಗಿ ಆವಶ್ಯಕವಾದ ಬದಲಾವಣೆ ಮಾಡಿರುತ್ತದೆ. ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಶಾಸ್ತ್ರವಿಷಯಕವಾದ ಬೋ

ಧನೆಗೂ, ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಭಾಷಾಸಂಬಂಧವಾದ ಬೋಧನೆಗೂ ಏರ್ಪಾಡು ಮಾಡಬೇಕೆಂದಿದೆ. ಹಾಲಿ ಇರುವಂತೆ ಈ ಎರಡು ಕಾಲೇಜುಗಳಲ್ಲಿಯೂ ಒಂದೇ ವಿಷಯವನ್ನೇ ಹೇಳಿಕೊಡುವುದಕ್ಕೆ ಬದಲಾಗಿ ಒಂದೊಂದು ಕಾಲೇಜಿನಲ್ಲಿಯೂ ಪ್ರತ್ಯೇಕವಾದ ವಿಷಯಗಳನ್ನು ಬೋಧಿಸುವುದರಿಂದ ವಿದ್ಯಾಭ್ಯಾಸ ಕ್ರಮವು ಈಗ್ಗಿಂತ ಉತ್ತಮಸ್ಥಿತಿಗೆ ಬರುವಂತೆ ತೋರುತ್ತದೆ. ಇನ್ನು ಸ್ವಲ್ಪ ಕಾಲದಲ್ಲಿಯೇ ಬಿ. ಎ. ಡಿಗ್ರಿ ಪರೀಕ್ಷೆಗೆ ಸಂಬಂಧಪಟ್ಟ ಎಲ್ಲಾ ಶಾಸ್ತ್ರವಿಷಯಗಳನ್ನೂ ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿಯೂ, ಎಲ್ಲಾ ಭಾಷಾವಿಷಯಗಳನ್ನೂ ಮೈಸೂರು ಮಹಾರಾಜಾ ಕಾಲೇಜಿನಲ್ಲಿಯೂ ಬೋಧಿಸಲು ಸಾಧ್ಯವಾದೀತು. ಬೆಂಗಳೂರಲ್ಲಿ ಅವಶ್ಯಕವಾದ ಲ್ಯಾಬೊರೇಟರಿ ಯಾ ವಸ್ತುಪರಿಶೋಧನಾಲಯವನ್ನೂ, ಇತರ ಕಟ್ಟಡಗಳನ್ನೂ ಕಟ್ಟಿಸಲು ತಕ್ಕ ಏರ್ಪಾಟು ನಡಿಯುತ್ತಲಿದೆ.

ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ಯಾ ಹಿಂದೂಸ್ಥಾನದ ಶಾಸ್ತ್ರಾಲಯ.

6. ಸ್ವರ್ಗಸ್ಥರಾದ ಮೈ॥ ತಾತಾರವರಿಂದ ಸ್ಥಾಪಿತವಾದ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ಎಂಬ ಇಂಡಿಯಾದೇಶದ ಶಾಸ್ತ್ರವಿದ್ಯಾಶಾಲೆಯ ಕಟ್ಟಡಗಳಿಗಾಗಿ ಬೆಂಗಳೂರಿನಲ್ಲಿ ಅನುಕೂಲವಾದ ನಿವೇಶನವನ್ನು ಕೊಟ್ಟರುತ್ತದೆಯಷ್ಟೆ. ಈ ಕಟ್ಟಡಗಳನ್ನು ಕಟ್ಟಿಸುವುದಕ್ಕೆ ಪ್ರಾರಂಭಿಸಲಾಗಿದೆ. ಈ ಸಂಸ್ಥಾನದಿಂದ ಸದರಿ ಶಾಸ್ತ್ರಾಲಯಕ್ಕಾಗಿ ವರ್ಷೇವರ್ಷೆ 50 ಸಾವಿರ ರೂಪಾಯಿಯನ್ನೂ, ಕಟ್ಟಡಗಳಿಗಾಗಿ 5 ಲಕ್ಷ ರೂಪಾಯಿನಷ್ಟು ಭಾರಿ ಮೊಬಲಗನ್ನೂ ಮಂಜೂರು ಮಾಡಿರುವುದು ತಮ್ಮಗಳಿಗೆ ತಿಳಿದೇ ಇರಬಹುದು. ಸಂಸ್ಥಾನದ ಆದಾಯವ್ಯಯಗಳನ್ನು ಕುರಿತು ಪ್ರಸ್ತಾಪಿಸಿದಾಗ ಈ ಮೊದಲೇ ನಾವು ತಮ್ಮಗಳಿಗೆ ತಿಳಿಸಿರುವಂತೆ ಸದರೀ ಕಟ್ಟಡಗಳ ಗ್ರಾಂಟನ್ನೆಲ್ಲಾ ಸಂಪೂರ್ಣವಾಗಿ ಕಳೆದ ವರ್ಷದಲ್ಲಿಯೇ ಪಾವತಿ ಮಾಡಿದುದಾಯಿತು. ವರ್ಷೇವರ್ಷೆ ಕೊಡಬೇಕಾದ ಗ್ರಾಂಟನ್ನು ಇಂಡಿಯಾ ಸರ್ಕಾರದವರು, ಇತರರೂ ಕೊಡುವ ಇದೇ ತರಹೆಯ ಗ್ರಾಂಟುಗಳಂತೆಯೇ ಚಾಲ್ತಿ ವರ್ಷದಿಂದ ಪಾವತಿ ಮಾಡಲಾಗುತ್ತದೆ.

ಕಿಂಡರ್‌ಗಾರ್ಟ್ನ್ ಮತ್ತು ಹಸ್ತಕೌಶಲದ ಶಿಕ್ಷಣವು.

7. ಈ ಸಂಸ್ಥಾನದಲ್ಲಿ ಕಿಂಡರ್‌ಗಾರ್ಟ್ನ್ ಮತ್ತು ಮ್ಯಾನ್ಯುಯಲ್ ಟ್ರೈನಿಂಗ್ ಇವುಗಳನ್ನು 1907—08 ನೆಯ ವರ್ಷದ ಆದಿಯಲ್ಲಿ ಬೋಧಿಸಲಾರಂಭಿಸಿದ ವಿಚಾರವಾಗಿ ಕಳೆದ ವರ್ಷ ನಮ್ಮ ಉಪನ್ಯಾಸದಲ್ಲಿ ಸೂಚಿಸಿದೆವು. ಅಮೇರಿಕಾ

ಖಂಡದ ಯುನೈಟೆಡ್ ಸ್ಟೇಟ್ಸಿಗೆ ಸೇರಿದ ಬೋಸ್ಟನ್ ಪಟ್ಟಣದ ಸ್ಲಾಯ್ಡ್ ಟ್ರೈನಿಂಗ್ ಸ್ಕೂಲಿನ ಅಧ್ಯಕ್ಷರಾದ ಡಾಕ್ಟರ್ ಗುಸ್ಟಾಫ್ ಲಾರ್ಸ್ನ್ ಎಂಬುವರನ್ನೂ, ಲಂಡನ್ ಸ್ಕೂಲ್ ಬೋರ್ಡಿನಲ್ಲಿ ಬಹುಕಾಲ ಕೆಲಸ ಮಾಡುತ್ತಿದ್ದು ಕಿಂಡರ್‌ಗಾರ್ಟನ್ನಿನಲ್ಲಿ ನಿಪುಣರಾಗಿದ್ದ ಮಿಸ್ ಲ್ಯಾಟರ್ ಎಂಬ ಧೊರೆಸಾನಿಯನ್ನೂ ಕೆಲವು ಕಾಲದವರೆಗೆ ನೇಮಿಸಿ ಅಯಾ ಬೋಧನಾಕ್ರಮವನ್ನು ಇಲ್ಲಿಯೂ ಪ್ರಚಾರಕ್ಕೆ ತಂದು ಇಲ್ಲಿನ ಉಪಾಧ್ಯಾಯರುಗಳನ್ನು ತರಬಿಯುತ್ ಮಾಡುವುದಕ್ಕಾಗಿ ತಕ್ಕ ಏರ್ಪಾಡು ಮಾಡಿಕ್ಕುತ್ತಾ. ಡಾಕ್ಟರ್ ಲಾರ್ಸ್ನರವರು 1907 ನೆಯು ಸೆಪ್ಟಂಬರ್ ತಿಂಗಳ ಲಾಗಾಯಿತು 1908 ನೆಯು ಏಪ್ರಲ್ ತಿಂಗಳವರೆಗೆ ಈ ಕೆಲಸ ಮಾಡುತ್ತಿದ್ದು ಹೈಸ್ಕೂಲುಗಳ 22 ಜನ ಉಪಾಧ್ಯಾಯರುಗಳನ್ನು ತರಬಿಯುತ್ ಮಾಡಿದರು. ಹೀಗೆ ಶಿಕ್ಷಣವನ್ನು ಹೊಂದಿದ ಸ್ಕೂಲ್ ಮಾಸ್ಟರುಗಳು ತುಂಬಾ ಸಮರ್ಥರೆಂತಲೂ ಈ ವಿದ್ಯಾವಿಷಯದಲ್ಲಿ ಕುತೂಹಲವುಳ್ಳವರೆಂತಲೂ ಡಾಕ್ಟರ್ ಲಾರ್ಸ್ನ್ ರವರು ಅಭಿಪ್ರಾಯಪಟ್ಟರು. ಅಮೇರಿಕಾ ಖಂಡದ ಉಪಾಧ್ಯಾಯರನ್ನು ಈ ಶಿಕ್ಷಣಾಕ್ರಮದಲ್ಲಿ ತರಬೇತು ಮಾಡಿದ್ದರಲ್ಲಿ ತಮಿಗೆ ಉಂಟಾದ ಅನುಭವದ ಮೇಲೆ ಇಲ್ಲಿನ ಉಪಾಧ್ಯಾಯರಿಗೆ ಸ್ವಲ್ಪ ಕಾಲದಲ್ಲಿ ಎಷ್ಟುಮಟ್ಟಿನ ಪರಿಶ್ರಮವುಂಟಾಗಬಹುದೆಂದು ಅವರು ನಿರೀಕ್ಷಿಸಿದ್ದರೋ, ಅದಕ್ಕಿಂತ ಎಷ್ಟೋ ಅಧಿಕವಾಗಿ ಸದರಿ ಉಪಾಧ್ಯಾಯರು ಈ ವಿದ್ಯೆಯಲ್ಲಿ ಕುತೂಹಲ ತೋರ್ಪಡಿಸಿ ಅಭಿವೃದ್ಧಿ ಹೊಂದಿರುತ್ತಾರೆಂದು ಡಾಕ್ಟರ್ ಲಾರ್ಸ್ನರವರು ತಿಳಿಸಿದ್ದಾರೆ.

8. ಮಿಸ್ ಲ್ಯಾಟರ್ ದೊರೆಸಾನಿಯವರು ಕೆಲಕಾಲ ಬೆಂಗಳೂರಿನಲ್ಲಿ ಸರ್ಕಾರಿ ಬಾಲಿಕಾಪಾಠಶಾಲೆಗಳಲ್ಲಿ ಕೆಲಸಮಾಡಿ ವಿಶೇಷವಾಗಿ ಪ್ರಕೃತಿವಿದ್ಯೆಗೆ ಗಮನ ಕೊಟ್ಟು, (ಅಂದರೆ ಮಕ್ಕಳು ತಮ್ಮ ಸುತ್ತಮುತ್ತಲೂ ಇರುವ ಪ್ರಾಣಿಗಳನ್ನೂ ಗಿಡ, ಮರ, ಮುಂತಾದ ಪದಾರ್ಥಗಳನ್ನೂ ನೋಡಿ ತಾವಾಗಿಯೇ ಪರೀಕ್ಷಿಸಿ ಅವುಗಳ ಸ್ವಭಾವಾದಿ ಗುಣಗಳನ್ನು ತಿಳಿದುಕೊಳ್ಳುವಂತೆ) ಹೊಸ ಪದ್ಧತಿಯ ಪ್ರಕಾರ ಲೋವರ್ ಸ್ಕೈಮರಿ ತರಗತಿಗಳಲ್ಲಿ ಕಿಂಡರ್‌ಗಾರ್ಟನ್ ಬೋಧನೆಯನ್ನು ಏರ್ಪಡಿಸಿ ಕ್ರಮಪಡಿಸಿದರು. ಇದಲ್ಲದೆ ಕಿಂಡರ್‌ಗಾರ್ಟನಿನ ವಿಚಾರವಾಗಿ ಕೆಲವು ಉಪನ್ಯಾಸಗಳನ್ನೂ ಕೊಟ್ಟರು. ಈ ಉಪನ್ಯಾಸಗಳಲ್ಲಿ ಸುಮಾರು 50 ಜನ ಉಪಾಧ್ಯಾಯರುಗಳು ಹಾಜರಿದ್ದರು. ಇವರು ಬೆಂಗಳೂರಲ್ಲಿ ಸ್ವಲ್ಪಕಾಲ ಮಾತ್ರ ಇದ್ದಾಗ್ಯೂ ವಿದ್ಯೆ ಕಲಿಯುತ್ತಿದ್ದ ಸಣ ಮಕ್ಕಳೂ ಕೂಡ ಅವರನ್ನು ವಿಶೇಷವಾಗಿ ಪ್ರೀತಿಸು

ತ್ತಿದ್ದರು. ಆದುದರಿಂದಲೇ ಕಳೆದ ನವಂಬರ್ ತಿಂಗಳಲ್ಲಿ ಅವರು ದುರದೃಷ್ಟವಶಾತ್ ಅಕಸ್ಮಾತ್ತಾಗಿ ಮರಣಹೊಂದಿದಾಗ ಅವರನ್ನೂ ಅವರ ಕಾರ್ಯವನ್ನೂ ತಿಳಿದಿದ್ದವರೆಲ್ಲರೂ ತುಂಬಾ ವ್ಯಸನಪಟ್ಟರು. ಈಜೆಗೆ ಇವರ ಕಾರ್ಯವನ್ನು ಮಿಸ್ ವಿಲಿಯಂಸ್ ಎಂಬುವರೂ ಮಿಸ್ ಹಾರ್ಸ್ಟ್ ಎಂಬುವರೂ ನಡೆಸುತ್ತಾ ಬಂದಿದಾರೆ. ಮತ್ತು ಅನೇಕ ಮಂದಿ ಉಪಾಧ್ಯಾಯರುಗಳು ಕಿಂಡರ್ ಗಾರ್ಟ್ನ್ ಶಿಕ್ಷಣದಲ್ಲಿ ತರಬಿಯತ್ ಆಗುತ್ತಿದಾರೆ.

9. ಈ ಎರಡು ಶಿಕ್ಷಣಕ್ರಮಗಳನ್ನು ಮುಂದೆ ಅಭಿವೃದ್ಧಿಗೆ ತರುವುದಕ್ಕೋಸ್ಕರ 9 ಸರ್ಕಾರಿ ಹೈ ಸ್ಕೂಲುಗಳಲ್ಲಿ ಸ್ಪೆಷಿಯಲ್ ಬೋಧನಾ ಕ್ರಮವನ್ನು ಏರ್ಪಡಿಸಿದೆ. ಇವುಗಳಲ್ಲಿ ಆಯಾ ಹೈಸ್ಕೂಲುಗಳಿಗೆ ಸೇರಿದ ಹುಡುಗರಲ್ಲದೆ ಅಜೂಬಾಜೂ ಸ್ಕೂಲುಗಳಿಗೆ ಸೇರಿದ ಹುಡುಗರೂ ಅಂದರೆ, II ನೇ ಫಾರಮಿನಿಂದ IV ನೇ ಫಾರಂ ವರೆಗಿನ ವಿದ್ಯಾರ್ಥಿಗಳು ತರಬಿಯತ್ ಆಗುತ್ತಿರುವರು. ರಟ್ಟಿನ ಕೆಲಸವನ್ನು ಅನೇಕ ಲಂಗ್ಲೋ ವರ್ನಾಕ್ಯುಲರ್ ಸ್ಕೂಲುಗಳ II ನೆಯ ಫಾರಂ ಕೆಳಗಣ ತರಗತಿಗಳಲ್ಲಿಯೂ ಕಿಂಡರ್‌ಗಾರ್ಟ್ನ್ ಕೈಕೆಲಸವನ್ನು ಮಕ್ಕಳ ತರಗತಿಗಳಲ್ಲಿಯೂ ಕಲಿಸಲು ಏರ್ಪಾಡು ಮಾಡಲಾಗುತ್ತದೆ.

ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಪ್ರದರ್ಶನ.

10. 1907ನೆ ಇಸವಿಯ ದಸರಾ ಮಹೋತ್ಸವ ಕಾಲದಲ್ಲಿ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಪ್ರದರ್ಶನವನ್ನು ನಡಿಸಲಾಯಿತಷ್ಟೆ. ಈ ಪ್ರದರ್ಶನದಲ್ಲಿ ಲಂಡನ್ ಪಟ್ಟಣದ ಸ್ಕೂಲುಗಳಿಂದ ವಿಶೇಷ ಪ್ರಯೋಜನಕರಗಳಾದ ಅನೇಕ ವಸ್ತುಗಳನ್ನು ತರಿಸಿ ಇಟ್ಟಿತ್ತು.

ಕಸಬುದಾರಿ ವಿದ್ಯಾಭ್ಯಾಸ.

11. ಕೈಗಾರಿಕೆ ಮುಂತಾದ ಕಸಬುದಾರಿ ವಿದ್ಯಾಭ್ಯಾಸವು ತಕ್ಕಮಟ್ಟಿಗೆ ಅಭಿವೃದ್ಧಿಗೆ ಬಂದಿದೆ. ಈ ಸಂಬಂಧದ ಎಲ್ಲಾ ಸ್ಕೂಲುಗಳೂ ತಕ್ಕಾಪಿ ಮೈಸೂರಲ್ಲಿರುವ ಸ್ಕೂಲು ತುಂಬಾ ತೃಪ್ತಿಕರವಾಗಿ ನಡೆದಿದೆ. ಸಾಗರದಲ್ಲಿ ಒಂದು ಹೊಸ ಸ್ಕೂಲನ್ನು ಸ್ಥಾಪಿಸುವ ಬಗ್ಗೆ ಮುಂಜೂರ್ ಆಗಿದೆ. ಶ್ರೀ ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟಿಗಾಗಿ ಬೇಕಾದ ಜಮೀನುಗಳನ್ನು ಸರ್ಕಾರಕ್ಕೆ ಹೋದ ವರುಷವೇ ತೆಗೆದುಕೊಳ್ಳಲಾಯಿತು. ಇದಕ್ಕೆ ಬೇಕಾಗುವ ಕಟ್ಟಡಗಳನ್ನು ಈ ವರ್ಷ ಕಟ್ಟಿಸಲಾಗುವುದು.

12. ದಾಮೋದರದಾಸ ವಿದ್ಯಾರ್ಥಿವೇತನಗಳ ವಿಚಾರವಾಗಿ ಮೊದಲಿದ ನಿಬಂಧನೆಗಳ ಮೇರೆಗೆ ವಿಶೇಷ ವಿದ್ಯಾವಂತರಾಗಿಯೂ ಬುದ್ಧಿವಂತರಾಗಿಯೂ ಇರುವ ವಿದ್ಯಾರ್ಥಿಗಳು ಈ ವೇತನಗಳನ್ನು ಅಪೇಕ್ಷಿಸುವುದಕ್ಕೆ ಅವಕಾಶವಿರಲಿಲ್ಲ. ಈ ಅವಕಾಶವು ದೊರೆಯುವಂತೆ ಸದರಿ ನಿಬಂಧನೆಗಳನ್ನು ಈಗ ಬದಲಾಯಿಸಿದೆ.

13. ಸ್ತ್ರೀ ವಿದ್ಯಾಭ್ಯಾಸವು ತೃಪ್ತಿಕರವಾಗಿ ನಡಿಯುತ್ತಾ ಬಂದಿದೆ. ಬಾಲಿಕಾ ಪಾಠಶಾಲೆಗಳಲ್ಲಿ ಹೆಂಗಸರನ್ನೇ ವಿಶೇಷವಾಗಿ ಉಪಾಧ್ಯಾಯರ ಕೆಲಸಕ್ಕೆ ನಿಯಮಿಸಿದಲ್ಲಿ ಇನ್ನೂ ಅಭಿವೃದ್ಧಿಗೆ ಅವಕಾಶವಿರಬಹುದೆಂದು ತಿಳಿಯಬಂತು. ಆದುದರಿಂದ ಬಾಲಿಕಾ ಪಾಠಶಾಲೆಗಳಲ್ಲಿ ಕ್ರಮೇಣ ಗಂಡಸರನ್ನು ತಪ್ಪಿಸಿ ಹೆಂಗಸರನ್ನೇ ಉಪಾಧ್ಯಾಯರ ಕೆಲಸಕ್ಕೆ ನೇಮಿಸಲು ಏರ್ಪಾಟು ಮಾಡಿದೆ.

ಎಲ್ಲರೂ ವಿದ್ಯಾಭ್ಯಾಸ ಮಾಡಬೇಕೆಂದು ನಿರ್ಬಂಧಪಡಿಸುವುದು.

13. ಕೆಲವು ಸ್ಥಳಗಳನ್ನು ಜುನಾಯಿಸಿ ಅಲ್ಲಿನ ಬಾಲಕರೆಲ್ಲರಿಗೂ ವಿದ್ಯಾಭ್ಯಾಸಮಾಡಿಸಲೇಬೇಕೆಂದು ಹುಕುಂ ಮಾಡಿ ಅಜವಾಯಿಷಿ ನೋಡಬೇಕೆಂದು ಸರ್ಕಾರದವರು ಆಲೋಚಿಸಿದ್ದಾರೆ. ಬರೋಡಾ ಸಂಸ್ಥಾನದಲ್ಲಿ ಈ ಪದ್ಧತಿಯು ಹ್ಯಾಗೆ ನಡೆಯುತ್ತಲಿದೆ, ಇದರಿಂದ ಪ್ರಯೋಜನವೇನು. ಈ ಮುಂತಾದ ವಿಷಯಗಳನ್ನು ತಿಳಿದುಕೊಂಡುಬರಲು ವಿ॥ ಭಾಭಾ ಯವರನ್ನು ಅಲ್ಲಿಗೆ ಕಳುಹಿಸಬೇಕೆಂದಿದೆ.

ನೀತಿ ಮತ್ತು ಧರ್ಮಭೋಧಕವಾದ ವಿದ್ಯಾಭ್ಯಾಸ.

14. ಸಂಸ್ಥಾನದಲ್ಲಿರುವ ಸರ್ಕಾರೀ ಪಾಠಶಾಲೆಗಳಲ್ಲೆಲ್ಲಾ ನೀತಿ ಮತ್ತು ಧರ್ಮ ಬೋಧಕವಾದ ವಿದ್ಯಾಭ್ಯಾಸವನ್ನು ಮಾಡಿಸುವ ಬಗ್ಗೆ ಶ್ರೀಮಂ ಮಹಾರಾಜಾ ಸಾಹೇಬ್ಬಹದ್ದೂರ್‌ರವರು ಹುಕುಂ ದಯಪಾಲಿಸಿರುವುದು ತಮ್ಮೆಲ್ಲಿಗೆಲ್ಲಾ ಸಂತೋಷಕರವಾಗಿಯೇ ಇರಬಹುದು. ಈ ವಿದ್ಯಾಭ್ಯಾಸವನ್ನು ಬರುವ ನವಂಬರ್ ಗುರ್ಪಲಾಗಾಯಿತು ಪ್ರಾರಂಭಿಸಲಾಗುವುದು.



ದಸರಾ ಮಹೋತ್ಸವದಲ್ಲಿ ನಡೆದ

ವಿದ್ಯಾಭ್ಯಾಸ ವಿಷಯಕವಾದ ವಸ್ತು ಪ್ರದರ್ಶನ.



ಕಳೆದ ವರ್ಷದ ದಸರಾ ಮಹೋತ್ಸವದಲ್ಲಿ ನಡೆದ ವಿದ್ಯಾಭ್ಯಾಸ ವಿಷಯಕವಾದ ವಸ್ತು ಪ್ರದರ್ಶನವನ್ನು ತೆರೆಯುವ ಕಾಲದಲ್ಲಿ ಶ್ರೀಮಂ ಮಹಾರಾಜರವರು "ವರ್ಷೆ ವರ್ಷೆ ನವರಾತ್ರಿಯ ಕಾಲದಲ್ಲಿ ಇಂತಹ ಪ್ರದರ್ಶನವು ನಡೆಯಬೇಕೆಂದು

ಕೋರುವೆನು'' ಎಂದು ಅಪ್ಪಣೆ ದಯಪಾಲಿಸಿದ್ದರಷ್ಟೆ, ಇದಕ್ಕನುಸಾರವಾಗಿ ಈ ವರ್ಷ ಈ ಪ್ರದರ್ಶನವು ಅಕ್ಟೋಬರ್ 7ನೇ ತಾರೀಖಿನಲ್ಲಿ ಪ್ರಾರಂಭವಾಗಿ 13ನೇ ತಾರೀಖಿನವರೆಗೂ ನಡೆಯಿತು. ಈ ವರ್ಷದ ಪ್ರದರ್ಶನವು ಹಿಂದಿನ ವರ್ಷದ ಪ್ರದರ್ಶನಕ್ಕಿಂತಲೂ ಬಹು ಚನ್ನಾಗಿತ್ತು. ವಿದ್ಯಾಭ್ಯಾಸದ ಇಲಾಖೆಯ ಇನ್‌ಸ್ಪೆಕ್ಟರ್ ಜನರಲ್ ಮೆ|| ಭಾ ಭಾ ಸಾಹೇಬರು ತೆಗೆದುಕೊಂಡ ಶ್ರಮವೇ ಇದಕ್ಕೆ ಕಾರಣವು. ಇವರು ಇಂಗ್ಲೆಂಡಿನಲ್ಲಿ ವಿದ್ಯಾಭ್ಯಾಸದ ಇಲಾಖೆಯ ಅಧಿಕಾರಿಗಳಿಗೆ ಬರೆದು ಅಲ್ಲಿನ ಮುಖ್ಯವಾದ ಸ್ಕೂಲುಗಳಿಂದ ವಸ್ತುಗಳನ್ನು ತರಿಸಿದ್ದರು. ಈ ವಸ್ತುಗಳು ಇಂಗ್ಲೆಂಡಿಲ್ಲಿನ ಸಣ್ಣ ಮಕ್ಕಳ ವಿದ್ಯಾಭ್ಯಾಸ ಮೊದಲ್ಗೊಂಡು ಸಕೆಂಡರಿ ವಿದ್ಯಾಭ್ಯಾಸದ ಕೊನೆಯವರೆಗೂ ನಡೆಯುವ ಕೆಲಸಗಳನ್ನೆಲ್ಲ ಪರಿಷ್ಕಾರವಾಗಿ ತೋರಿಸುತಿದ್ದುವು. ಇವುಗಳ ಕ್ರಮವಾದ ಪರೀಕ್ಷೆಯಿಂದ ನಮ್ಮ ದೇಶದ ವಿದ್ಯಾಭ್ಯಾಸಕ್ಕೆ ವಿಶೇಷ ಪ್ರಯೋಜನವಾಗಬಹುದೆಂದು ಧಾರಾಳವಾಗಿ ಹೇಳಬಹುದು. ಇಂತಹ ಪರೀಕ್ಷೆಗೆ ಅವಕಾಶವನ್ನು ಕಲ್ಪಿಸಲು ನಮ್ಮ ಸರ್ಕಾರದವರು ವಿದ್ಯಾಭ್ಯಾಸದ ಇಲಾಖೆಯ ಇನ್‌ಸ್ಪೆಕ್ಟರುಗಳನ್ನೂ ಅನೇಕಮಂದಿ ಉಪಾಧ್ಯಾಯರನ್ನೂ ಕರೆಸಿದ್ದರು. ಇವರಲ್ಲಿ ಅನೇಕರಿಗೆ ಈ ವರ್ಷ ನಡೆದ ಪ್ರದರ್ಶನದಿಂದ ವಿಶೇಷ ಪ್ರಯೋಜನವಾಯಿತೆಂದು ಧಾರಾಳವಾಗಿ ಹೇಳಬಹುದು. ಈ ವರ್ಷದ ಪ್ರದರ್ಶನವನ್ನು ನೋಡಲು 7ನೇ ತಾರೀಖಿನ ದಿವಸ ದಿವಾನರವರೇ ಮೊದಲಾದ ಉದ್ಯೋಗಸ್ಥರೆಲ್ಲರೂ ಬಂದಿದ್ದರು, 11ನೇ ತಾರೀಖಿನ ದಿವಸ ಯುವರಾಜರವರು ದಯಮಾಡಿಸಿದ್ದರು, 13ನೇ ತಾರೀಖಿನ ದಿವಸ ಶ್ರೀಮನ್ಮಹಾರಾಜರವರು ದಯಮಾಡಿ ಎಲ್ಲವನ್ನೂ ಪರಾಂಬರಿಸಿ ಸಂತೋಷಪಟ್ಟರು. ಪ್ರತಿದಿನವೂ ಉಪಾಧ್ಯಾಯರು 12 ಘಂಟೆಯಿಂದ 2½ ಘಂಟೆಯವರಿಗೂ ತಮಗೆ ಉಪಯುಕ್ತವೆಂದು ತೋರುವ ಅಂಶಗಳನ್ನು ಬರೆದುಕೊಳ್ಳುತಿದ್ದರು.

ಈ ವರ್ಷ ಪ್ರದರ್ಶನದಲ್ಲಿ ಇಟ್ಟಿದ್ದ ವಸ್ತುಗಳಲ್ಲಿ ಹೋದ ವರ್ಷದಲ್ಲಿ ಇದ್ದಂತೆಯೇ ಎರಡು ವಿಧಗಳಿದ್ದುವು, (1) ಇಂಗ್ಲೆಂಡಿನಿಂದ ಬಂದಿದ್ದ ವಸ್ತುಗಳು. (2) ನಮ್ಮದೇಶದ ವಸ್ತುಗಳು. ಇವುಗಳ ವಿಷಯವನ್ನು ಸಂಕ್ಷೇಪವಾಗಿ ಇಲ್ಲಿ ತಿಳಿಸುವೆವು.

ಇಂಗ್ಲೆಂಡಿನಿಂದ ಬಂದಿದ್ದ ವಸ್ತುಗಳನ್ನು ಮುಂದಿನ ರೀತಿಯಲ್ಲಿ ವಿಭಾಗಿಸಬಹುದಾಗಿದ್ದಿತು.

1. ಭಾಷೆಯ ಪಾಠಕ್ಕೆ ಸಂಬಂಧಪಟ್ಟವುಗಳು:—ಬಾಲಕರು ಪಾಠಪುಸ್ತಕಗಳಲ್ಲಿ ಓದಿದ ವಿಷಯುಗಳು, ಕೇಳಿದ ಕಥೆಗಳು, ಹೊರಗೆ ಸಂಚಾರಕ್ಕೆ ಹೋದಾಗ ನೋಡಿದ ಅಂಶಗಳು, ಅವುಗಳ ವಿಷಯುದಲ್ಲಿ ಬರೆದಿದ್ದ ಉಪನ್ಯಾಸಗಳು ಅನೇಕ ಸ್ಕೂಲುಗಳಿಂದ ಬಂದಿದ್ದುವು. ಇವುಗಳಲ್ಲಿ ವುಲ್ವರ್‌ಹ್ಯಾಂಪ್ಟನ್ ಎಂಬ ನಗರದ ಸ್ಕೂಲುಗಳಿಂದ ಬಂದಿದ್ದ ಪುಸ್ತಕಗಳು ಬಹು ಶ್ಲಾಘನೀಯವಾಗಿದ್ದುವು.

2. ಗಣಿತ ಪಾಠಕ್ಕೆ ಸಂಬಂಧಪಟ್ಟ ಪುಸ್ತಕಗಳು ಮತ್ತು ಮಾದರಿಗಳು.

ಅನೇಕ ಸ್ಕೂಲುಗಳಿಂದ ಬಾಲಕರು ಇಟ್ಟಿದ್ದ ಮನೇ ಲೆಕ್ಕದ ಪುಸ್ತಕಗಳು ಬಂದಿದ್ದುವು. ಇವುಗಳನ್ನು ಚಿತ್ತಿಲ್ಲದಂತೆ ಬಹು ಚೆನ್ನಾಗಿ ಇಟ್ಟಿದ್ದರು. ಅಂಕಗಣಿತದ ಲೆಕ್ಕಗಳನ್ನು ಬಾಲಕರು ಚಿತ್ರರೂಪದಲ್ಲೇ ಮಾಡಿದ್ದರು. ಲೆಕ್ಕಗಳ ಉತ್ತರವು ಕಣ್ಣಿಗೆ ಸ್ಪಷ್ಟವಾಗಿ ಕಾಣುತಿತ್ತು. ವೈಟ್‌ದ್ವೀಪದಲ್ಲಿರುವ ಸ್ಕ್ಯಾಡ್ಲೌ ಪಾಠಶಾಲೆಯಿಂದ ಬಂದಿದ್ದ ಗಣಿತವಿಷಯಕವಾದ ಮಾದರಿಗಳು ಬಲು ಚೆನ್ನಾಗಿದ್ದುವು. ಬೀಜಗಣಿತದ ವಿಷಯವನ್ನು ತಿಳಿಸುವ ಸ್ಥೂಲವಾದ ರಟ್ಟಿನ ಮಾದರಿಗಳು, ರೇಖಾಗಣಿತದ ಪ್ರತಿಜ್ಞೆಗಳ ತತ್ವಗಳು ದೃಗ್ಗೋಚರವಾಗುವಂತೆ ಮಾಡುವ ರಟ್ಟಿನ ಜೋರುಗಳು, ಕ್ಷೇತ್ರಗಣಿತದ ಅಕೃತಿಗಳ ಅರ್ಥವನ್ನು ತಿಳಿಸುವ ರಟ್ಟಿನ ಸ್ಥೂಲವಾದ ಮಾದರಿಗಳು ಇವುಗಳೆಲ್ಲವೂ ಮೇಲೆ ಹೇಳಿದ ಸ್ಕೂಲಿನಿಂದಲೂ ಇತರ ಸ್ಕೂಲುಗಳಿಂದಲೂ ಬಂದಿದ್ದುವು.

3. ಚರಿತ್ರೆ, ಭೂಗೋಳ—ಚರಿತ್ರೆಯಲ್ಲಿ ಪ್ರಸಿದ್ಧರಾದ ಮುಖ್ಯಪುರುಷರ ವಿಷಯದಲ್ಲೂ, ಮತ್ತು ಇತರ ಅಂಶಗಳ ಮೇಲೂ ಬಾಲಕರು ಬರೆದಿದ್ದ ಉಪನ್ಯಾಸಗಳು ಅನೇಕ ಸ್ಕೂಲುಗಳಿಂದ ಬಂದಿದ್ದುವು. ಈ ಉಪನ್ಯಾಸಗಳಲ್ಲಿ ಪೂರ್ವಾಪರ ಸಂಬಂಧವು ಬಲು ಚೆನ್ನಾಗಿದ್ದಿತು, ಭಾಷೆಯು ಶೈಲಿಯು ಸರಳವಾಗಿತ್ತು, ಮತ್ತು ಮುಖ್ಯಾಂಶಗಳೆಲ್ಲವೂ ಎಚ್ಚರಿಕೆಯಿಂದ ಶೇಖರಿಸಲ್ಪಟ್ಟಿದ್ದುವು. ಭೂಗೋಳ ಪಾಠದಲ್ಲಿ ಉಪಯುಕ್ತವಾಗುವ ನಕ್ಷೆಗಳು ಅನೇಕ ಪಾಠಶಾಲೆಗಳಿಂದ ಬಂದಿದ್ದುವು. ಬೆಟ್ಟಗಳು, ನದಿಗಳು, ನೆಲದ ಸ್ವಭಾವ, ಖನಿಜಗಳು, ಬೆಳೆಗಳು ಇವುಗಳನ್ನು ತೋರಿಸಲು ಒಂದೊಂದು ದೇಶದ ಅನೇಕ ನಕ್ಷೆಗಳನ್ನು ಒರೆದಿದ್ದರು. ಇಂತಹ ನಕ್ಷೆಗಳಿಂದ ಭೂಗೋಳಪಾಠಕ್ಕೆ ವಿಶೇಷ ಪ್ರಯೋಜನವಾಗಬಹುದೆಂದು ಹೇಳಬಹುದಲ್ಲವೆ?

4. ಪ್ರಾಕೃತಿಕ ಶಾಸ್ತ್ರಗಳು—ಈ ಶಾಸ್ತ್ರಗಳ ವಿಷಯದಲ್ಲಿ ಬಾಲಕರೇ ಪರೀಕ್ಷೆಗಳನ್ನು ನಡೆಸಿ ತಮ್ಮ ಪರೀಕ್ಷೆಯ ಫಲವನ್ನು ಭಾಷೆಯಲ್ಲೂ ಚಿತ್ರರೂಪದಲ್ಲೂ ಬರೆದಿಟ್ಟಿದ್ದ ಪುಸ್ತಕಗಳು ಅನೇಕ ಸ್ಕೂಲುಗಳಿಂದ ಬಂದಿದ್ದುವು. ಈ ಪುಸ್ತಕಗಳಿಂದ ಅಲ್ಲಿನ ಎಲಿಮೆಂಟರಿ ಪಾಠಶಾಲೆಗಳಲ್ಲೇ ನಮ್ಮ ದೇಶದ ಹೈಸ್ಕೂಲುಗಳಲ್ಲಿ ನಡೆಯುವಷ್ಟು ಶಾಸ್ತ್ರಪಾಠವು ನಡೆಯುವುದೆಂದು ಸ್ಪಷ್ಟವಾಗಿ ಕಾಣುತಿತ್ತು.

5. ಚಿತ್ರ—ಎಲ್ಲ ಸ್ಕೂಲುಗಳಲ್ಲೂ ಚಿತ್ರವು ಪಾಠಶಾಲೆಯ ಕೆಲಸದ ಒಂದು ಮುಖ್ಯಭಾಗವಾಗಿ ಇರುವುದೆಂಬುದು ಇಂಗ್ಲೆಂಡಿನಿಂದ ಬಂದ ವಸ್ತುಗಳಿಂದ ಕಾಣುತಿತ್ತು. ಸಣ್ಣ ಮಕ್ಕಳು ನಾನಾಬಣ್ಣದ ಸೀಮೆಸುಣ್ಣದಿಂದ ಚಿತ್ರಗಳನ್ನು ಬರೆದಿದ್ದರು. ಇವರ ಚಿತ್ರಕ್ಕೆ ಪ್ರಕೃತಿಯ ವಸ್ತುಗಳು ಅಥವಾ ತಾವು ಕೇಳಿದ ಕಥೆಗಳು ಆಧಾರವಾಗಿ ಇದ್ದುವು. ಕೇಳಿದ ಕಥೆಗಳಿಗೆ ತಕ್ಕ ಅನೇಕ ಚಿತ್ರಗಳನ್ನು

ಬರೆದು ಆವುಗಳ ಕೆಳಗೆ ಆ ಚಿತ್ರಗಳಿಗೆ ತಕ್ಕ ವಾಕ್ಯಗಳನ್ನು ಬರೆದಿದ್ದರು. ಈ ವಾಕ್ಯಗಳಲ್ಲಿ ಅಕ್ಷರ ದೋಷಗಳು ಅನೇಕವಾಗಿ ಇದ್ದುವು. ಮಕ್ಕಳಿಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಲು ಭಾಷೆಗಿಂತಲೂ ಚಿತ್ರವೇ ಅನುಕೂಲವಾದುದೆಂ ಬುದು ಚೆನ್ನಾಗಿ ಕಾಣುತಿತ್ತು. ಮೇಲಿನ ತರಗತಿಯವರು ಚಿತ್ರವನ್ನು ಪೆನ್ಸಿಲ್ಲಿ ನಿಂದ ಅಥವಾ ಬ್ರಷ್ಷಿನಿಂದ ಬರೆದಿದ್ದರು. ಇವರ ಚಿತ್ರಗಳಿಗೂ ವಸ್ತುಗಳೇ ಆಧಾರವಾಗಿ ಇದ್ದುವು. ನಮ್ಮ ದೇಶದ ಬಾಲಕರು ಇಷ್ಟರಮಟ್ಟಿಗೆ ಚಿತ್ರವನ್ನು ಬರೆಯಲು ಇನ್ನೂ ಕೆಲವು ವರ್ಷಗಳು ಬೇಕೆಂದು ಕಾಣುವುದು. ಪ್ರಕೃತಿಯ ವಸ್ತುಗಳ ಚಿತ್ರಗಳನ್ನು ಆಧಾರವಾಗಿ ಇಟ್ಟುಕೊಂಡು ಅವುಗಳ ಸಹಾಯದಿಂದ ಬಾಲಕರು ಹೊಸಚಿತ್ರಗಳನ್ನು ಕಲ್ಪಿಸಿ ಬರೆದಿದ್ದರು. ಇಂತಹ ಚಿತ್ರಗಳಿಂದ ಬಾಲಕರ ಕಲ್ಪನಾಶಕ್ತಿಯು ಪೃದ್ಧಿಹೊಂದುವುದಕ್ಕೂ ಮುಂದೆ ಅವರು ಅವಲಂಬಿಸುವ ಅನೇಕ ಕೈಗಾರಿಕೆಗಳಿಗೂ ವಿಶೇಷ ಸಹಾಯುವಾಗುವುದು.

6. ಪ್ರಕೃತಿ ವಿಮರ್ಶೆ:—ಈ ವಿಷಯದಲ್ಲಿ ಇಂಗ್ಲೀಷ್ ಸ್ಕೂಲುಗಳು ವಿಶೇಷ ಅಭಿವೃದ್ಧಿಸ್ಥಿತಿಯಲ್ಲಿ ಇರುವುದನ್ನು ಅಲ್ಲಿಂದ ಬಂದಿದ್ದ ನಾನಾವಿಧವಾದ ವಸ್ತುಗಳು ಸೂಚಿಸುತ್ತಿದ್ದವು. ಮಕ್ಕಳು ಪ್ರಕೃತಿಯ ವಸ್ತುಗಳನ್ನು ಕ್ರಮವಾಗಿ ವಿಮರ್ಶಿಸಿ ತಮ್ಮ ವಿಮರ್ಶೆಯನ್ನು ಭಾಷೆಯುಲ್ಲೂ ಚಿತ್ರರೂಪದಲ್ಲೂ ಬರೆದಿದ್ದ ಪುಸ್ತಕಗಳೂ, ತೋಟದ ಕೆಲಸದ ವಿಷಯದಲ್ಲಿ ಬರೆದಿದ್ದ ಚಿತ್ರಗಳೂ ಬಾಲಕರು ತೆಗೆದಿದ್ದ ಫೋಟೋಚಿತ್ರಗಳೂ, ಮಕ್ಕಳು ಸಂಚಾರ ಹೋಗಿದ್ದಾಗ ನೋಡಿದ ಅಂಶಗಳ ವರ್ಣನೆಗಳೂ ಚಿತ್ರಗಳೂ ಅನೇಕ ಕಡೆಗಳಿಂದ ಬಂದಿದ್ದುವು. ಇಪ್ಸ್ವಿಚ್ ನಗರದ ಗರ್ಲ್ಸ್ ಸ್ಕೂಲಿನಿಂದ ಬಂದಿದ್ದ ಪ್ರಕೃತಿ ವಿಮರ್ಶೆಯ ಪುಸ್ತಕಗಳು, ಸ್ಕ್ಯಾಡ್ಬೌ ಸ್ಕೂಲಿನಿಂದ ಬಂದಿದ್ದ ಮಕ್ಕಳ ಸಂಚಾರಕ್ಕೆ ಸಂಬಂಧಪಟ್ಟ ಪುಸ್ತಕಗಳು, ನಾರಿಚ್ ಸ್ಕೂಲುಗಳಿಂದ ಬಂದಿದ್ದ ಪಾಠಶಾಲೆಯ ತೋಟಕ್ಕೆ ಸಂಬಂಧಪಟ್ಟ ಫೋಟೋಗಳು ಬಹು ಶ್ಲಾಘ್ಯವಾಗಿ ಇದ್ದುವು. ಮೇಲಾಗಿ ಲಾಂಗ್ ಆಸ್ಟನ್ ಮೊದಲಾದ ಕೆಲವು ಸ್ಕೂಲುಗಳಿಂದ ಪ್ರಕೃತಿ ವಿಮರ್ಶೆಯ ಕಾಲದಲ್ಲಿ ಬಾಲಕರು ಸಂಗ್ರಹಿಸಿದ್ದ ವಸ್ತುಗಳೂ ಬಂದಿದ್ದುವು. ಕೆಲವು ಸ್ಕೂಲುಗಳಲ್ಲಿ ಬಾಲಕರು ತಾವು ಸಂಗ್ರಹಿಸಿದ್ದ ಹೂವುಗಳಿಂದಲೂ, ಎಲೆಗಳಿಂದಲೂ ರಸವನ್ನು ಹಿಂಡಿ ಆವುಗಳನ್ನು ನಾನಾವಿಧವಾದ ಚಿತ್ರರೂಪದಲ್ಲಿ ಇಟ್ಟಿದ್ದರು. ಈ ವಸ್ತುಗಳಿಂದ ಇಂಗ್ಲೆಂಡಿನಲ್ಲಿ ಪ್ರಕೃತಿ ವಿಮರ್ಶೆಯು ಬಹುಚೆನ್ನಾಗಿ ನಡೆಯುತಿರುವುದು ಎಂಬುದು ಸ್ಪಷ್ಟವಾಗಿತ್ತು.

೭. ಕೈಕೆಲಸಗಳು;—ವುಲ್ವರ್‌ಹಾಂಪ್ಟನ್ ನಗರದ ಸ್ಕೂಲಿನಿಂದ ವ್ಯಾನ್ಯೂಟ್ರೀನಿಂಗಿಗೆ ಸಂಬಂಧಪಟ್ಟ ಮರದ ಕೆಲಸಗಳೂ, ಲೋಹದ ಕೆಲಸಗಳೂ ಈ ಕೆಲಸಗಳಿಗೆ ಆಧಾರವಾದ ಚಿತ್ರಗಳೂ ಬಂದಿದ್ದುವು. ಹಂಟರ್‌ಸ್ಟ್ರೀಟ್ ಗರ್ಲ್ಸ್‌ಸ್ಕೂಲಿನಿಂದ ಅತ್ಯುತ್ತಮವಾದ ಕಸೂತಿಯ ಕೆಲಸಗಳೂ ಈ ಕೆಲಸಗಳಿಗೆ ಆಧಾರವಾದ ಚಿತ್ರಗಳೂ ಬಂದಿದ್ದುವು. ಈ ಚಿತ್ರಗಳನ್ನು ಕಾಗದದಿಂದ ಬಟ್ಟೆಗೆ ಪಿರುವಾಡಿಕೊಳ್ಳುವ ಉಪಾಯವೂ ತೋರಿಸಲ್ಪಟ್ಟಿತ್ತು. ಈ ಸ್ಕೂಲಿನ ಬಾಲಕಿಯರು ರೇಷ್ಮೆ, ಕಿತ್ತಾನಾರು, ಹತ್ತಿಬಟ್ಟೆಗಳಮೇಲೆ ಆಯಾಯ ಬಟ್ಟೆಗೆ ತಕ್ಕ ಕಸೂತಿಗಳನ್ನು ಬಹುಚೆನ್ನಾಗಿ ಹಾಕಿದ್ದರು. ಇವರ ಕೆಲಸದಿಂದ ಡಿಸೈನ್ ಕಲಿತುಕೊಂಡರೆ ಕಸೂತಿಗೆ ಎಷ್ಟು ಸಹಾಯವೆಂಬುದು ಕಾಣುತಿತ್ತು.

ಈ ವರ್ಷ ಇಂಗ್ಲೆಂಡಿನಿಂದ ಬಂದಿರುವ ವಸ್ತುಗಳ ವಿಷಯವನ್ನು ನಾವು ಇಲ್ಲಿ ಎಷ್ಟು ಬರೆದರೂ ಅವುಗಳ ಬೆಲೆಯನ್ನು ಪೂರ್ಣವಾಗಿ ತಿಳಿಸಿದಂತಾಗಲಾರದು. ಪ್ರದರ್ಶನವು ತೆರೆದಿದ್ದ ದಿನಗಳಲ್ಲಿ ಮಾತ್ರ ಅವುಗಳನ್ನು ನೋಡಿ ಅವುಗಳಿಂದ ಹೊಂದಬಹುದಾದ ಪೂರ್ಣಫಲವನ್ನು ಹೊಂದುವುದು ಅಸಾಧ್ಯವಾಗಿತ್ತು. ಈಗ ಈ ವಸ್ತುಗಳೆಲ್ಲವೂ ಬೆಂಗಳೂರಲ್ಲಿ ಇರುವುವು, ಅಲ್ಲಿ ಇವುಗಳನ್ನು ಎಲ್ಲರೂ ಸದಾ ನೋಡುವುದಕ್ಕನುಕೂಲವಾಗುವಂತೆ ಇಡುವರು. ಅನೇಕ ಉಪಾಧ್ಯಾಯರು ಅಲ್ಲಿಗೆ ಹೋಗಿ ಅವುಗಳಿಂದ ಹೊಂದಬಹುದಾದ ಪೂರ್ಣಫಲವನ್ನು ಹೊಂದಬೇಕೆಂದು ನಾವು ಅಪೇಕ್ಷಿಸುವೆವು.

ಮೈಸೂರು ದೇಶದ ಅನೇಕ ಸ್ಕೂಲುಗಳಿಂದ ಈ ವರ್ಷ ಪ್ರದರ್ಶನಕ್ಕೆ ವಸ್ತುಗಳು ಬಂದಿದ್ದುವು. ಈ ವಸ್ತುಗಳು ಹಿಂದಿನ ವರ್ಷ ಬಂದಿದ್ದ ವಸ್ತುಗಳಿಗಿಂತಲೂ ಉತ್ತಮವಾಗಿ ಇದ್ದುವು. ಒಂದು ವರ್ಷದಲ್ಲಿ ಮೈಸೂರು ದೇಶದ ವಿದ್ಯಾಭ್ಯಾಸದಲ್ಲಿ ಎಷ್ಟರಮಟ್ಟಿನ ಅಭಿವೃದ್ಧಿಯುಂಟಾಯಿತೆಂಬುದು ಪ್ರದರ್ಶನಕ್ಕೆ ಬಂದಿದ್ದ ವಸ್ತುಗಳಿಂದ ಕಾಣುತಿತ್ತು. ಪ್ರದರ್ಶನಕ್ಕೆ ಬಂದಿದ್ದ ವಸ್ತುಗಳನ್ನೆಲ್ಲ ಇಡಲು ಅವಕಾಶವಿಲ್ಲದಿದ್ದುದು ಬಲುಶೋಚನೀಯವಾಗಿದ್ದಿತು. ಅನೇಕ ಮಾಸ್ಟರುಗಳು ವಿಶೇಷ ಉತ್ಸಾಹದಿಂದ ಕೆಲಸಮಾಡಿ ತಮ್ಮ ಬಾಲಕರಿಂದ ನಾನಾವಿಧವಾದ ಕೈಕೆಲಸಗಳನ್ನು ಮಾಡಿಸಿ ಕಳುಹಿಸಿದರು. ಅವರು ಮೈಸೂರಿಗೆ ಬಂದು ತಮ್ಮ ಬಾಲಕರ ಕೆಲಸಗಳು ಪ್ರದರ್ಶನ ಮಂದಿರದಲ್ಲಿ ಇಲ್ಲದುದನ್ನು ನೋಡಿ ಬಲುನೊಂದುಕೊಂಡರು. ಪ್ರದರ್ಶನ ಮಂದಿರದಲ್ಲಿ ಮೈಸೂರು ದೇಶದ ವಸ್ತುಗಳನ್ನು ಇಡಲು

ಸ್ಥಳವು ಬಹು ಕಡಿಮೆಯಾಗಿದ್ದುದೇ ಮಾಸ್ಟರುಗಳು ಕಳುಹಿಸಿದ ವಸ್ತುಗಳು ಅಲ್ಲಿ ಇಲ್ಲದೇ ಇದ್ದುದಕ್ಕೆ ಮುಖ್ಯಕಾರಣವಾಗಿ ಇತ್ತು. ಮುಂದಿನ ವರ್ಷದ ಪ್ರದರ್ಶನದಲ್ಲಿ ಮೈಸೂರು ದೇಶದ ವಸ್ತುಗಳನ್ನಿಡಲು ಸರ್ಕಾರದವರು ಹೆಚ್ಚು ಅವಕಾಶವನ್ನು ಮಾಡಿಕೊಡಬೇಕೆಂದು ನಾವು ಕೋರುವೆವು.

ಮೈಸೂರು ದೇಶದ ಸ್ಕೂಲುಗಳಿಂದ ಬಂದಿದ್ದ ವಸ್ತುಗಳನ್ನು ಮುಂದಿನರೀತಿಯಲ್ಲಿ ವಿಂಗಡಿಸಬಹುದಾಗಿದ್ದಿತು.

1. ಚಿತ್ರ :—ಈ ಭಾಗದಲ್ಲಿ ಹಿಂದಿನ ವರ್ಷಕ್ಕಿಂತಲೂ ಈ ವರ್ಷ ವಿಶೇಷ ಅಭಿವೃದ್ಧಿಯು ಕಾಣುತಿತ್ತು. ಮೈಸೂರು ಗೌರ್ನಮೆಂಟ್ ನಾರ್ಮಲ್ ಸ್ಕೂಲಿನಿಂದಲೂ ಅದಕ್ಕೆ ಸೇರಿದ ಪ್ರಾಕ್ಟಿಸಿಂಗ್ ಸ್ಕೂಲಿನಿಂದಲೂ ಬೆಂಗಳೂರು ಗೌರ್ನಮೆಂಟ್ ಗರ್ಲ್ಸ್ ಸ್ಕೂಲಿನಿಂದಲೂ, ಮೈಸೂರು ಮಹಾರಾಣೀ ಕಾಲೇಜಿನಿಂದಲೂ ಮೈಸೂರಲ್ಲಿ ಹೊಸದಾಗಿ ಇಟ್ಟಿರುವ ಬ್ರಷ್‌ವರ್ಕ್ ಮತ್ತು ಕ್ಲೇ ಮಾಡಲಿಂಗ್ ತರಗತಿಯಿಂದಲೂ ಉತ್ತಮವಾದ ಚಿತ್ರಗಳು ಬಂದಿದ್ದುವು. ಈ ಸ್ಕೂಲುಗಳಿಂದ ಬಂದಿದ್ದ ಚಿತ್ರಗಳೆಗೆಲ್ಲ ಮುಖ್ಯವಾಗಿ ಪ್ರಕೃತಿಯ ವಸ್ತುಗಳೇ ಆಧಾರವಾಗಿದ್ದುವು. ಇಂತಹ ಚಿತ್ರಗಳೇ ನಮಗೆ ಬೇಕಾದುವು. ಮಕ್ಕಳ ಪರೀಕ್ಷಣಶಕ್ತಿಯನ್ನು ಬೆಳೆಸುವುದೇ ಚಿತ್ರದ ಮುಖ್ಯೋದ್ದೇಶವಾಗಿರುವುದರಿಂದ ಪ್ರಕೃತಿಯನ್ನೇ ಆಧಾರವಾಗಿ ಉಳ್ಳ ಚಿತ್ರಗಳೇ ನಮ್ಮ ಪಾಠಶಾಲೆಯಲ್ಲಿ ಬಾಲಕರು ಬರೆಯಬೇಕಾದುವು. ಸಣ್ಣಮಕ್ಕಳು ನಾನಾಬಣ್ಣದ ಶೀಮೇಸುಣ್ಣದಿಂದ ಚಿತ್ರಗಳನ್ನು ಬರೆದಿದ್ದರು. ಇವರು ವಸ್ತುಗಳ ಒಟ್ಟೊಟ್ಟು ಗಾತ್ರವನ್ನು ಮಾತ್ರ ತೋರಿಸಿದ್ದರು. ಮೇಲಿನತರಗತಿಯ ಮಕ್ಕಳು ಬ್ರಷ್‌ನಿಂದ ಚಿತ್ರವನ್ನು ಬರೆದಿದ್ದರು. ಬ್ರಷ್ ಕೆಲಸದಲ್ಲಿ ಇಷ್ಟು ಸ್ವಲ್ಪಕಾಲದಲ್ಲೇ ಬಾಲಕರು ಇಷ್ಟರಮಟ್ಟಿನ ಅಭಿವೃದ್ಧಿಯನ್ನು ಹೊಂದಿರುವುದನ್ನು ನೋಡಿ ಇನ್ನು ಸ್ವಲ್ಪ ದಿವಸಗಳಲ್ಲೇ ಇವರು ಇಂಗ್ಲೆಂಡಿನ ಬಾಲಕರ ಸಮಕ್ಕೆ ಚಿತ್ರ ಬರೆಯುವ ಶಕ್ತಿಯನ್ನು ಹೊಂದುವರೆಂದು ಭಾವಿಸಬಹುದಾಗಿದ್ದಿತು. ಮೈಸೂರು ನಾರ್ಮರ್ ಸ್ಕೂಲಿನಲ್ಲಿರುವ ಟ್ರೈನಿಂಗ್ ತರಗತಿಗಳ ವಿದ್ಯಾರ್ಥಿಗಳಿಂದ ಶ್ರೇಷ್ಠವಾದ ಬ್ರಷ್ ಚಿತ್ರಗಳು ಬಂದಿದ್ದುವು. ಇವರು ಕಳುಹಿಸಿದ್ದ ಚಿತ್ರಗಳಿಗೆಲ್ಲಾ ಪ್ರಕೃತಿಯ ವಸ್ತುಗಳೇ ಆಧಾರವಾಗಿದ್ದುವು. ಮೈಸೂರು ಗೌರ್ನಮೆಂಟ್ ಇಂಡಸ್ಟ್ರಿಯಲ್ ಸ್ಕೂಲಿನಿಂದ ಉತ್ಕೃಷ್ಟವಾದ ಚಿತ್ರಗಳು ಬಂದಿದ್ದುವು. ಆದರೆ ಈ ಸ್ಕೂಲಿನ ಚಿತ್ರಗಳನ್ನು ಸಾಧಾರಣ ಪಾಠಶಾಲೆಗಳ ಚಿತ್ರಗಳೊಡನೆ ಹೋಲಿಸು

ವುದು ಸರಿಯಿಲ್ಲ. ಅಲ್ಲಿಂದ ಚಿತ್ರಗಳನ್ನು ಕಳುಹಿಸಿದ್ದ ಬಾಲಕರಿಗೆ ಚಿತ್ರ ಕಲಿವು ದೊಂದೇ ಕೆಲಸವಾಗಿದ್ದಿತು. ನಮ್ಮ ದೇಶದ ಅನೇಕ ಹೈಸ್ಕೂಲುಗಳಿಂದಲೂ ಎ. ವಿ. ಸ್ಕೂಲುಗಳಿಂದಲೂ ಬಾಲಕರು ಚಿತ್ರಗಳನ್ನು ಕಳುಹಿಸಿದ್ದರು. ಈ ಚಿತ್ರಗ ಳಿಂದ ಬಾಲಕರಿಗೆ ಈ ವಿಷಯದಲ್ಲಿ ವಿಶೇಷ ಕುತೂಹಲವಿರುವುದು ಸ್ಪಷ್ಟಪಡುತಿ ತ್ತು. ಆದರೆ ಇವರು ಚಿತ್ರ ಬರೆಯುವುದಕ್ಕೆ ಅನುಸರಿಸಿದ್ದ ದಾರಿಯು ಸರಿಯಾಗಿ ಕಾಣಲಿಲ್ಲ. ಇವರು ಬರೆದ ಚಿತ್ರಗಳಿಗೆಲ್ಲಾ ಚಿತ್ರಗಳೇ ಆಧಾರವಾಗಿದ್ದುವು. ಅಂ ತಹ ಚಿತ್ರ ಗಳನ್ನು ನೋಡಿ ನಕಲುಮಾಡಿದ್ದರು. ಈವಿಧವಾದ ಚಿತ್ರಲೇಖನದಿಂದ ನಾವು ಮೇಲೆ ಸೂಚಿಸಿರುವ ಪ್ರಯೋಜನವುಂಟಾಗಲಾರದು. ಇವರು ತಮ್ಮ ಚಿತ್ರಗಳಿಗೆ ತಮ್ಮೆದುರಿಗೆ ಕಾಣುವ ವಸ್ತುಗಳನ್ನು ಆಧಾರವಾಗಿಟ್ಟುಕೊಂಡು ಬರೆ ಯಬೇಕಾದುದು ಅವಶ್ಯಕವು.

೩. ಪ್ರಕೃತಿ ವಿಮರ್ಶೆ :—ಹೋದವರ್ಷ ಈ ಭಾಗಕ್ಕೆ ಸಂಬಂಧಪಟ್ಟ ಯಾ ವವಸ್ತುಗಳೂ ಪ್ರದರ್ಶನಕ್ಕೆ ಬಂದಿರಲಿಲ್ಲ. ಈ ವರ್ಷ ಕೆಲವು ಸ್ಕೂಲುಗಳಿಂದ ಬಾಲಕರೂ ಉಪಾಧ್ಯಾಯರೂ ಮಾಡಿದ್ದ ಪ್ರಕೃತಿ ವಿಮರ್ಶೆಗೆ ಸಂಬಂಧಪಟ್ಟ ಕೆಲ ಸಗಳು ಬಂದಿದ್ದುವು. ಮೈಸೂರು ನಾರ್ಮಲ್ ಸ್ಕೂಲಿಗೆ ಸೇರಿದ ಪ್ರ್ಯಾಕ್ಟಿಸಿಂಗ್ ಸ್ಕೂಲಿನಿಂದ ಬಂದಿದ್ದ ಪುಸ್ತಕಗಳಿಂದ ಅಲ್ಲಿ ಪ್ರಕೃತಿ ವಿಮರ್ಶೆಯು ಕ್ರಮವಾಗಿ ನಡೆಯುತಿರುವುದು ಕಾಣುತಿತ್ತು. ಈ ವಿಧವಾದ ವಿಮರ್ಶೆಯನ್ನು ಎಲ್ಲಾ ಪ್ರೈ ಮರೀಸ್ಕೂಲುಗಳಲ್ಲೂ ಇಟ್ಟರೆ ಬಾಲಕರ ವಿದ್ಯಾಭ್ಯಾಸದಲ್ಲಿರುವ ಒಂದು ದೊಡ್ಡ ಕೊರತೆಯು ತೊಲಗುವುದೆಂದು ಧಾರಾಳವಾಗಿ ಹೇಳಬಹುದು. ಬೆಂಗಳೂರು ಗೌರ್ನಮೆಂಟ್ ಗರ್ಲ್ಸ್ ಸ್ಕೂಲಿನಿಂದಲೂ, ಮಹಾರಾಣೀ ಕಾಲೇಜಿನಿಂದಲೂ ಪ್ರಕೃತಿ ವಿಮರ್ಶೆಯ ಪುಸ್ತಕಗಳು ಬಂದಿದ್ದುವು. ಈ ಸ್ಕೂಲುಗಳಲ್ಲಿ ಪ್ರಕೃತಿವಿ ಮರ್ಶೆಯು ಆಷ್ಟು ಕ್ರಮವಾಗಿ ನಡೆಯುತಿಲ್ಲವೆಂಬುದು ಅಲ್ಲಿಂದ ಬಂದಿದ್ದ ಪುಸ್ತಕ ಗಳಿಂದ ಕಾಣುತ್ತಿತ್ತು. ಪ್ರಕೃತಿಯ ವಸ್ತುಗಳ ಯಾವುದೋ ಒಂದು ಅವ ಸ್ಥೆಯನ್ನು ಪರೀಕ್ಷಿಸಿದ್ದರೇ ಹೊರತು ವಸ್ತುವಿನ ಎಲ್ಲಾ ಅವಸ್ಥೆಗಳನ್ನೂ ಸರಿಯಾಗಿ ಪರೀಕ್ಷಿಸಿರಲಿಲ್ಲ. ಈ ಸ್ಕೂಲುಗಳಲ್ಲಿ ನಡೆದ ವಿಮರ್ಶೆಗಳಿಗೆ ಸಂಬಂಧಪಟ್ಟ ಮಕ್ಕಳು ಮಾಡಿದ್ದ ಕೈಕೆಲಸಗಳನ್ನು ಕಳುಹಿಸಿದ್ದರು. ಈ ಕೆಲಸಗಳನ್ನು ನೋಡಿ ನಮ್ಮ ಮಕ್ಕಳಿಗೆ ಸರಿಯಾದ ಮಾರ್ಗವನ್ನು ತೋರಿಸಿದರೆ ಅವರೂ ಇಂಗ್ಲೆಂಡಿನ ಬಾಲಕರಂತೆ ಕೈಕೆಲಸಗಳಲ್ಲಿ ಬೇಗ ನಿಪುಣರಾಗುವರು ಎಂಬುದು ಸ್ಪಷ್ಟವಾಗುತಿತ್ತು.

3. ಗಣಿತ :— ಈಚೀಚಿಗೆ ನಮ್ಮ ಪಾಠಶಾಲೆಗಳಲ್ಲಿ ಗಣಿತವನ್ನು ಬೋಧಿಸುವ ಕ್ರಮವು ವಿಶೇಷ ಉತ್ತಮಸ್ಥಿತಿಗೆ ಬರುತಲಿರುವುದು ಈ ವರ್ಷ ಪ್ರದರ್ಶನಕ್ಕೆ ಬಂದಿದ್ದ ಹೈಸ್ಕೂಲು ಬಾಲಕರುಗಳ ಪುಸ್ತಕಗಳಿಂದ ಕಾಣಬರುತಿತ್ತು. ರೇಖಾ ಗಣಿತ, ಅಂಕಗಣಿತ, ಬೀಜಗಣಿತ ಇವುಗಳಿಗೆ ಸಂಬಂಧಪಟ್ಟ ಅಂಶಗಳನ್ನು ಬಾಲಕರು ತಮ್ಮ ಪುಸ್ತಕಗಳಲ್ಲಿ ಚಿತ್ತಿಲ್ಲದಂತೆ ಬಹುಚೆನ್ನಾಗಿ ಬರೆದಿದ್ದರು. ಅಂಕಗಣಿತ, ಬೀಜಗಣಿತಗಳ ಲೆಕ್ಕಗಳಿಗೆ ಸಂಬಂಧಪಟ್ಟ ಚಿತ್ರಗಳನ್ನು ಬಹಳ ಚೆನ್ನಾಗಿ ಬರೆದಿದ್ದರು. ಕೆಲವು ಸ್ಕೂಲುಗಳಿಂದ ಕ್ಷೇತ್ರಗಣಿತಕ್ಕೆ ಸಂಬಂಧಪಟ್ಟ ಮಾದರಿಗಳು ಬಂದಿದ್ದುವು. ಇವು ಆ ಪಾಠವನ್ನು ಬೋಧಿಸಲು ಅನುಕೂಲವಾಗಿದ್ದುವು.

4. ಪ್ರಾಕೃತಿಕಶಾಸ್ತ್ರಗಳು :—ಅನೇಕ ಹೈಸ್ಕೂಲುಗಳಿಂದ ಬಾಲಕರು ತಥಗತಿಯಲ್ಲಿ ನೋಡಿದ ಪ್ರಾಕೃತಿಕ ಶಾಸ್ತ್ರಗಳಿಗೆ ಸಂಬಂಧಪಟ್ಟ ಪರೀಕ್ಷೆಗಳಲ್ಲಿ ಉಪಯೋಗಿಸಿದ್ದ ವಸ್ತುಗಳ ಚಿತ್ರಗಳು ಬಂದಿದ್ದುವು. ಈ ಚಿತ್ರಗಳಿಂದ ತರಗತಿಯಲ್ಲಿ ನಡೆದ ಪರೀಕ್ಷೆಗಳನ್ನು ಬಾಲಕರು ತಿಳಿದುಕೊಂಡರೆಂಬುದು ಕಾಣುತಿತ್ತು. ಮತ್ತು ಇವುಗಳು ಚೆನ್ನಾಗಿಯೂ ಬರೆಯಲ್ಪಟ್ಟಿದ್ದುವು. ಆದರೆ ಈ ಚಿತ್ರಗಳ ಜತೆಗೆ ಬಾಲಕರು ತಾವು ನೋಡಿದ ಅಂಶಗಳನ್ನು ಭಾಷೆಯಲ್ಲೂ ವರ್ಣಿಸಿದ್ದರೆ ಬಹುಚೆನ್ನಾಗಿತ್ತು. ಪ್ರಾಕೃತಿಕಶಾಸ್ತ್ರಗಳ ವಿಷಯವನ್ನು ಬಾಲಕರು ಕಲಿಯುವಾಗ ಚಿತ್ರ ಭಾಷೆ ಇವೆರಡೂ ಜತೆಯಲ್ಲೇ ಹೋಗಬೇಕು.

5. ಭೂಗೋಳ, ಮತ್ತು ಚರಿತ್ರೆ:—ಈ ಭಾಗದಲ್ಲಿ ಹಿಂದಿನ ವರ್ಷಕ್ಕಿಂತಲೂ ವಿಶೇಷ ಉತ್ತಮವಾದ ವಸ್ತುಗಳು ಪ್ರದರ್ಶನಕ್ಕೆ ಬಂದಿದ್ದುವು. ಮೈಸೂರಲ್ಲಿರುವ ಇಂಜನಿಯರಿಂಗ್ ಸ್ಕೂಲಿನಿಂದ ಮರದಲ್ಲಿ ಮಾಡಿದ್ದ ಮೈಸೂರು ದೇಶದ ರಿಲೀಫ್‌ಮ್ಯಾಪ್ ಒಂದು ಬಂದಿತ್ತು. ಇದು ಬಲು ಚೆನ್ನಾಗಿದ್ದಿತು. ಆದರೆ ಇದರಲ್ಲಿ ಕೆಲವು ಸಣ್ಣಸಣ್ಣ ತಪ್ಪುಗಳಿದ್ದುವೆಂದು ಕಾಣುವುದು. ಈ ತಪ್ಪುಗಳನ್ನೆಲ್ಲಾ ಸರಿಪಡಿಸಿ ಇದರಂತಿರುವ ಪ್ಲಾಸ್ಟರ್ ಆಫ್ ಪ್ಯಾರಿಸ್‌ನ ರಿಲೀಫ್‌ಮ್ಯಾಪನ್ನು ಮಾಡಿಸಿ ಸ್ಕೂಲುಗಳಿಗೆ ಕೊಟ್ಟರೆ ಭೂವಿವರಣೆಯ ಪಾಠಕ್ಕೆ ವಿಶೇಷ ಸಹಾಯವಾಗುವುದು. ಅನೇಕ ಹೈಸ್ಕೂಲುಗಳಿಂದ ಪ್ರಪಂಚದ ನಾನಾದೇಶದ ಭೂಪಠಗಳು ಬಂದಿದ್ದುವು. ಇವು ಚೆನ್ನಾಗಿಯೇ ಇದ್ದುವು. ಆದರೆ ಇವುಗಳ ವಿಷಯದಲ್ಲಿ ಬಾಲಕರು ವಿನಿಯೋಗಿಸಿದ ಕಾಲವು ಅಷ್ಟು ಪ್ರಯೋಜನಕರವಾಗಲಿಲ್ಲವೆಂದು ತೋರುವುದು. ಒಂದೊಂದು ದೇಶವನ್ನು ತೆಗೆದುಕೊಂಡು ಅದರ ಭೂಲಕ್ಷಣ, ವಾಯುಗುಣ, ರೈಲ್‌ಮಾರ್ಗ

ಗಳೂ, ರಸ್ತೆಗಳೂ, ಉದ್ದಿಜ್ಜಗಳೂ, ಖನಿಜಗಳೂ, ಕೈಗಾರಿಕೆಯ ಪ್ರದೇಶಗಳು, ಇವುಗಳಿಗೆನುನಾರವಾಗಿ ಬೇರೆ ಬೇರೆ ನಕ್ಷೆಗಳನ್ನು ತಯಾರ್ಮಾಡಿ ಕಳುಹಿಸಿದ್ದರೆ ಭೂವಿವರಣೆಯ ಪಾಠಕ್ಕೆ ವಿಶೇಷ ಸಹಾಯವಾಗುತಿತ್ತೆಂದು ತೋರುವುದು. ಚರಿತ್ರೆಯ ಪಾಠದಲ್ಲಿ ಬಾಲಕರು ಚರಿತ್ರೆಗೆ ಸಂಬಂಧಪಟ್ಟ ವಿಷಯಗಳ ಮೇಲೆ ಬರೆದಿದ್ದ ಉಪನ್ಯಾಸಗಳು ಬಂದಿದ್ದುವು. ಈ ಉಪನ್ಯಾಸಗಳಿಂದ ಈಗ ಎಲ್ಲಾ ಸ್ಕೂಲುಗಳಲ್ಲೂ ಚರಿತ್ರೆಯ ಪಾಠವನ್ನು ಬೋಧಿಸುವ ಕ್ರಮವು ಸರಿಯಾಗುತಿರುವುದೆಂದು ತೋರುವುದು.

6. ಕೈ ಕೆಲಸಗಳು:— (a) ಮಣ್ಣಿನ ಮಾದರಿಗಳು. ಮೈಸೂರು ನಾರ್ಮಲ್ ಸ್ಕೂಲಿನಿಂದ ಕಳುಹಿಸಿದ್ದ ಮಣ್ಣಿನ ಮಾದರಿಗಳು ಬಹು ಚೆನ್ನಾಗಿದ್ದುವು. ಬೆಂಗಳೂರು ಗೌರ್ನಮೆಂಟ್ ಗರ್ಲ್ಸ್ ಸ್ಕೂಲಿನಿಂದ ಉಪಾಧ್ಯಾಯುರುಗಳೂ ವಿದ್ಯಾರ್ಥಿನಿಯರೂ ಕಳುಹಿಸಿದ್ದ ಪ್ಲಾಸ್ಟಿಸ್ಟೈನ್ ಮಾದರಿಗಳೂ ಬಹು ಶ್ಲಾಘ್ಯವಾಗಿದ್ದುವು. ಈ ಮಾದರಿಗಳಿಗೆಲ್ಲಾ ಪ್ರಕೃತಿಯ ವಸ್ತುಗಳೇ ಆಧಾರವಾಗಿದ್ದುವು. ಅನೇಕ ಪ್ರೈಮರೀ ಸ್ಕೂಲುಗಳಿಂದ ನಾನಾವಿಧವಾದ ಮಣ್ಣಿನ ಮಾದರಿಗಳು ಬಂದಿದ್ದವು. ಈ ಕೆಲಸದ ವಿಷಯದಲ್ಲಿ ಎಲ್ಲಾ ಸ್ಕೂಲುಗಳ ಉಪಾಧ್ಯಾಯರೂ ವಿಶೇಷಶ್ರಮ ತೆಗೆದುಕೊಳ್ಳುತಿರುವರೆಂದು ಕಾಣುವುದು.

(b) ರಟ್ಟಿನ ಕೆಲಸ:—ಮೈಸೂರು ನಾರ್ಮಲ್ ಸ್ಕೂಲಿನಿಂದಲೂ ದೊಡ್ಡಬಳ್ಳಾಪುರದ ಎ. ವಿ. ಸ್ಕೂಲ್ ಮೊದಲಾದ ಅನೇಕ ಸ್ಕೂಲುಗಳಿಂದಲೂ ವಿದ್ಯಾರ್ಥಿಗಳು ಮಾಡಿದ ರಟ್ಟಿನ ಕೆಲಸಗಳು ಬಂದಿದ್ದುವು. ಈ ಕೆಲಸದಿಂದ ವಿದ್ಯಾಭ್ಯಾಸಕ್ಕೆ ವಿಶೇಷ ಪ್ರಯೋಜನವಿರುವುದರಿಂದ ಸರ್ಕಾರದವರು ಇದನ್ನು ಎಲ್ಲಾ ಸ್ಕೂಲುಗಳಲ್ಲೂ ಇಡಬೇಕೆಂದು ನಾವು ಕೋರುವೆವು.

(c) ಕಸೂತಿಯ ಕೆಲಸ:—ಅನೇಕ ಗರ್ಲ್ಸ್ ಸ್ಕೂಲುಗಳಿಂದ ಉತ್ಕೃಷ್ಟವಾದ ಕಸೂತಿಯ ಕೆಲಸಗಳು ಬಂದಿದ್ದುವು. ಈ ಕೆಲಸದಲ್ಲಿ ಹೋದ ವರ್ಷಕ್ಕಿಂತಲೂ ಈ ವರ್ಷ ವಿಶೇಷ ಅಭಿವೃದ್ಧಿಯು ಕಾಣುತ್ತಿತ್ತು. ಮಿಷ್ ಗರ್ಲ್ಸ್ ಸ್ಕೂಲುಗಳಿಂದಲೂ, ಹಿಂದೂಸ್ಥಾನಿಯ ಗರ್ಲ್ಸ್ ಸ್ಕೂಲುಗಳಿಂದಲೂ ಬಂದಿದ್ದ ಕಸೂತಿಯ ಕೆಲಸಗಳೇ ಬಲು ಚೆನ್ನಾಗಿದ್ದುವು.

(d) ಬೆತ್ತದ ಕೆಲಸ:—ಮೈಸೂರು ಪ್ರಾಕ್ಟಿಸಿಂಗ್ ಸ್ಕೂಲಿನಿಂದ ಒಂದನೇ ತರಗತಿಯ ಬಾಲಕರು ನಯುವಾದ ಚಾಪೆಯನ್ನು ಮಾಡಿ ಕಳುಹಿಸಿದ್ದರು. ಮೈಸೂ

ರಲ್ಲಿರುವ ಕೆವ್ವಡ ಮೂಕರ ಪಾಠಶಾಲೆಯಿಂದ ನಾನಾವಿಧವಾದ ಬೆತ್ತದ ಕೆಲಸಗಳು ಬಂದಿದ್ದುವು. ಬೌರಿಂಗ್‌ಪೇಟೆ ಎ. ವಿ. ಸ್ಕೂಲ್ ಮುಂತಾದ ಅನೇಕ ಸ್ಕೂಲುಗಳಿಂದ ನಾನಾವಿಧವಾದ ಹುಲ್ಲಿನಿಂದಲೂ ಜೊಂಡಿನಿಂದಲೂ ತಯಾರಾದ ವಸ್ತುಗಳು ಬಂದಿದ್ದುವು. ಈ ಕೆಲಸಕ್ಕೆ ಎಲ್ಲಾ ಸ್ಕೂಲುಗಳಲ್ಲೂ ಇನ್ನೂ ಹೆಚ್ಚು ಪ್ರೋತ್ಸಾಹವು ಆವಶ್ಯಕವೆಂದು ಕಾಣುವುದು.

(e) ಇತರ ಕೈಕೆಲಸಗಳು: – ಮಕ್ಕಳ ತರಗತಿಯಲ್ಲಿ ಮಾಡಿದ್ದ ಕಾಗದ ಮಡಿಸುವುದು, ಕತ್ತರಿಸುವುದು, ಹೆಣೆಯುವುದು, ಬಳೆ ಕಡ್ಡಿಗಳ ಕೆಲಸ, ಪೇಯಿಂಗ್ ಕೆಲಸ, ನೂಲಿಡುವುದು, ಮಣಿಯ ಕೆಲಸ, ದಬ್ಬೆಯ ಕೆಲಸ, ಮುಂತಾದ ನಾನಾವಿಧವಾದ ಕೆಲಸಗಳು ಕೆಲವು ಸ್ಕೂಲುಗಳಿಂದ ಬಂದಿದ್ದುವು. ಈ ಕೆಲಸಗಳಿಗೆ ಎಲ್ಲಾ ಎಲಿಮೆಂಟರಿ ಸ್ಕೂಲುಗಳಲ್ಲೂ ಸರ್ಕಾರದವರು ಪ್ರೋತ್ಸಾಹ ಕೊಡಬೇಕೆಂದು ಅಪೇಕ್ಷಿಸುವೆವು.

ಒಟ್ಟಿನಲ್ಲಿ ಈ ವರ್ಷ ನಮ್ಮ ದೇಶದಿಂದ ಬಂದಿದ್ದ ವಸ್ತುಗಳಿಂದ ಈ ದೇಶದ ವಿದ್ಯಾಭ್ಯಾಸವು ಬಹು ಬೇಗನೆ ಅಭಿವೃದ್ಧಿಯನ್ನೈದಿ ಪಾಶ್ಚಾತ್ಯರಾಜ್ಯಗಳಲ್ಲಿ ನಡೆಯುವ ವಿದ್ಯಾಭ್ಯಾಸವನ್ನು ಹೋಲುವಸ್ಥಿತಿಗೆ ಬರಬಹುದೆಂಬ ಭರವಸೆಯು ಹುಟ್ಟುತ್ತಿತ್ತು. ಮುಂದಿನ ವರ್ಷವೂ ನಮ್ಮ ದೇಶದ ಉಪಾಧ್ಯಾಯರುಗಳು ವಿಶೇಷ ಉತ್ಸಾಹದಿಂದ ಕೆಲಸ ಮಾಡಿತಮ್ಮ ಸ್ಕೂಲಿನ ಸ್ಥಿತಿಯನ್ನು ಪೋರ್ಷಿಸಬೇಕೆಂತಲೂ, ಇವರು ಕಳುಹಿಸುವ ವಸ್ತುಗಳನ್ನು ಇಡುವುದಕ್ಕೆ ಸರ್ಕಾರದವರು ತಕ್ಕಷ್ಟು ಸ್ಥಳವನ್ನು ಏರ್ಪಡಿಸಿಕೊಡಬೇಕೆಂತಲೂ ನಾವು ಕೋರುವೆವು.

ಈ ವರ್ಷ ನಡೆದ ಪ್ರದರ್ಶನದ ಸಂಬಂಧದಲ್ಲಿ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಅನೇಕ ವಿಷಯಗಳ ಮೇಲೆ ಉಪನ್ಯಾಸಗಳು ನಡೆದುವು. ಇವುಗಳ ವಿಷಯವನ್ನು ಮುಂದೆ ತಿಳಿಸುವೆವು.

ಅಕ್ಷರಾಭ್ಯಾಸ.

ಅಕ್ಷರಾಭ್ಯಾಸ ವಿಷಯಕವಾಗಿ ಹಿಂದಣ 5—6 ನೇ ಸಂಚಿಕೆಗಳಲ್ಲಿ ಕೆಲವು ಅಂಶಗಳನ್ನು ಎಂದರೆ:—'ಈಗಿನ ಕಿಂಡರ್‌ಗಾರ್ಟ್ನ್ ಕ್ರಮದಲ್ಲಿ ಮಕ್ಕಳಿಗೆ ಅಕ್ಷರಾಭ್ಯಾಸ ಮಾಡಿಸುವುದು ಹೇಗೆಂಬುದನ್ನು' ಸಾಮಾನ್ಯವಾಗಿ ತಿಳಿಸಲಾಯಿತು.

ಈಗ ಅಕ್ಷರಾಭ್ಯಾಸವೆಂದರೇನು? ಇದರಿಂದ ಮಕ್ಕಳಿಗೆ ಆಗಬೇಕಾದ ಫಲಗಳೇನು? ನಮ್ಮ ಪೂರ್ವೀಕರು ಮಕ್ಕಳಿಗೆ ಯಾವ್ಯಾವ ಬಗೆಗಳಲ್ಲಿ ಅಕ್ಷರಗಳನ್ನು ಕಲಿಯಿಸುತಿದ್ದರು? ಈಗ ನೂತನಶಿಕ್ಷಣ ಪದ್ಧತಿಗನುಸಾರವಾಗಿ ಯಾವ್ಯಾವ ಮಾರ್ಗಗಳಲ್ಲಿ ಮಕ್ಕಳಿಗೆ ಅಕ್ಷರಪರಿಚಯವನ್ನು ಮಾಡಿಕೊಡಬಹುದು. ಎಂಬಿವನ್ನು ವಿವರಿಸಲಾಗುವುವು.

ನಮ್ಮ ಬಾಯಿಯಿಂದ ಉಚ್ಚರಿಸುವ ಧ್ವನಿಯು ಎರಡು ತೆರನಾಗಿರುವುವು ಇವುಗಳಲ್ಲಿ ಉಚ್ಚಾರಣೆಗೆ ಸ್ಪಷ್ಟವಾಗಿ ಬಾರದೆ, ಬರೆಯುವುದಕ್ಕೂ ಆಗದೆ ಇರುವ, ಅರ್ಥರಹಿತವಾದ ಅನುಕರಣಾದಿ ಶಬ್ದಗಳು ಒಂದು ಬಗೆಯಾದುವು. ಗುಡುಗು ಮಿಂಚುಗಳು, ಭೇರೀನಾದ, ಮೃಗಾದಿಗಳ ಧ್ವನಿಗಳು ಇಂಥವುಗಳ ಅನುಕರಣವೇ ಈ ಮೊದಲನೇ ವಿಧದ ಧ್ವನಿಗೆ ನಿದರ್ಶನಗಳಾಗಿರುವುವು. ಈ ತೆರನಾದುದನ್ನು ಶಬ್ದಾತ್ಮಕವಾದ ಧ್ವನಿ ಎಂದು ಹೇಳುವುರು.

ಎರಡನೆಯ ಬಗೆಯೇ ಅಕ್ಷರಾತ್ಮಕವಾದ ಧ್ವನಿ ಎಂಬುದು. ಈ ಧ್ವನಿಯನ್ನೇ ಅಕ್ಷರವೆಂದು ಹೆಸರಿಸುವುರು. ಇದನ್ನು ಸ್ಪಷ್ಟವಾಗಿ ಉಚ್ಚರಿಸಬಹುದು. ಬರವಣಿಗೆಯಲ್ಲಿ ಸರಿಯಾಗಿ ಬರೆಯಬಹುದು. ಈ ಅಕ್ಷರವು ಎರಡು ವಿಧಗಳಲ್ಲಿ ನಮ್ಮ ಮನಸ್ಸಿಗೆ ಗೋಚರವಾಗುವುದು. ಬಾಯಿಯಲ್ಲಿ ಉಚ್ಚರಿಸುವ ಈ ವಿಧವಾದ ಧ್ವನಿಯನ್ನು ಕೇಳುವುದರಿಂದ ಇಂಥ ಅಕ್ಷರಗಳೆಂದು ಬೋಧೆಯಾಗುವುದು ಒಂದು ವಿಧ ಬರವಣಿಗೆಯಲ್ಲಿ ಬರೆದಿರುವ ರೇಖಾವಿನ್ಯಾಸವನ್ನು ನೋಡುವುದರಿಂದ ಇಂಥ ಅಕ್ಷರಗಳೆಂದು ಬೋಧೆಯಾಗುವುದು ಮತ್ತೊಂದು ವಿಧ. ಹೀಗೆ ಕಿವಿಯಿಂದ ಕೇಳುವುದರಿಂದ ಮಾತ್ರವೇ ಇಂಥ ಅಕ್ಷರಗಳೆಂದು ಬೋಧೆಯಾಗುವುದಕ್ಕೆ ಶ್ರಾವಣವೆಂದೂ, ಕಣ್ಣಿನಿಂದ ನೋಡುವುದರಿಂದ ಮಾತ್ರವೇ ಇಂಥ ಅಕ್ಷರಗಳೆಂದು ಬೋಧೆಯಾಗುವುದಕ್ಕೆ ಚಾಕ್ಷುಷವೆಂದೂ ಅಕ್ಷರಗಳನ್ನು ಎರಡು ರೀತಿಗಳಲ್ಲಿ ವ್ಯವಹರಿಸುವುರು. ಎಂದರೆ ಒಟ್ಟಿನಲ್ಲಿ ಶ್ರಾವಣ ಚಾಕ್ಷುಷರೂಪಗಳಲ್ಲಿ ವ್ಯವಹೃತವಾಗಿ ಉಚ್ಚರಿಸುವುದಕ್ಕೂ ಬರೆಯುವುದಕ್ಕೂ ಆಗುವ ಅಕ್ಷರಾತ್ಮಕವಾದ ಧ್ವನಿಗೂ ಆ ಧ್ವನಿಗೆ ಬರವಣಿಗೆಯಲ್ಲಿ ನಿಯಮಿತವಾಗಿರುವ ಗುರುತಿಗೂ ಅಕ್ಷರವೆಂದು ಹೇಳಿದಂತಾಯಿತು.

ಆದರೆ ಈ ಧ್ವನಿಗೂ, ಬರಹದಲ್ಲಿನ ಗುರುತಿಗೂ, ವಸ್ತುವಿಗೂ ಇರುವ ಸಂಬಂಧವೇನೆಂದು ವಿಚಾರ ಮಾಡಿದರೆ ಈ ಸಂಬಂಧವು ಬಹುವಿಚಿತ್ರವಾಗಿರುವುದು. ಇದಕ್ಕೆ ಉದಾಹರಣೆಯಾಗಿ ಕದ ಎಂಬ ಮಾತನ್ನು ತೆಗೆದುಕೊಳ್ಳೋಣ.

ಮರದ ಹಲಿಗೆಗಳಿಂದ ಜೋಡಿಸಲ್ಪಟ್ಟು ಪಕ್ಕದಲ್ಲಿ ಕೀಲುಗಳನ್ನು ಹೊಂದಿ ಬಾಗಿಲನ್ನು ಮುಚ್ಚುತಲೂ ತೆರೆಯುತಲೂ ಇರುವ ಆ ಪದಾರ್ಥವೆಲ್ಲಿ? ಕ, ದ ಎಂಬ ಧ್ವನಿದ್ವಯಗಳೆಲ್ಲಿ? ಬರವಣಿಗೆಯುಲ್ಲಿ ಗುರುತಿಸುವ ಆ ರೇಖೆಗಳೆಲ್ಲಿ? ಇವು ಈಳಲ್ಲಿ ಒಂದೊಂದಕ್ಕೆ ಸ್ವಲ್ಪವಾದರೂ ಸಂಬಂಧವಿರುವುದೆ? ಹೀಗೆಯೇ ಭಾಷೆಯುಲ್ಲಿ ನಾವು ಆಡುವ ಮಾತಿಗೂ, ಬರಹದಲ್ಲಿನ ಗುರುತಿಗೂ, ಬಾಯಿಯುಲ್ಲಿ ಉಚ್ಚರಿಸುವ ಧ್ವನಿಗೂ ಆ ವಸ್ತುವಿಗೂ ಸ್ವಲ್ಪವೂ ಸಂಬಂಧವಿಲ್ಲದಿರುವಂಶವನ್ನು ಮಕ್ಕಳಿಗೆ ತಿಳಿಸ ಬೇಕಾದುದು ಅತ್ಯವಶ್ಯವು.

ಮೇಲೆ ಹೇಳಿದಂತೆ ಸಿದ್ಧವಾಗುವ ಅಕ್ಷರಗಳು ಕೆಲಕೆಲವು ಸೇರಿ ಭಾಷೆಯುಲ್ಲಿ ಒಂದೊಂದು ಮಾತಾಗಿ ಪರಿಣಮಿಸುವುವು. ಇಂತಹ ಮಾತುಗಳುತಾನೇ ನಮಗೆ ಮುಖ್ಯ? ! ಏಕೆಂದರೆ—ಭಾಷೆಯುಲ್ಲಿ ರೂಢಿಯಾಗಿರುವ ಮತ್ತು ಬಳಿಕೆಯಾದ ಮಾತುಗಳಲ್ಲನೇಕವನ್ನು ಕಲಿತಿರುವ ಮಕ್ಕಳೇ ನಮ್ಮಲ್ಲಿ ಅಕ್ಷರಾಭ್ಯಾಸಕ್ಕೆ ಬರುವರು. ಅದುದರಿಂದ ನಾವು ಆಡುವ ಮಾತುಗಳಲ್ಲಿನ ಪ್ರತಿಯೊಂದು ಅವಯವ (ಧ್ವನಿ) ಗಳಿಗೂ ಅಕ್ಷರವೆಂದು ಹೇಳಬಹುದು.

ಅಭ್ಯಾಸವೆಂದರೆ—' ಎಡೆಬಿಡದೆ ಕಲಿಯುವಿಕೆ ' ಎಂದಾಗುವುದು. ಮಕ್ಕಳು ಪ್ರತಿದಿನವೂ ತಪ್ಪದೆ ಅನುಸರಿಸಿಕೊಂಡು ಬರುವ ಯಾವುದಾದರೊಂದು ಕ್ರಮವನ್ನು ಅಭ್ಯಾಸವೆಂದು ಹೇಳಬಹುದು.

ಈಗ ಅಕ್ಷರಾಭ್ಯಾಸವೆಂದರೆ ಏನೆಂದು ಹೇಳುವುದು ಎಲ್ಲರಿಗೂ ಸುಲಭವಾಗಿರುವುದು.

ಈ ಅಕ್ಷರಾಭ್ಯಾಸದಿಂದ ಮಕ್ಕಳಿಗೆ ಶೈಶವದಲ್ಲಿ ಅಭಿವೃದ್ಧಿಗೊಳಿಸಬಹುದಾದ ಶಕ್ತಿಗಳಲ್ಲಿ ಮುಖ್ಯವಾದ ಕೆಲವು ಆವುವೆಂದರೆ:—

ತ್ವಗಿಂದ್ರಿಯವನ್ನು ವೃದ್ಧಿಗೊಳಿಸುವುದು.

ನೇತ್ರಪಾಟವವನ್ನು ಹೆಚ್ಚಿಸುವುದು.

ಶ್ರೋತ್ರೇಂದ್ರಿಯವನ್ನು ವೃದ್ಧಿಪಡಿಸುವುದು.

ಜ್ಞಾಪಕಶಕ್ತಿ, ತಾರತಮ್ಯಜ್ಞಾನ ಮುಂತಾದುವುಗಳನ್ನು ಹೆಚ್ಚಿಸುವುದು.

ಆದರೆ ಇವೆಲ್ಲಕ್ಕಿಂತ ಮುಖ್ಯವಾಗಿ ಮಕ್ಕಳಲ್ಲಿ ಉಂಟುಮಾಡಬೇಕಾದ ಗುಣವು ಮತ್ತೊಂದಿರುವುದು. ಅಕ್ಷರಾಭ್ಯಾಸದಿಂದ ಮೇಲೆಹೇಳಿರುವ ಗುಣಗಳು ವೃದ್ಧಿಹೊಂದುವುದು ಮಾತ್ರವಲ್ಲದೆ ಈ ಗುಣವನ್ನು ಮಕ್ಕಳಲ್ಲಿ ಹೆಚ್ಚಿಸಬೇಕಾದುದು

ಅತ್ಯಂತ ಅವಶ್ಯವು. ಆದಾವುದೆಂದರೆ ಹಸ್ತಕೌಶಲ್ಯವೇ; ಈಚೀಚಿನ ವಿದ್ಯಾಭ್ಯಾಸಕ್ರಮದಲ್ಲಿ ಇದಕ್ಕೆ ಬಹಳ ಪ್ರಾಶಸ್ತ್ಯವನ್ನು ಕೊಟ್ಟಿರುವರಾಗುದರಿಂದ ನಮ್ಮ ಈ ಅಕ್ಷರಾಭ್ಯಾಸಕ್ರಮದಿಂದಲೂ ಮಕ್ಕಳ ಹಸ್ತಕೌಶಲ್ಯವನ್ನು ಅಭಿವೃದ್ಧಿಗೊಳಿಸುವುದು ಬಹುಮುಖ್ಯವು.

ಮುಂದೆ ಹೇಳುವುದರಿಂದ ಅಕ್ಷರಾಭ್ಯಾಕ್ರಮವು ಮಕ್ಕಳ ಹಸ್ತಕೌಶಲ್ಯ, ಇಂದ್ರಿಯಪಾಟವ, ದೇಹದಾರ್ಢ್ಯ, ಮುಂತಾದ ಮುಖ್ಯವಾದ ಅನೇಕ ಗುಣಗಳ ಅಭಿವೃದ್ಧಿಗೆ ಎಷ್ಟರಮಟ್ಟಿಗೆ ಸಾಹ್ಯವನ್ನು ಕಲ್ಪಿಸುವುದೆಂಬುದನ್ನು ತಿಳಿಯಬಹುದಲ್ಲದೆ ಈ ಕ್ರಮಗಳನ್ನು ಉಪಾಧ್ಯಾಯರು ತಿಳಿಯುವುದರಿಂದ ಮಕ್ಕಳ ಅಕ್ಷರಾಭ್ಯಾಸವನ್ನು ಹೇಗೆ ನಡೆಸಬೇಕು? ಯಾವ್ಯಾವಬಗೆಗಳಲ್ಲಿ ಅಕ್ಷರಗಳನ್ನು ರಚಿಸಬಹುದು. ಹೀಗೆ ರಚಿಸುವುದರಿಂದ ಮಕ್ಕಳಿಗೆ ಉಂಟಾಗುವ ಆನಂದವೆಷ್ಟು? ಈ ಮುಂತಾದುವುಗಳನ್ನೂ ತಿಳಿಯಬಹುದು. ಮತ್ತು ನೂತನಪದ್ಧತಿಯುಂತೆ ಆಟದರೂಪದಲ್ಲಿ ಮಕ್ಕಳ ದೈಹಿಕ ಮಾನಸಿಕ ಶಕ್ತಿಗಳನ್ನು ಅಭಿವೃದ್ಧಿಗೊಳಿಸುತ್ತ ಅಕ್ಷರಾಭ್ಯಾಸವನ್ನು ಮಾಡಿಸುವರೀತಿಯು ಮುಂದಟ್ಟಾಗುವುದು. ಮುಖ್ಯವಾಗಿ ಇಗಿನ ಹಸ್ತಕೌಶಲು ಶಿಕ್ಷಣಕ್ಕೆ ಈ ಅಕ್ಷರಾಭ್ಯಾಸವು ಎಷ್ಟರಮಟ್ಟಿಗೆ ಅನ್ವಯಿಸುವುದೆಂಬುದನ್ನು ತಿಳಿಯಬಹುದು. ಇದರಿಂದ ಎಲ್ಲಾ ಉಪಾಧ್ಯಾಯರೂ ತಮ್ಮ ತಮ್ಮ ಸ್ಕೂಲಿನಲ್ಲಿ ಸಣ್ಣ ಮಕ್ಕಳನ್ನು ಸರಿಯಾದರೀತಿಯಲ್ಲಿ ಅಕ್ಷರವಂತರನ್ನಾಗಿ ಮಾಡುವಂತಾಗಲೆಂಬುದೇ ನಮ್ಮ ಮುಖ್ಯೋದ್ದೇಶವು.

ಹಿಂದಿನಕಾಲದಲ್ಲಿ ಅಕ್ಷರಾಭ್ಯಾಸಕ್ಕಾಗಿ ನಮ್ಮ ಪೂರ್ವೀಕರು ಬಹು ಶ್ರಮ ಪಡುತಿದ್ದರೆಂದು ತೋರುವುದು. ಗುಂಡೀ ಓನಾಮಗಳನ್ನು ಎಂದರೆ ಕಲ್ಲಿನಮೇಲೆ ಅಕ್ಷರಗಳನ್ನು ಕೊರೆಯಿಸಿದ್ದು ಆ ಅಕ್ಷರಗಳನ್ನು ತಿದ್ದುವಂತೆ ಮಾಡುತಿದ್ದರು. ಹೀಗೆ ತಿದ್ದಿಸುವಾಗ ಮಂಗಳಕರವೆಂದು ಶ್ರೀಕಾರವನ್ನು ಮೊದಲು ತಿದ್ದಿಸುವ ವಾಡಿಕೆಯನ್ನಿಟ್ಟುಕೊಂಡಿದ್ದರು. ಈ ಶ್ರೀಕಾರವು ಎಲ್ಲ ಅಕ್ಷರಗಳಿಗಿಂತಲೂ ಕಠಿಣವಾದ ರಚನೆಯುಳ್ಳ, ಸಂಯುಕ್ತಾಕ್ಷರವಾಗಿದ್ದರೂ ಆರಂಭದಲ್ಲಿ ದೇವತಾ ಸ್ಮರಣಮಾಡೋಣವು ಶ್ರೇಯಸ್ಸಾಧನವೆಂಬ ನಂಬಿಕೆಯಿಂದ ಹೀಗೆ ಮಾಡುತಿದ್ದರೆಂದು ತೋರುವುದು. ಈಗಿನ ಪದ್ಧತಿಯಲ್ಲಿ ಎಲ್ಲಾ ಆಕಾರಗಳಿಗೂ ಮೂಲರೂಪದಂತೆಯೂ, ಸುಲಭವಾದ ರಚನೆಯುಳ್ಳುದಾಗಿಯೂ ಇರುವ ಸೊನ್ನೆಯನ್ನು ಮೊದಲು ಪರಿಚಯ ಮಾಡಿಕೊಟ್ಟು ಈ ಆಕೃತಿಗೆ ನಿದರ್ಶನವಾಗಿ ಕೋಡಬಳೆಯನ್ನೂ ಕೈಬಳೆ ಮುಂತಾ

ದುವುಗಳನ್ನೂ ತೋರಿಸಿ ಆಡಿಸುವುದರಿಂದ ಆವರ ಮನಸ್ಸಿನಲ್ಲಿ ನೆಲೆಗೊಳ್ಳುವಂತೆ ಮಾಡುವೆವು. ಕೆಲವರು ಈ ಸೊನ್ನೆಯು ಶೂನ್ಯಕರವೆಂದು ಹೇಳುತ್ತಾ ಆದಿಯಲ್ಲಿ ಮಕ್ಕಳಿಗೆ ಇದನ್ನು ತಿಳಿಸೋಣವು ಆಮಂಗಳಕರವೆಂದು ಅಪೇಕ್ಷಿಸುವರು. ಇಂಥ ವರಿಗೆ ಸುಮಂಗಲಿಯರ ಹಸ್ತಕ್ಕೆ ಅಲಂಕಾರಪ್ರಾಯವಾಗಿ, ಅದ್ಯಂತ ರಹಿತವಾಗಿರುವ ಬಳೆಯ ಆ ಕಾರವೇ ಸೊನ್ನೆಯೆಂದೂ, ಆಹ್ಲಾದ ಜನಕನಾದ ಚಂದ್ರನ ಬಿದಿಗೆ, ಅಷ್ಟವಿಧಾ ರೇಖೆಗಳಂತೆ ಕಂಗೊಳಿಸುವ ವಲಯ ಭಾಗಗಳೇ ನಮ್ಮ ಪ್ರಧಾನೋಪ ಕರಣಗಳೆಂದೂ. ಆದುದರಿಂದ ಈ ಕ್ರಮವು ನಮ್ಮ ಮಕ್ಕಳಿಗೆ ಮಂಗಳಕರ ಮಾತ್ರವೇ ಅಲ್ಲದೆ ಆಹ್ಲಾದ ಕರವಾಗಿಯೂ ಇರುವುದೆಂದೂ ಹೇಳುವೆವು.

ಮೇಲೆಹೇಳಿದಂತೆ ಕಲ್ಲಿನಮೇಲೆ ಕೊರೆದಿರುವ ಅಕ್ಷರಗಳನ್ನು ವರ್ಣಮಾಲೆಯ ಕ್ರಮದಲ್ಲಿ ತಿದ್ದಿ ಕಲಿತನಂತರ ಮರದಹಲಗೆಗಳಮೇಲೆ ಕಲ್ಲುಬಳಪದಿಂದ ಕ್ರಮವಾಗಿ ಒಂದು ಅಕ್ಷರದ, ಎರಡು, ಮೂರು, ನಾಲ್ಕು, ಐದಕ್ಷರಗಳಮಾತುಗಳನ್ನೂ ಮಗ್ಗಿ, ಮುಪ್ಪಾಗ, ಆಡ್ಡ, ಹಾಗ, ವೀಸ, ಕಾಣಿ, ಗಿದ್ದಾಣಿ, ಮುಂತಾದವುಗಳನ್ನೂ ಸಹ ಕ್ರಮವಾಗಿ ಸಂಧ್ಯಾಕಾಲದಲ್ಲಿ ಬಾಯಿಪಾಠಮಾಡಿಸುತ್ತಲೂ, ಬರೆಸುತ್ತಲೂ ಇದ್ದರು. ಆದರೆ ಕ್ರಮವಾಗಿ ಕಾಗುಣಿತವೂ, ಒತ್ತುಗಳೂ ಬಂದಲ್ಲದೆ ಮಾತುಗಳನ್ನೂ, 1 ರಿಂದ 100 ರವರೆಗೆ ಎಣಿಕೆಬಂದಲ್ಲದೆ ಮಗ್ಗಿಯನ್ನೂ ಹೇಳಿಸುತಿರಲಿಲ್ಲ. ಈ ಮರದ ಹಲಗೆಗಳಿಗೆ ಉಪ್ಮತ್ತೀಸೊಪ್ಪು ಮತ್ತು ಇದ್ದಲನ್ನು ಇಡಿದು ತಿಕ್ಕುವುದರಿಂದ ಅದು ಕಪ್ಪಾಗಿರುವಂತೆ ಮಾಡಿಕೊಳ್ಳುತಿದ್ದರು.

ರಾಗಿಯ ಮಶಿಯನ್ನು ಮಾಡಿ ಕಾಡಿಗೆಯನ್ನು ಹಾಕಿ ಶಾಯಿಯನ್ನೂ, ಲಾಳನ, ದರ್ಭೆಯ ಮತ್ತು ಬಗಿನಿಯಕಡ್ಡಿಗಳನ್ನು ಚೂರಿಯಿಂದ ಒರೆದು ಬರೆಯುವಕಡ್ಡಿಯನ್ನೂ ಮಾಡಿಕೊಂಡು ಎಕ್ಕದೆಲೆಯಮೇಲೂ, ಭೂತಾಳೆಯ ಪಟ್ಟೆಯಮೇಲೂ ಬರೆಯಿಸುತಿದ್ದರು. ಎಕ್ಕದೆಲೆಯನೇಲೆ ಬರೆಯುವುದರಿಂದ ಮಕ್ಕಳಿಗೆ ತೇಲಿಸಿಬರೆಯುವುದೂ, ಭೂತಾಳೆಯ ಪಟ್ಟೆಯಮೇಲೆ ಬರೆಯುವುದರಿಂದ ಊರಿಬರೆಯುವುದೂ ಅಭ್ಯಾಸವಾಗುತಿತ್ತು. ಇಷ್ಟಾದಮೇಲೆ ಓಲೆಯುಗರಿ, ಕಡತ, ಕತ್ತೆಕಾಗದಗಳಮೇಲೆ ಬರೆಯುವುದು ವಾಡಿಕೆಯಾಗಿದ್ದಿತು. ಗ್ರಂಥಾದಿಗಳನ್ನು ಓಲೆಯುಗರಿಯಮೇಲೂ,ಅಂಗಡೀ ಲೆಕ್ಕ ಪತ್ರವೊದಲಾದುವುಗಳನ್ನು ಕಡತದಮೇಲೂ, ಸರ್ಕಾರೀ ನಡವಳಿಕೆಗಳನ್ನು ಕತ್ತೆಕಾಗದದಮೇಲೂ ಸಾಮಾನ್ಯವಾಗಿ ಒರೆದಿಡುತಿದ್ದಂತೆ ತೋರುವುದು. ಓಲೆಯುಗರಿಯಮೇಲೆ ಬರೆಯಲು ಹಿಂದೆಹೇಳಿರುವಸಾಧನಗಳನ್ನು ಉಪಯೋಗಿಸು

ತ್ತಿರಲಿಲ್ಲ. ತುದಿಮೊನಚಾಗಿರುವ ಕಬ್ಬಿಣದಕಡ್ಡಿಯಿಂದ ಇದರಮೇಲೆ ಅಕ್ಷರಗಳನ್ನು ಕೊರೆಯುತಿದ್ದರು. ಈ ವಿಧನಾದ ಕಬ್ಬಿಣದಕಡ್ಡಿಗೆ 'ಕಂಟ' ಎಂಬಹೆಸರು ರೂಢಿಯಾಗಿರುವುದು.

ಕಾಲಕ್ರಮೇಣ ಗುಂಡೀಟಿನಾಮಗಳನ್ನು ತಿದ್ದಿಸುವ ಅಭ್ಯಾಸವುಹೋಗಿ ಮರಳಿನಮೇಲೆ ತಿದ್ದಿಸುವವಾಡಿಕೆಯು ಬಂತೆಂದುಹೇಳಬಹುದು. ಈ ಮರಳಿನಿಂದ ಮಕ್ಕಳಕಯ್ಯಲ್ಲಿ ಮಾಡಿಸಬಹುದಾದ ಕೆಲಸಗಳು ಅನೇಕವಾಗಿರುವುವು. ಮಕ್ಕಳನ್ನು ಸ್ವೇಚ್ಛೆಯಾಗಿ ಮರಳಿನಮೇಲೆ ಆಡುವಂತೆಹೇಳಿ ಅವರು ಮಾಡುವಕೆಲಸಗಳನ್ನು ಪರೀಕ್ಷಿಸುತಬಂದರೆ ಅನೇಕ ಅಂಶಗಳು ನಮಗೆಗೋಚರವಾಗವವು. ಇಲಿಯು ಬಿಲ, ಕಪಿಯಗೂಡು, ಮನೆ, ಕೆರೆ, ಕೋಡಿ, ಕಾಲುವೆ, ಬೆಟ್ಟ, ಗುಡ್ಡ, ಪರ್ವತ ಶ್ರೇಣಿಗಳು, ಭೂಮಿಯಮೇಲಣ ಹಳ್ಳದಿಣ್ಣೆಗಳು, ಕೈತೋಟದವಾತಿಗಳು, ಭೂಗೋಳವಾಠದಲ್ಲಿನ ದ್ವೀಪಗಳು ಮುಂತಾದ ಅನೇಕಅಂಶಗಳನ್ನು ಮಕ್ಕಳು ತಾವಾಗಿ ತಿಳಿದುಕೊಳ್ಳುವಂತೆ ಮಾಡಬಹುದು. ರಟ್ಟಿನಲ್ಲಿ ಸಣ್ಣದೊಡ್ಡಮರಗಳ ಆಕಾರವುತೋರುವಂತೆ ಕತ್ತರಿಸಿ ಕಾಡು, ಸಾಲುಮರ, ಗಂಡುತೋಪು, ತೋಟ ಮುಂತಾದುವುಗಳನ್ನು ಮಾಡಿಸಬಹುದು. ಒಂದು ದೊಡ್ಡಮರವನ್ನುಮಾಡಿ ಅದರ ನೆರಳಿನಲ್ಲಿ ದನಕರುಗಳು, ಅಥವ ಜನಗಳು ಮಲಗಿರುವಂತೆ ಚಿತ್ರಪಠಗಳನ್ನಿಡಿಸಿ ತಕ್ಕಂತೆ ಕಥೆಗಳನ್ನುಹೇಳಬಹುದು. ಇದರಿಂದ ಮಕ್ಕಳ ಬುದ್ಧಿಯ ಬೆಳವಳಿಕೆಗೂ, ಲೋಕವ್ಯವಹಾರಕ್ಕೂ ಅನುಕೂಲವಾದ ಅನೇಕಅಂಶಗಳುತಿಳಿಯುವುದು ಮಾತ್ರವಲ್ಲದೆ ದೇಹದ ಬೆಳವಳಿಕೆಗೂ ಬಹುಮಟ್ಟಿಗೆಸಹಾಯವಾಗುವುದು. ಈ ಮರಳಿನಮೇಲೆ ಪೂರ್ವದಂತೆ ಅಕ್ಷರಗಳನ್ನು ತಿದ್ದಿಸಬೇಕಾದುದಿಲ್ಲವಾದರೂ ಮಕ್ಕಳು ಸ್ವೇಚ್ಛೆಯಾಗಿ ಆಡುವಾಗ ಅಕ್ಷರಗಳ ಆಕೃತಿಗಳನ್ನು ಬೆರಳಿನಲ್ಲಿ ಕೊರೆಯುವಂತೆಯೂ, ಉಬ್ಬಾಗಿ ಇಡುವಂತೆಯೂ ಹೇಳುವುದರಿಂದ ಆಕ್ಷೇಪವೇನೂ ಇರಲಾರದು. ಆದರೆ ಅಕ್ಷರಾಭ್ಯಾಸಕ್ಕೆ ಇದು ಒಂದುಅಂಗವೇ ಹೊರತು ಪ್ರಧಾನವಲ್ಲ.

ಹುಣಸೆಯ ಕಾಳು, ಅವರೆಯ ಕಾಳು ಇಂತಹ ದಪ್ಪ ಕಾಳುಗಳಿಂದ ಅಕ್ಷರಗಳನ್ನು ರಚಿಸಬಹುದು. ಹೀಗೆ ಅಕ್ಷರಗಳನ್ನು ರಚಿಸಲು ಮುಂಚಿತವಾಗಿ ಸೀಮೇಸುಣ್ಣದಿಂದ ಅಕ್ಷರಗಳನ್ನು ಬರೆದಿರಬೇಕು. ಮಕ್ಕಳು ಈ ಸುಣ್ಣದ ಗೆರೆಗಳಮೇಲೆ ಕಾಳುಗಳನ್ನು ಇಡುವುದರಿಂದ ಒಟ್ಟು ಅಕ್ಷರದ ಆಕೃತಿಯನ್ನು ತಿಳಿದುಕೊಳ್ಳುವರು. ಆದರೆ ಪ್ರತಿಯೊಂದಕ್ಷರಕ್ಕೂ ಮಕ್ಕಳು ಅನೇಕಾನೇಕ ಕಾಳುಗಳನ್ನು ಇಡಬೇಕಾ

ಗುವುದರಿಂದ ಕೊನೆಗೆ ಕಾಳುಗಳನ್ನಿಡುವುದೆಂದರೇ ಅವರಿಗೆ ಬೇಜಾರಾಗಬಹುದು. ಆದುದರಿಂದ ಇದನ್ನು ಅಷ್ಟು ಹೆಚ್ಚಾಗಿ ಇಟ್ಟುಕೊಳ್ಳುವುದರಿಂದ ಬಾಧಕವಿಲ್ಲದಿರಲಾರದು.

ರಟ್ಟುಗಳಿಗೆ ರಂಧ್ರಮಾಡಿ ಮಣಿಗಳನ್ನು ಪೋಣಿಸುವಂತೆ ಹೇಳುವುದರಿಂದಲೂ ಮತ್ತು ದಾರ ಹಾಕುವಂತೆ ಹೇಳುವುದರಿಂದಲೂ ಅಕ್ಷರಗಳನ್ನು ಮಾಡಿಸಬಹುದು. ಇವುಗಳಿಂದ ಮಕ್ಕಳ ಹಸ್ತ ಕೌಶಲ್ಯವೂ, ನೇತ್ರಪಾಟವೂ ಚನ್ನಾಗಿ ವೃದ್ಧಿಯಾಗುವುವು. ಆದರೆ ಈಕೆಲಸಗಳನ್ನು ವಿಶೇಷ ಕಾಲ ಇಟ್ಟುಕೊಳ್ಳುವುದರಿಂದ ಅವರಿಗೆ ಬೇಜಾರಾಗುವುದು ಮಾತ್ರವಲ್ಲದೆ ಕಣ್ಣಿಗೂ ಅಪಾಯವುಂಟಾಗುವುದು. ಕಡ್ಡಿಯ ತುಂಡುಗಳನ್ನು ಇಡುವುದರಿಂದಲೂ ಅಕ್ಷರಗಳನ್ನು ರಚಿಸಬಹುದು. ಆದರೆ ಇದನ್ನೂ ಹಸ್ತ ಕೌಶಲ್ಯಕ್ಕಾಗಿ ತಕ್ಕಮಟ್ಟಿಗೆ ಇಟ್ಟು ಕೊಳ್ಳುವುದು ಉತ್ತಮವು. ಒರೇ ಕಡ್ಡಿಗಳಿಂದ ರಚಿತವಾದ ಅಕ್ಷರಗಳು ಅಷ್ಟು ಅಂದವಾಗಿ ಆಗಲಾರವು.

ರಟ್ಟುಗಳಿಂದ ವಲಯ, ವಲಯಾರ್ಧ, ವಲಯಾಪಾದ ಮತ್ತು ಸರಳ ರೇಖೆಯ ಆಕೃತಿಯನ್ನು ಉಪಾಧ್ಯಾಯರು ಕತ್ತರಿಸಿ ಇಟ್ಟಿದ್ದು ಮಕ್ಕಳು ಇವುಗಳನ್ನು ಸೇರಿಸುವುದರಿಂದ ಅಕ್ಷರಗಳನ್ನು ರಚಿಸಬಹುದು. ಅಥವ ವಲಯ ಮತ್ತು ವಲಯಭಾಗಗಳಿಗೆ ಬದಲಾಗಿ ಸೌತೇಕಾಯಿ ಸೊನ್ನೆ ಮತ್ತು ಅದರ ಭಾಗಗಳನ್ನು (ಅಂಡಾಕಾರ ಮತ್ತು ಅದರ ಭಾಗಗಳನ್ನು) ಕತ್ತರಿಸಿ ಜೋಡಿಸುವಂತೆ ಮಾಡಿದರೆ ಕೋಲಕ್ಷರವು ಬರುವುದು. ಅನುಕೂಲ್ಯಕ್ಕಾಗಿ ತಲೆಕಟ್ಟಿನ ಆಕೃತಿಯನ್ನೂ ಕತ್ತರಿಸಿ ಇಟ್ಟು ಕೊಳ್ಳಬಹುದು. ಆದರೆ ಇವೆರಡುವಿಧವಾದ ಅಕ್ಷರಗಳಲ್ಲಿ ಪ್ರತಿಯೊಂದಕ್ಕೂ ಪರಸ್ಪರ ಇರುವ ತಾರತಮ್ಯವನ್ನು ತೋರಿಸುವುದಕ್ಕೆ ಮಾತ್ರ ಕೋಲಕ್ಷರವನ್ನು ಉಪಯೋಗಿಸಬೇಕು. ಮಕ್ಕಳೆ ಕಯ್ಯಿಂದ ಬರೆಯಿಸುವ ಸಮಯದಲ್ಲಿ ಉಪಾಧ್ಯಾಯರು-ಸ್ವಭಾವವಾಗಿ ಕನ್ನಡ ಬರವಣಿಗೆಗೆ ಹೇಳುವ ಮುಕ್ತಾಫಲ ಸಾಮ್ಯವನ್ನೂ, ಅದಕ್ಕೆ ತಕ್ಕಂತೆ ಪೂರ್ವೀಕರು ಬರೆದು ಇಟ್ಟಿರುವ ದುಂಡಕ್ಷರವನ್ನೂ ಮರೆಯಲಾಗದು.

ಹೀಗೆ ಅಕ್ಷರಗಳನ್ನು ರಟ್ಟುಗಳ ಜೂರುಗಳಿಂದ ರಚಿಸುವ ಮಕ್ಕಳಿಗೆ ಮುಖ್ಯವಾಗಿ ಅಕ್ಷರಗಳೂ ಮತ್ತು ಅವುಗಳ ಭಾಗಗಳೂ, ಅಕ್ಷರಗಳ ಪರಸ್ಪರ ಹೋಲಿಕೆ ವ್ಯತ್ಯಾಸಗಳೂ ತಿಳಿಯಬರುವುದಲ್ಲದೆ ರಚನಾಕೌಶಲ್ಯಕ್ಕೆ ತಕ್ಕಂತೆ ಹಸ್ತಕೌಶಲ್ಯವೂ ನೇತ್ರಪಾಟವವೂ ವೃದ್ಧಿಯಾಗುವವು.

ಮಣಿಗಳನ್ನು ದಪ್ಪದಾರ ಅಥವ ಸುಲಭವಾಗಿ ಬಗ್ಗುವ ತಂತಿಗಳಿಗೆ ಪೋಣಿಸಿ ಬೇರೆ ಬೇರೆ ಸರಗಳನ್ನಾಗಿ ಮಾಡಿ ಆ ಸರಗಳನ್ನು ನೆಲದಮೇಲೆ ಇಟ್ಟು

ಬೇಕಾದಂತೆ ಬಗ್ಗಿಸುವುದರಿಂದ ಅಕ್ಷರಗಳನ್ನು ರಚಿಸಬಹುದು. ಇದರಿಂದ ವಿಶೇಷವಾಗಿ ಹಸ್ತಕೌಶಲ್ಯವು ವೃದ್ಧಿ ಹೊಂದುವುದಲ್ಲದೆ, ಅಕ್ಷರಗಳ ಅಂದವು ಗೊತ್ತಾಗುವುದು ಮತ್ತು ತ್ವಗಿಂದ್ರಿಯವೂ ನೇತ್ರಪಾಟವವೂ ಅಭಿವೃದ್ಧಿ ಹೊಂದುವುದು. ಕೇವಲ ಸಣ್ಣ ರಂಧ್ರವಿರುವ ಮಣಿಗೆಳನ್ನುಪಯೋಗಿಸುವುದರಿಂದ ಮಕ್ಕಳ ಕಣ್ಣಿಗೆ ಅಪಾಯವುಂಟಾಗುವ ಕಾರಣ ರಂಧ್ರವು ದೊಡ್ಡದಾಗಿರುವ ದಪ್ಪ ಮಣಿಗಳನ್ನೇ ಉಪಯೋಗಿಸಬೇಕು.

ಸುಮಾರಾಗಿ ದಪ್ಪದಾಗಿರುವ ದಾರದ ತುಂಡುಗಳನ್ನು ನೀರಿನಲ್ಲಿ ನೆನಸಿ ಮಕ್ಕಳಿಗೆಲ್ಲಾ ಕೊಟ್ಟು ಅವರವರ ಸ್ಲೇಟಿನಮೇಲೆ ಅಕ್ಷರಗಳನ್ನು ರಚಿಸಬಹುದು. ದಾರವು ಆರದಂತೆ ಪದೇ ಪದೇ ನೀರು ಹಾಕುತಿರಬೇಕು. ಇದರಿಂದಲೂ ಮಕ್ಕಳ ಹಸ್ತಕೌಶಲ್ಯ, ನೇತ್ರಪಾಟವ ಮುಂತಾದುವುಗಳು ಅಭಿವೃದ್ಧಿ ಹೊಂದುವುವು.

ಈ ಮೇಲೆ ಹೇಳಿರುವ ಎಲ್ಲ ಕ್ರಮಗಳಲ್ಲಿಯೂ ಮಕ್ಕಳಿಗೆ ಅಕ್ಷರಾಭ್ಯಾಸವನ್ನು ಮಾಡಿಸಬಹುದಾದರೂ, ಇವೆಲ್ಲಕ್ಕಿಂತಲೂ ಉತ್ತಮವಾಗಿಯೂ, ಮಕ್ಕಳಿಗೆ ಆಟದ ರೂಪದಲ್ಲಿ ಸುಲಭವಾಗಿ ಅಕ್ಷರಗಳನ್ನು ತಿಳಿಸುವುದಕ್ಕೆ ಅನುಕೂಲವಾಗಿಯೂ, ಬರಹದಲ್ಲಿ ನಾವು ಅಕ್ಷರಗಳನ್ನು ತಿದ್ದಿಸದೆ ಅವರೇ ಅಂದವಾದ ಅಕ್ಷರಗಳನ್ನು ಬರೆಯಲು ಯತ್ನಿಸುವಂತೆಯೂ, ಅಕ್ಷರಗಳನ್ನು ಮಾತ್ರವೇ ಅಲ್ಲದೆ ಇತರ ಅನೇಕ ಆಕೃತಿಗಳನ್ನು ಸಹ ರಚಿಸುವಂತೆಯೂ ಇರುವ, ಬಗೆಬಗೆಯ ಬಣ್ಣಗಳಿಂದ ಮನೋಹರವಾದ ಬಳೆ, ಅವುಗಳ ಅರ್ಧ, ಕಾಲುಭಾಗಗಳು ಮತ್ತು ಬಳೆಯ ಕಡ್ಡಿಗಳು ಇವುಗಳಿಂದ ಅಕ್ಷರಗಳನ್ನು ಮತ್ತು ಆಕೃತಿಗಳನ್ನೂ ಸಹ ರಚಿಸುವುದು ಮಕ್ಕಳಿಗೆ ಹೆಚ್ಚು ಉಲ್ಲಾಸಕರವಾಗಿರುವುದೆಂಬುದನ್ನು ಎಲ್ಲ ಉಪಾಧ್ಯಾಯರು ತಮ್ಮ ಸ್ವಂತ ಅನುಭವದಿಂದ ತಿಳಿಯಬಹುದು. ಈ ಸಾಧನಗಳಿಂದ ಕಟ್ಟಿಸಬಹುದಾದ ಸುಲಭವಾದ ಕೆಲವು ಆಕೃತಿಗಳು ಅವುವೆಂದರೆ.

ಕೊಳ, ಮೆಟ್ಟಲು, ಏಣಿ, ಬೃಂದಾವನ, ಹೂವುಗಳು, ಲತೆಗಳು, ವಿಧವಿಧವಾದ ಪಾತ್ರೆಗಳು, ಗೂಡೆ, ಬುಟ್ಟಿ, ನೀರು ಸುರಿಯುವ ಪ್ಯಾ ಮುಂತಾದುವು.

ಅಕ್ಷರಾಭ್ಯಾಸದಿಂದ ಮಕ್ಕಳಿಗೆ ಉಂಟಾಗಬೇಕಾದ ಫಲಗಳೆಲ್ಲ ಈ ಕ್ರಮದಲ್ಲಿ ಅವರಿಗೆ ಅಕ್ಷರಗಳನ್ನು ಕಲಿಸುವುದರಿಂದ ಸಂಪೂರ್ಣವಾಗಿ ದೊರೆಯುವೆಂದು ನಾನು ಧಾರಾಳವಾಗಿ ಹೇಳುವೆನು.

ಫ್ರೋಬೆಲ್ಲನು ರಚಿಸಿರುವ ಕಿಂಡರ್‌ಗಾರ್ಟನ್ ಗಿಫ್ಟ್‌ಗಳಂತೆಯೇ ಈ ಸಾಧನಗಳೂ.

ಆದರೆ ಪ್ರೊಬೆಲ್ಲನು ನಮ್ಮ ದೇಶೀಯನೂ ಅಲ್ಲದೆ ಅಥವ ನಮ್ಮ ಕನ್ನಡ ಭಾಷೆಯನ್ನೂ ಅರಿಯದೆ ಇದ್ದುದರಿಂದಲೇ ನಮ್ಮ ಅಕ್ಷರಾಭ್ಯಾಸವು ತನ್ನ ಗಿಫ್ಟ್‌ಗಳ ರಚನಾಕ್ರಮಕ್ಕೆ ಒಳಪಡದಿರಲು ಅವಕಾಶವಾಯಿತು. ಹಾಗಲ್ಲದೆ ಹೋಗಿದ್ದ ಪಕ್ಷದಲ್ಲಿ ತನ್ನ ಪದ್ಧತಿಗೆ ಮೇಲಿನ ರೀತಿಯಲ್ಲಿ ನಮ್ಮ ಅಕ್ಷರಾಭ್ಯಾಸ ಕ್ರಮವನ್ನು ಒಳಪಡಿಸಿಕೊಳ್ಳುತಿದ್ದನೆಂದು ತೋರುವುದು.

ಮೇಲಾಗಿ ಮಕ್ಕಳು ರಚಿಸುವ ರಚನಾಕ್ರಮಕ್ಕೆ ತಕ್ಕಂತೆ ಅನುಕರಣ ಗಾನಗಳನ್ನು ರಚಿಸಿ ಈ ಬಳೆ ಕಡ್ಡಿಗಳ ರಚನೆಗೆ ಸೇರಿಸಿರುವುದರಿಂದ ಮಕ್ಕಳ ಉಲ್ಲಾಸ ಎರಡರಷ್ಟು ಹೆಚ್ಚುವುದರಲ್ಲಿ ಸಂಸಯವಿಲ್ಲ.

ಈ ಬಳೆ ಕಡ್ಡಿಗಳಿಂದ ರಚಿತವಾದ ಅಕ್ಷರಗಳೂ, ಅನುಕರಣ ಗಾನಗಳೂ ಸಹ ರಾಜಧಾನಿಯ ದಸರಾ ವಿದ್ಯಾಭ್ಯುದಯ ಪ್ರದರ್ಶನ ಶಾಲೆಯಲ್ಲಿ ಪ್ರದರ್ಶಿಸಲ್ಪಟ್ಟಿದ್ದುದರಿಂದ ಅನೇಕ ಉಪಾಧ್ಯಾಯರು ತಕ್ಕಮಟ್ಟಿಗಾದರೂ ಅದರ ಉಪಯೋಗವನ್ನು ಹೊಂದಿರಬಹುದು. ಮೇಲೂ ಈ ಉಪನ್ಯಾಸವನ್ನು ಓದುವುದರಿಂದ ಮೇಲಿನ ಕ್ರಮಗಳಲ್ಲಿ ಮಕ್ಕಳನ್ನು ಅಕ್ಷರವಂತರನ್ನಾಗಿ ಮಾಡುವಂತಾದರೆ ನಮ್ಮ ಪ್ರಯತ್ನವು ಸಫಲವಾಗುವುದು.

ಅನುಕರಣ ಗಾನಗಳನ್ನು 'ಅನುಕರಣ ಗೀತೆ' ಎಂಬ ಪುಸ್ತಕದಿಂದ ತಿಳಿಯಬಹುದು.

ಮಾದರಿಗಾಗಿ ವರ್ಣಗೀತೆಯೊಂದನ್ನು ಹಿಂದಿನ ಉಪನ್ಯಾಸದ ಕೊನೆಯಲ್ಲಿ ಹೇಳಿರುವೆವು. ಇಲ್ಲಿ ಆಕೃತಿಗೀತೆಯೊಂದನ್ನು ಬರೆದು ಭಾಷಣವನ್ನು ಮುಗಿಸಿರುವೆವು.

ಮಕ್ಕಳು ಕನ್ನಡಕದ ಆಕಾರವನ್ನು ಬಳೆಗಳಿಂದ ರಚಿಸುತ್ತ ಈ ಹಾಡನ್ನು ಹೇಳುವರು.

ರಾಗ ॥ ಇಂಗ್ಲೀಷ್ ನೋಟು.

(ಪೋಗುತಜಂಡೇ ಬೇಗದಲಿ) ಎಂಬಂತೆ.

ಒಂದಿದದುಂಡಂ । ಕಂದನೆ ನೀ । ಮುಂದೆಡೆಗರ್ಥಂ । ಮುಂದಕಿದೋ ॥
ದುಂಡಿನ್ನೊಂದಂ। ಕೂಡೈ ನೀ । ಪಾಡುತನೋಡೈ । ಕನ್ನಡಕಂ ॥೧॥

ಎಸ್. ಶ್ರೀಕಂಠಯ್ಯ.

ನೋಟೀಸು.

ಧಾರವಾಡ ಟ್ರೇನಿಂಗ ಕಾಲೇಜದ ಗಾಯನ ಶಿಕ್ಷಕರು ಸದ್ಯಕ್ಕೆ ಒಂದು ವರ್ಷದ ರಜೆಯನ್ನು ತಕ್ಕೊಂಡಿರುವದರಿಂದ ಅವರ ಸ್ಥಳಕ್ಕೆ ಯೋಗ್ಯ ಶಿಕ್ಷಕರನ್ನು ನೇಮಿಸತಕ್ಕದ್ದಿರುತ್ತದೆ. ಆದಕಾರಣ ಗಾಯನದಲ್ಲಿ ಕೆಳಗೆ ಬರೆದ ಯೋಗ್ಯತೆಯವರಿದ್ದು, ಸದರೀ ಸ್ಥಳವನ್ನು ಅಪೇಕ್ಷಿಸುವ ಉಮೇದವಾರರು ತಮ್ಮ ಅರ್ಜಿಗಳನ್ನು ೧೯೦೪ ನೇ ಇಸವಿಯ ಡಿಶಂಬರ ಅಖೈರದೊಳಗಾಗಿ ನಮ್ಮ ಕಡೆಗೆ ಮುಟ್ಟುವಂತೆ ಕಳಿಸಬೇಕು:—

೧. ಕರ್ನಾಟಕ ಅಥವಾ ಹಿಂದುಸ್ತಾನಿ ಗಾಯನಶಾಸ್ತ್ರದ ಸಂಪೂರ್ಣ ಜ್ಞಾನ, ಮೃದಂಗ, ಮತ್ತು ಫಿಡಲ್ ಹಾಗೂ ವೀಣಾ ಇವುಗಳನ್ನು ಬಾರಿಸುವದು ಸಹಿತ, ಕರ್ನಾಟಕ ಗಾಯನ ಬಲ್ಲವರ ಅವಶ್ಯಕತೆ ಹೆಚ್ಚು ಇರುವುದು.

೨. ಕನ್ನಡ ಕ್ರಮಿಕ ಪುಸ್ತಕಗಳೊಳಗಿನ ಯಾವತ್ತೂ ಪದ್ಯಗಳನ್ನು ಸರಿಯಾದ ರಾಗಗಳಿಂದ ಅನ್ನೋಣ.

೩. ತಕ್ಕಮಟ್ಟಿಗೆ ಈ ದೇಶದ ಮತ್ತು ಯುರೋಪದ ಗಾಯನಶಾಸ್ತ್ರಗಳ ತಾರತಮ್ಯಜ್ಞಾನ. ಈ ಜ್ಞಾನವು ಇದ್ದರೆ ಒಳ್ಳೇದು; ಇಲ್ಲದಿದ್ದರೂ ಪ್ರತಿಬಂಧಕ ಏಲ್ಲ.

ಅವಶ್ಯ ಕಂಡರೆ, ಉಮೇದವಾರರ ಪರೀಕ್ಷೆಯನ್ನು ಕವಿಯಾಟಯ ಮುಖಾಂತರ ತಕ್ಕೊಂಡು ಯೋಗ್ಯರೆಂದು ಕಂಡು ಬಂದವರನ್ನು ನೇಮಿಸಲಾಗುವುದು.

ಪರೀಕ್ಷೆಯ ತಾರೀಖು ಹಿಂದಿನಿಂದ ತಿಳಿಸಲ್ಪಡುವುದು. ಸದರೀ ಸ್ಥಳದ ಈಗಿನ ಸಂಬಳವು ತಿಂಗಳಿಗೆ ೩೫ ರೂ. ಇರುತ್ತದೆ. ಮುಂದೆ ೫೦ ರೂ. ಆಗುವ ಸಂಭವ ವಿರುತ್ತದೆ.

ಧಾರವಾಡ ಟ್ರೇನಿಂಗಕಾಲೇಜ
ತಾ॥ ೨೨—೯—೧೯೦೪

V. B. JOSHI,
ಪ್ರಿನ್ಸಿಪಾಲ

ವಿದ್ಯಾದಾಯಿನಿ.

(A MONTHLY JOURNAL)

ಭಾಗ ೧೬.] ನವೆಂಬರ್—೧೯೦೯. [ಸಂಚಿಕೆ ೧೧.

ಪ್ರೊಬೆಲ್ಲನ ಕ್ರಮಕ್ಕನುಸಾರವಾಗಿ ಮಕ್ಕಳ ವಿದ್ಯಾಭ್ಯಾಸ.

ಈ ವರ್ಷ ದಸರಾ ಮಹೋತ್ಸವದಲ್ಲಿ ನಡೆದ ವಿದ್ಯಾಭ್ಯಾಸ ವಿಷಯಕವಾದ ವಸ್ತುಪ್ರದರ್ಶನದ ಸಂಬಂಧದಲ್ಲಿ ಅನೇಕ ಉಪನ್ಯಾಸಗಳು ನಡೆದುವು. ಪ್ರೊಬೆಲ್ಲನ ಕ್ರಮಕ್ಕನುಸಾರವಾಗಿ ಸಣ್ಣಮಕ್ಕಳ ವಿದ್ಯಾಭ್ಯಾಸವನ್ನು ನಡೆಸುವ ವಿಷಯುದಲ್ಲಿ ನಾರ್ಮಲ್ ಸ್ಕೂಲ್ ಅಸಿಸೆಂಟ್ ಮಾಸ್ಟರ್ ಮಿ॥ ರಾ॥ ವೆಂಕಟಸುಬ್ಬಯ್ಯನವರು ಒಂದು ಉಪನ್ಯಾಸವನ್ನು ಮಾಡಿದರು. ಈ ಉಪನ್ಯಾಸದಿಂದ ದಸರಾ ಮಹೋತ್ಸವದಲ್ಲಿ ಮೈಸೂರಿಗೆ ಬಂದಿದ್ದ ಉಪಾಧ್ಯಾಯರಿಗಲ್ಲದೆ ಸಣ್ಣಮಕ್ಕಳ ಶಿಕ್ಷಣದಲ್ಲಿ ನಿರತರಾದ ಇತರ ಉಪಾಧ್ಯಾಯರಿಗೂ ಮಕ್ಕಳ ಮಾತಾಪಿತೃಗಳಿಗೂ ಪ್ರಯೋಜನವಾಗಬಹುದೆಂದು ತೋರುವುದರಿಂದ ಅದನ್ನು ಇಲ್ಲಿ ಪ್ರಕಟಿಸುವೆವು. ಈ ಉಪನ್ಯಾಸವು ಇಂಗ್ಲೀಷಿನಲ್ಲಿ ನಡೆಯಿತು. ನಾವು ಇಲ್ಲಿ ಇದರ ಕನ್ನಡದ ಪರಿವರ್ತನೆಯನ್ನು ಪ್ರಕಟಿಸುವೆವು. ಈ ಉಪನ್ಯಾಸವು ನಡೆಯುವಕಾಲದಲ್ಲಿ ವಿದ್ಯಾಭ್ಯಾಸದ ಇಲಾಖೆಯ ಮುಖ್ಯಾಧಿಕಾರಿಗಳಾದ ಇನ್‌ಸ್ಪೆಕ್ಟರ್ ಜನರಲ್ ಮೆ॥ ಥಾಥಾಸಾಹೇಬರು ಅಗ್ರಾಸನವನ್ನು ವಹಿಸಿದ್ದರು.

ಅಧ್ಯಕ್ಷರೇ, ಮಹನೀಯರೇ,

ನಾನು ಈ ವಿದ್ಯಾಭ್ಯಾಸ ವಿಷಯಕವಾದ ವಸ್ತುಪ್ರದರ್ಶನದ ಸಂಬಂಧದಲ್ಲಿ ಮಾತನಾಡಬೇಕೆಂದು ಹೇಳಿದುದನ್ನು ಬಹಳ ದೊಡ್ಡಮಯರ್ಯಾದೆಯೆಂದು ಭಾವಿಸುವೆನು. ಈ ಸಭೆಯಲ್ಲಿ ನಾನು ಮಾತನಾಡುವ ವಿಷಯದಲ್ಲಿ ನನ್ನಷ್ಟು ಅಥವ ನನ